ಕರ್ನಾಟಕ ಸರಕಾರ

ಸಾಹಿತ್ಯರತ್ನ ಸಂಪುಟ



ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಸಾಹಿತ್ಯರತ್ನ ಸಂಪುಟ

ಆಧುನಿಕ ಕನ್ನಡ ಸಾಹಿತ್ಯದ
ಮೂವತ್ತೆಂಟು ಜನ ಹಿರಿಯ ಲೇಖಕರ ವ್ಯಕ್ತಿಚಿತ್ರಗಳು

ಡಾ. ಎಸ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು ೫೬೦ ೦೦೨

SAHITHYARATNA SAMPUTA : A collection of pen portaits by Dr. N.S. Lakshminarayana Bhatta, Published by ***Ashok N. Chalawadi***, Administrative Officer, Kannada Pustaka Pradhikara, Kannada Bhavana, J.C. Road, Bangalore-560 002

ಪ್ರಥಮ ಮುದ್ರಣ	:	೨೦೦೪
ದ್ವಿತೀಯ ಮುದ್ರಣ	:	೨೦೧೦
ಪುಟಗಳು		xx + ೩೩೦ = ೩೫೦
ಪ್ರತಿಗಳು	:	೧೦೦೦
ಬೆಲೆ		₹ ೧೫೦/-

First Print	:	2004
Second Print	:	2010
Pages	:	xx + 330 = 350
Copies	:	1000
Price	:	₹ 150/-
	:	

ಪ್ರಕಾಶಕರು
ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು- ೫೬೦-೦೦೨

ಕರಡು ತಿದ್ದಿದವರು : ಲೇಖಕರು

ಮುದ್ರಕರು :
ಸತ್ಯಶ್ರೀ ಪ್ರಿಂಟರ್ಸ್ ಪ್ರೈ ಲಿ.
ನಂ. ೧೬/೧, ೨ನೇ ಮೇನ್, ೩ನೇ ಕ್ರಾಸ್,
ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು-೫೬೦ ೦೨೬
ದೂರವಾಣಿ: ೨೬೭೪೮೮೧೧, / ಸಂಚಾರಿ : ೯೩೪೨೮೬೪೭೬೧
ಇಮೇಲ್ : satyasriprn@rediffmail.com

ಅರ್ಪಣೆ

ನಮ್ಮ ನಾಡಿನ ಹೆಮ್ಮೆಯ ಕಥನಕಾರ

ಡಾ. ಎಸ್. ಎಲ್. ಭೈರಪ್ಪ

ಅವರಿಗೆ

ಅಧ್ಯಕ್ಷರ ನುಡಿ

ಕನ್ನಡ ಪುಸ್ತಕ ಪ್ರಾಧಿಕಾರ ಸಾಹಿತ್ಯದ ವಿವಿಧ ಪ್ರಕಾರದ ಅಪರೂಪದ ಪುಸ್ತಕಗಳನ್ನು ಹೊರತರುತ್ತಿದೆ. ಅದರಲ್ಲಿ ಜೀವನ ಚರಿತ್ರೆ, ವ್ಯಕ್ತಿ ಚಿತ್ರಗಳ ಪ್ರಕಾರಕ್ಕೆ ಸೇರಿದ ಕೃತಿಗಳೂ ಸೇರಿವೆ. ನಮ್ಮೊಂದಿಗೆ ಇದ್ದ, ಇರುವ ಅನೇಕ ಮಹನೀಯರ ಬದುಕಿನ ಬಗ್ಗೆ ಸಂಕ್ಷೇಪವಾಗಿ ತಿಳಿಯುವ ಅವಕಾಶ ಈ ವ್ಯಕ್ತಿಚಿತ್ರಗಳಿಂದ ಉಂಟಾಗುತ್ತದೆ. ಆಧುನಿಕ ಕನ್ನಡಸಾಹಿತ್ಯದಲ್ಲಿ ವ್ಯಕ್ತಿಚಿತ್ರ ಬರಹಗಳು ಸಾಕಷ್ಟು ಬಂದಿವೆ. ಡಿ.ವಿ.ಜಿ.ಯವರ ಜ್ಞಾಪಕ ಚಿತ್ರಶಾಲೆ, ಬಿ.ಜಿ.ಎಲ್. ಸ್ವಾಮಿಯವರ ಪಂಚಕಳಶ ಗೋಪುರ, ಎ.ಎನ್. ಮೂರ್ತಿರಾಯರ 'ಪತ್ರಗಳು ಚಿತ್ರಗಳು' ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ನನ್ನ ಪೂಜ್ಯಗುರುಗಳಾದ ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ಕನ್ನಡದ ಹಿರಿಯ ವಿದ್ವಾಂಸರು, ಕವಿಗಳು, ಅನುವಾದಕರೂ ಆಗಿದ್ದಾರೆ. ಅವರ 'ಸಾಹಿತ್ಯರತ್ನ ಸಂಪುಟ' ೨೦೦೪ರಲ್ಲಿ ಮೊದಲು ಮುದ್ರಣಗೊಂಡು ಪ್ರತಿಗಳು ಈಗ ಲಭ್ಯವಿಲ್ಲದಂತಾಗಿದೆ. ಈ ಕೃತಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ಅಮೋಘವಾದ ಕೆಲಸ ಮಾಡಿದ ಮೂವತ್ತೆಂಟು ಜನ ಹಿರಿಯ ಸಾಹಿತಿಗಳ ವ್ಯಕ್ತಿಚಿತ್ರಗಳು ಇವೆ. ಈ ಸಾಹಿತಿಗಳು ಕನ್ನಡ ಸಾಹಿತ್ಯದ ಸೌಭಾಗ್ಯವನ್ನು ಬೆಳೆಸಿ ಪ್ರಸಿದ್ಧರಾದ ಹಿರಿಯರು, ಡಿ.ವಿ.ಜಿ. ಬಿ.ಎಂ.ಶ್ರೀ, ಕುವೆಂಪು, ಬೇಂದ್ರೆ, ಮಾಸ್ತಿ, ಶಿವರಾಮಕಾರಂತ, ಗೋಕಾಕ್, ಅಡಿಗ, ಶಿವರುದ್ರಪ್ಪ, ಅನಂತಮೂರ್ತಿ, ಭೈರಪ್ಪ ಹೀಗೆ ವೈವಿಧ್ಯಪೂರ್ಣ ವ್ಯಕ್ತಿತ್ವಗಳ ಚಿತ್ರಣ ಇಲ್ಲಿದೆ. ಆ ಲೇಖಕರ ಮೌಲಿಕ ಸಾಹಿತ್ಯಸಾಧನೆಯ ಜೊತೆಗೆ ಅವರ ಜೀವನದ ಹಲವು ಸ್ವಾರಸ್ಯಕರ ಪ್ರಸಂಗಗಳೂ ಸೇರಿರುವುದರಿಂದ ಬರಹ ಬಹಳ ಆಕರ್ಷಕವೂ ಕುತೂಹಲಕರವೂ ಆಗಿದೆ. ಇಂಥ ಮೌಲಿಕ ಕೃತಿಯನ್ನು ಮರುಮುದ್ರಿಸಲು ಒಪ್ಪಿಗೆ ಇತ್ತ ನನ್ನ ಪೂಜ್ಯ ಗುರುಗಳಾದ ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಕೃತಿಯನ್ನು ಹೊರತರುವಲ್ಲಿ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್. ಚಲವಾದಿ, ನನ್ನ ಆಪ್ತ ಕಾರ್ಯದರ್ಶಿ ಶ್ರೀ ಕೆ. ಮುಕುಂದನ್, ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಕನ್ನಡಿಗರು ಈ ಕೃತಿಯನ್ನು ತುಂಬು ಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

ಮುನ್ನುಡಿ

ನನ್ನ ಹಿರಿಯ ಸ್ನೇಹಿತರೂ ಹಿತೈಷಿಗಳೂ ಆಗಿರುವ ಡಾ. ಎಸ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ನನ್ನನ್ನು ಇಲ್ಲಿ ಹೀಗೆ ನಿಮ್ಮ ಮುಂದೆ ನಿಲ್ಲಿಸಬಹುದೆಂದು ನಿರೀಕ್ಷಿಸಿರಲಿಲ್ಲ. ಒಂದು ದಿನ ಭಟ್ಟರು ಏಕಾಏಕಿ ಫೋನು ಮಾಡಿ ತಮ್ಮ 'ಸಾಹಿತ್ಯ ರತ್ನ ಸಂಪುಟ' ಕೃತಿಗೆ ನಾನು ಮುನ್ನುಡಿಯ ರಂಗವಲ್ಲಿ ಇಡಬೇಕೆಂದು ಕೇಳಿದರು. ಭಟ್ಟರಂಥ ಹಿರಿಯ ಕವಿ, ವಿಮರ್ಶಕರ ಪುಸ್ತಕಕ್ಕೆ ಪತ್ರಕರ್ತನಾದ ನಾನು ಮುನ್ನುಡಿ ಬರೆಯುವುದು ಹೇಗೆ ಎಂದು ಒಂದು ಕ್ಷಣ ಅನ್ನಿಸಿತು. ಅಷ್ಟರೊಳಗೆ ಭಟ್ಟರು ನನ್ನ ಸುತ್ತ ಪ್ರೀತಿಯ ಮುನ್ನುಡಿಯಿಟ್ಟು ಕಟ್ಟಿಹಾಕಿದ್ದರಿಂದ ಇಲ್ಲವೆನ್ನಲು ಆಗಲಿಲ್ಲ. ಸುಂದರ ಉತ್ಸವಕ್ಕೆ ಎದುರುಗೊಳ್ಳುವ ಬಾಗಿಲ ತೋರಣವಾಗುವುದು ಭೂಷಣವಂತೆ. ಒಪ್ಪಿಕೊಂಡೆ. ಇದನ್ನು ಭಟ್ಟರು ಕಿರಿಯನಾದ ನನಗೆ ತೋರಿಸಿದ ಪ್ರೀತಿ ಎಂದೂ, ಇದು ಒಂದು ಗೌರವವೆಂದೂ ಭಾವಿಸಿದ್ದೇನೆ.

ಸಾಹಿತ್ಯರತ್ನ ಸಂಪುಟದಲ್ಲಿ ಭಟ್ಟರು ಮೂವತ್ತೆರಡು ಜನ ಮಹಾನುಭಾವರನ್ನು ಒಟ್ಟಿಗೆ ಸೇರಿಸಿದ್ದಾರೆ. ಕನ್ನಡ ಸಾರಸ್ವತ ಲೋಕದ ಗಣ್ಯಾತಿಗಣ್ಯರನ್ನು ತಮಗೆ ವಿಶಿಷ್ಟವಾದ ರೀತಿಯಲ್ಲಿ ಪರಿಚಯಿಸಿದ್ದಾರೆ. ಇವರೆಲ್ಲರನ್ನೂ ಒಂದು ಮುಖಾಮುಖಿಗೆ ಸಜ್ಜುಗೊಳಿಸಿ ತಾವು ಮರೆಯಲ್ಲಿಯೇ ನಿಂತಿದ್ದಾರೆ. ಒಮ್ಮೆ ಪುಸ್ತಕವನ್ನು ಹಿಡಿದು ಅದರೊಳಗೆ ಸೇರಿಕೊಂಡರೆ ನೆನಪಿನ ಅಂಗಳದಲ್ಲಿ ಮಹಾಚೇತನಗಳ ಜೊತೆಗೆ ಸಮಾಗಮ; ಭಾವಕೋಶಗಳಲ್ಲಿ ಸದಾ ಉಳಿದುಬಿಡುವ ನೆನಪಿನ ಜೇನಹನಿಗಳು.

ಕನ್ನಡದಲ್ಲಿ ವ್ಯಕ್ತಿಚಿತ್ರಗಳಿಗೇನೂ ಕೊರತೆಯಿಲ್ಲ. ಸಾಹಿತಿಗಳ ಜೀವನ ವಿವರ, ಸಾಧನೆ, ಕೃತಿಗಳ ವಿವರಗಳನ್ನು ಹೇಳುವ ಸಾಕಷ್ಟು ಪುಸ್ತಕಗಳಿವೆ. ಕೆಲವು ಪುಸ್ತಕಗಳಂತೂ ವ್ಯಕ್ತಿಗಳ ಜನ್ಮದಿನ, ಹುಟ್ಟಿದ ಊರು, ತಂದೆತಾಯಿಗಳ ಹೆಸರುಗಳಿಂದ ಆರಂಭವಾಗಿ, ಅವರು ಸತ್ತಿದ್ದೆಲ್ಲಿ, ಎಷ್ಟು ಗಂಟೆಗೆ, ಯಾರು ಯಾರು ಅವರಿಗೆ ಕಂಬನಿ ಮಿಡಿದರು ಎಂಬಲ್ಲಿಗೆ ಬಂದು ನಿಲ್ಲುತ್ತವೆ. ಅಲ್ಲಿಗೆ ನಿಲ್ಲುತ್ತವಲ್ಲಾ ಎಂಬುದು ಸಹ ಸಮಾಧಾನವೇ. ಇಂಥ ಕೃತಿಗಳನ್ನು ಓದುವಾಗ ಯಾವುದೋ ವಿವರವಾದ ಬಯೋಡೇಟಾ ಓದಿದ, ಅಥವಾ ಸತ್ವ, ಆತ್ಮವಿಲ್ಲದ

ಬಡಬಡಿಕೆಯ ನೀರಸ ಸಾಕ್ಷ್ಯಚಿತ್ರ ನೋಡಿದ ಅನುಭವವಾಗುವುದುಂಟು. ಓದಲು ಹೊರಟಾಗ ಇರುವ ಆಸಕ್ತಿ, ಕುತೂಹಲಗಳ ಕಾಲು ಪಾಲೂ ಓದಿದ ನಂತರ ಇರುವುದಿಲ್ಲ. ಒಬ್ಬ ವ್ಯಕ್ತಿಯ ಬಗ್ಗೆ ಅಷ್ಟೆಲ್ಲ ವಿವರ ತಿಳಿದೂ ಕಡೆಯಲ್ಲಿ ಅವನ ಬಗ್ಗೆ ಏನೂ ಗೊತ್ತಿಲ್ಲದ ಭಾವ ನಮ್ಮದಾಗಿರುತ್ತದೆ. ಏಕೆಂದರೆ ಆ ವ್ಯಕ್ತಿಯ ಆತ್ಮವೇ ಅಂಥ ಬರಹಗಳಲ್ಲಿ ಇರುವುದಿಲ್ಲ. ವ್ಯಕ್ತಿಚಿತ್ರ ಬರೆಹದ ಸಮರ್ಪಕ ಗ್ರಹಿಕೆ ಇಲ್ಲದೆ ಬರೆದ ಲೇಖನಗಳಾಗಿರುವುದರಿಂದ ಅವು ಓದುಗನ ಮನಸ್ಸಿನಲ್ಲಿ ಬಹಳ ಕಾಲ ನಿಲ್ಲುವುದಿಲ್ಲ. ಈ ಬಗೆಯ ಬರೆಹಗಳು ಕನ್ನಡದಲ್ಲಿ ದಂಡಿಯಾಗಿವೆ. ಹಾಗೇ ಕೆಲವು ದಂಡವೂ ಆಗಿವೆ.

ಲಕ್ಷ್ಮೀನಾರಾಯಣ ಭಟ್ಟರ ಇಲ್ಲಿನ ಬರಹಗಳಾದರೋ ಪೂರ್ಣವಾಗಿ ಭಿನ್ನ ನೆಲೆಯವು; ಸಾರವತ್ತಾದ ಸಂಗತಿಗಳಿಂದ ಕೂಡಿದ ಆತ್ಮೀಯ ಶೈಲಿಯ ರಸಾತ್ಮಕ ಚಿತ್ರಣಗಳು. ಭಟ್ಟರಿಗೆ ಇಲ್ಲಿನ ವ್ಯಕ್ತಿಗಳನ್ನು ಪರಿಚಯಿಸುವ ಒತ್ತಾಯಕ್ಕಿಂತ ಒತ್ತಾಸೆಯೇ ಮುಖ್ಯ ಪ್ರಚೋದನೆಯಾಗಿದೆ. ಹಾಗೆಂದೇ ಇಲ್ಲಿ ಎಲ್ಲರ ಕುರಿತ ಬರೆಹಗಳೂ ತೀರಾ ಸಹಜವಾಗಿ ಮೂಡಿಬಂದಿವೆ.

ಇಲ್ಲಿ ಬರುವ ಸಾಹಿತಿಗಳು ತಾನೇ ಸಾಮಾನ್ಯರಲ್ಲ; ಡಿವಿಜಿ, ಮಾಸ್ತಿ, ಬೇಂದ್ರೆ, ಕುವೆಂಪು, ತೀನಂಶ್ರೀ, ನರಸಿಂಹಸ್ವಾಮಿ, ಪುತಿನ, ಭೈರಪ್ಪ, ರಾಮಾನುಜನ್, ಕೀರ್ತಿನಾಥ ಕುರ್ತಕೋಟಿ – ಇಂಥ ಅಸಾಧಾರಣ ಚೇತನರು; ಕನ್ನಡ ಸಾಹಿತ್ಯಕ್ಕೆ ಸತ್ವಸಮೃದ್ಧಿಗಳನ್ನೂ, ವೈವಿಧ್ಯ ವಿಪುಲತೆಗಳನ್ನೂ, ಕಾಂತಿ ತೇಜಸ್ಸುಗಳನ್ನೂ ಧಾರೆಯೆರೆದ ಧೀಮಂತರು. ಭಟ್ಟರು ಇವರಲ್ಲಿ ಹೆಚ್ಚಿನವರನ್ನು ಬಹಳ ಹತ್ತಿರದಿಂದ ಬಲ್ಲವರು, ಅವರ ಜೊತೆ ಒಡನಾಡಿದವರು. ಈ ಆಪ್ತತೆಯಿಂದಾಗಿ ಅವರ ಬರೆಹಕ್ಕೆ ಒಂದು ಖಚಿತತೆ ಆತ್ಮೀಯತೆ ಪ್ರಾಪ್ತವಾಗಿದೆ. ಅವರ ಬಗ್ಗೆ ಭಟ್ಟರಿಗಿರುವ ಪ್ರೀತಿ ಗೌರವಗಳಿಂದಾಗಿ ಬರೆಹ ಅಲ್ಲಲ್ಲಿ ಸಾಕಷ್ಟು ಭಾವಮಯವೂ ಆಗಿದೆ. ಅದರ ರುಚಿ ಹೆಚ್ಚಿದೆ.

ಸಮರ್ಥ ವ್ಯಕ್ತಿಚಿತ್ರಣ ಸುಲಭವಾದ ಕೆಲಸವೇನಲ್ಲ. ಇದಕ್ಕೆ ಕೈಹಾಕಿದ ಲೇಖಕ ಬಹುಶ್ರುತನೂ, ಸತ್ಯನಿಷ್ಠನೂ, ಅಷ್ಟೇ ಔಚಿತ್ಯದ ಹದವರಿತವನೂ ಆಗಿರಬೇಕು. ಸಾಹಿತಿಯೊಬ್ಬರ ಪರಿಚಯ ಮಾಡಿಕೊಡುವುದು ಎಂದರೆ ಏನನ್ನು, ಹೇಗೆ ಎನ್ನುವುದನ್ನೂ ತಿಳಿದಿರಬೇಕು. ವ್ಯಕ್ತಿಗಳ ಕಾರ್ಯಸಾಧನೆಯನ್ನು ತಿಳಿಸುವುದು ಮುಖ್ಯ, ನಿಜ. ಆದರೆ ಅಷ್ಟೇ ಸಾಕೆ? ಆಗ ಅವರ ಒಂದು ಪಾರ್ಶ್ವ ಮಾತ್ರ ತಿಳಿದು ಒಟ್ಟು ವ್ಯಕ್ತಿತ್ವದ ಮಹತ್ವ ತಿಳಿಯದೇ ಹೋಗಬಹುದು. ಸಮರ್ಥವಾದ ಬರೆಹ ಸಂಬಂಧಿಸಿದವರ ಮಾತು, ಒಡನಾಟ ಅನುಭವ, ಮಹತ್ವದ ಪ್ರಸಂಗ

(Anecdote) ಬಾಳಿನ ತಿರುವು, ಜೀವನದೃಷ್ಟಿಗಳನ್ನು ಮಾತ್ರವೇ ಅಲ್ಲದೆ ಅವರ ಬಗ್ಗೆ ರೂಪುಗೊಂಡ ದಂತಕಥೆಗಳನ್ನೂ ಒಳಗೊಳ್ಳುತ್ತದೆ. ಇವೆಲ್ಲವೂ ಚಿತ್ರಿತನಾದ ವ್ಯಕ್ತಿಯ ಅಂತರಾಳವನ್ನು, ಮನಸ್ಸಿನ ಭಾವಲಹರಿಗಳನ್ನು ತಿಳಿಸುತ್ತ ಆ ಚಿತ್ರ ನಮಗೆ ಆಪ್ತವಾಗುತ್ತದೆ. ಆಗ ವ್ಯಕ್ತಿ ನಮ್ಮ ಅರಿವಿಗೇ ಬಾರದೆ ಅನಾವರಣಗೊಳ್ಳುತ್ತ, ನಿಧಾನವಾಗಿ ನಮ್ಮ ಅಂತರಂಗಕ್ಕೇ ನುಸುಳಿ ಅಲ್ಲಿ ನೆಲೆನಿಲ್ಲುತ್ತಾನೆ.

ಸಾಹಿತಿ, ಕವಿ, ವಿಮರ್ಶಕ, ಕತೆಗಾರ, ನಾಟಕಕಾರ, ದಾರ್ಶನಿಕನಾದವನು ತನ್ನ ಸಾಧನೆಯ ಮೂಲಕ ನಾಡಿನ ಸಾಂಸ್ಕೃತಿಕ ಹಾಗೂ ಸಾಮಾಜಿಕ ಜೀವನದಲ್ಲಿ ತನ್ನದೇ ಆದ ಪ್ರಭಾವ ಬೀರುತ್ತಾ, ತನ್ನ ಪರಿಮಿತಿಯಲ್ಲಿ ಸ್ವಂತದ ಛಾಪು ಮೂಡಿಸುತ್ತಿರುತ್ತಾನೆ. ಕ್ರಮೇಣ ಆತನ ಕೃತಿಗಳು ಆ ಕೆಲಸ ಮಾಡಲು ಆರಂಭಿಸುತ್ತವೆ. ಸಾಹಿತ್ಯ ಕೃತಿಯೊಂದು ರಚಿತವಾದ ನೂರಾರು ವರ್ಷಗಳ ನಂತರವೂ ನಮ್ಮನ್ನು ಕಾಡುವುದು ಈ ಕಾರಣಕ್ಕೆ. ಇದರಿಂದ ಸಾಹಿತಿಯು ತನ್ನ ಅರಿವಿಲ್ಲದೆಯೇ ಸಾರ್ವಜನಿಕವಾಗಿ ಬೇರೆ ಆಯಾಮ ಪಡೆಯುತ್ತ ಹೋಗುತ್ತಾನೆ. ಫಲವಾಗಿ ಅವನ ವ್ಯಕ್ತಿತ್ವದ ಸುತ್ತ ಒಂದು ಪ್ರಭಾವಳಿ (Aura) ನಿರ್ಮಾಣವಾಗುತ್ತದೆ.

ಒಂದು ಹಿರಿಯ ವ್ಯಕ್ತಿತ್ವವನ್ನು ಕುರಿತು ಬರೆಯುವಾಗ ಕೆಲವರು ಈ ಪ್ರಭಾವಳಿಯನ್ನೇ ಪೂರ್ತಿಯಾಗಿ ನಿಜವೆಂದು ಭಾವಿಸಿ ಅದರ ಮೂಲಕವೇ ಅವನನ್ನು ಕಾಣಲು ಯತ್ನಿಸುತ್ತಾರೆ. ಇನ್ನು ಕೆಲವರು ಅದನ್ನು ಪೂರ್ಣ ಅಲಕ್ಷಿಸುತ್ತಾರೆ. ಈ ಎರಡೂ ಸರಿಯಲ್ಲ. ಸ್ವಲ್ಪ ಎಚ್ಚರ ತಪ್ಪಿದರೂ ವ್ಯಕ್ತಿಯ ಸತ್ಯಪರಿಚಯ ತಪ್ಪಿ ಹೋಗುತ್ತದೆ. ಆ ಮಟ್ಟಿಗೆ ಓದುಗ ವ್ಯಕ್ತಿಯ ನಿಜಪರಿಚಯದಿಂದ ವಂಚಿತನಾಗುತ್ತಾನೆ. ಲಕ್ಷ್ಮೀನಾರಾಯಣ ಭಟ್ಟರು ಇಲ್ಲಿನ ಬಹುತೇಕ ಎಲ್ಲ ಲೇಖಕರಿಗೂ ನ್ಯಾಯವೊದಗಿಸಲು ಶಕ್ತರಾಗಿದ್ದರೆ ಅದು ವ್ಯಕ್ತಿಚಿತ್ರಣದ ಸಮರ್ಪಕ ವಿಧಾನವನ್ನು ಅವರು ಗ್ರಹಿಸಿರುವುದರಿಂದ ಮತ್ತು ಆ ಬರೆಹದ ಸ್ವರೂಪದ ಸಂಬಂಧವಾಗಿ ಅವರಿಗೆ ಒಂದು ಅಂತರ್ಬೋಧೆ ಇರುವುದರಿಂದ.

ಬೇಂದ್ರೆ, ಕುವೆಂಪು, ಡಿವಿಜಿ, ಗೊರೂರು, ಗೋಕಾಕ್, ತೀನಂಶ್ರೀ, ರಾಮಾನುಜನ್ ಮುಂತಾದವರ ಬಗ್ಗೆ ಬರೆಯುವಾಗ ಡಾ. ಭಟ್ಟರು ಅವರು ನಡೆದ ದಾರಿಯಲ್ಲಿನ ಹೆಜ್ಜೆಗುರುತುಗಳ ಮೇಲೆ ಬೆಳಕು ಚೆಲ್ಲುತ್ತಾ, ಅವರ ಸಾಹಿತ್ಯಕ ಕೊಡುಗೆಗಳ ಮಹತ್ವವನ್ನು ತಿಳಿಸುತ್ತಾ, ಅವರ ಅಂತರಂಗದ ಕದ ತಟ್ಟುತ್ತಾರೆ. ಇದು ಓದುಗನಿಗೆ ಸಿಗಬಹುದಾದ ಅಪರೂಪದ ಅನುಭವ. ಈ ಹಂತದಲ್ಲಿ ಲೇಖಕರು ನಮ್ಮನ್ನು ಒಂದೆಡೆಯೇ ನಿಲ್ಲಿಸಿಕೊಂಡು ಆ ಸಾಹಿತಿಯ ಬಗ್ಗೆ ಭಾಷಣ ಬಿಗಿಯುತ್ತ ಬೋರು ಹೊಡೆಸುವುದಿಲ್ಲ. ಹೇಳಬೇಕಾದುದನ್ನು ಸೂಚ್ಯವಾಗಿ ಹೇಳಿ, ಆಪ್ತವಾಗಿ ಒಂದೆರಡು ಸುತ್ತು ನಡೆಸಿ, ಆತ್ಮೀಯವಾಗಿ ಪಿಸು ನುಡಿದು ಮೆಲ್ಲಮೆಲ್ಲನೆ

ಗುಟ್ಟು ಹೇಳುವ ಕೌತುಕ ಸೃಷ್ಟಿಸುತ್ತಾರೆ. ಜೊತೆಯಲ್ಲಿಯೇ ಆ ಲೇಖಕನ ಬಗೆಗೆ ರುಚಿಯಾದ ಅನುಭವ ಪ್ರಸಂಗಗಳನ್ನು ತೆರೆದಿಡುತ್ತಾರೆ. ವೃದ್ಧರೊಬ್ಬರು ಮಾಸ್ತಿಯವರನ್ನು ಭೇಟಿಯಾಗಿ ತಮ್ಮ ಮನೋಯಾತನೆಯನ್ನು ನೀಗಿಕೊಂಡದ್ದು, ತೀನಂಶ್ರೀ ಮನೆಯಲ್ಲಿ ಬೇಂದ್ರೆ ಭಾಷಾಶಾಸ್ತ್ರದ ವಿದ್ವಾಂಸರಿಗೇ ಆ ಶಾಸ್ತ್ರ ಬೋಧಿಸಿದ್ದು, ರಾಮಾನುಜನ್ ತಮಿಳು ವ್ಯಾಕರಣ ಹುಡುಕಲು ಹೋಗಿ ತಮ್ಮ ನಿಜಶಕ್ತಿಗೆ ಹೊರಳಿದ್ದು, ಅನಕೃರವರ ಮುತ್ತಜ್ಜ ಕಾರ್ಪೋರೇಷನ್ ಅಧಿಕಾರಿಗಳಿಗೆ ಬಂದೂಕು ತೋರಿಸಿ ಓಡಿಸಿದ್ದು, ಡಿಎಲ್ ನರಸಿಂಹಚಾರ್ಯರು ಹಜಾಮತಿಗೆ ಕೂತಿದ್ದಾಗ ಕನ್ನಡದ ಮೊಟ್ಟ ಮೊದಲ ಪದ ಪತ್ತೆಯಾದದ್ದು, ತೀನಂಶ್ರೀಯವರ ಬೋಳು ನೆತ್ತಿಯಲ್ಲಿ ಫ್ಯಾನ್ ತಿರುಗಿದ್ದು. – ಇಂಥ ಹಲವಾರು ಪ್ರಸಂಗಗಳನ್ನು ಭಟ್ಟರು ತೆರೆದಿಡುತ್ತಾರೆ. ಆ ಮೂಲಕ ವ್ಯಕ್ತಿಯನ್ನು ತಿಳಿಯುವ ಕಾರ್ಯವನ್ನು ಓದುಗನಿಗೇ ಬಿಡುತ್ತಾರೆ. ಇಂಥ ನಿರೂಪಣೆಯು ಹಾಸ್ಯ, ಕೌತುಕ, ವಿಷಾದ, ವಿಸ್ಮಯಗಳನ್ನು ಸೃಷ್ಟಿಸುತ್ತ ಬರೆಹವನ್ನು ಬಗೆಬಗೆ ಹಣ್ಣು ಬೆರೆತ ರಸಾಯನವನ್ನಾಗಿ ಮಾಡುತ್ತದೆ. ಈ ಪುಸ್ತಕ ಒಂದು ರೀತಿಯಲ್ಲಿ ಅಪರೂಪದ ವ್ಯಕ್ತಿ ಚಿತ್ರಣ. ಇದನ್ನು ಓದುವಾಗ ಬಿ. ಜಿ. ಎಲ್. ಸ್ವಾಮಿಯವರ 'ಪಂಚಕಳಶ ಗೋಪುರ'ದ ರುಚಿಕರವಾದ, ಹಾಗೆಯೇ ವಿಮರ್ಶಾತ್ಮಕವಾದ ಬರೆಹ ನೆನಪಾಗುತ್ತದೆ.

ಡಿವಿಜಿ ಪತ್ರಕರ್ತರಾಗಿ ಎಷ್ಟು ಪ್ರಾಮಾಣಿಕರಾಗಿದ್ದರು, ಹೇಗೆ ಯಾವ ದಾಕ್ಷಿಣ್ಯಕ್ಕೂ ಒಳಗಾಗುತ್ತಿರಲಿಲ್ಲ ಎನ್ನುವುದನ್ನು ಭಟ್ಟರು ಒಂದೆರಡು ಪ್ರಸಂಗ ಕಥನದಿಂದ ಸ್ವಾರಸ್ಯಕರವಾಗಿ ಸೂಚಿಸಿ, ಹೇಳಿಕೆಗಳು ಉಂಟು ಮಾಡಬಹುದಾಗಿದ್ದ ಕಿರಿಕಿರಿಯನ್ನು ತಪ್ಪಿಸಿ ಬಿಡುತ್ತಾರೆ. ವ್ಯಕ್ತಿಚಿತ್ರವೊಂದು ಲಘು ಬಗೆಯ ಕಥನರೂಪ ಪಡೆಯುವುದಕ್ಕೆ ಇಂಥ ಪ್ರಯೋಗಗಳು ಅನುಕರಣೀಯ. ಈ ನಿದರ್ಶನ ನೋಡಿ.

ಒಮ್ಮೆ ಡಿವಿಜಿಯ ಬಂಧುಗಳೊಬ್ಬರ ಮನೆಯಲ್ಲಿ ಒಂದು ಉತ್ಸವ ನಡೆಯಿತು. ಡಿವಿಜಿಗೆ ಹೋಗಲು ಆಗಲಿಲ್ಲ. ಮಕ್ಕಳನ್ನು ಕಳಿಸಿದರು. ಆರತಿ ಅಕ್ಷತೆಯ ಹೊತ್ತಾದರೂ ಹೆಂಡತಿ ಮನೆಯಲ್ಲೇ ಇದ್ದಾರೆ. ಗಂಡ ಅಸಮಾಧಾನದಿಂದ ಕೇಳಿದರು.

'ನೀನು ಉತ್ಸವಕ್ಕೆ ಹೋಗುವುದಿಲ್ಲವೇ?'

'ಇಲ್ಲ'

'ಯಾಕೆ?'

'ಮಕ್ಕಳನ್ನು ಕಳಿಸಿದ್ದೇನಲ್ಲ.'

'ಅದು ಸರಿ, ನೀನೂ ಹೋಗಬೇಕಷ್ಟೆ ಅವರು ನಮಗೆ ಬಹಳ ಬೇಕಾದವರು. ನೀನು ಹೋಗದಿದ್ದರೆ ಬೇಸರಪಡುವುದಿಲ್ಲವೇ?'

'ಮನೆಯಲ್ಲಿ ಯಾರಾದರೂ ಇರಬೇಕಲ್ಲ.'

'ನಾನು ಇರುತ್ತೇನೆ. ನೀನು ಹೋಗಿ ಬಾ.'

ಅವರ ಹೆಂಡತಿ ಏನೇನೋ ಸಬೂಬು ಹೇಳಿದರು. ಡಿವಿಜಿ ಅದಕ್ಕೆ ಉತ್ತರ ಕೊಡುತ್ತಲೇ ಹೋದರು. ನಿಜವಾದ ಕಾರಣ ಕಡೆಗೆ ಹೊರಬರಲೇ ಬೇಕಾಯಿತು. ಅವರ ಪತ್ನಿಯ ಮುಖ ಬಾಡಿತು. ಸಂಕೋಚ ಪಡುತ್ತಲೇ ಹೇಳಿದರು. "ನಾನು ಹೇಳಬಾರದೆಂದಿದ್ದೆ. ನೀವೋ ಪಟ್ಟು ಹಿಡಿದು ನನ್ನ ಬಾಯಿ ಬಿಡಿಸುತ್ತಿದ್ದೀರಿ. ನನ್ನ ಹತ್ತಿರ ಇರುವುದು ಇದೊಂದೇ ಸೀರೆ. ಇದೂ ಒಂದೆರಡು ಕಡೆ ಹರಿದಿದೆ. ನಾನು ಈ ಬಟ್ಟೆಯಲ್ಲಿ ಕಾಣಿಸಿಕೊಂಡರೆ ಜನ ನಿಮ್ಮನ್ನು ಕುರಿತು ಆಡಿಕೊಳ್ಳುವುದಿಲ್ಲವೇ? ಬಂಧುಗಳ ಮನೆಗೆ ಹೋಗಿಬರುವುದು ಹೇಗೆ ನನಗೆ ಕರ್ತವ್ಯವೋ ಹಾಗೇ ನಿಮ್ಮ ಮರ್ಯಾದೆಗೆ ಊನ ಬರದಂತೆ ನಡೆದುಕೊಳ್ಳುವುದೂ ನನಗೆ ಕರ್ತವ್ಯವೇ ಅಲ್ಲವೇ? ಹೊಸ ಸೀರೆಯನ್ನು ಕೊಂಡುಕೊಡಿ ಎಂದು ನಾನು ಕೇಳುತ್ತಿಲ್ಲ. ಆದರೆ ಈ ಸಂದರ್ಭದಲ್ಲಿ ಯುಕ್ತವೆಂದು ನನಗೆ ತೋರಿದಂತೆ ನಾನು ನಡೆದುಕೊಳ್ಳುತ್ತೇನೆ. ಅದಕ್ಕೆ ನೀವು ಅಡ್ಡಿ ಮಾಡಕೂಡದು ಎಂದಷ್ಟೇ ನನ್ನ ಬೇಡಿಕೆ"

ಹಾಗೆಯೇ ಖ್ಯಾತ ಕವಿ ಕೆ. ಎಸ್. ನರಸಿಂಹಸ್ವಾಮಿ ಅವರ ಕಾವ್ಯ ಪರಿಚಯಕ್ಕೆ ಭಟ್ಟರು ತಮಗಾದ ಚಿಕ್ಕ ಘಟನೆಯ ಮೂಲಕ ಪ್ರವೇಶಿಸುತ್ತಾರೆ.

"ಸುಮಾರು ಹದಿನೆಂಟು ವರ್ಷಗಳ ಹಿಂದಿನ ಸಂಗತಿ. ನಾನು ಶಿವಮೊಗ್ಗದ ಬಸ್ ಹತ್ತಿದ್ದೆ, ಕೆ. ಎಸ್. ನ. ಜೊತೆಗೆ ಸಿಕ್ಕರು. ಶಿವಮೊಗ್ಗದಲ್ಲಿ ಅವರನ್ನು ನನ್ನ ಭಾವನ ಮನೆಗೆ ಕರೆದುಕೊಂಡು ಹೋದೆ. ಒಳಗಿದ್ದ ಅಕ್ಕನ ಹತ್ತಿರ ಹೋಗಿ ಕೆ. ಎಸ್. ನರಸಿಂಹಸ್ವಾಮಿ ಬಂದಿದ್ದಾರೆ ಎಂದೆ. ಅವಳಿಗೆ ತಿಳಿಯಲಿಲ್ಲ. 'ಕವಿಗಳು ಕಣೇ' ಎಂದೆ ತಿಳಿಯಲಿಲ್ಲ. 'ರಾಯರು ಬಂದರು ಮಾವನ ಮನೆಗೆ ಕವಿತೆ ಬರೆದವರೇ' ಎಂದೆ. ನನ್ನಕ್ಕ ಸಂಭ್ರಮದಿಂದ ಮೇಲೆದ್ದಳು. 'ನಮ್ಮ ಮನೆಗೆ ಬಂದಿದ್ದಾರೇನೋ! ಎಂದಳು. ಹತ್ತು ವರ್ಷ ಚಿಕ್ಕವಳಂತೆ ಸಡಗರದಿಂದ ಓಡಾಡಿದಳು. ಅರ್ಧಗಂಟೆಯಲ್ಲಿ ಒಂದು ಬಿಸಿಬಿಸಿ ಅಡುಗೆ ಸಿದ್ಧವಾಯಿತು. ಎಲೆ ಹಾಕಿ ಬಡಿಸಿ, ದೇವರಿಗೆ ತುಪ್ಪದ ದೀಪ ಹಚ್ಚಿಟ್ಟು ಪವಿತ್ರ ಭಾವದ ಒಂದು ಪುಟ್ಟ ಅತಿಥ್ಯ ನಡೆದುಹೋಯಿತು. ಬೆರಗಾಗಿ ನಾನು ಅಂದುಕೊಂಡೆ'. ಈ ಕವಿ ಅಂಥಿಂಥವರಲ್ಲ ಇವರ ಕಾವ್ಯ ಜನರ ಮನಸ್ಸಿನಲ್ಲಿ ತಮ್ಮ ಯೌವನದ ತೀವ್ರ ಸ್ಮರಣೆಯನ್ನು

ಉಕ್ಕಿಸುತ್ತದೆ. ಇದೇ ಆ ಕಾವ್ಯಕ್ಕೆ ದೊರೆಯುವ ಗೌರವದ ರಹಸ್ಯ."

ಎ.ಎನ್. ಮೂರ್ತಿರಾಯರನ್ನು ಕುರಿತ ಬರೆಹ ಈ ಕೃತಿಯಿಂದಾಚೆಯೂ ಅವರ ಬಗ್ಗೆ ಬಂದಿರುವ ಉತ್ತಮ ಬರಹಗಳಲ್ಲೊಂದು 'ದೇವರು' ಕಲ್ಪನೆ ಕುರಿತು ಭಟ್ಟರು ಅವರೊಡನೆ ಮುಖಾಮುಖಿಯಾಗಿರುವುದು. ಆ ಸಂಬಂಧವಾಗಿ ಗಾಢಚಿಂತನೆಗಳು ಹೊರಬರಲು ಕಾರಣವಾಗಿದೆ. ಮೂರ್ತಿರಾಯರ ಉತ್ತರಗಳಂತೆ ಭಟ್ಟರ ಪ್ರಶ್ನೆ, ವಿವರಣೆಗಳೂ ಮಹತ್ವದ್ದಾಗಿವೆ. ಇದೊಂದು ಚಿಂತನಭರಿತ ಲೇಖನ.

ಭಟ್ಟರ ಗದ್ಯಶೈಲಿ ಚುರುಕಾದದ್ದು, ಹಾಗೆಯೇ ರಸಾತ್ಮಕವಾದದ್ದು. ಆರೇಳು ವಾಕ್ಯಗಳಲ್ಲಿ ಕಣ್ಣೆದುರು ಆಕಾರ ತಾಳಿ ನಿಲ್ಲುವ ಮೂರ್ತಿಯನ್ನೇ ಅವರು ಕಡೆದು ಬಿಡಬಲ್ಲರು. ಯುವಕ ಬೇಂದ್ರೆ ಒಮ್ಮೆ ಕವಿತಾ ವಾಚನ ಮಾಡಿದ ರೀತಿಯನ್ನೂ ಅವರ ಕವಿತೆಗಳು ಕವಿಸುವ ಮಾಯೆಯನ್ನೂ ಕುರಿತು ಹೇಳುವ ಈ ಸಾಲುಗಳನ್ನು ಗಮನಿಸಿ.

ಐವತ್ತು ವರ್ಷಗಳಿಗೂ ಹಿಂದಿನ ಘಟನೆ. ಬೆಳಗಾವಿಯ ಕನ್ನಡ ಸಾಹಿತ್ಯ ಸಮ್ಮೇಳನದ ವೇದಿಕೆ. ಯುವಕ ಕವಿಯೊಬ್ಬ ವೇದಿಕೆಗೆ ಬಂದು ನಿಂತ. ಅವನ ತಲೆಗೆ ಕೇಸರಿ ಬಣ್ಣದ ಒಂದು ಪಗಡಿ. ಹೆಗಲ ಮೇಲೆ ಅದರ ಇಳಿಬಿದ್ದ ಚುಂಗು. ಕೆಚ್ಚು ಹೊಮ್ಮುವ ಮುಖ. ಕಾಂತಿ ಚೆಲ್ಲುವ ಕಣ್ಣು. ಕವಿತೆಯ ಭಾವವನ್ನು ವಿಸ್ತರಿಸಿಕೊಡುವಂತೆ ಚಲಿಸುವ ಕೈ. ಆ ನಿಲುವಿನಲ್ಲಿ ಅವನೊಬ್ಬ ಗಾರುಡಿಗ.

ಯುವಕ ಕವಿತೆ ಓದಿದ. ಇಡೀ ಸಭೆ ಆ ಭಾವೋಜ್ವಲವಾದ ವಾಚನಕ್ಕೆ ಮರುಳಾಗಿ ಹೋಯಿತು. ಮೋಡಿಗೆ ಒಳಗಾದವರಂತೆ ಪರವಶವಾಗಿ ಆಲಿಸಿತು.

ಬೇಂದ್ರೆಯವರ ಕವಿತೆಯೇ ಹಾಗೆ. ಅದು ಮಾತಿನ ಮುರಿಗಳಲ್ಲಿ ಮೂಡುವ ಒಂದು ಮಾಯೆ. ಓದುಗನ ಮನಸ್ಸನ್ನು ಕವಿಯುವ ಒಂದು ಇಂದ್ರಜಾಲ. ಕಾಮನ ಬಿಲ್ಲಿನ ಬಣ್ಣ ಏಳು, ಬೇಂದ್ರೆ ಕವಿತೆಯದು ಎಂಟು! ಕವಿತೆಯ ದೇಸಿನುಡಿಯಲ್ಲಿ ಕಾಣುವ ಅಪೂರ್ವ ಸ್ವಂತಿಕೆ, ಅದರ ಹೆಣಿಗೆಯಲ್ಲಿನ ನಿರಾಯಾಸತೆ, ಕವಿತೆ ಸೃಷ್ಟಿಸುವ ಅರ್ಥಕ್ಕಿರುವ ರಸೋದ್ದೀಪಕತೆ – ಇವೆಲ್ಲ ಬೇಂದ್ರೆ ಕವಿತೆಯ ಕೆಲವು ಅಮೋಘ ಅಂಶಗಳು. ಪು. ತಿ. ನ ಹೇಳಿದಂತೆ ದತ್ತರಾಮರ ಕವಿತೆಗಳಲ್ಲಿ ವಜ್ರದ ಹೊಳಪಿದೆ. ಬೆಳಕು ಬಿದ್ದಂತೆ ಅದರ ಬಣ್ಣ: ಈಗ ನೀಲಿ, ಇನ್ನೊಮ್ಮೆ ಹಸಿರು, ಮತ್ತೊಮ್ಮೆ ಕಿತ್ತಳೆ, ಮಗದೊಮ್ಮೆ ಕೊರೈಸುವ ಕೆಂಪುಹೊಳಪು. ಲೋಕದ ಮೇಲೆ ಅಲೌಕಿಕದ ಬೆಳಕು ಚೆಲ್ಲುವ ಕವಿತೆಗಳು ಅವು. ಮನುಷ್ಯನಿಗೆ ತಾನು ಆತ್ಮಶಾಲಿ, ಆನಂದಮಯ ಎನ್ನುವುದನ್ನು ನೆನಪಿಸುವಂಥವು."

ಸೊಗಸಾದ ಚಿತ್ರ, ರೂಪಕಾತ್ಮಕವಾದ ವ್ಯಾಖ್ಯಾನ!

ಸಂಕ್ಷಿಪ್ತ ಲೇಖನಗಳಾದರೂ ಇಲ್ಲಿ ಸೂಕ್ಷ್ಮ ವಿಮರ್ಶೆಗೆ ಏನೂ ಕೊರತೆಯಿಲ್ಲ. ಎಲ್ಲ ಕೃತಿಗಳ ಬಗ್ಗೆ ಇಂಥಲ್ಲಿ ವಿವರವಾದ ವಿಮರ್ಶೆ ಸಾಧ್ಯವಿಲ್ಲ. ಆದರೂ ಭಟ್ಟರು ಕೆಲವು ಕಡೆ ಹತ್ತೇ ಮಾತುಗಳಲ್ಲಿ ಕಾವ್ಯದ ಆಪ್ತ ತಿಳಿವಳಿಕೆಯಿಂದ ಕೂಡಿದ ಗಾಢವಾದ ಒಳನೋಟಗಳಿರುವ ವಿಮರ್ಶೆಯನ್ನು ಮಾಡಿಬಿಡುತ್ತಾರೆ. ಪ್ರಸಿದ್ಧ ವಿಮರ್ಶಕ ಕೀರ್ತಿನಾಥ ಕುರ್ತಕೋಟಿಯವರು "ಶಾಬ್ದಿಕ ಅನುಭವವನ್ನು ವಾಸ್ತವಿಕ ಅನುಭವದಿಂದ ಪ್ರತ್ಯೇಕಗೊಳಿಸುವ ಸಾಮರ್ಥ್ಯ ಕಣವಿಯವರ ಕಾವ್ಯಕ್ಕಿದೆಯೇ ಎಂಬ ಪ್ರಶ್ನೆಯೇಳುತ್ತದೆ" ಎಂದಿದ್ದಾರೆ. ಭಟ್ಟರು ಕಣವಿಯವರ ಬಗ್ಗೆ ಬರೆಯುತ್ತ ಅವರ–

ಹೂವು ಹೊರಳುವುವು ಸೂರ್ಯನ ಕಡೆಗೆ
ನಮ್ಮ ದಾರಿ ಬರಿ ಚಂದ್ರನವರೆಗೆ

ಎಂಬ ಕವಿತೆಗೆ ವ್ಯಾಖ್ಯಾನ ಮಾಡುವ ಮೂಲಕ ಕುರ್ತಕೋಟಿಯವರ ಆಕ್ಷೇಪವನ್ನು ನಿವಾರಿಸಿ ಬಿಡುತ್ತಾರೆ. ಆ ಬಗ್ಗೆ ಭಟ್ಟರು ಬರೆಯುವ ಮಾತು ಇದು.

"ಕವಿತೆಯ ಮೊದಲ ಸಾಲುಗಳಲ್ಲಿಯೇ ವಾಸ್ತವಾನುಭವವನ್ನು ಹೊಸದರ್ಶನಕ್ಕೆ ಹೊರಳಿಸುವ ಹೊಂಚು ಇದೆ. ಮನುಷ್ಯ ಎರವಲು ಬೆಳಕಿನ ಚಂದ್ರನ ಬೆನ್ನು ಹತ್ತಿದ್ದರೆ ನಿಸರ್ಗ ಸ್ವಯಂಪ್ರಭನಾದ ಸೂರ್ಯನ ಕಾಂತಿಗೆ ಮುಖ ಮಾಡಿಕೊಂಡಿದೆ. ಎರವಲು ಬೆಳಕು ಏನನ್ನೂ ಬೆಳೆಸಲೊಲ್ಲದ್ದು. ಅದು ಬೆಳಕಿನ ಒಂದು ತೋರಿಕೆ, ಕೇವಲ ಮಾಯೆ. ಸೂರ್ಯನ ತೇಜಸ್ಸು ಮಾತ್ರ ಮುಟ್ಟಿದ್ದನ್ನು ಬೆಳೆಸುವಂಥದ್ದು; ತೋರಿಕೆಯಲ್ಲ, ಸತ್ಯ. ನಾವು ಜಡವೆಂದು ಭಾವಿಸಿರುವ ನಿಸರ್ಗ ಸತ್ಯದ ಕಡೆಗೆ ಹೊರಳಿದ್ದರೆ ಬುದ್ಧಿವಂತನೆನಿಸಿಕೊಂಡ ಮನುಷ್ಯ ಮಾಯೆಯ ಬೆನ್ನುಹತ್ತಿದ್ದಾನೆ. ಇಷ್ಟೆಲ್ಲ ಅರ್ಥವನ್ನು ಈ ಸಾಲುಗಳು ಧ್ವನಿಸಿಬಿಡುತ್ತವೆ. ತೋರಿಕೆಗೆ ಸರಳವಾಗಿರುವ ಕವಿತೆ ಒಂದು ಆಧ್ಯಾತ್ಮಿಕ ಹೊಳಹಿನಲ್ಲಿ ಕಣ್ಣು ಬಿಚ್ಚಿದೆ. ಶಾಬ್ದಿಕ ಅನುಭವ ವಾಸ್ತವಿಕ ಅನುಭವದಿಂದ ಪ್ರತ್ಯೇಕಗೊಂಡಿದೆ."

ಈ ಪುಸ್ತಕದ ಮತ್ತೊಂದು ವೈಶಿಷ್ಟ್ಯವೆಂದರೆ ಇಲ್ಲಿನ ಹೆಚ್ಚು ಜನ ಸಾಹಿತಿಗಳ ಬಗ್ಗೆ ಬೇರೆ ಬೇರೆಯವರು ಬೇರೆ ಬೇರೆ ಕಾಲದಲ್ಲಿ ಬರೆದ ಒಂದೊಂದು ಕವಿತೆ ಇರುವುದು. ಮೊದಲು ಒಂದು ವ್ಯಕ್ತಿ ಚಿತ್ರ, ಅದಕ್ಕೆ ಒತ್ತಿಕೊಂಡೇ ಆ ಸಾಹಿತಿಯನ್ನು ಕುರಿತ ಒಂದು ಕವಿತೆ. ಹೀಗೆ ಇಲ್ಲಿ ಒಟ್ಟು ಇಪ್ಪತ್ತಾರು ಕವಿತೆಗಳಿವೆ. ಇದರಲ್ಲಿ ಭಟ್ಟರು ಹಿಂದೆ ಬರೆದಿದ್ದ ನಾಲ್ಕೈದು ಕವಿತೆಗಳೂ ಇದೆ. ತಮ್ಮ ಕವಿತೆಯೇ

ಇದ್ದಾಗಲೂ ಭಟ್ಟರು ಅದನ್ನು ಬಿಟ್ಟು ಬೇರೆಯವರ ಕವಿತೆ ಬಳಸಿರುವುದೂ ಉಂಟು. (ನಿದರ್ಶನಕ್ಕೆ ಅಡಿಗರ ಬಗ್ಗೆ ಭಟ್ಟರೇ ಬರೆದ ಒಂದು ಕವಿತೆ ಇದೆ. ಆದರೆ ಅವರು ಅದನ್ನು ಬಳಸದೆ ಚಂದ್ರಶೇಖರ ಪಾಟೀಲರ ಕವಿತೆಯನ್ನು ಹಾಕಿಕೊಂಡಿದ್ದಾರೆ. ಮತ್ತೊಬ್ಬರ ಬರೆಹದ ಬಗ್ಗೆ ಅವರಿಗಿರುವ ಹಾರ್ದಿಕ ದೃಷ್ಟಿ ಇಲ್ಲಿ ಕಾಣತ್ತದೆ.) ಈ ಕವಿತೆಗಳ ಬಳಕೆಯಿಂದಾಗಿ ಪುಸ್ತಕದ ಮೌಲಿಕತೆ ಹೆಚ್ಚಿದೆ. ಗದ್ಯ ಮಾತಾಡುವುದೇ ಒಂದು ಬಗೆ, ಪದ್ಯ ಮಾತಾಡುವುದೇ ಒಂದು ಬಗೆ. ಇಲ್ಲಿ ಎರಡು ನುಡಿತಗಳೂ ಅಕ್ಕಪಕ್ಕದಲ್ಲಿ ನಿಂತು ಬರೆಹಕ್ಕೆ ಹೊಸ ಆಯಾಮ ದೊರಕಿದೆ. ಬೇರೆ ಕವಿಗಳನ್ನು ಆಯುವಾಗಲೂ ಸಹ ಅವರು ಸರಿಯಾದವರನ್ನೇ ಆರಿಸಿದ್ದಾರೆ. ಮಾಸ್ತಿ, ಕುವೆಂಪು, ಪುತಿನ, ಕಣವಿ, ಶಿವರುದ್ರಪ್ಪ, ನಿಸಾರ್ ಅಹಮದ್ ಮೊದಲಾದವರ ಕವಿತೆಗಳು ಇಲ್ಲಿರುವುದು ಈ ಮಾತಿಗೆ ಸಾಕ್ಷಿ.

ಮೂಲತಃ ಗಟ್ಟಿ ಸಾಹಿತಿಯೂ ಉತ್ತಮ ಕವಿಯೂ ಆಗಿರುವ ಭಟ್ಟರಿಗೆ ಮತ್ತೊಬ್ಬ ಸಾಹಿತಿಯ ಇಂಗಿತ, ತುಮುಲ, ವಾಂಛೆ, ವಿಷಾದ, ಆನಂದ, ಅಸಹಾಯಕತೆ ಹಾಗೂ ರಾಗದ್ವೇಷಗಳೆಲ್ಲ ಅರ್ಥವಾಗುತ್ತವೆ. ಅವನ್ನೆಲ್ಲ ಮಾನವೀಯವಾಗಿ ಪರಿಭಾವಿಸಬಲ್ಲ ದೃಷ್ಟಿ ಅವರಿಗಿದೆ. ಹೊಗಳುವ ಭರಾಟೆಯಿಲ್ಲದ್ದರಿಂದ ಯಾರನ್ನೂ ಅಟ್ಟಕ್ಕೇರಿಸುವ ಪ್ರಶ್ನೆಯೇ ಇಲ್ಲ. ಟೀಕೆ ಆಶಯವಲ್ಲದ್ದರಿಂದ ಅನಗತ್ಯ ಪ್ರಹಾರಗಳೂ ಇಲ್ಲ. ವ್ಯಕ್ತಿಗೆ ನ್ಯಾಯ ದೊರಕಿಸುವುದೇ ಉದ್ದೇಶವಾದ್ದರಿಂದ ಇಲ್ಲಿ ವ್ಯಕ್ತಿಯೇ ಎದ್ದು ನಿಲ್ಲುತ್ತಾನೆ, ತನ್ನ ವ್ಯಕ್ತಿತ್ವದೊಂದಿಗೆ. ಹೀಗಾಗಿ ಇದು ಆಧುನಿಕ ಕನ್ನಡದ ಸಾಹಿತ್ಯ ರತ್ನರನ್ನು ಕಂಡರಿಸಿ ನಿಲ್ಲಿಸಿರುವ ಒಂದು ಸುಂದರ ಪ್ರತಿಮಾಗೃಹವಾಗಿದೆ. ಇದರ ಒಂದೊಂದು ಲೇಖನವೂ ಕಾವ್ಯಸತ್ವವಿರುವ ಗದ್ಯದಲ್ಲಿ ಎದ್ದುಬಂದಿದೆ. ಒಂದೊಂದನ್ನೂ ನಾನು ಓದಿ ಆನಂದಿಸಿದ್ದೇನೆ. ಇಂಥ ಪುಸ್ತಕವನ್ನು ನೀಡಿದ್ದಕ್ಕಾಗಿ ಕನ್ನಡ ಓದುಗರ ಪರವಾಗಿ ನಾನು ಭಟ್ಟರನ್ನು ಅಭಿನಂದಿಸುತ್ತೇನೆ.

ನನ್ನ ಮುನ್ನುಡಿ ಬೆಳೆಯಿತು. ಸಾಕು. ಈ ಕೃತಿಗೂ ನಿಮಗೂ ಮಧ್ಯೆ ನಿಲ್ಲುವುದು ಸರಿಯಲ್ಲ. ಇನ್ನು ನೀವುಂಟು ಕೃತಿಯುಂಟು. ಒಂದಷ್ಟು ಸಾರ್ಥಕ ಕ್ಷಣಗಳಿಗಾಗಿ ನೀವು ಈ ಕೃತಿಗೆ ನಿಮ್ಮನ್ನು ಒಡ್ಡಿಕೊಳ್ಳಬಹುದು.

ಬೆಂಗಳೂರು
18–9–2004
ವಿನಾಯಕ ಚತುರ್ಥಿ

ವಿಶ್ವೇಶ್ವರ ಭಟ್
ಸಂಪಾದಕ, ವಿಜಯ ಕರ್ನಾಟಕ

ಲೇಖಕನ ಮಾತು

ಈ ಪುಸ್ತಕದಲ್ಲಿ ಮೂವತ್ತೆರಡು ಜನ ಶ್ರೇಷ್ಠ ಲೇಖಕರ ಬಗ್ಗೆ ಬರೆದ ವ್ಯಕ್ತಿಚಿತ್ರಗಳಿವೆ. ಡಿ.ವಿ.ಜಿ., ಅನಕೃ, ಮಾಸ್ತಿಯವರ ಬಗ್ಗೆ ಬರೆದವನ್ನು ಬಿಟ್ಟರೆ ಉಳಿದ ಲೇಖನಗಳೆಲ್ಲ ಪತ್ರಿಕೆಗಳ ಕೋರಿಕೆ ನಡೆಸಿಕೊಡಲು ಬರೆದವು. ಯಾರಾದರೊಬ್ಬ ಲೇಖಕರಿಗೆ ಏನಾದರೊಂದು ಪ್ರಶಸ್ತಿ ನೀಡಿದಾಗ, ವಿಶಿಷ್ಟ ಕೃತಿ ಪ್ರಕಟವಾದಾಗ ಅಥವಾ ಅರವತ್ತು ವರ್ಷ ತುಂಬಿದಾಗ ಇಲ್ಲವೆ ಹಿರಿಯರೊಬ್ಬರು ದೇಹತ್ಯಾಗ ಮಾಡಿದಾಗ ಬರೆದ ವ್ಯಕ್ತಿಚಿತ್ರಗಳು ಇವು. ಕೆಲವು ಕಡೆ ಆ ಸಂದರ್ಭಗಳು ಲೇಖನದಲ್ಲೇ ಸೂಚಿತವಾಗಿರುವುದೂ ಉಂಟು.

ಪ್ರಜಾವಾಣಿ, ಕನ್ನಡ ಪ್ರಭ, ಸಂಯುಕ್ತ ಕರ್ನಾಟಕ, ಉದಯವಾಣಿ, ವಿಜಯ ಕರ್ನಾಟಕ ಮೊದಲಾದ ಪತ್ರಿಕೆಗಳಲ್ಲಿ ಅಥವಾ ಅವುಗಳ ವಿಶೇಷ ಸಂಚಿಕೆಗಳಲ್ಲಿ ಇವು ಪ್ರಕಟವಾಗಿವೆ. ಈ ವ್ಯಕ್ತಿಚಿತ್ರಗಳನ್ನು ಕೇಳಿ ಬರೆಸಿದ ಆ ಎಲ್ಲ ಪತ್ರಿಕೆಗಳಿಗೂ ನಾನು ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಹೇಳುತ್ತಿದ್ದೇನೆ.

ಪತ್ರಿಕೆಗಳಿಗಾಗಿ ಲೇಖನ ಬರೆಯುವಾಗ ಅವು ಒದಗಿಸುವ ಸ್ಥಳಾವಕಾಶದೊಳಗೇ ಹೇಳುವುದನ್ನೆಲ್ಲ ಮುಗಿಸಬೇಕಾಗುತ್ತದೆ. ಇಂಥ ಮಿತಿಯಿಂದ ಲೇಖನಕ್ಕೆ ಉಂಟಾಗುವ ಕೆಲವು ಕೊರತೆಗಳಿವೆ. ಅವು ಅನಿವಾರ್ಯ. ಬರೆದ ಕಾಲಕ್ಕೆ ಏನು ಹೇಳಬಹುದೋ, ಕೊಟ್ಟ ಸ್ಥಳಾವಕಾಶದಲ್ಲಿ ಎಷ್ಟು ಹೇಳಬಹುದೋ ಅಷ್ಟನ್ನು ಹೇಳಲು ಯತ್ನಿಸಿದ್ದೇನೆ.

ಇಲ್ಲಿಯ ಅನೇಕ ಸಾಹಿತಿಗಳ ಬಗ್ಗೆ ಬೇರೆಬೇರೆಯವರು ಹಿಂದೆ ಯಾವಾಗಲೋ ಬರೆದ ಕವಿತೆಗಳಿವೆ. ಆಯಾ ಸಾಹಿತಿಗಳ ಲೇಖನದ ಕಡೆಯಲ್ಲಿ ಆ ಕವಿತೆಗಳನ್ನು ಹಾಕಿಕೊಳ್ಳಲಾಗಿದೆ. ಪರಿವಿಡಿಯಲ್ಲಿ ಈ ಕವಿತೆಗಳ ಶೀರ್ಷಿಕೆಗಳನ್ನು ಆಯಾ ಲೇಖನದ ಶೀರ್ಷಿಕೆಯ ಕೆಳಗೆ ಹಾಕಿದೆ. ಅವುಗಳನ್ನು ಬರೆದ ಕವಿಗಳಿಗೆ ನಾನು ಕೃತಜ್ಞ.

ಇದೆಲ್ಲ ಹೇಳಿದ ಮೇಲೂ ಬರೆಹದಲ್ಲಿ ಏನಾದರೂ ಕೊರತೆ ಇರುವುದು ಸಾಧ್ಯ. ಓದುಗರು ಅದನ್ನು ಮನ್ನಿಸಬೇಕು.

ನನ್ನ ಕೋರಿಕೆಯನ್ನು ಮನ್ನಿಸಿ ಪ್ರಸಿದ್ಧ ಕನ್ನಡ ದಿನಪತ್ರಿಕೆಯಾದ ವಿಜಯ ಕರ್ನಾಟಕದ ಸಂಪಾದಕ ಶ್ರೀ ವಿಶ್ವೇಶ್ವರ ಭಟ್ ಅವರು ಅರ್ಥಪೂರ್ಣವೂ ವಿಮರ್ಶಾತ್ಮಕವೂ ಆದ ಒಂದು ಚೆಲುವಾದ ಮುನ್ನುಡಿ ಬರೆದುಕೊಟ್ಟಿದ್ದಾರೆ. ಸ್ವತಃ ಅವರೇಒಬ್ಬ ಪ್ರಥಮ ಪಂಕ್ತಿಯ ವ್ಯಕ್ತಿಚಿತ್ರಕಾರರೂ ಆಗಿರುವುದರಿಂದ ಅವರು ನನ್ನ ಬರೆಹದ ಅಂತರಂಗವನ್ನು ಹೊಕ್ಕು ನೋಡಿದ್ದಾರೆ. ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಶ್ರೀಯುತರಾದ ವೈಎಸ್ಕೆ, ಡಾ॥ ಎಚ್. ಎಸ್. ರಾಘವೇಂದ್ರರಾವ್, ಡಾ॥ ಎಂ.ಎಸ್. ತಿಮ್ಮಪ್ಪ ಮೊದಲಾದವರು ಇಲ್ಲಿಯ ಯಾವುದಾದರೊಂದು ಬರೆಹ ಓದಿದಾಗ ಮೆಚ್ಚಿಕೆ ವ್ಯಕ್ತಪಡಿಸಿದ್ದುಂಟು. ಆದರೂ ಯಾವ ಯಾವಾಗಲೋ ಬರೆದ ಈ ಬರೆಹಗಳನ್ನೆಲ್ಲ ಒಟ್ಟುಹಾಕಿ ಪುಸ್ತಕವಾಗಿ ಹೊರತರುವ ಯೋಚನೆ ನನಗೆ ಬಂದಿರಲಿಲ್ಲ. ಅದಕ್ಕೆ ಕಾರಣರಾದ ಇಬ್ಬರು ಮಿತ್ರರೆಂದರೆ ಲೇಖಕ ಶ್ರೀ ಎಂ. ಕೆ. ಗೋಪೀನಾಥ್ ಮತ್ತು ಪುಸ್ತಕಾಲಯ ಪ್ರಕಾಶನದ ಶ್ರೀ ಕೆ. ಎಸ್. ಗೋಪಾಲ್. ಇವು ರುಚಿಯಾದ ಬರೆಹಗಳೆಂದೂ. ಪದ್ಯವನ್ನು ಬರೆಯುವ ನಿಮ್ಮ ಗದ್ಯಶೈಲಿಗೆ ಒಂದು ಮಾದರಿಯಾಗಿ ಇರುತ್ತದೆ ಎಂದೂ ಏನೇನೋ ಹೇಳಿ ಒತ್ತಾಯ ಹೂಡಿದರು. ಫಲವಾಗಿ ಈ ಪುಸ್ತಕ ಹೊರಬರುತ್ತಿದೆ. ಅವರ ನಿರ್ವ್ಯಾಜ್ಯ ಸ್ನೇಹಕ್ಕೆ, ಮೆಚ್ಚಿಕೆಗೆ ನಾನು ಆಭಾರಿ.

ಈ ಪುಸ್ತಕವನ್ನು ಹೊರತಂದ ವಸಂತ ಪ್ರಕಾಶನದವರಿಗೂ, ಸುಂದರವಾಗಿ ಅಚ್ಚು ಮಾಡಿಕೊಟ್ಟ ನೇತ್ರಾ ಪ್ರಿಂಟರ್ಸ್‌ನವರಿಗೂ, ರಕ್ಷಾಪುಟ ರಚಿಸಿಕೊಟ್ಟ ಕಲಾವಿದ ಮೋನಪ್ಪನವರಿಗೂ ನನ್ನ ವಂದನೆಗಳು.

ಬೆಂಗಳೂರು — **ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ**

೨೨-೯-೨೦೦೪

ಎರಡನೆಯ ಮುದ್ರಣಕ್ಕೆ ಮುನ್ನುಡಿ

ಪ್ರಕಟವಾದ ಒಂದು ವರ್ಷಕ್ಕೆ ಈ ಪುಸ್ತಕದ ಪ್ರತಿಗಳೆಲ್ಲ ಮಾರಾಟವಾಗಿ ಹೋದುವು. ಆದರೂ ಎರಡನೆಯ ಮುದ್ರಣ ಹೊರತರಲು ಆಗಿರಲಿಲ್ಲ. ಆದರೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಕವಿ ಡಾ. ಸಿದ್ಧಲಿಂಗಯ್ಯನವರು ಕೃಪೆ ಮಾಡಿ ಈ ಪುಸ್ತಕದ ಮರು ಮುದ್ರಣವನ್ನು ತಮ್ಮ ಸಂಸ್ಥೆಯಿಂದ ಪ್ರಕಟಿಸುತ್ತಿದ್ದಾರೆ. ಅದಕ್ಕಾಗಿ ಅವರಿಗೂ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್. ಚಲವಾದಿಯವರಿಗೂ ನಾನು ಕೃತಜ್ಞನಾಗಿದ್ದೇನೆ.

ಈ ಪುಸ್ತಕದ ಮೊದಲ ಮುದ್ರಣದಲ್ಲಿ ಮೂವತ್ತೆರಡು ವ್ಯಕ್ತಿಚಿತ್ರಗಳು ಮಾತ್ರ ಇದ್ದುವು. ಈ ಮುದ್ರಣದಲ್ಲಿ ಇನ್ನೂ ಆರು ಲೇಖನಗಳು ಸೇರಿ ಅವು ಮೂವತ್ತೆಂಟು ಆಗಿವೆ.

ಈ ಪುಸ್ತಕಕ್ಕೆ ಸುಂದರವಾದ ರಕ್ಷಾಪುಟವನ್ನು ರಚಿಸಿಕೊಟ್ಟ ಶ್ರೀ ಉಪಾಸನಾ ಮೋಹನ್ ಅವರಿಗೆ ನಾನು ಆಭಾರಿ.

ಇದರ ಸಂಬಂಧವಾದ ಕೆಲಸ ಕಾರ್ಯಗಳನ್ನು ಮುದ್ರಕರಾದ ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ. ಮುಖ್ಯಸ್ಥರಿಗೂ, ಸಿಬ್ಬಂದಿವರ್ಗಕ್ಕೂ ನನ್ನ ಹಾರ್ದಿಕ ವಂದನೆಗಳು.

ಬೆಂಗಳೂರು — ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

೧-೭-೨೦೦೦

ಪರಿವಿಡಿ

ಕ್ರೈಸ್ತ ಮಿಶನರಿ ಕಟ್ಟಿದ ಕನ್ನಡ ದೇವಾಲಯ

ನಂಬಿದರೆ ನಂಬಿ, ಬಿಟ್ಟರೆ ಬಿಡಿ. ಕನ್ನಡ ಕೃತಿಯೊಂದಕ್ಕೆ ಮೊದಲು ಡಾಕ್ಟರೇಟ್ ಬಂದದ್ದು ನೂರ ಏಳು ವರ್ಷಗಳಷ್ಟು ಹಿಂದೆ. ಅದನ್ನು ಪಡೆದ ವ್ಯಕ್ತಿ ಹುಟ್ಟು ಕನ್ನಡಿಗ ಅಲ್ಲ, ಜರ್ಮನಿಯಿಂದ ಕನ್ನಡ ನಾಡಿಗೆ ಬಂದು ಕನ್ನಡ ಕಲಿತ ಒಬ್ಬ ಕ್ರೈಸ್ತ ಮಿಶನರಿ ! ಡಾಕ್ಟರೇಟ್ ಕೊಟ್ಟದ್ದು ಕರ್ನಾಟಕದ ಯಾವುದೇ ವಿಶ್ವವಿದ್ಯಾನಿಲಯ ಅಲ್ಲ, ಜರ್ಮನಿಯ ಟ್ಯೂಬಿಂಗೆನ್ ಯೂನಿವರ್ಸಿಟಿ. (ಕರ್ನಾಟಕದಲ್ಲಿ ಆಗ ವಿಶ್ವವಿದ್ಯಾಲಯವೇ ಇರಲಿಲ್ಲ !) ಡಾಕ್ಟರೇಟ್ ಪಡೆದ ಕೃತಿ ಅಂಥಿಂಥದಲ್ಲ, ಸಾವಿರದ ಏಳುನೂರ ಐವತ್ತೆರಡು ಪುಟಗಳ ಅದ್ಭುತ ಗ್ರಂಥ, ಕಿಟೆಲ್ ನಿಘಂಟು, ಕನ್ನಡದ ಒಂದು ಮಹಾಶಬ್ದಕೋಶ; ಎಲ್ಲ ಕಾಲದ ಎಲ್ಲ ದೇಶಗಳ ಶ್ರೇಷ್ಠ ನಿಘಂಟುಗಳಲ್ಲಿ ಒಂದು.

ಇದು ಕಥೆಯಂತೆ ಕಾಣಬಹುದು, ಆದರೂ ನಿಜ. ಶ್ರಮಪಾಂಡಿತ್ಯಗಳ ಕಳಶವೆನ್ನಿಸುವಂಥ ಕೃತಿಯೊಂದಕ್ಕೆ ಹೀಗೆ ಡಿ.ಲಿಟ್ ಪಡೆದ ಲೇಖಕ ರೆವರೆಂಡ್ ಫರ್ಡಿನಾಂಡ್ ಕಿಟೆಲ್. ಕ್ರೈಸ್ತ ಮಿಷನರಿಯಾಗಿ ಕನ್ನಡ ನಾಡಿಗೆ ಬಂದು, ಇಲ್ಲಿ ನಾಲ್ಕು ದಶಕ ಬಾಳಿ, ಕನ್ನಡವನ್ನು ಆಳವಾಗಿ ಕಲಿತು ಈ ನಾಡಿನ ಭಾಷೆ, ಕೋಶ, ವ್ಯಾಕರಣಗಳಿಗೆ ಅನುಪಮ ಸೇವೆ ಸಲ್ಲಿಸಿದ ಕಿಟೆಲ್ ಒಬ್ಬ ಮಹಾಸಾಧಕ, ಸಾರಸ್ವತ ತಪಸ್ವಿ.

ಭಾರತಕ್ಕೂ ಜರ್ಮನಿಗೂ ಅದೇನು ಸ್ನೇಹದ ನಂಟೋ! ಅದು ಕಿಟೆಲರ ಕಾಲಕ್ಕೂ ಹಿಂದೆಯೇ ಆರಂಭವಾದದ್ದು. ಗಯಟೆ, ಮ್ಯಾಕ್ಸ್‌ಮುಲ್ಲರರಂಥ ಮೇಧಾವಿಗಳ ಸೇವೆಗೆ ದಾರಿಮಾಡಿದ್ದು, ವಿಂಟರ್‌ನಿಟ್ಸ್‌ರಂತೂ ಮಹಾಭಾರತದ ಅಧ್ಯಯನ, ಪಾಠ ನಿಷ್ಕರ್ಷೆಯ ವಿಷಯಕ್ಕೆ ತಮ್ಮ ಬಾಳನ್ನೇ ತೇದರು. ಸಂಸ್ಕೃತ ನಾಟಕ ಕ್ಷೇತ್ರಕ್ಕೆ ಎ. ಬಿ. ಕೀತ್, ನಿಘಂಟು ಕ್ಷೇತ್ರಕ್ಕೆ ಮೋನಿಯರ್ ವಿಲಿಯಮ್ಸ್ ನೀಡಿದ ಕೊಡುಗೆ ವಿದ್ವಾಂಸರೆಲ್ಲರ ಹೃತ್ಪೂರ್ವಕ ಮೆಚ್ಚಿಗೆ ಪಡೆದದ್ದು.

ಸಂಸ್ಕೃತ ಭಾಷೆ. ಸಾಹಿತ್ಯ ಮಾತ್ರವಲ್ಲ, ದ್ರಾವಿಡ ಭಾಷೆ, ಸಾಹಿತ್ಯಗಳ ಅಧ್ಯಯನದಲ್ಲೂ ಜರ್ಮನ್ ವಿದ್ವಾಂಸರು ಬೆರಗುಗೊಳಿಸುವ ಸಾಧನೆ ಮಾಡಿದ್ದಾರೆ. ಕಾಲ್ಡ್‌ವೆಲ್, ಬ್ರೌನ್, ಗುಂಡರ್ಟ್ ಎಂಬ ಮಹಾಪಂಡಿತರು ಕ್ರಮವಾಗಿ ತಮಿಳು, ತೆಲುಗು ಮತ್ತು ಮಲೆಯಾಳಿ ಭಾಷೆಗಳಿಗೆ ಮಾಡಿದ ಸೇವೆ ಅಸಾಮಾನ್ಯವಾದದ್ದು. ಈ ವಿದ್ವಾಂಸರ ಸಾಲಿನಲ್ಲಿ ನಿಲ್ಲುವ ಕಿಟೆಲ್ ಕನ್ನಡಕ್ಕೆ ಇತರ ಕ್ರೈಸ್ತ ಮಿಶನರಿಗಳು ನೀಡಿದ ಕೊಡುಗೆಯನ್ನು ಮೀರಿಸಿದರು. ಅವರ ಸಾಧನೆ ವೈವಿಧ್ಯಮಯವಾಗಿದೆ, ಮೌಲಿಕವಾಗಿದೆ. ಆದರೆ ಅವರ ಎಲ್ಲ ಕೆಲಸಗಳನ್ನೂ ಮೀರಿದ ಕಾರ್ಯವೆಂದರೆ 'ಕನ್ನಡ – ಇಂಗ್ಲಿಷ್ ಡಿಕ್ಷನರಿ'. ಪಂಪನ ವಿಕ್ರಮಾರ್ಜುನ ವಿಜಯ 'ಪಂಪಭಾರತ' ಎಂದು, ಕುಮಾರವ್ಯಾಸನ ಕರ್ಣಾಟಕ ಭಾರತ ಕಥಾಮಂಜರಿ 'ಕುಮಾರವ್ಯಾಸ ಭಾರತ' ಎಂದು ಪ್ರಸಿದ್ಧವಾದಂತೆ ಕಿಟೆಲರ ಕನ್ನಡ – ಇಂಗ್ಲಿಷ್ ಡಿಕ್ಷನರಿ 'ಕಿಟೆಲ್‌ಕೋಶ' ಎಂಬ ಮೆಚ್ಚಿಗೆಯ ಹೆಸರಿನಿಂದ ಪ್ರಖ್ಯಾತವಾಗಿದೆ. ಕ್ರೈಸ್ತ ಮಿಶನರಿಯೊಬ್ಬ ಭಕ್ತಿ ಶ್ರದ್ಧೆಗಳಿಂದ ಕಟ್ಟಿ ಕೊಟ್ಟ ಕನ್ನಡ ದೇವಾಲಯ ಅದು.

ಕಿಟೆಲರು ಜರ್ಮನಿಯಿಂದ ಕನ್ನಡನಾಡಿಗೆ ಬಂದದ್ದು ಬಾಸೆಲ್ ಮಿಶನ್ನಿನ ಮೂಲಕ ಒಬ್ಬ ಕ್ರೈಸ್ತ ಮಿಶನರಿಯಾಗಿ. ಆಗ ಅವರಿಗೆ ಇಪ್ಪತ್ತೊಂದು ವರ್ಷ. ಕ್ರೈಸ್ತ ಸುವಾರ್ತೆಗಳನ್ನು ಸಾಮಾನ್ಯ ಜನರ ನಡುವೆ ಪ್ರಚಾರಮಾಡುವುದು ಬಾಸೆಲ್ ಮಿಶನ್ ಅವರಿಗೆ ಒಪ್ಪಿಸಿದ್ದ ಕೆಲಸ. ಈ ಕಾರ್ಯಕ್ಕೆ ಕನ್ನಡಜ್ಞಾನ ತೀರ ಅಗತ್ಯವಾಗಿತ್ತು. ಅದಕ್ಕಾಗಿ ಕನ್ನಡ ಕಲಿಯಲು ಅವರು ಧಾರವಾಡಕ್ಕೆ ಬಂದರು. ಅಲ್ಲಿ ಕಿಟೆಲರಿಂತ ಮುಂಚೆಯೇ ಮಿಶನರಿಯಾಗಿ ಬಂದು, ಕನ್ನಡ ಬಲ್ಲವರಾಗಿದ್ದ ವೈಗಲ್ ಇದ್ದರು. ಕಿಟೆಲರ ಕನ್ನಡ ಅಭ್ಯಾಸ ಆರಂಭವಾದದ್ದು ಅವರಲ್ಲಿ.

ಕಿಟೆಲ್ ಕುಶಾಗ್ರಮತಿ, ನಿಷ್ಠೆ, ಸಂಕಲ್ಪ ಶಕ್ತಿ ಇದ್ದವರು. ಕನ್ನಡ ಕುರಿತ ಅವರ ಆಸಕ್ತಿ ಕೂಡ ತೀವ್ರವಾದದ್ದಾಗಿತ್ತು. ಬೇಗನೇ ಅವರು ಕನ್ನಡ ಓದಲು, ಬರೆಯಲು, ಬಳಸಲು ಕಲಿತರು. ಅವರ ಕನ್ನಡಾಭ್ಯಾಸ ಅಲ್ಲಿಗೆ ನಿಲ್ಲಲಿಲ್ಲ; ಕನ್ನಡ ಸಾಹಿತ್ಯದ, ಶಾಸ್ತ್ರವಿಷಯಗಳ ಅಧ್ಯಯನಕ್ಕೆ ಹೊರಳಿತು. ಆ ಅಧ್ಯಯನ ಎಷ್ಟು ಗಾಢವಾಗಿ ನಡೆಯಿತೆಂದರೆ ಹಳಗನ್ನಡ–ನಡುಗನ್ನಡ ಭಾಷೆಯಲ್ಲಿ ರಚಿತವಾಗಿದ್ದ ಪ್ರೌಢ ಪದ್ಯ ಗ್ರಂಥಗಳನ್ನೆಲ್ಲ ಅವರು ಮನೋಗತ ಮಾಡಿಕೊಂಡರು. ಆ ಗ್ರಂಥಗಳು ಇದ್ದದ್ದೆಲ್ಲ ಬಹುಮಟ್ಟಿಗೆ ತಾಳೆಗರಿಯಲ್ಲಿ, ಮುದ್ರಿತ ಪುಸ್ತಕಗಳಿದ್ದದ್ದು ಕೆಲವು ಮಾತ್ರ.

ಆದರೆ ಕಿಟೆಲ್ ಆ ಪ್ರಾಚೀನ ಕೃತಿಗಳ ಹಸ್ತಪ್ರತಿಗಳನ್ನು ಪರಿಣತ ವಿದ್ವಾಂಸರಂತೆ ಓದುವ ಸಾಮರ್ಥ್ಯ ಗಳಿಸಿಕೊಂಡರು. ವ್ಯಾಕರಣ, ಛಂದಶ್ಶಾಸ್ತ್ರಗಳಲ್ಲಿ ಅವರಿಗೆ ವಿಶೇಷ ಆಸಕ್ತಿ. ತಮ್ಮ ಮಾತೃಭಾಷೆಯ ಜೊತೆಗೆ ಗ್ರೀಕ್, ಲ್ಯಾಟಿನ್, ಹೀಬ್ರೂ,

ಇಂಗ್ಲಿಷ್, ಫ್ರೆಂಚ್ ಭಾಷೆಗಳನ್ನು ಕಲಿತಿದ್ದ ಅವರಿಗೆ ಭಾಷಾಧ್ಯಯನದಲ್ಲಿ ವಿಶೇಷ ಪರಿಶ್ರಮವಿತ್ತು. ಈಗ ಕನ್ನಡದ ಜೊತೆಗೆ ತಕ್ಕಮಟ್ಟಿನ ಸಂಸ್ಕೃತಾಭ್ಯಾಸವನ್ನೂ ಮಾಡಿಕೊಂಡರು. ಸಮರ್ಪಕ ಕನ್ನಡದಲ್ಲಿ ಗ್ರಂಥರಚನೆ ಮಾಡಲು ಆ ಸಂಸ್ಕಾರ ಅಗತ್ಯವಾಗಿತ್ತು.

ಹಳಗನ್ನಡ ನಡುಗನ್ನಡವ ಕೃತಿಗಳನ್ನು ಓದುತ್ತ ಹೋದಂತೆಲ್ಲ ಕನ್ನಡ ಭಾಷೆಯ ಪ್ರಾಚೀನತೆ, ವ್ಯಾಪ್ತಿ, ಶ್ರೀಮಂತಿಕೆ ಕಿಟೆಲ್‌ರ ಮನಸ್ಸಿಗೆ ತಟ್ಟಿತು; ಅದರ ಬಗ್ಗೆ ಮೆಚ್ಚಿಕೆ ಬೆಳೆಯಿತು. ನೂರಾರು ಜನ ಕವಿಗಳು, ಶಾಸ್ತ್ರಕಾರರು ಹಲವು ಶತಮಾನಗಳಿಂದ ಬಳಸಿ ಬೆಳೆಸಿದ ಈ ಭಾಷೆ ಯೂರೋಪಿನ ಅನೇಕ ಭಾಷೆಗಳಿಗಿಂತ ಹೆಚ್ಚು ಸಮೃದ್ಧವಾದದ್ದು, ಹಲವು ಸಹಸ್ರಪದಗಳನ್ನೂ ಉಕ್ತಿವೈಚಿತ್ರ್ಯಗಳನ್ನೂ ಗರ್ಭೀಕರಿಸಿ ಕೊಂಡದ್ದು ಎಂದು ಅರಿವಾಯಿತು. ಈ ಸಮೃದ್ಧಿ ಉಳಿದವರಿಗೆ ತಿಳಿಯಬೇಕಾದರೆ ಮತ್ತು ಆ ತಿಳಿವಿನ ಉಪಯೋಗವಾಗಬೇಕಾದರೆ ಒಂದು ಡಿಕ್ಷನರಿ ನಿರ್ಮಾಣವಾಗಬೇಕು. ಆ ಕೆಲಸ ವಿಶೇಷ ಶ್ರಮ, ಸಂಕಲ್ಪ, ಸಾಧನೆಗಳಿಂದ ಮಾತ್ರವೇ ಆಗುಬಹುದಾದದ್ದು. ಅಂಥದೊಂದನ್ನು ತಾವೇ ಮಾಡಬೇಕೆಂಬ ಆಲೋಚನೆ ಅವರ ಮನಸ್ಸನ್ನು ಹೊಕ್ಕು ಕ್ರಮೇಣ ಅದೊಂದು ನಿರ್ಧಾರವಾಗಿ ಪರಿಣಮಿಸಿರಬೇಕು. ಶಬ್ದಕೋಶಕ್ಕೆ ಕೈಹಾಕುವ ಮುಂಚೆ ಅವರು ಬೇರೆ ಅನೇಕ ಪುಸ್ತಕಗಳನ್ನು ಪ್ರಕಟಿಸಿದರು. ಅವೆಲ್ಲ ಅವರ ಕೋಶ ನಿರ್ಮಾಣಕ್ಕೆ ಪೂರ್ವಸಿದ್ಧತೆಯಾಯಿತೆನ್ನಬಹುದು.

ಕಿಟೆಲರು ಕೋಶರಚನೆಗೂ ಮುಂಚೆ ನಡೆಸಿದ ಕನ್ನಡ ಕೈಂಕರ್ಯ ಬಹುಮುಖವಾದದ್ದು. 'ಇಂಡಿಯನ್ ಆಂಟಿಕ್ವೆರಿ', 'ಇಂಡಿಯನ್ ಎವ್ಯಾಂಜಲಿಕಲ್ ರೆವ್ಯೂ' ಮೊದಲಾದ ಪ್ರಸಿದ್ಧ ರಿಸರ್ಚ್ ಜರ್ನಲ್‌ಗಳಲ್ಲಿ ಅವರು ಕನ್ನಡ ಭಾಷೆಯ ವಿಷಯಗಳೂ ಸೇರಿದಂತೆ ಸುಮಾರು ಇಪ್ಪತ್ತ ನಾಲ್ಕು ಸಂಶೋಧನ ಲೇಖನಗಳನ್ನು ಪ್ರಕಟಿಸಿದರು. ಬಾಸೆಲ್ ಮಿಶನ್ನಿನ ಕೋರಿಕೆಯಂತೆ ಶಾಲಾಮಕ್ಕಳಿಗಾಗಿ 'ಕನ್ನಡ ಕಾವ್ಯಮಂಜರಿ', 'ಕರ್ನಾಟಕ ಕಾವ್ಯಮಾಲೆ', 'ಕನ್ನಡ ಪಂಚತಂತ್ರ' – ಹೀಗೆ ಆರು ಪಠ್ಯಪುಸ್ತಕಗಳನ್ನು ಸಿದ್ಧಪಡಿಸಿಕೊಟ್ಟರು. ಧಾರ್ಮಿಕ ಸಾಹಿತ್ಯ ಕುರಿತಂತೆ 'ಕಥಾಮಾಲೆ', 'ಪರಮಾತ್ಮಜ್ಞಾನ' ಮೊದಲಾಗಿ ಕನ್ನಡದಲ್ಲಿ ನಾಲ್ಕು ಪುಸ್ತಕ ಬರೆದರು. ಹಳಗನ್ನಡ ವ್ಯಾಕರಣ ಕುರಿತು ಕನ್ನಡದಲ್ಲಿ ಎರಡು ಮತ್ತು ಇಂಗ್ಲಿಷಿನಲ್ಲಿ ಒಂದು ಗ್ರಂಥ ರಚಿಸಿದರು. ಅವರಿಗೆ ಕನ್ನಡ ಪದ್ಯರಚನೆಯಲ್ಲಿ ಕೂಡ ಪರಿಶ್ರಮ ಇತ್ತು. ಅವರ 'ಕಥಾಮಾಲೆ' ಕ್ರಿಸ್ತನ ಜೀವನಕಥೆ ಕುರಿತು ಬರೆದ ಪದ್ಯಗ್ರಂಥ. ಅವರಲ್ಲಿ ಅನೇಕ ಭಾಮಿನಿ ಮತ್ತು ವಾರ್ಧಕ ಷಟ್ಪದಿಗಳನ್ನು ಲಯ – ಪ್ರಾಸಗಳಲ್ಲಿ ಯಾವ ಕುಂದೂ ಇಲ್ಲದಂತೆ ಸಮರ್ಪಕವಾಗಿ ಬಳಸಲಾಗಿದೆ. ಏಸುವನ್ನು ಶಿಲುಬೆಗೆ ಏರಿಸುವುದಕ್ಕಾಗಿ ಹಿಡಿದು ತಂದು ದಂಡಿಸಿದ್ದನ್ನು ಹೇಳುವ ಷಟ್ಪದಿ ಇದು.

ಒಯ್ದರಾತನ ದಂಡಿನಾಳ್ಗಳು
ಹೊಯ್ದರಾತನ ಬಾರು ಹಗ್ಗದಿ
ಗೆಯ್ದರಾತನ ಹಾಸ್ಯ, ರಾಜನ ಸೋಗು ತೊಡಿಸುತಲಿ
ಕೊಯ್ದರಾತನ ತಲೆಯ ಮುಳ್ಳಿಂ
ಬಯ್ದರಾತಗೆ ರಾಜ ಎನುತಲಿ
ಕೈದುವೆನುತಲಿ ಕೊಟ್ಟ ಬೆತ್ತದಿ ಹೊಡೆದರಾತನಿಗೆ

ಕಿಟೆಲರ ಬಹು ಮುಖ್ಯ ಕಾರ್ಯಗಳಲ್ಲಿ ಒಂದೆಂದರೆ ಅವರು ನಾಗವರ್ಮನ 'ಛಂದೋಂಬುಧಿ' ಎಂಬ (ಛಂದಸ್ಸನ್ನು ನಿರೂಪಿಸುವ) ಹಳಗನ್ನಡ ಪದ್ಯ ಗ್ರಂಥವನ್ನು ಮತ್ತು ಕೇಶಿರಾಜನ 'ಶಬ್ದಮಣಿದರ್ಪಣ'ವೆಂಬ ಹಳಗನ್ನಡದ ವ್ಯಾಕರಣ ಗ್ರಂಥವನ್ನು ಸಂಪಾದಿಸಿಕೊಟ್ಟದ್ದು. 'ನಾಗವರ್ಮನ ಛಂದಸ್ಸು' ಗ್ರಂಥದಲ್ಲಿ ಅವರು ಕನ್ನಡ ಸಾಹಿತ್ಯ ಚರಿತ್ರೆ ಕುರಿತು ದೀರ್ಘವಾಗಿ ಬರೆದಿದ್ದಾರೆ.

'ಶಬ್ದಮಣಿದರ್ಪಣಂ' ವ್ಯಾಕರಣವಂತೂ ಕನ್ನಡ ಮೇಜರ್ ಮತ್ತು ಎಂ. ಎ. ತರಗತಿಯ ವಿದ್ಯಾರ್ಥಿಗಳ ಪಾಲಿಗೆ ಕಬ್ಬಿಣದ ಕಡಲೆ. ಮೊದಲೇ ಅದು ವ್ಯಾಕರಣ. ಕೇಶಿರಾಜ ಅದನ್ನು ಹಳಗನ್ನಡ ಭಾಷೆಯಲ್ಲಿ ಬರೆದಿದ್ದಾನೆ. ಸಾಲದ್ದಕ್ಕೆ ಅದು ಪದ್ಯರೂಪದಲ್ಲಿದೆ. ಕನ್ನಡದ ಪ್ರೌಢ ವಿದ್ಯಾರ್ಥಿಗಳೂ ಸುಲಭವಾಗಿ ಅರಗಿಸಿಕೊಳ್ಳಲಾಗದ ಗ್ರಂಥ ಅದು. ಅದನ್ನು ಕಲಿಯುವ ಕಷ್ಟ ಎಂಥದು ಎನ್ನುವುದನ್ನು ಕುವೆಂಪು ದುಸ್ವಪ್ನರೂಪದ ಒಂದು ದೀರ್ಘಕವನದಲ್ಲಿ ಬಹಳ ವಿನೋದವಾಗಿ ವರ್ಣಿಸಿದ್ದಾರೆ. ಇಷ್ಟು ಕ್ಲಿಷ್ಟವಾದ ಗ್ರಂಥವನ್ನು ಉತ್ತಮವಾಗಿ ಸಂಪಾದಿಸಿದ ಕಿಟೆಲ್ ಅದನ್ನು Jewel Mirror of Granmmer ಎಂದು ಕರೆದಿದ್ದಾರೆ

ತಾವು ರಚಿಸಿದ ಶಬ್ದಕೋಶದ ಸಲುವಾಗಿ ಕಿಟೆಲ್ ಹಲವಾರು ವರ್ಷ ದುಡಿದರು. ಹಳಗನ್ನಡ, ನಡುಗನ್ನಡ, ಹೊಸಗನ್ನಡ ಕೃತಿಗಳು, ಸಂಸ್ಕೃತ ನಿಘಂಟುಗಳು, ದ್ರಾವಿಡ ಇಂಗ್ಲಿಷ್ ನಿಘಂಟುಗಳು, ಮರಾಠಿ ಶಬ್ದಕೋಶ, ತಮಗಿಂತ ಮುಂಚೆ ರೀವ್ ಮತ್ತು ಜೆಗ್ಲರ್ ರಚಿಸಿದ್ದ ಪುಟ್ಟ ನಿಘಂಟುಗಳು – ಇವನ್ನೆಲ್ಲ ಪರಿಶೀಲಿಸಿದರು. ಗ್ರಂಥಗಳಿಂದ ಮಾತ್ರವಲ್ಲದೆ ಶಾಸನಗಳಿಂದಲೂ, ಜನರ ಆಡುಮಾತಿನಿಂದಲೂ ಶಬ್ದಗಳನ್ನು ಸ್ವೀಕರಿಸಿದರು. ಅನೇಕ ಗಾದೆಗಳನ್ನು ಸಂಗ್ರಹಿಸಿದರು. ಧಾರವಾಡದಲ್ಲಿದ್ದಾಗ ಸಂತೆಗೆ ಬರುತ್ತಿದ್ದ ಹಳ್ಳಿಗರಿಂದ ಪದಗಳನ್ನು ಕೇಳಿ ಬರೆದುಕೊಳ್ಳುತ್ತಿದ್ದರು. ಚೀಲದಲ್ಲಿ ಕೆಲವು ಪದಾರ್ಥಗಳನ್ನಿಟ್ಟುಕೊಂಡಿದ್ದು ಒಂದೊಂದನ್ನೂ ತೆಗೆದು ತೋರಿಸಿ ಅದರ ಹೆಸರು ತಿಳಿದುಕೊಳ್ಳುತ್ತಿದ್ದರು. ಮೈಸೂರಿನ ಮಹಾರಾಜರ ಪುಸ್ತಕಭಂಡಾರದಲ್ಲಿ ಅವರಿಗೆ ಮಂಗರಸನೆಂಬ ಕವಿಯ ನಿಘಂಟಿನ ಓಲೆಗರಿ ಗ್ರಂಥ ಕಣ್ಣಿಗೆ ಬಿತ್ತು. ಅದರಲ್ಲಿ ವಿಪರೀತ ಅಕ್ಷರದೋಷ

ಇದ್ದುದರಿಂದ ಅವನ್ನು ತತ್ಕ್ಷಣದನೆ ಒಯ್ದು, ಕೋಶದ ಸಲುವಾಗಿ ಅದರ ಶುದ್ಧಪ್ರತಿ ತಯಾರಿಸಿಕೊಂಡರು. ಕೋಶರಚನೆಗಾಗಿ ಅವರು ಯಾವ ಕಷ್ಟಕ್ಕೂ ಸೊಪ್ಪುಹಾಕಲಿಲ್ಲ. ಬೇರೆಯವರಿಂದ ಸಣ್ಣಪುಟ್ಟ ಸಹಾಯಪಡೆದರೂ ತಾವು ಒಬ್ಬ ದೈತ್ಯನಂತೆ ದುಡಿದರು. ಇದೆಲ್ಲದರ ಫಲವಾಗಿ ಕಿಟೆಲ್‌ಕೋಶ ಅತ್ಯಂತ ವೈಜ್ಞಾನಿಕವಾದ, ಸಮಗ್ರವಾದ, ಬಹು ಉಪಯುಕ್ತವಾದ ಕೋಶ ಎನಿಸಿಕೊಂಡಿತು. ಹಲ್ಷ್ ಎಂಬ ವಿದ್ವಾಂಸ It will remain a monumetum aere perennius of a noble life devoted to incessant earnest labour ಎಂದು ಅದನ್ನು ಹೊಗಳಿದ. ಅದರ ಕೆಲವು ಕೊರತೆಗಳನ್ನು ಎತ್ತಿ ತೋರಿಸಿದ ಫ್ಲೀಟ್ ಎಂಬ ವಿದ್ವಾಂಸ ಕೂಡ every page of it bears witness to the constant care, earnestness and thoroughness with which Mr. Kittel devoted himself to the task ಎಂದು ಕೃತಿ–ಕರ್ತೃ ಇಬ್ಬರನ್ನೂ ಕೊಂಡಾಡಿದ.

ಕಿಟೆಲರ ಕಡೆಯ ಮೌಲಿಕ ಗ್ರಂಥ A Grammer of the Kannada Language ಪ್ರಕಟವಾದಾಗ ಕಿಟೆಲರು ಅಸ್ವಸ್ಥತೆಯಿಂದಾಗಿ ಜರ್ಮನಿಗೆ ಹಿಂತಿರುಗಿದ್ದರು. ಪುಸ್ತಕವನ್ನು ಹಡಗಿನಲ್ಲಿ ಅವರಿಗೆ ಕಳಿಸಲಾಯಿತು. ಕಿಟೆಲ್ ಅದನ್ನು ನೋಡಿ ಬಹಳ ಸಂತೋಷಪಟ್ಟು ಆ ವಿಷಯವನ್ನು ಅಂದೇ ಬಾಸೆಲ್ ಮಿಷನ್ ಕೇಂದ್ರಕ್ಕೆ ತಿಳಿಸಿ, ಒಂದು ಬಗೆಯ ಧನ್ಯತಾಭಾವವನ್ನು ಅನುಭವಿಸಿದರು. ಕೆಲಸ ಮುಗಿಸಲು ಕಾದಿದ್ದರೆಂಬಂತೆ ಮಾರನೆಯ ದಿನವೇ ಅವರು ದೇಹತ್ಯಾಗ ಮಾಡಿದರು. ಟ್ಯೂಬಿಂಗನ್ ನಗರದ ಕವಿಗಳು, ಶಿಕ್ಷಣ ಶ್ರೇಷ್ಠರು ಮತ್ತು ತತ್ವಜ್ಞಾನಿಗಳ ಸಮಾಧಿಗಳ ನಡುವೆ ಕಿಟೆಲರ ಸಮಾಧಿ ಮಾಡಲಾಯಿತು. ದೈವಪ್ರಚಾರದ ಕೆಲಸಕ್ಕಾಗಿ ದೇಶ ಬಿಟ್ಟು ಬಂದಿದ್ದ ಕಿಟೆಲ್ ಒಂದು ಸಮಾಜದ ಶ್ರೇಯಸ್ಸಿಗೆ ಕೆಲಸ ಮಾಡಿ ಎರಡೂ ಬೇರೆ ಬೇರೆಯಲ್ಲ ಎನ್ನುವುದನ್ನು ತೋರಿಸಿಕೊಟ್ಟರು.

●

ಕನ್ನಡಕೆ ಧೀಮಂತ ಕೊಡುಗೆ

ದೂರ ಜರ್ಮನಿಯಿಂದ ಬಂದಿರಿ ಈ ನಾಡಿಗೆ
ಕ್ರಿಸ್ತ ಪ್ರಭುವಿನ ಘನತೆ ಸಂದೇಶ ಸಾರಲು.
ಏನೆಲ್ಲ ಸಿದ್ಧತೆ, ಎಷ್ಟೆಲ್ಲ ನಿಷ್ಠೆ
ಜೀವಿತವನೇ ಅದಕೆ ಮುಡಿಪು ಮಾಡುವ ಇಚ್ಛೆ.

ಕಲಿಯ ಧುಮುಕಿದಿರಿ ಅದಕ್ಕೆ ಈ ನೆಲದ ಭಾಷೆಯ;
ಈಜು ಈಜುತ್ತಲೇ ಎಲ್ಲ ಬದಲಾಯಿತು.
ಪಶ್ಚಿಮದ ಹೃದಯದಲಿ
ಕನ್ನಡದ ನಡೆ ನುಡಿಯ ಚೆಲುವು ಪ್ರತಿಫಲಿಸಿತು.
ಈ ನೆಲದ ಶಬ್ದ ಸೌಧವನೊಂದ ಎಬ್ಬಿಸುವ
ಕನಸು ಎದೆಹೊಕ್ಕಿತು;
ಪೂರ್ವ ಮಾದರಿಯಿರದ ಹೊಚ್ಚ ಹೊಸ ಯಾನ
ಎಲ್ಲ ಅಧ್ಯಯನಕ್ಕು ಅನಿವಾರ್ಯ ಮಾನ.

ಕನ್ನಡದ ಕಾವ್ಯಗಳಲೆಲ್ಲ ಓಡಾಡಿದಿರಿ
ನಗರ ಪಟ್ಟಣ ಗ್ರಾಮಗಳನೆಲ್ಲ ತಡಕಿದಿರಿ.
ದಿಕ್ಕು ದಿಕ್ಕುಗಳಿಂದ ಕನ್ನಡದ ಪದ ಹೆಕ್ಕಿ
ಸಂದಿಗೊಂದಿಯೊಳಿದ್ದ ಮುಖಹೀನ ಮಾತುಗಳ
ಮೈ ತಡವಿ ಪ್ರೀತಿಯಲಿ ಸುಖದುಃಖ ಕೇಳಿದಿರಿ.
ಕುಲಗೋತ್ರ ನಂಟು ಮೂಲಗಳನ್ನು ತಿಕ್ಕಿ
ತೊಳೆದು ಹೊಳೆಸಿದಿರಿ, ಸತ್ಯದ ಬೆಳಕಿಗೆತ್ತಿದಿರಿ,
ನಿಘಂಟು ಸಭೆಯಲ್ಲಿ ಪೀಠ ಕೊಟ್ಟು ಕುಳ್ಳಿರಿಸಿದಿರಿ.
ವರ್ಷಗಟ್ಟಲೆ ತಪದ ವಲ್ಮೀಕವಾಸದ
ಪುಣ್ಯ ಹಣ್ಣಾಗಿ
ಹೊರಬಂತು ಕನ್ನಡದ ಮೊಟ್ಟಮೊದಲು ನಿಘಂಟು
ಕನ್ನಡಕು ಜರ್ಮನಿಗು ಎಂಥ ಹೊಸ ನಂಟು !

– ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಕನ್ನಡ ಕಾವ್ಯಲೋಕದ ಪ್ರಥಮ ಕುಲಪತಿ – 'ಶ್ರೀ'

ಮಹರ್ಷಿಯೊಬ್ಬ ಕಾಡಿನಲ್ಲಿ ಬರುತ್ತಿದ್ದಾನೆ. ದಾರಿಬದಿಯಲ್ಲಿ ಅಳುತ್ತ ಮಲಗಿರುವ ಒಂದು ಸುಂದರ ಹೆಣ್ಣು ಮಗು. ಅದನ್ನು ಆಡಿಸುತ್ತಿವೆಯೋ ಎಂಬಂತೆ ಪಕ್ಕದಲ್ಲೇ ಜಿಂಕೆ ಮೊಲ ನವಿಲುಗಳ ಸುಳಿದಾಟ. ಮಹರ್ಷಿ ಮಗುವನ್ನು ನೋಡಿದ. ಸಂಸಾರದ ಬಂಧನ ಕಳಚಿ ಎಸೆದ ಸನ್ಯಾಸಿ ಅವನು. ಆದರೆ ಈ ಅನಾಥ ಮಗು ಕಂಡು ಅವನ ಎದೆ ಕರಗಿತು. ಅದನ್ನು ತೋಳಿನಲ್ಲಿ ಬಾಚಿಕೊಂಡು ಆಶ್ರಮಕ್ಕೆ ತಂದ. ಪ್ರೀತಿಯಿಂದ ಶಕುಂತಳೆ ಎಂದು ಕರೆದ. ತಂದೆ ತಾಯಿ ಎರಡೂ ಆಗಿ ಅದನ್ನು ಬೆಳೆಸಿದ. ಕಣ್ವಋಷಿಯಂಥ ಮಹರ್ಷಿಯ ಕೈಗುಣ. ಗುಣವಂತೆಯಾಗಿ ಬೆಳೆದ ಆ ರೂಪಸಿ ಮುಂದೆ ಭರತಖಂಡದ ಚಕ್ರವರ್ತಿಯ ಹೃದಯ ಗೆದ್ದಳು; ದೇಶಕ್ಕೇ ರಾಣಿಯಾದಳು; ಈ ದೇಶಕ್ಕೆ ಹೆಸರು ಕೊಟ್ಟ ಭರತ ಚಕ್ರವರ್ತಿಯ ತಾಯಿಯಾದಳು.

ಇಪ್ಪತ್ತನೆಯ ಶತಮಾನದ ಮೊದಲ ದಶಕದಲ್ಲಿ ಕನ್ನಡ ಭಾಷೆ – ಸಾಹಿತ್ಯಗಳ ಸ್ಥಿತಿ ಆ ಅನಾಥ ಮಗುವಿನ ಪಾಡಿನಂತೆಯೇ ಇತ್ತು. ಅದನ್ನು ಕೈಹಿಡಿದೆತ್ತಿ ಕಾಪಾಡುವ ಶಕ್ತಿ, ಅರ್ಹತೆ ಇದ್ದ ಬಿ. ಎಂ. ಶ್ರೀ ಅದರ ನೆರವಿಗೆ ನಿಂತರು. ತಮ್ಮ ಬದುಕನ್ನು ಅದರ ಸೇವೆಗೆ ತೆತ್ತರು. ಹಾಗೆಯೇ ನಾಡು ಅವರನ್ನು (ಕನ್ನಡ ಶಕುಂತಳೆಯನ್ನು ಎತ್ತಿ ಬೆಳೆಸಿದ) 'ಕನ್ನಡದ ಕಣ್ವ' ಎಂದು ಕರೆಯಿತು. ಶ್ರೀಯವರ ಆ ಸಾರಸ್ವತ ತಪಸ್ಸೇ ಬುನಾದಿಯಾಗಿ ಆಧುನಿಕ ಕನ್ನಡ ತನ್ನ ಇಂದಿನ ನೆಲೆಗೆ ತಲುಪುವಂತೆ ಬೆಳೆದಿದೆ; ಭರತಖಂಡದ ಬೇರೆ ಯಾವ ಭಾಷೆಗೂ ಇನ್ನೂ ದಕ್ಕಿರದ ಏಳು ಜ್ಞಾನಪೀಠಗಳ ಕಿರೀಟ ಧರಿಸಿ ತನಗೆ ಸಾಟಿಯಿಲ್ಲ ಎನಿಸಿಕೊಂಡಿದೆ.

ಬಿ.ಎಂ.ಶ್ರೀ ಹುಟ್ಟಿದ್ದು ೧೮೮೪ರಲ್ಲಿ, ತುಮಕೂರು ಜಿಲ್ಲೆಯ ಸಂಪಿಗೆಯಲ್ಲಿ. ಅವರ ಸ್ವಂತ ಊರು ಮಂಡ್ಯ ಜಿಲ್ಲೆಯ ಬೆಳ್ಳೂರು. ತಾಯಿ ಭಾಗೀರಥಮ್ಮ, ತಂದೆ

ಮೈಲಾರಯ್ಯ. ಶ್ರೀರಂಗಪಟ್ಟಣದಲ್ಲಿ ಶ್ರೀಯವರ ಪ್ರಾಥಮಿಕ ವಿದ್ಯಾಭ್ಯಾಸ ಆರಂಭವಾಗಿ ಮುಂದೆ ಬೆಂಗಳೂರು ಮದರಾಸುಗಳಲ್ಲಿ ಮುಂದುವರಿದು ಶ್ರೀ ತಮ್ಮ ಇಪ್ಪತ್ತಾರನೆಯ ವಯಸ್ಸಿನಲ್ಲಿ ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾದರು. ಕನ್ನಡ ಭಾಷಾಸಾಹಿತ್ಯಗಳ ಸಂಬಂಧದಲ್ಲಿ ಅವರು ಹೂಡಿದ ಚಳುವಳಿಯ ಮೊದಲ ಹೆಜ್ಜೆಯೆಂದರೆ ಧಾರವಾಡದಲ್ಲಿ ಅವರು ನೀಡಿದ 'ಕನ್ನಡ ಮಾತು ತಲೆಯೆತ್ತುವ ಬಗೆ' ಎಂಬ ಉಪನ್ಯಾಸ. ಆಗ ಅವರ ವಯಸ್ಸು ಇನ್ನೂ ಇಪ್ಪತ್ತೇಳು. ಆ ವಯಸ್ಸಿಗೇ ಅವರಲ್ಲಿ ಬೆಳೆದು ನಿಂತಿದ್ದ ಕನ್ನಡ ಪ್ರೇಮ. ಕನ್ನಡ ಭಾಷೆ ಸಾಹಿತ್ಯಗಳ ತಿಳಿವಳಿಕೆ ಮತ್ತು ಕಳಕಳಿ ಎಣೆಯಿಲ್ಲದ್ದಾಗಿತ್ತು. ಈ ಉಪನ್ಯಾಸಕ್ಕೆ ಮುಂಚೆಯೇ ಅವರು ಕನ್ನಡ ಭಾಷಾ – ಸಾಹಿತ್ಯಗಳ ಗಾಢ ಅಧ್ಯಯನ ಮಾಡಿರಬೇಕು ಆದರೆ ಅದರ ಸೂಚನೆ ಮಾತ್ರ ಹೊರಗಿನ ಯಾರಿಗೂ ಇರಲಿಲ್ಲ.

ಬಿ. ಎಂ. ಶ್ರೀಕಂಠಯ್ಯನವೆಂದರೆ ವಿದ್ವತ್ತು ಪ್ರತಿಭೆ ವಾಗ್ಮಿತೆ ಮತ್ತು ಕನ್ನಡ ಪ್ರೇಮಗಳ ಆಕರ್ಷಕ ಸಂಗಮ ಎಂದು ಪ್ರಸಿದ್ಧವಾಗಿ ಹೋಗಿತ್ತು. ಒಮ್ಮೆ 'ಶ್ರೀ' ಇಂಗ್ಲಿಷ್ ತರಗತಿಯಲ್ಲಿ ಮಿಲ್ಟನ್ ಕವಿಯ On his Blindness ಎಂಬ ಕವನ ಕುರಿತು ಮಾತಾಡುತ್ತಿದ್ದಾರೆ. ಮಾತುಗಾರಿಕೆ ತನ್ನ ತುದಿಗೇರಿ ಮಿಂಚುತ್ತಿದೆ: ಮಿಲ್ಟನ್ ನಡುಜೀವನದಲ್ಲಿ ಕಣ್ಣ ಬೆಳಕನ್ನು ಕಳೆದುಕೊಂಡ. ತನ್ನ ಕಾವ್ಯಪ್ರತಿಭೆಯಿಂದ ಭಗವಂತನ ಸೇವೆ ಮಾಡಬೇಕೆಂದಿದ್ದ ಅವನ ಸಂಕಲ್ಪ ಇದರಿಂದ ಬಲವಾದ ಆಘಾತಕ್ಕೆ ಸಿಕ್ಕಿತು. ಆದರೂ ಕವಿ ವ್ಯಗ್ರನಾಗಲಿಲ್ಲ. ದೇವರು ಏನೇ ಸುಖದುಃಖ ಕೊಡಲಿ ಮನುಷ್ಯ ಅದನ್ನು ಗೊಣಗದೆ ಸ್ವೀಕರಿಸಬೇಕು. ಆಗ ಮಾತ್ರ ದೇವರು ಮೆಚ್ಚುತ್ತಾನೆ. ತನ್ನ ಕೈಯಲ್ಲಿ ಈಗ ಹೆಚ್ಚು ಸೇವೆ ಮಾಡಲು ಸಾಧ್ಯವಿಲ್ಲ. ಆದರೇನು. ಭಗವಂತನ ಕಾರ್ಯ ಸಂಕಲ್ಪಗಳನ್ನು ನಡೆಸುವ ಜೀವಗಳು ಎಷ್ಟೋ ಇವೆ. ಅಲ್ಲದೆ ಅವನ ಧ್ಯಾನದಲ್ಲಿ ನಿಂತು ಕಾಯುವುದೂ ಒಂದು ಸೇವೆಯೇ. ಇದನ್ನು ಹೇಳುತ್ತ ಹೇಳುತ್ತ ಶ್ರೀ ಭಾವವಶರಾದರು. ಅವರ ಕಂಠ ಕಟ್ಟಿತು; ಕಣ್ಣಂಚಿನಲ್ಲಿ ನೀರು ತುಳುಕಿತು. ಕೆಲವು ಸೆಕೆಂಡು ಮಾತೇ ಇಲ್ಲ. ಥಟ್ಟನೆ ಶ್ರೀ ತಮ್ಮನ್ನು ನಿಯಂತ್ರಿಸಿಕೊಂಡರು. ವಿದ್ಯಾರ್ಥಿಗಳಿಗೆ ಏನೋ ಆತಂಕ, ದಿಗ್ಭ್ರಮೆ. ಕಾರಣ ತಿಳಿದದ್ದು ಆಮೇಲೆಯೇ. ಮಿಲ್ಟನ್ನನ ಬವಣೆಯ ಬಗ್ಗೆ ಹೇಳುವಾಗ ಶ್ರೀಯವರಿಗೆ ತಮ್ಮ ಬಾಳು ತಾನೇ ಇನ್ನೇನು ಎನಿಸಿರಬೇಕು. ಅವರೂ ನಾಡಿನ ಸೇವೆಗೆ ತಮ್ಮ ಬದುಕನ್ನು ಮುಡಿಪುಮಾಡಿ ಉತ್ಸಾಹದಿಂದ ಅದಕ್ಕೆ ತೊಡಗಿದವರೇ. ಆದರೆ ಮದುವೆಯಾಗಿ ಏಳು ವರ್ಷಗಳಾಗಿದ್ದಾಗಲೇ ಜೀವ ತತ್ತರಿಸಿಹೋಗುವ ದುಃಖ ಎದುರಾಯಿತು. ಅವರಿಗಿದ್ದ ಒಬ್ಬನೇ ಮಗನಿಗೆ ಕೊಂಚ ಕಣ್ಣಿನ ತೊಂದರೆಯಿತ್ತು. ಅದಕ್ಕೆ ಔಷಧ ಹಾಕುತ್ತಿದ್ದದ್ದು ತಾಯಿಯೇ. ಒಂದು ದಿನ ಯಾವುದೋ ಧ್ಯಾನದಲ್ಲಿ ತಾಯಿ ಔಷಧಕ್ಕೆ ಬದಲು

ಪಕ್ಕದಲ್ಲಿದ್ದ ಬೇರೊಂದು ದ್ರಾವಣವನ್ನು ಹಾಕಿಬಿಟ್ಟರು. ಹುಡುಗನ ಕಣ್ಣೇ ಹೋಯಿತು. ಮಗನ ಕಣ್ಣನ್ನು ತೆಗೆದುಬಿಟ್ಟೆ ಎಂಬ ಕೊರಗಿನಲ್ಲಿ ಆಕೆ ಬೇಗನೇ ಕಣ್ಮುಚ್ಚಿದರು. ಸ್ವಲ್ಪಕಾಲದಲ್ಲೇ ಶ್ರೀಯವರ ಅಳಿಯ ತೀರಿಕೊಂಡು, ಮೊಮ್ಮಗು ಜೊತೆಗೆ ಮಗಳು ತವರಿಗೆ ವಾಪಸ್ಸು ಬಂದರು. ನಾಡಿನ ಸೇವೆಗೆ ಹುರುಪಿನಿಂದ ತೊಡಗಿದ್ದ ಶ್ರೀಯವರ ಸ್ಥಿತಿ ಗಾಢಕತ್ತಲಲ್ಲಿ ನಿಂತ ಮಿಲ್ಟನ್ನನ ಸ್ಥಿತಿಯೇ ಆಯಿತು. ಮಿಲ್ಟನ್ನನ ಪಾಡನ್ನು ವರ್ಣಿಸುತ್ತಿದ್ದ ಅವರಿಗೆ ತಮ್ಮ ಬವಣೆಯ ನೆನಪು ಉಕ್ಕಿ ಬಂದು ಕಂಠ ಕಟ್ಟಿರಬೇಕು.

"ದೊಡ್ಡವರದೆಲ್ಲವೂ ದೊಡ್ಡದೆನ್ನುವ ಮಾತು ಸುಳ್ಳಲ್ಲ". ಶ್ರೀಯವರ ಕೀರ್ತಿ ಎಷ್ಟು ದೊಡ್ಡದೋ ಅವರು ಎದುರಿಸಿದ ದುಃಖದ ಅಗ್ನಿದಿವ್ಯವೂ ಅಷ್ಟೇ ದೊಡ್ಡದು. ಮಿಲ್ಟನ್ ಕುರುಡನಾದ ಮೇಲೆಯೇ ತನ್ನ ಲೋಕಪ್ರಸಿದ್ಧ ಮಹಾಕಾವ್ಯ 'ಪ್ಯಾರಡೈಸ್ ಲಾಸ್ಟ್' ಬರೆದ. ಶ್ರೀ ಕನ್ನಡದ ಏಳಿಗೆಗೆ ಶ್ರಮಿಸುತ್ತ ತಮ್ಮ ಅಗಾಧ ದುಃಖವನ್ನು ನುಂಗಿಕೊಂಡರು. "ಶ್ರೀಯವರು ಕನ್ನಡವನ್ನು ಕಾಪಾಡಿದರು, ಕನ್ನಡ ಶ್ರೀಯವರನ್ನು ಕಾಪಾಡಿತು" ಎಂದು ಮುಂದೆ ತೀ.ನಂ.ಶ್ರೀ ಹೇಳಿದ್ದು ಈ ಅರ್ಥದಲ್ಲಿಯೇ.

ಅದು ಮಹಾರಾಜ ಕಾಲೇಜಿನಲ್ಲಿ ಘಟಾನುಘಟಿ ಪ್ರಾಧ್ಯಾಪಕರಿದ್ದ ಕಾಲ. ಡಾ. ರಾಧಾಕೃಷ್ಣನ್, ಪ್ರೊ. ಎಂ. ಹಿರಿಯಣ್ಣ, ಪ್ರೊ. ವಾಡಿಯಾ, ಪ್ರೊ ಎನ್. ಎಸ್. ಸುಬ್ಬರಾವ್ ಮೊದಲಾದ ಅಂತಾರಾಷ್ಟ್ರೀಯ ಖ್ಯಾತಿಯ ವಿದ್ವಾಂಸರು ಬೇರೆ ವಿಭಾಗಗಳಲ್ಲಿದ್ದರೆ ಶ್ರೀಯವರಿದ್ದ ಇಂಗ್ಲಿಷ್‌ಸಾಹಿತ್ಯ ವಿಭಾಗದಲ್ಲಿ ರಾಲೋರಂಥ ಅಪ್ರತಿಮ ಬೋಧಕರೂ ಮ್ಯಾಕಿಂಟಾಷ್‌ರಂಥ ಸಾಹಿತ್ಯ ವಿದ್ವಾಂಸರೂ ಇದ್ದರು. ಇಂಗ್ಲಿಷ್ ಸಾಹಿತ್ಯ ಪಾಠಹೇಳಲು ಆಂಗ್ಲರೇ ಸರಿಯಾದವರು, ಅವರು ಭಾರತೀಯರಿಗಿಂತ ಹೆಚ್ಚು ಶ್ರೇಷ್ಠರು ಎಂಬ ಭಾವನೆ ಆಗ ಪ್ರಬಲವಾಗಿತ್ತು. ಈ ಭಾವನೆಯನ್ನು ತೊಡೆದು ಹಾಕಿದವರು ಬಿ.ಎಂ.ಶ್ರೀ. ಪದವಿ ತರಗತಿಯ ಅವರ ಸಾಹಿತ್ಯೋಪನ್ಯಾಸಕ್ಕೆ ವಿದ್ಯಾರ್ಥಿಗಳು ಮುಕ್ಕಿರಿಯುತ್ತಿದ್ದರು. "ಶ್ರೀಯವರು ಜೂನಿಯರ್ ಪ್ರೊಫೆಸರ್ ಆಗಿದ್ದರೆ ಅವರ ಜೊತೆಯವರೆಲ್ಲ ಅವರಿಗಿಂತ ಎರಡು ಮೆಟ್ಟಲು ಮೇಲೆ ಪ್ರಥಮದರ್ಜೆ ಪ್ರೊಫೆಸರ್ ಆಗಿದ್ದರು. ಆಂಗ್ಲರ ತಲೆಮೆಟ್ಟಿ ಹಾರುತ್ತೇನೆ ಎಂಬ ಕೆಚ್ಚು ಶ್ರೀಯವರಲ್ಲಿತ್ತಾದರೂ "ನಾನು ಏನೇ ಸಾಧಿಸಲಿ, ಎಲ್ಲರೂ ಆಂಗ್ಲರಿಗೇ ಪ್ರಥಮ ಸ್ಥಾನ ಕೊಡುತ್ತಾರೆ. ಅವರ ಹಿಂದೆ ಕುಂಟುತ್ತ ನಡೆಯುವುದೇ ನನ್ನ ಹಣೆಬರಹ ಎಂಬ ಕಲ್ಪನೆ ಅವರಲ್ಲಿ ಬೇರೂರಿತ್ತು." ಅವರ ಅನಿಸಿಕೆ ಏನೇ ಇರಲಿ, ಉಳಿದವರಿಗೆ ಶ್ರೀಯವರ ವಿದ್ವತ್ತು ವಾಗ್ವೈಖರಿಗಳ ಬಗ್ಗೆ ಅಪಾರ ಗೌರವವಿತ್ತು. ಒಮ್ಮೆ ಅವರ ಸೀನಿಯರ್ ಸಹೋದ್ಯೋಗಿ ಪ್ರೊ. ಮ್ಯಾಕಿಂಟಾಷರ ಅಧ್ಯಕ್ಷತೆಯಲ್ಲಿ ಇಂಗ್ಲಿಷ್ ಕವಿಗಳನ್ನು ಕುರಿತು ಶ್ರೀಯವರ

ಉಪನ್ಯಾಸವೊಂದು ನಡೆಯಿತು. ಅವರ ವಿಮರ್ಶಾದೃಷ್ಟಿ, ವಾಗ್ವಿಲಾಸಕ್ಕೆ ಬೆರಗಾದ ಮ್ಯಾಕಿಂಟಾಷ್ ಸಭೆಗೆ ಹೇಳಿದರು "ಎಂಥ ಸೊಗಸಾದ ಭಾಷಣ, ಜನ್ಮಾಂತರಗಳು ಇರುವುದು ನಿಜವಾದರೆ, ತಮ್ಮ ಹಿಂದಿನ ಜನ್ಮದಲ್ಲಿ ಪ್ರೊ. ಶ್ರೀಕಂಠಯ್ಯನವರು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರೊಫೆಸರ್ ಆಗಿದ್ದಿರಬೇಕು."

ಶ್ರೀಯವರ ಸಾಧನೆಗಳಲ್ಲಿ ಶಿಖರಪ್ರಾಯವಾದುದೆಂದರೆ ೧೯೨೧ರಲ್ಲಿ ಪ್ರಕಟವಾಧ 'ಇಂಗ್ಲಿಷ್ ಗೀತಗಳು' ಇದು ಹಲವು ಇಂಗ್ಲಿಷ್ ಕವಿತೆಗಳ ಸೊಗಸಾದ ಕನ್ನಡ ಅನುವಾದ. ಹೊಸಗನ್ನಡದ ತಿಳಿಯಾದ ಭಾಷೆ, ಹಳೆಯದನ್ನು ಆಧರಿಸಿಯೂ ಹೊಸ ರೂಪ ತಾಳಿದ್ದ ಸುಗಮ ಲಯಗಳು, ಹೊಸ ಬಗೆಯ ಕಾವ್ಯವಸ್ತುಗಳು ಇದರ ಮೂಲಕ ಪ್ರಯೋಗವಾದುವು. ಸಂಗ್ರಹದ ಅರವತ್ತು ಮೂರು ಕವಿತೆಗಳಲ್ಲಿ ಮೂರು ಮಾತ್ರ ಶ್ರೀಯವರ ಸ್ವಂತ ಕವಿತೆಗಳು. ಉಳಿದುವೆಲ್ಲ ಷೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಬ್ರೌನಿಂಗ್, ಬರ್ನ್ಸ್, ಬೈರನ್, ಕೋಲರಿಜ್ ಮೊದಲಾದವರ ಕವನಗಳ ಅನುವಾದ. ಕನ್ನಡದಲ್ಲಿ ಹೊಸ ರೀತಿಯಲ್ಲಿ ಬರೆಯಲು ಕಾತರರಾಗಿದ್ದ ಪ್ರತಿಭಾವಂತ ಯುವಕರಿಗೆ ಇವು ಒಂದು ಹೆದ್ದಾರಿ ತೆರೆದವು. ಚೋಳಕನ್ಯೆಯರು, ಬಿಂಕದ ಸಿಂಗಾರಿ, ಮುದ್ದು ಕುರಿಮರಿ, ಕಾರಿ ಹೆಗ್ಗಡೆಯ ಮಗಳು, ದುಃಖಸೇತು, ಬಡವನ ಹುರುಡು, ಬಾನಾಡಿ ಮೊದಲಾದ ಉಜ್ವಲ ಅನುವಾದಗಳು ಕನ್ನಡ ಕಾವ್ಯರಸಿಕರನ್ನು ಚಕಿತಗೊಳಿಸಿದವು. "ಆಂಗ್ಲಸಾಹಿತ್ಯ ಸಂಸ್ಕೃತಿಯು ದೇಶೀಯ ಭಾಷೆಗಳಲ್ಲಿ ಬರುವಂತಾಗಬೇಕು ಎನ್ನುವುದು ಆಂಗ್ಲ ವಿದ್ಯಾಭ್ಯಾಸದ ಉದ್ದೇಶಗಳಲ್ಲೊಂದಾಗಿತ್ತು. ಆ ಶಿಕ್ಷಣದ ಋಣ ತೀರಿಸಿ ಸಾರ್ಥಕತೆ ಹೊಂದಿದ ಪ್ರಮುಖರೆಂದರೆ ಶ್ರೀಯವರು" ಎಂದು ಬೇಂದ್ರೆ ಕೃತಿಕಾರರನ್ನು ಮೆಚ್ಚಿ ಬರೆದರು. ಇಂಗ್ಲಿಷ್ ಕಾವ್ಯದ ಹೊಸ ಮಾದರಿಗಳನ್ನು ಕನ್ನಡದಲ್ಲಿ ತೋರಿಸಿಕೊಡುವ ಆಶಯ ಈ ಕೃತಿಯಿಂದ ನಿರೀಕ್ಷೆ ಮೀರಿ ನೆರವೇರಿತು. ಶ್ರೀಯವರ ಆಶಯ ಹಾಗಿತ್ತೆಂದೇ ಅವರು

ಇವಳ ಸೊಬಗನವಳು ತೊಟ್ಟು
ನೋಡಬಯಸಿದೆ
ಅವಳ ತೊಡಿಗೆ ಇವಳಿಗಿಟ್ಟು
ಹಾಡಬಯಸಿದೆ.

ಎಂದು ಹೇಳಿಕೊಂಡರು. ಇದು ಅಮೂಲ್ಯವಾದ ಕೃತಿಯೇ ಆಗಿದ್ದರೂ ನಮ್ಮ ಹಿಂದಿನ ಕಾವ್ಯಸ್ವರೂಪಕ್ಕೆ ಒಗ್ಗಿಹೋಗಿದ್ದ ಅನೇಕ ಹಿರಿಯರಿಗೆ ಇದರ ಮಹತ್ವ ಕೂಡಲೇ ತಿಳಿಯದೇ ಇದ್ದುದೂ ಉಂಟು. ಇದರ ಸರಳ ತಿಳಿಗನ್ನಡ ಭಾಷೆ, ಸುಗಮನಡೆ ನೋಡಿ ಇದು ಸಾಮಾನ್ಯವಾದದ್ದು ಎಂದು ಅವರು ಭಾವಿಸಿದರು. ಇಲ್ಲಿನ ಕವನವೊಂದರಲ್ಲಿ ಬರುವ –

ಬೇಟಕಾರ ಬಂದ ಮಾದ
ಹಹ್ಹ! ಏನು ಬೇಟವೋ !

ಎಂಬ ಸಾಲುಗಳನ್ನು ವಿಡಂಬಿಸುತ್ತ ಉಳಿದವರಿರಲಿ, ಸ್ವತಃ ಡಿವಿಜಿಯವರೇ

ಊಟಗಾರ ಗುಂಡ ಬಂದ
ಆಹಾ ! ಏನು ಊಟವೋ !

ಎಂದು ಅಣಕವಾಡಿದ್ದುಂಟು ! ಆದರೆ 'ಇಂಗ್ಲಿಷ್ ಗೀತಗಳು' ನೀಡಿದ ಮಾದರಿಗಳ ಫಲವಾಗಿ ನವೋದಯವೆಂದು ಕರೆಸಿಕೊಂಡ ಒಂದು ಹೊಸ ಕಾವ್ಯಮಾರ್ಗವೇ ರೂಪುಗೊಂಡಿತು; ಆ ದಾರಿಯಲ್ಲಿ ಸಾಗುವ ಹೊಸ ಕವಿಗಳ ಒಂದು ಪಡೆಯೇ ಸೃಷ್ಟಿಯಾಯಿತು. ಕುವೆಂಪು, ಪುತಿನ, ನರಸಿಂಹಸ್ವಾಮಿ, ಅಡಿಗ, ಅಷ್ಟೇಕೆ (ಬೇಂದ್ರೆ, ಮಧುರ ಚೆನ್ನ, ರಾಜರತ್ನಂ ಬಿಟ್ಟರೆ) ಆಗ ಬರೆಯಲು ತೊಡಗಿದ ಎಲ್ಲ ಕವಿಗಳೂ ಈ ಕೃತಿಯಿಂದ ವಿಶೇಷ ಪ್ರೇರಣೆ ಪಡೆದರು. ಹೊಸ ಹುರುಪಿನಿಂದ ತಮ್ಮ ಕವಿತೆಗಳನ್ನು ಬರೆದರು. ಇಂಗ್ಲಿಷ್ ಗೀತಗಳು ಒಬ್ಬ ಸಾಹಿತ್ಯ ಸಾಧಕನನ್ನಲ್ಲ, ಸಾಹಿತ್ಯ ಸಿದ್ಧನನ್ನು ಪ್ರಕಾಶಗೊಳಿಸಿದವು. ಅದರಲ್ಲಿ ಪ್ರಯೋಗಕ್ಕಿಂತ ಪರಿಣತಿಯ ಲಕ್ಷಣಗಳು ಹೆಚ್ಚಾಗಿವೆ ಎಂದು ಬೇಂದ್ರೆ ಕೈವಾರಿಸಿದರು. ಅದು ರೂಪಿಸಿಕೊಟ್ಟ ಹೊಸ ಛಂದೋಲಯಗಳನ್ನು ಕುರಿತು ಮುಂದೆ ತೀ.ನಂ.ಶ್ರೀ ಎರಡು ದೀರ್ಘ ಅಭ್ಯಾಸಪೂರ್ಣ ಲೇಖನಗಳನ್ನೇ ಬರೆದರು. ಈ ಅನುವಾದದಿಂದ ಕನ್ನಡದಲ್ಲಿ ಕಾವ್ಯದ ಹೆದ್ದಾರಿಯೊಂದನ್ನು ತೆರೆದ ಬಿ.ಎಂ.ಶ್ರೀ ಆ ಮಾರ್ಗದ ಅಗ್ರಕವಿಯಲ್ಲದಿದ್ದರೂ ಆದಿಕವಿ ಎಂಬ ಶ್ರೇಯಸ್ಸಿಗೆ ಪಾತ್ರರಾದರು.

ಹೊಂಗನಸು ಶ್ರೀಯವರ ಸ್ವತಂತ್ರ ಕವನಗಳ ಸಂಗ್ರಹ. ಅವರು ಈ ದಿಕ್ಕಿನಲ್ಲಿ ಹೆಚ್ಚು ಬರೆಯಲಿಲ್ಲ. ನಿಜ, ಆದರೆ ಬರೆದ ಕೆಲವು ಭಾವನಿರ್ಭರವಾಗಿವೆ. ಕನ್ನಡ ನಾಡಿನ ಚೆಲುವು, ಕನ್ನಡ ಕುರಿತ ಕಳಕಳಿ, ಆಳರಸರನ್ನು ಕುರಿತು ಅವರಿಗಿದ್ದ ಗೌರವ ಅವುಗಳಲ್ಲಿ ಸೊಗಸಾಗಿ ಮೈಪಡೆದಿವೆ.

ಮೊದಲು ತಾಯ ಹಾಲ ಕುಡಿದು
ಲಲ್ಲೆಯಿಂದ ತೊದಲಿ ನುಡಿದು
ಗೆಳೆಯರೊಡನೆ ಬೆಳೆದು ಬಂದ
ಮಾತದಾವುದು?
ನಲ್ಲೆಯೊಲವ ತೆರೆದು ತಂದ
ಮಾತದಾವುದು?

ಎಂಬ ತಾಯಿನುಡಿ ಕುರಿತ ಕಳಕಳಿಯಾಗಲಿ, ಅಥವಾ 'ಶುಕ್ರಗೀತೆ'ಯ

ಋತವೊಂದೆ ಗೆಲ್ಲುವುದು
ಅನೃತಮಲ್ತು
ಅಮೃತಮೆನೆ ವಿದ್ಯೆಯೆ
ಅವಿದ್ಯೆಯಲ್ತು
ವಿಶ್ವಭಾರತಿ ಶರಣು
ಕಿರುತೀರ್ಥಮಲ್ತು

ಎಂಬ ಉದಾತ್ತಧ್ಯೇಯ ನಿಷ್ಠೆಯಾಗಲಿ ದೊಡ್ಡ ಜೀವವೊಂದರ ಎತ್ತರಕ್ಕೆ ತಕ್ಕುದಾದದ್ದು.

ಇಂಗ್ಲಿಷ್ ಗೀತಗಳ ನಂತರ ಶ್ರೀ ನಾಟಕ ರಚನೆಯತ್ತ ಹೊರಳಿದರು. ಪ್ರಾಚೀನ ಕಾವ್ಯವಸ್ತುವನ್ನು ಬಳಸಿ ಸತ್ವಯುತವಾದ ಹಳಗನ್ನಡ ಶೈಲಿಯಲ್ಲಿ ಗ್ರೀಕ್ ಮಾದರಿಯ ರುದ್ರನಾಟಕಗಳನ್ನು (ಖಿಡಿಚಿಂಜಜಥಿ) ರಚಿಸಬೇಕು, ಕನ್ನಡದಲ್ಲಿ ಘನವಾದ ನಾಟಕಗಳ ಬೆಳೆಬರುವಂತೆ ಮಾಡಬೇಕು ಎನ್ನುವುದು ಅವರ ಉದ್ದೇಶವಾಗಿತ್ತು. ಇದಕ್ಕಾಗಿ ಅವರು ರಚಿಸಿದ ಮೂರು ಕಾವ್ಯನಾಟಕಗಳಲ್ಲಿ ಮೊದಲಿನದು ಗದಾಯುದ್ಧ ನಾಟಕ.

ಈ ಕೃತಿ ಹತ್ತನೆಯ ಶತಮಾನದ ಕನ್ನಡ ಕವಿ ರನ್ನನ ಗದಾಯುದ್ಧ ಕಾವ್ಯವನ್ನು ನಾಟಕ ರೂಪಕ್ಕೆ ಹೊರಳಿಸಿ ತಂದ ಕೃತಿ. ಆ ಕಾವ್ಯದಲ್ಲಿ ಸತ್ವಪೂರ್ಣ ಶೈಲಿ ಮತ್ತು ನಾಟಕೀಯ ಚಲನೆ ಇದ್ದ ನಾಟಕವೊಂದು ಸೆರೆಯಾಗಿರುವುದನ್ನು ಶ್ರೀ ಕಂಡುಕೊಂಡರು. ಕಾವ್ಯವನ್ನು ಕಾಲುಭಾಗಕ್ಕೆ ಸಂಗ್ರಹಿಸಿ, ಎಲ್ಲೋ ಅಲ್ಲಲ್ಲಿ ತಮ್ಮ ಒಂದೆರಡು ಮಾತು ಸೇರಿಸಿ, ಸಂಭಾಷಣೆಯ ರೂಪಕ್ಕೆ ಹೊರಳಿಸಿ ಈ ನಾಟಕ ಸಿದ್ಧವಾಯಿತು. ಹೀಗೆ ಮಾಡುವಾಗ ದುರ್ಯೋಧನನ ಪರ ಸಹಾನುಭೂತಿ ಉಂಟಾಗುವಂತೆ ಮಾಡಿ ಅವನನ್ನು ಮಹಾನುಭಾವವನ್ನಾಗಿ ಮಾಡಿ ಅವನಿಗೆ ನಾಯಕ ಪಟ್ಟ ಕೊಡಿಸಿದ್ದಾರೆ ಎಂಬ ಆಕ್ಷೇಪದ ದನಿಯನ್ನು ಕೆಲವರು ಎತ್ತಿದರು. ಆದರೆ ಮೂಲಕಾವ್ಯವೇ ಅವನ ಪರ ಕೊಂಚ ವಾಲಿಕೊಂಡಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಏನೇ ಇದ್ದರೂ ರನ್ನನ ಪದ್ಯಗಳೇ ಇರುವ ಶಕ್ತಿಯುತ ನಾಟಕವೊಂದನ್ನು ಕನ್ನಡಕ್ಕೆ ಕೊಟ್ಟುದಕ್ಕಾಗಿ ಶ್ರೀಯವರಿಗೆ ಅಭಿನಂದನೆಗಳು ಸಲ್ಲುತ್ತವೆ.

ಅಶ್ವತ್ಥಾಮನ್ ಶ್ರೀಯವರ ಮತ್ತೊಂದು ಶ್ರೇಷ್ಠನಾಟಕ. ಇದು ಗ್ರೀಕ್ ಮಹಾನಾಟಕಕಾರ ಸಾಫೋಕ್ಲಿಸನ ಏಜಾಕ್ಸ್ ನಾಟಕವನ್ನು ಆಧರಿಸಿದ ರೂಪಾಂತರ. ಶ್ರೀ ಇದಕ್ಕಾಗಿ ಕೆಲಮಟ್ಟಿಗೆ ಗ್ರೀಕ್ ಭಾಷೆ ಕಲಿತರು. ಮಹಾಭಾರತದ ನಾಲ್ಕು ಪರ್ವಗಳನ್ನು ಡಿವಿಜಿಯವರಿಂದ ಓದಿಸಿ ಕೇಳಿ ಟಿಪ್ಪಣಿ ಮಾಡಿಕೊಂಡರು. ಈ

ನಾಟಕದ ಘನತೆ ಎತ್ತರಗಳು ಸಹೃದಯರಲ್ಲಿ ಅಪಾರ ಮೆಚ್ಚಿಕೆ ಸೃಷ್ಟಿಸಿದುವು. ಹಾಗೆಯೇ ಅಶ್ವತ್ಥಾಮನ ಪಾತ್ರವನ್ನು ಸಲ್ಲದ ರೀತಿ ತಿರುಚಿದರೆಂಬ ಕೂಗೂ ಎದ್ದಿತು. ಭಾರತ ಕಥೆಯ ಪ್ರಕಾರ ಅಶ್ವತ್ಥಾಮ ಚಿರಂಜೀವಿ. ಆದರೆ ಇಲ್ಲಿ ಬರುವ ಅಶ್ವತ್ಥಾಮ ಸೇಡು ಅಹಂಕಾರಗಳ ಮಬ್ಬಿನಲ್ಲಿ ತಾನು ಮಾಡಿದ ಕೊಲೆಗಾಗಿ ಪರಿತಪಿಸುತ್ತ ಆತ್ಮಹತ್ಯೆ ಮಾಡಿಕೊಳ್ಳುವವನು. ಏಜಾಕ್ಸ್‌ನಂಥ ಗ್ರೀಕ್ ವೀರನೊಬ್ಬನ ಅಳತೆಗೆ ಭಾರತ ವೀರನೊಬ್ಬನನ್ನು ಕುಗ್ಗಿಸುವುದೆ? ಅಶ್ವತ್ಥಾಮ ತಾನೆ ಸಾಯಲಿಲ್ಲ, ಶ್ರೀಯವರೇ ಅವನನ್ನು ಕೊಂದರು ಎಂಬ ಕೂಗೆದ್ದಿತು. ಆದರೆ ರುದ್ರನಾಟಕದ ವಿನ್ಯಾಸಕ್ಕೆ ಒಗ್ಗಿಸಲು ಭಾರತದ ಕಥೆಯನ್ನು ಕೊಂಚ ವ್ಯತ್ಯಾಸ ಮಾಡಿಕೊಂಡರೂ ಅದು ಸಾಧಿಸಿದ ದುರಂತತೆಯ ಭವ್ಯಕಲ್ಪನೆಯನ್ನು ಮೆಚ್ಚಿದವರೇ ಹೆಚ್ಚಾಗಿದ್ದರು. ಪುರಾಣ ಕಥೆಯಾದುದರಿಂದಲೋ ಏನೋ ಶ್ರೀ ಇದನ್ನು ಹಳಗನ್ನಡದಲ್ಲಿ ಬರೆದರು. ಬಿಗಿಯಾದ ಬಂಧದಲ್ಲಿದ್ದೂ ಇದರ ಹಳಗನ್ನಡ ಶೈಲಿ ತುಂಬ ಪ್ರಸನ್ನವಾಗಿದೆ, ರಸಾತ್ಮಕವಾಗಿದೆ.

ಇದಾದನಂತರ ಈಸ್ಕಿಲಸ್ ಕವಿಯ ಪರ್ಸಿಯನ್ಸ್ ಎಂಬ ಇನ್ನೊಂದು ದುರಂತ ನಾಟಕವನ್ನು ಶ್ರೀಯವರು ತುಂಬ ಚೆನ್ನಾಗಿ ಅನುವಾದಿಸಿದರು ಆದರೆ ಮೂಲ ನಾಟಕವೇ ಕ್ರಿಯಾಹೀನವಾದುದರಿಂದ ಅದು ಅಶ್ವತ್ಥಾಮನ್ ನಾಟಕದ ಎತ್ತರಕ್ಕೇರಲಿಲ್ಲ.

ಛಂದಸ್ಸು, ಭಾಷಾಶಾಸ್ತ್ರ ಸಾಹಿತ್ಯಚರಿತ್ರೆ, ಕೃತಿವಿಮರ್ಶೆಗಳ ಕ್ಷೇತ್ರಕ್ಕೂ ಶ್ರೀಯವರಿಂದ ಗಣ್ಯವಾದ ಕೊಡುಗೆ ಸಂದಾಯವಾಗಿದೆ. ಅವರು ಬರೆದ ಸಾಹಿತ್ಯ ಚರಿತ್ರೆ, 'ಪೂರ್ವದ ಹಳಗನ್ನಡ ಮತ್ತು ತಮಿಳು', 'ಕನ್ನಡ ಛಂದಸ್ಸಿನ ಇತಿಹಾಸ'ದಂಥ ಲೇಖನಗಳು, ಲಿಪಿ ಸಂಸ್ಕರಣ ಕುರಿತ ಗಾಢ ಚಿಂತನೆಗಳು ಇವೆಲ್ಲ ಕನ್ನಡದ ಸರ್ವಾಂಗೀಣ ಪ್ರಗತಿಗೆ ಅವರ ಕಾಣಿಕೆ ಎಷ್ಟು ದೊಡ್ಡದೆನ್ನುವುದನ್ನು ಸೂಚಿಸುತ್ತವೆ. ಸುಮಾರು ೧೫-೧೬ ವರ್ಷಗಳ ಕಾಲ ಅವರು ಇಡಿಯ ಕರ್ನಾಟಕದ ತುಂಬ ಬಿರುಗಾಳಿಯಂತೆ ಸಂಚರಿಸಿ, ತಮ್ಮ ಭಾವಪೂರ್ಣ ಭಾಷಣಗಳಿಂದ ಕನ್ನಡಿಗರೆದೆಯಲ್ಲಿ ನಾಡಿನ ಪ್ರೇಮವನ್ನು ಬಿತ್ತಿ, ಕರ್ನಾಟಕದ ಏಕೀಕರಣಕ್ಕೆ ದುಡಿದವರಲ್ಲಿ ಅಗ್ರರೆನಿಸಿದರು. ಹಾಗೆಂದೇ ಮಾಸ್ತಿಯವರು ಅವರನ್ನು "ಕನ್ನಡ ಕಾವ್ಯಲೋಕದ ಪ್ರಥಮ ಕುಲಪತಿ" ಎಂದು ಬಣ್ಣಿಸಿ ಕವಿತೆ ಬರೆದರು. ಶ್ರೀಯವರನ್ನು ಕನ್ನಡಾಭಿಮಾನಿಗಳ "ಸೇನೆಯೊಂದರ ಸೇನಾನಿ, ಕ್ರಾಂತಿಯೊಂದರ ಕೇಂದ್ರ, ಪಂಥವೊಂದರ ಪ್ರವಾದಿ" ಎಂದು ಮೂರ್ತಿರಾಯರು ಕೈವಾರಿಸಿದ್ದರಲ್ಲಿ ಸೋಜಿಗವೇನಿಲ್ಲ.

●

ಶ್ರೀ 'ಶ್ರೀ' ಯವರನ್ನು ಕುರಿತು

ಆಧುನಿಕ ಕರ್ಣಾಟ ಕಾವ್ಯಕುಲಪತಿ ನೀವು,
ಬೆಳ್ಳೂರ ಮೈಲಾರ ಶ್ರೀಕಂಠ ಗುರುವರ
ಸಿರಿಗನ್ನಡದೊಳಿನ್ನು ಮುಂದಾರು ಬರೆವರು
ಅವರೆಲ್ಲ ನಿಮ್ಮ ನೆನೆಯುವರು. ಪೂಜೆಯ ಹೂವ
ನಿಮಗರ್ಪಿಸುವರು. ಕನ್ನಡದೊಳಿಂದಾವಾವ
ಕಲಕಂಠ ಕೇಳುತಿದೆ ಅದರ ಗಾನದೊಳೆಲ್ಲ
ತೋರುತಿದೆ ನೀವು ತೆರೆದಾ ನವ್ಯ ಅಕ್ಷುಲ್ಲ
ಧೀರಗತಿ, ಸುವಿಶಾಲ ವಿಶ್ವ ವಿಸ್ತರಭಾವ,
ನುಡಿದು ಕಲಿಸಿದಿರಿ; ನುಡಿಯದೆ ಮತ್ತೆ ಕಲಿಸಿದಿರಿ;
ದುಡಿದು ಕಲಿಸಿದಿರಿ; ಮನದರಕೆಗಳನೆಚ್ಚರಿಸಿ
ಎಳೆಯರೆದೆಯಲಿ ಹಾಡುವಾಸೆಯನು ಸುಳಿಸಿದಿರಿ.
ಒಂದೊಂದು ವೇಳೆ ನಿಮ್ಮನು ಕುರಿತು ಮಚ್ಚರಿಸಿ
ನುಡಿಯುವರು ಕೆಲರು ಸೋದರರು; ಅವರು ಮುಂದೆ
ತಿಳಿಯುವರು ಕನ್ನಡಕೆ ಕಣ್ವಮುನಿ ನೀವೆಂದು.

– ಶ್ರೀನಿವಾಸ

ಬರೆದಂತೆಯೇ ಬಾಳಿದ ಋಷಿಪ್ರಾಯರು

ಅವರು ತಮ್ಮೊಡನೆ ಮಾತು ನಿಲ್ಲಿಸಿಬಿಟ್ಟರೆಂದು ದಿವಾನ್ ಮಿರ್ಜಾ ಸಾಹೇಬರಿಗೆ ಕಳವಳವಾಗಿ ಹೋಗಿತ್ತು. ಆಪ್ತರೆದುರು ಅದನ್ನು ತೋಡಿಕೊಂಡರು. ತಮ್ಮದು ಏನೂ ತಪ್ಪಿಲ್ಲ ಎಂದರು. ಮುಂಚಿನ ಸ್ನೇಹ ಈಗಲೂ ಮುಂದುವರಿಯಬೇಕೆಂದರು. ಅದಕ್ಕಾಗಿ ಅವರಿವರ ಮೂಲಕ ಪ್ರಯತ್ನ ಕೂಡ ಮಾಡಿದರು. ಆ ಕಾಲದ ದೊಡ್ಡ ದಿವಾನರನ್ನೂ ತಮ್ಮ ಸ್ನೇಹಕ್ಕಾಗಿ ಹೀಗೆ ಹಾತೊರೆಯುವಂತೆ ಮಾಡಿದ ವ್ಯಕ್ತಿಯೇನು ಸಾಮಾನ್ಯರೇ?

ಹಾಗೆಂದು ಅವರೇನು ದೊಡ್ಡ ದೊಡ್ಡ ಡಿಗ್ರಿ ಸಿಗಿದವರಲ್ಲ, ಎಸ್.ಎಸ್.ಎಲ್.ಸಿ. ಕೂಡ ದಾಟದ ಓದು. ಭಾರಿ ಶ್ರೀಮಂತರೋ ಎಂದರೆ ದಿನ ದಿನದ ಅಗತ್ಯ ಪೂರೈಸಿದ್ದೇ ಹೆಚ್ಚು ಎನ್ನುವಂಥ ಕೆಲಸ. ಸರ್ಕಾರೀ ಉದ್ಯೋಗವಲ್ಲವಾಗಿ ದೊಡ್ಡ ಅಧಿಕಾರದ ಮಾತಂತೂ ಇಲ್ಲವೇ ಇಲ್ಲ. ಆದರೆ ಮೈಸೂರು ರಾಜ್ಯದ ಪರಮೋಚ್ಚ ಅಧಿಕಾರ ಹಿಡಿದಿದ್ದ ಮಿರ್ಜಾ ಸಾಹೇಬರೂ ಸಹ ಅವರ ಸ್ನೇಹ ತಪ್ಪಿತೆನ್ನಿಸಿ ಕಳವಳಗೊಂಡಿದ್ದರು.

ಇಂಥ ಸತ್ವಶಾಲೀ ವ್ಯಕ್ತಿತ್ವ ಡಿವಿಜಿಗೆ ಬಂದದ್ದು ಹೇಗೆ? ಕೇವಲ ಶೀಲ, ವಿವೇಕ, ನಿಸ್ಪೃಹತೆ, ಸ್ವಯಮಾರ್ಜಿತ ಪಾಂಡಿತ್ಯ, ಸಾರ್ವಜನಿಕ ಹಿತಾಸಕ್ತಿಗಳ ಬಲದಿಂದ. ಮಿರ್ಜಾರ ಕಾಲಕ್ಕೆ ಡಿವಿಜಿ ದೊಡ್ಡ ಮೇಧಾವಿಯೆಂದು ವಿದ್ಯಾವಂತರ ವಲಯದಲ್ಲಿ ಹೆಸರಾಗಿ ಹೋಗಿದ್ದರು. ಒಮ್ಮೆ ಗಣಪತಿ ಉತ್ಸವದ ಸಂಬಂಧವಾಗಿ ಒಂದು ದೊಡ್ಡ ಗಲಾಟೆ ನಡೆಯಿತು. ಅದರ ತನಿಖೆಯಲ್ಲಿ ಸರ್ಕಾರ ವಹಿಸಿದ ಪಾತ್ರ ಪಕ್ಷಪಾತದ್ದಾಗಿತ್ತೆಂದು ಡಿವಿಜಿಗೆ ಅನಿಸಿತು. ಅದರ ಜವಾಬ್ದಾರಿ ದಿವಾನರದ್ದು ತಾನೆ? ಸರಿ, ಅವರು ದಿವಾನರ ಜೊತೆ ಮಾತುಕತೆಯನ್ನೇ ನಿಲ್ಲಿಸಿಬಿಟ್ಟರು. ಇದರ ಪರಿಣಾಮ ಎಷ್ಟಾಯಿತೆಂದರೆ ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿಗಳಂಥ ಹಿರಿಯರು

ಬೆಂಗಳೂರಿಗೆ ಬಂದಾಗ ದಿವಾನ್ ಮಿರ್ಜಾರವರು ಅವರಿಂದ ಡಿವಿಜಿಗೆ ಹೇಳಿಸಿ ತಮ್ಮ ಸ್ನೇಹ ಮತ್ತೆ ಮುಂದುವರಿಯುವಂತೆ ನೋಡಿಕೊಂಡರು!

ಇದಕ್ಕೂ ಬಹಳ ಮುಂಚಿನ ಮಾತು. ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಕಾಲ. ಡಿವಿಜಿ ಆಗ ಯುವಕ ಪತ್ರಕರ್ತ. ದಸರಾ ಉತ್ಸವ ಬಂತು. ರಾಜ್ಯದ ಎಲ್ಲ ಪತ್ರಿಕೆಗಳೂ ಅದರ ವಿಶೇಷ ವರದಿ ನೀಡಿದವು. ಇದಾದ ನಾಲ್ಕು ದಿನಕ್ಕೆ ಪತ್ರಕರ್ತರಿಗೆಲ್ಲ ಸರ್ಕಾರದಿಂದ ದೊಡ್ಡ ಮೊತ್ತ ಸಂಭಾವನೆ ರೂಪದಲ್ಲಿ ಹೋಯಿತು. ಡಿವಿಜಿ ತಮಗೆ ಬಂದಿದ್ದ ಹಣದ ಸಹಿತ ದಿವಾನರಲ್ಲಿಗೆ ಬಂದರು.

"ಏನು ಬಂದಿರಿ ಗುಂಡಪ್ಪ?"

"ನನಗೆ ಈ ಹಣ ಯಾಕೆ ಕಳಿಸಿದ್ದಾರೆ?"

"ದಸರಾ ಉತ್ಸವವನ್ನು ಚೆನ್ನಾಗಿ ವರದಿ ಮಾಡಿದ್ದೀರಿ, ಅದಕ್ಕೆ"

"ಅದಕ್ಕೆ ಹಣ ಯಾಕೆ ಕಳಿಸಬೇಕು?"

"ಪತ್ರಕರ್ತರಿಗೆ ಓಡಾಟ, ಖರ್ಚು ಇರುತ್ತದೆ. ಅಲ್ಲದೆ ಹಿಂದಿನಿಂದ ಬಂದ ಪದ್ಧತಿ"

"ವರದಿ ಮಾಡುವುದು ಪತ್ರಕರ್ತರ ಕರ್ತವ್ಯ. ಅದಕ್ಕೆ ಖರ್ಚಾದರೆ ಪತ್ರಿಕೆ ಕೊಡಬೇಕು, ಸರ್ಕಾರವಲ್ಲ. ನನಗೆ ಈ ಹಣ ಖಂಡಿತ ಬೇಡ. ಬೇಡವೇ ಬೇಡ."

ವಿಶ್ವೇಶ್ವರಯ್ಯನವರಿಗೆ ಈ ನಿಸ್ಪೃಹತೆ ತಕ್ಷಣ ಅರ್ಥವಾಯಿತು. ಸರ್ಕಾರದ ದಾಕ್ಷಿಣ್ಯ ಕೂಡ ಬೇಕಿಲ್ಲ ಈ ಪತ್ರಕರ್ತನಿಗೆ. ಅವನ ಸ್ವಾತಂತ್ರ್ಯದ ಕಲ್ಪನೆ ಎಷ್ಟು ದೊಡ್ಡದು! ಅವರಿಗೆ ತುಂಬ ಮೆಚ್ಚಿಕೆಯೆನಿಸಿತು. ತಮ್ಮ ಕಾರ್ಯದರ್ಶಿಗೆ ಹೇಳಿದರು.

"ಈ ಮನುಷ್ಯನ ರೀತಿಯೇ ಬೇರೆ. ಇವರಿಗೆ ನಾವು ಹಣ ಕೊಡಲು ಬರುವುದಿಲ್ಲ, ಅದನ್ನು ಹಿಂದಕ್ಕೆ ತೆಗೆದುಕೊಂಡು ಬಿಡಿ!"

ವಿಶ್ವೇಶ್ವರಯ್ಯನವರು ತಮ್ಮ ಕೆಲಸ ಕಾರ್ಯಗಳಲ್ಲಿ ಎಷ್ಟೋ ಜನ ಮೇಧಾವಿಗಳ ಸಹಾಯ ಪಡೆಯುತ್ತಿದ್ದರು. ಪ್ರತಿಯಾಗಿ ಅದಕ್ಕೆ ತಕ್ಕ ಸಂಭಾವನೆಯನ್ನೂ ಕೊಡುತ್ತಿದ್ದರು. ಡಿವಿಜಿಯವರಿಂದಲೂ ಅವರು ಅನೇಕ ಕೆಲಸ ಮಾಡಿಸಿಕೊಂಡದ್ದುಂಟು. ಮೊದಲ ಸಲ ಅವರಿಗೆ ಸಂಭಾವನೆ ಕೊಡಲು ಹೋದಾಗ ಡಿವಿಜಿ ಒಪ್ಪಲಿಲ್ಲ. ಇದು ರಾಜ್ಯದ ಕೆಲಸ. ಅಲ್ಲದೆ ವಿಶ್ವೇಶ್ವರಯ್ಯ ಎಂಥ ಮಹಾವ್ಯಕ್ತಿ! ಅವರ ಜೊತೆ ವ್ಯವಹರಿಸಿದ್ದೇ ತಮಗೊಂದು ಹೆಮ್ಮೆ. ಹಾಗಿರುತ್ತ ಅದಕ್ಕೆ ಸಂಭಾವನೆಯೇ? ಎಂದಿಗೂ ಕೂಡದು. ಇದು ಅವರ ತರ್ಕ. ಆದರೆ ಈ ತರ್ಕ ನಡೆಯಲಿಲ್ಲ. ಡಿವಿಜಿ ಮೊಂಡಾದರೆ ವಿಶ್ವೇಶ್ವರಯ್ಯ ಜಗಮೊಂಡು. ಇದು ನನ್ನ

ವೈಯುಕ್ತಿಕ ಕೆಲಸ. ನನಗೆ ಇದಕ್ಕೆ ಹಣ ಬರುತ್ತದೆ. ನೀವು ತೆಗೆದುಕೊಳ್ಳಲೇಬೇಕು. ಇಲ್ಲದಿದ್ದರೆ ಮುಂದೆ ನಿಮ್ಮ ಸಹಾಯವೇ ಬೇಡ ಎಂದು ಕೋಪಿಸಿಕೊಂಡರು, ಆಯಿತು; ತೆಗೆದುಕೊಳ್ಳಲು ಡಿವಿಜಿ ಒಪ್ಪಿದರು. ಮುಂದೆ ವಿಶ್ವೇಶ್ವರಯ್ಯ ಅವರಿಗೆ ಪ್ರತಿಸಲವೂ ಚೆಕ್ಕು ಕೊಡುತ್ತಹೋದರು. ಡಿವಿಜಿ ಪಡೆಯುತ್ತ ಹೋದರು. ಆದರೆ ಆ ಚೆಕ್ಕುಗಳು ಬ್ಯಾಂಕಿನ ಮೆಟ್ಟಲನ್ನು ಹತ್ತಿದರೆ ತಾನೆ?

ಹಣವನ್ನು, ಸರ್ಕಾರದ ಸಹಾಯವನ್ನು ಇಷ್ಟು ಉದಾಸೀನ ಮಾಡಿದ ವ್ಯಕ್ತಿ ಎಂಥ ಶ್ರೀಮಂತರಿದ್ದಿರಬಹುದು. ಒಮ್ಮೆ ಡಿವಿಜಿಯ ಬಂಧುಗಳೊಬ್ಬರ ಮನೆಯಲ್ಲಿ ಒಂದು ಉತ್ಸವ ನಡೆಯಿತು. ಡಿವಿಜಿಗೆ ಹೋಗಲು ಆಗಲಿಲ್ಲ. ಅವರ ಪತ್ನಿ ಮಕ್ಕಳನ್ನು ಕಳಿಸಿದರು. ಆರತಿ ಅಕ್ಷತೆಯ ಹೊತ್ತಾದರೂ ಹೆಂಡತಿ ಮನೆಯಲ್ಲೇ ಇದ್ದಾರೆ. ಗಂಡ ಅಸಮಾಧಾನದಿಂದ ಕೇಳಿದರು.

"ನೀನು ಉತ್ಸವಕ್ಕೆ ಹೋಗುವುದಿಲ್ಲವೇ?"

"ಇಲ್ಲ."

"ಯಾಕೆ?"

"ಮಕ್ಕಳನ್ನು ಕಳಿಸಿದ್ದೇನಲ್ಲ."

"ಅದು ಸರಿ, ನೀನೂ ಹೋಗಬೇಕಷ್ಟೆ. ಅವರು ನಮಗೆ ಬಹಳ ಬೇಕಾದವರು ನೀನು ಹೋಗದಿದ್ದರೆ ಬೇಸರಪಡುವುದಿಲ್ಲವೇ?"

"ಮನೆಯಲ್ಲಿ ಯಾರಾದರೂ ಇರಬೇಕಲ್ಲ".

"ನಾನು ಇರುತ್ತೇನೆ. ನೀನು ಹೋಗಿ ಬಾ."

ಅವರ ಹೆಂಡತಿ ಏನೇನೂ ಸಬೂಬು ಹೇಳಿದರು. ಡಿವಿಜಿ ಅದಕ್ಕೆ ಉತ್ತರ ಕೊಡುತ್ತಲೇ ಹೋದರು. ನಿಜವಾದ ಕಾರಣ ಕಡೆಗೆ ಹೊರಬರಲೇಬೇಕಾಯಿತು. ಅವರ ಪತ್ನಿಯ ಮುಖ ಬಾಡಿತು. ಸಂಕೋಚಪಡುತ್ತಲೇ ಹೇಳಿದರು. "ನಾನು ಹೇಳಬಾರದೆಂದಿದ್ದೆ. ನೀವೋ ಪಟ್ಟು ಹಿಡಿದು ನನ್ನ ಬಾಯಿ ಬಿಡಿಸುತ್ತಿದ್ದೀರಿ. ನನ್ನ ಹತ್ತಿರ ಇರುವುದು ಇದೊಂದೇ ಸೀರೆ. ಇದೂ ಒಂದೆರಡು ಕಡೆ ಹರಿದಿದೆ. ನಾನು ಈ ಬಟ್ಟೆಯಲ್ಲಿ ಹೊರಗೆ ಕಾಣಿಸಿಕೊಂಡರೆ ಜನ ನಿಮ್ಮನ್ನು ಕುರಿತು ಆಡಿಕೊಳ್ಳುವುದಿಲ್ಲವೇ? ಬಂಧುಗಳ ಮನೆಗೆ ಹೋಗಿಬರುವುದು ಹೇಗೆ ನನಗೆ ಕರ್ತವ್ಯವೋ ಹಾಗೇ ನಿಮ್ಮ ಮರ್ಯಾದೆಗೆ ಊನ ಬರದಂತೆ ನಡೆದುಕೊಳ್ಳುವುದೂ ನನಗೆ ಕರ್ತವ್ಯವೇ ಅಲ್ಲವೇ? ಹೊಸ ಸೀರೆಯನ್ನು ಕೊಂಡುಕೊಡಿ ಎಂದು ನಾನು ಕೇಳುತ್ತಿಲ್ಲ. ಆದರೆ ಈ ಸಂದರ್ಭದಲ್ಲಿ ಯುಕ್ತವೆಂದು ನನಗೆ ತೋರಿದಂತೆ ನಾನು ನಡೆದುಕೊಳ್ಳುತ್ತೇನೆ. ಅದಕ್ಕೆ ನೀವು ಅಡ್ಡಿ ಮಾಡಕೂಡದು ಎಂದಷ್ಟೇ ನನ್ನ ಬೇಡಿಕೆ."

ಡಿವಿಜಿಯವರ ಆರ್ಥಿಕಸ್ಥಿತಿ ಯಾವ ನೆಲೆಯದಾಗಿತ್ತು ಎನ್ನುವುದನ್ನು ಈ ಪ್ರಸಂಗ ಮಾರ್ಮಿಕವಾಗಿ ತಿಳಿಸುತ್ತದೆ. ಜೊತೆಗೆ ತಪಸ್ಸಿಗೆ ಸಮನಾದ ಅವರ ಜೀವದಲ್ಲಿ ಅವರ ಪತ್ನಿಯ ಪಾಲೂ ಎಷ್ಟೊಂದು ಇತ್ತು ಎನ್ನುವುದನ್ನು ಧ್ವನಿಸುತ್ತದೆ.

ಡಿ. ವಿ. ಗುಂಡಪ್ಪನವರು ಆಧುನಿಕ ಕನ್ನಡ ಸಾಹಿತ್ಯದ ದಿಗ್ಗಜಗಳಲ್ಲಿ ಒಬ್ಬರು, ಕನ್ನಡ ಸಾರಸ್ವತ ಲೋಕದ ಭೀಷ್ಮ ಎಂದು ಕರೆಸಿಕೊಂಡವರು. ಅವರದ್ದು ಹೋಲಿಕೆ ಇಲ್ಲದ ಅಪೂರ್ವ ವ್ಯಕ್ತಿತ್ವ. ಇತರ ಸಾಹಿತಿಗಳಂತೆ ಅವರು ಸಾಹಿತಿ ಮಾತ್ರವಾಗಿರಲಿಲ್ಲ. ಹೆಸರಾಂತ ಪತ್ರಕರ್ತರಾಗಿದ್ದರು. ಹಿರಿಯ ವೇದಾಂತಿಯಾಗಿದ್ದರು. ರಾಜ್ಯಶಾಸ್ತ್ರದಲ್ಲಿ ಆಳವಾದ ತಿಳುವಳಿಕೆಯುಳ್ಳವರಾಗಿದ್ದರು. ಸಾರ್ವಜನಿಕ ಜೀವನಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳ ಮಂಥನಕ್ಕಾಗಿ ಗೋಖಲೆ ಸಾರ್ವಜನಿಕ ಸಂಸ್ಥೆಯಂಥ ಪ್ರಸಿದ್ಧ ಸಂಸ್ಥೆಯನ್ನು ಕಟ್ಟಿದ ಸಾಹಿತಿ ಬೇರೆ ಯಾರಿದ್ದಾರೆ? ಅವರನ್ನು 'ಮಹಾಧೀಮಂತ' ಎಂಬ ಮಾತಿನಿಂದ ವರ್ಣಿಸುವುದು ಸರಿಯಾದೀತೇನೋ. ಅವರೇ ಬರೆದ ಒಂದು ಪ್ರಸಿದ್ಧ ಕವಿತೆ ಅವರ ವ್ಯಕ್ತಿತ್ವವನ್ನು ಬಹಳ ಸೊಗಸಾಗಿ ವರ್ಣಿಸುತ್ತದೆ. ಆ ಕವನದ ಸಾಲುಗಳು ಇಡೀ ನಾಡಿಗೇ ಪರಿಚಿತವಾದವು.

ವನಸುಮದೊಲೆನ್ನ ಜೀವನವು ವಿಕಸಿಸುವಂತೆ
ಮನವನನುಗೊಳಿಸು ಗುರುವೇ – ಹೇ ದೇವ
ಕಾನನದಿ ಮಲ್ಲಿಗೆಯ ಮೌನದಿಂ ಬಿರಿದು ನಿಜ
ಸೌರಭವ ಸೂಸಿ ನಲವಿಂ
ತಾನೆಲೆಯ ಪಿಂತಿರ್ದು ದೀನತೆಯ ತೋರಿ ಅಭಿ
ಮಾನವನು ತೊರೆದು ಕೃತ್ಯಕೃತ್ಯತೆಯ ಪಡೆವಂತೆ

ಸದ್ದುಗದ್ದಲವಿಲ್ಲದೆ ಎಲೆಮರೆಯಲ್ಲಿ ಅರಳಿ, ಪರಿಮಳವನ್ನು ಹರಡಿ ತನ್ನ ಬದುಕನ್ನು ಸಾರ್ಥಕಗೊಳಿಸಿಕೊಳ್ಳುವ ಕಾಡುಮಲ್ಲಿಗೆಯಂತೆ ತಮ್ಮ ಬಾಳು ಇರಬೇಕೆಂದು ಅವರು ಬಯಸಿದರು. ತಮ್ಮ ಕವಿತೆಯ ಆ ಸಾಲುಗಳನ್ನು ಅವರು ಕೇವಲ ಬರೆಯಲಿಲ್ಲ, ಬಾಳಿ ತೋರಿಸಿದರು.

ಡಿವಿಜಿಯವರನ್ನು ನೆನೆದ ತಕ್ಷಣ ನನ್ನ ಕಣ್ಣಮುಂದೆ ನಿಲ್ಲುವುದು ಅವರನ್ನು ಕುರಿತು ತೆಗೆಯಲಾದ ಸಾಕ್ಷ್ಯ ಚಿತ್ರದಲ್ಲಿನ ಒಂದು ದೃಶ್ಯ. ಅದರಲ್ಲಿ ಡಿವಿಜಿ ಭಾರೀ ಅಶ್ವತ್ಥ ವೃಕ್ಷವೊಂದರ ಅಡಿಯಲ್ಲಿ ಕಣ್ಣು ತುಂಬುವಂತೆ ಕುಳಿತಿದ್ದಾರೆ. ರಾಜರತ್ನಂ ಅವರಿಗೆ ಏನೇನೋ ಪ್ರಶ್ನೆ ಹಾಕುತ್ತಿದ್ದಾರೆ; ಉತ್ತರ ಪಡೆಯುತ್ತಿದ್ದಾರೆ. ಈ ದೃಶ್ಯ ನನಗೆ ಬಹಳ ಅರ್ಥಪೂರ್ಣವಾಗಿ ಕಂಡಿದೆ. ಅಶ್ವತ್ಥವೃಕ್ಷ ಎತ್ತರಕ್ಕೆ ಬೆಳೆಯುತ್ತದೆ. ನೂರಾರು ಟೊಂಗೆ ಬಿಸಿಲು ಬಿಟ್ಟು ಅಗಲಕ್ಕೆ ಹರಡುತ್ತದೆ; ತಲೆತುಂಬ ಎಲೆ

ತೊಟ್ಟು ಹರವಾದ ನೆರಳು ಚೆಲ್ಲುತ್ತದೆ. ನೂರಾರು ಹಕ್ಕಿಗಳಿಗೆ ಆಶ್ರಯ ಕೊಡುತ್ತದೆ. ದಣಿದ ದಾರಿಗರಿಗೆ ನೆಳಲಾಗುತ್ತದೆ. ಡಿವಿಜಿಯವರ ವ್ಯಕ್ತಿತ್ವವೂ ಇಂಥದೇ. ಸತ್ವಪೂರ್ಣವಾದ ಭಾವನೆ ಕಲ್ಪನೆ ಚಿಂತನೆಗಳ ರೆಂಬೆಕೊಂಬೆಗಳನ್ನು ಹರಡಿ ಅವರು ಅಶ್ವತ್ಥದಂತೆ ಎತ್ತರಕ್ಕೆ ಬೆಳೆದರು. ಅಶ್ವತ್ಥವೃಕ್ಷ ನಮ್ಮಲ್ಲಿ ಪರಂಪರೆಯ ಸಂಕೇತ. ಡಿವಿಜಿ ಕೂಡ ನಮ್ಮ ಪರಂಪರೆ ಜ್ಞಾನ ಸತ್ವ ರುಚಿಗಳ ಪ್ರತೀಕ. ರಾಜರತ್ನಂ ವರ್ತಮಾನದ ಪ್ರತಿನಿಧಿಯೆಂಬಂತೆ ಆ ಪರಂಪರೆಯನ್ನು ಪ್ರಶ್ನಿಸುತ್ತಿದ್ದಾರೆ, ಅದರ ಜೊತೆ ಚರ್ಚಿಸುತ್ತಿದ್ದಾರೆ. ತಮ್ಮ ಸಂದೇಹಗಳಿಗೆ ಉತ್ತರ ಪಡೆದು ಸಮಾಧಾನಗೊಳ್ಳುತ್ತಿದ್ದಾರೆ.

ಡಿವಿಜಿಯವರು ಹುಟ್ಟಿದ ಊರು ಕೋಲಾರ ಜಿಲ್ಲೆಗೆ ಸೇರಿದ ಮುಳಬಾಗಿಲು. ಅವರದು ವೇದಶಾಸ್ತ್ರ ಸಂಪನ್ನರಾದ ಹಿರಿಯರಿದ್ದ ಕುಟುಂಬ. ಅವರ ತಂದೆಯ ಹೆಸರು ವೆಂಕಟರಮಣಯ್ಯ; ತಾಯಿ ಅಲಮೇಲಮ್ಮ. ಡಿವಿಜಿಯವರ ಮನಸ್ಸಿನ ಮೇಲೆ ಬಹಳ ಪ್ರಭಾವ ಬೀರಿದ ವ್ಯಕ್ತಿಗಳು ಇಬ್ಬರು. ಅವರ ಅಜ್ಜಿ, ಎಂದರೆ ತಾಯಿಯ ತಾಯಿ, ಸಾಕಮ್ಮ. ಮಹರ್ಷಿಪ್ರಾಯರಾದ ಚೇತನ ಎಂದು ಡಿವಿಜಿ ಅವರನ್ನು ವರ್ಣಿಸಿದ್ದಾರೆ. ಇನ್ನೊಬ್ಬರು, ಅವರ ಸೋದರಮಾವ ತಿಮ್ಮಪ್ಪ, ಪ್ರಸಿದ್ಧ ಕೃತಿಯಾದ ಮಂಕುತಿಮ್ಮನ ಕಗ್ಗದಲ್ಲಿ ತಿಮ್ಮ ಗುರುವಿನ ಹೃದಯಸ್ಪರ್ಶಿಯಾದ ಚಿತ್ರಣವಿದೆ. ಆ ಚಿತ್ರಕ್ಕೆ ಆಧಾರವಾದ ವ್ಯಕ್ತಿತ್ವ ಈ ತಿಮ್ಮಪ್ಪನವರದೇ.

ಡಿವಿಜಿ ಮುಳಬಾಗಲಿನ ಆಂಗ್ಲೋ ವರ್ನಾಕ್ಯುಲರ್ ಶಾಲೆಯಲ್ಲಿ ಲೋವರ್ ಸೆಕೆಂಡರಿ ಪೂರ್ತಿಮಾಡಿದರು. ಮುಂದಿನ ಓದಿಗೆ ಬೇರೆ ಊರಿಗೇ ಹೋಗಬೇಕು; ಆದರೆ ಹಣದ ಅನುಕೂಲವಿಲ್ಲ. ಓದು ಇಲ್ಲಿಗೆ ಸಾಕು ಎಂದು ತಂದೆ, ಅಜ್ಜಿ ತೀರ್ಮಾನಿಸಿದರು. ಆದರೆ ಡಿವಿಜಿಯವರ ಭಾಗ್ಯ ಎಂಬಂತೆ ಅವರ ಸಹಾಯಕ್ಕೆ ಬಂದವನು ರಸೂಲ್‌ಖಾನ್. ಅವನೊಬ್ಬ ಬಂಡಿ ಹೊಡೆಯುವ ವ್ಯಕ್ತಿ. ಬಡವ, ಪ್ರಾಮಾಣಿಕ. ಡಿವಿಜಿಯವರ ತಂದೆಗೆ ಬೇಕಾಗಿದ್ದವನು. "ಗುಂಡಣ್ಣ ತುಂಬ ಚುರುಕಾದ ಹುಡುಗ. ಅವನು ಮುಂದೆ ಓದಲೇಬೇಕು." ಅಂತ ರಸೂಲ್‌ಖಾನ್ ಹಟ ಹಿಡಿದುಬಿಟ್ಟ. "ನೀವೆಲ್ಲ ಏನಾದರೂ ಹೇಳಿ. ಅವನನ್ನು ನನ್ನ ಬಂಡಿಯಲ್ಲಿ ಹಾಕಿಕೊಂಡು ಬೌರಿಂಗ್ ಪೇಟೆಗೆ ಹೋಗ್ತೀನಿ. ಬೆಂಗಳೂರಿನ ರೈಲಿನಲ್ಲಿ ಕೂರಿಸಿ, ಟಿಕೆಟ್ ಕೊಡಿಸಿ, ಒಂದು ರೂಪಾಯಿ ಕೈ ಖರ್ಚಿಗೆ ಕೊಟ್ಟುಬಿಡ್ತೀನಿ. ಮುಂದೆ ಅವನ ಹಣೆಬರಹ. ತಿರುಪೆ ಮಾಡಿಕೊಂಡಾದರೂ ಓದಲಿ. ಆದರೆ ಅವನ ಓದು ಮಾತ್ರ ನಡೀಲೇಬೇಕು." ರಸೂಲ್‌ಖಾನನ ಈ ನಿರ್ಧಾರ ಎಲ್ಲರನ್ನೂ ದಂಗುಬಡಿಸಿತು. ಎಲ್ಲ ಅವನು ಹೇಳಿದಂತೆಯೇ ನಡೆಯಿತು. ಡಿವಿಜಿ ಬೆಂಗಳೂರನ್ನು ಕಂಡದ್ದು ಹೀಗೆ ರಸೂಲ್ ಖಾನನ ದಯೆಯಿಂದ.

ಆದರೆ ಕಾರಣಾಂತರದಿಂದ ಡಿವಿಜಿ ಮೈಸೂರಿನಲ್ಲಿ ಓದು ಮುಂದುವರಿಸಿದರು. ಅವರ ಓದು ಮೆಟ್ರಿಕ್ಯುಲೇಷನ್ ದಾಟಲಿಲ್ಲ. ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಅವರು ಫೇಲಾದರು. ಕೆ.ಜಿ.ಎಫ್.ನಲ್ಲಿದ್ದ ಒಂದು ಸೋಡಾ ಫ್ಯಾಕ್ಟರಿಯಲ್ಲಿ ಗುಮಾಸ್ತೆಯಾಗಿ ಒಂದು ವರ್ಷ ಕೆಲಸ ಮಾಡಿ ಆಮೇಲೆ ಬೆಂಗಳೂರಿಗೆ ಬಂದು ಜಟಕಾಗಾಡಿಗೆ ಬಣ್ಣ ಬಳಿಯುವ ಒಂದು ಸಣ್ಣ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಸೇರಿಕೊಂಡರು. ಕೆಲವು ದಿನದಲ್ಲಿ ಆ ಫ್ಯಾಕ್ಟರಿಯೂ ಮುಚ್ಚಿಹೋಯಿತು.

ಡಿವಿಜಿಗೆ ಆಗ ವಯಸ್ಸು ಹದಿನೇಳು, ಅಷ್ಟು ಚಿಕ್ಕ ವಯಸ್ಸಿಗೇ ಅವರು ಇಂಗ್ಲಿಷಿನಲ್ಲಿ ನಿರರ್ಗಳವಾಗಿ ಮಾತಾಡುತ್ತಿದ್ದರು, ಬರೆಯುತ್ತಿದ್ದರು. ಈವೆನಿಂಗ್ ಮೇಲ್, ಮೈಸೂರು ಸ್ಟಾಂಡರ್ಡ್, ಸೂರ್ಯೋದಯ ಪ್ರಕಾಶಿಕೆ – ಮೊದಲಾದ ಪತ್ರಿಕೆಗಳಿಗೆ ಅವರು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಲೇಖನಗಳನ್ನು ಬರೆಯಲು ಆರಂಭಿಸಿದರು. ನವರತ್ನ ಕೃಷ್ಣಸ್ವಾಮಿ ಎಂಬ ಸ್ನೇಹಿತರ ಜೊತೆಯಲ್ಲಿ ಕನ್ನಡದ ಮೊದಲ ದಿನಪತ್ರಿಕೆ 'ಭಾರತಿ'ಯನ್ನು ಆರಂಭಿಸಿದಾಗ ಡಿವಿಜಿಯವರ ವಯಸ್ಸು ಕೇವಲ ಹದಿನೆಂಟು! ಮುಂದೆ ವೃತ್ತಪತ್ರಿಕೆಗಳಿಗೆ ಮಾರಕವಾದ ಒಂದು ಕಾನೂನನ್ನು ಸರ್ಕಾರ ಜಾರಿಗೆ ತಂದಾಗ ಅದನ್ನು ಪ್ರತಿಭಟಿಸಿ ಡಿವಿಜಿ ತಮ್ಮ ಭಾರತಿ ಪತ್ರಿಕೆಯನ್ನು ನಿಲ್ಲಿಸಿಬಿಟ್ಟರು!

ಡಿವಿಜಿ 'ಮೈಸೂರು ಟೈಮ್ಸ್' ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದಾಗ ಒಂದು ಘಟನೆ ನಡೆಯಿತು. ಸೆಂಟ್ರಲ್ ಕಾಲೇಜ್ ಹಾಸ್ಟೆಲಿನ ಅಡಿಗೆಯ ಅವ್ಯವಹಾರದ ಬಗ್ಗೆ ಪತ್ರಿಕೆಯಲ್ಲಿ ಒಂದು ಪತ್ರ ಪ್ರಕಟವಾಯಿತು. ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಟೇಟ್ ಸಾಹೇಬರು ಅದನ್ನು ಕಂಡು ಕಿಡಿಕಿಡಿಯಾದರು. ಅವರ ಪ್ರಚೋದನೆಯಿಂದ ಅಡಿಗೆಯವನು ಪತ್ರಿಕೆಯ ಸಂಪಾದಕರಾದ ರಾಮಸ್ವಾಮಿ ಅಯ್ಯಂಗಾರ್ಯರ ಮೇಲೆ ಕೋರ್ಟಿನಲ್ಲಿ ಮಾನನಷ್ಟದ ದಾವೆ ಹಾಕಿದ. ಡಿವಿಜಿಯವರು ತಮ್ಮ ಲಾಯರು ಮಿತ್ರರ ಸಲಹೆ ಕೇಳಿಯೇ ಆ ಪತ್ರವನ್ನು ಪ್ರಕಟಿಸಿದ್ದರು. ಅಡಿಗೆಯವನ ದಾವೆಯಿಂದ ಪತ್ರಿಕೆಗೆ ತೊಂದರೆಯಾಗುವುದು ಸಾಧ್ಯವಿರಲಿಲ್ಲ. ಆದರೂ ಸಂಪಾದಕರೂ ಯಾರಿಗೂ ತಿಳಿಸದೆ ಕೋರ್ಟಿನಲ್ಲಿ ಕ್ಷಮಾಪತ್ರ ಸಲ್ಲಿಸಿಬಿಟ್ಟರು. ಪತ್ರ ಪ್ರಕಟವಾಗಲು ಕಾರಣರಾಗಿದ್ದ ಡಿವಿಜಿಯವರಿಗೆ ಇದರಿಂದ ನೋವಾಯಿತು. ಕೂಡಲೆ ಅವರು ಪತ್ರಿಕೆಯ ಕೆಲಸ ಬಿಟ್ಟುಬಿಟ್ಟರು. 'ಕೆಲಸ ಕಳಕೊಂಡೆಯಲ್ಲ, ಈಗ ಅನ್ನಕ್ಕೆ ಏನು ಮಾಡುತ್ತೀಯೆ' ಅಂತ ಸ್ನೇಹಿತರು ಕೇಳಿದರೆ 'ದೇಶೋ ವಿಶಾಲಃ ಪ್ರಭವೋಪಿ ಅನಂತಾಃ' (ದೇಶ ದೊಡ್ಡದಾಗಿದೆ ಧಣಿಗಳೂ ಅನೇಕರಿದ್ದಾರೆ) ಎಂದು ಬಿಟ್ಟರು! ಆ ಚಿಕ್ಕ ವಯಸ್ಸಿನಲ್ಲಿಯೇ ಅಷ್ಟೊಂದು ಧೈರ್ಯ, ಆತ್ಮಗೌರವ, ಪ್ರಾಮಾಣಿಕತೆ ಅವರಲ್ಲಿ ಮನೆಮಾಡಿತ್ತು.

ಡಿವಿಜಿ ಬರೆದ ಮೊದಲ ಪುಸ್ತಕ 'ದಿವಾನ್ ರಂಗಚಾರ್ಲು'. ಆಗ ಅವರ ವಯಸ್ಸು ಇಪ್ಪತ್ತೆರಡು. ಅದು 'ಇಂಡಿಯನ್ ರೆವ್ಯೂ' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು. ಆಗ ಚೀಫ್ ಇಂಜಿನಿಯರಾಗಿದ್ದ ವಿಶ್ವೇಶ್ವರಯ್ಯನವರು ಅದನ್ನು ಓದಿ ತುಂಬ ಮೆಚ್ಚಿಕೊಂಡರು. ಪತ್ರಿಕೆಯ ಸಂಪಾದಕರಿಗೆ ತಮ್ಮ ಮೆಚ್ಚಿಗೆ ತಿಳಿಸಿ ಪತ್ರ ಬರೆದರು. ಮೈಸೂರಿನ ದಿವಾನರಾಗಿದ್ದ ಆನಂದರಾವ್ ಈ ಬರೆಹವನ್ನು ಎಷ್ಟು ಇಷ್ಟಪಟ್ಟರೆಂದರೆ ಅದು ಪುಸ್ತಕವಾಗಿ ಹೊರಬರುತ್ತಿದ್ದಂತೆ ಅದರ ನೂರು ಪ್ರತಿಗಳನ್ನು ಕೊಂಡು ತಮ್ಮ ಸ್ನೇಹಿತರಿಗೆಲ್ಲ ಹಂಚಿದರು. ಆ ಪುಸ್ತಕಕ್ಕೆ ಎಲ್ಲ ಕಡೆಯಿಂದ ಪ್ರಶಂಸೆ ಬಂತು. ಇಪ್ಪತ್ತೆರಡು ವರ್ಷದ ಹುಡುಗ ದಿವಾನರಿಂದ ಹಿಡಿದು ರಾಜ್ಯದ ಮೇಧಾವಿಗಳೆಲ್ಲ ಓದಿ ತಲೆದೂಗುವಂಥ ಪುಸ್ತಕ ಬರೆದುಬಿಟ್ಟಿದ್ದ!

ಡಿವಿಜಿ 'ಕರ್ನಾಟಕ' ಎಂಬ ಇಂಗ್ಲಿಷ್ ಪತ್ರಿಕೆಯೊಂದನ್ನು ಆರಂಭಿಸಿದರು. ಅದು ವಾರಕ್ಕೆ ಎರಡು ಸಲ ಹೊರಬರುವ ಪತ್ರಿಕೆ. ಹೊರಡಿಸಲು ಅನುಮತಿ ನೀಡಬೇಕೆಂದು ಅವರು ಸರ್ಕಾರಕ್ಕೆ ಅರ್ಜಿ ಹಾಕಿಕೊಂಡರು. ಬೆಂಗಳೂರಿನ ಡೆಪ್ಯೂಟಿ ಕಮೀಷನರ್ ಸರ್ಕಾರಕ್ಕೆ ಆ ಬಗ್ಗೆ ರಿಪೋರ್ಟು ಕಳಿಸುವಾಗ ಹೀಗೆ ಬರೆದರು. "ಈ ಪತ್ರಿಕೆ ನಡೆಸಬೇಕೆಂದಿರುವಾತ ಇನ್ನೂ ಹುಡುಗ. ಕೇವಲ ೨೪ ವರ್ಷ ವಯಸ್ಸು. ಟೋಪಿ ಹಾಕಿಕೊಂಡಿದ್ದಾನೆ. ಪತ್ರಿಕೆ ನಡೆಸುವ ಜವಾಬ್ದಾರಿ ಹೊರಲು ಇವನಿಗೆ ಸಾಧ್ಯವಿಲ್ಲ." ಆಗ ದಿವಾನರಾಗಿದ್ದವರು ವಿಶ್ವೇಶ್ವರಯ್ಯ. ಅವರು ಈ ರಿಪೋರ್ಟು ನೋಡಿ ನಕ್ಕುಬಿಟ್ಟರು. ಚಿಕ್ಕ ವಯಸ್ಸಿನವರಾದರೂ ಗುಂಡಪ್ಪ ಅಸಾಧಾರಣ ಸಾಮರ್ಥ್ಯದ ವ್ಯಕ್ತಿ ಅಂತ ಅವರಿಗಾಗಲೇ ಗೊತ್ತಿತ್ತು. ರಿಪೋರ್ಟು ವಿರೋಧವಾಗಿದ್ದರೂ ಅದನ್ನು ಬದಿಗೆ ತಳ್ಳಿ ಡಿವಿಜಿಗೆ ಪತ್ರಿಕೆ ಆರಂಭಿಸಲು ಅವರು ಅನುಮತಿ ಕೊಟ್ಟರು.

ಕರ್ನಾಟಕ ಪತ್ರಿಕೆ ಬಹು ಬೇಗನೆ ಪ್ರಸಿದ್ಧವಾಯಿತು. ಪ್ರಾಮಾಣಿಕ ವರದಿಗೆ, ನಿಷ್ಪಕ್ಷಪಾತ ದೃಷ್ಟಿಗೆ, ನಿರ್ಭೀತಿಗೆ, ಗಂಭೀರ ವರದಿಗೆ ಹೆಸರಾಯಿತು. ದಿವಾನರಿಂದ ಸಾಮಾನ್ಯ ಅಧಿಕಾರಿಯವರೆಗೆ ಅದಕ್ಕೆ ಯಾರ ದಾಕ್ಷಿಣ್ಯವೂ ಇರಲಿಲ್ಲ. ಹಾಗೆಂದು ವೃಥಾಕಾರಣ ವಿರೋಧ ಮಾಡುವಂಥದೂ ಆಗಿರಲಿಲ್ಲ. ಸ್ವತಃ ವಿಶ್ವೇಶ್ವರಯ್ಯನವರು ಅದು ಸರ್ಕಾರದ ಬಗ್ಗೆ ಬರೆಯುವ ವಿಷಯಗಳಿಗೆ ತುಂಬ ಬೆಲೆ ಕೊಡುತ್ತಿದ್ದರು. ಒಮ್ಮೆ "ಏನಪ್ಪಾ, you have become a virulent critic" ಅಂತ ಗುಂಡಪ್ಪನವರನ್ನು ಅವರು ಛೇಡಿಸಿದ್ದು ಉಂಟು.

ಒಮ್ಮೆ ವಿಶ್ವೇಶ್ವರಯ್ಯನವರು ಡಿವಿಜಿಯವರ ಮನೆಗೆ ಹೇಳದೆ ಕೇಳದೆ ಬಂದುಬಿಟ್ಟರು. ದೊಡ್ಡವರು ಬಂದಿದ್ದಾರೆ. ಅವರನ್ನು ತಕ್ಕಂತೆ ನೋಡಿಕೊಳ್ಳಲು

ಬೇಕಾದ ಅನುಕೂಲ ಮನೆಯಲ್ಲಿಲ್ಲ. ಡಿವಿಜಿ ಸಂಕೋಚದಿಂದ ಒಂದು ಹಿಡಿಯಾಗಿ ಹೋದರು. ಇದ್ದ ಒಂದು ಮುರುಕಲು ಕುರ್ಚಿಯಲ್ಲೇ ದಿವಾನರನ್ನು ಕೂರಿಸಿದ್ದಾಯಿತು. ಇದಾದಮೇಲೆ ಮತ್ತೂ ಒಮ್ಮೆ ವಿಶ್ವೇಶ್ವರಯ್ಯನವರು ಅವರಲ್ಲಿಗೆ ಬಂದುಹೋದರು. ಮೂರನೆಯ ಸಲ ಬರುವ ಪ್ರಸ್ತಾಪ ಮಾಡಿದಾಗ ಡಿವಿಜಿ ಅವರು ತಮ್ಮ ಮನೆಗೆ ಬರುವುದು ಬೇಡವೆಂದೂ ಅವರು ಹೇಳಿಕಳಿಸಿದರೆ ತಾವೇ ಅವರಲ್ಲಿಗೆ ಹೋಗುವುದಾಗಿಯೂ ತಿಳಿಸಿದರು. ವಿಶ್ವೇಶ್ವರಯ್ಯನವರು ನಗುತ್ತ "ಏನು ಜನರಪ್ಪಾ ನೀವು ! ಮನೆಗೆ ಬರುತ್ತೇನೆ ಅಂದರೆ ಬೇಡ ಅನ್ನುತ್ತೀರಲ್ಲ" ಎಂದು ಹಾಸ್ಯ ಮಾಡಿದರು. ಡಿವಿಜಿ ಹೇಳಿದರು "ತಪ್ಪು ಭಾವಿಸಬಾರದು. ನೀವು ರಾಜ್ಯಕ್ಕೇ ಹಿರಿಯರು. ತಪಸ್ವಿಗಳಂತೆ ಪರಿಶುದ್ಧರು. ನೀವು ನನ್ನ ಮನೆಗೆ ಬಂದರೆ ಅದು ನನ್ನ ಪುಣ್ಯವಲ್ಲವೆ?" ನನಗೆ ಹೆಮ್ಮೆಯಲ್ಲವೆ? ಆದರೆ ನಿಮ್ಮನ್ನು ಆದರಿಸಲು ನನ್ನಲ್ಲಿ ಏನಿದೆ? ಅಲ್ಲದೆ ನನ್ನ ಮುರುಕಲು ಕುರ್ಚಿ, ಮೇಜು ಕಂಡು ನೀವು ನನ್ನ ಸ್ಥಿತಿಗಾಗಿ ನೋಯುತ್ತೀರಿ. ನನ್ನನ್ನು ಒಳ್ಳೆಯ ಸಂಬಳ ಬರುವ ಕೆಲಸದಲ್ಲಿ ನಿಲ್ಲಿಸಲು ನೀವು ಎಷ್ಟೋ ಪ್ರಯತ್ನಿಸಿದಿರಿ. ನಾನೇ ಮೊಂಡುಬಿದ್ದು ಒಪ್ಪಲಿಲ್ಲ. ಅದೆಲ್ಲ ನೆನಪಾಗಿ ನೀವು ವ್ಯಥೆಪಡುವಂತಾಗುತ್ತದೆ. ಆದ್ದರಿಂದ ಬೇಡ ಅಂದೆ ಅಷ್ಟೆ." ಇದು ಡಿವಿಜಿ ಉದ್ದಕ್ಕೂ ಬಾಳಿಹೋದ ರೀತಿ. ವಿಶ್ವೇಶ್ವರಯ್ಯನವರು ಮತ್ತು ಮಿರ್ಜಾ ಇಸ್ಮಾಯಿಲ್‌ರವರು ತಮ್ಮ ಕೆಲಸ ಮಾಡಿಕೊಟ್ಟುದಕ್ಕಾಗಿ ಡಿವಿಜಿಯವರಿಗೆ ಒತ್ತಾಯ ಮಾಡಿ ಕೊಟ್ಟಿದ್ದ ಎಷ್ಟೋ ಚೆಕ್ಕುಗಳನ್ನೂ ಡಿವಿಜಿ ಬ್ಯಾಂಕಿಗೆ ಕಳಿಸದೆ ಹಾಗೇ ಇಟ್ಟುಬಿಟ್ಟರು. ಅವರಿಗೆ ಮಾಡಿಕೊಟ್ಟ ಕೆಲಸ ನಾಡಿನ ಜನದ ಕೆಲಸ. ಅದಕ್ಕೆ ಹಣ ತೆಗೆದುಕೊಳ್ಳುವುದೆ? ಕೂಡದು ಎಂದು ಅವರ ಅಭಿಪ್ರಾಯವಾಗಿತ್ತು.

ಮುಂದೆ ೧೯೭೦ರಲ್ಲಿ ಕರ್ನಾಟಕದ ಜನತೆ ಡಿವಿಜಿಯವರಿಗೆ ದೊಡ್ಡ ಸನ್ಮಾನ ಏರ್ಪಡಿಸಿ ಒಂದು ಲಕ್ಷ ರೂಪಾಯಿ ಅರ್ಪಿಸಿದಾಗ ಅವರು ಅದನ್ನು ಕೈಯಲ್ಲೂ ಮುಟ್ಟಲಿಲ್ಲ. ಅಲ್ಲೇ ಗೋಖಲೆ ಸಾರ್ವಜನಿಕ ಸಂಸ್ಥೆಗೆ ಒಪ್ಪಿಸಿಬಿಟ್ಟರು. ಅವರಿಗೆ ದೊರೆತ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯ ಹಣವೂ ಅದೇ ದಾರಿ ಹಿಡಿಯಿತು. ರಾಜ್ಯ ಸರ್ಕಾರ ಅವರಿಗೆ ತಿಂಗಳಿಗೆ ೫೦೦ ರೂಪಾಯಿಗಳ ಗೌರವೇತನ ನೀಡುವ ನಿರ್ಧಾರಕ್ಕೆ ಬಂದಾಗ ಅವರು ಆಗಿನ ಮುಖ್ಯ ಕಾರ್ಯದರ್ಶಿ ಜಿ.ವಿ.ಕೆ. ರಾವ್ ಅವರನ್ನು ಮನೆಗೆ ಕರೆಸಿಕೊಂಡು ಹೇಳಿದರು. "ಏನಪ್ಪಾ, ಇದೇನು ಮಾಡ್ತೀದೀಯೆ ನೀನು? ಯಾಕಾಗಿ ನನಗೆ ಹಣ ಕೊಡಲು ಹೊರಟಿದ್ದೀರ? ನನಗೆ ಏನಾಗಿದೆ ಅಂತ? ನೀನು ಅಲ್ಲಿರೋದು ಸರ್ಕಾರದ ಹಣ ಹೀಗೆ ಪೋಲು ಮಾಡೋದಕ್ಕೋ? ಚೆನ್ನಾಯಿತು, ಚೆನ್ನಾಯಿತು. ಇದೆಲ್ಲ ಕೂಡಲೇ ಕೂಡದು"

ಅಂದುಬಿಟ್ಟರು. ಕಡೆಗೂ ಅವರು ಆ ಗೌರವ ಸಂಭಾವನೆಯನ್ನು ಒಪ್ಪಿಕೊಳ್ಳಲೇ ಇಲ್ಲ.

೧೯೩೨ರ ಹೊತ್ತಿಗೆ ಗುಂಡಪ್ಪನವರು ಸಾಹಿತ್ಯ ಕ್ಷೇತ್ರದಲ್ಲಿ ವಿಶೇಷವಾದ ಸಾಧನೆ ಮಾಡಿದ್ದರು. ದಿವಾನ್ ರಂಗಾಚಾರ್ಲು, ಗೋಪಾಲಕೃಷ್ಣ ಗೋಖಲೆ, ಉಮರನ ಒಸಗೆ, ವಸಂತ ಕುಸುಮಾಂಜಲಿ, ನಿವೇದನ ಮೊದಲಾದ ಕೃತಿಗಳನ್ನು ರಚಿಸಿ ಹಿರಿಯ ಬರೆಹಗಾರರೆಂದು ಪ್ರಖ್ಯಾತರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಯಲ್ಲಿ ಸಹ ಶ್ರಮಿಸಿದ್ದರು. ಇದನ್ನೆಲ್ಲ ನೆನೆದು ಕನ್ನಡ ಸಾಹಿತ್ಯ ಪರಿಷತ್ತು ಅವರನ್ನು ೧೯೩೨ರಲ್ಲಿ ಮಡಿಕೇರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿತು.

ಈ ಹಿಂದೆ ಹೇಳಿದ ಪತ್ರಿಕೆಗಳಲ್ಲಿ ದುಡಿದದ್ದೇ ಅಲ್ಲದೆ ಡಿವಿಜಿ 'ಇಂಡಿಯನ್ ರೆವ್ಯೂ ಆಫ್ ರೆವ್ಯೂಸ್' ಎಂಬ ಪತ್ರಿಕೆ ಹೊರಡಿಸಿದರು. 'ಕರ್ನಾಟಕ ಜನಜೀವನ' ಮತ್ತು 'ಅರ್ಥಸಾಧಕ' ಪತ್ರಿಕೆಯನ್ನು ಆರಂಭಿಸಿದರು. ಅವರ 'ವೃತ್ತ ಪತ್ರಿಕೆಗಳು' ಪತ್ರಿಕಾ ವ್ಯವಸಾಯಕ್ಕೆ ಸಂಬಂಧಿಸಿದ ಅನೇಕ ಗಂಭೀರ ವಿಚಾರಗಳನ್ನು ಒಳಗೊಂಡ ಪುಸ್ತಕ. ಡಿವಿಜಿ ಪತ್ರಿಕಾ ಕ್ಷೇತ್ರದಲ್ಲಿ ಸಾಧಿಸಿದ ಮಹತ್ ಕಾರ್ಯಗಳ ಬಗ್ಗೆ ಗೌರವ ಸೂಚಿಸುವ ಸಲುವಾಗಿ ೧೯೨೮ರಲ್ಲಿ ಬಾಗಲಕೋಟೆಯಲ್ಲಿ ನಡೆದ ಪತ್ರಕರ್ತರ ಮೊತ್ತಮೊದಲ ಸಮ್ಮೇಳನಕ್ಕೆ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ಗುಂಡಪ್ಪನವರು ಕನ್ನಡದಲ್ಲಿ ಬರೆದ ಕೃತಿಗಳ ಒಟ್ಟು ಸಂಖ್ಯೆ ಐವತ್ತಕ್ಕೂ ಮೀರಿದೆ. ಕಾವ್ಯ, ಸಾಹಿತ್ಯಮೀಮಾಂಸೆ, ಜೀವನ ಚರಿತ್ರೆ, ಸ್ಮೃತಿಚಿತ್ರ, ಅನುವಾದ, ಧರ್ಮಜಿಜ್ಞಾಸೆ, ಮಕ್ಕಳ ಸಾಹಿತ್ಯ, ರಾಜ್ಯಶಾಸ್ತ್ರ ಹೀಗೆ ಹಲವಾರು ದಿಕ್ಕುಗಳಲ್ಲಿ ಅವರ ಬರೆಹ ಹರಡಿದೆ. ಇಂಗ್ಲಿಷಿನಲ್ಲಿ ಅವರು ಹೊರತಂದ ಕೃತಿಗಳು ಮೂವತ್ತಕ್ಕಿಂತಲೂ ಹೆಚ್ಚಾಗಿವೆ.

ನಿವೇದನ, ವಸಂತ ಕುಸುಮಾಂಜಲಿ, ಕೇತಕೀವನ ಮೊದಲಾದ ಪದ್ಯಗ್ರಂಥಗಳಲ್ಲಿ ಡಿವಿಜಿಯವರ ಅನೇಕ ಉತ್ತಮ ಕವನಗಳು ದೊರೆಯುತ್ತವೆ. 'ಉಮರಗ ಒಸಗೆ' ಎಂಬ ಹೆಸರಿನಲ್ಲಿ ಪರ್ಷಿಯನ್ ಕವಿ ಉಮರ್ ಖಯ್ಯಾಮನ ಅನೇಕ ರುಬಾಯತ್‌ಗಳನ್ನು ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಪುಸ್ತಕಕ್ಕೆ ಅವರು ಬರೆದಿರುವ ವಿಮರ್ಶಾತ್ಮಕವಾದ ದೀರ್ಘ ಮುನ್ನುಡಿ ಆ ಕಾಲಕ್ಕಾಗಲೇ ಗುಂಡಪ್ಪನವರು ರೂಪಿಸಿಕೊಂಡಿದ್ದ ಗಟ್ಟಿಮುಟ್ಟಾದ ಕನ್ನಡಗದ್ಯಕ್ಕೆ ಸಾಕ್ಷಿ. 'ಅಂತಃಪುರ ಗೀತೆಗಳು' ಎಂಬ ಅವರ ಇನ್ನೊಂದು ಕೃತಿ ಹಲವು ಗೀತೆಗಳ ಸಂಗ್ರಹ. ಡಿವಿಜಿಯವರಿಗೆ ಸಂಗೀತದ ಬಗ್ಗೆ ಇದ್ದ ಗಾಢವಾದ ತಿಳಿವಳಿಕೆ ಈ ಕೃತಿಯ

ಮೂಲಕ ವ್ಯಕ್ತವಾಗಿದೆ. ಬೇಲೂರು ಶಿಲಾಬಾಲಿಕೆಯರ ನೃತ್ಯಭಂಗಿಗಳನ್ನೇ ವಸ್ತುವಾಗಿಟ್ಟುಕೊಂಡು ಬರೆದ ಈ ಗೀತೆಗಳು ಸಂಗೀತ ನೃತ್ಯಗಳನ್ನು ಮನಸ್ಸಿನಲ್ಲಿಟ್ಟು ರಚಿಸಿದ ಸಾಹಿತ್ಯವಾಗಿದ್ದು ಈ ಮೂರು ಕಲೆಗಳ ಸಂಗಮದಲ್ಲಿ ತನ್ನ ಸತ್ವವನ್ನು ತೋರಬಲ್ಲ ಕೃತಿಯಾಗಿದೆ.

ಗುಂಡಪ್ಪನವರದು ಪ್ರಧಾನವಾಗಿ ಚಿಂತನಶೀಲ ಮನೋಧರ್ಮ. ಅವರು ರಚಿಸಿದ 'ಜೀವನ ಸೌಂದರ್ಯ ಮತ್ತು ಸಾಹಿತ್ಯ', 'ಸಾಹಿತ್ಯಶಕ್ತಿ' ಎಂಬ ಕೃತಿಗಳು ಸಾಹಿತ್ಯದ ಸ್ವರೂಪವನ್ನು ಕುರಿತು ಅವರು ನಡೆಸಿದ ಗಂಭೀರಚಿಂತನೆಗಳ ಫಲ. 'ಶ್ರೀರಾಮ ಪರೀಕ್ಷಣ' ಮತ್ತು 'ಶ್ರೀಕೃಷ್ಣ ಪರೀಕ್ಷಣ' ಕೃತಿಗಳು ಕೂಡ ಪದ್ಯರೂಪದಲ್ಲಿದ್ದರೂ ಮುಖ್ಯವಾಗಿ ವಿಚಾರಾತ್ಮಕವಾದವು. ರಾಮಾಯಣ, ಭಾರತ, ಭಾಗವತಗಳಂಥ ಕೃತಿಗಳನ್ನು ಓದುವಾಗ ಓದುಗನ ಮನಸ್ಸಿನಲ್ಲಿ ಏಳಬಹುದಾದ ಸಂದೇಹಗಳಿಗೆ ಅಲ್ಲಿಯ ಪಾತ್ರಗಳನ್ನೇ ಬಳಸಿ ಉತ್ತರ ನೀಡಿಸುವ ಪ್ರಯತ್ನ ಇವುಗಳಲ್ಲಿದೆ. ಸತ್ಯ ಮತ್ತು ಸೌಂದರ್ಯ ಈ ಎರಡೂ ಮೌಲ್ಯಗಳು ಹೇಗೆ ಪರಸ್ಪರ ಪೂರಕ ಮತ್ತು ಪೋಷಕ ಎನ್ನುವುದನ್ನು ಸೂಚಿಸುವ 'ಶೃಂಗಾರ ಮಂಗಳಂ' ಕೂಡ ಇನ್ನೊಂದು ಚಿಂತನಶೀಲ ಕೃತಿಯೇ. ಈ ಬಗೆಯ ಪದ್ಯಕೃತಿಗಳಲ್ಲಿ ಡಿವಿಜಿ ಬಳಸುವ ಹಳಗನ್ನಡ ಭಾಷೆ ಮತ್ತು ಛಂದೋರೀತಿಗಳು ಅವುಗಳ ಮೇಲೆ ಅವರಿಗಿದ್ದ ಪ್ರಭುತ್ವವನ್ನು ತೋರಿಸುತ್ತವೆ.

ನೀತಿ, ಸಂಸ್ಕೃತಿ, ಧರ್ಮ ಜಿಜ್ಞಾಸೆಗಳಿಗೆ ಸಂಬಂಧಿಸಿದಂತೆ ಡಿವಿಜಿ ಬರೆದ ಅಮೂಲ್ಯಗ್ರಂಥಗಳಿವೆ. 'ಬಾಳಿಗೊಂದು ನಂಬಿಕೆ', 'ಸಂಸ್ಕೃತಿ', 'ಋತ-ಸತ್ಯ-ಧರ್ಮ', 'ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ ಧರ್ಮಯೋಗ' ಇವುಗಳಲ್ಲಿ ಈಶ್ವರ-ಜೀವ-ಸೃಷ್ಟಿಗಳಿಗೆ ಸಂಬಂಧಿಸಿ ಚಿಂತಿಸಿದ ಬಹಳ ಮೌಲಿಕವಾದ ವಿಚಾರಗಳಿವೆ. 'ಸಂಸ್ಕೃತಿ' ಗ್ರಂಥದಲ್ಲಿ ಆ ಪರಿಕಲ್ಪನೆಯನ್ನು ಕುರಿತ ಶೋಧಕವಾದ ಜಿಜ್ಞಾಸೆ ಇದೆ. ಇಂಥ ಅಮೂರ್ತ ವಿಷಯಗಳನ್ನೂ ಅತ್ಯಂತ ಖಚಿತವಾದ ಮಾತುಗಳಲ್ಲಿ, ತರ್ಕಬದ್ಧವಾಗಿ, ನಿದರ್ಶನಾತ್ಮಕವಾಗಿ ವಿವೇಚಿಸಲಾಗಿದೆ. ಭಗವದ್ಗೀತೆಯನ್ನು ಕುರಿತ ಅವರ 'ಜೀವನ ಧರ್ಮಯೋಗ' ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿತು.

ತಮ್ಮ ಸಂಪರ್ಕಕ್ಕೆ ಬಂದ ವ್ಯಕ್ತಿಗಳನ್ನು, ತಮ್ಮ ಬಾಳಿನಲ್ಲಿ ನಡೆದ ಅನೇಕ ಪ್ರಸಂಗಗಳನ್ನು, ಕೇಳಿದ ಹಲವು ಸಂಗತಿಗಳನ್ನು ಮತ್ತೆ ನೆನಪಿಸಿಕೊಳ್ಳುವ ರೀತಿಯಲ್ಲಿ ಡಿವಿಜಿ 'ಜ್ಞಾಪಕ ಚಿತ್ರಶಾಲೆ' ಎಂಬ ಹೆಸರಿನ ಕೃತಿಶ್ರೇಣಿಯೊಂದನ್ನು ಹೊರತಂದರು. ಅವು ಒಟ್ಟು ಎಂಟು ಸಂಪುಟಗಳಿವೆ. 'ಕಲೋಪಾಸಕರು', 'ಸಾಹಿತ್ಯೋಪಾಸಕರು',

'ಮೈಸೂರಿನ ದಿವಾನರುಗಳು', 'ಹಲವರು ಸಾರ್ವಜನಿಕರು' – ಮೊದಲಾದ ಈ ಸಂಪುಟಗಳು ಘಟನಾತ್ಮಕವಾದ ಆಕರ್ಷಕ ಬರೆಹವಾಗಿವೆ, ನಮ್ಮ ನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ರಚಿಸುವವರಿಗೆ ಇದು ಅಮೂಲ್ಯವಾದ ಮಾಹಿತಿಗಳ ಗಣಿಗಳು.

ಡಿವಿಜಿಯವರ ಬರೆಹಗಳಲ್ಲಿ ಬಹಳ ಮೌಲಿಕವಾಗಿರುತ್ತಲೇ ಅತ್ಯಂತ ಜನಪ್ರೀತಿಯನ್ನೂ ಗಳಿಸಿಕೊಂಡ ಕೃತಿಯೆಂದರೆ 'ಮಂಕುತಿಮ್ಮನ ಕಗ್ಗ.' ಈ ಕೃತಿಯ ಹೆಸರು ತೀರ ವಿನಯದ್ದು; ಒಳಗಿರುವ ನಿಧಿಯನ್ನು ಮರೆಸಲೆಳೆಸುವ ಮುಸುಕು ಹೆಸರು ಅದು. ಅದನ್ನು ಬರೆದ ಮಂಕುತಿಮ್ಮ ಕನ್ನಡದ ಒಬ್ಬ ಜ್ಞಾನಬ್ರಹ್ಮ! ಅವನು ಕಟ್ಟಿದ ಈ ಕಗ್ಗ ಮಧುರ ತತ್ತ್ವೋಕ್ತಿಗಳ ಒಂದು ರತ್ನಸಂಪುಟ.

ನೂರು ಹೂವಿಗೆ ನೂರು ಬಣ್ಣ, ನೂರು ಗಂಧ, ನೂರು ವಿನ್ಯಾಸ, ಆ ಎಲ್ಲದರ ರುಚಿ ಸೇರಿ ತಾನೆ ಮಧುರವಾದ ಜೇನು ಸಿದ್ಧವಾಗುವುದು? ವೇದ, ಉಪನಿಷತ್ತು, ಪುರಾಣ, ಸಾಹಿತ್ಯ, ಇತಿಹಾಸ, ಕಲೆ – ಇಂಥ ಅನೇಕ ನೆಲೆಯ ತಿಳಿವಳಿಕೆ ಕಲೆತು ರೂಪುಗೊಂಡ ಈ ಕಗ್ಗ ಅಂಥ ಹೆಜ್ಜೇನು, ಸಂಸ್ಕೃತದ ಸುಭಾಷಿತ, ಕನ್ನಡದ ಸರ್ವಜ್ಞ ವಚನ – ಈ ಎರಡರ ಸ್ವರೂಪ, ರುಚಿ ಮೇಳೈಸಿ ಮೂಡಿದ ಸುಂದರ ಚಿಂತನೆಗಳ ಚಿನ್ನದ ಗಣಿ ಅದು. ಸುಂದರವಾದ ಉಪಮೆ, ದೃಷ್ಟಾಂತಗಳ ಮೂಲಕ ಅದು ನಮ್ಮ ಮನಸ್ಸಿನೊಳಗೆ ವಿಚಾರವೊಂದನ್ನು ಸೇರಿಸಿಬಿಡುವ ರೀತಿ ಬಹು ಆಕರ್ಷಕವಾದದ್ದು. ನಿದರ್ಶನಕ್ಕಾಗಿ ಒಂದು ಪದ್ಯ ನೋಡಬಹುದು.

ಇಳೆಯಿಂದ ಮೊಳಕೆ ಒಗೆವಂದು ತಮಟೆಗಳಿಲ್ಲ
ಫಲ ಮಾಗುವಂದು ತುತ್ತೂರಿ ದನಿಯಿಲ್ಲ
ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ
ಹೊಲಿ ನಿನ್ನ ತುಟಿಗಳನು – ಮಂಕುತಿಮ್ಮ

ನೆಲದಿಂದ ಮೊಳಕೆ ಮೇಲೇಳುವುದೇನು ಸಾಮಾನ್ಯವೆ? ನಿಜವಾಗಿ ಅದು ಒಂದು ಪವಾಡ. ಆದರೆ ಅದನ್ನು ಯಾರು ತಮಟೆ ಹೊಡೆದು ಲೋಕಕ್ಕೆ ಸಾರಿದರು? ಹೂವು ಮಿಡಿಯಾಗಿ, ಕಾಯಾಗಿ ಕಡೆಗೆ ರಸತುಂಬಿದ ಪಕ್ವ ಫಲವಾಗಿ ಬಿಡುತ್ತದಲ್ಲ, ಅದನ್ನು ಯಾರು ತುತ್ತೂರಿ ಊದಿ ಸುದ್ದಿಮಾಡಿದರು? ಸೂರ್ಯ, ಚಂದ್ರ ಕಾಲಕ್ಕೆ ತಪ್ಪದೆ ಹಾಜರಾಗಿ ಬೆಳಕು ಸುರಿಸುತ್ತಾರಲ್ಲ, ಅವರು ಎಷ್ಟು ಸದ್ದು ಮಾಡಿದರು? ಸಾವಿರ ಅದ್ಭುತ ನಮ್ಮ ಕಣ್ಣೆದುರೇ ಸದ್ದಿಲ್ಲದೆ ಸಾಗುತ್ತಿದೆ. ಆದರೆ ಮನುಷ್ಯ ಮಾತ್ರ ತಾನು ಮಾಡಿದ, ಮಾಡದ ಚೂರುಪಾರನ್ನೂ ಸಹ ಬೊಬ್ಬೆ ಹೊಡೆದು ಲೋಕಕ್ಕೆ ಸಾರುತ್ತಾನೆ. ಅವನಿಗೆ ನಾಚಿಕೆ ಬೇಡವೆ?

ಮನುಷ್ಯ ದಿನ ದಿನಾ ಸ್ವವಿಮರ್ಶೆ ಮಾಡಿಕೊಳ್ಳಬೇಕು. ಜಗತ್ತಿಗೆ ತಾನು ಕೊಟ್ಟಿದ್ದಕ್ಕಿಂತ ಹೆಚ್ಚನ್ನು ಅದರಿಂದ ಪಡೆಯುವ ಹಕ್ಕು ಅವನಿಗಿಲ್ಲ. ಅದನ್ನು ಮಂಕುತಿಮ್ಮ ಎಷ್ಟು ಸೊಗಸಾಗಿ ಹೇಳುತ್ತಾನೆ.

ಅನ್ನವುಣುವಂದು ಕೇಳ್ ಅದನು ಬೇಯಿಸಿದ ನೀರ್
ನಿನ್ನ ದುಡಿಮೆಯ ಬೆವರೊ ಪರರ ಕಣ್ಣೀರೋ
ತಿನ್ನು ನೀಂ ಜಗಕೆ ತಿನಲಿತ್ತನಿತ; ಮಿಕ್ಕೂಟ
ಜೀರ್ಣಿಸದ ಋಣಶೇಷ – ಮಂಕುತಿಮ್ಮ

ಲೋಕವನ್ನು ವಿಪರೀತ ಹಚ್ಚಿಕೊಳ್ಳುವುದಲ್ಲ. ಹಾಗೆಂದು ಕೆಲಸದಲ್ಲಿ ಅನಾಸಕ್ತಿ ತೋರಿಸುವುದೂ ಅಲ್ಲ. ಕೈಗೆ ಎಣ್ಣೆ ಹಚ್ಚಿಕೊಂಡು ಹಲಸಿನ ಹಣ್ಣು ಬಿಡಿಸಿದಂತೆ ಇರಬೇಕು ನಮ್ಮ ಲೋಕ ವ್ಯವಹಾರ. ಅಂಚೆಯವನು ದಿನವೂ ಯಾರು ಯಾರಿಗೋ ಪತ್ರ ಹಂಚುತ್ತಾನೆ. ಯಾವು ಯಾವುದೋ ಸುದ್ದಿ ನೀಡುತ್ತಾನೆ. ಸುಖ – ದುಃಖ, ಭಯ – ಸಂತಸ ಎಲ್ಲ ಹಂಚಿ ನಿರ್ಲಿಪ್ತನಾಗಿ ಹೊರಟುಹೋಗುತ್ತಾನೆ. ಜೀವನದಲ್ಲೂ ಈ ನಿರ್ಲಿಪ್ತತೆಯ ಒಂದು ಅಂಶ ಬೇಕೇ ಬೇಕು. ತಂದೆ – ತಾಯಿ, ಅಣ್ಣ – ತಮ್ಮ, ಹೆಂಡತಿ – ಮಕ್ಕಳು, ಅಳಿಯ – ಗೆಳೆಯ ಇಂಥ ಅನೇಕ ವಿಳಾಸಗಳಿರುವ ಕೇರಿಯಲ್ಲಿ ನಮಗೆ ಕೆಲಸ ಬಿದ್ದಿದೆ. ಅವರಿಗೆಲ್ಲ ಅಳು – ನಗು, ಸಿಟ್ಟು ಸಂತಸಗಳನ್ನು ವಿಧಿ ನಮ್ಮ ಮೂಲಕ ಹಂಚುತ್ತದೆ. ಇದು ಅನಿವಾರ್ಯ. ಆ ಬಗ್ಗೆ ತಲೆ ಕೆಡಿಸಿಕೊಂಡು ರಂಪ ಮಾಡಿಕೊಳ್ಳುವುದಲ್ಲ.

ಡಿವಿಜಿ ಇಂಥ ಪದ್ಯಗಳನ್ನು ಬರಿದೆ ಬರೆಯಲಿಲ್ಲ. ಅವು ತಿಳಿಸುವಂಥ ಬಾಳನ್ನೇ ನಡೆಸಿದರು. ಸ್ವಂತದ್ದನ್ನು ಅಲಕ್ಷಿಸಿದರು. ನಾಡಿಗಾಗಿ ದುಡಿದರು. ಕಷ್ಟಬಂದಾಗ ನಗುನಗುತ್ತ ಎದುರಿಸಿದರು. ಸಾರ್ವಜನಿಕರ ಹಿತಾಸಕ್ತಿಗಾಗಿ ಅವರು ತಮ್ಮನ್ನು ಎಷ್ಟು ತೇದುಕೊಂಡರು ಎನ್ನಲು ಅವರು ಕಟ್ಟಿ ನಿಲ್ಲಿಸಿರುವ ಗೋಖಲೆ ಸಾರ್ವಜನಿಕ ಸಂಸ್ಥೆಯೇ ಒಂದು ಹಿರಿಯ ನಿದರ್ಶನ. ಅವರು ನಡೆಸಿದ ಜೀವನವನ್ನು ನೆನೆಯುವಾಗ ಅವರೇ ಬರೆದ ಕಗ್ಗದ ಪದ್ಯವೊಂದು ನೆನಪಾಗುತ್ತದೆ.

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ.

ಮಂಕುತಿಮ್ಮ

ಹಸ್ತಕ್ಕೆ ಬರೆ ನಕ್ಕೆ ಓದುತ್ತ ಓದುತ್ತ
ಮಸ್ತಕಕ್ಕಿಟ್ಟು ಗಂಭೀರನಾದೆ
ವಿಸ್ತರದ ದರ್ಶನಕ್ಕೆ ತುತ್ತ ತುದಿಯಲಿ ನಿನ್ನ
ಪುಸ್ತಕಕೆ ಕೈಮುಗಿದೆ – ಮಂಕುತಿಮ್ಮ.

– **ಕುವೆಂಪು**

'ಕನ್ನಡದ ಆಸ್ತಿ'

ಅವರು ಅರವತ್ತೈದು ದಾಟಿದ ವೃದ್ಧರು. ಮಾಸ್ತಿಯವರ ಮನೆಬೀದಿಯಲ್ಲೇ ವಾಸವಾಗಿದ್ದವರು. ತಮ್ಮ ನೋವನ್ನು ಹೇಳಿಕೊಳ್ಳಲು ಮಾಸ್ತಿಯವರ ಮನೆಗೆ ಬಂದಿದ್ದರು. ಅವರಿಗೆ ಒಬ್ಬನೇ ಮಗ. ಬಹಳ ಕಾಲದ ಮೇಲೆ ಹುಟ್ಟಿದವನು, ದೇವರು ಕೊಟ್ಟ ವರ ಎಂದು ಭಾವಿಸಿ ಅವನನ್ನು ಬಹಳ ಪ್ರೀತಿಯಿಂದ ಬೆಳೆಸಿ ಚೆನ್ನಾಗಿ ಓದಿಸಿದ್ದರು. ಅವನೂ ಬುದ್ಧಿವಂತ. ತರಗತಿಗಳನ್ನೆಲ್ಲ ಉದ್ದಕ್ಕೂ ರ್‍ಯಾಂಕುಗಳಲ್ಲೇ ದಾಟಿದ್ದ. ಐಎಎಸ್ ಪರೀಕ್ಷೆಯಲ್ಲೂ ಎರಡನೇ ರ್‍ಯಾಂಕು ಗಳಿಸಿ ದೆಹಲಿಯಲ್ಲಿ ಒಳ್ಳೆಯ ಅಧಿಕಾರದಲ್ಲಿದ್ದ. ಮಗನ ಬಗ್ಗೆ ಬಹಳ ಹೆಮ್ಮೆಯಿಂದಿದ್ದ ತಂದೆತಾಯಿಗಳು ಅವನ ಮನೆಯಲ್ಲಿ ನಾಲ್ಕು ದಿನ ಇದ್ದು ಬರೋಣವೆಂದು ಅವನ ಮನೆಗೆ ಹೋದರು. ಹದಿನೈದು ದಿನಗಳಾಗಿರಬಹುದು. ಒಂದು ದಿನ ಅಡಿಗೆ ಮಾಡುತ್ತಿದ್ದ ಸೊಸೆ ಅವರಿಗೆ ಕಿವಿಗೆ ಬೀಳುವಂತೆಯೇ ಹೇಳಿದಳು "ಈ ಮನೆಯಲ್ಲಿ ದುಡಿಯೋರು ಒಬ್ಬರು, ತಿನ್ನೋರು ನಾಲ್ಕು ಜನ. ನಮ್ಮ ಕರ್ಮ. ಎಲ್ಲ ನಾವು ಪಡೆದುಕೊಂಡು ಬಂದದ್ದು."

ಮಾತು ವೃದ್ಧರ ಕಿವಿಯ ಮೇಲೆ ಬಿತ್ತು. ಬಹಳ ನೋವಾಯಿತು. ಎರಡು ದಿನ ಇದ್ದು 'ನಾವಿನ್ನು ಬರುತ್ತೇವಪ್ಪ' ಎಂದು ಮಗ – ಸೊಸೆಗೆ ಹೇಳಿ ವಾಪಸ್ಸು ಬಂದುಬಿಟ್ಟರು. ಇನ್ನು ಆ ಮನೆಯಲ್ಲಿ ಕಾಲಿಡಬಾರದು ಎನ್ನುವಷ್ಟು ಮನಸ್ಸು ರೋಸಿಹೋಗಿತ್ತು. ಮುದುಕರು ಮಾಸ್ತಿಯವರಿಗೆ ಇದನ್ನೆಲ್ಲ ಹೇಳಿ ತಮ್ಮ ದುಃಖ ತೋಡಿಕೊಂಡರು. ನಮ್ಮ ಬದುಕು ಹೀಗಾಯಿತು ಅಷ್ಟು ಪ್ರೀತಿಯಿಂದ ಸಾಕಿದ್ದಕ್ಕೆ ಇದೇ ಪ್ರತಿಫಲಾನೆ? ಹೇಳಿ ಎಂದರು.

ಮಾಸ್ತಿ ಒಂದು ನಿಮಿಷ ಸುಮ್ಮನಿದ್ದು ಮುದುಕರನ್ನು ಕೇಳಿದರು.

"ಒಬ್ಬನೇ ಮಗ ಎಂದಿರಿ ಅಲ್ಲವೆ?"

"ಹೌದು ಹೌದು. ಒಬ್ಬನೇ ಮಗ"

"ಬಹಳ ಮುದ್ದಿನಿಂದ ಬೆಳೆಸಿರಬೇಕು"

"ಅಷ್ಟಲ್ಲದೆ? ನಾನು ಮಲಗಿ ಎದೆ ಮೇಲೆ ನಿಲ್ಲಿಸಿಕೊಂಡರೆ ಕುಣಿಯುತ್ತಿದ್ದ ಎಳೆಗಾಲಿನಿಂದ ಗದ್ದಕ್ಕೆ ಒದ್ದು ಕೇಕೆ ಹಾಕುತ್ತಿದ್ದ

"ಆಮೇಲೆ?"

"ಎಷ್ಟೋ ಕಾಲ ನಾನೇ ಅವನಿಗೆ ಸ್ನಾನ ಮಾಡಿಸುತ್ತಿದ್ದೆ, ಬಟ್ಟೆ ಹಾಕುತ್ತಿದ್ದೆ, ತಿಂಡಿ ತಿನ್ನಿಸುತ್ತಿದ್ದೆ"

"ಭೇಷ್ ಭೇಷ್"

"ಆಫೀಸಿನಿಂದ ಬಂದವನೇ ಜೊತೆಗೆ ಕರೆದುಕೊಂಡು ಪಾರ್ಕು, ದೇವಸ್ಥಾನ ಅಂತ ಸುತ್ತಿಸುತ್ತಿದ್ದೆ."

"ಅದೆಲ್ಲ ನಿಮಗೆ ಬಹಳ ಸುಖ ಸಂತೋಷ ಕೊಟ್ಟಿರಬೇಕು".

"ಖಂಡಿತ. ಆಗ ದಿವಸಗಳೆಲ್ಲ ಗಂಟೆಗಳ ಹಾಗೆ ಜಾರಿಹೋದವು, ಬಿಡಿ."

ಕೂಡಲೆ ಮಾಸ್ತಿ ಹೇಳಿದರು

"ಅಲ್ಲಿಗೆ ಜಮಾ ಖರ್ಚು ಎರಡೂ ಸರಿಯಾಯಿತಲ್ಲ ಯಜಮಾನರೆ? ನೀವು ಕಷ್ಟಪಟ್ಟು ಅವನನ್ನು ಸಾಕಿದ್ದು ನಿಜ. ಹುಡುಗನೂ ನಿಮಗೆ ಅಷ್ಟೇ ಸಂತೋಷ ಕೊಟ್ಟ. ನಿಮಗೆ ಬರಬೇಕಾದ್ದೆಲ್ಲ ಆಗಲೇ ಬಂದು ಹೋಗಿದೆ. ಈಗ ಹೆಂಡತಿ ಅವನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾಳೆ. ಇನ್ನು ಏನಾಗಬೇಕು? ಈಗಲೂ ಅವನ ಜೊತೆ ಇರುವಂತಿದ್ದಿದ್ದರೆ ಅದು ಬೋನಸ್ ಅಷ್ಟೆ. ಅದು ತಪ್ಪಿದ್ದಕ್ಕೆ ಬಹಳ ದುಃಖ ಪಡಬೇಕಾಗಿಲ್ಲ."

ಮುದುಕರಿಗೆ ಮಾಸ್ತಿಯವರ ಮಾತು ಹೌದೆನ್ನಿಸಿತು. ಅವರ ಕಣ್ಣುಗಳು ಬೆಳಗಿದವು. "ನೀವು ಹೇಳೋದು ನಿಜ. ಈಗ ನನಗೆ ಸಮಾಧಾನ ಆಯ್ತು" ಎಂದು ಹೇಳಿ ಮಾಸ್ತಿಯವರಿಗೆ ನಮಸ್ಕಾರ ತಿಳಿಸಿ ಗೆಲುವಾದ ಮನಸ್ಸಿನಿಂದ ಹೊರಟರು.

ಇದು ಮಾಸ್ತಿಯವರು ಜೀವನವನ್ನು ಸ್ವೀಕರಿಸುತ್ತಿದ್ದ ರೀತಿ.

ಮಾಸ್ತಿಯವರಿಗೆ ಜ್ಞಾನಪೀಠ ದೊರೆತ ಸುದ್ದಿ ಬಂದಿತ್ತು. ಅದರ ಸಂತೋಷಾರ್ಥ ರಾಜ್ಯ ಸರ್ಕಾರ ವಿಧಾನಸೌಧದ ಬ್ಯಾಂಕ್ವೆಟ್ ಹಾಲಿನಲ್ಲಿ ಅವರಿಗೆ

ಭಾರೀ ಸನ್ಮಾನ ಏರ್ಪಡಿಸಿತ್ತು. ಮಾಸ್ತಿಯವರು ಅತಿಥಿ. ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಸಮಾರಂಭದ ಅಧ್ಯಕ್ಷರು. ಕಿಕ್ಕಿರಿದ ಸಭೆ.

ಮೊದಲು ಮಾಸ್ತಿಯವರ ಸಾಹಿತ್ಯಸಾಧನೆ ಬಗ್ಗೆ ಮಾತಾಡಿದವರೆಲ್ಲ ಈ ಪ್ರಶಸ್ತಿ ಮಾಸ್ತಿಯಂಥ ಹಿರಿಯರಿಗೆ ಇನ್ನೂ ಮೊದಲೇ ಬರಬೇಕಿತ್ತು ತುಂಬ ತಡವಾಗಿ ಬಂದಿದೆ. ಎಂಬ ಮಾತನ್ನು ತಪ್ಪದೆ ಸೇರಿಸಿದ್ದರು. ಸನ್ಮಾನಕ್ಕೆ ಉತ್ತರಿಸುವಾಗ ಮಾಸ್ತಿ ತುಂಟನಗು ಬೀರುತ್ತಾ ಹೇಳಿದರು:

"ನನಗೆ ಪ್ರಶಸ್ತಿ ತಡವಾಗಿ ಬಂದಿದೆ ಅಂತ ಎಲ್ಲ ಹೇಳಿದರು. ನಿಜ, ತಡವಾಗಿ ಬಂದಿದೆ ಅಂತಲೇ ಇಟ್ಟುಕೊಳ್ಳೋಣ. ಆದರೆ ಅದು ನ್ಯಾಯವಾಗಿಯೇ ಇದೆ. ಮನೆಯಲ್ಲಿ ಏನಾದರೂ ಸಿಹಿಭಕ್ಷ್ಯ ಮಾಡಿದ್ದಾರೆ ಅನ್ನಿ. ಅದನ್ನು ಮೊದಲು ಮಕ್ಕಳಿಗೆ ಕೊಡುತ್ತಾರೋ ಅಥವಾ ದೊಡ್ಡವರಿಗೋ? ಮೊದಲು ಮಕ್ಕಳಿಗೇ ಕೊಡಬೇಕು, ಆಮೇಲೆ ದೊಡ್ಡವರಿಗೆ. ಅದೇ ಸರಿ. ಈ ಪ್ರಶಸ್ತಿ ವಿಷಯವೂ ಹಾಗೇ."

ಇಡೀ ಸಭೆ 'ಹೋ' ಅಂತ ಉದ್ಗಾರಮಾಡಿ ಒಂದು ನಿಮಿಷ ಚಪ್ಪಾಳೆ ಹಾಕಿತು. ಮಾಸ್ತಿಯವರ ವಿವೇಕಕ್ಕೆ, ಎಲ್ಲರನ್ನೂ ನಗಿಸಬಲ್ಲ ಜಾಣವ್ಯಂಗ್ಯಕ್ಕೆ ಇಡೀ ಸಭೆ ಮಾರುಹೋಯಿತು. ಜಾಣ ಮುಖ್ಯಮಂತ್ರಿ ಹೆಗಡೆಯವರಂತೂ ದೊಡ್ಡದಾಗಿ ಬಾಯಿತೆರೆದು ಗಹಗಹಿಸಿ ನಗುತ್ತಿದ್ದರು!

ಬೆಂಗಳೂರು ಬಸವನಗುಡಿಯಲ್ಲಿ ಒಂದು ಕ್ಲಬ್ ಇದೆ. ಮಾಸ್ತಿ ಅದರ ಗೌರವ ಸದಸ್ಯರು. ಕ್ಲಬ್ ಇರುವುದು ಮಾಸ್ತಿಯವರ ಮನೆಗೆ ಮೂರು – ನಾಲ್ಕು ಫರ್ಲಾಂಗು ದೂರದಲ್ಲಿ. ನಿವೃತ್ತರಾದ ಮೇಲೆ ಮಾಸ್ತಿ ದಿನವೂ ಸಂಜೆ ಆರು ಗಂಟೆಗೆ ಸರಿಯಾಗಿ ಅಲ್ಲಿಗೆ ನಡೆದು ಹೋಗಿ, ಸ್ವಲ್ಪ ಹೊತ್ತು ಗೆಳೆಯರ ಜೊತೆ ಇಸ್ಪೀಟ್ ಆಟ ಆಡಿ ಬರುತ್ತಿದ್ದರು. ಹಾಗೆ ಹೋಗುವಾಗ ತಮ್ಮ ಓವರ್‌ಕೋಟಿನ ಜೇಬಿನಲ್ಲಿ ಒಂದಿಷ್ಟು ಚಾಕಲೇಟು ಇಟ್ಟುಕೊಂಡಿರುತ್ತಿದ್ದರು. ಕೇರಿಯ ಬಾಲಕರು ಎದುರಿಗೆ ಸಿಕ್ಕರೆ ಅವರ ಹೆಸರು ಹಿಡಿದು ಕರೆದು ಒಂದೊಂದು ಚಾಕಲೇಟು ಕೊಡುವುದು ಅವರ ಪದ್ಧತಿ.

ಗಾಯಕ ಮೈಸೂರು ಅನಂತಸ್ವಾಮಿ ಸ್ವಲ್ಪಕಾಲ ಆ ಬೀದಿಯಲ್ಲೇ ವಾಸವಾಗಿದ್ದರು. ಅವರ ಅಜ್ಜ ಮೈಸೂರಿನ ಚಿಕ್ಕರಾಮರಾಯರು ರಾಜಾಸ್ಥಾನದ ಹಿರಿಯ ಸಂಗೀತ ವಿದ್ವಾಂಸರಾಗಿದ್ದವರು, ತಾಳಬ್ರಹ್ಮ ಎಂದು ಕರೆಸಿಕೊಂಡಿದ್ದವರು. ಮಾಸ್ತಿಯವರಿಗೆ ಪರಿಚಿತರು.

ಒಂದು ದಿನ ಮಾಸ್ತಿ ಕ್ಲಬ್ಬಿಗೆ ಹೋಗುತ್ತಿದ್ದಾರೆ, ಅನಂತಸ್ವಾಮಿಯವರ ಏಳು ವರ್ಷದ ಮಗ ರಾಜು ಎದುರಿಗೆ ಬಂದ. ಮಾಸ್ತಿ "ಏ ರಾಜು, ಚಿಕ್ಕರಾಮರಾಯರ ಮರಿಮಗ ಅಲ್ಲವೇನೋ ನೀನು? ಬಾ ಇಲ್ಲಿ, ತಕೋ ಈ ಚಾಕಲೇಟು" ಅಂತ ಹೇಳಿ ಅವನಿಗೆ ಚಾಕಲೇಟು ಕೊಟ್ಟರು, ನನಗೆ ಆಶ್ಚರ್ಯವಾಯಿತು. ಎಂದೋ ತೀರಿಹೋಗಿದ್ದ ತಮ್ಮ ಸ್ನೇಹಿತರನ್ನು ಅವರ ಮರಿಮಗನ ನೆಪದಲ್ಲಿ ನೆನಪಿಗೆ ತಂದುಕೊಳ್ಳುತ್ತಾರಲ್ಲ ಈ ವ್ಯಕ್ತಿ, ಎಷ್ಟು ಸಂಸ್ಕೃತಿವಂತರು ಎನ್ನಿಸಿತು.

ವರ್ತಮಾನದ ಸಂಗತಿಗಳಲ್ಲಿ ಪರಂಪರೆಯ ಬೇರುಗಳನ್ನು ಶೋಧಿಸುವ ದೃಷ್ಟಿ ಮಾಸ್ತಿಯವರ ಕಥೆಗಳಲ್ಲಿ ಇರುವುದನ್ನು ವಿಮರ್ಶಕರೆಲ್ಲ ತೋರಿಸಿಕೊಟ್ಟಿದ್ದಾರೆ. ಆ ಗುಣ ಅವರ ಕಥೆಗಳಲ್ಲಿ ಮಾತ್ರವಲ್ಲ, ದಿನದಿನದ ನಡತೆಯಲ್ಲೂ ಇದೆ ಎನ್ನಿಸಿತು.

ಕಷ್ಟದಲ್ಲಿರುವ ಕನ್ನಡ ಲೇಖಕರಿಗೆ ಸಹಾಯ ನೀಡುವ ಸಲುವಾಗಿ ಮಾಸ್ತಿಯವರು ಒಂದು ಲೇಖಕನಿಧಿ ಮಾಡಿದ್ದರು. ಅದರಲ್ಲಿದ್ದ ಹಣವೆಲ್ಲ ಅವರೊಬ್ಬರದೇ. ಅವರ ಸಂಪಾದನೆಯಲ್ಲಿ ಮಿಗಿಸಿದ್ದು, ತೊಂದರೆಯಲ್ಲಿದ್ದ ಎಷ್ಟೋ ಜನ ಲೇಖಕರಿಗೆ ಅದರಿಂದ ನೆರವು ಸಿಕ್ಕಿತು ಅಂಥ ಲೇಖಕರನ್ನು ಮಾಸ್ತಿ ಹುಡುಕಿ ಹಣ ಕೊಟ್ಟದ್ದುಂಟು.

ಗ್ರಂಥಸ್ಥ ಗಾದೆಗಳು ಎಂಬ ಬೃಹತ್ ಪುಸ್ತಕವೊಂದನ್ನು ಪ್ರಕಟಿಸಿದ್ದ ಅಚ್ಚಪ್ಪ ಎಂಬ ಲೇಖಕರು ತುಂಬ ಕಷ್ಟದಲ್ಲಿದ್ದುದನ್ನು ಲೇಖಕ ಸಿಪಿಕೆಯವರು ತಮ್ಮೊಂದು ಪುಸ್ತಕದಲ್ಲಿ ಪ್ರಸ್ತಾಪಿಸಿದ್ದರು. ಅದು ಮಾಸ್ತಿಯವರ ಕಣ್ಣಿಗೆ ಬಿತ್ತು. ಅಚ್ಚಪ್ಪ ಮೈಸೂರಿನಲ್ಲಿದ್ದವರು. ಮಾಸ್ತಿಯವರಿಗೆ ಅವರ ಪರಿಚಯವೇನೂ ಇರಲಿಲ್ಲ. ಆದರೆ ಮಾಸ್ತಿ ಅವರ ವಿಳಾಸವನ್ನು ಹೇಗೋ ಪತ್ತೆ ಮಾಡಿದರು. ಒಂದು ದಿನ ಅಚ್ಚಪ್ಪನವರಿಗೆ ಇದ್ದಕ್ಕಿದಂತೆ ಒಂದಿಷ್ಟು ಹಣ ಬಂತು. ಬಂದದ್ದು ಮಾಸ್ತಿಯವರಿಂದ. ಹಣದ ಜೊತೆಗೆ ಒಂದು ಪತ್ರ. ಪತ್ರದ ಒಕ್ಕಣೆಯಲ್ಲಿ ಸಹಾಯಮಾಡುವ ಧಾಟಿಯೇ ಇರಲಿಲ್ಲ. ಜೊತೆಲೇಖಕರೊಬ್ಬರ ನೆರವಿಗೆ ಬರುವ ಅವಕಾಶ ದೊರೆತು ತಮಗೇ ಉಪಕಾರವಾಗಿದೆ ಎಂಬಂತೆ ಇತ್ತು ಆ ಬರೆಹ! ಅದರ ಜೊತೆಗೆ ನಾಲ್ಕು ಸಾಂತ್ವನದ ಮಾತು. ತಮ್ಮ ಹೆಸರು ಕೂಡ ಗೊತ್ತಿಲ್ಲದಿರಬಹುದಾದ ಅಷ್ಟು ದೊಡ್ಡ ಲೇಖಕರಿಂದ ಬಂದ ಸಹಾಯ ನೋಡಿ ಅಚ್ಚಪ್ಪನವರಿಗೆ ತೀರದ ಆಶ್ಚರ್ಯ. ಜೊತೆಲೇಖಕರ ನೆರವಿಗೆ ಹೀಗೆ ಧಾವಿಸುತ್ತಿದ್ದ ಇನ್ನೊಬ್ಬ ಹಿರಿಯ ಲೇಖಕರೆಂದರೆ ಶಿವರಾಮ ಕಾರಂತ. ಅವರು ತಮ್ಮ ಹೆಸರನ್ನು ಕೂಡ ತಿಳಿಸದೆ ಹಣ ಕಳಿಸಿಬಿಡುತ್ತಿದ್ದರು! ಕವಿ ಅಡಿಗರಿಗೆ ಒಮ್ಮೆ ಕಾರಂತರಿಂದ ಇಂಥ (ಹೆಸರು ತಿಳಿಸದೆ ನೀಡುವ) ನೆರವು

ಬಂದಿತ್ತು. ಅದು ಕಾರಂತರಿಂದ ಬಂದದ್ದು ಎನ್ನುವುದನ್ನು ಅಡಿಗರು ಮುಂದೆ ಹೇಗೋ ಪತ್ತೆ ಮಾಡಿಕೊಳ್ಳುವುದಾಯಿತು.

ಮಾಸ್ತಿಯವರನ್ನು ಜನ ಕನ್ನಡದ ಆಸ್ತಿ ಎಂದೇ ಕರೆದರು. ಅಷ್ಟು ಎತ್ತರದ ಸಾಹಿತಿ ಅವರು. ಅವರ ಬರಹ ಬೆರಗುಗೊಳಿಸುವಷ್ಟು ವೈವಿಧ್ಯಮಯವಾಗಿದೆ. ಕಾವ್ಯ, ಕಾದಂಬರಿ, ಕಥನ ಕವನ, ವಿಮರ್ಶೆ, ಗದ್ಯನಾಟಕ, ಪದ್ಯನಾಟಕ, ಮಹಾಕಾವ್ಯ, ಜೀವನಚರಿತ್ರೆ, ಅನುವಾದ, ಜನಪದ ಸಾಹಿತ್ಯ, ಪತ್ರಿಕಾ ಸಂಪಾದಕೀಯ ಹೀಗೆ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಅವರು ಹುಲುಸಾಗಿ ಬರೆದಿದ್ದರೂ ನಾಡು ಅವರ ಪ್ರಧಾನ ಮಾಧ್ಯಮವಾಗಿ ಗುರುತಿಸಿರುವುದು ಸಣ್ಣ ಕಥೆಯನ್ನೇ. ಆಧುನಿಕ ಕನ್ನಡ ಸಾಹಿತ್ಯದ ಆರಂಭವನ್ನು ಗುರುತಿಸುವ ಶ್ರೀಯವರ ಇಂಗ್ಲಿಷ್ ಗೀತೆಗಳು ಬರುವ ಮೊದಲೇ, ೧೯೨೦ರಲ್ಲಿಯೇ ಮಾಸ್ತಿ ತಮ್ಮ ಮೊದಲ ಕಥಾಸಂಗ್ರಹವನ್ನು ಪ್ರಕಟಿಸಿದ್ದರು. ಅವರಿಗಿಂತ ಮುಂಚೆಯೇ ಕೆರೂರು ವಾಸುದೇವಾಚಾರ್ಯ, ಎಂ. ಎಸ್. ಕಾಮತ್ ಮತ್ತು ಪಂಜೆಯವರು ಈ ಬಗೆಯ ಬರೆಹ ಪ್ರಕಟಿಸಿದ್ದರೂ ಅದಕ್ಕೆ ಒಂದು ನಿರ್ದಿಷ್ಟ ಆಕಾರ, ರೂಪ ಕೊಟ್ಟು ಅದನ್ನು ಒಂದು ಸಾಹಿತ್ಯಪ್ರಕಾರವಾಗಿ ರೂಪಿಸಿದವರು ಮಾಸ್ತಿಯವರೇ. ಹಾಗೆಂದೇ ಅವರು ಸಣ್ಣ ಕತೆಗಳ ಜನಕ ಎಂದು ಕರೆಸಿಕೊಂಡರು.

ಅವರ ಸಣ್ಣ ಕತೆಗಳನ್ನು ಅವು ಬಂದ ಹೊಸದರಲ್ಲಿ ಆಡಿಕೊಂಡವರೂ ಇದ್ದರು. ಅವು ಸಣ್ಣಕಥೆಗಳಲ್ಲ, ಸಣ್ಣ ಕತ್ತೆಗಳು ಎಂದು ಗೇಲಿ ಮಾಡಿದವರೂ ಇದ್ದರು (ಹೊಸ ರೀತಿಯ ಬರೆಹ ಬಂದಾಗಲೆಲ್ಲ ಮೊದಲಲ್ಲಿ ಇಂಥ ಟೀಕೆಗಳು ಬರುವುದು ಸಾಮಾನ್ಯ. ಶ್ರೀಯವರ ಹೊಸ ಶೈಲಿಯ 'ಇಂಗ್ಲಿಷ್ ಗೀತಗಳು' ಪ್ರಕಟವಾದಾಗಲೂ ಇದೆಲ್ಲ ಎಂಥ ಕವಿತೆ ಎಂಬ ಉಪೇಕ್ಷೆಯ ಮಾತು ಎದ್ದಿತ್ತು. ಅಡಿಗರ ನವ್ಯಕಾವ್ಯದ ಮೊದಲ ಸಂಗ್ರಹ ಚಂಡೆಮದ್ದಳೆ ಹೊರಬಂದಾಗಲೂ ಇಂಥದೇ ಅನಾದರದ ಮಾತು ಸಿಡಿದಿತ್ತು. ಆರಂಭದಲ್ಲಿಯೇ ಹೊಸಬರೆಹದ ಹಿರಿಮೆಯನ್ನು ಗುರುತಿಸಬಲ್ಲ ಜನ ಬಹಳ ಕಡಿಮೆ) ಆದರೆ ಮಾಸ್ತಿ ಅಂಥ ನಿಂದೆಗೆ ಜಗ್ಗಲಿಲ್ಲ. ತಾವು ಬರೆಯುತ್ತಿರುವುದು ಮೌಲಿಕವಾದ ಸಾಹಿತ್ಯ ಎಂದು ಅವರ ಮನಸ್ಸಿಗೆ ದೃಢವಾಗಿತ್ತು. ಮುಂದೆ ಇದು ಗೆದ್ದೇ ಗೆಲ್ಲುತ್ತದೆ ಎಂಬ ನಂಬಿಕೆಯೂ ಇತ್ತು. ನಿಂದಕರ ಮಾತಿಗೆ ವಿನಯವಾಗಿಯೇ ಉತ್ತರಿಸುತ್ತ ತಮ್ಮ ಬರೆಹವನ್ನು ಕೆಚ್ಚಿನಿಂದ ಮುಂದುವರಿಸಿದರು. ಇತರ ಬರೆಹಗಳ ಜೊತೆಗೆ ಹದಿನೈದು ಸಣ್ಣ ಕಥಾ ಸಂಗ್ರಹಗಳನ್ನು ಪ್ರಕಟಿಸಿದರು: ಕನ್ನಡದ ಶ್ರೇಷ್ಠ ಬರೆಹಗಾರರಲ್ಲಿ ಒಬ್ಬರಾದರು. ಜಗತ್ತಿನ ಸಾಹಿತ್ಯದಲ್ಲಿ ಸಣ್ಣ ಕಥೆಯನ್ನು ಮುಖ್ಯಮಾಧ್ಯಮವಾಗಿ ಮಾಡಿಕೊಂಡು ದೊಡ್ಡ ಸಾಧನೆ ಮಾಡಿ ಮೇಜರ್ ಬರಹಗಾರರಾದ ಕೆಲವೇ ಸಾಹಿತಿಗಳಲ್ಲಿ ಮಾಸ್ತಿ ಒಬ್ಬರು ಎಂದು ಗಣ್ಯ ವಿಮರ್ಶಕರೇ ಅವರನ್ನು ಪ್ರಶಂಸಿಸಿದರು.

ಮಾಸ್ತಿಯವರ ಕಥನಶಕ್ತಿ ದೊಡ್ಡದಾಗಿ ಬೆಳಗಿದ್ದು ಅವರು ತೀರ ಹೊಸದರಲ್ಲಿ ಬರೆದ ಸುಬ್ಬಣ್ಣ ಎಂಬ ನೀಳ್ಗತೆಯಿಂದ. ನಾಡಿಗೆ ನಾಡೇ ಅದನ್ನು ಮೆಚ್ಚಿ ಹೊಗಳಿತು. ಇದೂ ಸೇರಿ ಮಾಸ್ತಿಯವರ ಕಥೆಗಳೆಲ್ಲ ನಮ್ಮ ಪರಂಪರೆಯ ಮೌಲ್ಯಗಳನ್ನು ಗುರುತಿಸುವ, ಶೋಧಿಸುವ, ಅದರ ಘನತೆಯನ್ನು ಎತ್ತಿ ಹಿಡಿಯುವ ಕತೆಗಳು. ಇಷ್ಟಾದರೂ ಅವು ಹಲವು ಸಲ ಸಮಾಜದ ಕಟ್ಟುಪಾಡುಗಳನ್ನೂ ಬದಿಗಿಟ್ಟು ಮಾನವೀಯ ನಡತೆಯನ್ನು ಗೌರವಿಸುವಂಥವು. 'ವೆಂಕಟಿಗನ ಹೆಂಡತಿ' ಇದಕ್ಕೆ ಒಂದು ನಿದರ್ಶನ. ಆಕೆ ಒಡವೆ ವಸ್ತ್ರಗಳ ಆಸೆಗಾಗಿ ಗಂಡನನ್ನು ಬಿಟ್ಟು ಒಬ್ಬ ಶ್ರೀಮಂತ ಕಂಟ್ರಾಕ್ಟರನ ಬೆನ್ನುಹತ್ತಿ ಹೋಗಿ ಕೆಲಕಾಲ ಅವನ ಜೊತೆ ಇದ್ದು ಒಂದು ಮಗುವನ್ನೂ ಪಡೆಯುತ್ತಾಳೆ. ಮುಂದೆ ಆತ ತನ್ನನ್ನು ತಿರಸ್ಕರಿಸಿ ಹೊರನೂಕಿದಾಗ ಕಂಗಾಲಾಗಿ, ಮತ್ತೆ ಗಂಡನ ಬಳಿ ಬರುತ್ತಾಳೆ. ತಾನು ಪಟ್ಟಪಾಡನ್ನು ತೋಡಿಕೊಂಡು ತನ್ನ ನಡತೆಗೆ ಪಶ್ಚಾತ್ತಾಪಪಡುತ್ತಾಳೆ. ತಾಯಿ ಅತ್ತೆಯರೇ ಬೇಡವೆಂದು ತಡೆದರೂ ವೆಂಕಟಿಗ ಅವಳನ್ನು ಪ್ರೀತಿಯಿಂದ ಆದರಿಸಿ, ತನ್ನದಲ್ಲದ ಮಗುವಿನ ಸಹಿತ ಅವಳನ್ನು ಮನೆಗೆ ಸೇರಿಸಿಕೊಳ್ಳುತ್ತಾನೆ. ಸೌದೆ ಮಾಡಿ ಜೀವಿಸುವ, ಕೆಳನೆಲೆಯ ವೆಂಕಟಿಗನ ನಡತೆಯ ಔನ್ನತ್ಯಕ್ಕೆ ಅವನ ಕಥೆ ಕೇಳುತ್ತಿರುವ ಮೇಲುಜಾತಿಯ ಬ್ರಾಹ್ಮಣನೇ ಬೆರಗಾಗುತ್ತಾನೆ.

ಒಂದು ಹಳೆಯ ಕತೆ, ವೆಂಕಟಶಾಮಿಯ ಪ್ರಣಯ, ಮಂತ್ರೋದಯ, ಮೊಸರಿನ ಮಂಗಮ್ಮ, ಜೋಗ್ಯೋರ ಅಂಜಪ್ಪನ ಕೋಳೀಕತೆ, ಗೌತಮಿ ಹೇಳಿದ ಕತೆ, ಹೇಮಕೂಟದಿಂದ ಬಂದಮೇಲೆ – ಇಂಥ ಅನೇಕ ಅರ್ಥಗರ್ಭಿತ ಕಥೆಗಳನ್ನು ಮಾಸ್ತಿ ನೀಡಿದ್ದಾರೆ. ಅವರ ಕಥೆಗಳಲ್ಲಿ ಮಿತಿಗಳಿಲ್ಲವೆಂದಲ್ಲ. "ಆದರೆ ಎಲ್ಲ ಕಥೆಗಳಲ್ಲಿ ಅವರ ಆಸಕ್ತಿ ಇರುವುದು ಮನುಷ್ಯ ಸ್ವಭಾವದ ಒಳ್ಳೆತನ, ಸೌಂದರ್ಯ ಮತ್ತು ಉದಾತ್ತತೆಗಳಲ್ಲಿ. ಅವರ ಒಳಗಣ್ಣು ಇದನ್ನು ಸುತ್ತಮುತ್ತ ಸಮೃದ್ಧಿಯಾಗಿ ಕಂಡಿತು. ಈ ಗುಣಗಳನ್ನು ಅವರು ಆಶ್ರಮಗಳಲ್ಲಿ ಕಂಡರು, ಅರಮನೆಗಳಲ್ಲಿ ಕಂಡರು, ಗುಡಿಸಲುಗಳಲ್ಲಿ ಕಂಡರು." ಅವರು ದುಷ್ಟತನ ಮತ್ತು ಸಣ್ಣತನಗಳನ್ನು ಕಾಣಲೇ ಇಲ್ಲವೆಂದಲ್ಲ. ನಿಜಗಲ್ಲಿನ ರಾಣಿ, ವೆಂಕಟಿಗನ ಹೆಂಡತಿ, ಪುತ್ರಕಾಮೇಷ್ಟಿಯಂತಹ ಕಥೆಗಳಲ್ಲೆಲ್ಲ ಅವರು ಮನುಷ್ಯನಲ್ಲಿರುವ ದುಷ್ಟತನ ಮತ್ತು ಕ್ಷುಲ್ಲಕತನಗಳನ್ನು, ಇತರರಿಗೆ ಕೇಡುಮಾಡಿ ಸಂತೋಷಪಡುವ ಕೆಟ್ಟತನವನ್ನು, ನಾಚಿಕೆಗೆಟ್ಟ ಘಟಿಂಗತನವನ್ನು ಗುರುತಿಸಿದರು. ಆದರೆ ಸಾಮಾನ್ಯವಾಗಿ ಅವರು ಮನುಷ್ಯನ ಕಷ್ಟಗಳ ಕಾರಣವನ್ನು ಅಜ್ಞಾನದಲ್ಲಿ ಕಂಡರು. ಮನುಷ್ಯನಲ್ಲಿ ದೌರ್ಬಲ್ಯವಿರುವುದು ಸಹಜ. ಅವನು ತನ್ನ ತಪ್ಪನ್ನು ಕಂಡುಕೊಂಡು, ಅದನ್ನು ನೀಗಿಕೊಂಡು ಉತ್ತಮ ನೆಲೆಗೆ ಏರಬೇಕು. ಅದು ಅವನಿಗೆ ಸಾಧ್ಯ. ಇದು ಅವರ ಎಲ್ಲ ಸಾಹಿತ್ಯದ ತಿರುಳು.

ಯಶೋಧರಾ ನಾಟಕದಲ್ಲಿ ಬುದ್ಧ ಹೇಳುವ ಮಾತೇ ಅದು. "ಒಳಗೆ ಬೆಳಗುವ ಬೆಳಕ ಸರಿಪಡಿಸಿಕೊಳಬೇಕು."

ಮಾಸ್ತಿಯವರ ಮೊದಲ ಕಾದಂಬರಿ 'ಚನ್ನಬಸವ ನಾಯಕ' ಓದಿದವರಿಗೆ ಅವರು ಇಷ್ಟು ವ್ಯಾಪಕ ಶಕ್ತಿಯುಳ್ಳ ವಸ್ತುವೊಂದನ್ನು ಆಯ್ದುಕೊಂಡು ಮನುಷ್ಯನ ನೋವು ನಲಿವು ಆಸೆ ಆಕಾಂಕ್ಷೆ ಕೆಚ್ಚು ನಿಷ್ಠೆಗಳನ್ನು ಬಳಸಿ ಇಂಥ ದೊಡ್ಡ ಕಥಾಜಾಲವೊಂದನ್ನು ನಿರ್ಮಿಸಿದ್ದು ಬೆರಗೆನಿಸುವಂತೆ ತೋರುತ್ತದೆ. ಐತಿಹಾಸಿಕ ವಸ್ತುವನ್ನೇ ಬಳಸಿದ್ದರೂ ಅವರ 'ಚಿಕವೀರರಾಜೇಂದ್ರ' ಎಂಬ ಇನ್ನೊಂದು ಕಾದಂಬರಿ ಒಂದು ರಾಜಕೀಯ ಕಾದಂಬರಿಯೂ ಆಗಿ ರೂಪುಗೊಂಡಿದೆ. ಬಗೆಬಗೆ ಸ್ವಭಾವ ರುಚಿಗಳಿಂದ ಕೂಡಿದ ನೂರಾರು ಪಾತ್ರಗಳು ಈ ಕಾದಂಬರಿಗಳ ಉದ್ದಕ್ಕೂ ವಿಶಿಷ್ಟ ನಡಿಗೆಗಳಲ್ಲಿ ಓಡಿಯಾಡಿ ಅವನ್ನು ಒಂದು ಸಂಕ್ಷಿಪ್ತ ಮಾನವ ಪ್ರಪಂಚವಾಗಿ ಮಾಡುತ್ತವೆ. ಇದನ್ನು ನೋಡಿದಾಗ ಮಾಸ್ತಿಯವರಿಗೆ ಮನುಷ್ಯ ಸ್ವಭಾವದ ಸೂಕ್ಷ್ಮಗಳ ಎಷ್ಟು ಗಾಢವಾದ ಪರಿಚಯವಿದೆ ಎನ್ನಿಸಿ ಅಚ್ಚರಿಯಾಗುತ್ತದೆ. ಹಾಗೆಯೇ ಮಾನವನ ಪ್ರಯತ್ನ ಸಾಹಸಗಳು ಏನೇ ಇರಲಿ, ಅವನಿಗೆ ಮೀರಿದ ಶಕ್ತಿಯೊಂದು ಬಾಳಿನಲ್ಲಿ ತಲೆಹಾಕಿ ಕೆಲವು ಸಲ ಅವನನ್ನು ಎಷ್ಟು ನಿರುಪಾಯನನ್ನಾಗಿ ಮಾಡಿಬಿಡುತ್ತದೆ ಎನ್ನುವುದೂ ಇಲ್ಲಿ ಕಾಣುತ್ತದೆ. ಈ ಎರಡು ಕಾದಂಬರಿಗಳೂ ಕನ್ನಡ ಕಥಾಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಗಳು.

ಮಾಸ್ತಿ 'ಯಶೋಧರಾ'ದಂಥ ಸೊಗಸಾದ ಪದ್ಯನಾಟಕ ಬರೆದಿದ್ದಾರೆ. ಮೇಲುನೋಟಕ್ಕೆ ಸುಖಾಂತವಾಗಿ ಕಂಡರೂ ದುರಂತದ ಬೀಜವನ್ನು ತನ್ನೊಳಗಿಟ್ಟುಕೊಂಡು ಮುಗಿಯುವ ಕಾಕನಕೋಟೆಯಂಥ ಶ್ರೇಷ್ಠ ಗದ್ಯನಾಟಕ ಬರೆದಿದ್ದಾರೆ ಇಂಗ್ಲಿಷ್ ಕವಿ ಚಾಸರನ 'ಕ್ಯಾಂಟರ್ ಬರಿ ಟೇಲ್ಸ್' ಕೃತಿಯ ತಂತ್ರವನ್ನು ಇನ್ನೂ ಉತ್ತಮವೆನಿಸುವಂತೆ ಅಳವಡಿಸಿಕೊಂಡು 'ನವರಾತ್ರಿ' ಎಂಬ ಕಥನ ಕವನಗಳ ಸಂಗ್ರಹವನ್ನು ಹೊರತಂದಿದ್ದಾರೆ. ದಸರಾ ಉತ್ಸವಕ್ಕೆಂದು ಬಂದಿದ್ದ (ಕುವೆಂಪು, ಬೇಂದ್ರೆ, ಪಂಜೆ ಮೊದಲಾದ ಕನ್ನಡ) ಲೇಖಕರೆಲ್ಲ ಒಂದೇ ಕಡೆ ಇರುತ್ತ ಒಬ್ಬೊಬ್ಬರು ಒಂದೊಂದು ದಿನ ಒಂದೊಂದು ಕಥೆ ಹೇಳಿದಂತೆ ಇದರ ತಂತ್ರವಿದೆ. ಕೆ. ಎಸ್. ನರಸಿಂಹಸ್ವಾಮಿ ಇದರಲ್ಲಿ ಬರುವ 'ಸೋಜಿಗದ ಹೊಳಲು' ಎಂಬ ಕಥನಕವನದ ಅದ್ಭುತತೆಯನ್ನು ಲೇಖನವೊಂದರಲ್ಲಿ ಸೊಗಸಾಗಿ ನಿರೂಪಿಸಿದ್ದಾರೆ.

ಮಾಸ್ತಿಯವರ ವಿಮರ್ಶಾ ಬರೆಹಗಳಲ್ಲಿ ಕಾಣುವ ಸರಳತೆ ಅವರಿಗೇ ವಿಶಿಷ್ಟವಾದದ್ದು. ಸರಳ ಎಂದು ಅದು ಎಲ್ಲಿಯೂ ಶಕ್ತಿಹೀನವಾದದ್ದಲ್ಲ. ಎಂಥೆಂಥ

ವಿಶೇಷ ಅಂಶಗಳನ್ನು ಯಾವ ಪರಿಭಾಷೆಯನ್ನೂ ಬಳಸದೆ ಎಷ್ಟು ಸುಲಭವಾಗಿ ಅವರು ಹೇಳಬಲ್ಲರು ಎನ್ನುವುದಕ್ಕೆ ಅವರ 'ಆದಿಕವಿ ವಾಲ್ಮೀಕಿ' 'ಭಾರತತೀರ್ಥ'ಗಳಂಥ ವಿಮರ್ಶಾ ಕೃತಿಗಳು ಸಾಕ್ಷಿ. ಕಾದಂಬರಿಯೆಂಬಂತೆ ವಾಚನೀಯವಾಗಿ ಹರಿಯುವ ಈ ಬರೆಹಗಳು ಆ ಕೃತಿಗಳನ್ನು ಕುರಿತ ಅನೇಕ ಒಳನೋಟಗಳ ಗಣಿಗಳಾಗಿವೆ.

'ಭಾವ' ಎಂಬ ಶೀರ್ಷಿಕೆಯಲ್ಲಿ ಮಾಸ್ತಿ ಬರೆದಿರುವ ಆತ್ಮಚರಿತೆಯ ಮೂರು ಸಂಪುಟಗಳು ಅವರ ಜೀವನ ಕುರಿತ ಅನೇಕ ಮಹತ್ವದ ಘಟನೆಗಳನ್ನು ಲೇಖಕರ ವಿಶಿಷ್ಟ ವ್ಯಾಖ್ಯಾನದೊಡನೆ ದಾಖಲಿಸುತ್ತವೆ. ಅದರಲ್ಲಿಯೆ ಬರುವ ಒಂದು ಪ್ರಸಂಗ ಇದು.

ಜಯಚಾಮರಾಜ ಒಡೆಯರು ಆಳುತ್ತಿದ್ದ ದಿನಗಳಲ್ಲಿ ಮಾಸ್ತಿಯವರಿಗೆ ಸರ್ಕಾರ ರಾಜಸೇವಾ ಪ್ರಸಕ್ತ ಬಿರುದು ನೀಡಿತು. ತಮಗೆ ಮಾಡಿದ ಮನ್ನಣೆಗೆ ಸಂತೋಷಪಟ್ಟ ಮಾಸ್ತಿ ಮಹಾರಾಜರಿಗೆ ಕೃತಜ್ಞತೆ ತಿಳಿಸಲು ಹೋದರು. ಆಗ ಮಹಾರಾಜರು "ನೀವು ನಿಮ್ಮ ಅಮರವಾದ ಕೃತಿಗಳಿಂದ ನಾಡಿನ ಭಾಷೆಯನ್ನೂ ಸಾಹಿತ್ಯವನ್ನೂ ಶ್ರೀಮಂತಗೊಳಿಸಿದ್ದೀರಿ. ನೂರಾರು ವರ್ಷಗಳ ನಂತರ, ನಾನೂ ಉಳಿದವರೂ ಜನರ ನೆನಪಿನಿಂದ ಮರೆಯಾಗಿ ಹೋದಾಗ ನೀವು ಮತ್ತು ನಿಮ್ಮ ಕೃತಿಗಳು ಜನರ ನೆನಪಿನಲ್ಲಿ ಉಳಿಯುತ್ತೀರಿ" ಎಂದರಂತೆ.

ಇದನ್ನು ಹೇಳುವಷ್ಟು ತಿಳಿವಳಿಕೆಯಿದ್ದ ಸರ್ಕಾರವೇ ಮಾಸ್ತಿಯವರಿಗೆ ದೊಡ್ಡ ಅನ್ಯಾಯಮಾಡಿತು. ತಮ್ಮ ಸೀನಿಯಾರಿಟಿ ಮತ್ತು ಅರ್ಹತೆಗಳಿಂದ ಮಾಸ್ತಿ ದಿವಾನರಾಗಬೇಕಾಗಿದ್ದ ಸಂದರ್ಭದಲ್ಲಿ ಅವರನ್ನು ಬಿಟ್ಟು ಬೇರೆಯವರನ್ನು ಆ ಸ್ಥಾನಕ್ಕೆ ಆಯ್ಕೆ ಮಾಡಿತು. ಮಾಸ್ತಿ ಸಿವಿಲ್ ಸರ್ವಿಸ್‌ನ ತಮ್ಮ ಅಧಿಕಾರಾವಧಿಯಲ್ಲಿ ತುಂಬ ನ್ಯಾಯವಾಗಿ, ಕಟ್ಟುನಿಟ್ಟಾಗಿ ನಡೆದುಕೊಂಡಿದ್ದರು. ದೊಡ್ಡ ಅಧಿಕಾರದಲ್ಲಿದ್ದವರು ಮಾಡಿದ ಶಿಫಾರಸುಗಳನ್ನು ಸಹ, ಅವು ನ್ಯಾಯವಿರುದ್ಧವಾಗಿದ್ದಾಗ ನಮ್ರವಾಗಿಯೇ ನಿರಾಕರಿಸಿದ್ದರು. ತಮ್ಮ ಈ ಋಜುಜೀವನಕ್ಕೆ ಸತ್ಯವಂತಿಕೆಗೆ ಮಾಸ್ತಿ ದಿವಾನ ಪದವಿ ಕಳೆದುಕೊಳ್ಳಬೇಕಾಯಿತೆಂದು ಕಾಣುತ್ತದೆ.

ತಮ್ಮ ಜೀವನ ಪತ್ರಿಕೆಯನ್ನು ಮಾಸ್ತಿ ಇಪ್ಪತ್ತೊಂದು ವರ್ಷ ನಡೆಸಿದರು. ಸಮಕಾಲೀನ ರಾಷ್ಟ್ರರಾಜಕೀಯವೂ ಸೇರಿದಂತೆ ನೂರಾರು ಸಂಪಾದಕೀಯಗಳನ್ನು ಆ ಪತ್ರಿಕೆಗೆ ಬರೆದರು. ಈ ಸಂಪಾದಕೀಯವು ಪತ್ರಿಕೆಯ ಬಹುಮುಖ್ಯವಾದ, ಆಕರ್ಷಕವಾದ ಬರೆಹವಾಗಿರುತ್ತಿತ್ತು. ಒಮ್ಮೆ ಒಂದು ಸಂಚಿಕೆಯಲ್ಲಿ ಅದು ಪ್ರಕಟವಾಗದಿದ್ದಾಗ ಓದುಗರೊಬ್ಬರು ಅದಕ್ಕೆ ಪ್ರತಿಕ್ರಿಯೆ ಸೂಚಿಸುತ್ತ "ಈ ಸಲದ ಸಂಚಿಕೆ ತಿಲಕವನ್ನು ಇಟ್ಟುಕೊಳ್ಳಲು ಮರೆತ ಸ್ತ್ರೀಯ ಮುಖದಂತೆ ಇತ್ತು" ಎಂದು

ಬರೆದರು. ಮಾಸ್ತಿ ತಮ್ಮ ಸಂಪಾದಕೀಯಗಳನ್ನು ಲೋಕಜೀವನ, ರಾಷ್ಟ್ರಜೀವನ, ಕರ್ನಾಟಕ ಜೀವನ ಎಂದು ಮೂರು ಬಗೆಯಾಗಿ ವಿಂಗಡಿಸಿದ್ದಾರೆ. ಅವರು ಆಯ್ದು ಪ್ರಕಟಿಸಿದ ಇಂಥ ಲೇಖನಗಳ ಪುಟಸಂಖ್ಯೆ ೨೪೫೦. ಜೀವನ ಪತ್ರಿಕೆಯಲ್ಲಿ ತಮ್ಮ ಬರೆಹಗಳನ್ನು ಪ್ರಕಟಿಸಿ ಬೆಳಕಿಗೆ ಬಂದ ಎಷ್ಟೋ ಲೇಖಕರಿದ್ದಾರೆ. ಅವರಲ್ಲಿ ಕೆ. ಎಸ್. ನರಸಿಂಹಸ್ವಾಮಿ, ರಾಮಚಂದ್ರಶರ್ಮ. ಜಿ. ಎಸ್. ಶಿವರುದ್ರಪ್ಪ, ಬಾಗಲೋಡಿ ದೇವರಾಯರಂಥ ಪ್ರಸಿದ್ಧ ಲೇಖಕರೂ ಸೇರುತ್ತಾರೆ.

ತೊಂಬತ್ತಾರು ವರ್ಷ ಸಾರ್ಥಕ ಜೀವನ ಬಾಳಿ ಮಾಸ್ತಿ 'ದೇಹನ್ಯಾಸ' ಮಾಡಿದರು. ಆ ದಿನ ಮಾಸ್ತಿಯವರ ಮನೆಯ ಮುಂದೆ ಜನವೋ ಜನ. ನಾನೂ ಅಲ್ಲಿದ್ದೆ. ಅದೇ ದಿನ ಅದೇ ಹೊತ್ತಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಎಂ.ಎ. ವಿದ್ಯಾರ್ಥಿಗಳಿಗೆ ಪರೀಕ್ಷೆ. ಆ ದಿನದ ಪತ್ರಿಕೆ 'ವಿಶೇಷ ಸಾಹಿತಿ – ಮಾಸ್ತಿ'. ಇಲ್ಲಿ ಪಾರ್ಥಿವ ಶರೀರದ ಅಂತ್ಯಯಾತ್ರೆ ಆರಂಭವಾಗಿತ್ತು. ಅಲ್ಲಿ ವಿದ್ಯಾರ್ಥಿಗಳು ಮಾಸ್ತಿಯವರ ಸಾಹಿತ್ಯದ ಬಗ್ಗೆ ಅಧ್ಯಯನ ಮಾಡಿ ಉತ್ತರ ಬರೆಯತೊಡಗಿದ್ದರು!

●

ಮಾಸ್ತಿ

೧

ಸದಾ ಇವರು ಹೀಗೆಯೇ–
ಇಲ್ಲೆ, ಗಾಂಧಿಬಜಾರಿನ ಹಿರಿಚೌಕದೆದುರಲ್ಲೆ
ಸಿಗರೇಟು ಸೇದುತ್ತಲೊ ಪತ್ರಿಕೆಯನೋದುತ್ತಲೊ
ಹರಟುತ್ತಲೊ ಇದ್ದಾಗ, ಎದುರಾಗುವರು ಇದ್ದಕಿದ್ದಂತೆ
–ನಿರ್ದಿಷ್ಟ ಸಮಯದಂತೆ.

ವಯಸು ಅನುಭವ ಹೂಡಿ ಸುಖದುಃಖ ಬೆಳೆದ ಮುಖ
ಹಿಂದೊಮ್ಮೆ ನೆಲೆಸಿದ್ದ ಬೆಳಕ ಕನವರಿಸುತಿಹ ಮಂದಗಣ್ಣು;
ಸಾಂತ್ವನವ ನುಡಿದಿರುವ ಹಳೆನಮೂನೆಯ ಚಶ್ಮ;
ಅದೇ ಕೊಡೆಯ ಗದೆ:
ಬೆದರಿಸಲು ಭಿಕ್ಷುಕರ ಹುಡುಗರನ್ನ,
ಬೀದಿಕುನ್ನಿಯ, ಪೋಲಿದನಗಳನ್ನ,
ಎದುರಿಸಲು ಮಳೆ ಬಿಸಿಲ ದಾಳಿಯನ್ನ,
ಸಾಲುಮರಗಳ ಹಕ್ಕಿಹಿಕ್ಕೆಯನ್ನ.
ಇವರು ನನ್ನೆದುರಲ್ಲಿ ಹಾದು ಹೋದಾಗೆಲ್ಲ
ಹಳ್ಳಿಗಾಡಿನ ಕಡೆಯ ಸುಪ್ರಸನ್ನತೆಯೊಂದು ನಗರಕ್ಕೆ ಸಂದಂತೆ,
ಬೆಳಗಾಗ ಛಳಿಯಲ್ಲಿ ಬಿಸಿನೀರು ಮಿಂದಂತೆ–
ಎದೆ ಸ್ವಚ್ಛಗೊಳ್ಳುತ್ತದೆ; ಹಗುರಕ್ಕೆ ಸಲ್ಲುತ್ತದೆ.

೨

ಗವೀಪುರದಿಂದ ಗಾಂಧಿಬಜಾರಿನ ಕೊನೆಗೆ
ಪ್ರಕೃತಿಯ ಕರೆಯಂತೆ ಎಳೆಯುವುದು ಕ್ಲಬ್ಬು.
ಅಲ್ಲಿ ಕಾಯುತ್ತಾರೆ ಕಿಟ್ಟಿ ಗುಂಡೂ ಸುಬ್ಬು–
ಹೊಚ್ಚ ಹೊಸ ಯೌವನದ ರಂಗುಗಳ ಗುಂಗುಗಳ,
ಫ್ಯಾಷನ್ನು ಪಹರೆಗಳ, ಕಸಿಹಣ್ಣು ಚಹರೆಗಳ

ವರ್ತಮಾನದ ನಟ್ಟನಡುವಿನಲ್ಲಿ,
ಹುಚ್ಚು ಹುರುಪಿನ ನೂಕು ನುಗ್ಗುಲಲ್ಲಿ–
ಅಚ್ಚುಕಟ್ಟಿನ ಹಾಗೆ,
೪೦ ಮಾದರಿಯ ಬೆಂಗಳೂರಿನ ಹಾಗೆ,
ಕಾಲ ಕುಗ್ಗಿಸಿದೊಡಲು ಕಾಲನೆಳೆಯುತ ಬರಲು
ಈ ವೃದ್ಧರನು ಕಂಡು 'ಅಯ್ಯೋ' ಎಂದಿದ್ದೇನೆ;
ಎನ್ನುತ್ತಿರುವಂತೆಯೇ ಕೈಯ ಮುಗಿದಿದ್ದೇನೆ.
ರಸ್ತೆ ಹಿರಿದಾಗಿ ಫುಟ್‌ಪಾತು ಕಿರಿದಾಗಿ
ಓಡಾಟ ಹೆಚ್ಚಾಗಿ, ನೆಮ್ಮದಿಯೆ ಪೆಚ್ಚಾಗಿ,
ಲೋಕ ಕಂಪ್ಯೂಟರಿನ ಸ್ವಚ್ಛ ತಂತಿಗಳಂತೆ ಸಂದಿಗ್ಧವಾಗಿ,
ಬೆಲೆಗಳೆಲ್ಲ ಬಿದ್ದು ಹರಡಿ ದಿಕ್ಕಾಪಾಲು–
ಎಸೆಯುತಿವೆ ಪ್ರತಿಕ್ಷಣವು ಸರಳ ವೃದ್ಧಾಪ್ಯಕ್ಕೆ ಹಿರಿ ಸವಾಲು.

೩

ಕ್ಲಬ್ಬಿನಲಿ ನಿಶ್ಚಿಂತೆಯಾಗಿ ಎಲೆ ಕಲಸುವುದು
ಇಪ್ಪತ್ತೆಂಟನಾಡುವುದು – ನಡುವೆ ಅದೂ ಇದೂ
ಇಪ್ಪತ್ತೆಂಟನಾಡುವುದು :
ನಂಬರೆರಡರ ಬಸ್ಸಿನೆದುರು ಬಾಳೆಯ ಸಿಪ್ಪೆ
ಟೈಲರನ ಎಡಗಾಲನುಳುಕಿಸಿದ್ದು;
ರಾತ್ರಿ ಪುರಭವನದಲಿ ಸಂಗೀತ ಸಾಮ್ರಾಜ್ಞಿ
ಶಂಕರಾಭರಣದಲ್ಲಿ ಪುಳಕಿಸಿದ್ದು;
ಅಬ್ದುಲನ ಹೈಕೋರ್ಟು ರಿಟ್ಟು ವಜಾ ಆದದ್ದು;
ಖೋಟಾ ನೋಟ್ ಕೃಷ್ಣನಿಗೆ ಕಠಿಣ ಸಜ ಆದದ್ದು;
ಬದರಿ ನಾದಿನಿಗೊಬ್ಬ ಒಳ್ಳೆ ವರ ಸಿಕ್ಕಿದ್ದು;
ರಷ್ಯ ಚೀನಾ ಕ್ಯೂಬ ಅಮೇರಿಕ ವಾರ್ತೆ ಮಿಕ್ಕಿದ್ದು–
ಅದೂ ಇದೂ ಇಪ್ಪತ್ತೆಂಟನಾಡುವುದು.
ನಡುವೆ ತಪ್ಪಾಡಿದರೆ ಎದುರಾಳಿಯಲ್ಲೊಬ್ಬ,
ಮನೆಯ ಕಿರಿಸೊಸೆಯಂತೆ ಮುಖವನೂದಿಸಿ ಬೀಗಿ
ಗೊಣಗುವುದು: Let us play the game for game's sake.

ಇನ್ನಿವರ ಜೀವನ? ಅದು ಕೂಡ ಹೀಗೆಯೇ, ಎಲ್ಲ ಖುಲ್ಲ;
ಖುಷಿಗಷ್ಟೆ ನಫೆಗಲ್ಲ.
ಗಂಟೆಗಟ್ಟಲೆ ಕಲಸಿದರು ಕೈ
ಬಂದರಿಪ್ಪತ್ತು ಹೋದರಿಪ್ಪತ್ತು ನ.ಪೈ.,
-ಕೂಗು ಹುಸಿಮುನಿಸುಗಳ ನಡುವೆ ತುಟಿಗಳ ಮೊಗ್ಗೆ
ಬಿರಿಸಿ ನಕ್ಕಾಗಿವರು ಥೇಟ್ ಜುಲೈ ತಿಂಗಳಿನ ಶಿವಮೊಗ್ಗೆ:
ಚಣಕ್ಕಷ್ಟು ಚಳಿನೂಲು, ಒಂದಿಷ್ಟು ಹೂಬಿಸಿಲು;
ಹೊರಗೆ ಕಚಪಿಚ ಕೆಸರು, ಒಳಗೆ ಬೆಚ್ಚನೆ ಸೂರು.

೪

ಹೊತ್ತಾಯಿತೆ? ಆವರಿಸಿತೇ ಮಬ್ಬು ?
ಕೊಡೆ ತೆರೆದು ಏಕಾಕಿ ಮನೆಯತ್ತ ನಡೆಯುವರು ಮರೆತು
ಕ್ಲಬ್ಬು.
ಗಾಂಧಿಬಜಾರೀಗ ತಿಳಿಯಾಗಿ ಫರ್ಲಾಂಗು ಬೆಳಕ ಹಬ್ಬ-
ಚೌಕದೆಡೆ ಆಗೀಗ ಪ್ರತಿಪಕ್ಷದವನೊಬ್ಬ
ಎಲುಬಿರದ ನಾಲಗೆಯ ನಾಚು ನಡೆಸುತ್ತಿರಲು,
ಸರ್ಕಾರದ ಸಫಲತೆಯ ಹುಣ್ಣ ನೊಣ - ಸುತ್ತಿರಲು,
ದೀಪಗಳ ಝುಗಮಗದಿ ಕಣ್ಸೋತು ನಿಂತಿರಲು
ಮನೆಮಠವೆ ಮರೆತಿರುವ ಮಂದಿಸಂತೆ-
ಬೊಬ್ಬೆ ಅಬ್ಬರದೆದುರು ಗುರುತುಹತ್ತದ ಹಾಗೆ
ಕಾಲಿಗೊತ್ತಿದ ಗಾಜ ಚೂರ ದೂರಕೆ ಎಸೆದು
ಸಾಗುವರು ಸದ್ದಿರದೆ ಚಂದ್ರನಂತೆ;
ಗಂಭೀರವಾಗಿ
ಕರ್ತವ್ಯದೆಚ್ಚರಿನ ಸನ್ನೆಯಂತೆ.
ನೋಡುತ್ತಲಿದ್ದಂತೆ
ಹೋಟಲಿನ ಬದಿಯಲ್ಲಿ ಬೀದಿ ತಿರುಗನು ಹೊಕ್ಕು
ಮರೆಯಾಗುವರು ಮಾಸ್ತಿ-
ಸಂದ ಜೀವನದೊಂದು ರೀತಿಯಂತೆ,
ಸರಳ ಸದಭಿರುಚಿಯ ಖ್ಯಾತಿಯಂತೆ.

- ಕೆ. ಎಸ್. ನಿಸಾರ್ ಅಹಮದ್

ಪಾಂಡಿತ್ಯಲೋಕದ ಹಿರಿಯ ವಿಸ್ಮಯ
ಪಿ. ವಿ. ಕಾಣೆ

ಕೇವಲ ತಮ್ಮ ವಿದ್ವತ್ತಿಗಾಗಿಯೇ ಭಾರತರತ್ನದಂಥ ಅತ್ಯುಚ್ಚ ರಾಷ್ಟ್ರ ಪ್ರಶಸ್ತಿ ಸಂಪಾದಿಸಿದ ಮಹಾಮಹೋಪಾಧ್ಯಾಯ ಪಾಂಡುರಂಗ ವಾಮನ ಕಾಣೆ ಪ್ರಕಾಂಡ ಪಾಂಡಿತ್ಯಕ್ಕೆ ಮತ್ತೊಂದು ಹೆಸರು. ಈ ಶತಮಾನದ ಪ್ರಾಚ್ಯ ವಿದ್ಯಾಪಂಡಿತರಲ್ಲಿ ಈತ ಅಗ್ರಗಣ್ಯ. ಧರ್ಮಶಾಸ್ತ್ರದ ಇತಿಹಾಸಕಾರರಾಗಿ ಭಾರತೀಯ ಶಾಸ್ತ್ರದ (Indoogy) ಚರಿತ್ರೆಯಲ್ಲಿ ಅಮರವಾಗಿ ಉಳಿಯುವ ಈ ಭಾರತರತ್ನ ಸುಮಾರು ಎಂಟು ಸಾವಿರ ಪುಟಗಳಿಗೂ ಮೀರಿದ ಅಮೂಲ್ಯ ಬರಹವನ್ನು ಪ್ರಕಟಿಸಿದ ಧೀಮಂತ ಚೇತನ. ಇಂಥ ಮೇಧಾವಿ ತಮ್ಮ ತೊಂಬತ್ತೆರಡನೆಯ ವಯಸ್ಸಿನಲ್ಲಿ ತೀರಿಕೊಂಡಾಗ ಸಾರಸ್ವತ ಲೋಕದ ಒಂದು ಕಳೆಯೇ ಜಾರಿದಂತಾಯಿತು.

ಕಾಣೆ ಹುಟ್ಟಿದ್ದು ೧೮೮೦ರಲ್ಲಿ, ರತ್ನಗಿರಿ ಜಿಲ್ಲೆಯಲ್ಲಿ. ರತ್ನಗಿರಿ ಜಿಲ್ಲೆಯ ನೀರು ಗಾಳಿಗಳಲ್ಲಿ ಅದೇನು ಗುಣವಿದೆಯೋ! ರಾನಡೆ, ಗೋಖಲೆ, ತಿಲಕರಂಥ ಅತಿರಥ ಮಹಾರಥರನ್ನೆಲ್ಲ ಹಡೆದ ನೆಲ ಅದು. ಕಾಣೆಯವರದು ಅಪ್ಪಟ ವೈದಿಕ ಕುಟುಂಬ. ಸಾಲದ್ದಕ್ಕೆ ತಂದೆ ವಾಮನ ಕಾಣೆ ಸ್ವತಃ ಸಂಸ್ಕೃತದ ಗರಡಿಯಲ್ಲಿ ಸಾಕಷ್ಟು ತಾಲೀಮು ನಡೆಸಿದವರು. ಋಗ್ವೇದ, ಉಪನಿಷತ್ತುಗಳ ಬಹುಭಾಗ ಅವರಿಗೆ ಮುಖಗತವಾಗಿ ಹೋಗಿತ್ತು. ಇಂಥ ಅಪ್ಪ ಚಿಕ್ಕವಯಸ್ಸಿನಿಂದಲೇ ಮಗನನ್ನು ಅಮರಕೋಶ, ವೇದ ಶಾಸ್ತ್ರಗಳ ಪಾಠದಲ್ಲಿ ಅರೆದರು. ಹನ್ನೆರಡನೆಯ ವಯಸ್ಸಿಗೆ ಹುಡುಗ ಅಮರಕೋಶದ ನಾನೂರು ಶ್ಲೋಕಗಳನ್ನು ಬಾಯಲ್ಲಿ ಹೇಳುತ್ತಿದ್ದ! ಅಪ್ಪ ಎರೆದ ಸಂಸ್ಕೃತವನ್ನೆಲ್ಲ ಕುಡಿಕುಡಿದಂತೆ ಜೀರ್ಣಿಸಿಕೊಂಡ ಮಗ ಮುಂದೆ ಮುಂಬಯಿಗೆ ಓದಲು ಹೋದಾಗ ಸಂಸ್ಕೃತದಲ್ಲಿ ಅಸಮಾನ ಎನಿಸಿಕೊಂಡುಬಿಟ್ಟ.

ಕಾಣೆಯಂಥ ಪ್ರತಿಭಾವಂತ ವಿದ್ಯಾರ್ಥಿಗೆ ಕಾಲೇಜುಪಾಠ ಕೇವಲ ನೆಪ ಎಂಬಂತಿತ್ತು. ಒಮ್ಮೆ ಪುಣೆ, ಮುಂಬಯಿಗಳಲ್ಲಿ ಪ್ಲೇಗು ಜೋರಾಗಿ ಹರಡಿ ಹಿರಿಯರ ಒತ್ತಾಯದಂತೆ ಕಾಣೆ ಕಾಲೇಜಿಗೆ ಹೋಗದೆ ಊರಿನಲ್ಲೇ ಉಳಿಯಬೇಕಾಯಿತು. ಕಾಣೆ ಮನೆಯಲ್ಲೇ ಸ್ವಂತ ವ್ಯಾಸಂಗ ನಡೆಸಿದರು. ಕಾಲೇಜಿಗೆ ಬರಲಾಗದ್ದಕ್ಕೆ ಕಾರಣ ತಿಳಿಸಿ ಪರೀಕ್ಷೆಗೆ ಕೂರಲು ಯೂನಿವರ್ಸಿಟಿಯಿಂದ ಅನುಮತಿ ಪಡೆದರು. ಆ ವರ್ಷ ಪರೀಕ್ಷೆಯಲ್ಲಿ ಅತ್ಯುತ್ತಮವಾಗಿ ಪಾಸು ಮಾಡಿದ್ದಲ್ಲದೆ ಒಂದು ಸ್ಕಾಲರ್‌ಷಿಪ್ ಮತ್ತು ಬಹುಮಾನ ಕೂಡ ಗಿಟ್ಟಿಸಿದರು. ಅಲ್ಲಿಂದ ಮುಂದೆ ಕಾಣೆ ಹೆಜ್ಜೆ ಹೆಜ್ಜೆಗೂ ಅಂಥ ಅನೇಕ ಶಿಷ್ಯವೃತ್ತಿಗಳನ್ನೂ, ಬಹುಮಾನಗಳನ್ನೂ ಗೆಲ್ಲುತ್ತ ನಡೆದರು. ಬಿ.ಎ.ಯಲ್ಲಿ ಭಾವೂದಾಜಿ ಬಹುಮಾನ, ಎಂ.ಎ.ನಲ್ಲಿ ಜಲವೇದಾಂತ ಪುರಸ್ಕಾರ, ಅಲಂಕಾರಶಾಸ್ತ್ರದ ಇತಿಹಾಸ ಎಂಬ ಸುದೀರ್ಘ ಪ್ರಬಂಧಕ್ಕೆ ಮಾಂಡಲಿಕ್ ಸ್ವರ್ಣಪದಕ ಗಳಿಸಿದರು. ವಿಲ್ಸನ್ ಕಾಲೇಜಿನಲ್ಲಿ ಸ್ವಲ್ಪಕಾಲ ದಕ್ಷಿಣಾಫೆಲೋ ಕೂಡ ಆಗಿದ್ದರು. ಮುಂದೆ ಎಲ್ಫಿನ್‌ಸ್ಟನ್ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ ಸೇರಿದರು.

ಕಾಣೆ ಶ್ರೀಮಂತ ಕುಟುಂಬದಿಂದ ಬಂದವರಲ್ಲ, ಅಥವಾ ಮುಟ್ಟಿದ್ದೆಲ್ಲ ಚಿನ್ನವಾಗುವ ಯೋಗದವರೂ ಅಲ್ಲ. ಎಂಥೆಂಥ ವಿದ್ವಾಂಸರನ್ನೋ ಅಡ್ಡಡ್ಡ ನುಂಗುವ ಸಾಮರ್ಥ್ಯವಿದ್ದ ಈ ದೈತ್ಯ ಪಂಡಿತನಿಗೆ ಅಪೇಕ್ಷೆಪಟ್ಟು ಅರ್ಜಿ ಹಾಕಿದರೂ ಎಲ್ಫಿನ್‌ಸ್ಟನ್ ಕಾಲೇಜಿನ ಒಂದು ಅಸಿಸ್ಟೆಂಟ್ ಪ್ರೊಫೆಸರ್ ಕೆಲಸ ಸಿಗಲಿಲ್ಲ. ಅಲ್ಲದೆ ಹುಣ್ಣಿನ ಮೇಲೆ ಬರೆಯೆಳೆದ ಹಾಗೆ ಅವರಿಗೆ ಯಾವುದರಲ್ಲೂ ಸಮನಲ್ಲದ ಒಬ್ಬ ಸಾಮಾನ್ಯ ವ್ಯಕ್ತಿಗೆ (ಅವರು ಮುಖ್ಯ ವಿದ್ಯಾಧಿಕಾರಿಗೆ ಬೇಕಾದವರೆಂಬ ಕಾರಣದಿಂದ) ಆ ಕೆಲಸ ಸಿಕ್ಕಿತು. ಕಾಣೆ ಇದರಿಂದ ಉರಿದೆದ್ದರು. ನೋಡಲು ಸೌಮ್ಯವಾಗಿದ್ದರೂ ಪ್ರಸಂಗ ಬಂದಾಗ ಕಾಣೆ ಉಗ್ರನಿಶ್ಚಯಗಳಿಗೆ ಅಂಟಿಕೊಳ್ಳುತ್ತಿದ್ದ ವ್ಯಕ್ತಿ. ಆ ವಿದ್ಯಾಧಿಕಾರಿಗೆ ಕಾಗದ ಬರೆದು ಆಯ್ಕೆ ಬಗ್ಗೆ ಸಮಜಾಯಿಷಿ ಕೇಳಿದರು. ಸಂಸ್ಕೃತದಲ್ಲಿ ಪರಿಣತರಾದವರೊಬ್ಬರ ಅಭಿಪ್ರಾಯ ಪಡೆದು ಹಾಗೆ ಮಾಡಿದ್ದುದಾಗಿ ಉತ್ತರ ಬಂತು. ಆ ಪರಿಣತರು ಯಾರು, ಅವರ ಹೆಸರೇನು ಎಂದು ಕೇಳಿದಾಗ ಇದೆಲ್ಲ ಉದ್ಧಟತನದ ಪ್ರಶ್ನೆಗಳೆಂದು ಹೇಳಿ ವಿದ್ಯಾಧಿಕಾರಿ ನುಣುಚಿಕೊಂಡರು. ಈ ಹೀನ ಸಂಚಿನಿಂದ ನೊಂದ ಕಾಣೆ ಹಂಗಿನ ಉದ್ಯೋಗವನ್ನೇ ಬಿಸಾಡಿಬಿಡುವ ನಿಶ್ಚಯ ಮಾಡಿದರು. ಲಾ ಪರೀಕ್ಷೆಗೆ ಕೂತು ಪಾಸು ಮಾಡಿದರು. ಅವರನ್ನು ಒಲಿಸಲೆಂಬಂತೆ ಎಲ್ಫಿನ್‌ಸ್ಟನ್ ಕಾಲೇಜಿಗೆ ಅವರನ್ನು ಹಂಗಾಮಿ ಪ್ರೊಫೆಸರರನ್ನಾಗಿ ನೇಮಿಸಿದರೂ ಕಾಣೆ ಮಣಿಯಲಿಲ್ಲ. ರಾಜೀನಾಮೆ ಕೊಟ್ಟು ವಕೀಲ ವೃತ್ತಿಗೆ ಬಂದರು. ಅದೇ ಕಾಣೆಯವರನ್ನು ಮುಂದೊಂದು ದಿನ ಭಾರತ ಸರ್ಕಾರ ರಾಷ್ಟ್ರೀಯ ಪ್ರಾಧ್ಯಾಪಕರನ್ನಾಗಿ (ನ್ಯಾಷನಲ್ ಪ್ರೊಫೆಸರ್) ಮಾಡಿ ಗೌರವಿಸಿತು!

ಸಕೇಶಿಯ ದೂರು

ಕಾಣೆಯವರಿಗೆ ಬಡವರ ಬಗ್ಗೆ ತುಂಬ ಪ್ರೀತಿ, ಅಭಿಮಾನ. ಎಷ್ಟೋ ಬಡಜನರಿಗೆ ಮತ್ತು ಆರ್ಥಿಕ ಬಲವಿಲ್ಲದ ಸಂಘ ಸಂಸ್ಥೆಗಳಿಗೆ ಅವರು ತಮ್ಮ ಕೈಯಿಂದ ಖರ್ಚುಹಾಕಿ ಕೇಸು ನಡೆಸಿ ಗೆದ್ದುಕೊಟ್ಟಿದ್ದುಂಟು. ಒಮ್ಮೆ ಒಬ್ಬಳು ಬ್ರಾಹ್ಮಣ ವಿಧವೆ ಅವರ ಬಳಿಗೆ ಒಂದು ವಿಚಿತ್ರ ದೂರು ತಂದಳು. ಫಂಡರಪುರದ ದೇವಾಲಯದಲ್ಲಿ ವಿಠೋಬಮೂರ್ತಿಯ ಪಾದಗಳ ಮೇಲೆ ತಲೆಯಿಟ್ಟು ನಮಸ್ಕರಿಸಲು ಬೇರೆ ಎಲ್ಲರಿಗೂ ಪೂಜಾರಿಗಳು ಅವಕಾಶ ಕೊಡುತ್ತಾರೆ. ಸಕೇಶಿ (ಗಂಡ ಸತ್ತರೂ ತಲೆಕೂದಲು ತೆಗೆಸದವಳು) ಎಂಬ ಕಾರಣಕ್ಕೆ ತನಗೆ ಕೊಡುತ್ತಿಲ್ಲ ಎನ್ನುವುದು ಅವಳ ಪುಕಾರು. ಕಾಣೆ ಆ ಕೇಸು ನಡೆಸಲು ಒಪ್ಪಿ ಫಂಡರಪುರಕ್ಕೆ ಮೂರುಸಲ ಹೋಗಿಬಂದರು. ಕೇಸಿನ ಸಲುವಾಗಿ ಅಲ್ಲಿ ಕೆಲವು ದಿನ ಇದ್ದರು. ಕಡೆಗೂ ವಿಧವೆಯ ಪರವಾಗಿ ಕೇಸು ಗೆದ್ದರು. ಆಕೆ ಬಡವಳಾದ್ದರಿಂದ ಕೈಯಿಂದ ಎಲ್ಲ ಖರ್ಚು ಹಾಕಿಕೊಂಡರು. ವಿಧವೆಯೊಬ್ಬಳಿಗೆ ದೇವರ ಪಾದ ಮುಟ್ಟಿಸಲು ಮಾಡಿದ ಈ ಖರ್ಚು, ಶ್ರಮ ಎಲ್ಲವೂ ವ್ಯವಹಾರ ದೃಷ್ಟಿಯಿಂದ ಮುಟ್ಠಾಳತನವಾಗಿ ಕಾಣಬಹುದು. ಆದರೆ ಸಾವಿರ ಜನರೆದುರು ಒಬ್ಬ ಹೆಂಗಸಿನ ಗೌರವ ಎತ್ತಿ ಹಿಡಿದು ಪುಜಾರಿಗಳ ವಿಚಿತ್ರಭೇದ ಖಂಡಿಸಿದ ನಿದರ್ಶನ ಇದು. ಕಾಣೆ ಈ ಕೇಸನ್ನು ತಮ್ಮ ಧರ್ಮಶಾಸ್ತ್ರದ ಇತಿಹಾಸದಲ್ಲಿ ಪ್ರಸ್ತಾಪಿಸಿದ್ದಾರೆ.

ಕಟ್ಟುನಿಟ್ಟಾದ ಆಚಾರವಂತ ಕುಟುಂಬದಲ್ಲಿ ಹುಟ್ಟಿದರೂ ಕಾಣೆ ಅರ್ಥಹೀನ ಆಚಾರಗಳಿಗೆ ವಿರೋಧಿ. ೧೯೨೭ರಲ್ಲಿ ಅವರು ಬ್ರಾಹ್ಮಣಸಭೆಯ ಅಧ್ಯಕ್ಷರಾಗಿದ್ದಾಗ ನಡೆದ ಪ್ರಸಂಗ ಇದಕ್ಕೆ ಸಾಕ್ಷಿ. ಬ್ರಾಹ್ಮಣಸಭೆ ಪ್ರತಿವರ್ಷ ಗಣಪತಿ ಉತ್ಸವ ನಡೆಸುತ್ತಿತ್ತು. ಇಂಥ ಒಂದು ಉತ್ಸವಕ್ಕೆ (ಅಸ್ಪೃಶ್ಯರೆಂದು ಪರಿಗಣಿತರಾಗಿದ್ದ) ಮಹರ್ ಜಾತಿಯ ಜನರ ಒಂದು ಮೇಳ ಬಂತು. ತಾವೂ ಚಪ್ಪರದೊಳಗೆ ಹೋಗಿ ಎಲ್ಲರಂತೆ ಗಣಪತಿಯನ್ನು ನೋಡಬೇಕೆಂದು ಮೇಳದವರು ಕೇಳಿಕೊಂಡರು. ಬ್ರಾಹ್ಮಣ ಸಭೆಯ ಸದಸ್ಯರಲ್ಲಿ ಅರ್ಧ ಜನ ಇದಕ್ಕೆ ಒಪ್ಪಿದರೆ ಇನ್ನರ್ಧ ಜನ ಇದನ್ನು ವಿರೋಧಿಸಿದರು. ಕಾಣೆಯವರ ಮತವೇ ನಿರ್ಣಾಯಕವಾಗಿದ್ದು ಅವರು ಮೇಳದವರ ಪರ ನಿಂತರು. ಇದರಿಂದ ನಗರದ ಬ್ರಾಹ್ಮಣ ಸಮಾಜದಲ್ಲಿ ದೊಡ್ಡ ಹುಯಿಲೆದ್ದಿತು. ಕುಪಿತರಾದ ಕೆಲ ಬ್ರಾಹ್ಮಣರು ಬ್ರಾಹ್ಮಣಸಭೆ ಮತ್ತು ಅದರ ಅಧ್ಯಕ್ಷರ ವಿರುದ್ಧ ಕೋರ್ಟಿಗೆ ಅಪೀಲು ಹೋದರು ಪ್ರಸಂಗ ಬಹಳ ದೂರ ಬೆಳೆದು ಹೊಡೆದಾಟ ಬಡಿದಾಟಗಳವರೆಗೆ ಹೋಗಿತ್ತು. ಕಡೆಗೆ ಅಪೀಲು ಹೋದವರೇ ಅದನ್ನು ವಾಪಸ್ಸು ಪಡೆದರು. ಅಸ್ಪೃಶ್ಯತಾ ನಿವಾರಣೆಯ ಶಾಸನವನ್ನು ಸರ್ಕಾರ ಜಾರಿಗೆ ತಂದದ್ದು

೧೯೫೦ರಲ್ಲಿ. ಆದರೆ ಕಾಣೆ ಅದಕ್ಕೂ ಇಪ್ಪತ್ತು ವರ್ಷ ಮುಂಚೆಯೇ ಅಸ್ಪೃಶ್ಯತೆಯನ್ನು ವಿರೋಧಿಸಿ ನಿಂತಿದ್ದರು.!

ಪ್ರೌಢ ಬರಹಗಳು

ಬಿಡುವಿಲ್ಲದ ತಮ್ಮ ವೃತ್ತಿಯ ನಡುವೆಯೂ ಕಾಣೆ ಸಾಹಿತ್ಯ, ಶಾಸ್ತ್ರಗಳ ವ್ಯಾಸಂಗ – ಲೇಖನ ಬಿಡಲಿಲ್ಲ. ಬಾಣನ ಕಾದಂಬರಿ, ಹರ್ಷಚರಿತ, ಭವಭೂತಿಯ ಉತ್ತರ ರಾಮಚರಿತದಂಥ ಪ್ರಸಿದ್ಧ ಸಾಹಿತ್ಯ ಕೃತಿಗಳನ್ನೇ ಅಲ್ಲದೆ ನೀಲಕಂಠನ 'ವ್ಯವಹಾರ ಮಯೂಖ', ವಿಶ್ವನಾಥನ 'ಸಾಹಿತ್ಯ ದರ್ಪಣ' ದಂಥ ಶಾಸ್ತ್ರಗ್ರಂಥಗಳನ್ನೂ ಸಂಪಾದಿಸಿ, ದೀರ್ಘವಾದ ಮುನ್ನುಡಿ – ಟಿಪ್ಪಣಿಗಳೊಡನೆ ಪ್ರಕಟಿಸಿದ್ದಾರೆ. 'ಭಾರತೀಯ ಕಾವ್ಯ ಮೀಮಾಂಸೆಯ ಚರಿತ್ರೆ' (Histroy of Indian Poetics) ಎಂಬ ಬರೆಹ ಅವರ ವಿದ್ವತ್ತು ಎಂಥ ಮೇಲ್ಮಟ್ಟದ್ದು ಎಂಬುದಕ್ಕೆ ಸಾಕ್ಷಿ. ಇಂಗ್ಲಿಷಿನಂತೆ ಮರಾಠಿಯಲ್ಲೂ ಅವರು ಲೇಖನಗಳನ್ನೂ, ಗ್ರಂಥಗಳನ್ನೂ, ಪ್ರಕಟಿಸಿದ್ದಾರೆ. ಅವರು ಬರೆದಿರುವ ಪುಸ್ತಕ ವಿಮರ್ಶೆಗಳೆಲ್ಲ ಬೆರಗುಗೊಳಿಸುವಷ್ಟು ಪ್ರೌಢಮಟ್ಟದವಾಗಿದ್ದು ಅವುಗಳನ್ನು ಕೇವಲ ಹೆಸರಿಸುವುದಕ್ಕೇ ಅನೇಕ ಪುಟಗಳು ಬೇಕಾಗುತ್ತವೆ.

'ಧರ್ಮಶಾಸ್ತ್ರದ ಇತಿಹಾಸ' (History of Dharmashastra) ಎಂಬ ಬೃಹತ್ ಗ್ರಂಥ ಕಾಣೆಯವರ ಉಳಿದೆಲ್ಲ ಸಾಧನೆಗಳಿಗೆ ಕಿರೀಟಪ್ರಾಯವಾದ ಕೃತಿ; ಒಟ್ಟು ಐದು ಸಂಪುಟಗಳಲ್ಲಿ ಪ್ರಕಟವಾಗಿರುವ ಆರುಸಾವಿರದ ಐನೂರು ಪುಟಗಳ ಅಚ್ಚರಿ ತರಿಸುವ ಬರವಣಿಗೆ. ಇದನ್ನು ಬರೆಯಲು ಅವರು ಮೂವತ್ತೇಳು ವರ್ಷ ದುಡಿದರು. ಚಿಕ್ಕಂದಿನಿಂದ ಬೆನ್ನಂಟಿ ಬಂದಿದ್ದ 'ಡ್ಯೂಡನಲ್ ಅಲ್ಸರ್' ಖಾಯಿಲೆಯೊಡನೆ ಸೆಣಸುತ್ತ ಸಾಹಿತ್ಯ ಚಟುವಟಿಕೆ ಹಾಗೂ ಸಾರ್ವಜನಿಕ ಕಾರ್ಯಗಳನ್ನು ನಿರ್ವಹಿಸುತ್ತ ಕಾಣೆ ಈ ಕೃತಿ ರಚಿಸಿದರು. ವಿಶ್ವಕೋಶ ಸ್ವರೂಪದ ಇಂಥ ಗ್ರಂಥಗಳ ರಚನೆಗೆ ವಿಶ್ವವಿದ್ಯಾನಿಲಯಗಳು ಲಕ್ಷಾಂತರ ಖರ್ಚುಮಾಡಿ ಭಾರಿ ಸಿಬ್ಬಂದಿ ನೇಮಿಸುತ್ತವೆ. ಆದರೆ ಕಾಣೆ ಒಬ್ಬನೇ ಒಬ್ಬ ಸಹಾಯಕನ ನೆರವೂ ಇಲ್ಲದೆ ಇಷ್ಟೆಲ್ಲ ಮಾಡಿದರು. ಇದಕ್ಕೆ ಬೇಕಾದ ಟಿಪ್ಪಣಿಗಳನ್ನು ದೊಡ್ಡ ಪ್ರಮಾಣದ ನೂರು ನೋಟ್ ಬುಕ್ಕುಗಳಲ್ಲಿ ಕಲೆ ಹಾಕಿದ್ದರು. ಅಚ್ಚಿಗೆ ಹೋದ ಪ್ರತಿಯೊಂದು ಪುಟವನ್ನೂ ತಾವೇ ಸಿದ್ಧಮಾಡಿದರು; ತಾವೇ ಪ್ರೂಫ್ ನೋಡಿದರು. ಎರಡನೆಯ ಮಹಾಯುದ್ಧದ ಕಾರಣದಿಂದ ಪೇಪರಿನ ಅಭಾವ ತಲೆದೋರಿ, ಪ್ರಕಾಶನ ಸಂಸ್ಥೆಯ ಆರ್ಥಿಕಸ್ಥಿತಿಯೂ ಕೆಟ್ಟಿದ್ದಾಗ ತಮ್ಮ ಮೂರನೆಯ ಸಂಪುಟದ ಪ್ರಕಟನೆಗೆ ತಾವೇ ಮುಂಗಡ ಹಣ ನೀಡಿದರು. ಇಂಥ ವಿಚಿತ್ರ ದುಡಿಮೆಯ ಪಂಡಿತಸಾಗರ ಬರೆಯಲು ಬಳಸುತ್ತಿದ್ದುದು ಒಂದು ಪೆನ್ನು ಕೂಡ ಅಲ್ಲ, ಮಸಿಯಲ್ಲಿ ಅದ್ದಿ ಬರೆಯುವ ಪುರಾತನ ಲೇಖನಿ! ಈ ಕೃತಿಯನ್ನು ಮುಗಿಸಿದಾಗ ಅವರ ವಯಸ್ಸು ಎಂಬತ್ತೆರಡು ವರ್ಷ!

ಉಪಕುಲಪತಿ

ಕಾಣೆಯವರನ್ನು ಹುಡುಕಿಕೊಂಡು ಬಂದ ಗೌರವಗಳಿಗೆ ಲೆಕ್ಕವಿಲ್ಲ. ಇನ್ನೂ ಮೂವತ್ತೆರಡು ವರ್ಷದವರಾಗಿದ್ದಾಗ ಬೊಂಬಾಯಿ ವಿಶ್ವವಿದ್ಯಾನಿಲಯದಲ್ಲಿ 'ವಿಲ್ಸನ್ ಫಿಲಲಾಜಿಕಲ್' ಉಪನ್ಯಾಸಗಳನ್ನು ಕೊಡಲು ಅವರಿಗೆ ಕರೆ ಬಂತು. ಆಗ ಇದು ಭಾರಿ ಗೌರವದ ಆಹ್ವಾನ. ಅಷ್ಟು ಚಿಕ್ಕವಯಸ್ಸಿನಲ್ಲಿ ಯಾರಿಗೂ ಆ ಗೌರವ ದೊರೆತಿರಲಿಲ್ಲ. ಕಾಣೆ ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷ ಸೆನೆಟ್ ಸದಸ್ಯರಾಗಿದ್ದುದಲ್ಲದೆ ಮುಖ್ಯಮಂತ್ರಿ ಬಿ. ಜಿ. ಖೇರರ ಆಗ್ರಹದಿಂದಾಗಿ ಎರಡು ವರ್ಷ ಉಪಕುಲಪತಿಗಳೂ ಆಗಿದ್ದರು. ಕಾಣೆ ಆಗ ಒಂದು ಚಿಕ್ಕಾಸೂ ಸಂಬಳ ಮುಟ್ಟಲಿಲ್ಲ. ಮುಂದೆ ಇನ್ನೂ ಮೂರು ವರ್ಷ ತಿಂಗಳಿಗೆ ೨೦೦೦ ರೂ. ಸಂಬಳದ ಮೇಲೆ ಮುಂದುವರಿಯಲು ಕೇಳಿದಾಗ ಓದು ಬರೆಹಕ್ಕೆ ಬಿಡುವಿಲ್ಲವೆಂಬ ಕಾರಣದಿಂದ ಅದನ್ನು ನಿರಾಕರಿಸಿದರು! ಭಾರತ ಸರ್ಕಾರ ಅವರಿಗೆ ೧೯೪೧ರಲ್ಲಿ ಮಹಾಮಹೋಪಾಧ್ಯಾಯ ಪ್ರಶಸ್ತಿ ಕೊಟ್ಟರೆ ಅಲಹಾಬಾದ್ ಮತ್ತು ಪುಣೆ ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟರೇಟ್ ಪ್ರಶಸ್ತಿ ಕೊಟ್ಟವು. ಧರ್ಮಶಾಸ್ತ್ರದ ಎರಡನೇ ಸಂಪುಟಕ್ಕೆ ಅಕಾಡೆಮಿ ಪ್ರಶಸ್ತಿ ಬಂತು. ಪ್ರಾಚ್ಯ ವಿದ್ವಾಂಸರ ಪರಿಷತ್ತಿನಲ್ಲಿ ಭಾಗವಹಿಸಲು ಕೇಂಬ್ರಿಜ್ ಮತ್ತು ಇಸ್ತಾಂಬುಲ್‌ಗಳಿಗೆ ಭಾರತದ ಪರವಾಗಿ ಅವರನ್ನು ಕಳಿಸಲಾಯಿತು. ರಾಷ್ಟ್ರಪತಿಯವರಿಂದ ಸುಮಾರು ಹನ್ನೊಂದು ವರ್ಷಗಳ ಕಾಲ ರಾಜ್ಯಸಭೆಯ ಸದಸ್ಯರಾಗಿ ನೇಮಕಗೊಂಡಿದ್ದು, ಅಲ್ಲಿ ಹಿಂದೂ ದತ್ತಕವಿಧಿ, ವಿವಾಹ ವಿಧಿ, ಉತ್ತರಾಧಿಕಾರ ವಿಧಿಗಳ ಮಂಡಲಿಯಲ್ಲಿ ಕೆಲಸ ಮಾಡಿದರು. ೧೯೫೯ರಲ್ಲಿ ಭಾರತ ಸರ್ಕಾರ ಅವರನ್ನು ನ್ಯಾಷನಲ್ ಪ್ರೊಫೆಸರ್ ಆಗಿ ನೇಮಕ ಮಾಡಿತು. ೧೯೬೩ರಲ್ಲಿ ಅವರಿಗೆ ರಾಷ್ಟ್ರದ ಅತ್ಯುಚ್ಚ ಗೌರವ ಪ್ರಶಸ್ತಿಯಾದ ಭಾರತರತ್ನ ದೊರೆಯಿತು. ಇದೆಲ್ಲ ಅವರಿಗೆ ದೊರೆತ ಗೌರವಗಳಲ್ಲಿ ಕೆಲವು ಮಾತ್ರ.

ಕಾಣೆಯವರದು ಕಟ್ಟುನಿಟ್ಟಾದ ದುಡಿಮೆಯ ಜೀವನ. ಐವತ್ತನಾಲ್ಕು ವರ್ಷ ಕಾಲ ಅವರು ಒಮ್ಮೆಯೂ ಹಗಲು ನಿದ್ದೆ ಮಾಡಲಿಲ್ಲ; ಹುಳಿ ಪದಾರ್ಥ ಮುಟ್ಟಲಿಲ್ಲ. ನಾಲ್ಕು ಸಲ ಯೂರೋಪಿಗೆ, ಒಮ್ಮೆ ಅಮೆರಿಕಕ್ಕೆ ಹೋಗಿ ಬಂದರೂ ಅಲ್ಲಿದ್ದಾಗ ಬರಿಯ ಬ್ರೆಡ್ಡು ಹಾಲು ಹಣ್ಣುಗಳ ಮೇಲೆ ಜೀವಿಸಿದರಲ್ಲದೆ ನಿಯಮ ಮುರಿಯಲಿಲ್ಲ. ಹೆಚ್ಚು ಕಡಿಮೆ ಸನ್ಯಾಸಿಯಂತೆ ಬಿರುಸಾದ ಜೀವನ ನಡೆಸಿ ಮಹಾಸಾಧನೆ ಮಾಡಿದ ಈ ವ್ಯಕ್ತಿಯನ್ನು ಕುರಿತು ಯೋಚಿಸುವಾಗ ಅವರೊಬ್ಬ ಋಷಿಚೇತನ ಎನ್ನಿಸಿದರೆ ಆಶ್ಚರ್ಯವಿಲ್ಲ.

ಬೆಳ್ಳಿ ಮೀಸೆಯ ಮಗು

"ನರೆತ ಬೆಳ್ಳಿಮೀಸೆ, ಸಿಂಹದಂಥ ರೂಪ, ತುಂಡು ತೋಳಿನ ಜುಬ್ಬ ಅಥವಾ ಬನಿಯನ್, ಉದ್ದ ದಟ್ಟಿ, ಕೆಲವೇಳೆ ಛತ್ರಿ, ಮಂಗಳೂರು ಚಪ್ಪಲಿ – ಇದು ಅವರ ಪೋಷಾಕು. ಏತಕ್ಕಾದರೂ ಬೆರಳು ಕೊಡುವುತ್ತ, ಮೀಸೆ ಕಡಿಯುತ್ತ, ಬೀಡಿ ಸೇದುತ್ತ, ಯಾವುದೋ ವಿಚಾರವನ್ನು ಹೊರಹಾಕುತ್ತ ಇದ್ದಾಗ ಅವರನ್ನು ನೋಡುವುದು ಒಂದು ಹಬ್ಬ."

ಇದು ನಿಟ್ಟೂರರು ವರ್ಣಿಸಿರುವ ಗೋವಿಂದ ಪೈ ಅವರ ಹೊರರೂಪ. ನೋಡಲು ಸಿಂಹದಂಥ ವೀರವ್ಯಕ್ತಿತ್ವವಾದರೂ ಹತ್ತಿರದಿಂದ ಬಲ್ಲ ಹಿರಿಯರು ಅವರನ್ನು 'ಬೆಳ್ಳಿಮೀಸೆಯ ಮಗು' ಎಂದು ಕರೆದರು. "ತುಂಬಾ ಅಕ್ಕರೆಯ ಜೀವ; ಹಸುಮಗುವಿನಂತೆ ಅಚ್ಚ ಸ್ವಭಾವ. ಒಮ್ಮೆ ನೋಡಿದರೆ ಸಾಕು, ಒಲಿಯದೆ ವಿಧಿಯಿಲ್ಲ ಎಂಬ ರೀತಿಯ ಸೌಜನ್ಯ, ಸಹಜವರ್ತನ" ಎಂದು ಮಾಸ್ತಿ ಅವರ ಬಗ್ಗೆ ನುಡಿದದ್ದುಂಟು. ಅಂಥ ಮೃದು, ಮುಗ್ಧ ಮನಸ್ಸು ಅವರದು.

ಗೋವಿಂದ ಪೈ ಬಾಳಿದ ರೀತಿಯನ್ನು ನೋಡಿದ್ದ ಆಪ್ತರಿಗೆ ಅವರು ಒಬ್ಬ ಸಂತನಂತೆಯೇ ತೋರಿದ್ದರು.

> **"ಅವರು ಬದುಕಿದುದೆಲ್ಲ ಮಹತ್ ಕವನಗಳೆ ಅಹುದು**
> **ಆದರೆ ತಾವೇ ಒಂದು ಗೊಮ್ಮಟಸಮ ಮಹಾಕಾವ್ಯ.**
> **ಸಂತನಾಗಲು ಬಲ್ಲ ಆವನೂ ಸುಧೀರಮತಿ ಕವಿಯಾಗಲೊಲ್ಲ"**

ಎಂದು ಅವರನ್ನು ಕುರಿತು ಕುವೆಂಪು ಒಂದು ಕವಿತೆಯನ್ನೇ ರಚಿಸಿದರು. ಪರಿಶುದ್ಧ ಜೀವನ ನಡೆಸಿದ ಈ ವ್ಯಕ್ತಿ ಭಗವಂತ ಒಪ್ಪುವಂತೆ ಬಾಳಿದವರು. ಎಂತಲೇ

> **"ಪೈಗೆ ಪೈ ಲೆಕ್ಕ ಒಪ್ಪಿಸಿದಿರಾ? ಗೋವಿಂದ**
> **ಒಪ್ಪಿದನೆ?"**

ಎಂದು ಬೇಂದ್ರೆ ಬರೆದರು.

೧೮೮೩ರಲ್ಲಿ ಹುಟ್ಟಿದ ಗೋವಿಂದ ಪೈ ೧೯೬೩ರ ಸೆಪ್ಟೆಂಬರ್‌ವರೆಗೆ, ಎಂಬತ್ತು ವರ್ಷ ಬಾಳಿ ಮರೆಯಾದರು. ಈ ಅವಧಿಯಲ್ಲಿ ಉದ್ದಕ್ಕೂ ಅವರು ಕಾವ್ಯ, ನಾಟಕ, ಸಂಶೋಧನ ಪ್ರಬಂಧಗಳನ್ನು ಸತತವಾಗಿ ಬರೆಯುತ್ತಲೇ ಹೋದರು; ಕನ್ನಡದಲ್ಲಿ ಮಾತ್ರವಲ್ಲ, ಇಂಗ್ಲಿಷಿನಲ್ಲಿ ಕೂಡ. ಇಪ್ಪತ್ತನೆಯ ಶತಮಾನದ ಪೂರ್ವಾರ್ಧದ ಮಹಾವಿದ್ವಾಂಸರ ಪೈಕಿ ಅವರೊಬ್ಬರಾಗಿದ್ದರು. ೧೯೩೦ರ ಹೊತ್ತಿಗೇ ಕನ್ನಡದ ಕವಿ – ಕಾವ್ಯಗಳ ಕಾಲವಿಚಾರ ಚರ್ಚೆಮಾಡುವಾಗ ಆರ್. ನರಸಿಂಹಾಚಾರ್, ಡಾ. ಎ. ವೆಂಕಟಸುಬ್ಬಯ್ಯ ಮತ್ತು ಎಂ. ಗೋವಿಂದ ಪೈ – ಈ ಮೂವರ ಹೆಸರುಗಳು ತಪ್ಪದೆ ಪ್ರಸ್ತಾಪವಾಗುತ್ತಿದ್ದವು. ಕ್ರಿಸ್ತಪೂರ್ವದ ಗ್ರೀಕ್ ನಾಟಕವೊಂದರಲ್ಲಿ ಕೆಲವು ಕನ್ನಡ ಪದಗಳು ಸೇರಿವೆಯೆಂದು ನಿರೂಪಿಸಿ ಅವರು ಬರೆದ ಸಂಶೋಧನ ಪ್ರಬಂಧ ಪೈಯವರ ಚಿಂತನೆ ಎಷ್ಟು ದೂರ ಹಾಯುತ್ತಿತ್ತು ಎನ್ನುವುದನ್ನು ಸೂಚಿಸೀತು. ಹಳಗನ್ನಡ ಕವಿ – ಕಾವ್ಯ, ಇತಿಹಾಸ, ಸಂಶೋಧನೆ, ಧರ್ಮ – ತತ್ವಜ್ಞಾನ, (ಇತರರ ಪುಸ್ತಕಕ್ಕೆ ಬರೆದ ಮುನ್ನುಡಿ ಮತ್ತು ಅಭಿನಂದನಗಳ) ಹೊಸಗನ್ನಡ ಬರೆಹ – ಎಲ್ಲ ಸೇರಿ ಅವರು ಬರೆದ ಲೇಖನಗಳ ಸಂಖ್ಯೆ ಒಟ್ಟು ನೂರ ಐವತ್ತೆಂಟು! ಇದಲ್ಲದೆ ಗಿಳಿವಿಂಡು, ವೈಶಾಖಿ, ಹೆಬ್ಬೆರಳು ಗೋಲ್ಗೊಥಾ ಮೊದಲಾಗಿ ಹತ್ತು ಕೃತಿಗಳನ್ನು ಅವರು ರಚಿಸಿದರು. ೧೯೯೫ರಲ್ಲಿ ಹೊರಬಂದ 'ಗೋವಿಂದ ಪೈ ಸಂಶೋಧನ ಸಂಪುಟ'ದ ಒಟ್ಟು ಪುಟಗಳ ಸಂಖ್ಯೆ ೧೩೯೮ ಎನ್ನುವುದನ್ನು ಗಮನಿಸಿದರೆ ಅವರ ಸಂಶೋಧನೆ ಹೇಗೆ ಒಂದು ನಿರಂತರ ತಪಸ್ಸಿನಂತೆ ನಡೆಯಿತು ಎಂದು ತಿಳಿದೀತು. ಗೋಕಾಕರು ತಮ್ಮ ಪದ್ಯವೊಂದರಲ್ಲಿ ಅವರನ್ನು 'ಜ್ಞಾನಯಜ್ಞಗಳ ಋತ್ವಿಜ' ಎಂದು ಬಣ್ಣಿಸಿದರೆ, ಬೇಂದ್ರೆ ಅವರ ಕಾಲವಿಚಾರದ ಚರ್ಚೆಗಳ ವ್ಯಾಪ್ತಿ, ಆಳ ಕಂಡು

ಕಲ್ಲು ಕಾಗದ ಕಡತಗಳಲಿ ಕಾಲನ ಕಾಲು
ಸಿಕ್ಕು ತೊಳಲಾಡುತಿರೆ ಕುಣಿಕೆ ಬಿಡಿಸಿದಿರಣ್ಣ

ಎಂದು ಮೆಚ್ಚಿ ನುಡಿದರು.

ಸೃಜನ ಶಕ್ತಿಯುಳ್ಳ ಲೇಖಕರಾಗಿದ್ದಂತೆಯೇ ಅವರು ತಮ್ಮ ಕಾಲದ ಅಸಾಮಾನ್ಯ ವಿದ್ವಾಂಸರಾಗಿದ್ದರು. ಕನ್ನಡ, ಸಂಸ್ಕೃತ, ಪ್ರಾಕೃತ, ಕೊಂಕಣಿ, ಬಂಗಾಳಿ, ಗುಜರಾತಿ ಮೊದಲಾದ ಭಾರತೀಯ ಭಾಷೆಗಳಲ್ಲದೆ ಇಂಗ್ಲಿಷ್, ಫ್ರೆಂಚ್, ಇಟಾಲಿಯನ್, ಗ್ರೀಕ್, ಪರ್ಶಿಯನ್‌ಗಳಂಥ ಹೊರಭಾಷೆಗಳೂ ಅವರಿಗೆ ಎಟುಕಿದ್ದವು. ಕೆಲವು ಭಾಷೆಗಳಲ್ಲಿ ಆಳವಾದ ಪ್ರವೇಶವಿದ್ದರೆ ಮತ್ತೆ ಕೆಲವು ಭಾಷೆಗಳ ಒಂದು ಸಾಮಾನ್ಯಜ್ಞಾನ (working knowledge) ಅವರಿಗಿತ್ತು. ಕನ್ನಡದ ಲೇಖಕರಲ್ಲಿ ಇಷ್ಟೊಂದು ಭಾಷೆಗಳ ಪರಿಚಯವಿದ್ದ ಇನ್ನೊಬ್ಬ ಲೇಖಕ ಈವರೆಗೂ ಬಂದಿಲ್ಲ.

ಹಾಗೆಂದೇ ಅವರ ಚರ್ಚೆ ಅಭಿಪ್ರಾಯಗಳಲ್ಲಿ ಇತರರ ಬರಹಗಳಿಗೆ ಹೊರತಾದ ಒಂದು ವಿಶೇಷತೆ ಇರುತ್ತಿತ್ತು. ವರದಿಗಳು, ವಿಶ್ವಕೋಶಗಳು, ಹಲವು ಭಾಷೆಯ ನಿಘಂಟುಗಳು, ಕಾವ್ಯಗಳು, ವಿದ್ವತ್‌ಕೃತಿಗಳು ತುಂಬಿದ್ದ ಸ್ವಂತದ ಒಂದು ಅಮೂಲ್ಯ ಪುಸ್ತಕ ಭಂಡಾರ ಅವರಲ್ಲಿತ್ತು.

ಇಂಥ ಪ್ರಕಾಂಡಪಂಡಿತ ಎಷ್ಟು ನಮ್ರರಾದ ವ್ಯಕ್ತಿಯಾಗಿದ್ದರೆಂದರೆ ಕನ್ನಡಕ್ಕೆ ಅವರಿಂದ ಸಂದಾಯವಾದ ಅಸಾಧಾರಣ ಕೊಡುಗೆಯನ್ನು ಗುರುತಿಸಿ ಮೈಸೂರು ವಿಶ್ವವಿದ್ಯಾಲಯ ೧೯೬೩ರಲ್ಲಿ ಅವರಿಗೆ ಗೌರವ ಡಿ.ಲಿಟ್ ಪದವಿಯನ್ನು ನೀಡಲು ತೀರ್ಮಾನಿಸಿ ಅದಕ್ಕೆ ಪೈಯವರ ಒಪ್ಪಿಗೆಯನ್ನು ಕೇಳಿದಾಗ ಅವರು ಅದನ್ನು ಸೌಜನ್ಯಪೂರ್ವಕವಾಗಿಯೇ ನಿರಾಕರಿಸಿದರು. 'ನೀವು ನೀಡಬಯಸಿರುವ ಗೌರವ ಖಂಡಿತವಾಗಿ ಅಸಾಧಾರಣವಾದದ್ದು. ಇದಕ್ಕೆ ನಾನು ತಮಗೆ ಕೃತಜ್ಞನಾಗಿದ್ದೇನೆ. ನಾನು ಈಗ ನನ್ನ ಇಳಿವಯಸ್ಸಿನಲ್ಲಿದ್ದೇನೆ. ಯಾವುದೇ ಪದವಿ ಗೌರವಗಳನ್ನು ಈ ವಯಸ್ಸಿನಲ್ಲಿ ನಾನು ಸ್ವೀಕರಿಸುವುದು ಕೂಡದೆಂದು ನನಗನ್ನಿಸುತ್ತಿದೆ. ಈ ವಿಚಾರ ನನ್ನ ಮನಸ್ಸಿನಲ್ಲಿ ಗಟ್ಟಿಯಾಗಿ ತಳವೂರಿದೆ' ಎಂದು ತಿಳಿಸಿಬಿಟ್ಟರು. ಡಿ.ಲಿಟ್ ಪದವಿಯನ್ನು ಸ್ವೀಕರಿಸಲೇ ಇಲ್ಲ! ಇದಕ್ಕೆ ಬಹಳ ಹಿಂದೆಯೇ ಮದರಾಸು ಸರ್ಕಾರ ಅವರಿಗೆ 'ರಾಷ್ಟ್ರಕವಿ' ಪ್ರಶಸ್ತಿಯನ್ನು ನೀಡಿದಾಗಲೂ ಅವರು ಸುಲಭದಲ್ಲಿ ಅದನ್ನು ಒಪ್ಪಲಿಲ್ಲ. ಅವರ ಒಪ್ಪಿಗೆ ಪಡೆಯಲು ಹಲವು ದಾಕ್ಷಿಣ್ಯಗಳನ್ನು ಬಳಸಬೇಕಾಯಿತು. ಪೈ ಎಷ್ಟು ದೊಡ್ಡ ಪಂಡಿತರೋ ಅಷ್ಟೇ ದೊಡ್ಡ ಭಗವದ್ಭಕ್ತರೂ ಆಗಿದ್ದರು. ಅವರ ವೈಶಾಖಿ, ಗೊಲ್ಗೊಥಾ ಕೃತಿಗಳನ್ನು ಓದಿದವರಿಗೆ ಇದು ಅರ್ಥವಾಗುತ್ತದೆ. 'ಶ್ರೀ ದೇವರ' ಕೃಪೆ, ಅನುಗ್ರಹಗಳನ್ನು ಬಿಟ್ಟು ಯಾವ ಲೌಕಿಕ ಪ್ರತಿಷ್ಠೆಗಳೂ ಅವರನ್ನು ಸಳೆಯಲಾರದವಾಗಿದ್ದವು.

ಎಂ. ಗೋವಿಂದ ಪೈ ಎಂದರೆ ಮಂಜೇಶ್ವರ ಗೋವಿಂದ ಪೈ ಎಂದೇ ಬಹಳ ಜನ ಭಾವಿಸುತ್ತಾರೆ. ವಾಸ್ತವವಾಗಿ ಅದು ಮಂಗಳೂರು ಗೋವಿಂದ ಪೈ. ಅವರ ತಾಯಿಯ ತವರುಮನೆ ಮಂಜೇಶ್ವರ. ಆದರೆ ಪೈ ಹುಟ್ಟಿ ಬೆಳೆದದ್ದು, ಹೆಚ್ಚಿನ ವಿದ್ಯಾಭ್ಯಾಸ ಪಡೆದದ್ದು ಮಂಗಳೂರಿನಲ್ಲಿ. ಮುಂದೆ ಬಹುಕಾಲ, ತಮ್ಮ ಕೊನೆ ದಿನಗಳವರೆಗೆ ಅವರು ಮಂಜೇಶ್ವರದಲ್ಲಿಯೇ ಬಾಳಿದರಾದುದರಿಂದ ಆ ಊರು ಅವರ ಹೆಸರಿಗೆ ಸೇರಿಕೊಂಡದ್ದೂ ಒಂದು ರೀತಿ ಸಹಜವೇ ಆಯಿತು.

ಗೋವಿಂದಪೈ ವೈಷ್ಣವ ಸಂಪ್ರದಾಯದ ಸಾರಸ್ವತ ಬ್ರಾಹ್ಮಣ ಕುಲದಲ್ಲಿ ಬಂದವರು. ತಿಮ್ಮಪೈ ಅವರ ತಂದೆ, ದೇವಕಿಯಮ್ಮ ತಾಯಿ; ಮೂರು ಜನ ತಮ್ಮಂದಿರು, ಮೂವರು ತಂಗಿಯರು. ಮದರಾಸಿನಲ್ಲಿ ಓದುತ್ತಿದ್ದ ಗೋವಿಂದ ಪೈಗೆ

ಡಾ. ರಾಧಾಕೃಷ್ಣನ್ ಸಹಪಾಠಿ. ಬಿ.ಎ. ಪರೀಕ್ಷೆ ಕಟ್ಟಿದ್ದ ಪೈಯವರಿಗೆ ತಂದೆ ಅಸ್ವಸ್ಥರಾಗಿದ್ದಾರೆಂಬ ಸುದ್ದಿ ಬಂತು. ಅವರು ಪರೀಕ್ಷೆಯಲ್ಲಿ ಇಂಗ್ಲಿಷ್ ಪತ್ರಿಕೆಗೆ ಮಾತ್ರ ಉತ್ತರ ಬರೆದಿದ್ದರಷ್ಟೆ. ಕೂಡಲೆ ಊರಿಗೆ ವಾಪಸ್ಸಾದರು. ಕಲಿಕೆ ಅಲ್ಲಿಗೇ ಮುಗಿಯಿತು. ಬರೆದಿದ್ದ ಇಂಗ್ಲಿಷ್ ಪತ್ರಿಕೆಯಲ್ಲಿ ವಿಶ್ವವಿದ್ಯಾಲಯಕ್ಕೆ ಅವರೇ ಪ್ರಪ್ರಥಮರಾಗಿದ್ದು ಅದಕ್ಕೆ ಸುವರ್ಣಪದಕ ಬಂತು.

ಪೈಯವರಿಗೆ ಇಂಟರ್ ಮೀಡಿಯೆಟ್ ತರಗತಿಯಲ್ಲಿ ಪಂಜೆ ಮಂಗೇಶರಾಯರು ಕನ್ನಡ ಅಧ್ಯಾಪಕರಾಗಿದ್ದರು. ಚಿಕ್ಕವಯಸ್ಸಿನಿಂದಲೇ ಅವರಿಗೆ ಸಾಹಿತ್ಯದಲ್ಲಿ ಗಾಢವಾದ ಆಸಕ್ತಿ. ತಮ್ಮ ಹದಿನಾರನೆಯ ವಯಸ್ಸಿನಲ್ಲೇ ಅವರು ಷೇಕ್ಸ್‌ಪಿಯರನ (Twelth Night) ನಾಟಕದಿಂದ ಕೆಲವು ದೃಶ್ಯಗಳನ್ನು ಕನ್ನಡಿಸಿ ನಂದಳಿಕೆ ಲಕ್ಷ್ಮೀನಾರಣಪ್ಪ (ಕವಿ ಮುದ್ದಣ) ನವರಿಗೆ ಅವಗಾಹನೆಗೆಂದು ಕಳಿಸಿದ್ದರು. ಅದಕ್ಕೆ ಪ್ರೋತ್ಸಾಹಕರವಾದ ಪ್ರತಿಕ್ರಿಯೆ ಬಂದರೂ ಏಕೋ ಪೈಯವರು ನಾಟಕವನ್ನು ಪೂರ್ತಿ ಅನುವಾದಿಸಲಿಲ್ಲ.

ಪೈಯವರಿಗೆ ಇನ್ನೂ ಹದಿನೇಳು ವರ್ಷ. ಆಗ 'ಸುವಾಸಿನೀ' ಎಂಬ ಪತ್ರಿಕೆ ಕವಿತಾಸ್ಪರ್ಧೆಯೊಂದನ್ನು ಏರ್ಪಡಿಸಿತು. ಮೂರು ಕಂದಪದ್ಯಗಳಿರುವ ಕವಿತೆಯೊಂದನ್ನು ಪೈ ಸ್ಪರ್ಧೆಗೆ ಕಳಿಸಿದರು. ಅದಕ್ಕೆ ಪ್ರಥಮ ಬಹುಮಾನ ಬಂದದ್ದಲ್ಲದೆ ಪತ್ರಿಕೆ ಆ ಕವಿತೆಯನ್ನು ಪ್ರಕಟಿಸಿತು. ಚಿಕ್ಕವಯಸ್ಸಿನಲ್ಲೇ ಪೈಯವರಿಗೆ ದೊರೆತ ಮೊದಲ ಮನ್ನಣೆ ಇದು.

ಆ ಕಾಲದಲ್ಲಿ ಆದಿಪ್ರಾಸವಿಲ್ಲದ ಪದ್ಯವೇ ಇರುತ್ತಿರಲಿಲ್ಲ. ಪೈಯವರಿಗೆ ಈ ಆದಿಪ್ರಾಸ ಕೃತಕವಾಗಿ ತೋರುತ್ತಿದ್ದುದಲ್ಲದೆ ಕವಿತಾ ರಚನೆಯ ಸುಗಮಗತಿಗೆ ತೊಡಕಾಗಿಯೂ ಕಾಣುತ್ತಿತ್ತು. ಅವರು ಇದರ ಬಗ್ಗೆ ಸಾಕಷ್ಟು ಯೋಚನೆ ಮಾಡಿದ್ದರೆಂದು ಕಾಣುತ್ತದೆ. ೧೯೧೧ರ ಏಪ್ರಿಲ್ ತಿಂಗಳಿನಲ್ಲಿ ಅವರು ಬರೋಡಾ ರಾಜ್ಯದ ನವಸಾರಿಯಲ್ಲಿ ಇದ್ದಾಗ ಗಮನಾರ್ಹವಾದ ಘಟನೆಯೊಂದು ನಡೆಯಿತು. ಪೈ ಮನೆಮಾಳಿಗೆಯ ಮೇಲೆ ಶತಪಥ ಹಾಕುತ್ತಿದ್ದಾಗ ಅವರ ಮನಸ್ಸಿನಲ್ಲಿ ಹಠಾತ್ತಾಗಿ ದೃಢವಿಚಾರವೊಂದು ಕಾಣಿಸಿಕೊಂಡಿತು. ಆಗೋದು ಹೋಗೋದು ದೇವರ ಇಚ್ಛೆ; ಹೂಡೋದು ಬಿತ್ತೋದು ನನ್ನ ಇಚ್ಛೆ, ಇನ್ನು ಮೀನ ಮೇಷ ಮಾಡುವುದಲ್ಲ. 'ಪ್ರಾಸವನೀಗಳೆ ತೊರೆದುಬಿಡುವುದೇ ನಿಶ್ಚಯಂ' ಎಂದಾಯಿತು. 'ಮರದ ಹಣ್ಣು ಮರದ ಬುಡದಾಗೆ ಬಂತು' 'ಅಯಿ ಭುವನ ಮನಮೋಹಿನಿ' ಎಂದು ಆರಂಭವಾಗುವ ಟಾಗೋರರ 'ಭಾರತಲಕ್ಷ್ಮಿ' ಎಂಬ ಬಂಗಾಳೀ ಗೀತೆಯನ್ನು ಅವರು ಪ್ರಾಸಮುಕ್ತವಾಗಿ ಕನ್ನಡಿಸಿದರು. ಹಾಗೆಯೇ ಇಕ್ಬಾಲರ 'ಹಿಂದೂಸ್ತಾನ್ ಹಮಾರಾ' ಎಂಬ ಪದ್ಯವನ್ನು

ಪ್ರಾಸರಹಿತವಾಗಿ ಅನುವಾದಿಸಿದರು. ಮುಂದೆ ಬರೆದ 'ಹೊಲೆಯನು ಯಾರು' ಎಂಬ ಸ್ವಂತ ಕವನವನ್ನೂ ಪ್ರಾಸವಿಲ್ಲದೆ ಬರೆದರು. ಪ್ರಾಸಬಿಟ್ಟು ಬರೆದದ್ದು ಅಷ್ಟೊಂದು ದೊಡ್ಡ ಸಾಹಸವೇ? ಎಂದು ಈಗ ನಮಗೆ ಅನ್ನಿಸಬಹುದು. ಆದರೆ ಹಿಂದಿನಿಂದ ಬಂದ ಸಂಪ್ರದಾಯದಲ್ಲಿ ಏನು ವ್ಯತ್ಯಾಸ ಮಾಡುವುದೂ, ಅದರಲ್ಲಿಯೂ ಸಾಲುಸಾಲಿಗೆ ತಪ್ಪದೆ ಬರಬೇಕಾದ (ಕವಿಶಕ್ತಿಯ ಮಾನದಂಡವೆಂಬಂತೆ ವಿದ್ವಾಂಸರು ಭಾವಿಸಿದ್ದ) ಪ್ರಾಸವನ್ನು ತೊರೆಯುವುದು ಆ ಕಾಲಕ್ಕೆ ಸಾಹಸದ ನಿರ್ಣಯವೇ ಆಗಿತ್ತು. ಪ್ರಾಸತ್ಯಾಗ ಮಾಡಿದರೆ ಪ್ರಾಣತ್ಯಾಗ ಮಾಡಿಕೊಂಡಷ್ಟೆ ಕೋಲಾಹಲ ಏಳುವ ಕಾಲ ಅದು. ಗೋವಿಂದ ಪೈ ಪ್ರಾಸವನ್ನೇ ತೊರೆದರೆಂದಲ್ಲ; ಈ ಕಾಲಕ್ಕೆ ಸಲ್ಲದ್ದಾಗಿ ಕಾಣುತ್ತಿದ್ದ ಆದಿಪ್ರಾಸವನ್ನಷ್ಟೇ ಬಿಟ್ಟು ಹೊಸಗನ್ನಡ ಕಾವ್ಯಕ್ಕೆ ಅಗತ್ಯವಾಗಿದ್ದ ಒಂದು ಅರ್ಥಪೂರ್ಣ ಮಾರ್ಪಾಟನ್ನು ಕವಿತೆಯಲ್ಲಿ ಅಳವಡಿಸಿದರು. ಇದು ಹೊಸಗನ್ನಡ ಕಾವ್ಯಕ್ಕೆ ಅವರಿಂದ ಆದ ಒಂದು ದೊಡ್ಡ ಉಪಕಾರ ಎನ್ನಬಹುದು "ಪ್ರಾಸವಿಲ್ಲದೆ ಪದ್ಯವೇ ಇಲ್ಲದಿದ್ದ ನಮ್ಮ ನುಡಿಯಲ್ಲಿ ಪ್ರಾಸವನ್ನು ಬಿಟ್ಟು ಪದ್ಯ ರಚಿಸುವ ಪ್ರಯೋಗವನ್ನು ಮೊದಲು ಮಾಡಿದವರು ಗೋವಿಂದ ಪೈ" ಎಂದು ಮಾಸ್ತಿಯವರೇ ಆ ಘಟನೆಯನ್ನು ದಾಖಲಿಸಿದ್ದಾರೆ.

ಸಂಕ್ಷಿಪ್ತವಾಗಿಯಾದರೂ ಪ್ರಸ್ತಾಪಿಸಲೇಬೇಕಾದ ಪೈಯವರ ಕೃತಿಗಳು ಮೂರು: 'ಹೆಜ್ಜೆಗಳು', 'ಗೊಲ್ಗೊಥಾ' ಮತ್ತು 'ವೈಶಾಖಿ' ಮೊದಲಿನದು ಕಾವ್ಯನಾಟಕ, ಕಡೆಯ ಎರಡು ಖಂಡಕಾವ್ಯಗಳು.

'ಹೆಜ್ಜೆಗಳು' ಮಹಾಭಾರತದಲ್ಲಿ ಬರುವ ಏಕಲವ್ಯನ ಪಾತ್ರದ ಸುತ್ತ ಬೆಳೆಯುವ ಒಂದು ಕಾವ್ಯನಾಟಕ. ಅವನ ತಂದೆಯಾದ ಹಿರಣ್ಯಧನುಷ ಈ ನಾಟಕದ ಒಂದು ಮುಖ್ಯಪಾತ್ರ, ಅನೇಕ ಹೊಸ ಸನ್ನಿವೇಶಗಳನ್ನು ಮತ್ತು ಪಾತ್ರಗಳನ್ನು ಪೈ ಇದರಲ್ಲಿ ಅಳವಡಿಸಿಕೊಂಡಿದ್ದಾರೆ. ಈ ನಾಟಕದಲ್ಲಿ ಪ್ರಸ್ತಾಪಿತವಾಗುವ ಆರ್ಯ ಅನಾರ್ಯರ ನಡುವಿನ ಅಂತರ, ಘರ್ಷಣೆ ನಮ್ಮ ಕಾಲದ ಸವರ್ಣ – ಅಸವರ್ಣೀಯರ ನಡುವಿನ ಘರ್ಷಣೆಯನ್ನು ಧ್ವನಿಸುತ್ತದೆ. ಹೀಗೆ ನಾಟಕ ಸಮಕಾಲೀನ ನೆಲೆಗೂ ಏರಿ ಪ್ರಸ್ತುತವಾಗುತ್ತದೆ. "ವರ್ಣದ್ವೇಷದ ಪರಿಣಾಮವಾಗಿ ಕಾಣಿಸಿಕೊಳ್ಳುವ ಅನ್ಯಾಯದ ವಿಷಾದ ದ್ರೋಣನ ಮನಸ್ಸನ್ನು ತಟ್ಟುವುದು" ಇಲ್ಲಿ ಪರಿಣಾಮಕಾರಿಯಾಗಿ ಮೂಡಿದೆ. ಆರ್ಯ – ಅನಾರ್ಯರ ನಡುವಿನ ಸಲ್ಲದ ವೈಷಮ್ಯವನ್ನು ಅಲ್ಲಗಳೆದು ಮನುಷ್ಯರೆಲ್ಲ ಸಮಾನರು ಎಂಬ ನಿಲುವನ್ನು ನಾಟಕ ಉದ್ದಕ್ಕೂ ಧ್ವನಿಸುತ್ತದೆ. "ನಾವು ನೀಚಕುಲದವರಿರಬಹುದು, ನಿಮ್ಮ ಸಹವಾಸದಿಂದ ನಾವೂ ಉತ್ತಮರಾಗಲು ಸಾಧ್ಯವಿಲ್ಲವೆ? ಉತ್ತಮರ ಜೊತೆ ನಮ್ಮನ್ನು ತೆಗೆದುಕೊಳ್ಳಬಾರದೆ?"

ಬೆಂಕಿ ತಳೆಯದೆ ಹೊಗೆಯ, ಬೆಟ್ಟ ತಾಳದೆ ಹುಲ್ಲ
ಗಂಗೆಗೆರೆದಾ ಹೆಂಡ ಗಂಗೆಯಾಗದೆ ದೇವ?

ಎಂಬ ಏಕಲವ್ಯನ ಮಾತುಗಳು ಈ ವೈಷಮ್ಯದ ಅನೌಚಿತ್ಯವನ್ನು ಸಮಾಧಾನದ ಮಾತುಗಳಲ್ಲೇ ಸೂಚಿಸುತ್ತವೆ. ಮೂಲಕಥೆಯಲ್ಲಿ ಇಲ್ಲದ ಎಷ್ಟೋ ಉಪಮಾನಗಳು ಈ ಕೃತಿಯಲ್ಲಿ ಕಾಣಿಸಿಕೊಂಡು ಅದರ ಕಾವ್ಯಸತ್ವವನ್ನು ಹೆಚ್ಚಿಸಿವೆ.

'ಗೊಲ್ಗೊಥಾ' ಮತ್ತು 'ವೈಶಾಖಿ' ಖಂಡಕಾವ್ಯಗಳಲ್ಲಿ ಕ್ರಮವಾಗಿ ಕ್ರಿಸ್ತ ಮತ್ತು ಬುದ್ಧ – ಈ ಮಹಾಪುರುಷರಿಬ್ಬರ ಜೀವನದ ಅಂತ್ಯದ ಸನ್ನಿವೇಶಗಳು ವಸ್ತುವಾಗಿವೆ. ಅವುಗಳಲ್ಲಿ ೧೯೩೧ರಲ್ಲಿ ರಚಿತವಾದ ಗೊಲ್ಗೊಥಾ ಮೊದಲಿನದು; ೧೯೪೭ರಲ್ಲಿ ಎಂದರೆ ಹದಿನಾರು ವರ್ಷಗಳ ನಂತರ ರಚಿತವಾದ ವೈಶಾಲಿ ಆಮೇಲಿನದು. ಕೇವಲ ಜೈನಪುರಾಣ ಕಥೆಗಳಷ್ಟೇ ಕನ್ನಡ ಕವಿಗಳಿಗೆ ವಸ್ತುವಾಗಿದ್ದು ಕನ್ನಡ ಸಾಹಿತ್ಯದಲ್ಲಿ ವಸ್ತು ನಾವೀನ್ಯದ ಕೊರತೆ ಕಾಣಿಸಿಕೊಂಡಿತ್ತು. ಆಗ ಕ್ರಿಸ್ತ ಪುರಾಣದಿಂದ ಹೊಸಕಾವ್ಯವೊಂದನ್ನು ಆಯ್ದು ಬರೆದು ಕಾವ್ಯರಸಿಕರಿಗೆ ಹೊಸದಿಕ್ಕು ತೋರಿಸಿದವರು ಗೋವಿಂದ ಪೈ. ಬೈಬಲಿನ ನಾಲ್ಕು ಸುವಾರ್ತೆಗಳಲ್ಲಿ ಅಡಕವಾದ ಕಥೆ ಗೊಲ್ಗೊಥಾದ ವಸ್ತುವಾಗಿದೆ. ಯೆಹೂದ್ಯರ ಮತ್ಸರ, ದ್ವೇಷ, ಪಿಲಾತನ ಧರ್ಮಸಂಕಟ, ಯೇಸುವಿನ ಸಹನೆ, ಪ್ರೇಮ – ಇವು ಕ್ರಿಸ್ತ ಪುರಾಣದ ವಿವರಗಳಿಗೆ ಸ್ವಲ್ಪವೂ ಹೊರತಾಗದೆ ರುದ್ರರಮಣೀಯವಾಗಿ ಚಿತ್ರಿತವಾಗಿವೆ. ಯೇಸುವನ್ನು ಶಿಕ್ಷಿಸುವ ಸನ್ನಿವೇಶ ಕರುಣರಸಪೂರ್ಣವಾದ ಉಜ್ವಲ ಸನ್ನಿವೇಶಗಳಲ್ಲಿ ಒಂದಾಗಿದೆ. ಶಿಲುಬೆಗೆ ಏರಿಸಿದಾಗ ಯೇಸು

ಹದ್ದು ಬಿಗಿವಿಡಿದ ಲಾವಿಗೆಯಂತೆ
ಪಡುವಣದಿ ಬಿಳಿಯ ಬಿದಿಗೆಯ ತಿಂಗಳಂತೆ
ಬಿಲ್ಲಿಗೆ ತೊಟ್ಟ ಸರಳಂತೆ
ಮರಣವೃಕ್ಷದೊಳಮೃತ ಫಲ ತೂಗುವಂತೆ

ಇದ್ದನಂತೆ. ಶಿಲುಬೆಯ ಮೇಲೆ ಇಟ್ಟ ಅವನ ಕೈಕಾಲುಗಳಿಗೆ ಮೊಳೆ ಹೊಡೆದಾಗಲೂ ಕ್ಷುಬ್ಧನಾಗದೆ

ತಂದೆಯೆ ಮಮಾತ್ಮಮಂ ನಿನ್ನ ಕೈಗೊಪ್ಪಿಸುವೆ
ಎಂದು ಗಗನದಿ ಯೇಸು ಕೈಯೂರಿ ತುದಿಬೆಟ್ಟ–
ದಿಂ ಕರೆವ ತಾಯೆಡೆಗೆ ಮರಿಜಿಂಕೆ ಜಿಗಿವಂತೆ
ಸುಗ್ಗಿಯೆಡೆಗೈದುವಾ ಬಾನಕ್ಕಿಯಂತೆ ದಿನ
ಮುಖದೊಳಿರುಳಿನ ಸೊಡರು ನೇಸರಂ ಪುಗುವಂತೆ

ಕ್ರಿಸ್ತ ದೇಹತ್ಯಾಗ ಮಾಡಿದ ಚಿತ್ರ ಯಾರ ಹೃದಯವನ್ನೂ ಕಲಕುವಂತಿದೆ. ಪೈಯವರ 'ಗಿಳಿವಿಂಡು' ಕವನ ಸಂಕಲನದಲ್ಲಿ ಕಾಣುವ ಕೃಷ್ಣಭಕ್ತಿಯನ್ನು

ನೋಡಿದವರಿಗೆ ಈ ಕೃತಿಯಲ್ಲಿ ಕಾಣುವ ಕ್ರಿಸ್ತಭಕ್ತಿ ಆಶ್ಚರ್ಯಕರವಾಗಿ ಕಾಣಬಹುದು." ಪೈಯವರ ಜೀವನದೃಷ್ಟಿ ಅಷ್ಟು ವಿಶಾಲವಾದದ್ದು ಎಂದು ರಾಜರತ್ನಂ ಹೇಳುತ್ತಾರೆ.

ವೈಶಾಖಿ ಗೊಲ್ಗೊಥಾದ ಎರಡರಷ್ಟು ದೀರ್ಘವಾದ ಕೃತಿ. ಗೊಲ್ಗೊಥಾದಲ್ಲಿ ಕ್ರಿಸ್ತನ ಬದುಕಿನ ಕ್ಷೋಭಕಾರಕ ಅಂತ್ಯವಿದ್ದರೆ ಇಲ್ಲಿ ಬುದ್ಧನ ಅಂತ್ಯಕಾಲದ ಪ್ರಶಾಂತ ಚಿತ್ರವಿದೆ. ಗೊಲ್ಗೊಥಾದಲ್ಲಿ ಕಾಣುವ ಆವೇಗ, ಕಾವು ಇದರಲ್ಲಿಲ್ಲ. ಇದನ್ನು ಶಾಂತರಸ ಪ್ರಧಾನವಾದ ಕಾವ್ಯ ಎಂದು ಕರೆಯಬಹುದು. 'ಮಹಾಪರಿನಿಬ್ಬಾಗ ಸುತ್ತ' (ಮಹಾಪರಿನಿರ್ವಾಣ ಸೂತ್ರ)ದಿಂದ ಇಲ್ಲಿಗೆ ಅಗತ್ಯವಾದ ಕಥಾವಿವರಗಳನ್ನು ತೆಗೆದುಕೊಳ್ಳಲಾಗಿದೆ. ನಿರೂಪಣೆ ಬಹುಮಟ್ಟಿಗೆ ಸ್ವಭಾವೋಕ್ತಿಯಲ್ಲಿರುತ್ತ ಪ್ರಕೃತಿ ಚಿತ್ರಣದ ಭಾಗಗಳು ವಿಶೇಷವಾಗಿವೆ. ಸೂರ್ಯೋದಯ, ಮಧ್ಯಾಹ್ನ, ಸಂಧ್ಯೆ, ರಾತ್ರಿ, ಚಂದ್ರೋದಯ, ಚಂದ್ರಾಸ್ತಮಾನ ಇವೆಲ್ಲವುಗಳ ವರ್ಣನೆ ನಿರುದ್ವಿಗ್ನವಾದ ಶೈಲಿಯಲ್ಲಿ, ಸ್ತಿಮಿತವಾದ ನೆಲೆಯಲ್ಲಿ, ಮಂದಗತಿಯಲ್ಲಿ ಹರಿಯುತ್ತ ಹೃದ್ಯವಾಗಿದೆ. ಬುದ್ಧನ ವ್ಯಕ್ತಿತ್ವದ ಚಿತ್ರಣ, ಉಪದೇಶಗಳ ನಿರೂಪಣೆ, ಪ್ರಶಾಂತ ಅಂತ್ಯಗಳನ್ನು ಕಾವ್ಯ ಗೊಲ್ಗೊಥಾದ ಅಂತ್ಯಕ್ಕೆ ವಿರುದ್ಧವಾದ ರೀತಿಯಲ್ಲಿ ಆವೇಗಮುಕ್ತವಾದ ಗಂಭೀರಗತಿಯಲ್ಲಿ ಬಿತ್ತರಿಸುತ್ತದೆ.

ಪ್ರಭಾಸ ಎಂಬ ಇನ್ನೊಂದು ಖಂಡಕಾವ್ಯವನ್ನು ಪೈ ಕೈಗೆತ್ತಿಕೊಂಡಿದ್ದರು. ಆದರೆ ಅದು ಅಪೂರ್ಣವಾಗಿ ಅರ್ಧಕ್ಕೇ ನಿಂತಿದೆ. ಕೃಷ್ಣನ ಜೀವನದ ಕೊನೆಯನ್ನು ಮೇಲಿನ ಇಬ್ಬರು ಮಹಾವ್ಯಕ್ತಿಗಳ ಅಂತ್ಯದಂತೆಯೇ ಚಿತ್ರಿಸಲು ಪೈ ಉದ್ದೇಶಿಸಿರಬೇಕು. ದ್ವಾರಕಾಪುರಿಯಿಂದ ಪ್ರಭಾಸಕ್ಕೆ ವೇಗವಾಗಿ ಹಾಯುತ್ತಿರುವ ಹಡಗಿನ ವರ್ಣನೆಯಿಂದ ಈ ಬರೆಹ ಆರಂಭವಾಗುತ್ತದೆ. ಸಮುದ್ರದ ವರ್ಣನೆ ವಿನೂತನವಾಗಿದೆ. ಯಾದವರು ಸಾಂಬನಿಗೆ ಹೆಣ್ಣುವೇಷ ತೊಡಿಸಿ, ಋಷಿಗಳೆದುರಿಗೆ ನಿಲ್ಲಿಸಿ, ಇವಳು ಬಭ್ರುವಿನ ಸತಿ, ಬಸಿರಿ. ಗಂಡು ಮಗುವಾಗಲಿ ಎಂದು ಬಯಸುತ್ತಿದ್ದಾಳೆ. ಎಂಥ ಮಗು ಹುಟ್ಟುತ್ತದೆ ಎಂದು ಕೇಳಿ ಅವರನ್ನು ಸುಳ್ಳಾಡಿಸಲು ಯತ್ನಿಸಿದಾಗ ಜ್ಞಾನಿಗಳಾದ ಋಷಿಗಳು ಕೋಪಗೊಂಡು ಯಾದವರನ್ನು ಶಪಿಸಿದ್ದು, ಕೃಷ್ಣನ ಮೇಲಿನ ಕೋಪದಿಂದ ಯಾದವರು ಕಚ್ಚಾಡಿ ಸಾಯಲಿ ಎಂದು ಗಾಂಧಾರಿ ಶಾಪಕೊಟ್ಟದ್ದು – ಮೊದಲಾದ ವೃತ್ತಾಂತಗಳು ಇದರಲ್ಲಿ ಬಂದಿವೆ. ನೂರ ಅರವತ್ತೈದು ಸಾಲುಗಳಿರುವ ಈ ಖಂಡಕಾವ್ಯ ಹಠಾತ್ತಾಗಿ ಮಧ್ಯಕ್ಕೇ ನಿಲ್ಲುತ್ತದೆ.

ಸಾಹಿತ್ಯದಲ್ಲಿ ಆಳವಾದ ಆಸಕ್ತಿ ಇರುವವರಿಗೆ ತುಂಬ ಪ್ರಿಯವೆನಿಸುವ ಇಂಥ ಖಂಡಕಾವ್ಯಗಳ ಜೊತೆ ಸಾಮಾನ್ಯರಿಗೂ ಪ್ರಿಯವಾಗುವ ಭಾವಗೀತೆಯೂ

ಅವರಿಂದ ಬಂದಿದೆ. 'ತಾಯೆ ಬಾರ ಮೊಗವ ತೋರ ಕನ್ನಡಿಗರ ಮಾತೆಯೆ' ಎಂಬ ಅವರ ಭಾವಗೀತೆ ಸ್ವರಸಂಯೋಜನೆಗೊಂಡು ಒಂದು ಆಕರ್ಷಕವಾದ ಹಾಡಾಗಿ ಇಡೀ ಕನ್ನಡ ನಾಡನ್ನೇ ವ್ಯಾಪಿಸಿದೆ.

ಕರ್ನಾಟಕರಾಜ್ಯ ಸ್ಥಾಪನೆಯಾಗಿ ಇಡೀ ನಾಡೆಲ್ಲ ಸಂತೋಷದಲ್ಲಿದ್ದಾಗ ಪೈ ಮಾತ್ರ ಆ ಸಂತೋಷದ ಜೊತೆ ತೀವ್ರವಾದ ನೋವನ್ನೂ ಅನುಭವಿಸಿದರು. ತಾವು ವಾಸವಾಗಿದ್ದ, ವಾಸ್ತವವಾಗಿ ಕರ್ನಾಟಕದ ಭಾಗವೇ ಆಗಬೇಕಾಗಿದ್ದ ಮಂಜೇಶ್ವರವನ್ನೊಳಗೊಂಡ ಕಾಸರಗೋಡು ಕರ್ನಾಟಕದಿಂದ ಹೊರಗುಳಿದದ್ದು ಆ ನೋವಿಗೆ ಕಾರಣವಾಗಿತ್ತು. ಅವರು ಕಡೆಯವರೆಗೂ ಆ ನೋವನ್ನು ಗಾಢವಾಗಿ ಅನುಭವಿಸಿದವರೇ.

ಪೈಯವರದು ಒಂದು ಸಾರ್ಥಕ ಜೀವನ. "ಇಂಥ ಸಫಲಜೀವನ ಒಂದು ಸಣ್ಣ ಕ್ಷೇತ್ರದಲ್ಲಿ ಬೆಳಗಿದರೂ ಅದು ವಿಶ್ವಜೀವನದ ಸಂಪತ್ತಿನ ವಿಭವಗಳಲ್ಲಿ ಒಂದಂಶ ಆಗುತ್ತದೆ" ಎಂದು ಮಾಸ್ತಿ ಬರೆದರು.

●

ಶ್ರೀ ಗೋವಿಂದ ಪೈ

ಹಲವು ಹರುಷದ ಸರಕು ಹೊತ್ತು ತಂದಿರುವಂಥ
ಹಡಗು ಮುಳುಗಿತು, ಶೂನ್ಯ ಮಂಜೇಶ್ವರದ ರೇವು,
ನುಡಿಯ ನಿಧಿಯನು ನುಂಗಿ ನಡೆದುಬಿಟ್ಟಿತು ಹಾವು.
ದೂರದೂರದ ನಾಡನಲೆದು ಬಂದಿರುವಂಥ
ನಾವಿಕನ ಕೊನೆಯ ಪಯಣಕೆ ಕಡಲು ಕರೆದಿತ್ತು
ಸಿಂದಬಾದನ ಚೀಲದೊಳಗಿರುವ ಕೈದೀಪ
ಹಿಡಿದಲ್ಲಿ ಹೊಳೆದಿತ್ತು ಮುತ್ತು ಹವಳದ ದ್ವೀಪ
ಭವದ ವೈಭವ ಲಿಪಿಯನನುಭವವು ಬರೆದಿತ್ತು.
ಹಣ್ಣುಜೀವದ ಕಣ್ಣು ಕಂಡದ್ದು ಇತಿಹಾಸ
ಕಿವಿಗೊಟ್ಟು ಕೇಳಿದ್ದು ಯಾತನೆಯ ದೊಡ್ಡಕಥೆ
ಶಿಲುಬೆಗೇರಿಸಿದಂಥ ಕ್ರಿಸ್ತಪಟ್ಟಿರುವ ವ್ಯಥೆ
ಸಿದ್ಧಾರ್ಥ ಬುದ್ಧನಾಗಲು ಕಳೆದ ವನವಾಸ
ಆಮ್ರವನದಲಿ ಕುಳಿತು ತಾಮ್ರಪಟವೋದಿ
ಇನ್ನಾರು ಹೇಳುವರು ಕಥೆ ಹಿಡಿದ ಹಾದಿ.

– ಸುಬ್ಬಣ್ಣ ರಂಗನಾಥ ಎಕ್ಕುಂಡಿ

ಆಧುನಿಕ ಕನ್ನಡದ ದ್ರೋಣಾಚಾರ್ಯ

ಎ. ಆರ್. ಕೃಷ್ಣಶಾಸ್ತ್ರಿ

ಸುಮಾರು ೧೯೫೭ನೆಯ ಇಸವಿ ಎಂದು ನೆನಪು. ನಮ್ಮ ಆನರ್ಸ್ ತರಗತಿಯಲ್ಲಿ ಪ್ರೊ. ತೀ. ನಂ. ಶ್ರೀಕಂಠಯ್ಯನವರು ಉಪನ್ಯಾಸ ಮಾಡುತ್ತಿದ್ದಾರೆ. ಪರಿಶುದ್ಧ ವಿದ್ವತ್ತಿನ ಸ್ವರೂಪ ಕುರಿತ ಮಾತು ಬಂತು. 'ಕಿಂ ಪಾಂಡಿತ್ಯಂ? ಪರಿಚ್ಛೇದ' ಎಂಬ ಉಕ್ತಿಯೂ ಮಿಂಚಿಹೋಯಿತು. ತೀನಂಶ್ರೀ ಹೇಳಿದರು "ನಿಷ್ಕಲಂಕವಾದ ಖಚಿತ ಪಾಂಡಿತ್ಯ ಎಂದಾಗ ನನ್ನ ಕಣ್ಣ ಮುಂದೆ ನಿಲ್ಲುವುದು ಡಾ. ಕೃಷ್ಣಶಾಸ್ತ್ರಿಗಳ ಬರೆಹ. ಅವರ 'ಸಂಸ್ಕೃತ ನಾಟಕ' ಎಂಥ ಮಹೋನ್ನತ ಕೃತಿ! ನಿಷ್ಕೃಷ್ಟವಾದ ಜ್ಞಾನ, ನಿಸ್ಸಂದಿಗ್ಧ ನಿರೂಪಣೆ, ಆಧಾರ ಸಹಿತ ಪ್ರತಿಪಾದನೆ, ಮಿತಮಾತಿನ ನುಡಿಗಾರಿಕೆಗಳಿಗೆ ನೀವು ಅಂಥ ಗ್ರಂಥಕ್ಕೆ ಹೋಗಬೇಕು. ಆ ಒಂದೇ ಕೃತಿಗೆ ಮೂರು ನಾಲ್ಕು ಪಿಎಚ್.ಡಿಗಳನ್ನು ಅಡ್ಡಡ್ಡ ನುಂಗಿಬಿಡಬಲ್ಲ ಯೋಗ್ಯತೆ ಇದೆ ಗೊತ್ತೆ?"

ನಾವೆಲ್ಲ ಅವಾಕ್ಕಾದೆವು. ಇದನ್ನು ಹೇಳುತ್ತಿರುವವರು ಅಂಥಿಂಥವರಲ್ಲ, ಆಧುನಿಕ ಅಭಿನವಗುಪ್ತ ಎನ್ನಿಸಿಕೊಂಡವರು. ಅವರಿಂದ ಇಂಥ ಪ್ರಶಂಸೆ ಪಡೆದ ಆ ಕೃತಿ ಯಾವ ಮಟ್ಟದ್ದಾಗಿರಬೇಕು? ನಮ್ಮಲ್ಲಿ ಆ ಪುಸ್ತಕವನ್ನು ಇನ್ನೂ ನೋಡದ ಕೆಲವರು ಇದ್ದೆವು. ಅವರೆಲ್ಲ ಅಂದೇ ಲೈಬ್ರರಿಗೆ ನುಗ್ಗಿ ಆ ಪುಸ್ತಕ ನೋಡಿ ಗುರುಗಳ ಮಾತು ಎಷ್ಟು ಸತ್ಯ ಎಂದು ಮನವರಿಕೆ ಮಾಡಿಕೊಂಡೆವು.

'ಆಧುನಿಕ ಕನ್ನಡ ಸಾಹಿತ್ಯದ ದ್ರೋಣಾಚಾರ್ಯ' ಎಂದು ಕರೆಸಿಕೊಂಡ ಡಾ. ಎ. ಆರ್. ಕೃಷ್ಣಶಾಸ್ತ್ರಿಗಳ ವಿದ್ವತ್ತು ಆ ನೆಲೆಯದು. ಸಂಸ್ಕೃತ ಕನ್ನಡಗಳಲ್ಲಿ ಅವರು ಸಾಧಿಸಿದ್ದ ಪ್ರಕಾಂಡ ವಿದ್ವತ್ತಿನ ಮಾತು ಒಂದು ಕಡೆ ಇರಲಿ, ಕನ್ನಡಕ್ಕೆ

ಅವರಿಂದ ಸಂದ ಸೇವೆ ಅದಕ್ಕೂ ಮಿಗಿಲಾದದ್ದು. ೧೯೧೮ರ ಹೊತ್ತಿಗೇ ಸೆಂಟ್ರಲ್ ಕಾಲೇಜಿನಲ್ಲಿ 'ಕರ್ಣಾಟಕ ಸಂಘ'ವನ್ನು ಹುಟ್ಟು ಹಾಕಿ ಕನ್ನಡ ಜಾಗೃತಿಯ ವಾತಾವರಣ ನಿರ್ಮಿಸಿದ್ದು, ಮಾರನೆಯ ವರ್ಷವೇ ಲೇಖಕರ ಪಾಲಿಗೆ ವಸಂತದ ಗಾಳಿಯಂತೆ ಬೀಸಿದ ಪ್ರಬುದ್ಧ ಕರ್ಣಾಟಕ ಪತ್ರಿಕೆಯನ್ನು ಹೊರಡಿಸಿದ್ದು, ಅದರ ಮೂಲಕ ಹೊಸಗನ್ನಡ ನವೋದಯದ ಅತಿರಥ ಮಹಾರಥರ ಒಂದು ಸೇನೆಯನ್ನೇ ರೂಪಿಸಿದ್ದು, ಅತ್ಯುತ್ತಮ ನೆಲೆಯ ಗದ್ಯಕೃತಿಗಳನ್ನು ರಚಿಸಿ ಕನ್ನಡ ಭಾಷೆಯ ಶಕ್ತಿ ಸೌಂದರ್ಯಗಳನ್ನು ತೋರಿಸಿಕೊಟ್ಟಿದ್ದು– ಇವೆಲ್ಲ ಅಸಾಮಾನ್ಯವಾದ ಕೆಲಸಗಳು. ಕೋಟು ಹಾಕಿ, ಪೇಟ ತೊಟ್ಟ ಆ ಕಾಲದ ಹಿರಿಯ ಕಾಲೇಜು ಅಧ್ಯಾಪಕರೊಬ್ಬರು ಸೈಕಲ್ ಮೇಲೆ ತಾವೇ ಪ್ರಬುದ್ಧ ಕರ್ಣಾಟಕದ ಸಂಚಿಕೆಗಳನ್ನು ಮನೆಮನೆಗೆ ಒಯ್ದು ಮುಟ್ಟಿಸಿ ಪತ್ರಿಕೆಯನ್ನು ಉಳಿಸಿಕೊಂಡರೆಂದರೆ ಇಂದಿನ ಜನ ನಂಬಿಯಾರೆ? ಕನ್ನಡದ ಏಳಿಗೆಗಾಗಿ ಶಾಸ್ತ್ರಿಗಳು ತೊಟ್ಟ ವೀರ ಸಂಕಲ್ಪ ಅಷ್ಟು ದೃಢವಾಗಿತ್ತು. ಹೈದರಾಬಾದ್ ಸಾಹಿತ್ಯ ಸಮ್ಮೇಳನದಲ್ಲಿ ಅವರು ಕನ್ನಡದ ಪರಹಿಡಿದು, ಹಿಂದಿ ಹೇರಿಕೆ ವಿರುದ್ಧ ನಡೆಸಿದ ಕೆಚ್ಚೆದೆಯ ಆಕ್ರಮಣವನ್ನು ಬಲ್ಲವರೆಲ್ಲ ಶಾಸ್ತ್ರಿಗಳನ್ನು ಕೆಚ್ಚೆದೆಯ ಕನ್ನಡಿಗ ಎಂದೇ ಕರೆದಾರು.

ನೂರಕ್ಕೆ ನೂರರಷ್ಟು ಪ್ರಾಮಾಣಿಕವಾಗಿ ಉಪಾಧ್ಯಾಯವೃತ್ತಿ ನಡೆಸುತ್ತಲೇ ಅವರು ಭಾಸಕವಿ, ಸಂಸ್ಕೃತ ನಾಟಕ, ಶ್ರೀಪತಿಯ ಕಥೆಗಳನ್ನು ಬರೆಯುತ್ತ ಹೋದರು. ನಿವೃತ್ತರಾದ ಮೇಲೆ ವಚನಭಾರತ, ಕಥಾಮೃತ, ಬಂಕಿಮಚಂದ್ರಗಳಂಥ ಅಸಾಧಾರಣ ಕೃತಿಗಳನ್ನು ರಚಿಸಿದರು. 'ಬಂಕಿಮಚಂದ್ರ' ಬರೆಯಲು ಅವರು ತಮ್ಮ ವೃದ್ಧಾಪ್ಯದಲ್ಲಿ ಬಂಗಾಳಿ ಕಲಿತರು ! ತೀರ ಸಹಜವಾಗಿಯೇ ಅದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗೆದ್ದುಕೊಂಡಿತು. ಮೈಸೂರು ವಿಶ್ವವಿದ್ಯಾಲಯ ಅವರ ಸಾಹಿತ್ಯ ಸೇವೆಯನ್ನು ಗೌರವಿಸಿ ಡಿ.ಲಿಟ್ ಪ್ರಶಸ್ತಿ ನೀಡಿತು. ಗೋವಿಂದ ಪೈ, ಕುವೆಂಪು, ಬೇಂದ್ರೆ, ಪುತಿನ, ಕಾರಂತ, ಡಿಎಲ್ಎನ್, ಮೂರ್ತಿರಾವ್, ಮುಗಳಿ, ಗೊರೂರು – ಇಂಥ ಅನೇಕ ಸಮರ್ಥ ಸಾಹಿತಿಗಳ ಲೇಖನಗಳಿರುವ 'ಅಭಿವಂದನೆ' ಎಂಬ ಗೌರವ ಗ್ರಂಥವನ್ನು ಅವರಿಗೆ ಅರ್ಪಿಸಲಾಯಿತು. ಟಾಗೋರರ 'ನಿಬಂಧಮಾಲಾ' ಕೃತಿಯನ್ನು ಅನುವಾದಿಸುತ್ತ ಕಡೆಯುಸಿರು ಎಳೆವವರೆಗೂ ನಿಷ್ಠೆಯಿಂದ ದುಡಿದ ಅವರು ಕನ್ನಡದ ಏಳಿಗೆಯ ಸಲುವಾಗಿಯೇ ರೂಪುಗೊಂಡ ಒಬ್ಬ ಅಸಾಧಾರಣ ವ್ಯಕ್ತಿ ಎಂದರೆ ತಪ್ಪಿಲ್ಲ.

ಕೃಷ್ಣಶಾಸ್ತ್ರಿಗಳ ಸ್ವತಂತ್ರ ಕೃತಿಗಳಿರಲಿ, ವಚನಭಾರತ, ಕಥಾಮೃತ – ಈ ಎರಡು ಸಂಗ್ರಹಾನುವಾದಗಳ ಮೇಲೆ ಕಣ್ಣಾಡಿಸಿದರೂ ಅವರ ಕರ್ತೃತ್ವ ಶಕ್ತಿಯ ಪರಿಚಯವಾಗುತ್ತದೆ.

ವಚನಭಾರತ ಕನ್ನಡದ ವ್ಯಾಸಭಾರತ ಎಂದೇ ಹೆಸರಾಗಿದೆ. ಮಹಾಭಾರತವನ್ನು ಅದರ ಔಚಿತ್ಯಕ್ಕೆ ಹೊರತಾಗದಂತೆ, ಒಟ್ಟು ಕೃತಿಯ ಆಶಯಕ್ಕೆ ಎರವಾಗದಂತೆ ಸಂಗ್ರಹಿಸಿ ಮಾಡಿದ ಅತ್ಯುತ್ತಮ ಅನುವಾದ ಅದು. ಇದನ್ನು ರಚಿಸಿ ಶಾಸ್ತ್ರಿಗಳು ಹೊಸಗನ್ನಡದ ಗದ್ಯಶಿಲ್ಪಿ ಎನಿಸಿಕೊಂಡರು. ಮಹಾಭಾರತ ತನ್ನ ಸ್ವರೂಪದ ದೃಷ್ಟಿಯಿಂದ ಒಂದು ಹೆಗ್ಗಾಡು. ಮೂಲಕಥೆಗೆ ಕೊಂಡಿಹಾಕಿಕೊಂಡಿರುವ ನೂರಾರು ಕಥೆ ಉಪಕಥೆಗಳು ಅದರಲ್ಲಿ ಹಾಸುಹೊಕ್ಕಾಗಿ ಸೇರಿವೆ. ಅದರ ಹೆಣಿಗೆ ಜಟಿಲ, ಸಂಕೀರ್ಣ. ನಳೋಪಾಖ್ಯಾನ, ಶಕುಂತಳೋಪಾಖ್ಯಾನದಂಥ ನಾಲ್ಕು ದೊಡ್ಡ ಕಾವ್ಯಗಳೇ ಅದರಲ್ಲಿ ಅಡಗಿವೆ. ಭಗವದ್ಗೀತೆಯಂಥ ಲೋಕಪ್ರಸಿದ್ಧ ದಾರ್ಶನಿಕ ಗ್ರಂಥ ಅಲ್ಲಿನ ಎರಡು ಪಾತ್ರಗಳ ನಡುವಿನ ಒಂದು ಸಂವಾದ ಮಾತ್ರ! ಆರಂಭದಲ್ಲಿ ಎಂಟು ಸಾವಿರ ಶ್ಲೋಕಗಳಿದ್ದ ಭಾರತ ಕಥೆ ಮುಂದೆ ಇನ್ನಷ್ಟು ಮತ್ತಷ್ಟು ಹಿಗ್ಗುತ್ತ ನಡೆದು, ಕಡೆಗೆ ಲಕ್ಷಕ್ಕೂ ಮೀರಿದ ಶ್ಲೋಕಗಳ ಹರಹಿಗೆ ಚಾಚಿಕೊಂಡಿತು. ಈ ಕಾವ್ಯದ ಒಟ್ಟು ಗಾತ್ರ ಗ್ರೀಕ್ ಮಹಾಕಾವ್ಯಗಳಾದ ಇಲಿಯೆಡ್, ಒಡೆಸ್ಸಿ ಎರಡನ್ನೂ ಸೇರಿಸಿದರೆ ಆಗುವುದರ ಎಂಟರಷ್ಟಿದೆ ಎಂದರೆ ಅದರ ವ್ಯಾಪ್ತಿ, ಜಟಿಲತೆಗಳು ತಿಳಿದಾವು.

ಇಂಥ ಕಾವ್ಯವನ್ನು ಸಂಗ್ರಹಿಸಿಸುವುದೇ ದುಸ್ಸಾಧ್ಯ ಕೆಲಸ. ಆದರೆ ವಚನ ಭಾರತದಲ್ಲಿ ಈ ಕೆಲಸ ಬಹಳ ಅಚ್ಚುಕಟ್ಟಾಗಿ ನೆರವೇರಿದೆ. ಇಟ್ಟುಕೊಳ್ಳಲಾಗದಷ್ಟು ದೊಡ್ಡದಾದ, ಬಿಡಲಾಗದಷ್ಟು ಮಹತ್ವದ 'ಯಕ್ಷಪ್ರಶ್ನೆ'ಯಂಥ ಭಾಗ ಒಂದೂವರೆ ಪುಟದಲ್ಲಿ, ಭಗವದ್ಗೀತೆಯ ಕಥಾಪೋಷಕ ಸಾರ ಒಂದು ಪುಟದಲ್ಲಿ ಆಕರ್ಷಕವಾಗಿ ಸಂಗ್ರಹಗೊಂಡಿರುವುದು ಕೃಷ್ಣಶಾಸ್ತ್ರಿಗಳ ಸ್ವೀಕಾರ ಕೌಶಲಕ್ಕೆ ನಿದರ್ಶನ. ಕೌಶಲವಿರುವುದು ಸಂಗ್ರಹ ಕಾರ್ಯದಲ್ಲಿ ಮಾತ್ರವಲ್ಲ. ಕಥೆಯನ್ನು ಆತ್ಮೀಯವಾದ, ಸಹಜ ಕನ್ನಡದಲ್ಲಿ ಹೆಣೆಯುವುದರಲ್ಲಿ ಶಾಸ್ತ್ರಿಗಳಿಗೆ ಸಾಟಿಯೇ ಇಲ್ಲ. ವಿರಾಟನ ಅರಮನೆಯಲ್ಲಿ ಸೈರಂಧ್ರಿಯಾಗಿದ್ದ ದ್ರೌಪದಿ ವಲಲ ಭೀಮನನ್ನು ಕಂಡಾಗ ಅವನ ಸ್ಥಿತಿಗೆ ಕಣ್ಣಿನಲ್ಲಿ ನೀರು ತಂದುಕೊಂಡು ಹೇಳಿದಳಂತೆ.

> ಹೀಗನ್ನುತ್ತಾಳೆ ಅಂತ ಕೋಪಿಸಬೇಡ. ನನ್ನ ಹೊಟ್ಟೆಯ ಸಂಕಟ ಹಾಗಿದೆ. ನೀನು ವಿರಾಟನ ರಾಣಿಯ ಮುಂದೆ ಹುಲಿಯೋ ಕೋಣವೋ ಸಿಂಹವೋ ಯಾವುದರ ಜೊತೆಗಾದರೂ ಹೋರಾಡುವಾಗ ನನ್ನ ಮನಸ್ಸು ತುಂಬ ತಳಮಳಿಸುತ್ತದೆ. ಅದನ್ನು ನೋಡಿ ರಾಣಿ ಒಂದು ದಿನ ತನ್ನ ಹತ್ತಿರವಿದ್ದ ಹೆಂಗಸರಿಗೆ ಹೇಳಿದಳಂತೆ "ಒಟ್ಟಿಗೆ ಒಂದೇ ಕಡೆ ಇರುವುದರಿಂದಲೋ ಏನೋ ಈ ಅಡಿಗೆಯವನು ಹೋರಾಡುತ್ತಿದ್ದರೆ ಸೈರಂಧ್ರಿ ಅದನ್ನು ನೋಡಿ ಕಳವಳ ಪಡುತ್ತಾಳೆ. ಅವಳೂ ಚೆನ್ನಾಗಿದ್ದಾಳೆ, ಅವನೂ ಚೆನ್ನಾಗಿದ್ದಾನೆ. ಒಬ್ಬರಿಗೊಬ್ಬರು ಅನುರೂಪರಾಗಿದ್ದಾರೆ. ಹೆಂಗಸರ ಮನಸ್ಸು ಹೀಗೆ ಅಂತ ಹೇಳುವುದಕ್ಕಿಲ್ಲ."

ಇಂಥ ಹೃದ್ಯವಾದ ನುಡಿಗಾರಿಕೆಯಿಂದ ವಚನ ಭಾರತವು ಶತಮಾನಗಳ ಹಿಂದಿನ ಕಥೆ ಎನಿಸದೆ ನಮ್ಮ ದಿನ ದಿನದ ಬದುಕಿನಿಂದ ಎದ್ದುಬಂದದ್ದು ಎನಿಸುತ್ತದೆ.

ನಾಲ್ಕು ನೂರು ಪುಟಗಳ ಈ ಭಾರತ ಕಥೆಗೆ ತೊಂಬತ್ತು ಪುಟಗಳ ಸುದೀರ್ಘ ಪೀಠಿಕೆ ಇದೆ. ಮಹಾಭಾರತದ ಕಾಲ, ಕರ್ತೃ, ಹುಟ್ಟು, ಬೆಳವಣಿಗೆ, ದರ್ಶನಗಳ ಬಗ್ಗೆ ತೂಕವಾದ ಚರ್ಚೆ, ವಿಮರ್ಶೆ ಇಲ್ಲಿದೆ. ತೂಕವಾದದ್ದೆಂದು ಅದು ಅಲ್ಲಿಯೂ ತೊಡಕಾಗುವುದಿಲ್ಲ, ವಿಮರ್ಶೆಯೆಂದು ಎಲ್ಲಿಯೂ ಜಡವಾಗುವುದಿಲ್ಲ. ಸನ್ಯಾಸ, ಯಜ್ಞ, ದಾನ, ತಪಸ್ಸು, ಅಹಿಂಸೆ ಕರ್ಮ ಮೊದಲಾದ ತಾತ್ವಿಕ ಪರಿಕಲ್ಪನೆಗಳ ಬಗ್ಗೆ ಇಲ್ಲಿನ ಮನತಾಕುವ ಜಿಜ್ಞಾಸೆಯಾಗಲೀ, ಇಂದಿನ ಪ್ರಪಂಚಕ್ಕೆ ಮಹಾಭಾರತದ ಸಂದೇಶ ಎಂಬ ಭಾಗದಲ್ಲಿ ಕಾಣುವ ಭಾರತಕಥೆಯ ಪ್ರಸ್ತುತತೆಯ ಚರ್ಚೆಯಾಗಲೀ ಅಮೂಲ್ಯವಾದದ್ದು. ಪರಂಪರೆ ಮತ್ತು ವರ್ತಮಾನಗಳ ಸಂಬಂಧದ ಗಾಢಗ್ರಹಿಕೆ ಇರುವ ಚಿಂತನಶೀಲ ಮನಸ್ಸು ಇಲ್ಲಿ ಉದ್ದಕ್ಕೂ ಕಾಣಸಿಗುತ್ತದೆ. ಶಾಸ್ತ್ರಿಗಳ ಬರೆಹ ವಿಮರ್ಶೆಯಾಗಿದ್ದಾಗಲೂ ರಸಾರ್ದ್ರವಾಗಿದೆ. ಅದನ್ನು ತಿಳಿಯಲು ಚಂಡಿಕಥೆಯ ಸಂಬಂಧದಲ್ಲಿ ಸಂಸಾರದ ಬಗ್ಗೆ ಅವರು ಬರೆಯುವ ಈ ಸಣ್ಣ ವಾಕ್ಯವೃಂದ ಕೂಡ ಒಂದು ನಿದರ್ಶನ.

> **ಸ್ನೇಹವಿಲ್ಲದ ಸಂಸಾರ ಎಂಥ ಸಂಸಾರ? ಅದು ಮರಳುಗಾಡು ಇಲ್ಲವೆ ಕುರುಕ್ಷೇತ್ರ. ಜೊತೆಯಲ್ಲೇ ಬಾಳಬೇಕಾದವರು ಅಹಿತರಾದರೆ ಕಾಲಿನಲ್ಲಿ ಮುಳ್ಳು ಚುಚ್ಚಿ ಮುರಿದುಕೊಂಡಂತೆ. ತೆಗೆದರೆ ಗಾಯ ತೆಗೆಯದಿದ್ದರೆ ನೋವು, ನಡಿಗೆ ಕುಂಟು. ಯಾವ ಕೆಲಸದಲ್ಲಿದ್ದರೂ ನೋವಿನ ಮೇಲೇ ಜ್ಞಾನ. ಸಂಸಾರದಲ್ಲಿ ಗಂಡನೋ ಹೆಂಡತಿಯೋ ಎಡವಟ್ಟಾದರೆ ಪಾರ್ಶ್ವವಾಯುವಿನಿಂದ ಅರ್ಧದೇಹವೇ ಹೋದಂತೆ. ಮನಸ್ಸು ಒಡೆದರೆ ಮಡಕೆ ಒಡೆದ ಹಾಗೇ. ಮತ್ತೇ ಆ ಚೂರುಗಳೇ ಅಂಟುವುದಿಲ್ಲ, ಹೊಸ ಚೂರುಗಳು ಅಂಟುವುದು ನಿಜವೇ? ಗಡಿಗೆ ಇರಬೇಕೆನ್ನುವವರು ಮಡಕೆ ಒಡೆಯದ ಹಾಗೆ ನೋಡಿಕೊಳ್ಳಬೇಕು. ಅದೇ ವಿವೇಕ.**

ಮನೋಜ್ಞವಾದ ಚಿಂತನೆ. ಅದರ ರಸಾತ್ಮಕವಾದ ಮಂಡನೆ. ಬೆಳದಿಂಗಳಲ್ಲಿ ಥಳಥಳಿಸುತ್ತ ಹರಿಯುವ ಬೆಳ್ಳಿಯ ಪ್ರವಾಹದಂತೆ ತೋರುವ ಮಾತು. ಇದಕ್ಕೆ ಮರುಳಾಗದವರು ಯಾರು? ಮಾತಿನ ಹೃದಯ ಬಲ್ಲ ನರಸಿಂಹಸ್ವಾಮಿಯಂಥ ಕವಿಯೇ ವಚನಭಾರತದ ಬರೆಹಕ್ಕೆ ಬೆರಗಾಗಿ ಅದರ ಬಗ್ಗೆ ಒಂದು ಕವಿತೆ ಬರೆದರು ಎಂದರೆ ಅದಕ್ಕೆ ಬೇರೆ ಪ್ರಶಂಸೆ ಯಾಕೆ?

ಕೃಷ್ಣಶಾಸ್ತ್ರಿಗಳ 'ಕಥಾಮೃತ' ಸಂಸ್ಕೃತದ 'ಕಥಾಸರಿತ್ಸಾಗರ' ಎಂಬ ೨೨೦೦೦ ಶ್ಲೋಕಗಳ ಬೃಹತ್ ಕಾವ್ಯದ ಗದ್ಯಾನುವಾದ. ಕಥಾಸರಿತ್ಸಾಗರ ಎಂದರೆ ಕಥೆಗಳೆಂಬ

ನದಿಗಳು ಬಂದು ಸೇರಿ ಆಗಿರುವ ಸಾಗರ ಎಂದು ಅರ್ಥ. ಅಕ್ಷರಶಃ ನೂರಾರು ಕಥೆಗಳಿಂದ ಕೂಡಿದ್ದು, ಕಥೆ-ಉಪಕಥೆಗಳ ಗಣಿಯೆನಿಸಿರುವ ಈ ಗ್ರಂಥವನ್ನು ಸೋಮದೇವ ಎಂಬ ಸಂಸ್ಕೃತಕವಿ ಸುಮಾರು ಕ್ರಿ.ಶ. ೧೦೭೦ರಲ್ಲಿ ರಚಿಸಿದ. ಗುಣಾಢ್ಯ ಎಂಬ ಕವಿ ಸಹಸ್ರಾರು ವರ್ಷಗಳ ಹಿಂದೆ ಪೈಶಾಚೀ ಭಾಷೆಯಲ್ಲಿ ಬರೆದ 'ಬೃಹತ್ಕಥಾ' ಎಂಬ ಕಾವ್ಯವೇ ಇದಕ್ಕೆ ಮೂಲ ಎನ್ನುತ್ತಾರೆ. ತಮಿಳಿನ 'ಪೆರುಂಗತೈ' ಎಂಬ ಹಳೆಯ ಕಾವ್ಯ ಕೂಡ ಬೃಹತ್ಕಥೆಯ ಭಾಷಾಂತರವೇ ಎಂಬ ಅಭಿಪ್ರಾಯವಿದೆ.

ಪ್ರಾಚೀನ ಕಾಲದಲ್ಲಿಯೇ ಬೃಹತ್ಕಥೆಯ ಕಥೆಗಳು ದೇಶದಾಚೆಗೆ ಪ್ರಯಾಣ ಮಾಡಿವೆ. ಅರೇಬಿಯನ್ ನೈಟ್ಸ್, ಬೊಕಾಚಿಯೋ ಕಥೆಗಳು, ಚಾಸರನ ಕ್ಯಾಂಟರ್‌ಬರಿ ಕಥೆಗಳು, ಅಷ್ಟೇ ಯಾಕೆ ಷೇಕ್ಸ್‌ಪಿಯರ್‌ನ ಹಲವು ನಾಟಕಗಳಿಗೆ ಬಳಕೆಯಾದ ವಸ್ತು ಸಾಮಗ್ರಿಗಳೂ ಬಹಳ ಹಿಂದೆ ಈ ಕಥೆಗಳಿಂದಲೇ ರೂಪುಗೊಂಡವು ಎನ್ನುತ್ತಾರೆ. ಅದೇನೇ ಇರಲಿ, ಬೃಹತ್ಕಥೆ ಈಗ ಲಭ್ಯವಿಲ್ಲ. ಇರುವುದೇನಿದ್ದರೂ ಅದು ಹಡೆದ ಕಥಾಸರಿತ್ಸಾಗರ ಮಾತ್ರ.

ಕಥಾಸರಿತ್ಸಾಗರದ ಮುಖ್ಯಕಥೆ ವತ್ಸರಾಜ ಮತ್ತು ಅವನ ಮಗ ನರವಾಹನ ದತ್ತರಿಗೆ ಸಂಬಂಧಿಸಿದ್ದು. ಆದರೆ ಈ ಕಥೆಯ ಪ್ರತ್ಯಂಗುಲಕ್ಕೂ ಹೊಸ ಕಥೆಗಳು ಚಿಗುರುತೊಡಗುತ್ತವೆ. ಹೊಸ ಕಥೆಗಳ ಸನ್ನಿವೇಶ ಬೇರೆ ಹಲವು ಕಥೆಗಳನ್ನು ಎಬ್ಬಿಸುತ್ತದೆ. ಒಂದು ಗಿಡದಲ್ಲಿ ಹತ್ತಾರು ಟೊಂಗೆ, ಟೊಂಗೆಗೆ ಹತ್ತಾರು ಹೂವು, ಹೂವಿಗೆ ಹತ್ತಾರು ದಳ - ಹೀಗೆ ಕಥಾಗುಚ್ಛ ಎಳೆ ಜೋಡಿಸಿಕೊಳ್ಳುತ್ತಲೇ ಹೋಗುತ್ತದೆ. ಫಲವಾಗಿ ನೂರಾರು ಕಥೆ ಉಪಕಥೆಗಳಿಂದ ಕೂಡಿ ಕಥೆಗಳ ಕೊಪ್ಪರಿಗೆಯೇ ಆಗಿದೆ ಕಥಾಸರಿತ್ಸಾಗರ.

ಕಥಾಸರಿತ್ಸಾಗರದಲ್ಲಿ ಹೆಚ್ಚು ಒತ್ತು ಇರುವುದು ಅರ್ಥ ಕಾಮಗಳ ಮೇಲೆಯೇ ಹೊರತು ಧರ್ಮ ಮೋಕ್ಷಗಳಂಥ ಮೌಲ್ಯಗಳ ಮೇಲಲ್ಲ. ಇದರ ಉಪಕಥೆಗಳೆಲ್ಲ ಕೆಳಮಧ್ಯಮವರ್ಗದ, ಇನ್ನೂ ಕೆಳಹಂತದ ಸಾಮಾನ್ಯ ಪಾತ್ರಗಳಿಂದ ಕೂಡಿವೆ. ಇಲ್ಲಿ ಸಭ್ಯರು ಮಾನವಂತರು ಇದ್ದಾರೆ. ಜೊತೆಗೇ ಕಳ್ಳರು ಖದೀಮರು ಜೂಜಿಗರು, ಮೂರ್ಖರು ಘಟಿಂಗರೂ ಹೆಜ್ಜೆ ಹೆಜ್ಜೆಗೆ ಹಾಜರಾಗುತ್ತಾರೆ. ಮನುಷ್ಯರ ಜೊತೆ ಭೂತ ಭೇತಾಳ, ಯಕ್ಷ ರಾಕ್ಷಸ, ಪಿಶಾಚಿ ಗಂಧರ್ವರೂ ಓಡಾಡುತ್ತಾರೆ. ಸಿಂಹ ಹುಲಿ ಆನೆ ಕುದುರೆ ಕತ್ತೆಗಳಂಥ ಪ್ರಾಣಿಗಳೂ ಒಡನಾಡುತ್ತವೆ. ಈ ಕಾವ್ಯದ ಚಿತ್ರಭಿತ್ತಿ ಬಹಳ ವಿಸ್ತಾರವಾದದ್ದು, ವೈವಿಧ್ಯಪೂರ್ಣವಾದದ್ದು, ಓದುಗರನ್ನು ದಂಗು ಬಡಿಸುವಂಥದ್ದು.

ಕೃಷ್ಣಶಾಸ್ತ್ರಿಗಳ ಅನುವಾದ ಅಡಕವಾಗಿದೆ, ಬಿಗಿಯಾಗಿದೆ, ಆಕರ್ಷಕವಾಗಿದೆ. ಕೃತಿಗೆ ಮೂರು ಉಪಯುಕ್ತ ಅನುಬಂಧಗಳಿವೆ. ಎಲ್ಲಕ್ಕಿಂತ ಮಿಗಿಲಾದದ್ದು ಅದರ ಪೀಠಿಕೆ. ಅದು ಬೆರಗು ಕವಿಸುವಷ್ಟು ಅಧ್ಯಯನ ಪೂರ್ಣವಾಗಿದೆ. ಆದರೆ ವಿದ್ವತ್ತು ಇರುವುದೆಲ್ಲ ಕೃತಿಯ ಬುಡಕ್ಕಿರುವ ಅಧ್ಯಯನದಲ್ಲಿ. ನಿರೂಪಣೆ ಮಾತ್ರ ಅದರ ಭಾರಕ್ಕೆ ಸೊರಗದೆ ಅತ್ಯಂತ ಮೋಹಕವಾಗಿದೆ. ಮೇಲುನೋಟಕ್ಕೆ ಸರಳವಾಗಿ ಕಾಣುವ ಒಂದು ಕೃತಿಯ ಹಿಂದೆ ಎಂಥ ಪ್ರಕಾಂಡ ಪಾಂಡಿತ್ಯ ಅಡಗಿರಬಲ್ಲುದು ಎನ್ನಲು ಕಥಾಮೃತ ಒಂದು ಉತ್ತಮ ನಿದರ್ಶನ.

●

ಗುಣಾಢ್ಯ

ತುಸು ತಾಮ್ರ ಬೆರೆತಂಥ ಅಪರಂಜಿ ನೀವಾಗಿ,
ಕಾವು ಸಾಲದ ಕನ್ನಡಿಗರಲ್ಲಿ ನಸು ಬಿಸುಪು
ಮೂಡಿಸಲು ಹೂಡಿದಿರಿ ಹೋರಾಟವನು: ಸಫಲ
ವಾಯಿತೇ, ವಿಫಲವೇ, ಇಂದಿಗೂ ಗೊತ್ತಿಲ್ಲ!

ಕತೆ ಹೇಳಿದಿರಿ ನೀವು, ಕೃತಿಗಳನು ಒರೆಹಚ್ಚಿ-
ದಿರಿ; ಕನ್ನಡದ ದೀಪವನು ಹಚ್ಚಿದಿರಿ, ಕಾಪು
ಕೊಟ್ಟು, ನಾಡನು ನಡೆಸಿದಿರಿ ಪ್ರಬುದ್ಧತೆಯತ್ತ!
ದೇವಭಾಷೆಯ, ಅಂತೆ ವಂಗಭಾಷೆಯ ತಿರುಳ
ತಂದುಡಿಸಿದಿರಿ ತಾಯ್ಗೆ ದೇವಾಂಗವನು! "ಇತ್ತ
ಬಂಗಾಳಕೊಲ್ಲಿಯಿದೆ, ಅತ್ತ ಅರಬಿ ಸಮುದ್ರ-
ಬೇಡವಾದರೆ ಕನ್ನಡವ ಗುಡಿಸಿ ಹಾಕಿ ಬಿಡಿ!"
ಎಂದು ವ್ಯಾಕುಲದಿಂದ ನುಡಿದ ನುಡಿಯೇನಾಯ್ತು?

ಇಂದಿಗೂ ಬೇಕಿಲ್ಲ ನಮಗೆ ಕನ್ನಡ; ಜಾಡ್ಯ
ಪೀಡಿತರು ನಾವು: ಎಚ್ಚರಿಸಿ ಮತ್ತೆ, ಗುಣಾಢ್ಯ!

—ಸಿ.ಪಿ.ಕೆ.

ಕಾದಂಬರಿ ಲೋಕದ ಕಾಂಚನಗಂಗಾ
ಶಿವರಾಮ ಕಾರಂತ

ಜ್ಞಾನಪೀಠ ಕನ್ನಡಕ್ಕೆ ಮೂರನೆಯ ಸಲ ಸಿಗುತ್ತಿದೆ. ಈ ಬಾರಿ ಅದು ಕಾರಂತರಿಂದ. ಯಾರೂ ಆಹಾ, ಓಹೋ, ಎನ್ನುತ್ತಿಲ್ಲ. ಅದು ಕಾರಂತರ ಸಹಜ ಹಕ್ಕು ಎನ್ನುವ ಭಾವನೆ ಎಲ್ಲರಲ್ಲೂ.

ಕಾರಂತ ಕನ್ನಡ ಸಾಹಿತ್ಯ ಪ್ರಪಂಚದಲ್ಲಿಯೇ ಒಂದು ಅಪರೂಪದ ವ್ಯಕ್ತಿತ್ವ. ಅವರಷ್ಟು ಬಗೆ ಬಗೆಯ ಆಸಕ್ತಿ ಬೆಳೆಸಿಕೊಂಡವರಾಗಲಿ, ಕುತೂಹಲದ ರೇಸು ಕುದುರೆ ಹತ್ತಿ, ಸುಖದುಃಖಗಳ ಕಾಡುಮೇಡುಗಳಲ್ಲಿ ಅಲೆದವರಾಗಲಿ, ಆ ಅನುಭವಗಳನ್ನೆಲ್ಲ ಸಾಹಿತ್ಯದಲ್ಲಿ ಸಾಮಗ್ರಿಯಾಗಿ ಹೂಡಿ ಬೆರಗು ಕವಿಸಿದವರಾಗಲಿ ಕನ್ನಡ ಸಾಹಿತಿಗಳಲ್ಲಿ ಈವರೆಗೆ ಇನ್ನೊಬ್ಬರಿಲ್ಲ. ಪ್ರಕೃತಿ, ಮಾನವ, ಸಮಾಜ – ಇವುಗಳ ಸ್ವತಂತ್ರ ಅಂದ ಚೆಂದ, ಪರಸ್ಪರ ಸಂಬಂಧಗಳನ್ನು ಅವರಂತೆ ಮೈಮನಸ್ಸು ಬಳಸಿ ಅನ್ವೇಷಿಸಿದವರು ಅಪರೂಪ. ಕಾರಂತ ಪ್ರಸಿದ್ಧರಾಗಿರುವುದು ಕಾದಂಬರಿಕಾರರಾಗಿಯಾದರೂ ಅವರ ವಿಕ್ರಮಗಳು ಅನೇಕ. ಸಾಹಿತ್ಯ, ವಿಜ್ಞಾನ, ನೃತ್ಯ, ಸಂಗೀತ, ಚಲನಚಿತ್ರ, ಯಕ್ಷಗಾನ, ರಾಜಕಾರಣ, ಸಮಾಜ ಸುಧಾರಣೆ – ಎಲ್ಲದರಲ್ಲೂ ಹೊಕ್ಕು ಬಳಸಿ ಸುತ್ತಾಡಿ ಅದನ್ನೆಲ್ಲ ತಮ್ಮ ಕಾದಂಬರಿಗಳಲ್ಲಿ ಮೆಲುಕು ಹಾಕಿದವರು ಅವರು.

ಕಾರಂತರದು ಉದ್ದಕ್ಕೂ ಕ್ರಿಯಾಮಯವಾದ ಜೀವನ. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಅವರು ಗಾಂಧೀ ಆದರ್ಶಗಳನ್ನು ಕಟ್ಟಿಕೊಂಡು ಕಾಲೇಜು ಬಿಟ್ಟರು. ರಾಜದ್ರೋಹದ ಆಪಾದನೆಗೆ ಸಿಗಿಸಬಹುದಾದ ಲೇಖನ ಬರೆದರು. ಕರಾಟೆ ಮಾಡಿಸಿ, ಹಿಂಜಿದ ಹತ್ತಿ ಒದಗಿಸಿ, ಖಾದಿ ನೇಯಿಸಿ ಮನೆ ಬಾಗಿಲುಗಳಿಗೆ ಹೊತ್ತು ಮಾರಿದರು. ವೇಶ್ಯೆಯರ ಹೆಣ್ಣುಮಕ್ಕಳಿಗೆ ಮದುವೆ ಮಾಡಿಸಿ ಅವರನ್ನು

ಉತ್ತಮ ಜೀವನಕ್ಕೆ ಹತ್ತಿಸುವ ಪ್ರಯತ್ನಕ್ಕೂ ಅವರು ಕೈಹಾಕಿದ್ದುಂಟು. ಅವರಿಗೆ ಗಂಡು ಹುಡುಕಿ ನಿರಾಶರಾದ ಕಾರಂತರು ಯಾರನ್ನಾದರೂ ಸೂಚಿಸುವಂತೆ ಗಾಂಧೀಜಿಯನ್ನು ಕೇಳಿದರು. ಅಂಥ ಹೆಣ್ಣು ಮಕ್ಕಳು ಬ್ರಹ್ಮಚರ್ಯ ಕೈಗೊಳ್ಳಲಿ ಎಂದರು ಗಾಂಧೀಜಿ. ಆದರೆ ಕಾರಂತ ಆ ವಿಷಯದಲ್ಲಿ ಗಾಂಧೀಜಿಗಿಂತ ಹೆಚ್ಚು ಮಾನವೀಯವಾಗಿ ಚಿಂತಿಸಿದವರು. ಏನೆಲ್ಲ ಮಾಡಿ ಅಂಥ ಮೂರ ಹೆಣ್ಣುಗಳಿಗೆ ಅವರು ಮದುವೆ ಮಾಡಿಸಿದರು. ಬೀದಿಗೆ ಬಿದ್ದ ಬದುಕಿಗೆ ಮರ್ಯಾದೆಯ ಮನೆ ಕಟ್ಟಿಕೊಟ್ಟರು.

'ವಸಂತ' ಸಂಪಾದಕ

ಕಾರಂತರ ಯೌವನವೆಲ್ಲ ಸಮಾಜವನ್ನು ತಿದ್ದುವ ಸಾಹಸಗಳಲ್ಲಿ ಸವೆಯಿತು. ಇಪ್ಪತ್ತೆರಡನೆಯ ವಯಸ್ಸಿಗೇ ಅವರು ಇನ್ನಿಬ್ಬರು ಸ್ನೇಹಿತರ ಜೊತೆಯಲ್ಲಿ 'ವಸಂತ' ಎಂಬ ಪತ್ರಿಕೆ ಆರಂಭಿಸಿ ಅದರ ಸಂಪಾದಕರಾಗಿದ್ದರು. ಪತ್ರಿಕೆಗೆ ಲೇಖನ ತುಂಬಿಸುವುದೇನು ಸಾಮಾನ್ಯ ಕೆಲಸವಾಗಿರಲಿಲ್ಲ. ಅದರ ಭರದಲ್ಲಿ ಕಾರಂತರು ಸೆಕ್ಸ್‌ಟನ್ ಬ್ಲೇಕನ್ ಮಾದರಿಯ ಎರಡು ಪತ್ತೆದಾರಿ ಕಾದಂಬರಿ ಕೂಡ ಬರೆದರು. ಅವುಗಳಲ್ಲಿ ಒಂದು 'ಭೂತ', ಇನ್ನೊಂದು 'ವಿಚಿತ್ರಕೂಟ'. ಆ ಕಾದಂಬರಿಗಳಲ್ಲಿ ನಾನು ಎಷ್ಟೆಲ್ಲ ಗುಂಡುಹಾರಿಸಿದ್ದೇನೆ. ಯಾರ ಯಾರ ಕೊಲೆ ಮಾಡಿಸಿದ್ದೇನೆ ಎನ್ನುವುದು ಈಗ ನನಗೆ ನೆನಪಿಲ್ಲ ಎಂದು ಕಾರಂತರೇ ನಗುತ್ತಾರೆ. ಕಾವ್ಯ ಎಂದೂ ಅವರಿಗೆ ದೊಡ್ಡದಾಗಿ ಕಂಡಂತಿಲ್ಲ. "ಲೇಖನಗಳು ಮುಗಿದ ಮೇಲೆ ಉಳಿಯುವ ಖಾಲಿ ಜಾಗದಲ್ಲಿ ಕವನ ಹಾಕಿದರೆ ನೋಡಲು ಚಂದ ಇರುತ್ತದೆ. ಆದ್ದರಿಂದ ಕವನಗಳಿದ್ದರೆ ಕಳಿಸಿ" ಎಂದು ಅವರು ಗೋವಿಂದ ಪೈಗಳಿಗೆ ಬರೆದಿದ್ದರಂತೆ! ಒಮ್ಮೆ ನನ್ನೊಡನೆ ಮಾತನಾಡುತ್ತಿದ್ದಾಗ "ನಿಮ್ಮ ಕಾವ್ಯಗೀವ್ಯಗಳೆಲ್ಲ ಯಾರಿಗೆ ತಿಳಿಯುತ್ತವೆ?" ಅದರಿಂದ ಏನು ಉಪಯೋಗ? ರಾಮಾಯಣ ಮಹಾಭಾರತ ಬಿಟ್ಟರೆ ಯಾವ ಕಾವ್ಯ ಜನರನ್ನು ಮುಟ್ಟಿದೆ?" ಎಂದು ಅವರು ರೇಗಿ ಕೇಳಿದ್ದುಂಟು (ಕಾವ್ಯದ ಬಗ್ಗೆ ಅವರಿಗಿರುವ ಉದಾಸೀನ ಅವರ ಕೃತಿಗಳ ಸ್ವರೂಪದಲ್ಲಿ ಇದಕ್ಕಿಂತ ಚೆನ್ನಾಗಿ ವ್ಯಕ್ತವಾಗಿದೆ).

ನಮ್ಮ ಸಾಹಿತಿಗಳಲ್ಲಿ ಮೊದಲು ಚಿತ್ರ ತೆಗೆದವರು ಕಾರಂತರೇ! ಅದು ೧೯೨೨ರಲ್ಲಿ. ಆಗ ಅವರಿಗೆ ಇನ್ನೂ ಮೂವತ್ತು ವರ್ಷ. ಅವರ ಮೊದಲ ಚಿತ್ರ 'ಡೊಮಿಂಗೊ' – ಹರಿಜನ ಸುಧಾರಣೆಯ ಕಥೆ. ಮೊದಲ ಪ್ರದರ್ಶನದ ವೇಳೆಯಲ್ಲೇ ಅದು ಬೆಂಕಿಯ ಪಾಲಾಯಿತು. ಬೇರೆಯವರಾಗಿದ್ದರೆ ಇಲ್ಲಿಗೇ ಸಿನಿಮಾ ಕೈಬಿಡುತ್ತಿದ್ದರು. ಆದರೆ ಅವರು ಕಾರಂತರಷ್ಟೇ! 'ಭೂತರಾಜ್ಯ' ಎಂಬ ಇನ್ನೊಂದು

ಚಿತ್ರ ತೆಗೆದರು. ಅದಕ್ಕೆ ಅವರೇ ನಿರ್ದೇಶಕರು. ಅವರದೇ ಚಿತ್ರಕಥೆ. ಅವರೇ ಕ್ಯಾಮರಾಮನ್. ಚಿತ್ರದ ಮುಖ್ಯ ನಟ ಕೂಡ ಅವರೇ! ಬಹುಶಃ ಇಡೀ ಭಾರತದಲ್ಲೇ ಅತ್ಯಂತ ಕಡಿಮೆ ಖರ್ಚಿನಲ್ಲಿ ತಯಾರಾದ ಚಿತ್ರ ಇರಬೇಕು ಅದು! ಅದರ ಹಂಚಿಕೆದಾರ ಕೊಡಬೇಕಾದ ಹಣವನ್ನು ನುಂಗಿ, ಚಿತ್ರವನ್ನು ಎಲ್ಲೋ ಅಡವಿಟ್ಟು ತಲೆತಪ್ಪಿಸಿಕೊಂಡ. ಕಾರಂತರಿಗೆ ಚಿತ್ರದಿಂದ ಹಣ ಬರುವುದಿರಲಿ, ಅವರೇ ಇನ್ನಷ್ಟು ಹಣ ತೆತ್ತು ಅದನ್ನು ಬಿಡಿಸಿಕೊಳ್ಳಬೇಕಾಯಿತು.

ಅಪೂರ್ವ ಪ್ರವಾಸ ಕಥನ

ಕಾರಂತರಿಗೂ ಪ್ರವಾಸಕ್ಕೂ ಗಂಟು. ನಿಸರ್ಗ, ನಿರ್ಮಿತಿ, ಕಲೆ, ಮ್ಯೂಸಿಯಂ ಎಂದು ಅವರು ದೇಶದ ಮೂಲೆ ಮೂಲೆ ಅಲೆದವರು; ಸಾಲಮಾಡಿ ವಿದೇಶಯಾತ್ರೆ ಮುಗಿಸಿ ಬಂದವರು! ಆ ಅನುಭವ ಕುರಿತು ಅವರು ಬರೆದ 'ಅಪೂರ್ವ ಪಶ್ಚಿಮ' ಇವತ್ತಿಗೂ ಸೊಗಸಾದ, ವಿಷಯಭರಿತವಾದ ಪ್ರವಾಸ ಕಥನ. ಬೇರೆ ಬೇರೆ ದೇಶ ಅಲೆದು, ಬೇರೆ ಬೇರೆ ಜನರ ರೀತಿ ನೀತಿ ಕಂಡು ಕಾರಂತರ ವಿಚಾರ ಮಾರ್ಗ ವಿಶಾಲಪಥವಾಯಿತು. ಈವರೆಗೆ ನಡೆದಿರುವ ಮಾನವನ ದೀರ್ಘ ಸಾಂಸ್ಕೃತಿಕ ಯಾತ್ರೆಯ ನಕ್ಷೆಯನ್ನು ಕಲ್ಪಿಸಿಕೊಳ್ಳಲು ಬೇಕಾದ ಮೂಲದ್ರವ್ಯ ಸಹ ಬಹುಮಟ್ಟಿಗೆ ಈ ಪ್ರವಾಸದ ಸಂಪಾದನೆ ಎನ್ನಬೇಕು. "ಮೂಕಜ್ಜಿಯ ಕನಸು"ಗಳಲ್ಲಿ ಈ ಸಂಪಾದನೆ ಅರ್ಥಪೂರ್ಣವಾಗಿ ಬಳಕೆಯಾಗಿದೆ.

ಕಾರಂತ ಬರಿಯ ಕಾದಂಬರಿಕಾರರಲ್ಲ; ಬೇಕಾದಷ್ಟು ನಾಟಕ ಬರೆದಿದ್ದಾರೆ. ಗದ್ಯನಾಟಕ, ಪದ್ಯನಾಟಕ, ನೃತ್ಯನಾಟಕ ಎಲ್ಲ ಪ್ರಯೋಗ ಅವರಿಂದಾಗಿದೆ. ಬರೆದದ್ದಷ್ಟೇ ಅಲ್ಲ ಅವುಗಳನ್ನು ಆಡಿದ್ದಾರೆ, ಆಡಿಸಿದ್ದಾರೆ, ಬಾಲವನದಂಥ ಸ್ಕೂಲು ನಡೆಸಿದ್ದಾರೆ. ಮಕ್ಕಳಿಗಾಗಿ ಬಾಲಪ್ರಪಂಚ ಬರೆದಿದ್ದಾರೆ, ನೃತ್ಯ ಕಲಿಸಿದ್ದಾರೆ. ಅವರು ಮದುವೆಯಾದದ್ದು ಸಹ ತಮ್ಮಿಂದ ಕುಣಿತ ಕಲಿತ ಒಬ್ಬ ಶಿಷ್ಯೆಯನ್ನೇ. ಆ ಕಾಲಕ್ಕೆ ಈ ಬ್ರಾಹ್ಮಣನ ಅಂತರ್ಜಾತೀಯ ಸಾಹಸ ವೈದಿಕರಿಗೆ ನುಂಗಲಾರದ ತುತ್ತಾಯಿತು. ಒಬ್ಬ ಪತ್ರಿಕಾ ಸಂಪಾದಕನಂತೂ ಕಾರಂತರನ್ನು ಚುಚ್ಚಿ ನಿಂದಿಸಿ ಅಪಪ್ರಚಾರದ ಕೋಲಾಹಲವನ್ನೇ ಎಬ್ಬಿಸಿದ. ಕಾರಂತ ಕೆರಳಿ ಕೆಂಡವಾದರು. ದಾವೆ ಹೂಡಿ ಅವನನ್ನು ಕೋರ್ಟಿಗೆ ಎಳೆದರು. ಕೋರ್ಟು ಸಂಪಾದಕನಿಗೆ ದಂಡ ವಿಧಿಸಿತು. ಆದರೆ ಅವನು ತಾನೆ ಅಂಥಿಂಥವನಲ್ಲ, 'ವೀರ ಸನಾತನಿ'. ದಂಡ ತೆರಲು ಒಪ್ಪದೆ ಅವನು ಜೈಲಿಗೇ ಹೋದ!

ಕಾರಂತ ನಿರಂತರವಾಗಿ ಕಾದಂಬರಿಗಳನ್ನು ಬರೆಯುತ್ತಲೇ ಇದ್ದಾರೆ. ಚೋಮನದುಡಿ, ಮರಳಿಮಣ್ಣಿಗೆ, ಬೆಟ್ಟದ ಜೀವ, ಕುಡಿಯರ ಕೂಸು, ಅಳಿದಮೇಲೆ,

ನಂಬಿದವರ ನಾಕನರಕ, ಮೂಕಜ್ಜಿಯ ಕನಸು – ಇಂಥ ಎಷ್ಟೋ ಉತ್ತಮ ಕೃತಿಗಳನ್ನು ಅವರು ನಾಡಿಗೆ ಕೊಟ್ಟಿದ್ದಾರೆ. 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಅವರು ಚಿತ್ರಿಸಿರುವ ನಿಸರ್ಗ, ಅದರ ರುದ್ರರಮ್ಯ ನಾಟಕ, ಅದರ ತೆಕ್ಕೆಯಲ್ಲಿರುವ ಮನುಷ್ಯ ಮತ್ತು ಬದುಕಿಗಾಗಿ ಅವನ ಸಾಹಸ ಇವೆಲ್ಲ ಅದ್ಭುತವೆನಿಸುವಷ್ಟು ಪರಿಣಾಮಕಾರಿಯಾದವು. ಚೋಮನ ದುಡಿ ಮತ್ತು ಬೆಟ್ಟದ ಜೀವದ ಎಷ್ಟೋ ಭಾಗಗಳು ಭಾವಗೀತೆಗಳಂತೆ ಹರಿಯುತ್ತವೆ. ತನ್ನ ಸುತ್ತಲ ಲೋಕವನ್ನು ಸುಧಾರಿಸುವ ಬಗ್ಗೆ, ಜೀವದ ಭಾವಾಲಾಪಗಳನ್ನು ಒಂದು ಶಿಸ್ತಿಗೊಳಪಡಿಸಿ ಅವುಗಳನ್ನು ಸಂಸ್ಕೃತಿಯಾಗಿ ಪರಿವರ್ತಿಸುವ ಬಗ್ಗೆ ಕಾರಂತರಿಗಿರುವ ಅಪಾರವಾದ ಕಳಕಳಿ ಅವರನ್ನು ನಮ್ಮ ಶ್ರೇಷ್ಠ ಬರೆಹಗಾರರಲ್ಲಿ ಒಬ್ಬರನ್ನಾಗಿ ಮಾಡಿದೆ.

ನವೋದಯ ಸಾಹಿತ್ಯದಲ್ಲಿ ಕಡೆಕಡೆಗೆ ಹೆಚ್ಚಿನ ಬರಹಗಳು ಅನುಭವ ಮುಖಿಯಲ್ಲದ ಮಾತು, ಕಲಿತ ವೇದಾಂತ, ಭಾವವಶತೆಗಳಿಗೆ ಬಲಿಯಾಗಿ ನರಳುತ್ತಿದ್ದಾಗ ಕಾರಂತರ ವಾಸ್ತವ ನೋಟ ಮತ್ತು ಅನುಭವಕ್ಕೆ ದಕ್ಕದುದನ್ನು ಆಡೆನೆನ್ನುವ ಪ್ರಾಮಾಣಿಕತೆ, ವೈಚಾರಿಕತೆಗಳು ಅಮೂಲ್ಯವಾದ ಸಂಗತಿಗಳೆನಿಸಿದವು. ಆದರೆ ಕಾರಂತರ ಬರೆಹದಲ್ಲಿ ಸಹ ಒಂದು ಕೊರತೆ ಇಲ್ಲದಿಲ್ಲ. ಅವರ ಕಾದಂಬರಿಗಳಲ್ಲಿ ಕಾಣುವ ವಸ್ತುಲೋಕ ನಿಜಲೋಕದ ವಿವರಗಳಿಗೆ ಅತ್ಯಂತ ಪ್ರಾಮಾಣಿಕವಾದದ್ದು. ಅದರ ಎಳೆಗಳನ್ನು ಅವರು ವಿವರವಾಗಿ, ದಟ್ಟವಾಗಿ ಯೋಜನಾಬದ್ಧವಾಗಿ ಹೆಣೆಯುತ್ತಾರೆ. ಆದರೆ ಅದು ಲೋಕವಿವರಗಳ ಪ್ರತಿರೂಪವಾಗುವ ಹಾಗೆ, ಅನುಭವದ ಅತ್ಯಂತಿಕ ಸತ್ಯವನ್ನು ಪ್ರಖರವಾಗಿ ಹೇಳಲೋಸುಗ ಲೋಕತರ್ಕವನ್ನೂ ಮೀರಬಲ್ಲ ಕಾವ್ಯಾತ್ಮಕ ಪ್ರತಿಸೃಷ್ಟಿಯಾಗುವುದಿಲ್ಲ ಕಾವ್ಯದ ವಾಸ್ತವತೆ ಲೋಕವಿವರಗಳ ಯಥಾರ್ಥತೆಯಷ್ಟರಿಂದಲೇ ಬರುವಂಥದಲ್ಲವಷ್ಟೆ. ಸಮಾಜ ಪ್ರಾಮಾಣ್ಯವಿಲ್ಲದ ಒಂದು ವೈಯಕ್ತಿಕಾನುಭವ ಎಷ್ಟೇ ತೀವ್ರವಾಗಿದ್ದರೂ ಕಾರಂತರಿಗೆ ಅದು ವಿಶೇಷವೆನಿಸುವುದಿಲ್ಲ. ಅವರ ಕಾದಂಬರಿಗಳಲ್ಲಿ ಪ್ರೇಮದ ಉತ್ಕಟತೆ ಮತ್ತು ಅನುಭಾವದ ಹಂಬಲ ಇಲ್ಲದಿರುವುದಕ್ಕೆ ಇದೇ ಕಾರಣ ಎಂದು ವಿಮರ್ಶಕರು ಭಾವಿಸುತ್ತಾರೆ.

ಕಾರಂತರ ಗಟ್ಟಿಮುಟ್ಟಾದ ವಿಚಾರವಂತಿಕೆಯನ್ನು, ದೃಷ್ಟಿ, ಚಿಂತನೆಗಳ ನಿಲುವನ್ನು ತಿಳಿಯಬೇಕೆನ್ನುವವರು ಅವರು ಬರೆದ 'ಬಾಳ್ವೆಯೇ ಬೆಳಕು' ಎಂಬ ಪುಟ್ಟ ಪುಸ್ತಕವನ್ನು ತಪ್ಪದೆ ಓದಬೇಕು.

ಕಾರಂತ ಏಕಾಂಗಶೂರರು. ಪುಸ್ತಕ ಬರೆದದ್ದಷ್ಟೇ ಅಲ್ಲ. ಅವುಗಳಿಗೆ ರಕ್ಷಾಚಿತ್ರಗಳನ್ನು ತಾವೇ ಬರೆದರು. ತಾವೇ ಒಂದು ಮುದ್ರಣಶಾಲೆ ತೆರೆದರು.

ಪುಸ್ತಕಗಳನ್ನು ತಾವೇ ಮುದ್ರಿಸಿದರು, ತಾವೇ ಮಾರಿದರು. ವಿಜ್ಞಾನ ಪ್ರಪಂಚದ ಸಂಪುಟಗಳು ಅವರ ಜ್ಞಾನದಾಹಕ್ಕೆ, ತಮ್ಮ ಜನಕ್ಕೆ ತಿಳಿವಳಿಕೆ ಮೂಡಿಸಬೇಕೆಂಬ ಅಪಾರ ಆಸೆಗೆ ಒಂದು ನಿದರ್ಶನ. ಇಪ್ಪತ್ತೈದು ಸಾವಿರ ರೂಪಾಯಿಗಳಾದರೂ ಬೇಕಾಗಿದ್ದ ಅವರ ಮುದ್ರಣ ಸಾಹಸಕ್ಕೆ ಕಾರಂತ ನ್ಯಾಯವಾದ ಸೌಲಭ್ಯ ಕೇಳಿದರೆ ಸರಕಾರಕ್ಕೆ ಒಂದು ಪ್ರತ್ಯುತ್ತರ ಕೊಡುವಷ್ಟು ತಿಳಿವಳಿಕೆ ಕೂಡ ಇರಲಿಲ್ಲ. ಸಾಲ ಸೋಲ ಮಾಡಿಕೊಂಡು ಕಾರಂತ ಮುದ್ರಣಯಂತ್ರ ಸಾಮಗ್ರಿಗಳನ್ನೆಲ್ಲ ಮಾರಬೇಕಾಯಿತು. ಇತಿಹಾಸ ನಾಳೆ ಇದನ್ನೆಲ್ಲ ಹೊಗಳುತ್ತದೆ ನಿಜ. ಆದರೆ ಇತಿಹಾಸವಾಗುವವರೆಗೂ ಬದುಕಬೇಕಾದ ಸಾಹಿತಿಯ ಪಾಡೇನು?

ಯಕ್ಷಗಾನ

ದಕ್ಷಿಣ ಕನ್ನಡದಲ್ಲಿ ಪ್ರಾಚೀನ ಕಾಲದಿಂದ ಉಳಿದುಬಂದ ಒಂದು ಸೊಗಸಾದ ನೃತ್ಯನಾಟಕ ಯಕ್ಷಗಾನ. ಸಂಗೀತ, ಕುಣಿತ, ಅದ್ದೂರಿ ಅಲಂಕಾರ ಎಲ್ಲ ಇರುವ ಈ ಪ್ರಾಚೀನ ಕಲೆಯನ್ನು ಕಾರಂತ ಇಂದಿನ ರುಚಿ ಮನೋಗತಿಗಳಿಗೆ ಅನುಸರಿಸಿ ಬ್ಯಾಲೆಗಳಾಗಿ ಮಾಡಿದರು. ಹಳೆಯದನ್ನು ವರ್ತಮಾನದ ಬೆಳಕಿನಲ್ಲಿ ಸಂಸ್ಕರಿಸಿದರು. ನಿರ್ದಿಷ್ಟ ದೇಶಭಾಷೆಗಳಿಗೆ ಬದ್ಧವಾದ ಯಕ್ಷಗಾನವನ್ನು (ಅದರ ಮೂಲಧಾತು ಕೆಡದಂತೆ) ಆ ಇಕ್ಕಟ್ಟುಗಳಿಂದ ಬಿಡುಗಡೆ ಮಾಡಿ ಅಂತಾರಾಷ್ಟ್ರೀಯವಾಗುವ ಸ್ವರೂಪ ದೊರಕಿಸಿಕೊಟ್ಟರು. ದಕ್ಷಿಣ ಕನ್ನಡದ ಒಂದು ಪುಟ್ಟ ಊರಿನಲ್ಲಿ ಹುಟ್ಟಿದ ಕಾರಂತ ವಿಶ್ವಮಾನ್ಯರಾದ ವ್ಯಕ್ತಿಯಾಗಿ ಬೆಳೆದಂತೆ, ಕಡಲದಂಡೆಯ ತೊಟ್ಟಿಲಲ್ಲಿ ಬೆಳೆದ ಯಕ್ಷಗಾನ ಕಾರಂತರ ಕೈಯಲ್ಲಿ ಸುಧಾರಿತವಾಗಿ 'ಏಳು ಸಮುದ್ರ ಏಳು ಪರ್ವತ' ದಾಟಿ ಪ್ರಪಂಚವನ್ನೆಲ್ಲ ತಿರುಗಲು ಬೇಕಾದ ಬಲ ಸಂಪಾದಿಸಿಕೊಂಡಿತು.

ಶಕ್ತಿ, ಸತ್ಯವಂತಿಕೆ ಕಾರಂತರ ವ್ಯಕ್ತಿತ್ವದ ಮುಖ್ಯರೇಖೆಗಳು. ತಪ್ಪು ಮಾಡಿದಾಗ ಸರ್ಕಾರದ ಮೂತಿಗೂ ಮಂಗಳಾರತಿ ಮಾಡಿದ ಮನುಷ್ಯ ಅವರು. ಎಮರ್ಜನ್ಸಿ ಹೇರಿದಾಗ ಅವರು ಕೇಂದ್ರ ಸರಕಾರ ತಮಗೆ ಕೊಟ್ಟ ಪದ್ಮಭೂಷಣ ಪ್ರಶಸ್ತಿಯನ್ನು ಅದಕ್ಕೇ ವಾಪಸ್ಸು ಮಾಡಿದರು. ಅವರ ನಿಗಿ ನಿಗಿ ಮನಸ್ಸಿನ ಬಗ್ಗೆ ಎಲ್ಲ ಜನಕ್ಕೂ ಎಷ್ಟು ಗೊತ್ತೆಂದರೆ ಎಮರ್ಜನ್ಸಿಯಲ್ಲಿ ಸರಕಾರ ಅವರನ್ನು ಜೈಲಿಗೆ ಹಾಕಿದೆಯೆಂದು ಸುಳ್ಳುಸುದ್ದಿ ಹಬ್ಬಿದಾಗ ಜನ ನಂಬಿದರು. ಕಾರಂತ ಅಂಥವರೇ ಎಂದು ಎಲ್ಲರಿಗೂ ಗೊತ್ತು.

ಅವರನ್ನು ಕಡಲತಡಿಯ ಭಾರ್ಗವ ಎಂದು ಜನ ಕರೆದದ್ದು ಸುಳ್ಳೇ ಪ್ರಶಂಸೆಗಲ್ಲ; ಅವರ ನಡೆನುಡಿ ನೋಡಿದ ನಾಡು ಅವರಿಗಿಟ್ಟ ಅನ್ವರ್ಥನಾಮ ಅದು.

ಕಾರಂತರ ಮೇಲೆ ಸನ್ಮಾನ ಪ್ರಶಸ್ತಿಗಳ ಮಳೆಯೇ ಸುರಿದಿದೆ. ಅದರಲ್ಲಿ ಸರ್ಕಾರ ಜನರ ಪರವಾಗಿ ಅರ್ಪಿಸಿದ್ದು ಕೆಲವಾದರೆ ಜನರೇ ಪ್ರೀತಿಯಲ್ಲಿ ಹೊರಿಸಿದ್ದು ಅನೇಕ. ಜನರ ಈ ಪ್ರೀತಿ ಅವರನ್ನು ತಟ್ಟಿದೆ. ಆದರೆ ಜನ ಈ ಸಾಹಿತಿಗೆ ಏನು 'ನಿಧಿ' ಕೊಟ್ಟರೂ ಅದು ಕಾರಂತರ ಮುಂದಿನ ಸಾಹಸಕ್ಕೆ ಬಂಡವಾಳವಾಗಿ ಜನಕ್ಕೇ ಪುನಃ ಹತ್ತು ಮಡಿಯಾಗಿ ಮರಳಿದೆ.

ಅವರಿಗೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ 'ಮೂಕಜ್ಜಿಯ ಕನಸುಗಳು' ಒಂದು ಶ್ರೇಷ್ಠ ವೈಚಾರಿಕ ಕಲಾಕೃತಿ. ಮಾನವನ ಜೀವನಯಾತ್ರೆಗೆ ಸಂಬಂಧಿಸಿದಂತೆ ಹಲವು ಅಮೂಲ್ಯ ಆಲೋಚನೆಗಳನ್ನು ಹೇಳುವುದು ಕೃತಿಕಾರರ ಉದ್ದೇಶ. ಮನುಷ್ಯ ಪಾಲಿಸಿಕೊಂಡು ಬಂದ ಆಚಾರ ವಿಚಾರಗಳು, ವಿಧಿ ನಿಷೇಧ ನಂಬಿಕೆಗಳೆಲ್ಲ ಹೇಗೆ ಭಯ ಕಾಮಗಳಂಥ ಮೂಲ ಪ್ರವೃತ್ತಿಗಳನ್ನು ಮತ್ತು ಸಾಮಾಜಿಕ ಪರಿಸರ ಅಗತ್ಯಗಳನ್ನು ಅನುಸರಿಸಿ ಬೆಳೆದು ಬಂದವು ಎನ್ನುವುದು ಮೂಕಜ್ಜಿಯ ಕನವರಿಕೆಗಳಿಂದ ನಿವೇದಿತವಾಗುತ್ತ ಹೋಗುತ್ತದೆ. ಈ ಅಮೂಲ್ಯ ವಿಚಾರಗಳನ್ನು ಹೇಳಲು ಕಾದಂಬರಿಯ ಸ್ವರೂಪವನ್ನು ಒಂದು ತಂತ್ರವಾಗಿ ಬಳಸಲಾಗಿದೆ. ಮೂಕಜ್ಜಿಯ ಕನವರಿಕೆಗಳನ್ನು ಆವರಿಸಿ ಅವುಗಳ ಸುತ್ತಮುತ್ತ ಒಂದು ಕಥೆಯಿದೆ. ಆ ಕಥೆ ನೆಪದ್ದು, ಕನವರಿಕೆಗಳೇ ಮುಖ್ಯವಾದದ್ದು.

ಕಾರಂತರಂತೆ ಕಷ್ಟಸುಖಗಳನ್ನು ಕೈಬೀಸಿ ಕರೆದವರು, ತಿಳಿವಿಗೆ ಹಂಬಲಿಸಿ ಅದನ್ನು ಸಾಧಿಸಿದವರು ವಿರಳ. ಅವರು ನಮ್ಮ ವಿಚಾರಲೋಕದ ಒಂದು ಪರ್ವತೋಪಮ ವ್ಯಕ್ತಿತ್ವ. ಯೂರೋಪಿನ ಪುನರುಜ್ಜೀವನ ಕಾಲದಲ್ಲಿ ಬಂದ ಲಿಯುನಾರ್ಡೊ ಡವಿಂಚಿಯುಂಥ ಮಹಾಮೇಧಾವಿಗೆ, ಕಲಾಕಾರನಿಗೆ ವಿಮರ್ಶಕರೊಬ್ಬರು ಅವರನ್ನು ಹೋಲಿಸಿದ್ದಾರೆ. ಅದು ಎಷ್ಟೂ ಅತಿಶಯೋಕ್ತಿಯಲ್ಲ.

●

ಇದ್ದಾರೆ ಯಾರು ಕಾರಂತರಂತೆ?

ಕಾರಂತರೆಂದರೆ ಯಾರಂತ ತಿಳಿದಿರಿ?
ಕಡಲ ತೀರದ ಪರಶುರಾಮ;
ಕೆಚ್ಚೆ ಮೈಯಾದಂತೆ
ಕಿಚ್ಚೆ ಕಣ್ಣಾದಂತೆ
ಬಾಳ ನಡೆಸಿದ ಜ್ಞಾನಧಾಮ.

ಇದ್ದಾರೆ ಲಕ್ಷಜನ ನಮ್ಮಂತೆ ನಿಮ್ಮಂತೆ
ಇದ್ದಾರೆ ಯಾರು ಕಾರಂತರಂತೆ?
ಸತ್ಯಕ್ಕೆ ಮುಖವೊಡ್ಡಿ
ಕೀರ್ತಿಗೆ ಹಣಕ್ಕೆ ಬೆನ್ನೊಡ್ಡಿ
ಪಂಚೆ ಜುಬ್ಬಾ ತೊಟ್ಟ ಋಷಿಯಂತೆ?
ಸತ್ಯನ್ಯಾಯದ ಲಗಾಮು ಬಳಸಬೇಕೆಂದವರು,
ಎತ್ತೆತ್ತಲೋ ಕುದುರೆ ನಡೆಸದವರು;
ಎಮರ್ಜನ್ಸಿ ಗುಟುರು ಹಾಕಿದ ದಿನಗಳಲ್ಲೂ
ಬೆದರಿ ಗೂಳಿಗೆ ಸೊಪ್ಪುಹಾಕದವರು;
ಇತ್ತ ಪ್ರಶಸ್ತಿ ಮತ್ತೆ
ಪ್ರಧಾನಿ ಮುಖಕ್ಕೇನೆ
ವಾಪಸ್ಸು ರಾಚುವ ಋಷಿಯ ಕೋಪ.
ಕೊಳಕರ ಗೌರವ ಬೇಡ. ಆತ್ಮಗೌರವ ಮುಖ್ಯ
ಪದ್ಮಭೂಷಣ ಕಸ ಎಂದ ಭೂಪ!
ತಲೆ ಮೇಲೆ ಬಡಿಗೆ ತೂಗಿದರು ಏನಂತೆ
ಕೊಳೆತ ಹಣ್ಣನ್ನವರು ಮುಟ್ಟಲಿಲ್ಲ
ಮೌಲ್ಯಗಳ ಒಲೆಗೆಸೆದು ಬಾಳಲಿಲ್ಲ.

ಕಷ್ಟದಲ್ಲಿದ್ದ ಎಷ್ಟೊಂದು ನಿಷ್ಠಾವಂತ
ಜನಕ್ಕೆ ಸಹಾಯ ಬಂತು ಕೇಳದೇನೆ.

ಕೊಟ್ಟವರು ಯಾರೆಂಬ ಸುಳಿವೆ ಇಲ್ಲ.
ಆದರೂ ಹೇಳಿದರು ಅಡಿಗರೊಮ್ಮೆ:
"ಇದು ನಮ್ಮ ಕಾರಂತ,
ಆಣೆ ಈ ಮಾತಿಗೆ.
ಪ್ರೀತಿಯೇ ರುಜುವಾದ
ಹೆಸರು ಬೇಡದೆ ಹೋದ
ಧೀರ ಇನ್ನಾರು ಅವರೇನೇ" ಅಂತ.

ಬರೆಯುತ್ತ ಬರೆಯುತ್ತ ಬರೆಹವೇ ಆದಿರಿ
ಬರೆಹದಲ್ಲೇ ಬಾಳನ್ನಿಟ್ಟು ತೂಗಿದಿರಿ
ಯಾವ ಪರ್ವತ ಯಾವ ಕಡಲು ಭವ್ಯಅರಣ್ಯ
ಕಂಡರೂ ಆಗೆಲ್ಲ ನಿಮ್ಮ ನೆನಪು,
ಮೈಕೆಲೇಂಜಲೊ, ಡಾಂಟೆ, ಬಾಣ, ಟಾಲ್‌ಸ್ಟಾಯರನು
ನೋಡುತ್ತಿದ್ದರೆ ಅಲ್ಲೂ ನಿಮ್ಮ ಹೊಳಪು.
ಶತಮಾನವಾಯಿತು ನೀವಿಲ್ಲಿ ಬಂದು
ನಾಡಿನಗಲಕು ಬೀಸಿ ಜ್ವಾಲೆಯಂತೆ,
ಇದ್ದೇ ಇರುತ್ತೀರಿ ಕನ್ನಡ ಇರುವ ತನಕ
ತಾಯ ಎದೆಯಲ್ಲಿ ಹೂಮಾಲೆಯಂತೆ.

– ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಕಾವ್ಯಲೋಕದ ಗಾರುಡಿಗ
ದ. ರಾ. ಬೇಂದ್ರೆ

ಐವತ್ತು ವರುಷಗಳಿಗೂ ಹಿಂದಿನ ಘಟನೆ. ಬೆಳಗಾವಿಯ ಕನ್ನಡ ಸಾಹಿತ್ಯ ಸಮ್ಮೇಳನದ ವೇದಿಕೆ. ಯುವಕ ಕವಿಯೊಬ್ಬ ವೇದಿಕೆಗೆ ಬಂದು ನಿಂತ. ಅವನ ತಲೆಗೆ ಕೇಸರಿ ಬಣ್ಣದ ಒಂದು ಪಗಡಿ.. ಹೆಗಲ ಮೇಲೆ ಅದರ ಇಳಿಬಿದ್ದ ಚುಂಗು, ಕೆಚ್ಚು ಹೊಮ್ಮುವ ಮುಖ. ಕಾಂತಿ ಚೆಲ್ಲುವ ಕಣ್ಣು. ಕವಿತೆಯ ಭಾವವನ್ನು ವಿಸ್ತರಿಸಿಕೊಡುವಂತೆ ಚಲಿಸುವ ಕೈ. ಆ ನಿಲುವಿನಲ್ಲಿ ಅವನೊಬ್ಬ ಗಾರುಡಿಗ.

ಯುವಕ ಕವಿತೆ ಓದಿದ. ಇಡೀ ಸಭೆ ಆ ಭಾವೋಜ್ವಲವಾದ ವಾಚನಕ್ಕೆ ಮರುಳಾಗಿ ಹೋಯಿತು. ಮೋಡಿಗೆ ಒಳಗಾದವರಂತೆ ಪರವಶವಾಗಿ ಆಲಿಸಿತು.

ಅಂದು ಸಭೆಯನ್ನು ಹಾಗೆ ಕಟ್ಟಿಹಾಕಿದ ಯುವಕ ದತ್ತಾತ್ರೇಯ ರಾಮಚಂದ್ರ ಬೇಂದ್ರೆ. ಆತ ಓದಿದ್ದು "ಹಕ್ಕಿ ಹಾರುತಿದೆ ನೋಡಿದಿರಾ" ಎಂಬ ಕವಿತೆ.

ಮರುಳಾದ ಪ್ರೇಕ್ಷಕರಲ್ಲಿ ನಾಡಿನ ಅತಿರಥ ಮಹಾರಥರೆಲ್ಲ ಇದ್ದರು. ಮಾಸ್ತಿಯವರಿಗೆ ಆ ಕವಿತೆಯನ್ನು ಮತ್ತೆ ಮತ್ತೆ ಓದುವ ತವಕ. ಪಕ್ಕದಲ್ಲಿದ್ದ ಶ್ರೀಯವರು ಬೇಂದ್ರೆಯನ್ನು ಕರೆದರು. ಕವಿತೆಯನ್ನು ಪಡೆದು ತಾವೇ ಅದರ ಪ್ರತಿಮಾಡಿ ಮಾಸ್ತಿಯವರಿಗೆ ಕೊಟ್ಟರು.

ಬೇಂದ್ರೆಗೆ ಆಗಿನ್ನೂ ಮೂವತ್ತೆರಡು ವರ್ಷ. ತಮ್ಮ ಮೊದಲ ಭೇಟಿಯಲ್ಲೇ ಅವರು ಯಾವ ಅಕಾಡೆಮಿಗೂ ಕೊಡಲು ಸಾಧ್ಯವಾಗದ ಪ್ರಶಸ್ತಿ ಗಿಟ್ಟಿಸಿದ್ದರು!

ಬೇಂದ್ರೆಯವರ ಕವಿತಾಶಕ್ತಿಯನ್ನು ಪ್ರಶಂಸಿಸುತ್ತ ಒಮ್ಮೆ ಮಾಸ್ತಿ ಹೇಳಿದರು. "ನಾನು ಸ್ವಧರ್ಮ ಪತ್ರಿಕೆಯಲ್ಲಿ ಅವರ 'ಬೆಳಗು' ಕವಿತೆ ಓದಿಯೇ ಮರುಳಾಗಿದ್ದೆ. 'ಹಕ್ಕಿ ಹಾರುತಿದೆ' ಕವಿತೆ ಕೇಳಿ ಮಾಲೆಹಾಕಿದೆ."

ಬೇಂದ್ರೆಯವರ ಕವಿತೆಯೇ ಹಾಗೆ. ಅವರ ಶ್ರೇಷ್ಠಕವಿತೆಗಳು ಮಾತಿನ ಮುರಿಗಳಲ್ಲಿ ಮೂಡುವ ಒಂದು ಮಾಯೆ. ಓದುಗನ ಮನಸ್ಸನ್ನು ಕವಿಯುವ ಇಂದ್ರಜಾಲ. ಕಾಮನಬಿಲ್ಲಿನ ಬಣ್ಣ ಏಳು; ಬೇಂದ್ರೆ ಕವಿತೆಯದು ಎಂಟು! ಕವಿತೆಯ ದೇಸಿನುಡಿಯಲ್ಲಿ ಕಾಣುವ ಅಪೂರ್ವ ಸ್ವಂತಿಕೆ, ಅದರ ಹೆಣಿಗೆಯಲ್ಲಿನ ನಿರಾಯಾಸತೆ, ಕವಿತೆ ಸೃಷ್ಟಿಸುವ ಅರ್ಥಕ್ಕಿರುವ ರಸೋದ್ದೀಪಕತೆ – ಇವೆಲ್ಲ ಬೇಂದ್ರೆ ಕವಿತೆಯ ಕೆಲವು ಅಮೋಘ ಅಂಶಗಳು. ಪುತಿನ ಹೇಳಿದಂತೆ ದತ್ತರಾಮರ ಕವಿತೆಗಳಲ್ಲಿ ವಜ್ರದ ಹೊಳಪಿದೆ. ಬೆಳಕುಬಿದ್ದಂತೆ ಅದರ ಬಣ್ಣ: ಈಗ ನೀಲಿ, ಇನ್ನೊಮ್ಮೆ ಹಸಿರು, ಮತ್ತೊಮ್ಮೆ ಕಿತ್ತಳೆ, ಮಗದೊಮ್ಮೆ ಕೋರೈಸುವ ಕೆಂಪು ಹೊಳಪು. ಲೋಕದ ಮೇಲೆ ಅಲೌಕಿಕದ ಬೆಳಕು ಚೆಲ್ಲುವ ಕವಿತೆಗಳು ಅವು. ಮನುಷ್ಯನಿಗೆ ತಾನು ಆತ್ಮಶಾಲಿ, ಆನಂದಮಯ ಎನ್ನುವುದನ್ನು ನೆನಪಿಸುವಂಥವು.

ರಸ ಸಂವಾದ

ಇಡೀ ನಾಡಿಗೇ ಇಂಥ ಆನಂದಾನುಭವಗಳ ಬಾಗಿಲು ತೆರೆದ ಬೇಂದ್ರೆ ಬಾಳಿನುದ್ದಕ್ಕೂ ಪಟ್ಟ ಬವಣೆಗೆ ಲೆಕ್ಕವಿಲ್ಲ. ದಾರಿದ್ರ್ಯ, ನಿರುದ್ಯೋಗ, ಆಪ್ತರ ಸಾವು ನೋವು ಇವೆಲ್ಲ ಅವರನ್ನು ಸಾಲಾಗಿ ವರಿಸಿಬಂದವು. ಆದರೆ ಬೇಂದ್ರೆ ಅದಕ್ಕೆಲ್ಲ ಸಗ್ಗಿದವರಲ್ಲ. ಪರರೆದುರು ತೋಡಿಕೊಂಡವರಲ್ಲ. ಬದಲಾಗಿ ಲೌಕಿಕವಾದ ತಮ್ಮ ಪಾಡುಗಳನ್ನು ಹಿಂಡಿ ಅಲೌಕಿಕವಾದ ಹಾಡು ಸೃಷ್ಟಿಸಿದವರು. "ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೆ ನೀಡುವೆನು ರಸಿಕ ನಿನಗೆ। ಕಲ್ಲು ಸಕ್ಕರೆಯಂಥ ನಿನ್ನೆದೆಯು ಕರಗಿದರೆ ಆ ಸವಿಯ ಹಣಿಸು ನನಗೆ" ಎಂದು ನಾಡಿನ ಜೊತೆ ರಸಸಂವಾದ ಹೂಡಿದವರು. ಕವಿತೆಗೆ ಪ್ರತಿಯಾಗಿ ಅವರು ಬಯಸಿದ್ದು ಸಹ ಹಣವನ್ನಾಗಲೀ ಖ್ಯಾತಿಯನ್ನಾಗಲೀ ಅಲ್ಲ, ಕವಿತೆ ಓದಿ ರಸಿಕರ ಹೃದಯದಲ್ಲಿ ತರಂಗಿತವಾಗುವ ಸುಖಾನುಭವದ ಸನ್ನೆಯನ್ನು.

ಬೇಂದ್ರೆ ಹುಟ್ಟಿದ್ದು ೧೮೯೬ರ ಜನವರಿ ಮೂವತ್ತೊಂದರಂದು. ಅವರ ಊರು ಧಾರವಾಡ ಜಿಲ್ಲೆಯ ಶಿರಹಟ್ಟಿ ಗ್ರಾಮ. ಬೇಂದ್ರೆಯ ಅಜ್ಜ ಅಪ್ಪಾಭಟ್ಟರು ಊರಿಗೇ ಮಾತುಭಾರರಾಗಿದ್ದವರು; ಸಂಸ್ಕೃತದಲ್ಲಿ ಗ್ರಂಥಗಳನ್ನು ರಚಿಸಿದವರು. ಬೇಂದ್ರೆಯ ತಾಯಿ ಅಂಬವ್ವ, ತಂದೆ ರಾಮಚಂದ್ರ. ತಂದೆಗೆ ಗಂಡಮಾಲೆ ಖಾಯಿಲೆ ಗಂಟುಬಿದ್ದಿತ್ತಾಗಿ ಹುಡುಗ ಬೇಂದ್ರೆ ಅಜ್ಜಿಯ ಆಸರೆಯಲ್ಲಿಯೇ ಬೆಳೆದ. ಆಕೆ ಗಂಡನನ್ನು ಕಳೆದುಕೊಂಡು ಕಷ್ಟದಲ್ಲಿದ್ದರೂ ಮನೆಯಲ್ಲೇ ಖಾನಾವಳಿ ತೆಗೆದು ಮಕ್ಕಳನ್ನು ಸಾಕಿದ ಸ್ವಾಭಿಮಾನಿ. ಯಾವ ಕಷ್ಟಕ್ಕೂ ಜಗ್ಗದ ಆತ್ಮಪ್ರತ್ಯಯವಾಗಲಿ, ಸಾಧುಸಂತರನ್ನು ಕುರಿತ ಆದರಾಭಿಮಾನವಾಗಲಿ ಬೇಂದ್ರೆಗೆ ಬಂದದ್ದು ಅಜ್ಜಿಯಿಂದಲೇ.

ಅಜ್ಜಿಯನ್ನೇ ಬಗ್ಗಿಸಿದ ಮೊಮ್ಮಗ

ಬೇಂದ್ರೆ ವ್ಯಕ್ತಿತ್ವದ ಒಂದು ವಿಶಿಷ್ಟ ರೇಖೆ ಅತಿಯೆನಿಸುವ ಆತ್ಮಾಭಿಮಾನ. ಅವನ ಬಾಲ್ಯದಲ್ಲೇ ಅದು ತೀವ್ರವಾಗಿತ್ತು. ಒಂದು ಸಲ ಚಿಕ್ಕ ತಮ್ಮ ರಾಘುವನ್ನು ಕರೆದುಕೊಂಡು ಅಲೆಯಲು ಹೊರಟ ಬೇಂದ್ರೆ ತುಂಬ ತಡಮಾಡಿ ಮನೆಗೆ ಬಂದ. ಹುಡುಗರಿಗಾಗಿ ಆತಂಕದಿಂದ ಕಾದಿದ್ದ ಅಜ್ಜಿಗೆ ಅವರನ್ನು ಕಾಣುತ್ತಲೇ ಸಿಟ್ಟು ನೆತ್ತಿಗೇರಿತು. ಊಟವನ್ನೂ ಹಾಕದೆ ಇಬ್ಬರನ್ನೂ ಮನೆಯಿಂದ ಹೊರಗೆ ಅಟ್ಟಿದಳು. ಬಹಳ ಹಸಿದಿದ್ದರಿಂದ ಹುಡುಗರು ಬಗ್ಗಿ ಬರುತ್ತಾರೆಂದು ಅಜ್ಜಿಯ ಎಣಿಕೆ. ಆದರೆ ಬೇಂದ್ರೆ ಇಂಥದಕ್ಕೆಲ್ಲ ಸಗ್ಗದ ಶಠ. ಕಂಗಾಲಾಗಿದ್ದ ಪುಟ್ಟ ತಮ್ಮನನ್ನು ರಮಿಸಿ ಅಲ್ಲೇ ನಡೆಯುತ್ತಿದ್ದ ಒಂದು ಶಾಲಾ ಉತ್ಸವಕ್ಕೆ ಕರೆದುಕೊಂಡು ಹೋದ. ಅಲ್ಲಿ ಭಾಷಣ ಮಾಡುತ್ತಿದ್ದ ವ್ಯಕ್ತಿ ದೇಶಪ್ರೇಮದ ಒಂದು ಕಥೆ ಹೇಳಿ, ಇದನ್ನು ಚೆನ್ನಾಗಿ ಹೇಳಿದ ಹುಡುಗನಿಗೆ ಎರಡು ದುಡ್ಡು ಬಹುಮಾನ ಎಂದರು. ಬೇಂದ್ರೆ ವೇದಿಕೆ ಹತ್ತಿ ಕಥೆ ಒಪ್ಪಿಸಿ ದುಡ್ಡು ಗಿಟ್ಟಿಸಿದ. ಅಂಗಡಿ ಬೀದಿಗೆ ಬಂದು ಹಸಿವಿನಿಂದ ಅಳುತ್ತಿದ್ದ ತಮ್ಮನಿಗೆ ಚುರುಮುರಿ, ಕೊಬ್ಬರಿ, ಬೆಲ್ಲ ಕೊಡಿಸಿದ. ಅವನು ನಿದ್ದೆ ಎಂದು ರಾಗ ಎಳೆಯುತ್ತಲೇ ವೀರಭದ್ರ ದೇವರ ಗುಡಿಗೆ ಕರೆದುಕೊಂಡು ಬಂದು ಮಲಗಿಸತೊಡಗಿದ. ಇಷ್ಟು ಹೊತ್ತಿಗೆ ಅಜ್ಜಿಗೇ ಬುದ್ಧಿ ಬಂದಿತ್ತು! ಹಾಗೆಂದು ತಗ್ಗಿಹೋದರೆ ಹುಡುಗ ಹಲ್ಲೆಣಿಸಿಕೊಂಡಾನು ಎಂಬ ಭಯ. ನೆರೆಯವರಿಂದ ಬೇಂದ್ರೆಗೆ ಹೇಳಿಸಿದಳು, ಕ್ಷಮಾಪಣೆ ಕೇಳು ಅಂತ. ಬೇಂದ್ರೆ ಕೇಳಲಿಲ್ಲ. ಆದರೆ ಕಂಗಾಲಾಗಿದ್ದ ರಾಘು ಅಣ್ಣನ ಬದಲು ತಾನೇ ಕ್ಷಮೆ ಕೇಳಿಬಿಟ್ಟ, ತಾನೇ ಸೋತದ್ದು ಅಜ್ಜಿಗೆ ತಿಳಿದುಹೋಗಿತ್ತು. ಆ ಸಿಟ್ಟಿನಲ್ಲಿ ಅವಳು ಚಿಕ್ಕ ಹುಡುಗನನ್ನು ಥಳಿಸಿದಳು. ಒಬ್ಬನನ್ನು ಬಗ್ಗಿಸಲು ಇನ್ನೊಬ್ಬನನ್ನು ಥಳಿಸುವ ಈ ರೀತಿ ಬೇಂದ್ರೆಯ ಎಳೆಮನಸ್ಸಿನ ಮೇಲೆ ತುಂಬ ಪರಿಣಾಮ ಮಾಡಿರಬೇಕು. ಮುಂದೂ ಅಷ್ಟೇ. ಎಂಥ ಕಷ್ಟ ಕಾಲದಲ್ಲೂ ಬೇಂದ್ರೆ ಮತ್ತೊಬ್ಬರೆದುರು ಕೈಚಾಚಲಿಲ್ಲ.

ವಿದ್ಯಾರ್ಥಿಯಾಗಿ ಬೇಂದ್ರೆ ಚುರುಕಾಗಿಯೇ ಇದ್ದ. ಆದರೆ ಸ್ಕೂಲಿನ ನಿಯಮ, ವೇಳಾಪಟ್ಟಿಗಳಿಗೆ ಸೊಪ್ಪುಹಾಕಿದ ಜೀವವಲ್ಲ ಅವನದು. ಮನೆಯಿಂದ ಸಾಕಷ್ಟು ಮುಂಚೆಯೇ ಹೊರಟಿದ್ದರೂ ಈ ವಿದ್ಯಾರ್ಥಿ ಸ್ಕೂಲುಸೇರುವ ಹೊತ್ತಿಗೆ ನಡುಮಧ್ಯಾಹ್ನವಾಗಿರುತ್ತಿತ್ತು. ದಾರಿಯ ಉದ್ದಕ್ಕೂ ಮಂಗನ ಆಟ, ಕರಡಿ ಕುಣಿತ, ದೊಂಬರ ಸರ್ಕಸ್ಸು, ಎಲ್ಲವನ್ನೂ ಪಾಂಕ್ತವಾಗಿ ನೋಡಿ ಮುಗಿಸಿಕೊಟ್ಟೇ ಮುಂದೆ ಹೊರಡುವ ಅಭ್ಯಾಸ ಹುಡುಗನದು ! ಸಾಲದ್ದಕ್ಕೆ ದಿನವೂ ಯಾರ ಜೊತೆಗಾದರೂ ಜಗಳ ತೆಗೆಯದೆ, ಕದನ ಕಾಯದೆ ಅವನಿಗೆ ನಿದ್ದೆಯೇ ಬರುತ್ತಿರಲಿಲ್ಲ. ದೇಹದಲ್ಲಿ ಹೆಚ್ಚು ಬಲವಿರಲಿಲ್ಲವಾಗಿ ಗುಂಪುಕಟ್ಟಿ ಪ್ರೋತ್ಸಾಹಿಸಿ ಎದುರಾಳಿಗಳನ್ನು

ಸವರುತ್ತಿದ್ದನೆಂದು ಬೇಂದ್ರೆಯ ಸಹಪಾಠಿಗಳೇ ಸ್ಮರಿಸಿದ್ದಾರೆ. ಸ್ನೇಹಕ್ಕೋ ಕುಣಿತಕ್ಕೋ ಜಗಳಕ್ಕೋ ಕದನಕ್ಕೋ ಅಂತೂ ಬೇಂದ್ರೆಗೆ ಸುತ್ತ ಹುಡುಗರು ಬೇಕು. ಮುಂದೆ ಆತನ ಕವಿತೆ ರಕ್ತಮಾಂಸ ಹೀನವಾದ ರಿಕ್ತ, ಅಸಾಮಾಜಿಕ ಬರೆಹವಾಗದೆ ಎಲ್ಲರ ಸುಖದುಃಖಗಳನ್ನು ಪ್ರತಿಬಿಂಬಿಸುವ ಸಾಂದ್ರ ರಸಧಾರೆಯಾದದ್ದರ ಮೂಲ ಈ 'ಗುಂಪುಗುಳಿ'ತನದ ಬುದ್ಧಿಯಲ್ಲಿದೆ ಎನ್ನಿಸುತ್ತದೆ.

ಹನ್ನೆರಡನೆಯ ವಯಸ್ಸಿಗೇ ಬೇಂದ್ರೆ ತಂದೆಯನ್ನು ಕಳೆದುಕೊಂಡರು; ಪುಣೆಯಲ್ಲಿದ್ದ ಚಿಕ್ಕಪ್ಪನ ಸಹಾಯದಿಂದ ಬಿ.ಎ. ಮುಗಿಸಿ ಉದ್ಯೋಗದ ಬೇಟೆಗೆ ಹೊರಟರು. ಕೆಲಸ ಸಿಕ್ಕುವುದೇ ಕಷ್ಟ. ಸಿಕ್ಕಿದ್ದೂ ಜಾರಿಹೋಗುತ್ತಿತ್ತು. ನಾಲ್ಕಾರು ಸ್ಕೂಲುಗಳಲ್ಲಿ ದುಡಿದ್ದಾಯಿತು. ಕೆಲವು ಸಲ ಪೂರ್ಣಾವಧಿ ಕೆಲಸವಿಲ್ಲದೆ ಪಾರ್ಟ್‌ಟೈಂ ಉದ್ಯೋಗ ಮಾಡಿದ್ದೂ ಉಂಟು. ಸರ್ವಿಸಿನ ಕಡೆಯ ಹನ್ನೆರಡು ವರುಷ ಸೊಲ್ಲಾಪುರದಲ್ಲಿ ಅಧ್ಯಾಪಕರಾಗಿದ್ದುದನ್ನು ಬಿಟ್ಟರೆ ಅವರ ಮುಂಚಿನ ಜೀವನವೆಲ್ಲ ಗೊತ್ತು ಗುರಿಯಿಲ್ಲದ ಅವ್ಯವಸ್ಥಿತ ಅಲೆತ ಎನ್ನಬೇಕು. ಇವುಗಳ ನಡುವೆಯೇ ಅವರು ರವೀಂದ್ರ, ಅರವಿಂದ, ಎ. ಇ., ಮೆಟರ್‌ಲಿಂಕ್, ಎಮರ್ಸನ್, ಯೇಟ್ಸ್, ಜೆ. ಕೃಷ್ಣಮೂರ್ತಿಯವರ ಬರೆಹಗಳನ್ನು ತೀರದ ಹಸಿವಿನಿಂದೆಂಬಂತೆ ಓದಿದರು. ಬದುಕನ್ನೆಲ್ಲ ಅತೀಂದ್ರಿಯದ ನೆಲೆಯೊಂದರ ಬಲದಲ್ಲಿ ವಿವರಿಸಿಕೊಳ್ಳುವ ದೃಷ್ಟಿ ಬೇಂದ್ರೆಗೆ ವಂಶದಿಂದಲೇ ಬಂದಿತ್ತು. ಈ ಓದಿನಿಂದ ಅದು ಇನ್ನಷ್ಟು ಮೊನೆಗೊಂಡಿತು. ಓದಿನ ಜೊತೆಗೆ ಅವರು ಗೆಳೆಯರ ಗುಂಪು ಕಟ್ಟಿದರು. ಗೋಕಾಕ್, ಮುಗಳಿ, ಮಧುರಚೆನ್ನ, ಸಿಂಪಿ ಲಿಂಗಣ್ಣರಂಥವರನ್ನು ಸಾಧನೆಯ ಹಾದಿಗೆ ಹಚ್ಚಿದರು. ಸ್ನೇಹಿತರಾಗಿರುತ್ತಲೇ ಅವರಿಗೆ ಒಂದು ಬಗೆಯಲ್ಲಿ ಗುರುವೂ ಆದರು. ಕವಿತೆಗಳನ್ನು ಬರೆಯುತ್ತ, ಬರೆಸುತ್ತ, ವಾಚಿಸುತ್ತ, ಒಂದು ರಸವಾತಾವರಣ ನಿರ್ಮಿಸಿ ಶಾಂತ ಕವಿಗಳಂಥ ಹಳಬರನ್ನು ಸಹ ಹೊಸ ಕಾವ್ಯಮಾರ್ಗದ ಪ್ರಭಾವಕ್ಕೆ ಎಳೆದರು; ತಮ್ಮ ಅದ್ವಿತೀಯ ವಾಚನಶಕ್ತಿಯಿಂದ ಜನರ ಅಂತಃಕರಣಕ್ಕೆ ಕಾವು ಕೊಡುತ್ತ ಕರ್ನಾಟಕದ ತುಂಬ ಒಂದು ಕಾವ್ಯಜ್ವಾಲೆಯಾಗಿ ಬೀಸಿದರು.

ಜೈಲುವಾಸ

ಬೇಂದ್ರೆಯವರ ಹೆಸರನ್ನು ಕರ್ನಾಟಕದ ಮೂಲೆ ಮೂಲೆಯಲ್ಲೂ ಹರಡಿದ್ದೆಂದರೆ ಅವರ 'ಗರಿ' ಕವಿತಾ ಸಂಗ್ರಹ. ಬೇಂದ್ರೆ ಜೈಲಿಗೆ ಹೋದದ್ದೂ ಅದರಿಂದಲೇ. ಬ್ರಿಟಿಷರ ನರಮೇಧ ಕೃತ್ಯವನ್ನು ಮಾರ್ಮಿಕವಾಗಿ ವಿಡಂಬಿಸಿ ಅವರು ಬರೆದಿದ್ದ 'ನರಬಲಿ' ಎಂಬ ಕವಿತೆ ಅದರಲ್ಲಿ ಪ್ರಕಟವಾಗಿತ್ತು. ಅದು ಸ್ವಾತಂತ್ರ್ಯ ಸಂಗ್ರಾಮದ ಕಾಲ. ಚಳವಳಿಗಾರರು ದೇಶದ ತುಂಬ ಸಭೆ ನಡೆಸಿ

ಬ್ರಿಟಿಷರ ದಬ್ಬಾಳಿಕೆಯನ್ನು ಪ್ರತಿಭಟಿಸಿ ಮಾತಾಡುತ್ತಿದ್ದರು. ಕರ್ನಾಟಕದಲ್ಲಿ ಕೆಲವು ಕಡೆ ಇಂಥ ಸಭೆಗಳ ಕೊನೆಯಲ್ಲಿ ನರಬಲಿ ಕವನವನ್ನು ಭಾವಾವೇಶದಿಂದ ಓದುತ್ತಿದ್ದರಂತೆ. ಭಾಷಣ ಕೇಳಿ ಕಾವುಗೊಂಡ ಜನ ಕವಿತೆ ಕೇಳಿ ಕೆರಳುತ್ತಿದ್ದರು. ಸರ್ಕಾರಕ್ಕೆ ಕವಿತೆ ತಲೆನೋವಾಗಿ ಪರಿಣಮಿಸಿ ಬೇಂದ್ರೆಯವರನ್ನು ಬಂಧಿಸಿ ಹಿಂಡಲಗಿ ಜೈಲಿಗೆ ಹಾಕಿತು. ಬೇಂದ್ರೆ ಈ ಪ್ರಸಂಗವನ್ನು ಸಖೀಗೀತದಲ್ಲಿ ಸೂಚ್ಯವಾಗಿ ಪ್ರಸ್ತಾಪಿಸಿದ್ದಾರೆ. ಗಾಂಧಿಯ ಉಸಿರಾಟ ದೇಶದಲ್ಲಿ ಬಿರುಗಾಳಿಯಾಗಿ ಬೀಸಿತಂತೆ. ಅದರ ಜೋರಿಗೆ ಕೆಳಗೆ ಬಿದ್ದಿದ್ದ ಎಲೆ ಸೊಪ್ಪು ಸವದಿಗಳೆಲ್ಲ ಆಕಾಶಕ್ಕೆ ಹಾರಿ ಮೋಡಗಳಂತೆ ತೇಲಾಡಿದುವಂತೆ. ಅದೇ ಹೊತ್ತಿನಲ್ಲಿ

ನರಬಲಿ ಕವನವು ಬಲಿ ಮಾಡಿತೆನ್ನನು
ಹೆಳವನಿದ್ದಲ್ಲಿಗೆ ಹೊಳೆ ಬಂದಿತು
ಮನೆಯನೆ ಮುರಿದಿತು ಹಾರುವಿಹಂಗಮ
ಜಂಗಮ ದೀಕ್ಷೆಯು ನಿನಗೆಂದಿತು.

ಸ್ವಾತಂತ್ರ್ಯ ಸಂಗ್ರಾಮಕ್ಕೆ ಬೇಂದ್ರೆ ತಾವಾಗಿಯೇ ಧುಮುಕಲಿಲ್ಲ. ಗಂಗೆಯ ಹತ್ತಿರ ಹೋಗಲು ಶಕ್ತಿಸಾಲದ ಹೆಳವನಂತೆ ಅವರು ದೂರದಲ್ಲೇ ಉಳಿದಿದ್ದರು. ಆದರೆ ಗಂಗೆಯ ಕರುಣೆ ಅಪಾರ. ಅವಳು ಹೆಳವನಿದ್ದಲ್ಲಿಗೇ ಹರಿದು ಬಂದಳು. ನಿಂತಲ್ಲೇ ಬೇಂದ್ರೆಗೆ ಗಂಗಾಸ್ನಾನವಾಯಿತು. ಆಕಾಶದಲ್ಲಿ ಹಾರಿಹೋಗುತ್ತಿದ್ದ ಗಾಂಧಿ ಎನ್ನುವ ಗರುಡಪಕ್ಷಿ ಹಠಾತ್ತನೆ ಕೆಳಕ್ಕೆ ಬಂದು ಬೇಂದ್ರೆ ಮನೆಯ ಸೂರಿಗೇ ರೆಕ್ಕೆ ಘಟ್ಟಿಸಿಹೋಯಿತು. ಆ ಬಡಿತದ ಜೋರಿಗೆ ಮನೆಯ ಛಾವಣಿಯೇ ಕುಸಿಯಿತು. ಮಾಸ್ತಿ ಆ ಹೊತ್ತಿನಲ್ಲಿ ಬೇಂದ್ರೆಯವರ ಸಹಾಯಕ್ಕೆ ಧಾವಿಸಿದರು. ಅವರನ್ನು ತಮ್ಮ ಜೀವನಪತ್ರಿಕೆಗೆ ಗೌರವ ಸಂಪಾದಕರೆಂದು ಕರೆದು ನೆರವಿಗೆ ನಿಂತರು.

ಇಂಗ್ಲಿಷ್ ಸಂಸ್ಕೃತ ಹಳಗನ್ನಡ ಮರಾಠಿಗಳನ್ನು ಬೇಂದ್ರೆ ಪ್ರೌಢನೆಲೆಯಲ್ಲಿ ಅಭ್ಯಾಸಮಾಡಿದ್ದರು. ಆದರೂ ಅವರ ಕಾವ್ಯ ಪಾಂಡಿತ್ಯಕ್ಕೆ ಬಲಿಯಾಗಿ ನಿಘಂಟಿನ ಹಂಗಿಗೆ ಬೀಳಲಿಲ್ಲ. ಜನರ ನಾಲಿಗೆಯಿಂದ ಎತ್ತಿದ ಮಾತಿನಲ್ಲಿ ಅದು ಮೂಡಿತು. ಜಾನಪದ ಭಾಷೆಯ ಸತ್ವವನ್ನು ರೂಢಿಸಿಕೊಂಡು ಅಪೂರ್ವವೆನ್ನಿಸುವ ಕವಿತೆಗಳನ್ನು ಬೇಂದ್ರೆ ಬರೆದರು. ಸಚ್ಚಿದಾನಂದ, ನಾದಲೀಲೆ, ಹಕ್ಕಿಹಾರುತಿದೆ, ತುತ್ತಿನ ಚೀಲ, ಜೋಗಿ, ರಾಗರತಿ, ಕಾಮ ಕಸ್ತೂರಿಯಲ್ಲಿನ ಪ್ರಣಯ ಗೀತೆಗಳು – ಇಂಥ ಧ್ವನಿದಟ್ಟವಾದ ಕವಿತೆಗಳು ಆಗಲೇ ಸಹಸ್ರವರ್ಷ ಬೆಳೆದು ಬಂದಿದ್ದ ಒಂದು ಕಾವ್ಯ ಪರಂಪರೆಗೂ ಹೆಮ್ಮೆಯೆನಿಸುವ ಕೊಡುಗೆಗಳಾದವು.

ಧ್ವನಿಸಾಧಕ ಕವಿತೆ

ಬೇಂದ್ರೆ ಕವಿತೆಗಳ ಒಂದು ವಿಶೇಷವೆಂದರೆ (ಇತರ ಪ್ರಯೋಜನಗಳ ಜೊತೆಗೆ) ಮಾತಿಗೆ ಅರ್ಥದ ಮತ್ತೊಂದು ಮಗ್ಗುಲನ್ನು ಬೆಳೆಸಿಕೊಳ್ಳುವ ಸಲುವಾಗಿ ಕವಿ ಜನಪದ ಭಾಷೆಯನ್ನು ಬಳಸುವುದು. ಜನಪದ ಭಾಷೆಯನ್ನು ನಾಗರಿಕ ಸಂದರ್ಭಕ್ಕೆ ಹಚ್ಚುವುದರಿಂದ ಮಾತಿನ ಸಹಜ ಅರ್ಥ ಮತ್ತು ಹೊಸ ಸಂದರ್ಭ ಅದರಿಂದ ಹೊರಡಿಸುವ ಅರ್ಥ ಎರಡನ್ನೂ ಹೀರಿ ಕವಿತೆ ಪುಷ್ಕಲವಾಗಿ ಬೆಳೆಯುತ್ತದೆ. ನಿಶ್ಚಿತಾರ್ಥದ ನೇರ ದಾರಿಯಲ್ಲಿ ಹೊರಟ ಭಾಷೆ ಕವಿತೆಯ ಸಂದರ್ಭ ಕಲ್ಪಿಸಿಕೊಡುವ ಭಿನ್ನಾರ್ಥದ ಕಾಲುಹಾದಿಗಳಲ್ಲೆಲ್ಲ ಅಲೆಯುತ್ತ ಧ್ವನ್ಯರ್ಥದ ಕಣ್ಣುಮುಚ್ಚಾಲೆಗೆ ಇಂಬುಗೊಡುತ್ತದೆ. ಪ್ರಯಾಣ ರಾಜರಸ್ತೆಯಲ್ಲಾದರೂ ಓಡಾಟವೆಲ್ಲ ಕಾಲು ಹಾದಿಯಲ್ಲೇ ಬೆಳೆದು ಪ್ರತ್ಯಂಗುಲ ವಾಚ್ಯಕ್ಕೆ ಮಾರುದ್ದದ ಧ್ವನಿ ಬೆಳೆಯುತ್ತದೆ. ಎಲ್ಲರ ಬದುಕಿನಲ್ಲಿ ಇದ್ದೂ ಯಾರೂ ವಾಚ್ಯಮಾಡಲ್ವೊಲ್ಲದ ಪ್ರಣಯಾನುಭವದ ಸೂಕ್ಷ್ಮಗಳು ಸಂತೆಯಲ್ಲಿ ಸಹ ಸಾರಬಹುದಾದ ದಿಟ್ಟ ಶಬ್ದಗಳ ಬುಡಕ್ಕೇ ಟಿಸಿಲೊಡೆಯುತ್ತ ಹೋಗುವುದನ್ನು ಬೇಂದ್ರೆಯವರಲ್ಲಿ ಕಾಣಬಹುದು. ಇದರ ಜೊತೆಗೆ ಅಲ್ಲಲ್ಲಿ ಥಳಥಳಿಸುವ ರೂಪಕಗಳು ಮೂಡಿ ಮಾತನ್ನು ಅದರ ನಿರ್ದಿಷ್ಟಾರ್ಥದ ಗಡಿಯಾಚೆಗೆ ಹಾರಿಸಿಬಿಡುತ್ತವೆ. "ಮುಂಗಾರಿ ಕಣ ಸನ್ನಿ ಹಾಂಗ ನಿನ ನಗೆ ಚೆನ್ನಿ" ಕಣ್ಣೆವಿ ತೆರೆದರೆ ಹುಣ್ಣಿವಿ ತೆರದಾಂಗ". "ಪಾರಿಜಾತಗಳು ಮುದ್ದುಗರೆಯುವುವು ಹವಳದುಟಿಗಳಿಂದ" – ಎಂಬ ಕಲ್ಪನೆಗಳಲ್ಲಿ ಮನುಷ್ಯ ಚರ್ಯೆಯನ್ನು ಪ್ರಕೃತಿಯ ವ್ಯಾಪಾರದ ಮೂಲಕ ದರ್ಶಿಸಿ ಚಿತ್ರಕ್ಕೆ ಕವಿಸುವ ಭವ್ಯತೆ, "ಹಾಸಿಗೆ ಮಗಮಗ। ಮಂಚಕ ಝುಗ ಝುಗ। ನನ್ನ ಎದಿಮಾತ್ರ ಧಗ ಧಗ" ಎಂಬಲ್ಲಿನ ಭಾವೋತ್ಕಟತೆ, "ನೆರಳಲ್ಲಾಡತಾವ ಮರದ ಬುಡಕ । ತೆರಿತೆರಿ ನೂಗತಾವ ದಡಕ" ಎಂಬ ಚಿತ್ರದಲ್ಲಿನ ಕಲೆಗಾರಿಕೆ ಬೇಂದ್ರೆಯವರಿಗೇ ಮೀಸಲಾದದ್ದು.

ತನ್ನ ಸಮಾಜದ ಸುಖದುಃಖಗಳ ಅಭಿವ್ಯಕ್ತಿಗೂ ಬೇಂದ್ರೆಕಾವ್ಯ ಇಷ್ಟೇ ಹಾತೊರೆಯಿತು. "ಕುರುಡು ಕಾಂಚಾಣ ಕುಣಿಯುತಲಿತ್ತು, ಕಾಲಿಗೆ ಬಿದ್ದವರ ತುಳಿಯುತಲಿತ್ತೋ" ಎಂಬ ಸಾಲುಗಳು ಕನ್ನಡ ಜನಕ್ಕೆ ಬಾಯಿಪಾಠವಾದುವು; "ಹೆಣದ ಹಿಂದೆ" ಕವನದಲ್ಲಿ ಬೇಂದ್ರೆ ತಾವು ಬಾಳಿಬಂದ ಪರಂಪರೆಯ ದುಷ್ಟ ಆಚಾರಗಳನ್ನೇ ಕ್ರೂರವಾಗಿ ವಿಡಂಬಿಸಿದರು. ಅನ್ನಯಜ್ಞ, ಮನುವಿನ ಮಕ್ಕಳು, ತುತ್ತಿನ ಚೀಲ, ಭೂಮಿತಾಯಿಯ ಚೊಚ್ಚಲ ಮಗ ಎಂಬ ಕವಿತೆಗಳಲ್ಲಿ ಬೇಂದ್ರೆ ಬಡವರ, ದೀನರ ಪರ ನಿಂತು ಬರೆಯುವ ಮಾತುಗಳು ಕವಿಯಲ್ಲಿರುವ ತಾಯಿಭಾವಕ್ಕೆ ಮಾನವಪ್ರೇಮಕ್ಕೆ ಮೂಡಿದಂಥವು. ದೇಶ ಸಾವು ಉಳಿವಿನ ಹೊಸಿಲಿನಲ್ಲಿರುವಾಗ ಬುದ್ಧಿವಂತರು ಮಾಡುತ್ತಿರುವುದೇನು?

ಶಬ್ದಬ್ರಹ್ಮದ ಗುಮ್ಮಟದಲ್ಲಿ
ಹಗಲೂ ಇರುಳೂ ವೇದದ ವಾದ
ಪಾಪ ಪುಣ್ಯಗಳ ಜಾಳಿಗೆಯಲ್ಲಿ
ನೇತಿದೆ ಜೋತಿದೆ ಜೀವದ ಜೇಡ

ಎಂದು ಮತಭ್ರಾಂತರನ್ನು ವಿಡಂಬಿಸಿದ ಕವಿ ಅದರ ಫಲವಾಗಿ ಏನಾಗಬಹುದೆಂದು ಎಚ್ಚರಿಕೆಯನ್ನೂ ಕೊಟ್ಟರು. ದೇವರು ಧರ್ಮಗಳೆಲ್ಲ ಬಡವರ ವಿರೋಧವೇ ಇರುವ ಪಕ್ಷಕ್ಕೆ ಅಂಥ-

ದೇವರದೊಂದು ಗೋರಿಯ ಕಟ್ಟಿ
ಧರ್ಮದ ಧೂಪಕೆ ಬೆಂಕಿಯನಿಕ್ಕಿ
ಗಣ ಗಣ ಬಾರಿಸಿ ಪ್ರಾಣದ ಗಂಟೆಯ
ಸಾವಿನ ನೋವಿಗೆ ಕಲಮಲವೆದ್ದು
ನೆಲವನ್ನೆಲ್ಲಾ ತುತ್ತುವೆನೆಂದು
ಗದರುತ್ತಿಹುದು ಗರ್ಜಿಸುತಿಹುದು
ಬಡವರ ಬಗ್ಗರ ತುತ್ತಿನ ಚೀಲದ
ಒಳಗಿನ ಒಳಗಿನ ಒಳದನಿಯೊಂದು

ಮನುಷ್ಯರ ನಡುವಿನ ಅಸಮತೆಯನ್ನು ಅಳಿಸಿ ಮೂಡುವ ಹೊಸಕಾಲದ ಉದಯವನ್ನು ಅವರ 'ರುದ್ರವೀಣೆ' ಕವಿತೆಯಲ್ಲಿ ಬರುವ-

ಚಿಕ್ಕೆ ಬಾಲ ಬೀಸುತಿವೆ
ಸೂರ್ಯಚಂದ್ರ ಈಸುತಿವೆ
ಹೊಸ ಬೆಳಕಿಗೆ ಹಾಸುತಿವೆ
ಕಾಲ ಪಥದಲಿ
ಧರ್ಮಾಸನ ಹೊರಳುತಿವೆ
ಸಿಂಹಾಸನ ಉರುಳುತಿವೆ
ಜಾತಿ ಪಂಥ ತೆರಳುತಿವೆ
ಮನದ ಮರೆಯಲಿ

ಎಂಬ ಸಾಲುಗಳು ಪರಿಣಾಮಕಾರಿಯಾಗಿ ಹೇಳುತ್ತವೆ. ಹಳೆಯ ವ್ಯವಸ್ಥೆಯ ಪ್ರಳಯದ ಸೂಚನೆಯನ್ನೂ ಆ ವ್ಯವಸ್ಥೆಯ ಸಂಕೇತಗಳು ಅಡಿಮೇಲಾಗುತ್ತಿರುವುದನ್ನೂ ಅವು ತುಂಬ ಶಕ್ತಿಯುತವಾಗಿ ಚಿತ್ರಿಸುತ್ತವೆ.

ಅವಧೂತ

ಬಾಳಿನ ಸುಖದುಃಖಗಳಿಗೆ ತೀವ್ರವಾಗಿ ಸ್ಪಂದಿಸುತ್ತಲೇ ಬುದ್ಧಿ ತರ್ಕಗಳಾಚೆಯ, ಅತೀಂದ್ರಿಯ ನೆಲೆಯ ಅನುಭವಗಳಿಗೂ ಮಿಡಿದವರು ಬೇಂದ್ರೆ,

ವಾಸ್ತವವಾಗಿ ಅವರು ಸಂಸಾರದ ನಡುವೆ ಸುಳಿದ ಒಬ್ಬ ಅವಧೂತ ಎಂದರೂ ನಡೆದೀತು. "ಸಂಸ್ಕೃತಿ ನಾಗರಿಕತೆಗಳಿಗೆ ಎಟುಕದ ಒಂದು ಅಗಮ್ಯವಾದ ಕಾಡುತನ" ಅವರಲ್ಲಿತ್ತು. ಎಂತಲೇ ಜೋಗಿ, ಲಲಿತೆ, ಸರಸ್ವತೀ ಸೂಕ್ತ, ಕಣ್ಣ–ಕಾಣಿಕೆ ಕವಿತೆಗಳಲ್ಲಿ ವ್ಯಕ್ತವಾಗುವ ದುರೂಹ್ಯ, ಆಕರ್ಷಕ ಅನುಭವಗಳು ತನ್ನ ಪ್ರಜ್ಞಾಪಾತಾಳಗಳಿಗೆ ಹಾಯುವ ಸಾಧಕ ಚಿತ್ತವೊಂದರ ಅಲೌಕಿಕ ಗ್ರಹಿಕೆಗಳಾಗಿ ಕಾಣುತ್ತವೆ. ಇಷ್ಟಾದರೂ ಕವಿತೆ ಆ ಅಮೂರ್ತಾನುಭವಗಳನ್ನು

ನೀರಿನುಸಿರೆ ಮೇಲೆ ಹಾರಿ
ಬೆಳಕುಹಕ್ಕಿ ಬೆನ್ನ ಏರಿ
ಬಿಳಿಯ ಮೋಡ ಬೆಳಕಿನಲ್ಲಿ
ತೇಲುವಂತೆ ಬಂದಳೋ
ಅಂಚೆ ಏರಿ ನೀರಿನಾಕೆ
ಗಾಳಿಯಲ್ಲಿ ಸುಳಿದಳೋ
ಬೆಳಕಿನಲ್ಲಿ ಬೆಳೆದಳು

ಎಂಬ ಗಟ್ಟಿಮುಟ್ಟಾದ, ನಯನೋದ್ದೀಪಕ ಚಿತ್ರಗಳಲ್ಲಿ ಬೆಳೆದು ಕೊಡುತ್ತವೆ. ಒಡಲು ಸಿಕ್ಕು ಒಳಗು ಸಿಗಲಿಲ್ಲವೆನಿಸುವಂತೆ ಮಾಡುವ ಈ ಭಾಗಗಳು ಮೊದಲಿಗೆ ಪೂರ್ತಿ ಕತ್ತಲಾಗಿರುತ್ತ ಆಗಾಗ ಅಷ್ಟಷ್ಟೇ ಮಿಂಚಿ ಅರಿವಿಗೆ ಥಿಕ್ಕಿಯಾಗುತ್ತ ನಮ್ಮ ಕಲ್ಪನೆಯ ಜೊತೆ ತಿಳ್ಳಿಯಾಡುತ್ತವೆ. ಅನುಭವಕ್ಕೆ ತಾಗುತ್ತ ಆದರೆ ಅರ್ಥವನ್ನು ಧಿಕ್ಕರಿಸುತ್ತ ಬುದ್ಧಿಯ ಗಡಿಯಾಚೆ ನಿಂತು ನಗುವ ಇಂಥ ಕವಿತಾ ಭಾಗಗಳು ಬೇಂದ್ರೆಯವರಲ್ಲಿ ಹೇರಳವಾಗಿ ಸಿಗುತ್ತವೆ. ಕವಿತೆ ಹೀಗಿದೆಯಲ್ಲ ಎಂದರೆ ಅದಕ್ಕೆ ಕವಿಯ ಉತ್ತರ ಇಷ್ಟೆ.

ಕತ್ತಲಲ್ಲೆ ಬೆಳಕು ಮಿಂಚಿ
ಪಡೆಯಿತೇಳು ಬಣ್ಣ
ಮೂಕಮೌನ ತೂಕ ಮೀರಿ
ದನಿಯು ಹುಟ್ಟಿ ಸಣ್ಣ
ಕಣ್ಣಮಣ್ಣ ಕೂಡಲಲ್ಲಿ
ಹಾಡು ಹುಟ್ಟಿತಣ್ಣ

ವಾಸ್ತವ–ದರ್ಶನಗಳ ಸಂಧಿಭೂಮಿಯಲ್ಲಿ ಮೂಡುವ ಇಂಥ ಕವಿತೆಗಳು ಇರುವ ರೀತಿಯೇ ಹಾಗೆ.

ಬೇಂದ್ರೆ ಬರಿಯ ಕವಿಯಲ್ಲ. ಕವಿತಾಸೃಷ್ಟಿ ಅವರಿಗಿದ್ದ ಹತ್ತಾರು ಶಕ್ತಿಗಳಲ್ಲಿ ಒಂದು. ಅವರೊಬ್ಬ ಸಮನಿಲ್ಲದ ವಾಗ್ಮಿ ಎನಿಸಿದ್ದರು. ಮಾತಿಗೆ ಎದ್ದರೆ ಮುಗಿಯಿತು.

ನಾಲ್ಕೇ ನಿಮಿಷಗಳಲ್ಲಿ ಇಡೀ ಸಭೆ ಆ ನುಡಿವೈಖರಿಗೆ ವಶವಾಗಿ ಪಾದಕ್ಕೆ ಬೀಳುತ್ತಿತ್ತು. ಪ್ರಕೃತಿಯ ಒಂದು ಸತ್ವ ತನ್ನ ಅತಿಶಯತೆಗೆ ಬೆಳೆದು ಸಭೆಯ ಮೇಲೆ ಎರಗಿದಂತಿರುತ್ತಿತ್ತು. ಬೇಂದ್ರೆ ಮಾತಾಡುವುದೆಂದರೆ ಮೇಘಮತ್ತವಾದ ಆಕಾಶ ಕೆರಳಿದಂತೆ. ಮಾತಿನ ನಾದ ಕಿವಿಯನ್ನು ಒಲಿಸುತ್ತ, ಅರ್ಥದ ಮಿಂಚು ಬುದ್ಧಿಯನ್ನು ಮೀಟುತ್ತ, ಕಲ್ಪನೆಯ ವಿಲಾಸ ಕೇಳುವ ಜೀವವನ್ನು ಕಾವುಗೊಳಿಸುತ್ತಿತ್ತು. ಆ ಮಾತಿನ ಕಾವಿಗೆ ಮೊಟ್ಟೆಯೊಡೆದು ಹೊರಬಂದ ವ್ಯಕ್ತಿತ್ವಗಳು ಎಷ್ಟೋ.

ಬೇಂದ್ರೆಯವರ ಕೆಲವು ಕವಿತೆಗಳು ಜಗತ್ತಿನ ಉತ್ತಮೋತ್ತಮ ಕಾವ್ಯದ ನೆಲೆಗೆ ಸೇರಿದ್ದೆಂದು ನಾಡಿನ ಎಲ್ಲ ಸಾಹಿತ್ಯಜ್ಞರ ಅಭಿಪ್ರಾಯವಿದೆ. ಗೌರವ ಡಾಕ್ಟರೇಟ್ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಫೆಲೋಷಿಪ್ ಮೊದಲಾದ ಗೌರವಗಳು ಅವರ ಕಾವ್ಯವನ್ನು ಅರಸಿಕೊಂಡು ಬಂದವು.

ಈ ಕವಿಯ ಜ್ಞಾನಪಿಪಾಸೆ ಅಗಾಧವಾಗಿತ್ತು. ಸಾಹಿತ್ಯ ಕಲೆ ಸಂಸ್ಕೃತಿಗಳಲ್ಲದೆ ಗಣಿತ, ಭೌತ, ರಸಾಯನ, ಭೂಗರ್ಭಶಾಸ್ತ್ರಗಳಂಥ ವಿಜ್ಞಾನ ವಿಷಯಗಳನ್ನೂ ಅವರು ಆಳದಲ್ಲಿ ತಡಕಿದವರು. ಕಡೆ ಕಡೆಯ ದಿನಗಳಲ್ಲಿ ಅವರ ಚಿಂತನೆ ಶಬ್ದ ಅರ್ಥಗಳನ್ನು ಮೀರಿ ಸಾಂಖ್ಯದತ್ತ ಒಲಿದಿತ್ತು. ಈ ಎಲ್ಲ ಹುಡುಕಾಟ ಹಾಗೂ ವಸ್ತು ವಿಷಯಗಳ ಅನಾವರಣಯತ್ನವು ಜ್ಞಾನ ಸೌಂದರ್ಯಗಳ ಮುಸುಕನ್ನು ಸರಿಸಿ ಸತ್ಯವನ್ನು ದರ್ಶಿಸಲು ಬಯಸುವ ಸಾಧಕನ ಚಡಪಡಿಕೆಯಾಗಿತ್ತು. ಹೊಳೆಯುವ ಬಂಗಾರದ ತಳಿಗೆಯನ್ನು ಸರಿಸಿ ನಿನ್ನ ದರ್ಶನ ಕೊಡು ಎಂದು ಬೇಡಿದ ಉಪನಿಷದ್ ಋಷಿಯ ಕಳಕಳಿಯ ಪ್ರಾರ್ಥನೆಯಾಗಿತ್ತು.

ಒಪ್ಪಿಕೊ ಪರಾಭವ!

ಮಾತಲ್ಲ, ಮಂತ್ರ, ಅರ್ಥದಾಚೆಗೆ ಮಾತ
ಹಾರಿಸಿಬಿಡುವ ತಂತ್ರ; ಕತ್ತಿಗೆ ಗಂಟು ಬಿದ್ದ
ಅರ್ಥದ ಕಣ್ಣಿ ಕಳಚಿ ಅಂತರಿಕ್ಷಕ್ಕೆ ಜಿಗಿದು
ನಕ್ಷತ್ರವಾಯಿತು ಶಬ್ದ.
ನಾದಲಯಗಳ ಜೋಡು ಸಾರೋಟು ಹತ್ತಿ
ರೂಪಕದ ಮೆರವಣಿಗೆ ಬರವಣಿಗೆ;
ಬಡ ಪದವ ಕವಿತೆ ಮಾಡುವ ಅತಾರ್ಕಿಕ ಹೆಣಿಗೆ ಯಕ್ಷಿಣಿಗೆ.
ಲೋಟದಲ್ಲಿದೆ ಹೌದೆ ನೀರು? ತಟ್ಟೆಯ ಮುಚ್ಚಿ
ಮತ್ತೆ ತೆಗೆದರೆ ಬಿಯರು!
ಆಟಕ್ಕೆ ಮಾತನ್ನು ಹೂಡಿ ಎಸೆದನೊ ದಾಳ
ಕೇಳುಕೇಳಿದ ಗರ.
ನಾಲ್ಕೇ ಜಿಗಿತ ಕಾಯಿ ಹಣ್ಣಾಗಿ ಬಿಡುವ ವರ
ಖಯಾಲಿ ಹತ್ತಿತೊ, ಹರಟೆ ಕಣ್ಣೆದುರೆ ಒಣಗೊರಟೆ
ಕುಡಿಯೊಡೆದು ಸಸಿಯಾಗಿ ಗಿಡವಾಗಿ ಮರವಾಗಿ

ಚಿಗುರಿ ಹೂತುಂಬಿ ಹರೆಯಾಡಿ ಹಬ್ಬುವ ನೆರಳು!
ಸಾಧನಕೇರಿಯಲ್ಲಿ ಸಿದ್ಧಿಗೇರಿದ ಜೋಗಿ
ಖಾಲಿಜೇಬಿನ ಅರ್ಥಶ್ರೀಮಂತ; ಹೋಗಂತ
ಹೇಳಿದನೋ ಹೋಗಿ ಬಾ ಎಂದನೋ ತಲೆಬಾಗಿ
ಠಣ್ಣೆಂದು ಕುಣಿಕುಣಿದು ಶಬ್ದವರಹದ ಸಾಲು
ಹೇಗೆ ಬರುವುವು ನೋಡಿ! ಅರ್ಥ ಅತ್ತಿರಲಿ ಬಿಡಿ
ಅನರ್ಥ ಅಪಾರ್ಥಗಳ ಗಲ್ಲಿ ಪಡಖಾನೆಯಲಿ
ಕುಡಿದು ಮತ್ತೇರಿ

ದನಿಯೆತ್ತಿ ಹಾಡಿ ಪದ ಬಾರಿಸಿದೆ ಜಯಭೇರಿ
ಕುಡುಗೋಲ ಹಿಡಿದ ಏ ಉನ್ಮತ್ತ ಕರಿಯ!
ಏನು ಕೆಲಸವೊ ಇಲ್ಲಿ ನಿನಗೆ?
ಕುಡುಗೋಲ ಕೆಳಗಿಟ್ಟು ಕೈಯೆತ್ತಿ ಹಣೆಗಿಟ್ಟು
ಸಲ್ಲಿಸು ನಮಸ್ಕಾರ, ಒಪ್ಪಿಕೊ ಪರಾಭವ!

– ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಕನ್ನಡಕ್ಕೊಬ್ಬ ಕಾರಣಪುರುಷ
ಕುವೆಂಪು

ಯುಗದ ಕವಿಗೆ ಜಗದ ಕವಿಗೆ
ಶ್ರೀ ರಾಮಾಯಣ ದರ್ಶನ-
ದಿಂದಲೆ ಕೈಮುಗಿದ ಕವಿಗೆ
ಮಣೆಯದವರು ಯಾರು?
ರಾಮಕೃಷ್ಣ ವಚನೋದಿತ
ಪ್ರತಿಭೆ ತೆರೆದ ಕವನ ತತಿಗೆ
ತಣಿಯದವರು ಯಾರು?
ಮಲೆನಾಡಿನ ಸೌಂದರ್ಯಕೆ
ಕುಣಿದಾಡಿದ ಕವಿಯ ಜೊತೆಗೆ
ಕುಣಿಯದವರು ಯಾರು?

ಇದು ಕುವೆಂಪು ಅವರನ್ನು ಹೃತ್ಪೂರ್ವಕವಾಗಿ ಪ್ರಶಂಸಿಸಿ ಬರೆದ ಕವಿತೆಯ ಒಂದು ಭಾಗ. ಕುವೆಂಪು ಅವರಿಗೆ ಸಮರ್ಪಿಸಲಿದ್ದ ಅಭಿನಂದನ ಗ್ರಂಥಕ್ಕೆ ಬರೆದುಕೊಟ್ಟ ಕವಿತೆ ಅದು. ಅದನ್ನು ಬರೆದವರು ಯಾರೋ ಅಂಥಿಂಥವರಲ್ಲ. ಇದುವರೆಗಿನ ಕನ್ನಡ ಕಾವ್ಯ ಪರಂಪರೆಯಲ್ಲೇ ಭಾವಗೀತಾತ್ಮಕವಾದ ಕಾವ್ಯದಲ್ಲಿ ಅದ್ವಿತೀಯರು ಎಂದು ವಿಮರ್ಶಕರಿಂದ ಕೀರ್ತಿತರಾದ ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ! ಕುವೆಂಪು ಅವರಿಗೆ ಸಂದ ಪ್ರಶಸ್ತಿಗಳಲ್ಲಿ ಬಹುಶಃ ಇದಕ್ಕೆ ಸಮನಾದದ್ದು ಇನ್ನೊಂದು ಇರಲಾರದು.

ಒಬ್ಬ ಸಾಹಿತಿಯಾಗಿ ಈ ದೇಶದಲ್ಲಿ ಏನೆಲ್ಲ ಯಶಸ್ಸು ಸಾಧಿಸಬಹುದೋ ಅದೆಲ್ಲವನ್ನೂ ಸಾಧಿಸಿದ ಹೆಗ್ಗಳಿಕೆ ಕುವೆಂಪು ಅವರದು. ಅವರಿಗೆ ಎಷ್ಟೆಲ್ಲ ಪ್ರಶಸ್ತಿ ಗೌರವಗಳು ಸಂದಿವೆ ಎನ್ನುವುದು ಎಲ್ಲರಿಗೂ ಗೊತ್ತಿದೆಯಾಗಿ ಅವುಗಳನ್ನು ಇಲ್ಲಿ

ಮತ್ತೆ ಹೇಳುವ ಅಗತ್ಯವಿಲ್ಲ. "ಕಾವ್ಯಂ ಯಶಸೇ ಅರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ ಸದ್ಯಃ ಪರನಿರ್ವೃತಯೇ ಕಾಂತಾ ಸಂಮಿತತಯೋಪದೇಶಯುಜೇ" ಎಂದು ಮಮ್ಮಟ ಎಂಬ ಒಬ್ಬ ಕಾವ್ಯಮೀಮಾಂಸಕಾರ ಕೆಲವು ಶತಮಾನಗಳ ಹಿಂದೆ ಹೇಳಿದ. ಕಾವ್ಯದಿಂದ ಯಶಸ್ಸು, ಧನ, ವ್ಯವಹಾರಜ್ಞಾನ, ಅಮಂಗಳ - ಪರಿಹಾರ, ಆನಂದ – ಇವೆಲ್ಲ ಸಿಗುತ್ತವೆಂದು ಆ ಮಾತಿನ ಅರ್ಥ. ಕುವೆಂಪು ಅವೆಲ್ಲವನ್ನೂ ಒಂದೂ ಬಿಡದೆ ಪಡೆದರು.

ಶ್ರೇಷ್ಠರೇ ಆಗಿದ್ದರೂ ಎಲ್ಲ ಸಾಹಿತಿಗಳಿಗೂ ಇದು ಲಭ್ಯವಲ್ಲ. ಮುದ್ದಣ ಒಳ್ಳೆಯ ಕವಿಯೇ. ಆದರೂ ತಾನು ಬರೆದಿದ್ದ 'ರಾಮಶ್ವಮೇಧ'ವನ್ನು ತನ್ನದೆಂದು ಹೇಳಿಕೊಳ್ಳದೆ ಮಹಾಲಕ್ಷ್ಮಿ ಎಂಬ ಪ್ರಾಚೀನ ಕವಯಿತ್ರಿಯೊಬ್ಬಳ ಕಾವ್ಯವೆಂದು ಆಟ ಕಟ್ಟಿದ ! ಒಂದು ಹೈಸ್ಕೂಲಿನಲ್ಲಿ ವ್ಯಾಯಾಮ ಶಿಕ್ಷಕನಾದ ತಾನು ಇಂಥ ಕಾವ್ಯ ಬರೆದಿದ್ದೇನೆಂದರೆ ಯಾರೂ ಅದನ್ನು ನೋಡುವ ಗೋಜಿಗೇ ಹೋಗದಿರಬಹುದು, ಅದಕ್ಕೆ ತಕ್ಕ ನ್ಯಾಯ ದೊರೆಯದಿರಬಹುದು ಎನ್ನುವುದು ಅವನ ಎಣಿಕೆಯಾಗಿತ್ತು. 'ಪ್ರೈಡ್ ಅಂಡ್ ಪ್ರೆಜುಡಿಸ್'ನಂಥ ಮಹತ್ವದ ಕಾದಂಬರಿ ಬರೆದ ಜೇನ್ ಆಸ್ಟಿನ್ ಪುಸ್ತಕಗಳ ಮೇಲೆ ತನ್ನ ಹೆಸರು ಹಾಕದೆ 'ಒಬ್ಬ ಲೇಖಕಿಯಿಂದ' ಎಂದಷ್ಟೇ ಅಚ್ಚುಮಾಡಿಸುತ್ತಿದ್ದಳು! ಕಾದಂಬರಿ ಬರೆದ ಹೆಣ್ಣು ಮೂದಲಿಕೆಗೆ ಗುರಿಯಾಗುತ್ತಿದ್ದ ಕಾಲ ಅದು ! ಪಂಪ ಎಷ್ಟೇ ದೊಡ್ಡ ಕವಿಯಾದರೂ ಒಬ್ಬ ಸಾಮಂತರಾಜನ ಆಸ್ಥಾನದಲ್ಲಿ ಇದ್ದುದರಿಂದ ಅವನಿಗಿಂತ ತುಂಬ ಕಡಿಮೆ ಮಟ್ಟದ ಕವಿಯಾದ ಪೊನ್ನನಿಗೆ ಸಿಕ್ಕ 'ಕವಿಚಕ್ರವರ್ತಿ' ಬಿರುದು ಅವನಿಗೆ ಸಿಗದೆಹೋಯಿತು!

ಕುವೆಂಪು ಪ್ರತಿಭಾವಂತರು; ಸತತ ಸಾಧನೆ ಮಾಡಿದವರು, ಮಾತ್ರವಲ್ಲ ತುಂಬ ಅದೃಷ್ಟವಂತರು ಕೂಡ. ಅವರು ತಮ್ಮ ಅರ್ಹತೆಗೆ ತಕ್ಕದ್ದೆಲ್ಲವನ್ನೂ ಪಡೆದರು. ಅಷ್ಟೇ ಅಲ್ಲ, ತಮ್ಮ ಪಾಲಿನ ದೈವ ಹಲವು ಸಂದರ್ಭಗಳಲ್ಲಿ ತಮಗೇ ತಿಳಿಯದಂತೆ ಕಾವಲಿದ್ದು ತಮ್ಮನ್ನು ರಕ್ಷಿಸಿಕೊಂಡಿತು ಎನ್ನುವುದನ್ನು ಕುವೆಂಪು ಅವರೇ ಅಲ್ಲಲ್ಲಿ ಹೇಳಿಕೊಂಡಿರುವುದುಂಟು.

ಓದುವ ಸಲುವಾಗಿ ಮೈಸೂರಿಗೆ ಬಂದು ಮಹಾರಾಜ ಹೈಸ್ಕೂಲಿಗೆ ಸೇರಿದ್ದ ಕುವೆಂಪು ಸಂತೆಪೇಟೆಯಲ್ಲಿ ಒಂದು ಬಾಡಿಗೆ ರೂಮಿನಲ್ಲಿ ವಾಸಮಾಡುತ್ತಿದ್ದರು. ಆಗಾಗ ರಾಮಕೃಷ್ಣಾಶ್ರಮಕ್ಕೆ ಹೋಗಿ ಬರುವುದು ಅವರ ಪರಿಪಾಠಿಯಾಗಿತ್ತು. ಒಮ್ಮೆ ಒಟ್ಟಿಗೇ ಕೆಲವು ದಿನ ಅವರು ಆಶ್ರಮಕ್ಕೆ ಹೋಗಲಿಲ್ಲ. ಇದು ಆಶ್ರಮದ ಅಧ್ಯಕ್ಷರಾಗಿದ್ದ ಸಿದ್ಧೇಶ್ವರಾನಂದರ ಗಮನಕ್ಕೆ ಬಂತು. ಕೂಡಲೇ ಅವರು ಆಶ್ರಮಕ್ಕೆ ಬರುತ್ತಿದ್ದ ಇನ್ನೊಬ್ಬ ಹುಡುಗ ನಾ ಕಸ್ತೂರಿಯನ್ನು ಕರೆದು

"ನೋಡು ಕಸ್ತೂರಿ, ಪುಟ್ಟಪ್ಪ ಅಂತ ಒಬ್ಬ ಹುಡುಗ ಬರುತ್ತಿದ್ದನಲ್ಲ. ಅವನು ಯಾಕೋ ನಾಲ್ಕು ದಿನದಿಂದ ಆಶ್ರಮಕ್ಕೆ ಬರುತ್ತಿಲ್ಲ. ಅವನು ಎಲ್ಲಿದ್ದಾನೆ, ಯಾಕೆ ಬರುತ್ತಿಲ್ಲ ತಿಳಿದುಕೊಂಡು ಬಾ ಅಂತ ಕೆಲಸ ಹಚ್ಚಿದರು. ನಾ. ಕಸ್ತೂರಿ ಆಗ ಸ್ಕೌಟ್‌ನಲ್ಲಿ ಒಬ್ಬ (ಪೆಟ್ರೋಲ್) ಲೀಡರ್. ಅವರ ಬೆನ್ನಿಗೆ ಸದಾ ಐದಾರು ಹುಡುಗರು. ಕಸ್ತೂರಿ ಆ ಬಂಟರನ್ನು ಕಟ್ಟಿಕೊಂಡು ಎಲ್ಲ ಕಡೆ ಅಲೆದು ಪುಟ್ಟಪ್ಪನವರ ರೂಮು ಪತ್ತೆ ಮಾಡಿದರು. ಅಲ್ಲಿ ನೋಡಿದರೆ ಹುಡುಗ ಸುಡುಜ್ವರದಲ್ಲಿ ಮಲಗಿದ್ದಾನೆ! ನೋಡಿಕೊಳ್ಳುವವರು ಯಾರೂ ಇಲ್ಲ. ಸಿದ್ಧೇಶ್ವರಾನಂದರಿಗೆ ಈ ವಿಷಯ ತಿಳಿಯಿತು. ಪುಟ್ಟಪ್ಪನವರನ್ನು ಬಲಾತ್ಕಾರದಿಂದ ಆಸ್ಪತ್ರೆಗೆ ಸೇರಿಸಿ ಅನಂತರ ಅವರನ್ನು ರಾಮಕೃಷ್ಣಾಶ್ರಮಕ್ಕೇ ಕರೆದುಕೊಂಡು ಹೋಗಿಬಿಟ್ಟರು ಸ್ವಾಮೀಜಿ. ಪುಟ್ಟಪ್ಪನವರು ರಾಮಕೃಷ್ಣಾಶ್ರಮದ ಪೂರ್ಣ ತೆಕ್ಕೆಗೆ ಒಳಗಾದದ್ದು ಹೀಗೆ. ಮುಂದೆ ತಮ್ಮ ವಿವಾಹವಾಗುವವರೆಗೆ ಅವರು ಅಲ್ಲಿಯೇ ಉಳಿದರು. ಆಶ್ರಮದ ವಾತಾವರಣ, ಲೈಬ್ರರಿ, ಸ್ವಾಮೀಜಿಯವರ ಸಹವಾಸ ಇವೆಲ್ಲ ಬೆಳೆಯುತ್ತಿದ್ದ ಬಾಲಕನ ವ್ಯಕ್ತಿತ್ವದ ಮೇಲೆ ಗಾಢವಾದ ಪ್ರಭಾವ ಬೀರಿದುವು. ಅಲ್ಲಿ ಲಭ್ಯವಾದ ಪರಮಹಂಸರ ಚಿಂತನೆಗಳು, ವಿವೇಕಾನಂದರ ಉಜ್ವಲ ಬರೆಹಗಳು ಪುಟ್ಟಪ್ಪನವರಿಗೆ ಹೊಸ ಜನ್ಮವನ್ನೇ ನೀಡಿದುವು. ಕುವೆಂಪು 'ರಾಮಾಯಣ ದರ್ಶನ'ದಲ್ಲಿ

> **ಕೌಸಲೆಯ ನಂದನಂ ದೇವಕಿಯ ಕಂದನುಂ**
> **ತಾವೊಂದೆ ಮೈಯೊಳಿಂದವತಾರ ಮೆತ್ತಿದಾ**
> **ಶ್ರೀರಾಮಕೃಷ್ಣ ಭಗವತ್ ಗೋತ್ರ ಸಂಜಾತನ್**

ಎಂದು ತಮ್ಮನ್ನು ಕರೆದುಕೊಂಡಿದ್ದಾರೆ. ಕೌಸಲ್ಯೆಯ ಮಗನಾದ ರಾಮ, ದೇವಕಿಯ ಮಗನಾದ ಕೃಷ್ಣ ಇಬ್ಬರೂ ಒಟ್ಟು ಸೇರಿ ಒಂದೆ ಮೈಯಲ್ಲಿ ರಾಮಕೃಷ್ಣ ಪರಮಹಂಸರಾಗಿ ಅವತರಿಸಿದರಂತೆ. ಆ ರಾಮಕೃಷ್ಣ ಋಷಿಯ ಗೋತ್ರದಲ್ಲಿ ಮೂಡಿಬಂದವನು ನಾನು ಎನ್ನುವುದು ಆ ಮಾತಿನ ಅರ್ಥ. ಇಂಥ ಸೌಭಾಗ್ಯಕರವಾಧ ಪ್ರಭಾವ ಅವರಿಗೆ ಲಭಿಸಿದುದು ಒಂದು ಬೇನೆಯ ಕಾರಣದಿಂದ! ತತ್ಕಾಲಕ್ಕೆ ನಮ್ಮ ದೃಷ್ಟಿಗೆ ಕೇಡುಗಳಾಗಿ ಕಾಣುವ ಕೆಲವು ಘಟನೆಗಳು ಮುಂದೆ ನಮ್ಮನ್ನು ಶ್ರೇಯಸ್ಸಿಗೆ ಒಯ್ಯುವ ಸಂಭವವೂ ಉಂಟು. ಕುವೆಂಪುವೇ ಹೇಳುತ್ತಾರೆ "ಇಂದಿನ ಅನರ್ಥಮೆಯೆ ತೊಟ್ಟಿಲಾಗದೆ ಮುಂದಣಭ್ಯುದಯ ಶಿಶುಗೆ?"

ಪುಟ್ಟಪ್ಪನವರು ಮಹಾರಾಜಾ ಕಾಲೇಜಿನಲ್ಲಿ ಬಿ.ಎ. ಪದವಿ ಮುಗಿಸಿದರು. ಮುಂದೆ ತತ್ವಶಾಸ್ತ್ರದ ಎಂ.ಎ. ತರಗತಿಗೆ ಸೇರುವುದೆಂದು ತೀರ್ಮಾನಿಸಿದ್ದೂ ಆಯಿತು. ಆ ಕಾಲದಲ್ಲಿ ಬಹಳ ಮೇಧಾವಿಗಳಾದ ವಿದ್ಯಾರ್ಥಿಗಳು ತತ್ವಶಾಸ್ತ್ರದ ಅಧ್ಯಯನ ಮಾಡುವುದು ಒಂದು ಅಗ್ಗಳಿಕೆಯ ವಿಷಯವಾಗಿತ್ತು. ಅಲ್ಲದೆ ಪ್ರೊ॥ ವಾಡಿಯಾರಂಥ ಅಂತರರಾಷ್ಟ್ರೀಯ

ಖ್ಯಾತಿಯ ಅಧ್ಯಾಪಕರು ಆಗ ತತ್ವಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದು, ಅವರ ಶಿಷ್ಯರಾಗಿ ಅಧ್ಯಯನ ಮಾಡುವುದು ಒಂದು ಹೆಮ್ಮೆಯ ವಿಷಯವಾಗಿತ್ತು. ಸಾಲದ್ದಕ್ಕೆ ತತ್ವಶಾಸ್ತ್ರದ ಅಭ್ಯಾಸಕ್ಕೆ ಸ್ವಾಮಿ ಸಿದ್ಧೇಶ್ವರಾನಂದರ ಪೂರ್ಣ ಅನುಮೋದನೆಯೂ ಇತ್ತು. ಆ ತರಗತಿಗೆ ಸೇರಲು ಕುವೆಂಪು ಇತರ ವಿದ್ಯಾರ್ಥಿಗಳ ಜೊತೆ ಹೋಗುತ್ತಿದ್ದಾರೆ. ಆ ಹೊತ್ತಿಗೆ ಅಲ್ಲಿ ಕನ್ನಡದ ಅಧ್ಯಾಪಕರಾಗಿದ್ದ ಎ.ಆರ್.ಕೃಷ್ಣಶಾಸ್ತ್ರಿಗಳು ಪುಟ್ಟಪ್ಪನವರಿಗೆ ಹೇಳಿ ಕಳಿಸಿದರು. ಪುಟ್ಟಪ್ಪನವರು ಅವರನ್ನು ಕಾಣಲು ಹೋದಾಗ ಕೃಷ್ಣಶಾಸ್ತ್ರಿಗಳು ಕೇಳಿದರು.

"ಎಂ.ಎ. ಗೆ ಅಪ್ಲಿಕೇಶನ್ ಹಾಕಿದ್ದೀರಾ ಪುಟ್ಟಪ್ಪ?"

"ಹೌದು ಸಾರ್, ಹಾಕಿದ್ದೇನೆ"

"ಯಾವ ಎಂ.ಎ.ಗೆ ಹಾಕಿದ್ದೀರಿ?"

"ಫಿಲಾಸಫಿಗೆ"

"ಈ ವರ್ಷದಿಂದ ಕನ್ನಡ ಎಂ.ಎ. ಆರಂಭವಾಗುತ್ತಿದೆ. ನೀವು ಕನ್ನಡ ಎಂ.ಎ.ಗೆ ಯಾಕೆ ಬರಬಾರದು?"

"ಫಿಲಾಸಫಿಗೆ ಹಾಕಿಬಿಟ್ಟಿದ್ದೇನೆ. ನನಗೆ ಸೀಟೂ ಕೊಟ್ಟುಬಿಟ್ಟಿದ್ದಾರೆ."

"ಫಿಲಾಸಫಿ ಏನಪ್ಪಾ? ನೀವೇ ಅದನ್ನು ಓದಿಕೊಳ್ಳುವ ಸಾಮರ್ಥ್ಯ ಪಡೆದಿದ್ದೀರಿ. ಹೇಗಿದ್ದರೂ ಆಶ್ರಮದಲ್ಲಿ ಇದ್ದೀರಿ. ಮೂರು ಹೊತ್ತೂ ಅಲ್ಲಿ ಅದೇ ತಾನೆ? ನೀವು ಒಳ್ಳೆಯ ಕವಿಗಳು; ಕನ್ನಡ ಸಾಹಿತ್ಯಕ್ಕೆ ಸೇವೆ ಸಲ್ಲಿಸುವ ಸಾಮರ್ಥ್ಯ ಇರುವವರು. ನಿಮ್ಮ ಅಗತ್ಯ ಇರುವುದು ಫಿಲಾಸಫಿಗಿಂತ ಹೆಚ್ಚಾಗಿ ಕನ್ನಡಕ್ಕೆ. ನಮಗೆ ನಿಮ್ಮಂಥ ಪ್ರತಿಭಾವಂತ ವಿದ್ಯಾರ್ಥಿಗಳೇ ಬೇಕಪ್ಪಾ."

ಅದೇನಾಯಿತೋ! ಫಿಲಾಸಫಿ ತೆಗೆದುಕೊಳ್ಳುವ ಪುಟ್ಟಪ್ಪನವರ ನಿರ್ಧಾರ ಕ್ರಮೇಣ ಕರಗಿಹೋಯಿತು. ಕುವೆಂಪು ಕನ್ನಡ ಎಂ.ಎ.ಗೆ ಬಂದು ಬಿಟ್ಟರು! ಆಗ ಒಂದು ಸಾಧಾರಣ ಘಟನೆಯಾಗಿ ಕಂಡರು ಅದು ತಮ್ಮ ಜೀವನದ ಬಹು ಮಹತ್ವದ ಪ್ರಸಂಗವಾಯಿತು ಎನ್ನುವುದನ್ನು ಮುಂದೆ ಕುವೆಂಪು ಕಂಡುಕೊಂಡರು. ಪಂಪ, ರನ್ನ, ಜನ್ನ, ನಾಗವರ್ಮ, ರಾಘವಾಂಕ, ಕುಮಾರವ್ಯಾಸ, ಲಕ್ಷ್ಮೀಶರಂಥ ಶ್ರೇಷ್ಠ ಕವಿಗಳ ಅಧ್ಯಯನ ಮಾಡದೆ, ಕನ್ನಡ ಅಧ್ಯಾಪಕನಾಗಿ ಪಾಠ ಕೇಳದೆ ಇದ್ದಿದ್ದರೆ ರಾಮಾಯಣದರ್ಶನದಂಥ ಕೃತಿಯನ್ನು ಬರೆಯಲು ಬೇಕಾಗುವ ಪದಸಂಪತ್ತಿ, ಶೈಲಿಗಳು ಅವರಿಗೆ ಖಂಡಿತವಾಗಿ ಸಿದ್ಧಿಸುತ್ತಿರಲಿಲ್ಲ. ಕೃಷ್ಣಶಾಸ್ತ್ರಿಗಳ ಬಗ್ಗೆ ತಮ್ಮ ಕೃತಜ್ಞತೆಯನ್ನು ಹೇಳುತ್ತ ಕುವೆಂಪು ಅವರೇ ಈ ಮಾತನ್ನು ದಾಖಲಿಸಿರುವುದುಂಟು.

ಪ್ರೊ|| ಬಿ. ಎಂ. ಶ್ರೀಕಂಠಯ್ಯನವರು ಆ ಕಾಲದ ಪ್ರಸಿದ್ಧ ಇಂಗ್ಲಿಷ್ ಪ್ರಾಧ್ಯಾಪಕರಲ್ಲಿ ಒಬ್ಬರಾಗಿದ್ದುದಲ್ಲದೆ ಕನ್ನಡದ ಗೌರವ ಪ್ರಾಧ್ಯಾಪಕರೂ ಆಗಿದ್ದವರು; ಕನ್ನಡಕ್ಕಾಗಿ ಅಹರ್ನಿಶಿ ದುಡಿದು 'ಕನ್ನಡದ ಕಣ್ವ' ಎಂದು ಕರೆಸಿಕೊಂಡಿದ್ದವರು. ಕುವೆಂಪುಗೂ ಗುರುಗಳಾಗಿದ್ದವರು . ಒಮ್ಮೆ ಅವರು ತುಂಬಿದ ಸಾಹಿತ್ಯಸಭೆಯೊಂದರಲ್ಲಿ ಮಾತನಾಡುತ್ತಿದ್ದಾರೆ. ಕನ್ನಡದಲ್ಲಿ ಎಂಥ ಉತ್ತಮೋತ್ತಮ ಸಾಹಿತ್ಯ ಸೃಷ್ಟಿಯಾಗುತ್ತಿದೆ ಎಂದು ಹೇಳುತ್ತ ಹಠಾತ್ತನೆ ಅವರು ಸಭೆಯಲ್ಲಿ ಕೂತಿದ್ದ ಕುವೆಂಪು ಅವರ ಕಡೆ ಎಲ್ಲರ ಗಮನ ಸೆಳೆಯುತ್ತ ಹೇಳಿದರು.

"ರೌರವ ನರಕ ಅಂತ ಒಂದು ನರಕ ಇದೆ ಎಂದು ಹೇಳುತ್ತಾರಷ್ಟೆ. ಅಂಥದೊಂದು ನರಕ ಇದೆಯೋ ಇಲ್ಲವೋ ನನಗೆ ತಿಳಿಯದು. ಅದು ಇರುವುದೇ ಆದರೆ ಅದಕ್ಕೆ ಹೋಗುವ ಕನ್ನಡಿಗರು ಬೇರೆ ಯಾರೂ ಅಲ್ಲ, ಈ ಪುಟ್ಟಪ್ಪನವರ ಕವಿತೆಗಳನ್ನು ಓದದಿರುವ ಕನ್ನಡಿಗರು!"

ಸಭೆಯಲ್ಲಿ ಭಾರೀ ಹರ್ಷೋದ್ಗಾರವೆದ್ದಿತು. ಇತರ ಸಭಿಕರ ನಡುವೆ ಕೂತಿದ್ದ ಯುವಕ ಕುವೆಂಪು ಈ ಅನಿರೀಕ್ಷಿತ ಪ್ರಶಂಸೆಯಿಂದ ನಾಚಿ ನೀರಾಗಿ ಹೋಗಿದ್ದರು!

ಕುವೆಂಪುರವರಿಗೆ ದೊರೆತಿದ್ದ ಗುರುಗಳು ಅಂಥಿಂಥವರಲ್ಲ. ಬಿ.ಎಂ.ಶ್ರೀ., ಕೃಷ್ಣಶಾಸ್ತ್ರಿ, ಟಿ.ಎಸ್.ವೆಂಕಣ್ಣಯ್ಯ-ಈ ಒಬ್ಬೊಬ್ಬರೂ ವ್ಯಕ್ತಿಗಳಾಗಿ, ವಿದ್ವಾಂಸರಾಗಿ ಬಹಳ ಎತ್ತರದಲ್ಲಿದ್ದವರು. ಟಿ. ಎಸ್. ವೆಂಕಣ್ಣಯ್ಯನವರು ವಿಶ್ವವಿದ್ಯಾನಿಲಯದ ಕನ್ನಡ ಎಂ.ಎ. ವಿಭಾಗದಲ್ಲಿ ಪ್ರೊಫೆಸರ್ ಆಗಿದ್ದರು. ಅವರು ಆಗಾಗ ರಾಮಕೃಷ್ಣಾಶ್ರಮಕ್ಕೆ ಹೋಗಿಬರುತ್ತಿದ್ದುದುಂಟು. ಹಾಗೆ ಹೋದಾಗಲೆಲ್ಲ ಆಶ್ರಮದಲ್ಲೇ ಇದ್ದ ಕುವೆಂಪು ಕೊಠಡಿಗೆ ಹೋಗದೆ ಅವರ ಯಾತ್ರೆ ಪೂರ್ಣವಾಗುತ್ತಿರಲಿಲ್ಲ. ಕುವೆಂಪುವಿಗೆ ತಮ್ಮ ಗುರುಗಳಲ್ಲಿ ತುಂಬ ವಿನಯ, ಗೌರವ. ಇಷ್ಟು ದೊಡ್ಡವರು, ಹೀಗೆ ಸಾಮಾನ್ಯರೆಂಬಂತೆ ತಮ್ಮ ರೂಮಿಗೆ ಬಂದು ಬಿಡುತ್ತಾರಲ್ಲ ಅಂತ ಎಲ್ಲಿಲ್ಲದ ಸಂಕೋಚ, ಮುಜುಗರ. ಕುವೆಂಪು ರೂಮಿಗೆ ಹೋದ ವೆಂಕಣ್ಣಯ್ಯನವರು ಅವರು ಬರೆದಿದ್ದ ಹೊಸ ಕವನಗಳನ್ನು ಒತ್ತಾಯಹಾಕಿ ತೆಗೆಸಿ, ಓದಿಸಿ ಕೇಳಿ ಅವುಗಳನ್ನು ಅಡಿಯಿಂದ ಮುಡಿಯವರೆಗೆ ಪ್ರಶಂಸಿಸುತ್ತಿದ್ದರು. ಮುಂದೆ ತೀರಿಕೊಳ್ಳುವ ಮುಂಚೆ ಒಂಟಿಕೊಪ್ಪಲಿನಲ್ಲಿದ್ದ ಕುವೆಂಪು ಮನೆಗೂ ಒಮ್ಮೆ ಹೋಗಿದ್ದ ವೆಂಕಣ್ಣಯ್ಯನವರು ಬೆಳಗಿನಿಂದ ಸಂಜೆವರೆಗೆ ತಮ್ಮ ಕವನಗಳನ್ನು ಓದಿಸಿ, ಪಟ್ಟ ಸಂಭ್ರಮವನ್ನು ಕುವೆಂಪು ಅವರೇ ಒಂದೆಡೆ ಪ್ರಸ್ತಾಪಿಸಿದ್ದಾರೆ. ಕವನವಾಚನದ ಸಭೆಗಳಲ್ಲಿಯೂ ಅಷ್ಟೆ ವೆಂಕಣ್ಣಯ್ಯನವರಿದ್ದರೆ ಸಾಕು ಕುವೆಂಪು ಭಾವಪರವಶರಾಗಿ ಬಿಡುತ್ತಿದ್ದರು. "ನನಗಂತೂ ಅವರೊಬ್ಬರ ಸಾನ್ನಿಧ್ಯವೆ ಉಳಿದ ಸಾವಿರಾರು ಮಂದಿಯ

ಇರುವಿಕೆಯನ್ನು ನುಂಗಿ ನಿಂತಂತಾಗುತ್ತಿತ್ತು; ಅವರೊಬ್ಬರಿಗಾಗಿಯೇ ಗಂಟೆಗಟ್ಟಲೆ ಬೇಕಾದರೂ ಕವನ ವಾಚನ ಮಾಡುವ ಹುಮ್ಮಸ್ಸು ಉಂಟಾಗುತ್ತಿತ್ತು. ಅವರು ಅಂಥ ಸಹೃದಯವರೇಣ್ಯರಾಗಿದ್ದರು" ಎಂದು ಕುವೆಂಪುವೇ ಹೇಳಿದ್ದಿದೆ. ಪುಟ್ಟಪ್ಪನವರ 'ಮಲೆನಾಡಿನ ಚಿತ್ರಗಳು' ಎಂಬ ಸುಂದರ ಪ್ರಬಂಧ ಸಂಕಲನ ರಚನೆಯಾಗಲು ವೆಂಕಣ್ಣಯ್ಯನವರೇ ಮುಖ್ಯ ಪ್ರೇರಣೆ.

ಕುವೆಂಪು ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದ ದಿನಗಳು. ಒಮ್ಮೆ ಅವರು ಶ್ರೀರಂಗಪಟ್ಟಣದಲ್ಲಿ ಒಂದು ಉಪನ್ಯಾಸ ನೀಡಿದರು. ನಮ್ಮ ಯುವಕರು ನಿರಂಕುಶಮತಿಗಳಾಗಬೇಕು ಎನ್ನುವುದು ಅವರ ಭಾಷಣದ ವಸ್ತು. ಪರಂಪರಾಗತವಾಗಿ ನಮಗೆ ಬಂದಿರುವ ವಿಚಾರಸಂಪತ್ತನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿಯೇ ಸ್ವೀಕರಿಸಬೇಕು. ಕೇವಲ ಮೂಢನಂಬಿಕೆಯಷ್ಟರಿಂದಲೇ ಯಾವುದಕ್ಕೂ ಜೋತುಬೀಳಬಾರದು. ಎನ್ನುವುದು ಅವರ ಉಪನ್ಯಾಸದ ಒಟ್ಟು ಸಾರಾಂಶ. ಕೆಲವರು ಸಂಪ್ರದಾಯವಾದಿಗಳು ಈ ಭಾಷಣದಿಂದ ಕೆರಳಿದರು. ಸಂಪ್ರದಾಯವನ್ನು ಟೀಕಿಸುತ್ತಿರುವ ಈ ಅಧ್ಯಾಪಕನನ್ನು ವಿಶ್ವವಿದ್ಯಾನಿಲಯ ಶಿಕ್ಷಿಸಬೇಕು ಎಂದು ಅವರು ವಿಶ್ವವಿದ್ಯಾನಿಲಯಕ್ಕೆ ದೂರು ಸಲ್ಲಿಸಿ ಒತ್ತಾಯ ಹೂಡಿದರು. ವಿಶ್ವವಿದ್ಯಾನಿಲಯ ಸುಮ್ಮನೆ ಕೂರುವಂತಿರಲಿಲ್ಲ. ಆಗ ಕನ್ನಡ ಪ್ರಾಧ್ಯಾಪಕರಾಗಿದ್ದ ವೆಂಕಣ್ಣಯ್ಯನವರನ್ನು ಅದು ಈ ದೂರಿನ ಬಗ್ಗೆ ತನಿಖೆ ನಡೆಸಲು ನೇಮಿಸಿತು. ಅವರು ಆ ಭಾಷಣದ ಪ್ರತಿ ತರಿಸಿಕೊಂಡು ಓದಿ ವಿಶ್ವವಿದ್ಯಾಲಯಕ್ಕೆ ಬರೆದರು. "ನಾನು ಪುಟ್ಟಪ್ಪನವರ ಭಾಷಣವನ್ನು ಅಮೂಲಾಗ್ರವಾಗಿ ಓದಿದೆ. ನನ್ನ ಮಗನಿಗೆ ನಾನು ಬುದ್ಧಿ ಹೇಳಬೇಕಾದರೆ ಇದಕ್ಕಿಂತ ಉತ್ತಮವಾಗಿ ಮತ್ತು ಸಮರ್ಪಕವಾಗಿ ಏನನ್ನೂ ಹೇಳಲಾರೆ."

ವಿಶೇಷ ಪ್ರತಿಭೆ, ನಿರಂತರ ಸಾಧನೆ, ಶ್ರೇಷ್ಠ ಗುರುವರ್ಯರ ಶ್ರೀರಕ್ಷೆ ಇವುಗಳ ಬಲದಿಂದ ಬೆಳೆದ ಕುವೆಂಪು ಕನ್ನಡದ ಸರ್ವಕಾಲದ ಶ್ರೇಷ್ಠ ಸಾಹಿತಿಗಳಲ್ಲಿ ಒಬ್ಬರಾಗಿದ್ದಾರೆ. ತಮ್ಮ ಕಾಲದಲ್ಲಿ ಪ್ರಚಲಿತವಾಗಿದ್ದ ಕನ್ನಡದ ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿಯೂ ಅವರು ಕೃಷಿ ಮಾಡಿದರು. ಕೆಲವು ಪ್ರಕಾರಗಳಲ್ಲಿ ಉತ್ಕೃಷ್ಟವಾದ ಬೆಳೆ ತೆಗೆದರು. ಅವರ ಲಕ್ಷ್ಯ ವಿಶೇಷವಾಗಿ ಹರಿದದ್ದು ಕಾವ್ಯಕ್ಷೇತ್ರದಲ್ಲಿ. ನವಿಲು, ಕೊಳಲು, ಪಾಂಚಜನ್ಯ, ಕಲಾಸುಂದರಿ, ಅಗ್ನಿಹಂಸ, ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ, ಪಕ್ಷಿಕಾಶಿ ಮೊದಲಾದ ಅನೇಕ ಭಾವಗೀತ ಸಂಗ್ರಹಗಳನ್ನೇ ಅಲ್ಲದೆ ಚಿತ್ರಾಂಗದಾದಂಥ ಖಂಡಕಾವ್ಯವನ್ನು ಮತ್ತು ಶ್ರೀ ರಾಮಾಯಣದರ್ಶನದಂಥ ಮಹಾಕಾವ್ಯವನ್ನು ಅವರು ರಚಿಸಿದ್ದಾರೆ. ಬಾ ಫಾಲ್ಗುಣ ರವಿದರ್ಶನಕೆ, ದೇವರು ರುಜು ಮಾಡಿದನು, ಗಗನಗುರು, ಪಟ್ಟಣದಲ್ಲಿ ಹೊರಸುಹಕ್ಕಿ, ಮುಂಗಾರು,

ಹೋಗುವೆನು ನಾ, ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ, ಒಂದು ಸಣ್ಣ ಹಕ್ಕಿಗೆ – ಮೊದಲಾದುವು ಅವರ ತುಂಬ ಸುಂದರವಾದ ಭಾವಗೀತೆಗಳು.

ಕುವೆಂಪು ಕಾವ್ಯದ ಸೌಂದರ್ಯ 'ಸತ್ಯ' 'ಶಿವ'ಗಳ ಕಲ್ಪನೆಯನ್ನು ಶ್ರುತಿಯಾಗಿಸಿ ಕೊಂಡು ಸೃಷ್ಟಿಯಾದದ್ದು.

ಆನಂದಮಯ ಈ ಜಗಹೃದಯಂ
ಏತಕೆ ಭಯ ಮಾಣೊ
ಸೂರ್ಯೋದಯ ಚಂದ್ರೋದಯ
ದೇವರ ದಯ ಕಾಣೊ
ರವಿವದನವೆ ಶಿವಸದನವೊ
ಬರಿ ಕಣ್ಣದು ಮಣ್ಣೊ
ಶಿವನಿಲ್ಲದೆ ಸೌಂದರ್ಯವೆ
ಶವಮುಖದಾ ಕಣ್ಣೋ!

ಎಂಬ ಶ್ರದ್ಧೆಯಿಂದ ಬರೆದ ಕವಿ ಅವರು. ದ್ರಷ್ಟಾರ ಮಾತ್ರವೇ ಸೃಷ್ಟಿಸುವ ಕವಿಯಾಗಬಲ್ಲ ಎಂಬ ನಂಬಿಕೆಯಲ್ಲಿ ಕುವೆಂಪು ತಮ್ಮ ಬದುಕು, ಕಾವ್ಯ ಎರಡನ್ನೂ ರೂಪಿಸಿಕೊಂಡವರು. ನೆನೆದರೂ ಸಾಕು ನಮ್ಮ ಭಾವನೆ ಕಲ್ಪನೆಗಳೆಲ್ಲ ತತ್ತರಿಸಿ ಹೋಗುವಂಥ ಅನಂತವಿಶ್ವದ ಈ ಸಂಕೀರ್ಣಬಂಧ ಮಹಾಪ್ರಜ್ಞೆಯೊಂದರ ಸೋದ್ದಿಶ್ಯಸೃಷ್ಟಿ ಎನ್ನುವುದು ಅವರ ದೃಢಭಾವನೆ. 'ದೇವರು ರುಜು ಮಾಡಿದನು' ಎಂಬ ಕವಿತೆ ಕುವೆಂಪುಕಾವ್ಯದ ಬೆನ್ನಿಗಿರುವ ಒಟ್ಟು ನಿಲುವನ್ನು ಧ್ವನಿಸುವ ಒಂದು ಮಹತ್ವದ ಕವಿತೆ. ಆ ಕವಿತೆಯ ವಸ್ತು ಹೀಗಿದೆ.

ಭವ್ಯವಾದ ದಟ್ಟ ವನವೊಂದರ ನಡುವೆ, ಜುಳುಜುಳು ಹರಿಯುವ ಸುಂದರ ತುಂಗೆಯ ದಡದ ಮೇಲೆ ಕವಿ ನಿಂತಿದ್ದಾರೆ. ಎತ್ತರದ ಸಹ್ಯಾದ್ರಿ ಪರ್ವತ ಶ್ರೇಣಿ ಕಣ್ಣು ಸೆಳೆಯುತ್ತಿದೆ. ಪಕ್ಷಿಗಳ ಮನೋಹರ ಧ್ವನಿ ಕಿವಿತುಂಬುತ್ತಿದೆ. ಇಡೀ ಸೃಷ್ಟಿಯ ಮೇಲೆ ಅದನ್ನು ಹರಸಿದಂತೆ ಹೂಬಿಸಿಲು ಬಿದ್ದಿದೆ. ಕವಿ ಈ ಭವ್ಯದೃಶ್ಯದಿಂದ ರೋಮಾಂಚಿತರಾಗಿದ್ದಾರೆ. ಇಂಥ ಅದ್ಭುತ ದೃಶ್ಯವನ್ನು ನಿರ್ಮಿಸಿದ ಶಕ್ತಿಯಾವುದು ಎಂಬ ಬೆರಗಿನಲ್ಲಿ ನಿಂತಿರುವ ಕವಿಯ ಎದುರಿಗೆ ಆಕಾಶದ ನೀಲಿಹಾಳೆಯಲ್ಲಿ ಬಿಳಿಹಕ್ಕಿಗಳ ಹಿಂಡೊಂದು ಆಕರ್ಷಕವಾದ ವಿನ್ಯಾಸದಲ್ಲಿ ತೇಲಿಹೋಗುತ್ತಿದೆ. ಭಾವಪರವಶರಾದ ಕವಿಯ ಕಣ್ಣಿಗೆ ಅದು ಭಗವತ್ ಶಕ್ತಿ ತನ್ನ ವಿಶ್ವಕವಿತೆಯ ಅಡಿಗೆ ಹಾಕಿದ ರುಜುವಿನಂತೆ ಭಾಸವಾಗುತ್ತದೆ; ಈ ವಿಶ್ವವನ್ನು ರಚಿಸಿದವನು ನಾನು, ಇದು ನನ್ನದೇ ಎಂದು ಭಗವಂತ ಸಾರುತ್ತಿರುವಂತೆ ತೋರುತ್ತದೆ. ನಿರ್ಮಲ ಸೌಂದರ್ಯವೇ ಶಿವ ಎನ್ನುವುದನ್ನೂ ಮತ್ತು ಈ ಅನುಪಮ ಸೃಷ್ಟಿಯ ಹಿಂದೆ ಭಗವಂತನಿದ್ದಾನೆ ಎನ್ನುವುದನ್ನೂ ಈ ಕವಿತೆ ಮನೋಹರವಾಗಿ ಧ್ವನಿಸುತ್ತದೆ.

'ಚಿತ್ರಾಂಗದಾ' ಕೃತಿ ಮುಂದೆ ಕುವೆಂಪು ಪ್ರಕಟಿಸಿದ ಮಹಾಕಾವ್ಯ ರಚನೆಗೆ ಅವರು ನಡೆಸಿದ ಪೂರ್ವಸಿದ್ಧತೆಯಂತಿದೆ. ಈ ಶತಮಾನದಲ್ಲಿ ಮಹಾಕಾವ್ಯ ಸಂಪ್ರದಾಯದಲ್ಲಿ ಐದಾರು ಕಾವ್ಯಗಳು ರಚಿತವಾಗಿದ್ದರೂ ರಾಮಾಯಣ ದರ್ಶನ ಅವೆಲ್ಲಕ್ಕೂ ಅಗ್ರಸ್ಥಾನದಲ್ಲಿದೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ಮಹಾಕಾವ್ಯವೊಂದನ್ನು ರಚಿಸುವ ಮಹತ್ವಾಕಾಂಕ್ಷೆ ಪುಟ್ಟಪ್ಪನವರಿಗೆ ಮೊದಲಿನಿಂದ ಇದ್ದು, ಅದಕ್ಕಾಗಿ ಅವರು ವಿಶೇಷ ಸಾಧನೆ ಮಾಡಿದ್ದರೆನ್ನುವುದನ್ನು ಅಲ್ಲಗಳೆಯುವಂತಿಲ್ಲ. ಈ ವಿಷಯದಲ್ಲಿ ಅವರು ಇಂಗ್ಲಿಷಿನ ಮಹಾಕವಿ ಮಿಲ್ಟನ್ನನನ್ನು ಹೋಲುತ್ತಾರೆ. ಕುವೆಂಪು ಅವರ ಮಹಾಕಾವ್ಯ ಭಾರತೀಯ ಮಹಾಕಾವ್ಯ ಸಂಪ್ರದಾಯವನ್ನಷ್ಟೇ ತದ್ವತ್ತಾಗಿ ಅನುಸರಿಸಿದ್ದಲ್ಲ. ಪಾಶ್ಚಾತ್ಯ ಮಹಾಕಾವ್ಯಗಳ ಗಾಢ ಅಧ್ಯಯನದ ಫಲವಾಗಿ ಕುವೆಂಪು ಕೆಲವು ಹೊಸ ಅಂಶಗಳನ್ನು ಸೃಜನಾತ್ಮಕವಾಗಿ ಅದರಲ್ಲಿ ಅಳವಡಿಸಿಕೊಂಡಿದ್ದಾರೆ. ಇದರ ಫಲವಾಗಿ 'ರಾಮಾಯಣ ದರ್ಶನ' ಭಾರತೀಯ ಪಾಶ್ಚಾತ್ಯ – ಎರಡೂ ಸಂಪ್ರದಾಯಗಳ ಒಂದು ಸುವರ್ಣ ಮಾಧ್ಯಮವಾಗಿದೆ ಎನ್ನಬಹುದು. ರಾಮಾಯಣ ದರ್ಶನ ಕೇವಲ ವಾಲ್ಮೀಕಿ ರಾಮಾಯಣದ ನೆರಳಾಗಿರದೆ ಹೊಸ ಪಾತ್ರ, ಪ್ರಸಂಗ, ಸಂವೇದನೆ, ವಿಚಾರಗಳನ್ನು ಗರ್ಭೀಕರಿಸಿಕೊಂಡು ಆಧುನಿಕ ಲೋಕದರ್ಶನವೊಂದರ ಮಹಾಪ್ರತಿಮೆಯಾಗಿದೆ. ಪ್ರಜಾಪ್ರಭುತ್ವದ ಕೇಂದ್ರಬಿಂದುವಾದ ಸಾಮಾನ್ಯನನ್ನು ಮೊದಲ ಬಾರಿಗೆ ವಿಶೇಷವಾಗಿ ಗಣನೆಗೆ ತೆಗೆದುಕೊಳ್ಳುವ ಮಹಾಕಾವ್ಯ ಇದೊಂದೇ. ಆದರೂ ಅದು ಸಾಮಾನ್ಯನಿಗೆ ಎಂದೂ ಎಟುಕದ ಸಂಸ್ಕೃತ ಭೂಯಿಷ್ಠ ಶೈಲಿಯಲ್ಲಿ ರಚಿತವಾಗಿರುವುದು ಮಾತ್ರ ಒಂದು ಸೋಜಿಗವೇ.

ಅನೇಕ ಆಧುನಿಕ, ವಿಮರ್ಶಕರ ಪ್ರಕಾರ ಕುವೆಂಪು ಅವರ ಅಪೂರ್ವ ಕೊಡುಗೆಯೆಂದರೆ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಎಂಬ ಅವರ ಎರಡು ಭವ್ಯಕಾದಂಬರಿಗಳು. ಕುವೆಂಪು ಅವರ ನಿಜವಾದ ಮಹಾಕಾವ್ಯವೆಂದರೆ ಇವೇ ಎನ್ನಬಹುದು. ಮಲೆನಾಡಿನ ಪ್ರಾದೇಶಿಕ ಕಸುವನ್ನು ಹೀರಿ ಬೆಳೆದ ಈ ಎರಡು ಮಹಾಕೃತಿಗಳು ವಿಶ್ವದ ಶ್ರೇಷ್ಠ ಕಾದಂಬರಿಗಳ ಸಾಲಿನಲ್ಲಿ ನಿಲ್ಲಲು ಅರ್ಹವಾಗಿವೆ. ಮನುಷ್ಯ ಸ್ವಭಾವದ ಗಾಢಪರಿಚಯ, ಅವನನ್ನು ಆವರಿಸಿ ನಿಂತ ಪ್ರಕೃತಿಯ ಅದಮ್ಯ ಚೇತನದ ಅರಿವು. ಮಾನವನ ಶಕ್ತಿ, ದೌರ್ಬಲ್ಯ, ಪಶುತ್ವ, ದೈವಿಕತೆಗಳ ಬೆರಗುಗೊಳಿಸುವ ಗ್ರಹಿಕೆ ಈ ಕೃತಿಗಳ ಬುಡಕ್ಕೆ ಇದೆ. ಕುವೆಂಪು ಅವರ ಅಸಾಧಾರಣ ಸೃಷ್ಟಿಶಕ್ತಿ ಪ್ರಕಟವಾಗಿರುವುದು ಇವುಗಳ ಮೂಲಕವೇ. ಕುವೆಂಪು ತಮ್ಮ ಕಾವ್ಯಕ್ಕೇ ಮೊದಲ ಮನ್ನಣೆ ನೀಡುವಂತೆ ಕಾಣುತ್ತದೆ. ಆದರೆ ಅನೇಕ ವಿಮರ್ಶಕರ ಮೊದಲ ಮನ್ನಣೆಗೆ ಪಾತ್ರವಾಗಿರುವುದು ಅವರ ಕಾವ್ಯವಲ್ಲ, ಕಾದಂಬರಿಗಳು.

ಕುವೆಂಪು ಹಲವು ನಾಟಕಗಳನ್ನೂ ಬರೆದಿದ್ದಾರೆ. ಅವುಗಳಲ್ಲಿ 'ಶ್ಮಶಾನ ಕುರುಕ್ಷೇತ್ರ.' 'ಶೂದ್ರತಪಸ್ವಿ' ಹೆಚ್ಚು ಗಮನ ಸೆಳೆಯುವಂಥವು. ಜಲಗಾರ ಮತ್ತು ಶೂದ್ರ ತಪಸ್ವಿಗಳ ಬೆನ್ನಿಗಿರುವ ಪ್ರತಿಭಟನೆಯ ನಿಲುವನ್ನು ನೋಡಿದಾಗ ಕನ್ನಡದ ಮೊದಲ ಬಂಡಾಯ ಸಾಹಿತಿ ಕುವೆಂಪು ಅವರೇ ಎನಿಸುತ್ತದೆ. ಇವು ಹೊರಬಂದಾಗ ಸಂಪ್ರದಾಯವಂತರ ವಲಯದಲ್ಲಿ ಅಸಮಾಧಾನದ ಬಿರುಗಾಳಿ ಬೀಸಿದ್ದೂ ಉಂಟು. ಸಂಪ್ರದಾಯವಂತರನ್ನು ಪ್ರತಿನಿಧಿಸುವ ಪಾತ್ರಗಳ ಮೇಲೆ ಕುವೆಂಪು ಅಗತ್ಯಕ್ಕಿಂತ ಹೆಚ್ಚು ಪ್ರಹಾರ ಮಾಡಿದ್ದಾರೆ. ಎಂದು ಕೆಲವರು ಹಿರಿಯ ಸಾಹಿತಿಗಳೂ ಭಾವಿಸಿದ್ದುಂಟು. ಆದರೆ ಕೃತಿಯಲ್ಲಿ ಕುವೆಂಪು ಸೃಷ್ಟಿಸುವ ವಾತಾವರಣದ ನಡುವೆ ಅವರ ಪಾತ್ರನಿರ್ವಹಣೆ ಔಚಿತ್ಯಕ್ಕೆ ಹೊರತಾಗಿದೆ ಎನ್ನುವಂತಿಲ್ಲ. ಕುವೆಂಪು ತಮ್ಮ ಎಲ್ಲ ಬರೆಹಗಳಲ್ಲಿಯೂ ಅವೈಚಾರಿಕ ವೈಷಮ್ಯಗಳನ್ನು ವಿರೋಧಿಸಿಕೊಂಡು ಬಂದವರೇ. ಕಾರಂತರೋ ಶ್ರೀರಂಗರೋ ಇದೇ ಬಗೆಯ ವೈಚಾರಿಕತೆಯನ್ನು ಪ್ರಕಟಿಸಿದಾಗ ಅಸಮಾಧಾನ ಪಡದವರು ಕುವೆಂಪು ಅವರಲ್ಲಿ ಅಂಥ ನಿಲುವು ಕಂಡಾಗ ಅಸಮಾಧಾನಪಡುವುದು ಸಮರ್ಪಕವೆನಿಸುವುದಿಲ್ಲ.

ಉತ್ತಮ ಕೃತಿಗಳನ್ನು ಕುರಿತ ಅಭಿರುಚಿನಿರ್ಮಾಣ ಮತ್ತು ಪರಂಪರೆಯ ಬಗ್ಗೆ ಅಭಿಮಾನ ಕುವೆಂಪು ಕಾಲದ ಸಾಹಿತಿಗಳು ಸಾಧಿಸಬೇಕಾದ ಒಂದು ಸಾಹಿತ್ಯಕ ಮೌಲ್ಯವಾಗಿತ್ತು. ಹಾಗೆಂದೇ ಕನ್ನಡ ಕಾವ್ಯಪರಂಪರೆಯಲ್ಲಿ ಬಂದ ಅನೇಕ ಶ್ರೇಷ್ಠ ಕೃತಿಗಳನ್ನು ಕುರಿತು. ರುಚಿಸೃಷ್ಟಿ ಮಾಡುವ ರಸಾತ್ಮಕ ವಿಮರ್ಶೆಗಳನ್ನು ಕುವೆಂಪು ಬರೆದರು. ಪಂಪ. ರನ್ನ. ನಾಗವರ್ಮ. ಜನ್ನ. ಕುಮಾರವ್ಯಾಸ. ಲಕ್ಷ್ಮೀಶ – ಇಂಥ ಶ್ರೇಷ್ಠಕವಿಗಳ ಕೃತಿಗಳ ಬಗ್ಗೆ ಅವರು ಬರೆದ ವಿಮರ್ಶೆ ಓದುಗನಲ್ಲಿ ಮೆಚ್ಚಿಗೆ ಕುತೂಹಲಗಳನ್ನು ಹುಟ್ಟಿಸಿ ಆ ಕೃತಿಗಳನ್ನು ಓದಬೇಕೆಂಬ ಕಾತರತೆಯನ್ನು ಉಂಟುಮಾಡುವಂಥವು. 'ಮಹಾಶ್ವೇತೆಯ ತಪಸ್ಸು' ಎಂಬ ಅವರ ಲೇಖನ ಆ ಕಾಲದ ರಸವಿಮರ್ಶೆಗೆ ಮಾದರಿ ಎನ್ನಬಹುದಾದ ಬರೆಹ.

ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ಕುವೆಂಪು ಕೈಯಾಡಿಸದ ಸಾಹಿತ್ಯ ಪ್ರಕಾರವಿಲ್ಲ. ಮೇಲೆ ಹೇಳಿದ ಪ್ರಕಾರಗಳಲ್ಲೇ ಅಲ್ಲದೆ ಅವರು ಸಣ್ಣಕಥೆ. ಪ್ರಬಂಧ. ಕಾವ್ಯಮೀಮಾಂಸೆ. ಜೀವನಚರಿತ್ರೆ. ಮಕ್ಕಳ ಸಾಹಿತ್ಯಗಳಲ್ಲೂ ಗಣ್ಯವಾದ ಬರೆಹ ಹೊರತಂದಿದ್ದಾರೆ. ಮಾತ್ರವಲ್ಲ (ತಮ್ಮ ಸಾಹಿತ್ಯ ಸೃಷ್ಟಿಯ ಮೇಲೆ ಬೆಳಕು ಚೆಲ್ಲುವಂಥ ಕೆಲವು ಪ್ರಸಂಗಗಳೂ ಇರುವ) ಘಟನಾಭರಿತವಾದ ಆತ್ಮಕಥನದ ಒಂದು ಮಹಾಸಂಪುಟವನ್ನೂ (ನೆನಪಿನ ದೋಣಿ) ಪ್ರಕಟಿಸಿದ್ದಾರೆ.

ಇತರ ಲೇಖಕರಿಂದ ಕುವೆಂಪು ಅವರನ್ನು ಸ್ಪಷ್ಟವಾಗಿ ಪ್ರತ್ಯೇಕಿಸುವ ಒಂದು ವಿಶಿಷ್ಟ ಲಕ್ಷಣವೆಂದರೆ ಅವರ ಎರಡರಿಯದ ಕನ್ನಡಪ್ರೇಮ. ಅದನ್ನು ಅವರು ಸಾಂಕ್ರಾಮಿಕವಾಗಿ ನಾಡಿನ ಉದ್ದಗಲಕ್ಕೆ ಹಬ್ಬಿಸಿದರು. ಸುಮಾರು ಅರವತ್ತು ವರ್ಷಗಳಷ್ಟು ಹಿಂದೆಯೇ, ಇನ್ನೂ ಯುವಕರಾಗಿದ್ದಾಗಲೇ ಕುವೆಂಪು–

ಕನ್ನಡವೆನೆ ಕುಣಿದಾಡುವುದೆನ್ನೆದೆ
ಕನ್ನಡವೆನೆ ಕಿವಿ ನಿಮಿರುವುದು
ಕಾಮನ ಬಿಲ್ಲನು ಕಾಣುವ ಕವಿವೊಲು
ತೆಕ್ಕನೆ ಮನ ಮೈ ಮರೆಯುವುದು
ಕನ್ನಡ ಕನ್ನಡ ಹಾ ಸವಿಗನ್ನಡ
ಬಾಳುವುದೇತಕೆ ನುಡಿಯೆಲೆ ಜೀವ
ಸಿರಿಗನ್ನಡದಲಿ ಕವಿತೆಯ ಮಾಡೆ
ಸಿರಿಗನ್ನಡದೇಳಿಗೆಯನು ನೋಡೆ

ಎಂದು ಬರೆದರು. ಜೀವನದ ಪರಮ ಧ್ಯೇಯವೆಂದರೆ ಕನ್ನಡದ ಏಳಿಗೆಯನ್ನು ನೋಡುವುದೇ ಎಂದು ಭಾವವಶರಾಗಿ ಹಾಡಿದವರು ಅವರೊಬ್ಬರೇ. ಈಗ ಕನ್ನಡ ಪ್ರೇಮ ತೋರಿಸುವವರು ಕಾಸಿಗೊಬ್ಬರು ಕೊಸರಿಗೊಬ್ಬರು ಸಿಗುತ್ತಾರೆ. ಅದರಿಂದ ಕುರ್ಚಿ, ಕಾಸು, ಪ್ರಸಿದ್ಧಿ ಎಲ್ಲ ಸಿಗುವ ಸಂಭವವಿದೆ. ಕುವೆಂಪು ಈ ಪದ್ಯ ಬರೆದಾಗ ಅದಕ್ಕಾಗಿ ಅವರನ್ನು ಹಾಸ್ಯಮಾಡಬಹುದಾದ ವಾತಾವರಣ ಮಾತ್ರ ಇತ್ತು. ಆದರೆ ಪುಟ್ಟಪ್ಪನವರು ಅದಕ್ಕೆ ಲಕ್ಷ್ಯಕೊಟ್ಟವರೇ ಅಲ್ಲ. ಮುಂದೆ ಉಪಕುಲಪತಿಯಾದಾಗ ಅವರು ಪದವಿ ತರಗತಿಗಳಲ್ಲಿ ಕನ್ನಡ ಮಾಧ್ಯಮ ಜಾರಿಗೆ ತಂದರು. ದ್ವಿತೀಯಭಾಷೆಯಾಗಿ ಕನ್ನಡದ ಬೋಧನೆಯನ್ನು ವಾರಕ್ಕೆ ಎರಡರಿಂದ ನಾಲ್ಕು ಗಂಟೆಗಳಿಗೆ ಹೆಚ್ಚಿಸಿದರು. ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಐದಾರು ಜನ ಹೆಣ್ಣುಮಕ್ಕಳು ಪದವಿ ತರಗತಿಗೆ ಕನ್ನಡ ಮೀಡಿಯಂ ಆರಿಸಿಕೊಂಡಾಗ ಅವರಿಗಾದ ಸಂತೋಷ ಅಷ್ಟಿಷ್ಟಲ್ಲ. ನೋಡಲು ಸಹ ಯಾರಿಗೂ ಸುಲಭವಾಗಿ ಸಿಗದೆ ಇದ್ದ ಕುವೆಂಪು ಆ ವಿದ್ಯಾರ್ಥಿನಿಯರ ಜೊತೆ ಕೂತು ಟೀ ತೆಗೆದುಕೊಳ್ಳಲು ಒಪ್ಪಿದರು. ವಿದ್ಯಾಕ್ಷೇತ್ರದಲ್ಲಿ ಅವರು ಮಾಡಿದ ಹಿರಿಯ ಸಾಧನೆಗೆ ಮಾನಸಗಂಗೋತ್ರಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗಗಳೇ ಸಾಕ್ಷಿ.

ಕುವೆಂಪು ಕಣ್ಮರೆಯಾಗಿದ್ದಾರೆ ನಿಜ. ಆದರೆ ಇನ್ನೊಂದು ರೀತಿಯಲ್ಲಿ ಅವರು ಸದಾ ನಮ್ಮೆದುರಿಗೇ ಇದ್ದಾರೆ. ಕನ್ನಡ ಇರುವವರೆಗೆ ಅವರ ಹೆಸರು ಅಜರಾಮರವಾಗಿರುತ್ತದೆ; ಕನ್ನಡವೇ ಆಗಿರುತ್ತದೆ.

●

ಶ್ರೀ ಕುವೆಂಪು ಅವರಿಗೆ

ನಿಶ್ಶಬ್ದದಲಿ ನಿಂತು ನೆನೆಯುತ್ತೇನೆ
ನಿಮ್ಮಿಂದ ನಾ ಪಡೆದ ಹೊಸ ಹುಟ್ಟುಗಳ, ಗುಟ್ಟುಗಳ.

ನೀವು ಕಲಿಸಿದಿರಿ ನನಗೆ ತಲೆ ಎತ್ತಿ ನಿಲ್ಲುವುದನ್ನು,
ಕಿರುಕುಳಗಳಿಗೆ ಜಗ್ಗದೆ ನಿರ್ಭಯವಾಗಿ ನಡೆವುದನ್ನು,
ಸದ್ದಿರದೆ ಬದುಕುವುದನ್ನು.

ಎಷ್ಟೊಂದು ಕೀಲಿಕೈಗಳನು ದಾನಮಾಡಿದ್ದೀರಿ
ವಾತ್ಸಲ್ಯದಿಂದ; ನಾನರಿಯದನೇಕ
ಬಾಗಿಲುಗಳನು ತೆರೆದಿದ್ದೀರಿ ನನ್ನೊಳಗೆ;
ಕಟ್ಟಿ ಹರಸಿದ್ದೀರಿ ಕನ್ನಡದ ಕಂಕಣವನು ಕೈಗೆ.

ಸದ್ದುಗದ್ದಲದ ತುತ್ತೂರಿ ದನಿಗಳಾಚೆಗೆ ನಿಂತು
ನಿಶ್ಶಬ್ದದಲಿ ನೆನೆಯುತ್ತೇನೆ
ಗೌರವದಿಂದ.

ನಕ್ಷತ್ರ ಖಚಿತ ನಭವಾಗಿ ತಬ್ಬಿಕೊಂಡಿದ್ದೀರಿ
ನನ್ನ ಸುತ್ತ
ಪಟ ಬಿಚ್ಚಿ ದೋಣಿಯನ್ನೇರಿ ಕುಳಿತಿದ್ದೇನೆ
ನೀವಿತ್ತ ಹೊಸಹುಟ್ಟುಗಳ ಹಾಕುತ್ತ.

—ಜಿ. ಎಸ್. ಶಿವರುದ್ರಪ್ಪ

ಯದುಗಿರಿಯ ವೀಣೆ – ಪು. ತಿ. ನ.

ಆ ದಿನ ಊಟಕ್ಕೆಂದು ಬಂದಿದ್ದವರು ನಾಡಿನಲ್ಲೇ ದೊಡ್ಡವರು. ಒಬ್ಬರು ಶ್ರೇಷ್ಠ ವಿದ್ವಾಂಸರು ಮತ್ತು ನನ್ನ ಗುರುಗಳು; ಮತ್ತೊಬ್ಬರು ಹಿರಿಯ ಕವಿ. ನಮ್ಮದು ಇನ್ನೂ ಹೊಸ ಸಂಸಾರ. ಹೆಚ್ಚು ಅನುಭವವಿಲ್ಲದ ತನ್ನ ಅಡಿಗೆ ಹಿರಿಯರಿಗೆ ಹಿಡಿಸೀತೋ ಇಲ್ಲವೋ ಅಂತ ನನ್ನ ಹೆಂಡತಿಗೆ ಆತಂಕ. ಇದರ ಮಧ್ಯೆ ಹನ್ನೆರಡು ಗಂಟೆಗೆ ಬನ್ನಿ ಎಂದುದನ್ನು ಮರೆತರೋ, ಶಿಷ್ಯನ ಮೇಲಿನ ಅಭಿಮಾನವೋ ಹತ್ತು ಗಂಟೆಗೇ ಬಂದುಬಿಟ್ಟಿದ್ದಾರೆ! ಅಂಥ ಹಿರಿಯರು ಅಷ್ಟು ಸರಳವಾಗಿ ಬಂದರಲ್ಲ ಅಂತ ಸಂತೋಷ. ಅಡಿಗೆ ಇನ್ನೂ ಆಗಿಲ್ಲವೆನ್ನುವ ಆತಂಕ.

ಬೇಗ ಅಡಿಗೆ ಮುಗಿಸಲು ಹೇಳಿದೆ. ಸಿಹಿ ತಯಾರಿಸಲು ತಡವಾಗುತ್ತದೆ ಅಂತ ಒಂದಿಷ್ಟು ಮೈಸೂರುಪಾಕು ತಂದುಬಿಟ್ಟೆ. ತಂದುದನ್ನು ಅವರೆದುರು ಹೇಳುವಂತಿಲ್ಲವೆಂದು ನಮ್ಮಲ್ಲೇ ತೀರ್ಮಾನವಾಯಿತು. ತೀನಂಶ್ರೀ, ಪುತಿನ ಇಬ್ಬರನ್ನೂ ಊಟಕ್ಕೆಬ್ಬಿಸಿದೆವು.

ಅಡಿಗೆಯ ಪದಾರ್ಥ ಒಂದೊಂದನ್ನೂ ಹಿರಿಯರು ಬಾಯ್ತುಂಬ ಹೊಗಳಿದರು. ತಮ್ಮ ಮನೆಯಲ್ಲೂ ಸಹ ಈ ಮಟ್ಟ ಇನ್ನೂ ಬರಬೇಕಾಗಿದೆಯೆಂದರು. ಇಷ್ಟು ಚಿಕ್ಕ ವಯಸ್ಸಿಗೇ ಇಷ್ಟು ಅಡಿಗೆ, ಈ ಹದ ಹೇಗೆ ಸಾಧಿಸಿತೋ ಅಂತ ಹುಬ್ಬೇರಿಸಿದರು. ನನ್ನ ಹೆಂಡತಿಯ ಅಳುಕು ಆತಂಕವೆಲ್ಲ ಹರಿದು ಮುಖ ಊರಗಲವಾಯಿತು. ಅಷ್ಟುಹೊತ್ತಿಗೆ ಹೊರಗಿನಿಂದ ಗುಟ್ಟಿನಲ್ಲಿ ಆಮದಾದ ಆ ಪದಾರ್ಥ ಮೆಲ್ಲಗೆ ಎಲೆ ಮೇಲೆ ಬಂತು.

ಕಣ್ಣು, ಮೂಗು, ನಾಲಿಗೆ ಎಲ್ಲ ತುಂಬ ಚುರುಕಾದ ಜನ! ತೀನಂಶ್ರೀ ಅದನ್ನು ದುರುಗುಟ್ಟಿ ನೋಡಿ ಕೇಳಿದರು. 'ಭಟ್ಟ, ಈ ಮೈಸೂರು ಪಾಕು ಮನೆಯಲ್ಲೇ ಆದದ್ದ?'

ನನಗೆ ಪ್ರಾಣ ಕುತ್ತಿಗೆಗೇ ಬಂತು. ಎಂ. ಎ. ಮುಗಿಸಿದ ಮೇಲೂ ಈ ಮಹಾಶಯರು ಪರೀಕ್ಷೆ ಬಿಡಲಿಲ್ಲವಲ್ಲ! ಗಾಬರಿಯಿಂದ ಹೆಂಡತಿಯ ಕಡೆ ನೋಡಿದೆ. ಸನ್ನೆಯಿಂದಲೇ ಸೂಚನೆ ಸಿಕ್ಕಿತು. 'ಹೌದು ಸಾರ್' ಅಂದುಬಿಟ್ಟೆ!

ಹಿರಿಯರಿಬ್ಬರೂ ಪರಸ್ಪರ ಮುಖ ನೋಡಿಕೊಂಡು ಸಣ್ಣಗೆ ನಕ್ಕರು. ಏನು ಅರ್ಥವೋ! ತೀನಂಶ್ರೀ ಹೇಳಿದರು.

"ಜಾಣೆ ಕಣಮ್ಮ, ಹೋಟೆಲಿನಲ್ಲಿ ಮಾಡಿದ್ದು ಅನ್ನಿಸೋ ಹಾಗಿದೆ ನೋಡು." ನನಗೆ ಗಾಬರಿ – ಇನ್ನೇನು ಹೇಳಿಬಿಡುತ್ತಾರೋ ಅಂತ! ಕೂಡಲೆ ಪುತಿನ ಬಾಯಿ ಹಾಕಿದರು.

"ಏನು ಶ್ರೀಕಂಠಯ್ಯ ನೀನು ಹೇಳೋದು? ನೋ, ನೋ, ನಾನು ನಿನ್ನ ಮಾತು ಒಪ್ಪೊಲ್ಲ. ಈ ಆಂಬೊಡೆ ನೋಡು, ಹೇಗೆ ಗರಿಗರಿ ಮುರಿಯುತ್ತೆ! ಈ ಪಾಯಸ ನೋಡು, ಎಷ್ಟು ಸವಿ! ಆ ಮೈಸೂರು ಪಾಕಿನ ಮೂತಿ ತಿವಿಯೋ ಹಾಗಿಲ್ಲವ ಇದು? ನೀ ಏನೇ ಹೇಳು. ಉಳಿದ ಅಡಿಗೆ ಗುಂಪಿಗೆ ಸೇರೋ ಯೋಗ್ಯತೆ ಅದಕ್ಕಿಲ್ಲ. ಇದೇ ಬೇರೆ, ಅದೇ ಬೇರೆ. ಎಲ್ಲಮ್ಮ ಇನ್ನೆರಡು ಆಂಬೊಡೆ ಹಾಕು. ಎರಡು ಸೌಟು ಪಾಯಸ ಬಡಿಸು."

ಎಲಾ ಕವಿ ! ಅಂದುಕೊಂಡೆ ನಾನು. ಮೈಸೂರುಪಾಕು ಹೊರಗಿನದು ಎಂದು ಎಷ್ಟು ಕರಾರುವಾಕ್ಕಾಗಿ ತೀರ್ಮಾನಿಸಿಬಿಟ್ಟರು ಇವರು. ಆ ಸತ್ಯವನ್ನು ಎಷ್ಟು ನಯವಾಗಿ ಹೇಳಿಯೂ ಬಿಟ್ಟರು! ಬಡಿಸಿದವರೆದುರೇ ಅದನ್ನು ಹಳಿಯುವುದೆಂದರೆ! ಆದರೂ ಅದರಿಂದ ನಮಗೆ ನೋವಿಲ್ಲ. ಇನ್ನೂ ಸಂತೋಷವೇ. ಹೋಟೆಲಿನ ಅನುಭವಿ ಅಡುಗೆಯವರಿಗಿಂತ ಜಾಣೆ ಎಂಬ ಮಾತು ಆಗಷ್ಟೆ ಸಂಸಾರ ಹೂಡುತ್ತಿರುವ ಯಾವ ಹೆಣ್ಣಿಗೆ ತಾನೇ ಪ್ರಿಯವಲ್ಲ?

ಅಸತ್ಯವನ್ನು ಸುತರಾಂ ಒಪ್ಪಿಕೊಳ್ಳದೆ ಸತ್ಯವನ್ನು ಹೇಳಿಯೇ ತೀರುವ, ಆದರೆ ಅದನ್ನು ತುಂಬ ಪ್ರಿಯವಾಗಿಸಿಕೊಡುವ ಇಂಥ ಕಲೆಯನ್ನು ನಾನು ಕಂಡಿದ್ದು ಅದೇ ಮೊದಲು. ಇದು ಪುಟ್ಟ ಘಟನೆ ನಿಜ. ಆದರೆ ಪುಟ್ಟ ಕಿಟಕಿಯಿಂದ ದೊಡ್ಡ ಊರೇ ಕಾಣಿಸಿದಂತೆ ಇದರಿಂದ ಪುತಿನ ಅವರ ವ್ಯಕ್ತಿತ್ವದ ಒಂದು ದೊಡ್ಡ ಅಂಶ ನನಗೆ ಝಗ್ಗನೆ ಹೊಳೆದುಹೋಯಿತು.

*   *   *   *

ಹೆಣ್ಣು ನಾಯಿಯೊಂದು ಸತ್ತುಬಿದ್ದಿದೆ. ಅದರ ಪುಟ್ಟಮರಿ ಮೊಲೆಗೆ ಬಾಯಿಟ್ಟು ಎದೆ ಕರಗುವಂತೆ ಕೂಗುತ್ತಿದೆ. ಮಡಿವಂತನೊಬ್ಬ ನೋಡಿ ಮರುಗುತ್ತಾನೆ. ಕೊರಳಿಗೆ ಬಳ್ಳಿಯ ಕುಣಿಕೆ ತೊಡಿಸಿ ಮನೆಗೆ ತರುತ್ತಾನೆ. ಮಕ್ಕಳಿಗೆ ಹಿಗ್ಗು. ಮರಿಗೆ ಹಾಲು

ಅನ್ನ ಹಾಕಿ ಸಾಕುತ್ತವೆ. ಆದರೆ ಮೈಲಿಗೆಯಾಗಬಾರದಲ್ಲ! ಎಲ್ಲ ಪ್ರೀತಿ ಉಪಚಾರ ದೂರದಿಂದಲೇ ಸಾಗುತ್ತದೆ. ಮರಿಗೂ ಮರ್ಯಾದೆ ಗೊತ್ತಿದೆ. ಅದು ಹೊಸಿಲು ದಾಟದೆ, ಮನೆಯೊಳಗೆ ಕಾಲಿಡದೆಯೇ ಬೆಳೆಯುತ್ತದೆ.

ಎಲ್ಲೋ ಹೋಗುತ್ತಿದ್ದ ಕುರುಬಗೌಡ ಒಂದು ರಾತ್ರಿ ಈ ಮನೆಯ ಜಗುಲಿಯ ಮೇಲೆ ಮಲಗುತ್ತಾನೆ. ಚಳಿಗೆ ನಡುಗುತ್ತಿದ್ದ ಮರಿಯನ್ನು ಕಂಬಳಿಯೊಳಕ್ಕೆ ಕರೆದುಕೊಳ್ಳುತ್ತಾನೆ. ಬೆಳಿಗ್ಗೆ ಅವನು ಹೊರಟರೆ, ಮರಿ ಅವನ ಹಿಂದೆಯೇ ಹೊರಟುಬಿಡುತ್ತದೆ. ಗೌಡ ಎತ್ತಿಕೊಂಡು, ಮುದ್ದಿಟ್ಟು ಜತೆಗೆ ಒಯ್ದುಬಿಡುತ್ತಾನೆ. ಸಾಕಿದ ಮಡಿವಂತ ಬಂದು ಎಷ್ಟೇ ಕರೆದರೂ ಹೋಗದೆ, ಮರಿ ಗೌಡನ ಬಳಿಯೇ ನಿಂತು ಬಿಡುತ್ತದೆ. ಎಷ್ಟು ಕಾಲ ತೋರಿಸಿದ್ದ ಕರುಣೆಯಾದರೇನು, ಒಂದು ರಾತ್ರಿಯ ಪ್ರೀತಿಯನ್ನು ಅದು ಗೆಲ್ಲಬಹುದೆ? ಕವಿ ಹೇಳುತ್ತಾನೆ, 'ಕರುಣೆ ಒಲುಮೆಗೆ ಸಾಟಿಯೇ?'

ಇದೊಂದು ಕವಿತೆ. 'ಮಡಿ' ಮುಕ್ತವಾದ ಈ ಕವಿತೆ ಬರೆದವರು ಶಾಸ್ತ್ರ, ನೇಮ, ಧಾರ್ಮಿಕ ವಿಧಿಗಳನ್ನು ಶ್ರದ್ಧೆಯಿಂದ ಆಚರಿಸುತ್ತಿದ್ದ ಪುರೋಹಿತ ನರಸಿಂಹಾಚಾರ್! ಜೀವನದ ಬಹುದೊಡ್ಡ ಮೌಲ್ಯ ಯಾವುದೆಂಬ ಬಗ್ಗೆ ಈ ಕವಿಗೆ ಎಂದೂ ಗೊಂದಲವಿರಲಿಲ್ಲ. ಅವರ ಈ ಆರಂಭದ ರಚನೆಯೇ ಅದಕ್ಕೆ ಸಾಕ್ಷಿ. ಇಂಥ ಕವಿತೆಗಳನ್ನು ಅವರು ನವೋದಯದ ಮೊದಲ ದಿನಗಳಲ್ಲೇ ಬರೆದರು.

* * * *

ಪು. ತಿ. ನರಸಿಂಹಾಚಾರ್ ತೊಂಬತ್ತಮೂರು ವರ್ಷಗಳಷ್ಟು ಹಿಂದೆ ಮೇಲುಕೋಟೆಯಲ್ಲಿ ಹುಟ್ಟಿದವರು. ತಾಯಿ ಸೀತಮ್ಮ, ತಂದೆ ತಿರುನಾರಾಯಣ ಅಯ್ಯಂಗಾರ್. ತಂದೆ ಹಿರಿಯ ಪುರೋಹಿತರು, ವೇದೋಪನಿಷತ್ತು ಧರ್ಮಶಾಸ್ತ್ರಗಳಲ್ಲಿ ಪಾರಂಗತರು. ಯದುಗಿರಿಗೆ (ಮೇಲುಕೋಟೆಗೆ) ಬಂದ ಯಾವ ಹಿರಿಯ ವಿದ್ವಾಂಸರೂ ಅವರನ್ನು ಕಂಡು ಮಾತನಾಡಿ ತಮ್ಮ ಗೌರವ ಸೂಚಿಸಿ ಹೋಗುವರು. ತಂದೆಯವರ ಈ ಯೋಗ್ಯತೆ, ವಿದ್ವತ್ತು ಕಂಡು ಮಗನಿಗೆ ಇನ್ನಿಲ್ಲದ ಹೆಮ್ಮೆ. ಈ ಜಗತ್ತಿನಲ್ಲಿ ಅವರಿಗಿಂತ ದೊಡ್ಡವರಿರಲಾರರು ಎಂಬ ಭಾವನೆ! ತಂದೆಯ ಬಗ್ಗೆ ಮಗನಿಗಿದ್ದ ಗೌರವ ಯಾವ ನೆಲೆಯದು ಮತ್ತು ಅವರ ಸಾಹಿತ್ಯಕ ವ್ಯಕ್ತಿತ್ವದ ಮೇಲೆ ಅದು ಮಾಡಿದ ಪ್ರಭಾವ ಎಂಥದು ಎಂದು ತಿಳಿಯಲು ಪುತಿನ ಅವರ ಒಂದು ಪ್ರಬಂಧದಲ್ಲೇ ನಿದರ್ಶನ ಸಿಗುತ್ತದೆ. ಗೋಕುಲಾಷ್ಟಮಿ ವ್ರತದ ಆಚರಣೆಯನ್ನು ವರ್ಣಿಸುವ ಸಂದರ್ಭ ಅದು!

"ಹತ್ತೂವರೆ ಗಂಟೆಯಾಯಿತು. ತಂದೆಯವರು ಶ್ರೀ ಕೃಷ್ಣ ಜನನ ಪ್ರಕರಣವನ್ನು ಪಾರಾಯಣ ಮಾಡಲು ಅಂಗಳದಲ್ಲಿ ಮಣೆಯ ಮುಂದೆ ಕುಳಿತಿದ್ದಾರೆ. ಮುಂದೆ ವ್ಯಾಸಪೀಠದಲ್ಲಿ ಭಾಗವತವು ತೆರೆದಿಟ್ಟಿದೆ. ಅದರ ಪಕ್ಕದಲ್ಲಿ ಅರ್ಘ್ಯ ಪಾತ್ರೆ, ಪೂಜಾ ದ್ರವ್ಯಗಳ ತಟ್ಟೆ, ಅಕ್ಷತೆಯ ಬಟ್ಟಲು ಅಣಿಯಾಗಿವೆ. ಹಣತೆಯೊಂದರ ಬೆಳಕು ಇವುಗಳೆಲ್ಲವನ್ನೂ ಬೆಳಗಿ ಮುಂದುವರಿದು ಪ್ರಾಣಾಯಾಮವನ್ನು ಮಾಡುತ್ತಿರುವ ತಂದೆಯವರ ಮುಖದ ಮೇಲೆ ವಿರಮಿಸುತ್ತಿದೆ. ಜ್ಞಾನದಿಂದ ಓಜಸ್ವಿಯಾದ, ವ್ರತನೇಮಗಳಿಂದ ತೇಜಸ್ವಿಯಾದ, ಶಮದಮದಯಾದಿ ಗುಣಗಳಿಂದ ಪ್ರಸನ್ನವಾದ ವಯಸ್ಸಿನ ಅಧಿಕ್ಯದಿಂದ ಗೌರವಾಧಿಷ್ಠಾನವಾದ, ಅಂದಿನ ಉಪವಾಸದಿಂದ ಶುಷ್ಕವಾದ ಮುಖವದು. ತಂದೆಯವರ ಧ್ಯಾನಾಸಕ್ತವಾದ, ಪುರಾತನ ಆರ್ಯ ಸಂಸ್ಕೃತಿಯ ಪಕ್ವ ಫಲದಂತಿರುವ ಮುಖಮುದ್ರೆ – ಆ ಸಂಸ್ಕೃತಿಯ ಪಾತ್ರದಲ್ಲಿ ಹರಿದು, ಶ್ರದ್ಧೆಯ ನೆರೆಗೊಂಡು, ವೈದಿಕ ಧರ್ಮಕರ್ಮಗಳ ಕೂಲಗಳಿಂದ ನಿಯಮಿತವಾಗಿ, ಜ್ಞಾನಾರ್ಜನೆಯ ವೇಗದಿಂದ ನಿಷ್ಕಲ್ಮಷವಾಗಿ, ಹಾದಿ ಸಾಗುತ್ತಾ ಸಾಗುತ್ತಾ ಕ್ರಮೇಣ ತಿಳಿದು ಅನಂತದಲ್ಲಿ ಆತ್ಮನಿವೇದನ ಮಾಡಲು, ಅಣಿಯಾದ ಜೀವನದಿಯ ಚಿತ್ರವಿದು. ಈ ಮಹಾನದಿಗೆ ಉಪನದಿಯಾಗಿ ತನ್ನ ಬಾಳನ್ನು ಬೆರೆಸಿರುವ ಪತಿಮನೋನುಕೂಲೆಯಾದ ತಾಯಿ..."

ತಂದೆಯವರನ್ನು ಕುರಿತು ಪುತಿನ ನೀಡಿರುವ ಈ ಮನೋಹರ ಚಿತ್ರ ಅವರ ಜೀವನರೀತಿಗೂ ಅನ್ವಯಿಸುವಂಥದು. ಪುತಿನ ಪಾಶ್ಚಾತ್ಯ ರೀತಿಯ ಇಂಗ್ಲಿಷ್ ಶಿಕ್ಷಣ ಪಡೆದವರು; ಬಲಿಷ್ಠವಾದ ಬುದ್ಧಿಶಕ್ತಿ, ತರ್ಕಬಲ ಉಳ್ಳವರು; ಆದರೂ ಸಂಪ್ರದಾಯಪ್ರಿಯರು; ಅಪ್ಪಟ ಭಾರತೀಯರು; ನಮಗೆ ಅರ್ಥಹೀನವೆಂದು ತೋರುವ ಎಷ್ಟೋ ಕರ್ಮಗಳನ್ನು ಶ್ರದ್ಧೆಯಿಂದ ಆಚರಿಸುವವರು. ಹಾಗೆಂದೇ ನಾನು ಅವರನ್ನು ಒಮ್ಮೆ ಕೇಳಿದೆ.

"ನೀವು ಅತ್ಯಂತ ಆಧುನಿಕರ ಜೊತೆ ಸರಾಗವಾಗಿ ಬೆರೆಯುತ್ತೀರಿ. ವೈಚಾರಿಕತೆಯನ್ನು ಮೆಚ್ಚುತ್ತೀರಿ. ವಿಜ್ಞಾನದ ಪ್ರಗತಿಯನ್ನು ಹಾರ್ದಿಕವಾಗಿ ಪ್ರಶಂಸಿಸುತ್ತೀರಿ. ಆದರೆ ಕೆಲವು ಪ್ರಾಚೀನ ವಿಧಿಗಳನ್ನು ಅರ್ಥಹೀನ ಎಂದು ತಿಳಿದೂ ಆಚರಿಸುತ್ತೀರಲ್ಲ, ಏಕೆ?"

"ಕೆಲವು ವಿಧಿಗಳು ಅರ್ಥಹೀನವಾಗಿ ಕಾಣಬಹುದು. ಇರಲಿ. ಅವುಗಳ ಆಚರಣೆಯಲ್ಲಿ ನಮ್ಮ ವೈಚಾರಿಕತೆಗೆ ಅಗತ್ಯವಾದ ವಿಶ್ರಾಂತಿ ಸಿಗುತ್ತದೆ. ದೇಹಕ್ಕೆ ವಿಶ್ರಾಂತಿ ಬೇಕು; ಬುದ್ಧಿಗೆ, ವಿಚಾರಕ್ಕೆ ಬೇಡವೆ? ತರ್ಕ ಬುದ್ಧಿಗಳಿಗೆ ಮೀರಿದ ಒಂದು ಅಂಶವೂ ನಮ್ಮ ಮನಸ್ಸಿನ ದ್ರವ್ಯದಲ್ಲಿದೆ. ಅದಕ್ಕೂ ಒಂದು ಬಿಡುಗಡೆ

ಬೇಕು. ಅಲ್ಲದೆ ವಿಧಿಗಳ ಆಚರಣೆಯಲ್ಲಿ ಒಂದು ಸೌಂದರ್ಯವಿದೆ. ವಿಹಿತವಾಗಿ ಆಚರಿಸಿದಾಗ ಒಂದು ಬಗೆಯ ತೃಪ್ತಿ ಸಿಗುತ್ತದೆ. ಈ ತೃಪ್ತಿ ಬದುಕಿಗೆ ಅಗತ್ಯ."

ಇನ್ನೊಮ್ಮೆ ಪುತಿನ ಜತೆ ಸದ್ಯದ ಕಾವ್ಯದ ವಿಷಯವಾಗಿ ಮಾತನಾಡುತ್ತಿದ್ದೆ. ಲಯ, ಪ್ರತಿಮೆ ಇತ್ಯಾದಿ ವಿಷಯಗಳ ಪ್ರಸ್ತಾಪ ಬಂತು. ಪುತಿನ ಹೇಳಿದರು: "ನಿಯತ ಲಯವೋ, ಕೊಂಚ ಭಿನ್ನವೋ ಅದನ್ನು ಹಳಿಯಬೇಡಿ. ಎಸೆಯಬೇಡಿ. Rhythm has preserved our literature and culture for centuries."

ಈ ಎರಡೂ ಉತ್ತರಗಳಲ್ಲಿ ಒಂದು ಸಾಂಗತ್ಯವಿಲ್ಲವೆ? ಕಾವ್ಯಕ್ಕೆ ಲಯ ಇದ್ದ ಹಾಗೆ ಜೀವನಕ್ಕೆ ರಿಚುಯಲ್ಸ್. ಲಯದ ಮೂಲಕವೇ ಪ್ರಾಚೀನ ಕಾವ್ಯ ಸಂಸ್ಕೃತಿ ಹರಿದು ಬಂದಂತೆ ರಿಚುಯಲ್ಸ್‌ಗಳ ಪಾತ್ರದಲ್ಲಿಯೇ ಪ್ರಾಚೀನ ಧರ್ಮ ವಿವೇಕ ರಕ್ಷಿತವಾಗಿ ಬಂದಿದೆ. ಕವಿತೆಯ ಅರ್ಥದ ಜತೆ ಮಾತ್ರವಲ್ಲದೆ ಪ್ರತ್ಯೇಕವಾಗಿಯೂ ಲಯವು ಶ್ರುತಿಗೆ ಒಂದು ಹಿತ ನೀಡುತ್ತದೆ. ಹಾಗೆಯೇ ಕರ್ಮಾಚರಣೆ 'ಅರ್ಥಮುಕ್ತ' ವಾಗಿದ್ದಾಗಲೂ ಬಿಡುಗಡೆಯ ಭಾವವೊಂದನ್ನು ಕೊಡುತ್ತದೆ.

ಮೇಲಕ್ಕೆ ವಿರೋಧಗಳಿಂದ ಕೂಡಿ ವಿಚಿತ್ರವಾಗಿ ಕಂಡರೂ ಈ ಅಭಿಪ್ರಾಯಗಳನ್ನು ಅಲ್ಲಗಳೆಯುವಂತಿಲ್ಲ. ಪುತಿನ ಇವನ್ನು ಕೇವಲ ವಾದಕ್ಕಾಗಿ ಹೂಡುವವರಲ್ಲ. ಅವರ ಮಾತಿನ ಹಿಂದಿರುವ ಶ್ರದ್ಧೆ, ನಿಷ್ಕಪಟತೆಗಳು ಯಾರನ್ನಾದರೂ ಮುಟ್ಟುತ್ತವೆ. ವಿಚಾರ, ಬುದ್ಧಿ ತರ್ಕಗಳಿಗೆ ಅವರು ವಿರೋಧಿಗಳಲ್ಲ. 'ಅವೂ ನಮ್ಮ ಜತೆಗೆ ಬರಲಿ. ನಮ್ಮ ಗಂಟು ಹೊತ್ತು, ಅಂಗರಕ್ಷೆ ಇತ್ತು ಪಯಣಕ್ಕೆ ನೆರವಾಗಲಿ. ಆದರೆ ಯದುಗಿರಿಯ ಗಡಿಯೊಳಗೆ ಅವಕ್ಕೇನು ಕೆಲಸ? ಅಲ್ಲಿ ಅವು ನಡೆಯುವುದಿರಲಿ, ತೆವಳಲೂ ಆರವು. ಅವುಗಳನ್ನು ಬಳಸುವಂತೆಯೇ ಬಿಡುವುದನ್ನೂ ಕಲಿತಿರಬೇಕು. ಮೈಗೆ ಎಣ್ಣೆ ಹಚ್ಚುವುದೂ ಗೊತ್ತಿರಬೇಕು, ಸೀಗೆ ಬಳಸಿ ತೆಗೆಯುವುದೂ ಗೊತ್ತಿರಬೇಕು' ಎನ್ನುವುದು ಅವರ ನಿಲುವು.

Give your reason a holiday ಎನ್ನುವುದು ಅವರಿಗೆ ಬಹುಪ್ರಿಯವಾದ ವಾಕ್ಯ. ವಿಜ್ಞಾನದ ಪರ ಹಿಡಿದು, ದೈವಶ್ರದ್ಧೆಯನ್ನು ಹಳಿಯುವುದು ಅವರಿಗೆ ಅರ್ಥವಾಗದ ವಿಚಾರ. ಅಂಥ ನಿಂದಕರ ಮರಳ ತೂರಾಟಕ್ಕಿಂತ ಹಾಸ್ಯಾಸ್ಪದ ಯಾವುದಿದೆ? ಹಾಗೆ ಮರಳು ತೂರುವವರಿಗೆ ಬ್ಲೇಕ್ ಕೊಡುವ ಉತ್ತರವೇ ಅವರದ್ದೂ.

Mock on, mock on; 'tis all in vain,
you throw the sand against the wind
And the wind blows it back again
And every sand becomes a gem
Reflected in the beams divine;
Blown back, they blind the mocking eye,
But still in Israel's path they shine.

ದೈವಶ್ರದ್ಧೆ ಅವರ ದೃಷ್ಟಿಯಲ್ಲಿ ಲೋಕಜೀವನದ ವಸ್ತ್ರಕ್ಕೆ ಜರತಾರಿಯ ಅಂಚು ಕಟ್ಟುತ್ತದೆ. ಸುಲಭವಾಗಿ ಹರಿಯದಂತೆ ವಸ್ತ್ರಕ್ಕೆ ತಾಳಿಕೆ ಕೊಡುತ್ತದೆ; ಶೋಭೆ ಕೊಡುತ್ತದೆ. ವಸ್ತ್ರದ ಬೆಲೆ ಅದರಿಂದ ಹೆಚ್ಚುತ್ತದೆ ಕೂಡ.

ಇಂಥ ಶ್ರದ್ಧೆಯ ಹಳಿ ಹಿಡಿದು ಸಾಗುವ ಜೀವವೆಂದೇ ಅವರು "ಮಲೆದೇಗುಲ"ದಂಥ ಕೃತಿ ಬರೆದರು. ಅದು ಅವರ ವ್ಯಕ್ತಿತ್ವದ ಗಟ್ಟಿ ಅಂಶವೊಂದನ್ನು ನೆಮ್ಮಿ ಮೊಳೆತ ಕೃತಿ; ಕಾವ್ಯಸ್ವರೂಪವನ್ನು ಕಾಯ್ದುಕೊಳ್ಳುತ್ತಲೇ ಅತೀತದ ಅನುಸಂಧಾನದಲ್ಲಿ ತೊಡಗಿದ ಒಂದು ಉತ್ಕೃಷ್ಟ ಚಿಂತನಕಾವ್ಯ. ಮಲೆದೇಗುಲ. ಅಲ್ಲಿ ಕೇವಲ ಮೇಲುಕೋಟೆಯ ದೇಗುಲವಷ್ಟೇ ಅಲ್ಲ, ಎಲ್ಲ ಶ್ರದ್ಧಾಕೇಂದ್ರಗಳ ಪ್ರತೀಕ. 'ಸಕಲ ಸಂದೇಹಗಳೂ ಬಳಲಿ, ಬಳಿಗೈತಂದು ಬಿಡುವ ಬಯಸುವ ತವರು.' ಇದರಲ್ಲಿಟ್ಟ ಶ್ರದ್ಧೆ ಜೀವಕ್ಕೆ ಕೊಡುವ ಕೆಚ್ಚು, ಆತ್ಮಸ್ಥೈರ್ಯ ಎಂಥವು?

ಇಲ್ಲಿ ಮಣಿವವ ಎಲ್ಲೆಡೆಯು ಸೆಟೆದು ನಿಲುವ
ಇಲ್ಲಿ ಮೈ ಕುಗ್ಗಿದವ ಎಲ್ಲೆಲ್ಲು ನೇರ ನಡೆವ

ಪುತಿನ ಅವರ ಎಲ್ಲ ಬರೆಹಗಳಲ್ಲೂ ಲೌಕಿಕ – ಪಾರಲೌಕಿಕ, ಜಂಗಮ – ಸ್ಥಿರ, ಸದ್ಯ – ಶಾಶ್ವತಗಳು ತಳುಕು ಹಾಕಿಕೊಂಡೇ ಬರುತ್ತವೆ. ತಮ್ಮ ಪ್ರಬಂಧವೊಂದರಲ್ಲಿ ಅವರು ಯದುಗಿರಿಯ ದೇವಾಲಯವನ್ನು ಕುರಿತು 'ಈ ಗುಡಿ ನಮ್ಮೂರಿಗೆ ಆತ್ಮದಂತಿದೆ. ತನ್ನ ಸುತ್ತಮುತ್ತಲೂ ಎದ್ದುಬಿದ್ದು, ನರಳಿ ನಲಿದು, ಹುಟ್ಟಿ ಸತ್ತು ಸಾಗುವ ನಶ್ವರ ಸಂಸಾರದ ಶಾಶ್ವತ ಸತ್ವದಂತಿದೆ' ಎನ್ನುತ್ತಾರೆ.

'ಗೋಕುಲ ನಿರ್ಗಮನ'ದಲ್ಲಿ ಬೃಂದಾವನದ ಪಶುಪ್ರಾಣಿ, ಮನುಷ್ಯ ಚೇತನಗಳೆಲ್ಲ ಕೃಷ್ಣಕೇಂದ್ರದ ಸುತ್ತ ತಿರುಗುತ್ತವೆ. ಅಲ್ಲಿ ಉದ್ದಕ್ಕೂ ಭೋರ್ಗರೆದು ಹರಿಯುವ ಗೋಪೀ ಪ್ರೇಮಾನುರಾಗದ ಮಹಾಪೂರ ಮೈಪಡೆಯುವುದು ಸಹ ಕೃಷ್ಣಮುರಳಿಯ ಅಲೌಕಿಕ ಗಾನವರ್ಷದಿಂದಲೇ. ಕೃಷ್ಣ ಕೊಳಲನ್ನಿಳಿಸಿದಾಗ ಗೋಪಿಯರು ಮಾಡುವ ಪ್ರಾರ್ಥನೆ ಯಾದರೂ ಏನು?

ನಿಲ್ಲಿಸದಿರು ವನಮಾಲೀ
ಕೊಳಲಗಾನವ

ನಿಲ್ಲಿಸೆ ನೀ ಕಳೆವುದೆಂತೊ
ಭವಭೀತಿಯ ಕೇಶವ
ಭವದ ಮಾಯೆ ಅಡಗುವಂತೆ
ಅಹಂಕಾರ ಕರಗುವಂತೆ
ನಿನ್ನ ಗಾನದನುರಾಗವು
ಬದುಕು ತುಂಬಲನುಗಾಲವು
ನಿಲ್ಲಿಸದಿರು ವನಮಾಲೀ
ಕೊಳಲಗಾನವ

ಬದುಕಿನ ಯಾವ ಚೆಲುವನ್ನೂ ಪುತಿನ ಎಂದೂ ಹಳಿದವರಲ್ಲ. ಮಾತ್ರವಲ್ಲ, ಸದಾ ಪುರಸ್ಕರಿಸಿದವರೇ. ಆದರೆ ಬದುಕೆಂದರೆ ಹೊರಗೆ ತೋರುವುದಷ್ಟೇ ಅಲ್ಲ, ಮರೆಗಿರುವುದೂ ಹೌದು. ನೊರೆಯ ಬುಡಕ್ಕೆ ಹಾಲು, ಮರದ ಬುಡಕ್ಕೆ ಬೇರು ಇರುವುದೂ ತಿಳಿಯಬೇಕು. ಮಗುವನ್ನು ಕಾಣುವ ಕಣ್ಣಿಗೆ ಅದನ್ನು ಎತ್ತಿ ಹಿಡಿದ ತಾಯಿಯ ಕೃಪಾಹಸ್ತವೂ ಕಾಣಬೇಕು. ಈ ನಿಲುವನ್ನು ಅವರ ಬಹುತೇಕ ಎಲ್ಲ ಕೃತಿಗಳೂ ಧ್ವನಿಸುತ್ತವೆ.

* * * *

ಯಾವ ಕವಿಯೂ ಒಂದು ರೀತಿಯಲ್ಲಿ ಏಕಾಂಗಿ. ಆಳದಲ್ಲಿ ಎಲ್ಲರಿಗಿಂತ ಭಿನ್ನನಾಗಿರುತ್ತ ಅವನಿಗೆ ಈ ಪಾಡು ತಪ್ಪಿದ್ದಲ್ಲ. ನರಸಿಂಹಾಚಾರ್ಯರಂಥ ವ್ಯವಹಾರದೂರ ಕವಿಯ ವಿಷಯಕ್ಕಂತೂ ಈ ಮಾತು ಇನ್ನಷ್ಟು ನಿಜ. ಆದರೆ ಅವರ ಅದೃಷ್ಟ. ಬಯಸಿ ಪಡೆಯಬೇಕಾದ ಸ್ನೇಹಿತರು ಅವರಿಗೆ ತಾವಾಗಿಯೇ ದೊರಕಿದರು. ತೀನಂಶ್ರೀ, ಸಂ. ಶಿವರಾಮಶಾಸ್ತ್ರಿ, ಕೂಡಲಿ ಚಿದಂಬರಂ, ಗೊರೂರು, ವೀಣಾ ದೊರೆಸ್ವಾಮಿ ಅಯ್ಯಂಗಾರ್, ಡಿ.ಎಲ್.ಎನ್.–ಇಂಥ ಅಸಾಮಾನ್ಯ ವ್ಯಕ್ತಿಗಳನ್ನು ಆತ್ಮೀಯ ಗೆಳೆಯರನ್ನಾಗಿ ಪಡೆವ ಸ್ನೇಹಶ್ರೀಮಂತರು ಅವರು. ಇವರಲ್ಲಿ ಮೊದಲು ಇಬ್ಬರು ಪುತಿನರವರ ಆರಂಭದ ರಚನೆಗಳನ್ನು ಪ್ರಶಂಸಿಸಿ, ಕುಮ್ಮಕ್ಕು ಕೊಟ್ಟು ಹೆಚ್ಚು ಹೆಚ್ಚಾಗಿ ಬರೆಯಹಚ್ಚಿದವರು. ಮೂರನೆಯವರು ಅವರ ಪುಸ್ತಕಗಳನ್ನು ಪ್ರಕಟಿಸಿದವರು. ತೀನಂಶ್ರೀ ಅವರಂತೂ ಕವಿಯೇ ಒಂದು ಕಡೆ ಹೇಳಿಕೊಂಡಂತೆ ಅವರ ಪದ್ಯಗಳ 'ಸಾಕು ತಾಯಿ'. ಆಚಾರ್ಯಕೃತಿ ಎಂದು ಕರೆಸಿಕೊಂಡ ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ತೀನಂಶ್ರೀ ನವೋದಯ ಕಾವ್ಯಪಂಥದ ಮೂರು ಜನ ಕವಿಗಳ ಕೃತಿಭಾಗಗಳನ್ನು ಮಾತ್ರ ನಿದರ್ಶನವಾಗಿ ನೀಡಲು ಆಯ್ಕೆ ಮಾಡಿಕೊಂಡಿದ್ದಾರೆ. ಅವರಲ್ಲಿ ಬೇಂದ್ರೆ, ಕುವೆಂಪು ಜೊತೆಯಲ್ಲಿ ಪುತಿನ ಇದ್ದಾರೆ.

ಒಮ್ಮೆ ಪುತಿನ ಅವರು ತೀನಂಶ್ರೀಯವರಿಗೆ ಬರೆದ ಪತ್ರವೊಂದರಲ್ಲಿ ನಾಡಿನ ಹಿರಿಯ ಕವಿಗಳೆಂದು ಕುವೆಂಪು, ಬೇಂದ್ರೆಯವರನ್ನಷ್ಟೇ ಮನಸ್ಸಿನಲ್ಲಿಟ್ಟು The famous two ಎಂದು ನಿರ್ದೇಶಿಸಿದ್ದರು. ಅದಕ್ಕೆ ಪ್ರತಿಯಾಗಿ ತೀನಂಶ್ರೀ ಬರೆದರು.

"The famous two ಎಂದು ಬರೆದಿದ್ದೀರಿ. The famous three ಎಂದು ಹೇಳಬೇಕು. ನಾನು ಉದ್ದಕ್ಕೂ ಹೇಳುತ್ತಲೇ ಇದ್ದೇನೆ. ಇಷ್ಟೊಂದೇಕೆ ಆತ್ಮಾವಮಾನ

ಮಾಡಿಕೊಳ್ಳುತ್ತೀರಿ? ಜನರ ನಾಲಿಗೆಯ ಮೇಲೆ ನಿಮ್ಮ ಹೆಸರು ಅಷ್ಟೊಂದು ಹೊರಳಾಡುತ್ತಿಲ್ಲವೆಂದೆ? ಆದರೆ ನಿಮ್ಮ ಸ್ಥಾನವನ್ನು ಕಾಲ ನಿರ್ಣಯಿಸುತ್ತದೆ. ಎಲೆಕ್ಟ್ರಿಕ್ ಸ್ಟೌವ್ ಪರಿಚಯ ನಿಮಗಿದೆಯಲ್ಲ. ಅದು ಕಾವೇರುವುದು ನಿಧಾನ. ನಿಮ್ಮ ವಿಚಾರದಲ್ಲಿ ಜನತೆಯ ವರ್ತನೆ ಆ ಬಗೆಯದು. ಕಾವ್ಯ, ಗೀತ ಎರಡರಲ್ಲೂ ಔನ್ನತ್ಯವನ್ನು ಸಾಧಿಸಿರುವ ಸವ್ಯಸಾಚಿ ನೀವು. ಈ ಮೇಲ್ಮೆ ಬೇರೆ ಯಾರಿಗಿದೆ?"

ಪುತಿನರನ್ನು ಅವರ ಸ್ನೇಹಿತರ ಬಗ್ಗೆ ಕೇಳಿದೆ:

"ನಿಮ್ಮ ಬರಹದ ಹಿಂದೆ ಸ್ನೇಹಿತರ ಪ್ರಭಾವ, ಕುಮ್ಮಕ್ಕು ತುಂಬ ಇದೆ ಎನ್ನುವುದು ನಿಜವೇ?"

"ಆಹಾ!" ಪುತಿನ ಹುರುಪುಗೊಂಡು ಹೇಳಿದರು, "ನೂರಕ್ಕೆ ನೂರರಷ್ಟು ನಿಜ. ಎಂಥ ದೊಡ್ಡ ಮನಸ್ಸಿನ ಜನ ಅವರು. ಎಲ್ಲರೂ ಹಿರಿಯ ವಿದ್ವಾಂಸರು. ಅಷ್ಟು ದೊಡ್ಡವರು ನನ್ನಂಥವನ ಬರೆಹಗಳನ್ನು ಇಷ್ಟಪಡುವುದೆಂದರೆ! ನನ್ನ ಕವಿತೆಗಳು ತಮ್ಮವೇ ಎಂಬಂತೆ ಹಿಗ್ಗುತ್ತಿದ್ದರಲ್ಲ! ಆ ಸಹೃದಯತೆ ಅಂತಃಕರಣ ಹೋಲಿಕೆಯಿಲ್ಲದ್ದು. ಅವರಲ್ಲಿ ಕೆಲವರು ಮರೆಯಾಗಿರುತ್ತ ಒಮ್ಮೊಮ್ಮೆ ಜೀವನ ನಿಸ್ಸಾರವಾಯಿತು ಎನಿಸಿಬಿಡುತ್ತದೆ."

ಪ್ರೇಯಸಿಯ ಉಡುಗೊರೆಗಳೋ ಎಂಬಂತೆ ಅವರು ಪ್ರೀತಿಯಿಂದ ಅಡಗಿಸಿಟ್ಟುಕೊಂಡಿದ್ದ ಗೆಳೆಯರ ಕೆಲವು ಪತ್ರಗಳನ್ನು ಪ್ರಯತ್ನಪಟ್ಟು ಹೊರಗೆ ತೆಗೆಸಿದೆ. "ಏನು ಮೆಚ್ಚಿಕೆ, ಎಂಥ ಅಂತಃಕರಣ ಕಂಡಿರಾ" ಎನ್ನುತ್ತ ಒಂದೊಂದನ್ನೇ ತೋರಿಸಿದರು. "ಇದನ್ನೆಲ್ಲ ಎಲ್ಲೂ ಬರೆದುಬಿಡಬೇಡಪ್ಪ" ಎಂದರು "ಬರೆದರೆ ತಾನೆ ಏನು ತಪ್ಪು ಸಾರ್?" ಅಂದೆ. ನೋ ನೋ, ಅವರು ನನಗಾಗಿ ಎಂದು ಬರೆದದ್ದು. ನನ್ನ ಸಂತೋಷಕ್ಕಾಗಿ ಇಟ್ಟುಕೊಂಡಿದ್ದೇನೆ. ಅದನ್ನು ಜನರೆದುರು ಹಾಕಬಾರದು. ಪ್ರಚಾರಕ್ಕೆ ಬಳಸಿದಂತಾಗುತ್ತೆ. ಅದು ಸರಿಯಲ್ಲ" ಎಂದುಬಿಟ್ಟರು. ಆ ಪತ್ರಗಳನ್ನು ಹಿಡಿದ ಪುತಿನ ಕೊಂಚ ಭಾವವಶರಾಗಿದ್ದರು. ಅವರನ್ನು ಅಲುಗಾಡಿಸಿದ್ದುದು ಅವುಗಳಲ್ಲಿನ ಪ್ರಶಂಸೆಯ ಮಾತುಗಳಲ್ಲ; ಅವುಗಳನ್ನು ಬರೆದ ಗೆಳೆಯರ ಅಂತಃಕರಣ, ನಿರ್ವ್ಯಾಜ ವಿಶ್ವಾಸ. ಈ ಕವಿ ನಿಜವಾಗಿ ಭಾಗ್ಯವಂತರು. ಇವರ ಜೀವನದಲ್ಲಿ ಗೆಳೆಯರು ಸುಮ್ಮನೆ ಬಂದು ಹೋಗಲಿಲ್ಲ. ಮಳೆ ಬಿಸಿಲಾಗಿ ಬಿದ್ದು, ಹೊಳೆ ಹಸಿರಾಗಿ ಎದ್ದು ಅವರ ಒಂದು ಭಾಗವಾಗಿಬಿಟ್ಟಿದ್ದಾರೆ ಎನಿಸಿತು. ಅದಕ್ಕೆ ನಿದರ್ಶನವೆನ್ನುವಂತೆ ಇಪ್ಪತ್ತೈದು ವರ್ಷಗಳ ಹಿಂದೆ ಗೆಳೆಯರೊಬ್ಬರ ಮನೆಯೊಳ್ಳಿ ನಡೆದ ಅವರ ಕವಿತಾವಾಚನ ಪ್ರಸಂಗ ನೆನಪಾಯಿತು.

• 'ಮಲೆದೇಗುಲ' ಕೃತಿ ಹೊರಬಂದ ಹೊಸದು. ಆಗ ತೀನಂಶ್ರೀ ಮೈಸೂರು ವಿಶ್ವವಿದ್ಯಾಲಯದಲ್ಲಿ ಸಾಹಿತ್ಯದ ಪ್ರಾಧ್ಯಾಪಕರು. ಅವರ ಪ್ರಾಧ್ಯಾಪಕ ಗೃಹದ

ಮಹಡಿಯ ಭವ್ಯವಾದ ಹಾಲ್‌ನಲ್ಲಿ ಕವಿಮುಖದಿಂದಲೇ 'ಮಲೆದೇಗುಲ' ಕವಿತೆಗಳ ವಾಚನ ಏರ್ಪಾಡಾಗಿತ್ತು. ಸೊಗಸಾದ ತಿಂಡಿ, ಕಾಫಿ, ಧೂಪದ ಪರಿಮಳ ತುಂಬಿ ಮನೆಯಲ್ಲಿ ಹಬ್ಬದ ವಾತಾವರಣ ಹಬ್ಬಿತ್ತು. ಎದುರಿಗೆ ನಾವು ಹತ್ತು ಹನ್ನೆರಡು ಜನ; ಮಹಾರಾಜ ಕಾಲೇಜಿನ ಅಧ್ಯಾಪಕರು ಕೆಲವರು. ಶ್ರೀ ಮೂರ್ತಿರಾಯರೂ ಇದ್ದರೆಂದು ನೆನಪು. 'ಒಲುಮೆ' ಕವನ ಸಂಕಲನ ಹೊರಬಂದ ಸಂದರ್ಭದಲ್ಲಿ ಮಹಾರಾಜರು ಉಡುಗೊರೆಯಾಗಿ ತಮಗೆ ಹೊದೆಸಿದ್ದ ಭವ್ಯವಾದ ಶಾಲನ್ನು ತೀನಂಶ್ರೀ ಲೋಡುದಿಂಬಿಗೆ ಹೊದೆಸಿ ಗೆಳೆಯನನ್ನು ಅಲ್ಲಿ ಕೂರಿಸಿದ್ದರು. ಕವಿತಾವಾಚನ ಆರಂಭವಾಯಿತು. ನಡುವೆ ಕವಿಯ ಮಾತು, ವಿವರಣೆ ಇತ್ಯಾದಿ. ಪುತಿನ ಒಳ್ಳೆಯ ಭಾಷಣಕಾರರಲ್ಲ. ಆದರೆ, ಮಿತವಾದ ಗೋಷ್ಠಿಯಲ್ಲಿ ಆಪ್ತವಾಗಿ ಮಾತಾಡುವಾಗ ಅತ್ಯುತ್ತಮ ಮಾತುಗಾರರು; ಮಾತನಾಡುತ್ತ, ಆಡುತ್ತ ಮಿಂಚಿನಂಥ ಮಾತುಗಳನ್ನು ಎಸೆದು ಕೇಳುಗರ ಮನಸ್ಸನ್ನು ಹಠಾತ್ತನೆ ಬೆಳಗಿಸಿಬಿಡಬಲ್ಲರು. ಆ ಹೊತ್ತಿನಲ್ಲಿ ಅನಿರೀಕ್ಷಿತವಾದ, ಅಪೂರ್ವ ಚಿಂತನೆ, ಭಾವನೆಗಳು ಅವರ ಮನಸ್ಸಿನ ತಳದಿಂದ ಒಂದಕ್ಕೊಂದು ಕೋದುಕೊಂಡು ಮೇಲೇಳುತ್ತವೆ; ಕವಿಯ ತುಟಿತುದಿಯಲ್ಲಿ ಆಗಷ್ಟೇ ನುಡಿಯುಟ್ಟು ಹೊರಜಿಗಿಯುತ್ತವೆ. ನಿರ್ಮಲ ಸರೋವರದಲ್ಲಿ ಬೆಳ್ಳಿಮೈ ಹೊಳೆಸುತ್ತ ಥಟ್ಟನೆ ಹಾಯುವ ಮೀನುಗಳಂತೆ ಆ ಮಾತುಗಳು. ಆದಿನ ಇಂಥ ಮೋಡಿ ಎರಚಿ ಮಧ್ಯೆ ಪುತಿನ ಎರಡು ನಿಮಿಷ ಎದ್ದುಹೋದರು. ಅಲ್ಲಿದ್ದವರೊಬ್ಬರು (ಮೂರ್ತಿರಾಯರು?) ಹೇಳಿದರು. "ನಾವು ನಮ್ಮ ಕಾಲದ ಅತ್ಯುತ್ತಮ ಲೇಖಕ-ಚಿಂತನಕಾರನ ಜೊತೆ ಇದ್ದೇವೆ ಎನ್ನಿಸುತ್ತಿಲ್ಲವೆ?"

ಒಮ್ಮೆ ಪುತಿನ ಜತೆ ಮಾತಾಡುತ್ತಿದ್ದಾಗ ಕೇಳಿದೆ: 'ನೀವು ಹಿರಿಯ ಕವಿಯೆಂದು ಹೆಸರಾಗಿದ್ದೀರಿ. ನಿಮ್ಮ ಗೆಳೆಯರೂ ಆಗಿರುವ ಹಿರಿಯ ವಿಮರ್ಶಕರು ನಿಮ್ಮನ್ನು ಇಷ್ಟೊಂದು ಮೆಚ್ಚುತ್ತಾರೆ. ಆದರೂ ನಿಮ್ಮ ಕಾವ್ಯದ ಘನತೆಯ ವಿಷಯದ ಮಾತು ಬಂದಾಗ ಏನೋ ಒಂದು ಬಗೆಯ ಸಂಕೋಚ ಅನುಭವಿಸುತ್ತೀರಿ, ಏಕೆ? ನಿಮ್ಮ ಕಾವ್ಯ ಹೆಚ್ಚು ಚರ್ಚೆಯಾಗುತ್ತಿಲ್ಲ ಎಂಬ ಕಾರಣವೇ?'

ಪುತಿನ ಹೇಳಿದರು: 'ಅದು ಹಾಗೆಯೇ ಕಣಪ್ಪ. ದೊಡ್ಡದನ್ನು ನೋಡುತ್ತ, ತಿಳಿಯುತ್ತ ಎಲ್ಲರಿಗೂ ಅಂಥ ಭಾವನೆ ಬರುತ್ತದೆ, ಬರಬೇಕು. ಕಾಳಿದಾಸ ತನ್ನ ಮೊದಲ ನಾಟಕದ ಆರಂಭದಲ್ಲಿ "ಪುರಾಣಮಿತ್ಯೇವ ನ ಸಾಧುಸರ್ವಂ" ಇತ್ಯಾದಿ ಹೇಳಿದ ತಾನೆ? ತನ್ನದು ಖಂಡಿತ ಉತ್ತಮ ಕೃತಿ ಎಂಬ ಕೆಚ್ಚಿದೆ ಆ ಮಾತಿನಲ್ಲಿ. ಅದು ಯೌವನದ್ದು. ಕಡೆಯಲ್ಲಿ ಶಾಕುಂತಲದಂಥ ಅಪೂರ್ವ ನಾಟಕ ಬರೆಯುವ ಹೊತ್ತಿಗೆ ಅವನು ಎಷ್ಟು ಬದಲಾಯಿಸಿ ಹೋಗಿದ್ದ! 'ಆಪರಿತೋಷಾತ್ ವಿದುಷಾಂ ನ ಸಾಧುಮನ್ಯೇ ಪ್ರಯೋಗ ವಿಜ್ಞಾನಂ' ಎಂದುಬಿಟ್ಟನಲ್ಲ! ದೊಡ್ಡವರು ಬಹಳ ಜನ ಒಪ್ಪಬೇಕು. ಅಲ್ಲಿಯವರೆಗೆ ಇಂಥ ಸಂಕೋಚ ಇರುವಂಥದ್ದೇ.'

ಪುತಿನ ಮಾತಾಡುವುದೇ ಹಾಗೆ. ಅದಕ್ಕೆ ಅವರ ಮಿತಿಯಿಲ್ಲದ ಸೌಜನ್ಯ ಕಾರಣವೇ ಹೊರತು ಆತ್ಮಪ್ರತ್ಯಯದ ಕೊರತೆ ಅಲ್ಲ. ಮಾಸ್ತಿಯವರಿಂದ ಅಡಿಗರವರೆಗೆ ಅವರ ಬರಹಗಳಲ್ಲಿ ಒಂದಲ್ಲ ಒಂದನ್ನು ಹೊಗಳದ ಅತಿರಥ ಮಹಾರಥರೇ ಇಲ್ಲ. ಆದರೂ ಅವರ ಆತ್ಮಪ್ರತ್ಯಯ ಅವರ ವಿನಯವನ್ನು ಹಿಂದೆ ಹಾಕಿಲ್ಲ. ಎಷ್ಟೇ ಆಗಲಿ, ಅವರು ತುಂಬಿದವರು: ತುಳುಕುತ್ತಾರೆ ಯಾಕೆ?

ಹಣತೆ, ಮಾಂದಳಿರು, ಶಾರದಯಾಮಿನಿ, ಮಲೆದೇಗುಲ, ರಸ ಸರಸ್ವತಿ ಮೊದಲಾಗಿ ಪುತಿನ ಹನ್ನೊಂದು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಶ್ರೀಹರಿಚರಿತೆ' ಎಂಬ ಮಹಾಕಾವ್ಯವನ್ನೂ ಬರೆದಿದ್ದಾರೆ. ಭಾವೋಜ್ವಲತೆಯಿಂದ ಥಳಥಳಿಸುವ ಗೀತೆಗಳಿರುವ 'ಅಹಲ್ಯೆ'ಯಂಥ ಸೊಗಸಾದ ಕಾವ್ಯನಾಟಕ ರಚಿಸಿದ್ದಾರೆ. ಅವರ 'ಗೋಕುಲ ನಿರ್ಗಮನ' ಕನ್ನಡದ 'ಗೀತಗೋವಿಂದ' ಎಂದು ವಿಮರ್ಶಕರು ಕೈವಾರಿಸಿದ್ದಾರೆ. ಗೀತಗೋವಿಂದದ ನಾದದ ಹೆಚ್ಚಳವನ್ನು ಕುರಿಯದೆ, ಅದಕ್ಕಿಂತ ಹೆಚ್ಚಿನ ಜೀವನ ದರ್ಶನವನ್ನು ಕಟ್ಟಿಕೊಡುವ ಈ ಕೃತಿ ಗೀತಗೋವಿಂದಕ್ಕೂ ಮೀರಿದ್ದು ಎನ್ನುವುದು ನನ್ನಂಥ ಹಲವರ ಎಣಿಕೆ.

ಈ ಬಗೆಯ ರಚನೆಗಳಿಗಿಂತ ಕೊಂಚ ಪೆಡಸಾದರೂ ಭಕ್ತನ ಎದೆಯಾಳದ ಮೆಲುದನಿಯೋ ಎನಿಸುತ್ತ, ತನಗೆ ತಾನೇ ಆಡಿಕೊಂಡ ಸ್ವಗತವೋ ಎಂಬಷ್ಟು ಆಪ್ತತೆಯಲ್ಲಿ ತೆರೆದುಕೊಳ್ಳುವ 'ಮಲೆದೇಗುಲ' ಒಂದೇ ವಸ್ತುವನ್ನು ಕುರಿತ ಧ್ಯಾನ ಲಹರಿಗಳ ಸಮುಚ್ಚಯ. ಕನ್ನಡದಲ್ಲಿ ಈ ಬಗೆಯ ಕೃತಿ ಇದೊಂದೇ.

ತಮ್ಮ ಕವಿತೆ ಮೈ ಪಡೆಯುವ, ದನಿ ಬಿಚ್ಚುವ ಕ್ರಮಗಳನ್ನೆಲ್ಲ ಹತ್ತಿರದಿಂದ ಅವಲೋಕಿಸಿ ಕೊಟ್ಟ ರುಜುವಾತೆಂಬಂತೆ, ಪುತಿನ ಕಾವ್ಯಮೀಮಾಂಸೆಯ ಮೂರು ಬರೆಹಗಳನ್ನು ಕೊಟ್ಟಿದ್ದಾರೆ. ಇವುಗಳಲ್ಲಿ 'ಕಾವ್ಯಕುತೂಹಲ'ವಂತೂ ಅತ್ಯಮೂಲ್ಯವಾದದ್ದು. ಹೊಸ ಚಿಂತನೆಗಳ ಮಾಲೆಯಾಗಿರುತ್ತ, ಅಪ್ಪಟ ಭಾರತೀಯವಾಗಿರುತ್ತ ಒಟ್ಟು ಕನ್ನಡದಲ್ಲೇ ಅದು ಬಹು ಮೇಲ್ಮಟ್ಟದ ಕಾವ್ಯ ಜಿಜ್ಞಾಸೆಯಾಗಿದೆ.

ಪುತಿನ ಸೊಗಸಾದ ಗದ್ಯ ಬರೆಯಬಲ್ಲವರಾಗಿದ್ದರು. ಇಷ್ಟೊಂದು ಕವಿತೆ, ನಾಟಕ, ಮೀಮಾಂಸೆಗಳ ನಡುವೆ ಅವರು ಐದು ಪ್ರಬಂಧ ಸಂಕಲಗಳನ್ನೂ ನೀಡಿದ್ದಾರೆ. ಈಚಲು ಮರದ ಕೆಳಗೆ, ಗೋಕುಲಾಷ್ಟಮಿ, ಭೀತಿ ಮೀಮಾಂಸೆ, ಧೇನುಕೋಪಾಖ್ಯಾನ, ಮಸಾಲೆದೋಸೆಯಂಥ ಪ್ರಬಂಧಗಳು ಪ್ರಫುಲ್ಲ ಹಾಸ್ಯದಿಂದ, ಪ್ರಸನ್ನ ಮಾತುಗಾರಿಕೆಯಿಂದ, ಹಾಸ್ಯದ ಸೆರಗು ಹಿಡಿದು ಚಲಿಸುತ್ತಲೇ, ಇದ್ದಕ್ಕಿದ್ದಂತೆ ಬೆಳಗುವ ಮಿಂಚಿನಂಥ ಚಿಂತನೆಗಳಿಂದ, ಸೆಳೆದು ನಿಲ್ಲಿಸುವ ವರ್ಣನಾ ಸಾಮರ್ಥ್ಯದಿಂದ ಜಗತ್ತಿನ ಶ್ರೇಷ್ಠ ಪ್ರಬಂಧಗಳ ನೆಲೆಗೆ ಏರಿಬಿಟ್ಟಿವೆ. ಏನನ್ನೂ

ಸುಲಭವಾಗಿ ಹೊಗಳಲೊಲ್ಲದ ಅಡಿಗರಂಥ ಕವಿಯೇ ಅವುಗಳನ್ನು ಕುರಿತು What a wonderful book of lightning loveliness! Every essay there, is a kind of sesame ಎಂದು ಉದ್ಗಾರ ತೆಗೆದದ್ದುಂಟು.

ತಮ್ಮ ಕಾಲದ ಇತರ ಎಲ್ಲ ಕವಿಗಳಿಗಿಂತ ಪುತಿನ ಭಿನ್ನರಾಗಿರುವುದು ತಮ್ಮ ಗೀತರೂಪಕಗಳ ಮೂಲಕ; ಸಂಗೀತದ ಕಲ್ಪಕ ಸಂಚಾರಗಳಲ್ಲಿಯೇ ತಮ್ಮ ಗೀತರೂಪಕಗಳ ಸಾಹಿತ್ಯವನ್ನು ಸೃಜನಾತ್ಮಕವಾಗಿ ಹಿಡಿಯುವುದರ ಮೂಲಕ. ಕ್ರಮಬದ್ಧವಾಗಿ ಶಾಸ್ತ್ರಾಧ್ಯಯನ ಮಾಡಿ ಸಂಗೀತವನ್ನು ಅವರು ಆರಸಿಕೊಂಡು ಹೋಗದಿದ್ದರೂ ಸಂಗೀತವೇ ಅವರನ್ನು ಅರಸಿ ಬಂದಿದೆ. ಅವರ ಒಂದೊಂದು ಗೀತರೂಪಕವೂ ಸಾಹಿತ್ಯ – ಸಂಗೀತಗಳ ರಸಬುಗ್ಗೆ. ಇಂಥ ಇಪ್ಪತ್ಮೂರು ಗೇಯ ಕಾವ್ಯನಾಟಕಗಳನ್ನು ಅವರು ರಚಿಸಿದ್ದಾರೆ. "ಸ್ವತಂತ್ರವಾದ ಅವರ ಕಲ್ಪನಾ ಪ್ರವಾಹದಲ್ಲಿ ಅನೇಕ ನೂತನ ರಾಗಗಳು ಮೈತಾಳಿ ಬಂದಿವೆ. ವಾಸಂತಿ, ಸಂಜೀವಿನಿ, ಹರಿಣಿ, ಋತುವಿಲಾಸ, ಗಾಂಧಾರದೋಲ, ಋಷಭ ವಿಲಾಸ ಮತ್ತು ಇನ್ನೂ ನಾಮಕರಣವಾಗಿಲ್ಲದಿರುವ ಅನೇಕ ಸುಂದರ ರಾಗಗಳು ಸಂಗೀತಕ್ಕೆ ಪುತಿನ ಅವರ ಕೊಡುಗೆ" ಎಂದು ಡಾ|| ದೊರೆಸ್ವಾಮಿ ಅಯ್ಯಂಗಾರ್ಯರಂಥ ಹಿರಿಯ ಸಂಗೀತ ವಿದ್ವಾಂಸರು ಮೆಚ್ಚಿ ಬರೆದಿದ್ದಾರೆ. ಒಮ್ಮೆ ಅವರನ್ನು ಕೇಳಿದೆ.

"ಈಗ ಅನೇಕ ಕವಿಗಳು ನಿಯತಲಯದ ಭಾವಗೀತೆಗಳನ್ನು ರಚಿಸುತ್ತಿದ್ದಾರಲ್ಲ. ಇದು ತಪ್ಪೆ? ಈಗಿನ ಕಾವ್ಯಕ್ಕೆ ಇದು ಮಾರಕವೇ?"

"ಖಂಡಿತ ಇಲ್ಲ. ಆದರೆ ರಾಗದ ಹಂಗಿಲ್ಲದೆ ತನ್ನ ಸಾಹಿತ್ಯದ ಬಲದ ಮೇಲೆಯೇ ಆ ಗೀತೆ ನಿಲ್ಲುವಂತಿರಬೇಕು."

"ಆಗಲೂ ಅದರ ಸ್ವರೂಪ ಸರಳ, ವ್ಯಾಪ್ತಿ ಮಿತ. ಈಗಿನ ನವ್ಯ ಕವನಗಳ ಸಂಕೀರ್ಣ ಅಭಿವ್ಯಕ್ತಿಗೂ ಅದಕ್ಕೂ ತುಂಬ ಅಂತರ ಅನ್ನಿಸದೆ?"

"ಇದು ಅದರ ಹಾಗೇ ಯಾಕಿರಬೇಕು? ಇದರ ರೀತಿ ಬೇರೆ. ಅದರದ್ದೇ ಬೇರೆ. ಗೀತೆ ಕೂಡ ಮಾತನ್ನು ಪೋಲು ಮಾಡದೆ, ಸಡಿಲವಾಗಿರದೆ, ತನ್ನ ಸ್ವರೂಪದ ಮಿತಿಯಲ್ಲೇ ಬಿಕ್ಕಟ್ಟಿನಿಂದ ಕೂಡಿರಬೇಕು" ಎಂದರು. ಏನೋ ನೆನಪಿಸಿಕೊಂಡು "ನಿನ್ನ ಒಂದು ಗೀತೆಗೆ ದೊರೆಸ್ವಾಮಿ ಅಯ್ಯಂಗಾರ್ ರಾಗಸಂಯೋಜನೆ ಮಾಡಿದ್ದಾರಲ್ಲ, ಬಹಳ ಸೊಗಸಾಗಿದೆ. ಗರುಡಧ್ವನಿ ರಾಗ, ನೆನಪಿದೆಯಾ?" ಅಂದರು.

"ಹೌದು" ಅಂದೆ. ಆ ಕವಿತೆಯ ಹೆಸರು ಹೇಳಿದೆ. "ಅದರ ಧ್ವನಿಮುದ್ರಿಕೆ ಇದ್ದರೆ ಇನ್ನೊಮ್ಮೆ ಸರಿಯಾಗಿ ಕೇಳು. ಜೋಪಾನವಾಗಿಡು. ಬಹಳ ಸೊಗಸಾದ ಗೀತೆ. ನಿನಗೇ ತಿಳಿದಂತೆ ಕಾಣೆ" ಎಂದರು!

"ನಿಮ್ಮ ಗೀತೆಗಳಿಗೆ ಬೇರೆಯವರು ರಾಗಸಂಯೋಜನೆ ಮಾಡುವುದನ್ನು ನೀವು ಒಪ್ಪುವುದಿಲ್ಲ. ಹೌದೆ?"

"ಹೌದು. ಆ ಗೀತೆ ಮೂಡುವಾಗ ನನ್ನ ಮನಸ್ಸು ಯಾವ ಭಾವದಿಂದ ಕಾವುಗೊಂಡಿತ್ತೋ ಆ ಭಾವವನ್ನು ಕೇಳುಗನಲ್ಲಿ ಪುನಃ ಸೃಷ್ಟಿಸುವ ಶಕ್ತಿ ಆ ಸ್ವರಸಂಚಾರಗಳಿಗಿರಬೇಕು. ಬಹಳ ಜನರ ರಾಗಸಂಯೋಜನೆ ಹಾಗಿರುವುದಿಲ್ಲ. ಇದ್ದಾಗ ನಾನು ಆಕ್ಷೇಪಿಸುವುದಿಲ್ಲ."

* * * *

"ಸಾರ್, ನಿಮ್ಮ ಆರಂಭದ ಕೃತಿಗಳನ್ನು, ಅಹಲ್ಯೆಯಂಥ ನಾಟಕಗಳನ್ನು ಬಿಡೋಣ. ಅಲ್ಲಿಂದ ಮುಂದೆ ಕನ್ನಡದಲ್ಲಿ ಸುಲಭವಾಗಿ ಅರಗದ ಸಂಸ್ಕೃತದ ಪದಗಳು ನಿಮ್ಮ ಕೃತಿಯಲ್ಲಿ ಹೆಚ್ಚಾಯಿತಲ್ಲವೆ? ಹಳಗನ್ನಡದ ರೂಪಗಳು, ಹಳೆಯ ಪ್ರತ್ಯಯ ರೂಪಗಳು ಎಲ್ಲ ಒಟ್ಟಾಗಿ ಸೇರಿಕೊಳ್ಳುತ್ತ ರಚನೆ ಕ್ಲಿಷ್ಟವಾಗಿಲ್ಲವೆ? ಎಷ್ಟೇ ಉತ್ಕಟ ಸಂವೇದನೆಗಳೂ ಇಂಥ ಅಭಿವ್ಯಕ್ತಿ ತೊಟ್ಟಾಗ ಅವುಗಳ ಕಾಂತಿ ಕುಂದದೆ? ತೀವ್ರತೆ ತಗ್ಗದೆ?" ಎಂದೆ. "ಎಲ್ಲಿ? ಹಾಗೆಲ್ಲಿ ಆಗಿದೆ? ಸುಮ್ಮನೆ ಹೀಗೆಲ್ಲ ಹೇಳಿಬಿಡುತ್ತೀರಲ್ಲ. ಎಲ್ಲಿ ನಿಮ್ಮ ಮಾತಿಗೆ ನಿದರ್ಶನ ಕೊಡಿ ಮತ್ತೆ" ಎಂದು ಸವಾಲಿನ ದನಿಯಲ್ಲಿ ಕೇಳಿದರು.

ಅವರ ಕವಿತೆಗಳ, ಗಂಟುಗಂಟೆನಿಸುವ ಹಲವು ಭಾಗ ನನ್ನ ಮನಸ್ಸಿನಲ್ಲಿತ್ತು. ಆದರೆ ಅವು ಬಾಯಿಗೆ ಬರುತ್ತಿರಲಿಲ್ಲ. ನನ್ನ ಸ್ಥಿತಿ ನೋಡಿ ಪುತಿನ ಹುರುಪುಗೊಂಡರು! "ಎಲ್ಲಿ ಹೇಳಿ ಮತ್ತೆ, ನೋಡಿದಿರಾ ಉತ್ತರ ಇಲ್ಲ!" ಎಂದರು. ನಾನು ಥಟ್ಟನೆ "ಯಾಕೆ ರಸಸರಸ್ವತಿ ಪದ್ಯವನ್ನೇ ನೋಡಿ" ಅಂದೆ. ಪುತಿನ ಹೌಹಾರಿದರು. "ಏನು ರಸಸರಸ್ವತಿಯೆ? ದೇವರೇ, ರಸಸರಸ್ವತಿ ತೊಡಕೆ? 'ಭವದ ಮೇಲಿಂದೆದ್ದು ಭಾವದಲಿ ಸಂಚರಿಸಿ ನುಡಿನುಡಿಯ ಕೇಂದ್ರದೊಳು ರೂಹುಗೂಡಿ" – ಇಂಥ ಸಾಲುಗಳು ತೊಡಕೆ?" ಎಂದರು. ನಾನು ಅಲ್ಲೇ ಮುಂದೆ ಬರುವ 'ಅಕ್ಷಾಕ್ಷದಸ್ಪಷ್ಟಸೃಷ್ಟಿವಿಸ್ಫುಟವಾಗಿ' ಎಂಬ ಸಾಲು ನೆನಪಿಸಿ ಹಾಗಾದರೆ ಇದು ಸರಳವೆ? ಎಂದು ಕೇಳಿದೆ. "ಆಹಾ! ಸರಳವೇ" ಎಂದು ಬಿಟ್ಟರು. ಆಯಿತಲ್ಲ! ಅವರಿಗೇನು, ಸಂಸ್ಕೃತ ವಿದ್ವಾಂಸರು.

ಚಿತ್ರಚರಾಚರಿತವಿಚಿತ್ರೆ
ಮಿತ್ರಪರಿಕ್ರಮಾಲಂಕೃತಗಾತ್ರೆ
ಚೈತ್ರಹೃತಜರೇವಸುಂಧರೇ
ಕಾಲಕೂಪಾರಮಥನದಕ್ಷಿಣೇ
ಕಾಲಕೂಟಾಶ್ರಿತ ಪೀಯೂಷಕ್ಷಣೇ
ಕಾಳಿಕಾಧಿಷ್ಠಿತ ಕಣಕಣೆ

ಎನ್ನುವುದೂ ಅವರಿಗೆ ತುಂಬ ಸರಳವೇ ಇರಬೇಕು!

* * * *

ಬೆಂಗಳೂರಿನ ಕಲಾಕ್ಷೇತ್ರದಲ್ಲೋ ಸಾಹಿತ್ಯ ಪರಿಷತ್ತಿನಲ್ಲೋ ಸಾಹಿತ್ಯದ ಸಮಾರಂಭವೊಂದು ಇದೆ ಅನ್ನಿ. ಅಲ್ಲಿ ಸೇರಿರುವ ಸಾಹಿತಿಗಳ ನಡುವೆ ಎತ್ತರವಾಗಿ, ನಾಸ್ತಿಕರ ಶಂಕೆಗಳಿಗೆ ಉತ್ತರವಾಗಿ, ಹಿರಿ ಕಿರಿಯರೆಲ್ಲರಿಗೂ ಹತ್ತಿರವಾಗಿ ನಿಧಾನ ಚಲಿಸುತ್ತಿರುವ ಹಿರಿಯರೊಬ್ಬರು ಕಾಣುತ್ತಾರೆ. ಮೇಲುಕೋಟೆಯ ಕೆಂಪಂಚಿನ ಪಂಚೆ, ಜುಬ್ಬ, ಶಲ್ಯ, ಕನ್ನಡಕ, ಟೋಪಿ ಧರಿಸಿ, ವಾಕಿಂಗ್ ಸ್ಟಿಕ್ ಹಿಡಿದು ಅವರು ಸಾಗುತ್ತಿದ್ದರೆ ಫ್ರೇಮು ಇಲ್ಲದ ಭವ್ಯ ಚಿತ್ರವೊಂದು ಸರಿಯುತ್ತಿರುವಂತೆ ಕಾಣುತ್ತದೆ. "ತುಂಬಿದುದು ತುಳುಕಿ ಹೋಗದ ಹಾಗೆ ತುಟಿಯಂಚಿನಲ್ಲೆ ನಗು, ಒಗುಮಿಗುವ ನಮ್ರ ಪ್ರತಿಭೆಯ ಮಿನುಗು ಕಣ್ಣಿನಲ್ಲಿ; ಬಾನ ಬೆಳ್ಳಕ್ಕಿ ಹಾರಿದ ಬೆರಗು." ನೋಡುತ್ತಿದ್ದಂತೆ ನಮ್ಮ ಮನಸ್ಸು ನಿರ್ಮಲವಾಗುತ್ತದೆ; ಒಳಗೇ ಗೌರವದಿಂದ ಬಾಗುತ್ತದೆ. ಮನುಷ್ಯ ದೊಡ್ಡವನಾಗುವುದು ಹಣ, ಅಧಿಕಾರ, ಅಬ್ಬರಗಳಿಂದಲ್ಲ; ಪ್ರೀತಿ ಜ್ಞಾನ ನಮ್ರತೆಗಳಿಂದ ಎನ್ನಿಸುತ್ತದೆ. ನಮ್ಮಲ್ಲಿ ಇಂಥ ಭಾವನೆ ಉಕ್ಕಿಸುತ್ತ, ನಾವು ಮುಟ್ಟಲಾಗದೆ ಹೋದ ಎತ್ತರವನ್ನೂ ಧ್ವನಿಸುತ್ತ ಸಾಗುವ ಆ ವ್ಯಕ್ತಿ ಬೇರಾರೂ ಅಲ್ಲ, ಪು.ತಿ.ನ.

ಆದರೆ ಇನ್ನು ಅವರನ್ನು ನಾವು ಆ ಭೌತಿಕರೂಪದಲ್ಲಿ ಕಾಣುವಂತಿಲ್ಲ. ಉಜ್ವಲವಾಗಿ ಹೊಮ್ಮಿದ ಆರತಿಯ ಜ್ವಾಲೆ ವಿಗ್ರಹದ ಮುಖವನ್ನು ಬೆಳಗಿ ಶಾಂತವಾಗುವಂತೆ ತಾವು ಸಾಕ್ಷಿನಿಂತ ಬದುಕಿನ ಸತ್ವಸೌಂದರ್ಯಗಳನ್ನು ಪ್ರಖರವಾಗಿ ಬೆಳಗಿ ಪುತಿನ ಮೊನ್ನೆ ಮರೆಗೆ ಸರಿದರು. ಅಕ್ಟೋಬರ್ ಹದಿಮೂರರಂದು ಬೆಳಗಿನಿಂದ ಸಂಜೆವರೆಗೆ ಚಿಟಪಿಟಿ ಮಳೆ ಬೀಳುತ್ತಲೇ ಇತ್ತು. ಬೆಳಕು ಕುಸಿದ ಇಂಥ ದಿನಕ್ಕೆ ಸಂಸ್ಕೃತದಲ್ಲಿ 'ದುರ್ದಿನ' ಎನ್ನುತ್ತಾರೆ. ಕನ್ನಡಿಗರ ಪಾಲಿಗೆ ಅದು ದುರ್ದಿನವೇ ಆಗಿಹೋಯಿತು. ಚೆಲುವ ನಾರಾಯಣನ ಒಂದು ಉಜ್ವಲಕಿರಣ ಉಪಶಾಂತವಾಯಿತು.

●

ಪು.ತಿ.ನ.

ಜಗಲಿಯಿಂದಲೇ ಜಿಗಿತ. ಹಕ್ಕಿ ಭಾರವೆ ರೆಕ್ಕೆ-
ಗಳಿಗೆ? ಒಂದೇ ಗಳಿಗೆ, ನವನವೋನ್ನಯದ ಎ-
ತ್ತರದ ತಾರಕದಲ್ಲಿ ಸಂಚಾರ. ಆಗಾಗ್ಗೆ
ಸ್ತಬ್ಧ. ಮಧ್ಯಮದಲ್ಲಿ ಮುಗುಳು ನಗೆ. ತಪ್ಪಲಿನ
ಮಂದ್ರಕ್ಕೆ ಬಂದು ಹೆಗಲನ್ನಮುಕಿ ಅಲುಗಿಸುವ
ಹದ ಬಿಸಿಯ ಪ್ರೀತಿ. ಒಂದೆರಡು ಕ್ಷಣ ಹುಡಿಗಾಳ
ಹೆಕ್ಕಿ ಮತ್ತೆತ್ತರಕೆ ಹಕ್ಕಿ! ಮೇಲೇರಲೇ
ಇಳಿದಂತೆ ನೆಲಕ್ಕೆ. ಆಕಾಶ ಹಕ್ಕಿಯ ಒಂದು
ವಿಸ್ತರಣೆ. ಮೇಲಕ್ಕೆ... ಮೇಲಕ್ಕೆ... ಏರಿದರೆ
ಹಕ್ಕಿ ಕೇವಲ ಒಂದು ಬೆಳ್ಳಿಗೆರೆ. ಕೊಕ್ಕಿಲ್ಲ.
ಪಕ್ಕವೂ ಇಲ್ಲ. ಒಡಲಿಲ್ಲ. ನೀಲಿಮದಲ್ಲಿ
ತನ್ನದೇ ಲಯ ತಾಳಗತಿಯ ಲೀಲಾಂದೋಲ!
ಮುಗಿಯಿತೇ ಲೀಲೆ? ಕಣ್ಣೆಳೆದಿತ್ತು ಮಣ್ಣತ್ತ.
ಬೆಳ್ಳಿಗೆರೆ, ಮತ್ತದೇ ಹಕ್ಕಿ ಕೆಳಗಿಳಿಯುತ್ತ.

-ಎಚ್. ಎಸ್. ವೆಂಕಟೇಶಮೂರ್ತಿ

ನಿಷ್ಕಳಂಕ ವಿದ್ವತ್ತಿನ ಮತ್ತೊಂದು ಹೆಸರು ತೀನಂಶ್ರೀ

ಮಾರ್ಚಿ ಇಪ್ಪತ್ತೊಂಬತ್ತನೆಯ ತಾರೀಖು. ಅಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆ ಸಂಜೆಯನ್ನು ಅಮರವಾಗಿಸಿದ ಸಾಹಿತ್ಯೋತ್ಸವ. ದಿವಂಗತ ಪ್ರೊ. ತೀ. ನಂ. ಶ್ರೀಕಂಠಯ್ಯನವರ 'ಭಾರತೀಯ ಕಾವ್ಯಮೀಮಾಂಸೆ'ಗೆ ನಾಡಿನ ಮಹೋನ್ನತ ಸಾಹಿತ್ಯ ಗೌರವವಾದ 'ಪಂಪ ಪ್ರಶಸ್ತಿ'ಯ ನೀಡಿಕೆ. ಸಾಹಿತಿಗಳು, ಸಾಹಿತ್ಯಪ್ರೇಮಿಗಳು ಕಿಕ್ಕಿರಿದ ಸಭೆ. ಕಿವಿಗಡಚಿಕ್ಕುವ ಚಪ್ಪಾಳೆ ಹರ್ಷೋದ್ಗಾರಗಳ ನಡುವೆ ತೀನಂಶ್ರೀಯವರ ಪತ್ನಿ ಶ್ರೀಮತಿ ಜಯಲಕ್ಷ್ಮಮ್ಮನವರಿಂದ ಪಂಪ ಪ್ರಶಸ್ತಿಯ ಸ್ವೀಕಾರ.

'ಭಾರತೀಯ ಕಾವ್ಯ ಮೀಮಾಂಸೆ' ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಶಾಶ್ವತ ಜ್ಯೋತಿಸ್ತಂಭ. ೧೯೫೩ರಷ್ಟು ಹಿಂದೆಯೇ ಇದಕ್ಕೆ ಮುನ್ನುಡಿ ಬರೆದ ಕುವೆಂಪು ಕೃತಿಯ ಘನತೆಯನ್ನು ಮನಸ್ಸು ತುಂಬಿ ಪ್ರಶಂಸಿಸುತ್ತ, 'ಇದು ಅಂಥಿಂಥ ಗ್ರಂಥವಲ್ಲ ಒಂದು ಆಚಾರ್ಯ ಕೃತಿ' ಎಂದು ಕರೆದರು; "ಮುಂಬರಲಿರುವ ಕಾವ್ಯಮೀಮಾಂಸೆ ಸಾಹಿತ್ಯ ವಿಮರ್ಶೆಗಳಿಗೆ ಮಾರ್ಗದರ್ಶಕ ಕೃತಿ" ಎಂದು ಹೊಗಳಿದರು. ಆಧುನಿಕ ಕನ್ನಡ ಸಾಹಿತ್ಯದ ವಿಮರ್ಶನಾಚಾರ್ಯರೆನಿಸಿರುವ ಪ್ರೊ. ಕೀರ್ತಿನಾಥ ಕುರ್ತಕೋಟಿಯವರು ತಮ್ಮ 'ನಡೆದು ಬಂದ ದಾರಿ'ಯ ಬರೆಹದಲ್ಲಿ ಇದನ್ನು 'ತೀರ ಮಹತ್ವದ ಕೃತಿ' ಎಂದು ಬಣ್ಣಿಸಿದ್ದಲ್ಲದೆ 'ಇಷ್ಟು ಪ್ರಮಾಣಭೂತವಾದ ಮತ್ತು ಪರಿಪೂರ್ಣವಾದ ಗ್ರಂಥ ಇಂಗ್ಲಿಷ್‌ನಲ್ಲಿ ಕೂಡ ಇಲ್ಲ'ವೆಂದು ಕೈವಾರಿಸಿದರು.

ತೀ.ನಂ.ಶ್ರೀಕಂಠಯ್ಯನವರು ಪಂಪನನ್ನು ಮತ್ತು ಅವನ ಕೃತಿಗಳನ್ನು ಕುರಿತು ಒಂದು ಸೊಗಸಾದ ಚಿಕ್ಕ ಹೊತ್ತಗೆಯನ್ನು ಪ್ರಕಟಿಸಿದವರು. ಅವನ ಕಾವ್ಯಗಳ ರಸೋದ್ದೀಪಕತೆಯನ್ನು ಕುಗಿತು ತರಗತಿಗಳಲ್ಲಿ ಶಿಷ್ಯರ ಮುಂದೆ ಇನ್ನಿಲ್ಲದಂತೆ ಮೆಚ್ಚಿ ಬಣ್ಣಿಸಿದವರು. ಪಂಪ ಅವರ ದೃಷ್ಟಿಯಲ್ಲಿ ಕವಿಗಳ ಕವಿ. ಇಂಥ ಆಚಾರ್ಯರ

ಕೃತಿಗೆ 'ಪಂಪ ಪ್ರಶಸ್ತಿ' ಕೊಡಲಾಗಿದೆ ಎಂಬ ಸುದ್ದಿ ಕೇಳಿದಾಗ ನನಗೆ ಕೊರಳು ಬಿಗಿದು ಕಣ್ಣಿನಲ್ಲಿ ನೀರೂರಿತು. ನಾಡಿನಾದ್ಯಂತ ಇರುವ ಅವರ ಅನೇಕ ಮಂದಿ ಶಿಷ್ಯರಿಗೆ ಇಂಥದೇ ಆನಂದಾನುಭವ ಆಗಿದೆಯೆಂದು ನಾನು ಊಹಿಸಬಲ್ಲೆ. ಇದಕ್ಕೆ ಕಾರಣ ಅವರು ನಮಗೆ ಗುರುಗಳು ಎಂಬ ವ್ಯಾಜವಷ್ಟೇ ಅಲ್ಲ. ಮದುವೆ ಮಂಟಪದಲ್ಲಿ ಸುಂದರವಾದ, ಸಂಪನ್ನವಾದ ಜೋಡಿಯೊಂದನ್ನು ಕಂಡಾಗ ಆಗುವ ಸಂತೋಷದಂತೆ ಇದು. ಕೃತಿಗೂ ಅದನ್ನು ವರಿಸಿದ ಪ್ರಶಸ್ತಿಗೂ ಎಂಥ ಸಾಮ್ಯ! ಪ್ರಶಸ್ತಿ ಲೋಕದ ಅನುರೂಪ ದಾಂಪತ್ಯ ಎಂದರೆ ಇದೇ.

ಹುಚ್ಚು ತೀರ್ಮಾನ

ಶ್ರೀಕಂಠಯ್ಯನವರು ಜನಿಸಿದ್ದು ೧೯೦೬ರಲ್ಲಿ, ತುಮಕೂರು ಜಿಲ್ಲೆಯ ತೀರ್ಥಪುರದಲ್ಲಿ. ಅವರ ತಂದೆ ನಂಜುಂಡಯ್ಯ, ತಾಯಿ ಭಾಗೀರಥಮ್ಮ. ತೀರ್ಥಪುರ, ಚಿಕ್ಕನಾಯಕನಹಳ್ಳಿ ತುಮಕೂರುಗಳಲ್ಲಿ ಪ್ರೌಢಶಾಲೆಯವರೆಗೆ ಓದು ಮುಗಿಸಿದ ತೀನಂಶ್ರೀ ಬಿ.ಎ. ಓದಲು ಮೈಸೂರಿನ ಮಹಾರಾಜ ಕಾಲೇಜಿಗೆ ಬಂದರು. ಬಿ.ಎ. ತರಗತಿಯಲ್ಲಿ ಸಂಸ್ಕೃತ ಇಂಗ್ಲಿಷ್ ಕನ್ನಡ ಮೂರು ಭಾಷೆಗಳನ್ನೂ ಅಧ್ಯಯನ ಮಾಡಿ ಎಲ್ಲದರಲ್ಲೂ ಚಿನ್ನದ ಪದಕಗಳನ್ನು ಗಿಟ್ಟಿಸಿದರು. ಉಳಿದಂತೆ ಪಡೆದ ಪದಕಗಳೂ ಸೇರಿ ಆ ಕಾಲಕ್ಕೆ ಆರೇಳು ಚಿನ್ನದ ಪದಕ ಗೆದ್ದವರು ಅವರೊಬ್ಬರೇ. ನಂತರ ಸಿವಿಲ್ ಸರ್ವಿಸ್ ಪರೀಕ್ಷೆಗೆ ಕೂತು ಅದರಲ್ಲೂ ಮೂರನೇ ರ್‍ಯಾಂಕ್ ಪಡೆದರು. ಕೂಡಲೇ ಅಮಲ್ದಾರರಾಗಿ ಅವರ ನೇಮಕವಾಯಿತು.

ಆ ದಿನಗಳಲ್ಲಿ ಅಮಲ್ದಾರಿಕೆಯೆಂದರೆ ಭಾರೀ ಹುದ್ದೆ; ಮುಂದೆ ಇನ್ನೂ ದೊಡ್ಡ ದೊಡ್ಡ ಹುದ್ದೆಗಳ ಭಾಗ್ಯದ ಬಾಗಿಲು ತೆರೆಯುವ ಕೀಲಿ ಕೈ. ಅಂಥದು ಸಿಗುವುದು ಪೂರ್ವಪುಣ್ಯವೆಂದೇ ಜನರ ನಂಬಿಕೆ. ಆದರೆ ಶ್ರೀಕಂಠಯ್ಯನವರು ಬಂಧುಮಿತ್ರರನ್ನೆಲ್ಲ ಚಕಿತಗೊಳಿಸುವಂಥ ಒಂದು ತೀರ್ಮಾನ ತೆಗೆದುಕೊಂಡುಬಿಟ್ಟರು. ಗುರುಗಳಾಗಿದ್ದ ಬಿ.ಎಂ.ಶ್ರೀ, ಕನ್ನಡ ಪ್ರೊಫೆಸರ್ ಟಿ.ಎಸ್. ವೆಂಕಣ್ಣಯ್ಯನವರ ಸಲಹೆಯ ಮೇರೆಗೆ ಅಮಲ್ದಾರ್ ಹುದ್ದೆಯನ್ನು ಬಿಟ್ಟು ಕಾಲೇಜು ಮೇಸ್ಟರ ಕೆಲಸಕ್ಕೆ-ಸೇರಿಬಿಟ್ಟರು! ಅವರ ಈ ತೀರ್ಮಾನ ಬಹಳ ಜನಕ್ಕೆ ಆಗ ಹಾಸ್ಯಾಸ್ಪದ ನಿರ್ಣಯವಾಗಿ ಕಂಡಿರಬೇಕು. ಆದರೆ ಗುರುಗಳ ವಿಚಾರವೇ ಬೇರೆಯಾಗಿತ್ತು. ಅಷ್ಟೊಂದು ಮೇಧಾವಿಯಾದ ವ್ಯಕ್ತಿ ವಿಶ್ವವಿದ್ಯಾನಿಲಯದಲ್ಲಿ ನಿಂತು ಸಾವಿರಾರು ಜ್ಞಾನದ ಹಣತೆ ಹಚ್ಚಬೇಕೇ ಹೊರತು ಬರೀ ಹಣ ಅಧಿಕಾರ ದರ್ಪ ದೌಲತ್ತುಗಳ ಅಬ್ಬರದ ಲೌಕಿಕದಲ್ಲಿ ತನ್ನನ್ನು ತಾನೇ ಕಳೆದುಕೊಂಡುಬಿಡಬಾರದು. ಹಾಗೆ ಮಾಡುವುದೆಂದರೆ 'ಹೊಳೆಯಲ್ಲಿ ಹುಣಿಸೆ ತೊಳೆದಂತೆ ಕಲಿತದ್ದೆಲ್ಲ' ಎಂದು ಅವರ

ಮತ. ಗುರುಗಳ ಅಭಿಪ್ರಾಯ ಶಿಷ್ಯನಿಗೂ ಸರಿಯೆನ್ನಿಸಿತು. ಅಲ್ಲಿಗೆ ಎಲ್ಲ ಆಮಿಷ ಮುಗಿಯಿತು.

ಏನೂ ಗೊತ್ತಿಲ್ಲ

ತೀನಂಶ್ರೀ ಸಿವಿಲ್ ಸರ್ವಿಸ್ ಪರೀಕ್ಷೆಗೆ ಕೂತಿದ್ದಾಗ ನಡೆದ ಘಟನೆ ಇದು. ಪರೀಕ್ಷೆಯ ಕೊನೆಯ ಅಂಗವಾಗಿ ವೈವಾ (ಮೌಖಿಕ) ಪರೀಕ್ಷೆ ಇತ್ತು. ಪರೀಕ್ಷೆ ಆರಂಭವಾಯಿತು. ತೀನಂಶ್ರೀ ಸರದಿ ಬಂತು. ಒಳಗೆ ಹೋದರೆ ಪರೀಕ್ಷಕರಾಗಿ ಉಳಿದ ಕೆಲವರ ಜೊತೆ ಆರ್. ನರಸಿಂಹಚಾರ್ಯರೂ ಕೂತಿದ್ದಾರೆ! ಆರ್. ನರಸಿಂಹಚಾರ್ಯರು ಹಳಗನ್ನಡ ಸಾಹಿತ್ಯಕ್ಕೆ ದೊಡ್ಡ ರೀತಿಯಲ್ಲಿ ಸೇವೆ ಸಲ್ಲಿಸಿದವರು; ಕನ್ನಡ ಕವಿಚರಿತೆಯ ಸಂಪುಟಗಳನ್ನು ಬರೆದವರು. ತೀನಂಶ್ರೀ ತಲೆಮಾರಿನವರಿಗೆ ಗುರುಪ್ರಾಯರಾದವರು.

ವೈವಾ ಶುರುವಾಯಿತು. ತೀನಂಶ್ರೀ ಎಲ್ಲ ಪ್ರಶ್ನೆಗಳಿಗೂ ತಪ್ಪದೆ ಸಮರ್ಥವಾಗಿ ಉತ್ತರಿಸುತ್ತಿದ್ದಾರೆ. ಸಮಯ ಮುಗಿಯಿತು. ಥಟ್ಟನೆ ನರಸಿಂಹಾಚಾರ್ಯರು ಒಬ್ಬ ಕವಿಯ ಹೆಸರನ್ನು ಹೇಳಿ "ಇವನ ಬಗ್ಗೆ ನಿಮಗೇನು ಗೊತ್ತಿದೆ?" ಎಂದು ಕೇಳಿದರು. ತೀನಂಶ್ರೀ ಆವಾಕ್ಕಾದರು. ಎಷ್ಟೆಲ್ಲ ಅಭ್ಯಾಸ ಮಾಡಿದ್ದಾಗಿದೆ. ಆದರೆ ಅವನ ಹೆಸರು ಬಿಟ್ಟು ಬೇರೇನೂ ನೆನಪಿನಲ್ಲಿ ಇಲ್ಲ. ಯತ್ನಿಸಿ ಸೋತ ತೀನಂಶ್ರೀ ವಿನಯವಾಗಿ ಹೇಳಿದರು: "ಸರ್ ಈ ಕವಿಯ ಬಗ್ಗೆ ನನಗೆ ಏನೂ ಗೊತ್ತಿಲ್ಲ."

ನಗುಮುಖ ಮಾಡಿಕೊಂಡ ನರಸಿಂಹಾಚಾರ್ಯರು "ಚಿಂತೆಯಿಲ್ಲ, ಹೋಗಿಬನ್ನಿ" ಎಂದರು. ವೈವಾ ಮುಗಿಯಿತು. ಶ್ರೀಕಂಠಯ್ಯನವರು ಮನೆಗೆ ಧಾವಿಸಿ ಬಂದರು. ಕವಿಚರಿತೆ ಬರೆದ ಮಹಾ ವಿದ್ವಾಂಸನ ಎದುರಿನಲ್ಲಿಯೇ ಕವಿಯೊಬ್ಬನ ಬಗ್ಗೆ ನನಗೆ ಏನೂ ಗೊತ್ತಿಲ್ಲ ಅನ್ನುವಂತಾಯಿತಲ್ಲ ಎಂಬ ಅಸಮಾಧಾನ ಮನಸ್ಸನ್ನು ಸುಡುತ್ತಿದೆ. ಮನೆಯಲ್ಲಿದ್ದ ಕವಿಚರಿತೆ ಎತ್ತಿಕೊಂಡು ಸಂಬಂಧಿಸಿದ ಪುಟ ತಿರುವಿ ನೋಡಿದರು. ಕವಿಯ ಹೆಸರಿನ ಕೆಳಗೆ ಹೀಗೆ ಅಚ್ಚಾಗಿತ್ತು. 'ಈ ಕವಿಯ ಬಗ್ಗೆ ನಮಗೆ ಏನೂ ತಿಳಿದು ಬಂದಿಲ್ಲ.'

ಗುರುಗಳ ಕಾರಸ್ಥಾನ

ಗುರುಗಳು ಕನ್ನಡದ ಕೆಲಸಕ್ಕೆ ಅಮಲ್ದಾರನೊಬ್ಬನನ್ನು ಹೀಗೆ ಹಾರಿಸಿಕೊಂಡು ಬಂದ ಸಂಚು ಮೊದಲಿನದೇನೂ ಅಲ್ಲ. ಸ್ವಲ್ಪ ಮುಂಚೆ ಅವರ ಗೆಳೆಯ ಡಾ॥ ಎ.ಆರ್. ಕೃಷ್ಣಶಾಸ್ತ್ರಿಗಳು ಇಂಥದೇ ಒಂದು ಕಾರಸ್ಥಾನ ನಡೆಸಿ ಯಶಸ್ವಿಯಾಗಿದ್ದರು. ಬಿ.ಎ. ಮುಗಿಸಿ ತತ್ವಶಾಸ್ತ್ರದ ಎಂ.ಎ. ಸೇರಲು ಹೊರಟಿದ್ದ ಕುವೆಂಪು ಅವರನ್ನು ಉಪಾಯವಾಗಿ ಕನ್ನಡ ಎಂ.ಎ.ಗೆ ಎಳೆದುತಂದದ್ದು ಶಾಸ್ತ್ರಿಗಳೇ, ಗುರುಗಳು

ಕನ್ನಡದ ಪರ ತಮ್ಮ ಮನಸ್ಸನ್ನು ಹಾಗೆ ಹೊರಳಿಸಿದ ಗಳಿಗೆಯನ್ನು ಕುವೆಂಪು 'ತಮ್ಮ ಜೀವನದ ಅಮೃತಗಳಿಗೆ' ಎಂದು ಕರೆದುಕೊಂಡಿದ್ದಾರೆ. ವೆಂಕಣ್ಣಯ್ಯನವರು ಶ್ರೀಕಂಠಯ್ಯನವರಂಥ ಮತ್ತೊಬ್ಬ ಮೇಧಾವಿಯನ್ನು ಮರುಳು ಮಾಡಿ ಸೆಳೆದದ್ದೂ ಇಂಥದೇ ಒಂದು ಅಮೃತ ಮಹೂರ್ತ ಎನ್ನಬೇಕು. ಗುರುಗಳಿಬ್ಬರ ಈ ಎರಡು ಕಾರಸ್ಥಾನಗಳ ಫಲವಾಗಿ ಅಸಾಮಾನ್ಯ ಸೃಜನಶೀಲನೊಬ್ಬ ಮತ್ತು ಅಸಾಧಾರಣ ಶಾಸ್ತ್ರಕಾರನೊಬ್ಬ ಆಧುನಿಕ ಕನ್ನಡ ಸಾಹಿತ್ಯಕ್ಕೆ ದಕ್ಕುವಂತಾಯಿತು. ಆ ಇಬ್ಬರೂ ಸಾಲಾಗಿ ಮೊದಲ ಎರಡು ಪಂಪ ಪ್ರಶಸ್ತಿಗಳನ್ನು ಗೆದ್ದದ್ದಂತೂ ಗುರುಗಳ ಸಂಚಿಗೆ ಎಂಥ ಪುರಸ್ಕಾರ!

ಅಧ್ಯಾಪಕ ವೃತ್ತಿಗೆ ಬಂದರೂ ತೀನಂಶ್ರೀ ತಮ್ಮ ಓದನ್ನು ಅಲ್ಲಿಗೆ ನಿಲ್ಲಿಸಲಿಲ್ಲ. ಮುಂದೆ ಇಂಗ್ಲಿಷ್ ಎಂ.ಎ. ಪರೀಕ್ಷೆಗೆ ಓದಿ ಪ್ರಥಮ ರ್‍ಯಾಂಕ್ ಪಡೆದರು. ಕನ್ನಡ ಎಂ.ಎ.ಗೆ ಕೂತು ಅದರಲ್ಲೂ ಪ್ರಥಮ ರ್‍ಯಾಂಕ್ ಗಳಿಸಿದರು. ಪ್ರೊ॥ ಎಂ. ಹಿರಿಯಣ್ಣನವರಂಥ ಗುರುಗಳ, ನಂ. ಶಿವರಾಮಶಾಸ್ತ್ರಿಗಳಂಥ ಗೆಳೆಯರ ಜೊತೆ ಗಾಢ ಸಂಪರ್ಕದಲ್ಲಿರುತ್ತ ತಮ್ಮ ಸಂಸ್ಕೃತ ಜ್ಞಾನವನ್ನೂ ವಿಶೇಷವಾಗಿ ಬೆಳೆಸಿಕೊಂಡರು. ಈ ಎಲ್ಲ ಓದು ವ್ಯಾಸಂಗ ನಡೆದದ್ದು ಬಿಡಿಬೀಸಾಗಿದ್ದಾಗಲಲ್ಲ, ಕುಟುಂಬ ಕಟ್ಟಿಕೊಂಡ ಮೇಲೆ. ಮದುವೆಯಾದಾಗ ಅವರಿಗೆ ಹತ್ತೊಂಬತ್ತು ವರ್ಷ ಅಷ್ಟೆ!

ತೀನಂಶ್ರೀ ಒಬ್ಬ ಶ್ರೇಷ್ಠ ಅಧ್ಯಾಪಕರು. ಮಾದರಿ ಎಂದರೂ ಸರಿಯೆ. ಪೂರ್ವ ಸಿದ್ಧತೆ ಇಲ್ಲದೆ ಅವರು ಎಂದೂ ತರಗತಿಗೆ ಬರುತ್ತಿರಲಿಲ್ಲ. ಅಧ್ಯಾಪಕ ಎಂಥ ಮೇಧಾವಿಯೇ ಇರಲಿ ಸಿದ್ಧತೆ ಮಾಡಿಕೊಳ್ಳದೆ ಪಾಠ ಹೇಳುವುದು ವಿದ್ಯಾರ್ಥಿಗಳನ್ನು ಅವಮಾನಿಸಿದಂತೆ, ಅದೊಂದು ಸರಸ್ವತೀದ್ರೋಹ ಎಂದು ಅವರ ಭಾವನೆ. "ಮುಂದೆ ನೀವೂ ಅಧ್ಯಾಪಕರಾಗಬಹುದು; ಈ ಮಾತು ನೆನಪಿರಲಿ" ಎಂದು ಅವರು ನಮಗೆಲ್ಲ ಹೇಳುತ್ತಿದ್ದುದುಂಟು. ಪಾಠದ ವಿಷಯವನ್ನು ಅದರ ಸ್ಥೂಲ ವಿವರಗಳ ಸಹಿತ ಅವರು ಮನಸ್ಸಿಗೆ ಖಚಿತಮಾಡಿಕೊಂಡಿರುತ್ತಿದ್ದರು ಹಾಗೆಂದೇ ಅವರ ಉಪನ್ಯಾಸದಲ್ಲಿ ಎಂದೂ ಅರ್ಥಸಂದಿಗ್ಧತೆ ಇರುತ್ತಿರಲಿಲ್ಲ. ಹಾಗೆ ನೋಡಿದರೆ ಅರ್ಥವ್ಯಕ್ತಿ ಅವರ ವಾಗ್ಮಿತೆಯ ಒಂದು ಮುಖ್ಯ ಲಕ್ಷಣವಾಗಿತ್ತು. ಕಾವ್ಯಮೀಮಾಂಸೆ ಇರಲಿ, ಭಾಷಾಶಾಸ್ತ್ರ ಇರಲಿ, ಅವರ ತರಗತಿ ಎಂದೂ ನೀರಸವಾದದ್ದಿಲ್ಲ. ಮಾತನಾಡುವಾಗ ಪ್ರತಿವಿಷಯಕ್ಕೆ ಒಂದು ಸೊಗಸಾದ ನಿದರ್ಶನ, ಅದು ಅವರಿಗೆ ಅಲ್ಲಿಯೇ ಸ್ಫುರಿಸಿತೆಂಬಂಥ ಸಹಜತೆಯಲ್ಲಿ ಹಾಯುತ್ತಿತ್ತು. ಜಗತ್ತಿನ ಹಿರಿಯ ಲೇಖಕರಾದ ವಾಲ್ಮೀಕಿ, ಕಾಳಿದಾಸ, ಭಾಸ, ಅಶ್ವಘೋಷ, ಹಾಲರಾಜ, ಅಮರು, ಷೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಕೀಟ್ಸ್, ಪಂಪ, ರನ್ನ, ಕುಮಾರವ್ಯಾಸ,

ಕುವೆಂಪು, ಬೇಂದ್ರೆ, ಪುತಿನ – ಹೀಗೆ ಸಂಸ್ಕೃತ, ಇಂಗ್ಲಿಷ್, ಹಳಗನ್ನಡ, ಹೊಸಗನ್ನಡ ಕವಿಗಳಿಂದ ಅವರು ರುಚಿಕಟ್ಟಾದ ಕಾವ್ಯಭಾಗಗಳನ್ನು ಮಂಡಿಸುತ್ತ ವಿದ್ಯಾರ್ಥಿಗಳ ಜ್ಞಾನವನ್ನು ರುಚಿಶುದ್ಧಿಯನ್ನು ಬೆಳೆಸುತ್ತಿದ್ದರು; ಅವರು ಹಾಯಬೇಕಾದ ಕ್ಷೇತ್ರಗಳನ್ನೂ ಹತ್ತಬೇಕಾದ ಶಿಖರಗಳನ್ನೂ ಸೂಚಿಸುತ್ತಿದ್ದರು. ಅವರ ಹಲವು ಉಪನ್ಯಾಸಗಳು ತುಂಬ ರಸಭರಿತವಾಗಿರುತ್ತಿದ್ದವು. ಹಾಲುಕೀರು ತನ್ನಷ್ಟಕ್ಕೆ ತಾನೇ ರುಚಿಯಾದದ್ದು; ಅಂಥದರಲ್ಲಿ ಗುಟುಕಿಗೊಮ್ಮೆ ಕರಿದ ಗೋಡಂಬಿ ದ್ರಾಕ್ಷಿಗಳು ಸಿಗುವಂತಿದ್ದರೆ ಹೇಗಿರಬೇಡ!

ಅಂತರಂಗ ಎಷ್ಟು ಶುಭ್ರವೋ ಅದಕ್ಕೆ ತಕ್ಕ ಭವ್ಯ ಆಕೃತಿ ತೀನಂಶ್ರೀ ಅವರದ್ದು. ಅವರು ಒಳ್ಳೇ ಆಜಾನುಬಾಹು. ಆರಡಿ ಎನಿಸುವ ಎತ್ತರ, ಸ್ಫುಟವಾಗಿ ಕಡೆದಿಟ್ಟಂತೆ ಕಾಣುವ ಮುಖ, ವಿಶಾಲವಾದ ಹಣೆ, ಬಿಳಿಗೆಂಪು ಬಣ್ಣ, ಕೊಕ್ಕರೆ ಬಿಳುಪಿನ ಕಚ್ಚೆ ಪಂಚೆ, ಕ್ಲೋಸ್‌ಕಾಲರ್ ಕೋಟು, ತಲೆಯ ಮುನ್ನೆತ್ತಿಯಲ್ಲಿ ನಡುವೆ ಹೌದೋ ಅಲ್ಲವೋ ಎನ್ನುವಂತೆ ಇಷ್ಟು ಕೂದಲು, ಇರುವ ಹತ್ತೆಂಟು ಕೂದಲನ್ನು ನೀಟಾಗಿ ಬಾಚಿಕೊಳ್ಳಲು ಜೇಬಿನಲ್ಲಿ ಒಂದು ಪುಟ್ಟ ಬಾಚಣಿಗೆ! ಅವರು ತಮ್ಮ ಎಡಗೈಯನ್ನು ಅರ್ಧ ಎತ್ತಿ, ಅಂಗೈಯನ್ನು ನಮಗೆ ಎದುರು ಹಿಡಿದು, ಅತ್ತ ಇತ್ತ ಆಡಿಸುತ್ತ ಬಲಗೈಯಿಂದ ಕನ್ನಡಕದ ಬಲಕಟ್ಟನ್ನು ಆಗಾಗ ಮುಟ್ಟುತ್ತ ಬಿಡುತ್ತ ಮಾತನಾಡುವರು. ಮಂತ್ರಶಕ್ತಿಗೆ ಒಳಗಾದವರಂತೆ ಅವರನ್ನು ನೋಡುತ್ತ ಕೂರುವ ನಮಗೆ ಅವರ ಈ ಹಸ್ತಚಲನೆ ಮಾತನ್ನು ಸಾಭಿನಯವಾಗಿ ನಿರೂಪಿಸುವಂತೆ ತೋರುವುದು. ಆ ವಿದ್ವತ್ತು, ಮಾತಿನ ವೈಖರಿ, ಧೀರ ನಿಲುವು ಕಂಡು ನಮಗೆ ಇನ್ನಿಲ್ಲದ ಹೆಮ್ಮೆ, ಅಭಿಮಾನ. ಭಾರತದ ಮಹಾಮೇಧಾವಿ ಪ್ರಾಧ್ಯಾಪಕರೊಬ್ಬರ ಪಾಠವನ್ನು ನಾವು ಕೇಳುತ್ತಿದ್ದೇವೆ ಎನ್ನುವುದು ನಮಗೆಲ್ಲ ಚೆನ್ನಾಗಿ ಗೊತ್ತಿತ್ತು. ಆ ದಿನಗಳಲ್ಲಿ (೧೯೫೭–೫೯) ಕನ್ನಡ ವಿಭಾಗದಲ್ಲಿ ಇದ್ದವರೆಲ್ಲ ಸೊಗಸಾಗಿ ಪಾಠ ಮಾಡಬಲ್ಲ ಅಧ್ಯಾಪಕರು. ಆದರೂ ತೀನಂಶ್ರೀಯವರನ್ನೂ ಕೊಂಚ ಮೀರಿಸುವಷ್ಟು ಆಕರ್ಷಕವಾಗಿ ಪಾಠ ಮಾಡುತ್ತಿದ್ದವರು ತ.ಸು. ಶಾಮರಾಯರೊಬ್ಬರೇ.

ತಲೆಯಲ್ಲಿ ಫ್ಯಾನು

ಒಮ್ಮೆ ತೀನಂಶ್ರೀ ಎಂ.ಎ. ತರಗತಿಗೆ ಪಾಠ ಹೇಳುತ್ತಿದ್ದಾರೆ. ತಾವು ಮಾಡಿಕೊಂಡಿದ್ದ ಟಿಪ್ಪಣಿಗಳ ಕಡೆ ನೋಡಲು ಕೊಂಚ ತಲೆಬಾಗಿದ್ದಾರೆ. ಒಬ್ಬ ವಿದ್ಯಾರ್ಥಿ (ಶ್ರೀನಿವಾಸ ಶರ್ಮ) ಕಿಸಕ್ಕನೆ ನಕ್ಕ. ಪಕ್ಕದಲ್ಲಿ ಕೂತಿದ್ದ. ಅ. ರಾ. ಮಿತ್ರನಿಗೆ ಏನೋ ತೋರಿಸಿದ. ಅದನ್ನು ಉಳಿದವರೂ ನೋಡಿದರು. ಎಲ್ಲರ ಮುಖದಲ್ಲೂ ನಗು. ತೀನಂಶ್ರೀ ತಲೆ ಎತ್ತಿದಾಗ ಇಡೀ ತರಗತಿಯೇ

ನಗುಮುಖವಾಗಿದೆ. ಅವರಿಗೆ ಆಶ್ಚರ್ಯ, ಕುತೂಹಲ. "ಯಾಕೆ ನಗುತ್ತಿದ್ದೀರಿ?" ಎಂದು ಕೇಳಿದರು. ಯಾರಿಗೂ ಹೇಳುವ ಧೈರ್ಯವಿಲ್ಲ. ಮತ್ತೆ ಕೇಳಿದರು. ಉತ್ತರವಿಲ್ಲ. "ಏನಿದು, ಏನೋ ಹಾಸ್ಯ ಪ್ರಸಂಗ ನಡೆದಿದೆ ನೀವು ನಗಬಹುದು. ನನಗೆ ಹೇಳಬಾರದೆ? ನನಗೂ ನಗಲು ಅವಕಾಶ ಕೊಡಿ" ಎಂದರು. ಶರ್ಮ ಕೆಟ್ಟ ಧೈರ್ಯದಿಂದ "ಏನಿಲ್ಲ ಸಾರ್, ನೀವು ತಲೆತಗ್ಗಿಸಿದ್ದಿರಲ್ಲ. ಆಗ ಮೇಲೆ ತಿರುಗುತ್ತಿರೋ ಫ್ಯಾನಿನ ಚಿತ್ರ ನಿಮ್ಮ ತಲೆಯಲ್ಲಿ ತುಂಬ ಚೆನ್ನಾಗಿ ಕಾಣಿಸುತ್ತಿತ್ತು. ತಮಾಷೆ ಎನಿಸಿತು. ನಗು ಬಂತು ಸಾರ್" ಎಂದ. ನಮಗೆಲ್ಲ ಗಾಬರಿ! ಈ ತಲೆಹರಟೆ ಶರ್ಮ ಹೇಳುತ್ತಿರುವುದೇನು? ನಿಮ್ಮ ತಲೆ ಬೋಳು ಅಂತ ತಾನೆ? ಭಾಷಾಶಾಸ್ತ್ರದ ತರಗತಿಯಲ್ಲಿ ಗಂಭೀರವಾಗಿ ಪಾಠ ಕೇಳೋದು ಬಿಟ್ಟು ಇಂಥ ಕಮಂಗಿ ಕೆಲಸ ಮಾಡುವುದೆ? ಈಗ ಇವನ ಕಪಿಚೇಷ್ಟೆಗೆ ತಕ್ಕ ಪೂಜೆ ಆಗುತ್ತೆ ಅನ್ನಿಸಿತು ನಮಗೆ. ಒಂದು ಸೆಕೆಂಡು ಎಲ್ಲರ ಮುಖ ಗಂಭೀರ. ಆದರೆ ಶರ್ಮನ ಮಾತಿನ ಅರ್ಥ ಹೊಳೆಯಿತೋ ಇಲ್ಲವೋ ತೀನಂಶ್ರೀ ಹೋ ಅಂತ ಜೋರಾಗಿ ನಗಲು ಪ್ರಾರಂಭಿಸಿದರು. ತಲೆ ಮುಟ್ಟಿ ಮುಟ್ಟಿ ನೋಡಿಕೊಂಡು ನಕ್ಕರು. ಇಡೀ ತರಗತಿಯೇ ನಗುವಿನಲ್ಲಿ ಮುಳುಗಿ ಹೋಯಿತು!

ತೀನಂಶ್ರೀ ತುಂಬ ಗಂಭೀರ ಸ್ವಭಾವದವರು. ಆದರೆ ಸಂದರ್ಭಗಳಲ್ಲಿ ಅಷ್ಟೇ ವಿನೋದಶೀಲರು. ತಮ್ಮನ್ನೇ ಗೇಲಿಗೆ ಸಿಗಿಸಿಕೊಂಡು ನಗಬಲ್ಲ ಮುಳ್ಳಿಲ್ಲದ ವಿನೋದ ಅವರದ್ದು. ಒಮ್ಮೆ ಭಾಷಾಶಾಸ್ತ್ರದ ತರಗತಿ ನಡೆಯುತ್ತಿದೆ. ಒಂದು ಭಾಷೆ ಮಾತನಾಡುವ ಜನ ಬೇರೆ ಭಾಷೆಯೊಂದನ್ನು ಕಲಿತು ಬಳಸುವಾಗ ಆ ಭಾಷೆಯ ವರ್ಣಗಳ ಉಚ್ಚಾರಣೆಯಲ್ಲಿ ಎಷ್ಟೊಂದು ತಪ್ಪಾಗುತ್ತದೆ ಎನ್ನುವುದನ್ನು ತೀನಂಶ್ರೀ ಹೇಳುತ್ತಿದ್ದಾರೆ. "ಇಂಗ್ಲಿಷಿನ V ಎಂಬ ಅಕ್ಷರ ತೆಗೆದುಕೊಳ್ಳಿ. ನಾವು ಅದನ್ನು ನಮ್ಮ 'ವ' ಕಾರಕ್ಕೆ ಪೂರ್ತಿ ಸಮ ಎನ್ನುವಂತೆ ಉಚ್ಚರಿಸುತ್ತೇವೆ, ಅದು ತಪ್ಪು. ಅದನ್ನು ಹೇಳುವಾಗ ಮೇಲಿನ ಹಲ್ಲು ಕೆಳತುಟಿಗೆ ಕೊಂಚ ತಾಗಬೇಕು, F ಎಂಬ ಅಕ್ಷರ ಉಚ್ಚರಿಸುವಾಗ ಮಾಡುವ ರೀತಿಯಲ್ಲಿ. ನಿದರ್ಶನಕ್ಕೆ 'ಲವ್' ಎಂಬ ಪದ ನೋಡಿ. ಅದನ್ನು ಹೇಗೋ ಹೇಳುವುದಲ್ಲ, ತುಟಿ ಕಚ್ಚಿ ಹೇಳಬೇಕು" ಎಂದರು. ತರಗತಿಯಲ್ಲಿ 'ಆಹಾ' 'ಓಹೋ' ಎಂಬ ಉದ್ಗಾರ, ಗುಸುಗುಸು, ನಗು ಇತ್ಯಾದಿ! ತಮ್ಮ ಅರಿವಿಲ್ಲದೆಯೇ ತಮ್ಮ ಮಾತಿಗೆ ಮೂಡಿದ ಹೊಸ ಅರ್ಥ ಕೂಡಲೇ ತೀನಂ ಅವರಿಗೆ ಹೊಳೆದು ಹೋಯಿತು. ಅವರು ನಗುತ್ತಾ "ಚೆನ್ನಾಯಿತು ಚೆನ್ನಾಯಿತು. ಇದು ಭಾಷಾಶಾಸ್ತ್ರದ ತರಗತಿ. ಕಾವ್ಯ ಮೀಮಾಂಸೆಯದಲ್ಲ. ಇಲ್ಲಿ ಮಾತಿಗೆ ಧ್ವನಿ ಹುಡುಕುತ್ತಾರಾ? 'ನ ಸರ್ವತ್ರ ಧ್ವನಿರಾಗಿಣಾ ಭವಿತವ್ಯಂ' (ಎಲ್ಲ ಕಡೆ ಧ್ವನಿ ಹುಡುಕಬಾರದು) ಅಂತ ಅಭಿನವಗುಪ್ತ ಹೇಳಿಲ್ಲವೆ? ಎಲ್ಲ ಆಗಲೇ

ಮರೆತುಹೋಯಿತೆ?" ಅಂತ ತಮಾಷೆಯಾಗಿ ತಮ್ಮನ್ನು ಸಮರ್ಥಿಸಿಕೊಂಡರು. ಆದರೂ ಶಿಷ್ಯರ ಧ್ವನಿಗ್ರಹಣ ಸಾಮರ್ಥ್ಯವನ್ನು ಅವರು ಮೆಚ್ಚಿಕೊಂಡದ್ದು ಅವರ ನಗುಮುಖದಲ್ಲಿ ಎದ್ದು ಕಾಣುತ್ತಿತ್ತು.

ಮದಿಸಿದ ಹೂಣನ ಕ್ಷೌರಿತ ಕೆನ್ನೆ

ಕಾವ್ಯಮೀಮಾಂಸೆಯ ಮತ್ತೊಂದು ತರಗತಿ. ಗುರುಗಳು ಮೀಮಾಂಸಕಾರ ಮಮ್ಮಟನ ಬಗ್ಗೆ ಹೇಳುತ್ತ 'ಸದ್ಯೋಮುಂಡಿತ ಮತ್ತಹೂಣ ಚಬುಕ ಪ್ರಸ್ಪರ್ಧಿ ನಾರಂಗಿತಂ' ಎಂಬ ಅವನ ವಾಕ್ಯವನ್ನು ಉದ್ಧರಿಸಿದರು. ಕೊಂಚ ಹಳದಿ ಕೆಂಪು ಮಿಶ್ರಿತವಾದ ಆ ಕಿತ್ತಳೆ ಹಣ್ಣು ಆಗತಾನೆ ಮುಖಕ್ಷೌರ ಮಾಡಿದ್ದ, ಮದಿಸಿದ ಹೂಣನ ಕೆನ್ನೆಯೊಡನೆ ಸ್ಪರ್ಧಿಸುತ್ತಿತ್ತು ಎನ್ನುವುದು ಆ ಮಾತಿನ ಅರ್ಥ. ತೀನಂಶ್ರೀ ಅದನ್ನು ವಿವರಿಸಲು ಹೋದಾಗ ನಮಗೆಲ್ಲ ನಗು. ಅದಕ್ಕೆ ವಿವರಣೆ ಯಾಕೆ ಬೇಕು? ಮದಿಸಿದ ಹೂಣನ ಕೆನ್ನೆಯನ್ನು ನಾವು ಕಷ್ಟಪಟ್ಟು ಕಲ್ಪಿಸಿಕೊಳ್ಳಬೇಕಾದ ಅಗತ್ಯವೇ ಇರಲಿಲ್ಲ. ಗುರುಗಳೇ ಎದುರಿಗಿದ್ದರು! ವಸ್ತು ಎದುರಿಗೆ ಇರುತ್ತ ವ್ಯಾಖ್ಯಾನ ಯಾಕೆ ಬೇಕು? ಇಂಥ ಸಂದರ್ಭಗಳಲ್ಲಿ ನಾವು ನಕ್ಕಾಗ ತೀನಂಶ್ರೀ ಅನಪೇಕ್ಷಿತವಲ್ಲದ ಒಂದು ಬಗೆಯ ಮುಜುಗರ ಪೇಚುಗಳಿಗೆ ಸಿಕ್ಕಂತೆ ತೋರುತ್ತಿದ್ದರು. ಶೃಂಗಾರ ರಸದ ಯಾವುದಾದರೊಂದು ಭಾಗವನ್ನು ಹೇಳಬೇಕಾಗಿ ಬಂದರೆ "ಇದು ಪ್ರೌಢವಾದ ತರಗತಿ. ಏನನ್ನೂ ಗಂಭೀರವಾಗಿ ಸ್ವೀಕರಿಸಬಲ್ಲ ವಿದ್ಯಾರ್ಥಿಗಳು ನೀವು. ಇದನ್ನು ಇಲ್ಲಿ ಹೇಳಬಹುದು." ಅಂತೆಲ್ಲ ಮುನ್ನುಡಿ ಹಾಕಿ ಆ ಭಾಗವನ್ನು ವಿವರಿಸುತ್ತಿದ್ದರು. ಈ ಪೀಠಿಕೆ ಶುರುವಾದೊಡನೆ ನಮಗೆ ಗೊತ್ತು ಈಗ ಏನೋ ಸ್ವಾರಸ್ಯವಾದದ್ದು ಹೊರಡುತ್ತದೆ ಅಂತ. ನಾವೆಲ್ಲ ಸುಳ್ಳೇ ಮುಖವನ್ನು ಗಂಭೀರವಾಗಿಸಿಕೊಂಡು ಅರುವತ್ತು ವರ್ಷದವರ ಮರ್ಯಾದೆಯ ಕಳೆಯನ್ನು ಮುಖದಲ್ಲಿ ಮೂಡಿಸಿಕೊಂಡು ಕೂರುತ್ತಿದ್ದೆವು. ಹಾಗೂ ನಮ್ಮ ನಟನೆ ಒಂದೊಂದು ಸಲ ಬಯಲಾಗಿ ಬಿಡುತ್ತಿತ್ತು.

ನಾನು ಹೇಳುತ್ತಿರುವ ದಿನಗಳಲ್ಲಿ (೧೯೫೮-೬೧) ತೀನಂಶ್ರೀ ಇದ್ದದ್ದು ಕುಕ್ಕರಹಳ್ಳಿ ಕೆರೆಯ ಪಕ್ಕದಲ್ಲಿದ್ದ ಪ್ರೊಫೆಸರರ ವಸತಿಗೃಹದಲ್ಲಿ. ಅದು ಭಾರಿ ಬಂಗಲೆ. ಮಹಡಿಯ ಮೇಲೆ ವಿಶಾಲವಾದ ಬಿಸಿಲಮಚ್ಚು. ಬೇಸಿಗೆ ಸಂಜೆಯ ಹಿತವಾದ ಗಾಳಿಯಲ್ಲಿ ತೀನಂಶ್ರೀ ಅಲ್ಲಿ ತಮ್ಮ ವಿದ್ಯಾರ್ಥಿಗಳನ್ನು, ಸಹೋದ್ಯೋಗಿಗಳನ್ನು ಕರೆದು ಹರಟೆಗೋಷ್ಠಿ ಏರ್ಪಡಿಸುತ್ತಿದ್ದರು. ಇಪ್ಪತ್ತೈದು ಮೂವತ್ತು ಜನ ಸೇರುತ್ತಿದ್ದರು. ಇಂಥ ಗೋಷ್ಠಿಗಳೆಂದರೆ ಅವರಿಗೆ ಪ್ರಿಯ. ಅವರೇನೂ ಶ್ರೀಮಂತರಲ್ಲ. (ನಿವೃತ್ತರಾದಾಗಲೂ ಅವರಿಗೆ ಸ್ವಂತ ಮನೆ ಇರಲಿಲ್ಲ). ಆದರೂ ಅದ್ದೂರಿಯಾದ, ಯಥೇಷ್ಟ ಪ್ರಮಾಣದ ಉಪಾಹಾರ, ಹಣ್ಣು ಕಾಫಿಗಳ

ಏರ್ಪಾಟು ಮಾಡಿರುತ್ತಿದ್ದರು. ಅವರ ಪತ್ನಿ ಜಯಲಕ್ಷ್ಮಮ್ಮ, ಮಗಳು ನಾಗರತ್ನ, ಮಗ ನಾಗಭೂಷಣ ಎಲ್ಲರೂ ಸಂಭ್ರಮದಿಂದ ಓಡಾಡುತ್ತ ಗೋಷ್ಠಿಯಲ್ಲಿ ಬೆರೆಯುತ್ತಿದ್ದರು. ನಮಗೆ ಪಾಠ ಹೇಳುತ್ತಿದ್ದ ಅಧ್ಯಾಪಕರೆಲ್ಲ ತಮ್ಮ ಎಂದಿನ ಗಾಂಭೀರ್ಯ ಬದಿಗಿಟ್ಟು ಯುವಕರ ಹಾಗೆ ವರ್ತಿಸುತ್ತಿದ್ದರು. ಅದನ್ನು ನೋಡಿ ನಮಗೆಲ್ಲ ಆಶ್ಚರ್ಯ, ಸಂತೋಷ. ಪರಮೇಶ್ವರ ಭಟ್ಟರು 'ಯಕ್ಷಗಾನದ ಅರ್ಥಧಾರಿಯ ಕೂಗುಮಾತು', 'ಇಂಗ್ಲಿಷ್ ಮೇಸ್ಟರ ಕಾಂಪೊಸಿಷನ್ ಕ್ಲಾಸ್'ಗಳನ್ನು ಅಭಿನಯಸಿ ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತಿದ್ದರು. ಸುಜನಾ, ಪುತಿನ ಅವರ 'ಶರಣೆನುವೆಂ', 'ನಿಲ್ಲಿಸದಿರು ವನಮಾಲೀ' ಇತ್ಯಾದಿ ಕವಿತೆಗಳನ್ನು ಹಾಡುತ್ತಿದ್ದರು. ಬೆಳಕು ಇಂಗುತ್ತ, ಕತ್ತಲಿಳಿಯುತ್ತ ತಂಪಾದ ಗಾಳಿ ಹಬ್ಬುತ್ತಿರುವ ಆ ಹೊತ್ತಿನಲ್ಲಿ ಇವೆಲ್ಲ ತುಂಬ ಹಿತವಾಗಿರುತ್ತಿದ್ದವು. ಕವಿ ಪುತಿನ ಅವರ 'ಮಲೆದೇಗುಲ' ಕವನ ಸಂಗ್ರಹದ ಅನೇಕ ಕವಿತೆಗಳನ್ನು ಕವಿಯ ಮುಖದಿಂದಲೇ ವಾಚನ ಮಾಡಿಸುತ್ತ, ಅವುಗಳನ್ನು ಕುರಿತು ಚರ್ಚೆ ನಡೆಸುತ್ತ ಒಂದು ಕಾರ್ಯಕ್ರಮ ಸುಮಾರು ಎರಡೂವರೆ ಮೂರು ಗಂಟೆ ನಡೆದದ್ದು ನನಗೆ ನೆನಪಿದೆ. ಬರೆಯುವ ಕವಿಯನ್ನು ಮತ್ತು ಕೇಳುವ ಸಹೃದಯರನ್ನು ಹೀಗೆ ಒಟ್ಟುಗೂಡಿಸಿ ಸಂತೋಷದ ವಾತಾವರಣ ಕಟ್ಟುತ್ತಿದ್ದ ತೀನಂಶ್ರೀ ಬರೆಹದಲ್ಲಿ ಮಾತ್ರವಲ್ಲ ನಡವಳಿಕೆಯಲ್ಲೂ ಇಬ್ಬರ ನಡುವಿನ ಸೇತುವೆಯಾಗಿದ್ದರು. ನಿಜವಾದ ವಿಮರ್ಶಕ ಹೀಗೇ ಇರುತ್ತಾನಷ್ಟೆ? ಸಾಹಿತ್ಯವನ್ನು ಪೋಷಿಸಿ ಬೆಳೆಸುವ ಒಂದು ಪ್ರವೃತ್ತಿ ಅವನಲ್ಲಿ ಸಹಜವಾಗಿ ಇರುತ್ತದೆ. "ನನ್ನ ಕವಿತೆಗಳನ್ನು ಹೆತ್ತ ತಾಯಿ ನಾನಾದರೂ ಅವುಗಳನ್ನು ಪೋಷಿಸಿ ಬೆಳೆಸಿದ ಸಾಕುತಾಯಿ ಶ್ರೀಕಂಠಯ್ಯನವರು" ಎಂದು ಪುತಿನ ಹೇಳಿರುವುದು ತೀನಂಶ್ರೀಯವರ ಈ ಗುಣಕ್ಕೆ ಸಾಕ್ಷಿ.

'ಭೂಮಿಗೀತ'ದ ಮುನ್ನುಡಿ

ಅದು ನವ್ಯಕಾವ್ಯದ ಹರೆಯದ ಕಾಲ. ಆಗಷ್ಟೇ ಅಡಿಗರ 'ಭೂಮಿಗೀತ' ಹೊರಬಂದಿತ್ತು. ವಿದ್ಯಾರ್ಥಿಗಳಾದ ನಾವೆಲ್ಲ ನವ್ಯದ ಪರವಾಗಿದ್ದರೆ ಕನ್ನಡ ವಿಭಾಗದ ಅಧ್ಯಾಪಕವರ್ಗ ನವೋದಯದ ಪ್ರಶಂಸನಾಕಾರರಿಂದ ತುಂಬಿಹೋಗಿತ್ತು. ನವ್ಯರನ್ನು ಹೀಗಳೆದು ಮಾತನಾಡುವುದು ಒಂದು ಪದ್ಧತಿಯಾಗಿತ್ತು. ಒಬ್ಬ ಅಧ್ಯಾಪಕರಂತೂ 'ಎಂಥ ಹುಚ್ಚು ಜನರು ಇವರು ಕೊಚ್ಚೆಯನ್ನೆ ಕಾಂಬರು' ಎಂದು ಅವರನ್ನು ನಿಂದಿಸಿ ಪದ್ಯ ಬರೆದದ್ದೂ ಉಂಟು. ಎಂ. ಎ. ತರಗತಿಯ ಸೆಮಿನಾರ್‌ನಲ್ಲಿ ಕರುಣಾಕರನ್ ಎಂಬ ವಿದ್ಯಾರ್ಥಿ ನವ್ಯಕಾವ್ಯದ ಸಮರ್ಥನೆ ಮಾಡಿ ಒಂದು ಪ್ರಬಂಧ ಓದಿದಾಗ ಮೂರು ಗಂಟೆ ಬಿಸಿಬಿಸಿ ಚರ್ಚೆ ನಡೆದು ಕಡೆಗೂ ಸಭೆ ಗೊಂದಲದಲ್ಲಿ ಕೊನೆಯಾಗಿತ್ತು. ತೀನಂಶ್ರೀ ಕೂಡ ಹೊಸ ಕಾವ್ಯಕ್ಕೆ

ವಿರೋಧವಾದವರಿರಬಹುದು ಎಂಬ ಊಹೆ ನಮಗಿತ್ತಾದರೂ ಅವರ ಅಭಿಪ್ರಾಯ ತಿಳಿಯುವ ಅವಕಾಶವೇ ಒದಗಿರಲಿಲ್ಲ. ಒಂದು ಸಂಜೆ ಅವರ ಮನೆಯಲ್ಲಿ ನಾಲ್ಕೈದು ಜನ ಕನ್ನಡ ಅಧ್ಯಾಪಕರು ಕೂತು ಮಾತನಾಡುತ್ತಿರುವಾಗ ಒಬ್ಬರು ಭೂಮಿಗೀತ ಪುಸ್ತಕದ ಮಾತೆತ್ತಿದರು. ಆ ಪುಸ್ತಕಕ್ಕೆ ಅನಂತಮೂರ್ತಿ ಬರೆದ ಮುನ್ನುಡಿಯನ್ನು ಕುರಿತು ಬಹಳ ಲಘುವಾಗಿ ಮಾತನಾಡಿದರು. ಆ ಮುನ್ನುಡಿ ಸತ್ವಹೀನವಾದ ಬರೆಹದ ಪೊಳ್ಳು ಸಮರ್ಥನೆ ಎಂಬ ಅಭಿಪ್ರಾಯ ಅವರ ಮಾತಿನಿಂದ ಹೊರಡುವಂತಿತ್ತು. ಕೂಡಲೇ ತೀನಂಶ್ರೀ ಮುಖ ಕೆಂಪಾಗಿ ಹೋಯಿತು. ಅವರು ತೀರ ಗಂಭೀರವಾದ ದನಿಯಲ್ಲಿ "ನಿಮಗೆ ಹಾಗೆನ್ನಿಸಿತೇನೋ. ಆದರೆ ನನಗೆ ಅದು ಇಷ್ಟವಾಯಿತು. ಆತ ಬಹಳ ಸಮರ್ಥರಾಗಿ ಕಾಣುತ್ತಾರೆ. ಕಾವ್ಯದ ಸ್ವರೂಪ ಕುರಿತು ಅವರು ಬರೆದ ಮಾತು ನನಗೆ ಪೂರ ಒಪ್ಪಿಗೆ. ಆದರೆ ಅಡಿಗರದ್ದೇ ತೊಂದರೆ. ಅವರ ಕವಿತೆಯಲ್ಲಿ ಉದ್ದಕ್ಕೂ ಮಿಂಚುವ ಸಾಲುಗಳಿರುತ್ತವೆ. ಆದರೆ ಇಡೀ ಕವನಕ್ಕೆ ವಾಚ್ಯಾರ್ಥದ ಒಂದು ಪೂರ್ಣ ನೆಲೆಗಟ್ಟು ಇರುವುದಿಲ್ಲ. ಇಷ್ಟೇ ನನ್ನ ಆಕ್ಷೇಪ" ಎಂದರು. ಪುಸ್ತಕದ ಪ್ರಸ್ತಾಪ ಮಾಡಿದವರ ಮುಖ ಇಳಿದುಹೋಯಿತು. ಅನಂತಮೂರ್ತಿ ಆಗಿನ್ನೂ ಅಷ್ಟು ಹೆಸರಾಗಿರಲಿಲ್ಲ. ತೀನಂಶ್ರೀಗೆ ಅವರ ನಿಕಟ ಪರಿಚಯ ಇರಲಿ, ಸಾಮಾನ್ಯಪರಿಚಯ ಕೂಡ ಇದ್ದಿರಲಾರದು. ಅಲ್ಲದೆ ತೀನಂಶ್ರೀಗಿಂತ ಅವರು ತುಂಬ ಚಿಕ್ಕ ವಯಸ್ಸಿನವರು. ಆದರೆ ಒಂದು ಬರೆಹ ಘನವಾದದ್ದು ಎನ್ನಿಸಿದರೆ ತೀನಂಶ್ರೀ ಕೂಡಲೆ ಅದರ ಪರ ನಿಂತುಬಿಡುತ್ತಿದ್ದರು. ಅಂಥದ್ದನ್ನು ಕುರಿತ ನಿಂದೆ ಅವರಿಗೆ ಸಹ್ಯವಾಗುತ್ತಿರಲಿಲ್ಲ.

ಒಮ್ಮೆ ತೀನಂಶ್ರೀ ಕನ್ನಡ ಶಬ್ದವೊಂದರ (ಬಹುಶಃ ವತ್ಸ, ಬಚ್ಚ ಇತ್ಯಾದಿ) ಬಗ್ಗೆ ಬೇಂದ್ರೆ ಮಾಡಿದ ಶಾಸ್ತ್ರಜಿಜ್ಞಾಸೆ ಪ್ರಸ್ತಾಪಿಸುತ್ತ "ಬೇಂದ್ರೆ ಶಾಸ್ತ್ರವಿಷಯದ ಚರ್ಚೆಗೂ ತುಂಬ ಊಹೆ ಕಲ್ಪನೆ ಬಳಸುತ್ತಾರೆ, ಜೊತೆಗೆ ವಿಚಿತ್ರ ತರ್ಕ ಬೆಳೆಸುತ್ತಾರೆ. ಕೇಳುತ್ತ ಕೂತರೆ ನಿಮ್ಮನ್ನು ಒಪ್ಪಿಸಿಯೂ ಬಿಡುತ್ತಾರೆ. ಎಷ್ಟೇ ಆಗಲಿ ಅವರು ಕವಿ. ಕವಿಗಳು ಶಾಸ್ತ್ರಾಧೀನರೆ? ಶಾಸ್ತ್ರವನ್ನೇ ಸೃಷ್ಟಿಸುವವರು" ಎಂದು ವಿನೋದವಾಗಿ ನುಡಿದರು. ನಗು ನಗುತ್ತಲೇ ಅವರು ಬೇಂದ್ರೆಯವರ ವ್ಯಾಖ್ಯಾನವನ್ನು ಬದಿಗೆ ಸರಿಸಿದರು. ಆದರೆ ಅವರು ಬೇಂದ್ರೆ ಬಗ್ಗೆ ಹೇಳಿದ ಮಾತು ಒಂದು ವಿನೋದದ ಪ್ರಸಂಗದಲ್ಲೇ ಆದರೂ ನೂರಕ್ಕೆ ನೂರು ನನ್ನ ಅನುಭವಕ್ಕೆ ಬಂತು.

ಬೇಂದ್ರೆ ಮಹಾರಾಜ ಕಾಲೇಜಿಗೆ ವಿಶೇಷ ಉಪನ್ಯಾಸಗಳ ಸಲುವಾಗಿ ಬಂದಿದ್ದರು. ತೀನಂ ಮನೆಯಲ್ಲೇ ಅವರ ವಾಸ್ತವ್ಯ. ಹಿಂದಿನ ದಿನ ನಾನು ಅವರಲ್ಲಿಗೆ ಹೋಗಿದ್ದಾಗ ಶ್ರೀಕಂಠಯ್ಯನವರು "ಭಟ್ಟ, ನಾಳೆ ಬೇಂದ್ರೆ ಬರುತ್ತಾರೆ. ಎರಡು ದಿನ ಇರುತ್ತಾರೆ. ನೀವೂ ಬಂದು ಜೊತೆಗೆ ಸ್ವಲ್ಪ ಕಾಲ ಕಳೆಯಿರಿ. ಬೇಂದ್ರೆ

ಅದ್ಭುತ ವ್ಯಕ್ತಿ. ಅವರನ್ನು ಹತ್ತಿರದಿಂದ ಕಾಣಬೇಕು" ಎಂದರು. ನಾನು ಬಹಳ ಖುಷಿಯಿಂದಲೇ "ಆಗಲಿ ಸಾರ್" ಅಂತ ಹೇಳಿ ಮಾರನೇ ದಿನ ಮಧ್ಯಾಹ್ನ ಅವರಲ್ಲಿಗೆ ಹೋದೆ.

ಕಚ್ಚೆ ಪಂಚೆ, ಕೊಳವಿ ಪಂಚೆ

ಮೂರ್ತಿರಾಯರು, ತೀನಂಶ್ರೀ, ನಂ. ಶಿವರಾಮ ಶಾಸ್ತ್ರಿ (?) ಕುಳಿತು ಬೇಂದ್ರೆ ಜೊತೆ ಹರಟೆ ಕೊಚ್ಚುತ್ತಿದ್ದರು. ನಾನೂ ಅವರ ಬಳಿ ಹೋಗಿ ಕೂತೆ. ಗುರುಗಳು ನನ್ನನ್ನು ಬೇಂದ್ರೆಗೆ ಪರಿಚಯಿಸಿದರು. 'ಈತನಿಗೆ ಕಾವ್ಯದಲ್ಲಿ ವಿಶೇಷ ಆಸಕ್ತಿ' ಎಂದೂ ಸೇರಿಸಿದರು. ಬೇಂದ್ರೆ ವಿನೋದವಾಗಿ "ಹುಡುಗಾ, ನಿನಗೆ ಕಾವ್ಯದಲ್ಲಿ ಆಸಕ್ತಿ ಈಗಲೂ ಉಳಿದಿದೆಯೋ ಅಥವಾ (ತೀನಂಶ್ರೀಯನ್ನು ತಮ್ಮ ಕೈಕೋಲಿನಿಂದ ತೋರಿಸುತ್ತ) ಈತನ ಭಾಷಾಶಾಸ್ತ್ರದ ಮಹಾಗ್ನಿಯಲ್ಲಿ ಎಲ್ಲ ದಗ್ಧವಾಗಿ ಹೋಯಿತೋ?" ಎಂದು ನಕ್ಕರು. ನಾನು "ಎಲ್ಲಾದರೂ ಉಂಟೆ. ಅವರು ಕಾವ್ಯಮೀಮಾಂಸೆ ಬರೆದವರು. ಕಾವ್ಯದಲ್ಲಿ ನನಗಿದ್ದ ರುಚಿಯನ್ನು ಬೆಳೆಸಿದವರು" ಎಂದು ಮಾತು ಜೋಡಿಸಿದೆ. ಬೇಂದ್ರೆ "ಏನೋಪ್ಪ ನನಗೆ ನಂಬಿಕೆಯಿಲ್ಲ. ಕಾವ್ಯ ಇರಲಿ, ಈತನ ಶಾಸ್ತ್ರಜ್ಞಾನ ಕೂಡ ನನಗೆ ಅನುಮಾನದ್ದಾಗಿ ಕಾಣುತ್ತದೆ. ನೀನೇ ನೋಡು, ಕನ್ನಡ ಒಂದು ದ್ರಾವಿಡ ಭಾಷೆ, ತಮಿಳಿಗಿಂತ ಕೊಂಚ ನಂತರ ಬಂದದ್ದು. ಹೀಗೆ ಏನೇನೋ ಈತನ ತರ್ಕ. ಅದು ಎಲ್ಲಾದರೂ ಸಾಧ್ಯವೆ? ಕನ್ನಡ ಎಲ್ಲ ಭಾಷೆಗಿಂತ ಮೊದಲು ಹುಟ್ಟಿದ್ದಲ್ಲವೆ? ಜಗತ್ತಿನ ಮೊದಲ ಭಾಷೆಯೇ ಕನ್ನಡ" ಎಂದರು! ನಾನು ಅವಾಕ್ಕಾಗಿ ಗುರುಗಳ ಕಡೆ ನೋಡಿದೆ. ಅವರು ನಗುತ್ತ "ಗಾಬರಿಯಾಗಬೇಡಿ. ಅದಕ್ಕೆ ಸಮರ್ಥನೆ ಕೊಡಿ ಅನ್ನಿ. ಅದನ್ನೂ ಕೊಡುತ್ತಾರೆ. ಆಗಲೇ ಆಕಾಶ ಮಿಂಚತೊಡಗಿದೆ!" ಎಂದರು. ಬೇಂದ್ರೆ "ಓಹೋ ಇಷ್ಟು ಸರಳ ಸತ್ಯಕ್ಕೆ ಸಮರ್ಥನೆ ಬೇರೆ ಬೇಕಾ? ಆಯಿತು. ಈಗ ನೋಡಿ. ಕನ್ನಡದ ಯಾವುದೇ ಮುಖ್ಯವಾದ ಪದ ತೆಗೆದುಕೊಳ್ಳಿ. ಅದು ಕಕಾರದಿಂದಲೇ ಆರಂಭವಾಗುತ್ತೆ. ಆರಂಭದ ಭಾಷೆ ಕನ್ನಡವೇ ಅನ್ನೋದಕ್ಕೆ ಬೇರೆ ಆಧಾರ ಯಾಕೆ ಬೇಕು?" ಅಂದು ಬಿಟ್ಟರು! ಮೂರ್ತಿರಾಯರು ನಗುತ್ತ "ಎಲ್ಲಿ ಒಂದಿಷ್ಟು ಉದಾಹರಣೆ ಕೊಡಿಯಪ್ಪ" ಎಂದರು. ಬೇಂದ್ರೆ ಕೈಯಿಂದ ತಮ್ಮ ಮೈಯ ಒಂದೊಂದೂ ಅಂಗ ಮುಟ್ಟಿ ತೋರಿಸುತ್ತ "ನೋಡಿ, ಇದು ಕತ್ತು, ಹೌದೆ? ಇದು ಕಂಠ. ಇದು ಕಣ್ಣು. ಇದು ಕಿವಿ. ಇದು ಕೂದಲು. ಇಗೋ ಇದು ಕೈ. ಇದು ಕಾಲು. ಇದು ಕೆನ್ನೆ. ಸಾಕೇ?" ಎಂದರು. ಮೂರ್ತಿರಾಯರು ಬೇಂದ್ರೆಯವರ ಉಪಾಯ ತಿಳಿದು ಅವರನ್ನು ಕೆಡವಲು ತಮ್ಮ ಸೊಂಟದ ಕಡೆ ಬೆರಳು ಮಾಡಿ "ಇದು?" ಅಂತ ಕೇಳಿದರು. ಬೇಂದ್ರೆ ಈಗ ಸಿಕ್ಕಿಬಿದ್ದರು ಅಂತ ನಾವು ಅಂದುಕೊಳ್ಳುತ್ತಿರುವಂತೆಯೇ ಅವರು ತಮ್ಮ ಕೈಕೋಲಿನ

ತುದಿಯಿಂದ ಮೂರ್ತಿರಾಯರ ಸೊಂಟ ಚುಚ್ಚುತ್ತ "ಅದು ಕಟಿ ತಾನೆ" ಅಂದರು! ಕೂಡಲೆ ಮೂರ್ತಿರಾಯರು ಬೇಂದ್ರೆಯವರ ಪಂಚೆ ಕಡೆ ಬೆರಳು ಮಾಡಿದರು. "ಅದು ಕಚ್ಚೆ ಪಂಚೆ" ಎಂಬ ಉತ್ತರ ಬಂತು! ಮೂರ್ತಿರಾಯರು ತಮ್ಮ ಲುಂಗಿ ಕಡೆ ತೋರಿಸುತ್ತ "ಇದಕ್ಕೇನು ಹೇಳುತ್ತೀರಪ್ಪಾ?" ಎಂದರೆ ಬೇಂದ್ರೆ ಎಷ್ಟೂ ತಡವರಿಸದೆ "ಕೊಳವಿ ಪಂಚೆ" ಎಂದುಬಿಟ್ಟರು! ಅಷ್ಟು ಹೊತ್ತಿಗೆ ಕಾಫಿ ಬಂತು. ಬೇಂದ್ರೆ ಅದನ್ನು ತೆಗೆದುಕೊಳ್ಳುತ್ತ "ಇಗೋ, ಇದು ಕಪ್ಪು, ಇದು ಕಾಫಿ, ಇದರ ರುಚಿ ಕಹಿ" ಎಂದರು. ನಮಗೆಲ್ಲ ಹಿಡಿಸಲಾರದ ನಗು. ತೀನಂಶ್ರೀ ಮೂರ್ತಿರಾಯರನ್ನು ತಡಯುತ್ತ "ಯಾಕಪ್ಪ ಸುಮ್ಮನೆ ಆಯಾಸ ಮಾಡಿಕೊಳ್ಳುತ್ತೀರಿ? ಅವರ ಹತ್ತಿರ ವಾದಮಾಡಿ ಸರಸ್ವತಿ ಗೆದ್ದಾಳೆ?"ಎಂದರು. ಕಾಫಿ ಕುಡಿದ ಬೇಂದ್ರೆ ಕೈಕೋಲು ತಿರುವುತ್ತ ಬೀಸುತ್ತ ಯಾಕೋ ಹೊರಕ್ಕೆ ಹೋದರು. ತೀನಂಶ್ರೀ ನನ್ನ ಕಡೆ ತಿರುಗಿ "ನೋಡಿದಿರಾ ಬೇಂದ್ರೆಯನ್ನು? ಶಾಸ್ತ್ರದ ಭರ್ತ್ಸನೆ ಹೇಗಿದೆ? ಹೀಗೆ ವಿನೋದವಾಗಿ ಮಾತನಾಡುವಾಗಲೂ ಅವರು ಕವಿ ಎನ್ನುವುದು ಎಷ್ಟು ಚೆನ್ನಾಗಿ ವ್ಯಕ್ತವಾಗುತ್ತೆ! ಅವರು ಮಾತನ್ನು ಹೇಗೆ ಜಗಿಯುತ್ತಾರೆ, ಬಗೆಯುತ್ತಾರೆ, ತರ್ಕವನ್ನು ಹೇಗೆ ನೆಗೆಯುತ್ತಾರೆ – ಅದೂ ತರ್ಕದ ತೋರಿಕೆಯಲ್ಲೇ! ಈ ಬೇಂದ್ರೆ ನಮ್ಮ ಕಾಲದ ಒಂದು ಅದ್ಭುತ" ಎಂದರು.

ಕೊಡುಗೆಗಳು

ತೀನಂಶ್ರೀಯವರ ಬರವಣಿಗೆ ಪ್ರಮಾಣದಲ್ಲಿ ಮಿತವಾದದ್ದು. ಆದರೆ ದೊಡ್ಡ ಆಕಾಶದ ಪ್ರತಿಬಿಂಬ ಪುಟ್ಟ ಕೊಳದೆದೆಯಲ್ಲಿ ಪ್ರತಿಫಲಿಸುವಂತೆ ಅವರ ವಿದ್ವತ್ತು ಪ್ರತಿಭೆಗಳು ಅಕ್ಷರಲ್ಲೇ ಢಾಳವಾಗಿ ಕಾಣುತ್ತವೆ. ಅವರ ಬರಹಗಳಲ್ಲಿ ಮುಖ್ಯವಾದುವೆಂದರೆ ಭಾರತೀಯ ಕಾವ್ಯಮೀಮಾಂಸೆ, ಕಾವ್ಯ ಸಮೀಕ್ಷೆ, ಸಮಾಲೋಕನ, ಪಂಪ, ಒಲುಮೆ, ನಂಟರು, ರಾಕ್ಷಸನ ಮುದ್ರಿಕೆ ಮತ್ತು ಬಿಡಿಮುತ್ತು. ಗದಾಯುದ್ಧ ಮತ್ತು ನಂಬಿಯಣ್ಣನ ರಗಳೆ ಎಂಬ ಎರಡು ಪ್ರಾಚೀನ ಕಾವ್ಯಗಳನ್ನು ಅವರು ಅತ್ಯುತ್ಕೃಷ್ಟ ರೀತಿಯಲ್ಲಿ ಸಂಗ್ರಹಿಸಿ ಸಂಪಾದಿಸಿದ್ದಾರೆ. ಶಾಲಾ ಮಕ್ಕಳಿಗಾಗಿ ಅವರು ಬರೆದ ಕನ್ನಡ ಮಾಧ್ಯಮ ವ್ಯಾಕರಣ ಕೂಡ ಹಲವಾರು ಬಾರಿ ಮುದ್ರಣಗೊಂಡ, ಹೊಸಗನ್ನಡದ ಒಂದು ಸರಳ ಅಧಿಕೃತ ವ್ಯಾಕರಣ.

'ಒಲುಮೆ' ಕನ್ನಡದ ಮೊದಲ ಪ್ರೇಮಕವನಗಳ ಸಂಗ್ರಹ. ಅಷ್ಟಕ್ಕೇ ಅದಕ್ಕೆ ಒಂದು ಐತಿಹಾಸಿಕ ಮಹತ್ವವಿದೆ. ಅಮರುಶತಕ, ಗಾಥಾಸಪ್ತಶತಿಗಳಂಥ ಪ್ರಾಚೀನ ಭಾರತೀಯ ಶೃಂಗಾರ ಕೃತಿಗಳಿಂದ ಪ್ರೇರಣೆ ಪಡೆದು ಸೃಷ್ಟಿಯಾದ ಕೃತಿ ಅದು. ಈಗಲೂ ನಮ್ಮ ಮನಸ್ಸನ್ನು ಹಿಡಿದು ನಿಲ್ಲಿಸಬಲ್ಲ ಕೆಲವು ಉಜ್ವಲ ಶೃಂಗಾರ ಚಿತ್ರಗಳು ಅದರಲ್ಲಿವೆ. "ಒಲುಮೆಯದು ಶುಚಿಯಾದ ವಾಣಿ ಹಿತವಾದ ರೀತಿ"

ಎಂದು ಪ್ರೇಮಕವನಗಳಿಗೆ ಹೆಸರಾದ ಕೆ. ಎಸ್. ನರಸಿಂಹಸ್ವಾಮಿಯವರೇ ಅದನ್ನು ಪ್ರಶಂಸಿಸಿದ್ದಾರೆ.

'ರಾಕ್ಷಸನ ಮುದ್ರಿಕೆ' ವಿಶಾಖದತ್ತ ಬರೆದ ಮುದ್ರಾ ರಾಕ್ಷಸ ಎಂಬ ಪ್ರಾಚೀನ ಸಂಸ್ಕೃತ ನಾಟಕದ ರೂಪಾಂತರ. ನಾಟಕದ ಆಶಯ ತುಂಬ ಚುರುಕಾಗಿ, ಮೊನೆಯಾಗಿ ಹೊಮ್ಮುವಂತೆ ಮಾಡಲು ತೀನಂ ಅಲ್ಲಲ್ಲಿ ಕೊಂಚ ಸ್ವಾತಂತ್ರ್ಯ ವಹಿಸಿದ್ದಾರೆ. 'ಬಿಡಿಮುತ್ತು' ಸಂಸ್ಕೃತದ ೨೧೫ ಮುಕ್ತಕಗಳ ನೇರ, ಅಪ್ಪಟ ಅನುವಾದ. ನಾಲ್ಕು ಅಥವಾ ಎಂಟು ಸಾಲುಗಳ ಒಂದೊಂದು ಮುಕ್ತಕವೂ ತನಗೆ ತಾನೆ ಒಂದು ಸ್ವತಂತ್ರ ಕವನದಂತಿದೆ. "ಎರಡಿಂಚಿನ ದಂತಖಂಡದ ಮೇಲೆ ಸೂಕ್ಷ್ಮಾಕಾರದಲ್ಲಿ ಸೊಗಸಾಗಿ ಚಿತ್ರಿಸಿದ ಒಂದು ವರ್ಣಚಿತ್ರದಂತಿದೆ." ಈ ಎರಡೂ ತೀನಂಶ್ರೀಯವರ ಭಾಷಾಂತರ ಶಕ್ತಿಗೆ ಪ್ರೋಜ್ವಲವಾದ ಸಾಕ್ಷಿಗಳು ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ.

'ನಂಟರು' ವಿಶಿಷ್ಟ ಪ್ರಬಂಧಗಳ ಸಂಕಲನ, ಲಲಿತ ಪ್ರಬಂಧ, ಗಂಭೀರ ಪ್ರಬಂಧ, ಪ್ರವಾಸಿಗನ ಪತ್ರ – ಇಂಥ ಬಗೆ ಬಗೆ ಬರೆಹ ಇಲ್ಲಿವೆ. ಬಹುಶ್ರುತನೊಬ್ಬನ ವಿದ್ವತ್ತು ಸೃಜನಶೀಲ ಪ್ರತಿಭೆ ಎರಡೂ ಇಲ್ಲಿ ಸ್ನೇಹದಿಂದ ಕೈಕುಲುಕಿ ದುಡಿದಿವೆ. 'ಕಾವ್ಯಸಮೀಕ್ಷೆ' ಎಂಬ ಗ್ರಂಥ ಕಾಳಿದಾಸ, ಜನ್ನ, ಕುಮಾರವ್ಯಾಸರಂಥ ದೊಡ್ಡ ಲೇಖಕರ ಬರೆಹಗಳನ್ನು ಕುರಿತ ರಸಾತ್ಮಕ ವಿಮರ್ಶೆಗಳ ಸಂಗ್ರಹ. 'ಸಮಾಲೋಕನ'ದಲ್ಲಿ ಇಂಥ ವಿಮರ್ಶೆಗಳ ಜೊತೆಗೆ ಛಂದಸ್ಸು, ಭಾಷಾಶಾಸ್ತ್ರಗಳಿಗೆ ಸಂಬಂಧಿಸುವ ತುಂಬ ಬೆಲೆಯುಳ್ಳ ಶಾಸ್ತ್ರ ಬರೆಹಗಳೂ ಇವೆ. ಪಂಪ ಎಂಬ ಚಿಕ್ಕ ಹೊತ್ತಗೆಯಂತೂ ಸಾಮಾನ್ಯರಿಗೆ ಬಲ್ಲಿದರಿಗೆ ಇಬ್ಬರಿಗೂ ಪ್ರಿಯವಾಗಬಲ್ಲ, ಪ್ರೌಢ ಕವಿಯೊಬ್ಬನ ಮತ್ತು ಅವನ ಕಾವ್ಯದ ಸಂಕ್ಷಿಪ್ತ ವಿಮರ್ಶನ ಚಿತ್ರ.

ಭಾರತೀಯ ಕಾವ್ಯಮೀಮಾಂಸೆ ತೀನಂಶ್ರೀಯವರ ಕೃತಿ ಸಮೂಹದಲ್ಲೇ ಅತ್ಯಂತ ಉನ್ನತವಾದದ್ದು; ಅವರ ವಿದ್ವತ್ ವ್ಯಕ್ತಿತ್ವದ ಮೇಲೆ ಸದಾಕಾಲ ಪ್ರಕಾಶ ಚೆಲ್ಲುತ್ತ ನಿಂತಿರುವ ನಂದಾದೀಪ. ಸಂಸ್ಕೃತ ಕಾವ್ಯಜಿಜ್ಞಾಸುಗಳು ಒಂದೂವರೆ ಸಹಸ್ರ ವರ್ಷಗಳಷ್ಟು ಹಿಂದಿನಿಂದ ನಡೆಸಿಕೊಂಡು ಬಂದ ಕಾವ್ಯಚರ್ಚೆಯ ಸಾರಭೂತವಾದ ಚರಿತ್ರೆಯನ್ನು ಭಾರತೀಯ ಕಾವ್ಯಮೀಮಾಂಸೆ ನೀಡುತ್ತದೆ. ಅಲಂಕಾರ, ಗುಣ, ರೀತಿ, ಔಚಿತ್ಯ, ಧ್ವನಿ, ರಸ – ಹೀಗೆ ಸಂಸ್ಕೃತ ಕಾವ್ಯಚರ್ಚೆ ಹಾದುಬಂದ ಬೇರೆ ಬೇರೆ ಪ್ರಸ್ಥಾನಗಳನ್ನು ಇದು ಸೊಗಸಾಗಿ, ಸಂಗ್ರಹವಾಗಿ ಮಂಡಿಸುತ್ತದೆ. ಜೊತೆಗೆ ಕವಿ, ಸಹೃದಯ, ಪ್ರತಿಭೆ, ಕವಿಸೃಷ್ಟಿ, ಕಾವ್ಯಪ್ರಯೋಜನ, ಇಂಥ ವಿಷಯಗಳನ್ನು ಕುರಿತು ವಿಷಯಭರಿತವಾದ, ಹಾಗೆಯೇ ಹೃದ್ಯವಾದ

ಚರ್ಚೆ ಇದೆ. ಕಡೆಯಲ್ಲಿ ಕನ್ನಡದಲ್ಲಿ ಹಿಂದಿನಿಂದ ಬೆಳೆದುಬಂದ ಕಾವ್ಯಚರ್ಚೆಗಳ ಬಗ್ಗೆಯೂ ಒಂದು ಅಧ್ಯಾಯವಿದೆ. ಸಾರರೂಪವಾದ ವಿಷಯಮಂಡನೆ, ಖಚಿತವಾದ ನಿರೂಪಣೆ, ರಸಾತ್ಮಕವಾದ ನಿದರ್ಶನ ವಿಧಾನ, ಸೃಜನಾತ್ಮಕವಾದ ವ್ಯಾಖ್ಯಾನ ಇವುಗಳಿಂದಾಗಿ ಈ ಕೃತಿ ಈವರೆಗಿನ ಇಂಥ ಶಾಸ್ತ್ರಗ್ರಂಥಗಳಲ್ಲೇ ಅನುಪಮವಾಗಿದೆ. ಈ ಕೃತಿ ಪ್ರಕಟವಾದದ್ದು ೧೯೫೨ರಲ್ಲಿಯಾದರೂ ಇದರ ಹಸ್ತಪ್ರತಿ ಸಿದ್ಧವಾದದ್ದು ೧೯೪೨ರಲ್ಲಿಯೇ. ಆಗ ತೀನಂಶ್ರೀಯವರ ವಯಸ್ಸು ಕೇವಲ ಮೂವತ್ತಾರು!

ಇದಲ್ಲದೆ ಕನ್ನಡ ಸಾಹಿತ್ಯ ಪರಿಷತ್ತು ಕೈಗೆತ್ತಿಕೊಂಡ ಕನ್ನಡ ನಿಘಂಟಿನ ಕೆಲಸಕ್ಕೆ ತೀನಂಶ್ರೀ ತಮ್ಮ ಶಕ್ತಿಯನ್ನೆಲ್ಲ ಧಾರೆಯೆರೆದರು. ಅದು ಮೇಲುನೋಟಕ್ಕೆ ತಿಳಿಯದಂಥದು. ಅವರ ಜೀವನದ ಕಡೆಯ ದಶಕದ ಬಹುಭಾಗ ನಿಘಂಟು ಕೆಲಸಕ್ಕೆ ಸಂದಾಯವಾಯಿತು ಎಂದರೂ ತಪ್ಪಿಲ್ಲ. ಬೊಬ್ಬೆ ಹಾಕದೆ, ಅಬ್ಬರ ಮಾಡದೆ, ಯಾವ ಸದ್ದೂ ಇಲ್ಲದೆ ಅವರು ಕನ್ನಡಕ್ಕೆ ದುಡಿದರು. ತಮ್ಮ ದುಡಿಮೆ ತಮ್ಮ ಹೆಸರಿಗೇ ಬದ್ಧವಾಗಬೇಕು. ಅದು ಜನಕ್ಕೆಲ್ಲ ತಿಳಿಯಬೇಕು ಎಂಬ ತಪ್ಪಲ್ಲದ ಸ್ವಾರ್ಥ ಸಹ ಅವರಿಗಿರಲಿಲ್ಲ.

ಇದು ಗೆಳೆಯನಿಗಿರಲಿ

ಬಹುಶಃ ಬೀದರ್ ಸಾಹಿತ್ಯ ಸಮ್ಮೇಳನದ ಸಂಬಂಧವಾಗಿ ಇರಬೇಕು; ತೀನಂಶ್ರೀ ಸಮ್ಮೇಳನಾಧ್ಯಕ್ಷರಾಗಬೇಕೆಂದು ತೀರ್ಮಾನವಾಯಿತು. ಆದರೆ ಅದಕ್ಕೆ ತೀನಂಶ್ರೀ ಒಪ್ಪಲಿಲ್ಲ. "ಛೆ ಛೆ, ಎಲ್ಲಾದರೂ ಉಂಟೆ? ಡಿ. ಎಲ್. ನರಸಿಂಹಾಚಾರ್ಯರಂಥ ವಿದ್ವಾಂಸರೇ ಇನ್ನೂ ಅಧ್ಯಕ್ಷರಾಗಿಲ್ಲದಿರುವಾಗ ನಾನು ಆಗುವುದೇ? ಖಂಡಿತ ಸಾಧ್ಯವಿಲ್ಲ" ಎಂದು ಹೇಳಿ ಅದನ್ನು ಸ್ನೇಹಿತನ ಕಡೆಗೆ ದಾಟಿಸಿಬಿಟ್ಟರು.

ತೀನಂಶ್ರೀ ಮತ್ತು ಡಿ.ಎಲ್.ಎನ್. ಇಬ್ಬರೂ ದೊಡ್ಡ ವಿದ್ವಾಂಸರು, ಆಪ್ತ ಸ್ನೇಹಿತರು. ಅವರಲ್ಲಿ ಒಬ್ಬರು ಹೆಚ್ಚು ಒಬ್ಬರು ಕಡಿಮೆ ಎನ್ನುವಂತೆ ಇರಲೇ ಇಲ್ಲ. ಆದರೆ ಒಂದು ದೊಡ್ಡ ಮನ್ನಣೆ ತಮ್ಮ ಕಡೆ ತಾನಾಗಿ ಬಂದಾಗ ಅವರಿಗೆ ಅನ್ನಿಸಿದ್ದು – ಇದು ನನ್ನ ಗೆಳೆಯನಿಗಿರಲಿ. ನನ್ನ ವಿಷಯ ಆಮೇಲೆ ನೋಡಿಕೊಳ್ಳೋಣ ಅಂತ! ತೀನಂಶ್ರೀ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಲೇ ಇಲ್ಲ.

ತೀನಂಶ್ರೀ ಅಷ್ಟು ದೊಡ್ಡ ವಿದ್ವಾಂಸರಾಗಿಯೂ ಎಲ್ಲ ಬಗೆ ಪ್ರಶಸ್ತಿ ಮನ್ನಣೆಗಳಿಂದ ವಂಚಿತರಾದವರು. ಅಕಾಡೆಮಿ ಪ್ರಶಸ್ತಿ, ಸಮ್ಮೇಳನಾಧ್ಯಕ್ಷತೆ, ಗೌರವ ಡಾಕ್ಟರೇಟ್ ಇಂಥ ಯಾವುವೂ ಅವರಿಗೆ ಸಂದಾಯವಾಗಲಿಲ್ಲ. ಆದರೆ ಅವರು

ಎಂದೂ ಅದರ ಬಗ್ಗೆ ಯೋಚಿಸಿದವರಲ್ಲ. ಅವರ ಸ್ನೇಹಿತರು, ಶಿಷ್ಯರು, ಇತರ ಸಾಹಿತಿಗಳು ಸೇರಿ ಸಿದ್ಧಪಡಿಸಿದ 'ಶ್ರೀಕಂಠತೀರ್ಥ' ಎಂಬ ಗೌರವಗ್ರಂಥ ಕೂಡ ಅವರ ಕಾಲಾನಂತರ ೧೯೭೬ರಲ್ಲಿ ಬಂದದ್ದು. ಈಗ ಗೋಕಾಕರ ನೇತೃತ್ವದ ಪ್ರಶಸ್ತಿ ಸಮಿತಿ ಅವರ ಗ್ರಂಥಕ್ಕೆ ಪಂಪಪ್ರಶಸ್ತಿ ನೀಡಿ ಆ ಕೊರತೆಯನ್ನೆಲ್ಲ ಪರಿಹರಿಸಿದೆ.

ತೀನಂಶ್ರೀಯವರ ಬಗ್ಗೆ ಮಾತನಾಡುತ್ತ ಒಮ್ಮೆ ಮಾಸ್ತಿ ಹೇಳಿದರು "ಗುಣ, ವಿದ್ಯೆ, ಬುದ್ಧಿ, ತೇಜಸ್ಸು ಇರುವ ಸುಸಂಸ್ಕೃತ ಕನ್ನಡಿಗ ಹೇಗಿರುತ್ತಾನೆ ಎಂದು ಒಮ್ಮೊಮ್ಮೆ ನಾನು ಕಲ್ಪಿಸಿಕೊಳ್ಳತೊಡಗುತ್ತೇನೆ. ಆಗ ಥಟ್ಟನೆ ನನ್ನ ಮನಸ್ಸಿನೆದುರು ಬಂದುನಿಲ್ಲುವ ವ್ಯಕ್ತಿ ತೀ. ನಂ. ಶ್ರೀಕಂಠಯ್ಯ."

●

ತೀನಂಶ್ರೀ

ಕತ್ತೆತ್ತಿ ನೋಡಿದಲ್ಲದೆ ಕಾಣರೆಂಬಷ್ಟು
ಎತ್ತರಕೆ ಬೆಳೆದಂಥ ಸತ್ಯಕಾಮರು ನೀವು,
ನೀವೆತ್ತಿದರೆ ನಿಮ್ಮ ಬುದ್ಧಿಭುಜದಲಿ ನಿಂತು
ಹೆದ್ದಲೆಯ ನೆಮ್ಮಿ ಏನೆಲ್ಲ ನೋಡಿದೆವು!
ಹಳೆಮಾತಿನೊಡಲಲ್ಲಿ ಕುದಿವ ಜೀವನರಸದ
ಕಡಲ ಚಿತ್ರವನು ಕಣ್ಣಾಗಿ ಈಜಿದೆವು.

ಪ್ರಕ್ಷೇಪ ಲೋಪ ಲಿಪಿಕಾರನಕ್ಷರಪಾಪ
ಕೋಪಗತ್ತರಿ ಬಾಯ್ಗೆ ಕೈಕಾಲುಗಳ ತೆತ್ತು,
ಮುಖಸತ್ತು ನರಳುವೆಷ್ಟೋ ಮಾತ ಎಡೆಹಿಡಿದು,
ಹೆಕ್ಕಿ ಕರುಣೆಯಲಿ ಮುಖ ಮೈ ಸವರಿ ನೇಹದಲಿ,
ಗತಜೀವನದ ಶೋಕಕಥೆಗೆ ಕಿವಿಗೊಟ್ಟರಿ,
ಮೈ ತಿದ್ದಿ ಮತ್ತೆ ಮುನ್ನಿನ ಬಾಳನಿತ್ತಿರಿ.

ಮಾಸಿದ ಮಹಾಚಿತ್ರಗಳ ಗೆರೆಗಳನು ತಿದ್ದಿ
ಮತ್ತೆ ಮೆರುಗಿತ್ತ ನುಡಿ ಚಿತ್ರಕಾರರು ನೀವು;
ಬಿತ್ತದಲಿ ಮರಕಂಡ ಬುದ್ಧಿಭೀಮರು. ನಮ್ಮ
ನುಡಿಗಂಟನೆಷ್ಟೊ ಬಿಚ್ಚಿದಿರಿ, ಮೆಚ್ಚಲಿ ನೇಯ್ದು
ಹೊಚ್ಚಿದಿರಿ ಶಾಸ್ತ್ರವಸ್ತ್ರವನು ಕಾವ್ಯದ ಮೈಗೆ,

ಮುಖದೆಲ್ಲ ಚೆಲುವು ಮಡಿ ಗೆಲವು ಎತ್ತರ ನಿಲುವೆ
ಗೆರೆಗೊಂಡಿತೆಂಬಂತೆ ಸ್ವಲ್ಪ ಬರೆದಿರಿ, ಏಕೆ,
ಹತ್ತು ತಲೆ ಬೇಕೆ ಚೆಲುವನು ಮೆರೆಸೆ? ರಾಮರುಚಿ;
ಎಲ್ಲ ಬಳಸಲೆ ಬೇಕು ನಿತ್ಯ ಪಾರಾಯಣಕೆ!

—ಎಸ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಗ್ರಾಮಭಾರತದ ಆಧುನಿಕ ಪ್ರತೀಕ
ಗೊರೂರು ರಾಮಸ್ವಾಮಿ ಅಯ್ಯಂಗಾರ್

ಸುಮಾರು ಐವತ್ತು ವರ್ಷಗಳಿಗೂ ಹಿಂದಿನ ಸಂಗತಿ. ಗಾಂಧೀ ಜಯಂತಿಯ ಸಂದರ್ಭ. ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಒಂದು ಖಾದಿ ವಸ್ತ್ರಾಲಯಕ್ಕೆ ಹೋದರು. ಖಾದಿ ಕೊಂಡದ್ದಕ್ಕೆ ರೂಪಾಯಿಗೆ ಒಂದಾಣೆ ರಿಯಾಯಿತಿ ಸಾರಲಾಗಿತ್ತು. ಮಾಸ್ತಿ ಕೊಂಡ ಬಟ್ಟೆಯ ಬೆಲೆ ಎಷ್ಟೋ ರೂಪಾಯಿಗಳ ಮೇಲೆ ಮುಕ್ಕಾಲು ರೂಪಾಯಿ ಆಗಿತ್ತು. ಬಟ್ಟೆ ಮಾರಾಟ ಮಾಡುತ್ತಿದ್ದಾತ ಒಬ್ಬ ಅಯ್ಯಂಗಾರಿ. ರೂಪಾಯಿಗೆ ಒಂದಾಣೆಯಂತೆ ರಿಯಾಯಿತಿ ಕೊಟ್ಟ. ಆದರೆ ಕಡೆಯ ಮುಕ್ಕಾಲು ರೂಪಾಯಿಗೆ ರಿಯಾಯಿತಿ ಇಲ್ಲ ಎಂದ. ರೂಪಾಯಿಗೆ ಒಂದು ಆಣೆ ರಿಯಾಯಿತಿ ಎಂದ ಮೇಲೆ ಮುಕ್ಕಾಲು ರೂಪಾಯಿಗೆ ಮುಕ್ಕಾಲು ಆಣೆ ಅಲ್ಲವೆ? ವ್ಯವಹಾರಕ್ಕೆ ಒಂದು ತರ್ಕ ಬೇಡವೇ? ಇದು ಮಾಸ್ತಿಯವರ ವಾದ. ರೂಪಾಯಿ ಇಡಿ ಆಗದೆ ಕಮಿಷನ್ ಹುಟ್ಟುವುದಿಲ್ಲ, ಇಲ್ಲಿಯ ನಿಯಮವೇ ಹಾಗೆ ಅಂತ ಅಂಗಡಿ ಅಯ್ಯಂಗಾರಿಯ ವಾದ. ಮಾಸ್ತಿ ತರ್ಕಕ್ಕೆ ನಿಂತರೆ ಮಹಾಮೊಂಡು. ಕಾಸು ಮುಖ್ಯ ಅಂತ ಅಲ್ಲ, ಮೋಸಹೋಗಬಾರದು ಅನ್ನೋ ತತ್ವ ಅಷ್ಟೆ. ಇಬ್ಬರು ಅಯ್ಯಂಗಾರ್ಯರ ಮಧ್ಯೆಯೂ ಮಾತಿನ ಚಕಮಕಿ. ವಾದ ಭರಾಟೆಯಲ್ಲಿದ್ದಾಗ ಗೋಡೆ ಗಡಿಯಾರ ಜೋರಾಗಿ ಗಂಟೆ ಹೊಡೆಯಿತು. ಥಟ್ಟನೆ ಅಂಗಡಿ ಅಯ್ಯಂಗಾರಿ ಹೇಳಿದ: "ಆಗೋ ಗಂಟೆ ಹೊಡೆದದ್ದು ಕೇಳಿದಿರ? ಗಂಟೆಗೆ ಒಂದು ಸೆಕೆಂಡು ಕಡಿಮೆಯಾದರೂ ಅದು ಹೊಡೆಯುತ್ತ? ಹಾಗೇ ಕಮಿಷನ್ ಕೂಡ. ರೂಪಾಯಿಗೆ ಕಾಸು ಕಡಮೆಯಾದರೂ ಅದು ಗಿಟ್ಟುವುದಿಲ್ಲ." ಮಾಸ್ತಿ ಜೋರಾಗಿ ನಕ್ಕರು. "ಸರಿ ಕಣಪ್ಪ, ಜಾಣ ಜವಾಬು ಕೊಟ್ಟುಬಿಟ್ಟೆ" ಅಂತ ಹೇಳಿ ವಾಪಸ್ಸಾದರು.

ಗಂಟೆ ಬಡಿತದ ಸ್ಫೂರ್ತಿ ಪಡೆದು ಮಾಸ್ತಿತರ್ಕದ ಬಾಯಿ ಮುಚ್ಚಿಸಿದ ಆ ಕಿಲಾಡಿ ಮನುಷ್ಯ ಬೇರೆ ಯಾರೂ ಅಲ್ಲ, ಗೊರೂರು ರಾಮಸ್ವಾಮಿ ಅಯ್ಯಂಗಾರ್! ಗಾಂಧೀ ವ್ಯಕ್ತಿತ್ವಕ್ಕೆ ಮಾರುಹೋಗಿ ಸ್ವಾತಂತ್ರ್ಯ ಚಳುವಳಿಗೆ ಇಳಿದಿದ್ದ ಅವರು ಆಗ ಬೆಂಗಳೂರಿನಲ್ಲಿ ಖಾದಿ ವಸ್ತ್ರಾಲಯದ ಜವಾಬ್ದಾರಿ ವಹಿಸಿಕೊಂಡಿದ್ದರು. ಬಹುಶಃ ಅವರೇ ಕಾರಣರಾಗಿ ಆಗ ಖಾದಿಗೆ ಬಹಳ ಜನ ಲೇಖಕ ಗಿರಾಕಿಗಳು ಸೃಷ್ಟಿಯಾಗಿದ್ದರು. 'ವಾರ್ ಕಮಿಟಿಯ' ಅಧ್ಯಕ್ಷರಾಗಿದ್ದ 'ರಾಜಸೇವಾಸಕ್ತ' ಬಿ.ಎಂ.ಶ್ರೀ. ನಾಲ್ಕು ಖಾದಿ ಷರಾಯಿಗಳಿಗೆ ಅಲ್ಲಿ ಅರ್ಡರ್ ಕೊಟ್ಟಿದ್ದರು! ಡಿವಿಜಿ ಆ ಅಂಗಡಿಯ ಖಾದಿ ತೊಟ್ಟು ವೆಂಕಟಪತಯ್ಯನವರ ನೇತೃತ್ವದಲ್ಲಿ ಒಂದು ಹರತಾಳದಲ್ಲಿ ಭಾಗವಹಿಸಿದ್ದರು! ಮಹಾ ಕುಸುಬಿಷ್ಟಿ ಮನುಷ್ಯ ಅಂತ ಹೆಸರಾಗಿದ್ದ ವಿಸೀ ಕೂಡ ಆ ಅಂಗಡಿಯಲ್ಲಿ ಗಂಟೆಗಟ್ಟಲೆ ಆರಿಸಿ, ವಿಪರೀತ ದುಡ್ಡು ತೆತ್ತು ತೆಳುವಾದ ಮಲ್‌ನಂಥ ರಾಣಿಖಾದಿ ಖರೀದಿ ಮಾಡಿದ್ದುಂಟು!

ಬಿಎಂಶ್ರೀ, ಡಿವಿಜಿ, ಮಾಸ್ತಿ, ಕುವೆಂಪು, ತೀನಂಶ್ರೀ, ಪುತಿನ, ಡಿಎಲ್‌ಎನ್– ಇಂಥ ಘಟಾನುಘಟಿಗಳನ್ನೆಲ್ಲ ತಮ್ಮ ಸ್ನೇಹದ ಪತ್ತಲಕ್ಕೆ ಹಾಸುಹೊಕ್ಕಾಗಿ ಹೆಣೆದುಕೊಂಡಿದ್ದ ರಾಮಸ್ವಾಮಿ ಅಯ್ಯಂಗಾರ್ ಮೂಲತಃ ಒಬ್ಬ ಹಳ್ಳಿ ಮನುಷ್ಯ. ಪ್ರಕಾಂಡ ಪಂಡಿತನಾಗಲು ಬೇಕಾದ ಎಲ್ಲ ಪೂರ್ವಸಿದ್ಧತೆ, ಸಂಸ್ಕಾರ ಇದ್ದ ಈ ವ್ಯಕ್ತಿ ವಿಶ್ವವಿದ್ಯಾನಿಲಯದ ಮೆಟ್ಟಲನ್ನೇ ಹತ್ತಲಿಲ್ಲ! ಹೈಸ್ಕೂಲಿನಲ್ಲಿದ್ದಾಗಲೇ ಅವರಿಗೆ ಸ್ವಾತಂತ್ರ್ಯ, ಸ್ವರಾಜ್ಯ, ಗಾಂಧಿ ಇವುಗಳ ಆಕರ್ಷಣೆ ಬಲವಾಯಿತು. "ಯುವಕನಿಗೆ ತನ್ನ ಪ್ರೀತಿಯ ಹೆಣ್ಣಿನ ಮೇಲೆ ಎಂಥ ಧ್ಯಾನವೋ ಅಂಥ ತೀವ್ರ ಧ್ಯಾನ" ಸ್ವರಾಜ್ಯದ ಬಗ್ಗೆ ಅವರಲ್ಲಿ ಹುಟ್ಟಿಬಿಟ್ಟಿತ್ತು. ಇಡೀ ದೇಶ ಒಂದು ಮಹಾಹೋರಾಟದಲ್ಲಿ ಧುಮುಕಿರುವಾಗ ನಾನು ಯಾಕೆ ಇಲ್ಲಿ ಹೀಗೆ "ಈ ಇಂಗ್ಲಿಷ್, ಸೈನ್ಸು, ಆಲ್ಜಿಬ್ರಾ ರಗಳುತ್ತ ಕೂತಿದ್ದೀನಿ? ಗುಲಾಮರನ್ನು ಸೃಷ್ಟಿಸೋ ಈ ವಿದ್ಯೆ ಯಾಕೆ ಬೇಕು?" ಅನ್ನಿಸಿತು. ಆಲೋಚನೆ ಸಂಕಲ್ಪವಾಯಿತು, ಸಂಕಲ್ಪ ಪ್ರತಿಜ್ಞೆಯಾಯಿತು. ಹುಡುಗ ಕೈಯಲ್ಲಿದ್ದ ಪುಸ್ತಕ ಪೆನ್ನು ಬಿಸಾಡಿದ. ಯಾರಿಗೂ ತಿಳಿಸದೆ ಗಾಂಧಿಯನ್ನು ಕಾಣಲು ಸೀದಾ ಅಹಮದಾಬಾದಿನ ಕಡೆಗೆ ರೈಲು ಹತ್ತಿಬಿಟ್ಟ! ಮುಂದೆ ಗಾಂಧಿ ಸಂಪರ್ಕದಿಂದ ಅವನ ಜೀವನದ ದಿಕ್ಕೇ ಬದಲಾಗಿ ಹೋಯಿತು.

ಗೊರೂರರು ಎಷ್ಟು ದೊಡ್ಡ ಲೇಖಕರೋ ಅದಕ್ಕಿಂತ ದೊಡ್ಡ ವ್ಯಕ್ತಿ, ನಿಜವಾದ ದೇಶಭಕ್ತ. ಸ್ವಾತಂತ್ರ್ಯಕ್ಕಾಗಿ ತನ್ನ ವಿದ್ಯೆ, ಭವಿಷ್ಯ ಮಾತ್ರವಲ್ಲದೆ ಹದಿನಾಲ್ಕು ವರ್ಷದ ಒಬ್ಬ ಮಗನನ್ನೇ ಪೋಲೀಸರ ಗುಂಡಿಗೆ ಅಹುತಿಯಾಗಿ ಮಾಡಬೇಕಾಗಿ ಬಂದ ಈ ಮನುಷ್ಯ ಸ್ವಾತಂತ್ರ್ಯ ಬಂದಮೇಲೆ ಇತರ ಅನೇಕರಂತೆ ತನ್ನ ದೇಶಪ್ರೀತಿಗೆ

ಪ್ರತಿಫಲ ನಿರೀಕ್ಷಿಸಲಿಲ್ಲ. ಚುನಾವಣೆಗೆ ಇಳಿಯಲಿಲ್ಲ. ಅಧಿಕಾರದ ಕುರ್ಚಿ ಹತ್ತಲಿಲ್ಲ. ಹತ್ತಿದ ಜನ ಗೌರವದಿಂದ ಕೊಡಬಂದ ಹಣವನ್ನು ಸಹ ಮುಟ್ಟಲಿಲ್ಲ.

ಈಗ್ಗೆ ಕೆಲವೇ ವರ್ಷಗಳ ಹಿಂದಿನ ಘಟನೆ. ಗೊರೂರರ ಆರೋಗ್ಯ ತುಂಬ ಕೆಡತೊಡಗಿತ್ತು. ಆಗಿನ ಮುಖ್ಯಮಂತ್ರಿ ಹೆಗಡೆಯವರಿಗೆ ಇದು ತಿಳಿಯಿತು. ಅವರು ಗೊರೂರರ ಮನೆಗೆ ಬಂದು ಆರೋಗ್ಯ ವಿಚಾರಿಸಿ ಹೋದರು. ಮಾರನೆ ದಿನ ಅವರ ಕಚೇರಿಯ ಮನುಷ್ಯನೊಬ್ಬ ಹತ್ತು ಸಾವಿರ ರೂಪಾಯಿ ನಗದು ಸಹಿತ ಗೊರೂರರಲ್ಲಿಗೆ ಬಂದ. ಅದು ಮುಖ್ಯಮಂತ್ರಿಗಳ ಸಹಾಯ ನಿಧಿಯಿಂದ ಬಂದ ಹಣ; ಗೊರೂರರ ವೈದ್ಯಕೀಯ ಶುಶ್ರೂಷೆಯ ಸಲುವಾಗಿ ಕಳಿಸಿದ್ದು. ಅವರು ಇದು ನನಗೆ ಬೇಡ ಅಂದರು. "ನನಗೆ ಹೊಟ್ಟೆಬಟ್ಟೆಗೆ ಅಂಥ ತೊಂದರೆ ಏನಿಲ್ಲ. ಇದು ಜನರ ಹಣ. ತೀರ ತೊಂದರೆಯಲ್ಲಿ ಇರುವವರಿಗೆ ಹೋಗಬೇಕು" ಎಂದರು. ಆದರೆ ಬಂದ ವ್ಯಕ್ತಿ ಹಣವನ್ನು ಅಲ್ಲೇ ಬಿಟ್ಟುಹೋದ. ಹಣ ಎದುರಿಗೆ ಇರುತ್ತ ಗೊರೂರರ ಮನಸ್ಸಿಗೆ ಕಿರಿಕಿರಿ ಶುರುವಾಯಿತು. ಆ ಸಂಜೆಯೇ ಅವರು ಅಷ್ಟನ್ನೂ ಒಂದು ಟವೆಲಿನಲ್ಲಿ ಗಂಟುಕಟ್ಟಿಕೊಂಡು ಮುಖ್ಯಮಂತ್ರಿಗಳಿಗೆ ವಾಪಸ್ಸು ಮಾಡಲು ಹೊರಟರು ! ವಯಸ್ಸು, ಅರೆಮರೆವು, ಅನಾರೋಗ್ಯ. ಸಂಬಂಧಿಸಿದವರ ಕೈಗೇ ಕೊಡಬೇಕಾದ ನಗದು ಬೇರೆ. ತುಂಬ ಅಲೆದು ಸಾಧ್ಯವಾಗದೆ ಸುಸ್ತಾಗಿ ವಾಪಸ್ಸು ಬಂದರು. ಹೆಂಡತಿ ಕೈಗೆ ಹಣ ಕೊಟ್ಟು "ಇದನ್ನು ಯಾರ ಮೂಲಕವಾದರೂ ನಾಳೆಯೇ ಮುಖ್ಯಮಂತ್ರಿಗಳಿಗೆ ಮುಟ್ಟಿಸುವ ಏರ್ಪಾಟು ಮಾಡು. ಅದು ಅವರಿಗೆ ಸೇರುವವರೆಗೆ ನನಗೆ ನೆಮ್ಮದಿ ಇರೊಲ್ಲ" ಎಂದು ಹೇಳಿಬಿಟ್ಟರು. ಹಣ ತಾನಾಗಿ ಬಂದಿತ್ತು. ಆದರೆ ಸ್ವೀಕಾರವಾಗದೆ ಹೊರಟಲ್ಲಿಗೇ ಹೋಗಿ ಸೇರಿತು. ಹೀಗೆ ದಡ್ಡತನ ಎಂದು ತೋರಿಬಿಡಬಹುದಾದ ದೊಡ್ಡತನ ಅವರದ್ದು.

ರಾಮಸ್ವಾಮಿ ಅಯ್ಯಂಗಾರ್ ಹುಟ್ಟಿದ್ದು ಹೇಮಾವತೀ ನದಿಯ ದಡದ ಮೇಲೆ ಅರಳಿರುವ ಗೊರೂರು ಎಂಬ ಹಳ್ಳಿಯಲ್ಲಿ, ೧೯೦೪ರಲ್ಲಿ. ತಂದೆ ಅಪ್ಪಟ ವೈದಿಕ; ಸಂಸ್ಕೃತ ವಿದ್ವಾಂಸ, ತುಂಬ ಕಟ್ಟುನಿಟ್ಟುಗಳ ಮನುಷ್ಯ. ಮಗ ತದ್ವಿರುದ್ಧ, ಸ್ಕೂಲಿಗೆ ಚಕ್ಕರು ಹಾಕುವುದರಲ್ಲಿ ಪ್ರವೀಣ. ಅಪ್ಪ ಹಳ್ಳಿಗರಿಗೆ ಹೇಳುವ ರಾಮಾಯಣ ಭಾರತ ಪುರಾಣ ಕಥೆಗಳನ್ನು ಕೇಳಲು ಸ್ಕೂಲು ತಪ್ಪಿಸಿ ಬಂದು ಜಗಲಿಯ ಮರೆಗೆ ಅಡಗಿ ಕೂತಿರುತ್ತಿದ್ದ. ಪಠ್ಯಪುಸ್ತಕ ಕಲಿಸಲಾರದ ವಾಚನಾಭಿರುಚಿಯನ್ನು ಗಳಗನಾಥ ವೆಂಕಟಾಚಾರ್ಯರ ಕಾದಂಬರಿಗಳಿಂದ ರೂಪಿಸಿಕೊಂಡ. ಹೈಸ್ಕೂಲು ಓದನ್ನು ಅರ್ಧಕ್ಕೇ ಬಿಟ್ಟು ಗಾಂಧೀಜಿಯ ಸಂಪರ್ಕಕ್ಕೆ ಹೋದ. ಗುಜರಾತ್ ವಿದ್ಯಾಪೀಠದಲ್ಲಿ ವ್ಯಾಸಂಗಕ್ಕೆ ದಾಖಲಾದ. ನವಜೀವನ ಪತ್ರಿಕಾ ಕಚೇರಿಯಲ್ಲಿ

ಅಚ್ಚಿನ ಮೊಳೆ ಜೋಡಿಸಿದ. ಗಾಂಧೀಜಿ ಪ್ರವಾಸ ಹೋಗುತ್ತಿದ್ದಾಗ ಅವರ ಜೊತೆ ಅಲೆದ. ಆ ಮೂಲಕ ಅನೇಕ ರಾಷ್ಟ್ರನಾಯಕರ ಪರಿಚಯ ಮಾಡಿಕೊಂಡ. ಯಾವ ಯೂನಿವರ್ಸಿಟಿಯೂ ಕೊಡಲಾರದ ಸಹವಾಸ ಸದಭಿರುಚಿಗಳ ಮಧ್ಯೆ ತನ್ನ ಆದರ್ಶ ಧ್ಯೇಯಗಳನ್ನು ರೂಪಿಸಿಕೊಂಡ.

ಗೊರೂರರು ನೂರು ಕೆರೆಗಳ ನೀರು ಕುಡಿದವರು. ಉಪಸಂಪಾದಕರಾಗಿ ಮದರಾಸಿನ 'ಜನಮಿತ್ರ' 'ಆಂಧ್ರಪತ್ರಿಕೆ' 'ಭಾರತಿ ಪತ್ರಿಕೆ'ಗಳಲ್ಲಿ ದುಡಿದವರು. ಸಬರಮತಿ ಆಶ್ರಮದ ಮಾದರಿಯಲ್ಲಿ ಸ್ಥಾಪಿಸಿದ್ದ ಕೆಂಗೇರಿ ಗುರುಕುಲಾಶ್ರಮದಲ್ಲಿ ಶ್ರಮಿಸಿದವರು. ಗ್ರಾಮಪುನರುಜ್ಜೀವನ, ಖಾದಿ ಪ್ರಚಾರ, ಹರಿಜನೋದ್ಧಾರ ಕಾರ್ಯಗಳಲ್ಲಿ ತಮ್ಮ ಬದುಕಿನ ಮುಖ್ಯಕಾಲವನ್ನು ತೇದವರು. ಸತ್ಯಾಗ್ರಹ ಮಾಡಿ ಜೈಲುವಾಸ ಅನುಭವಿಸಿದವರು. ಜೈಲಿನಲ್ಲೇ ಎಷ್ಟೋ ಬರವಣಿಗೆ ಮಾಡಿದವರು. ವಿಧಾನ ಪರಿಷತ್ತು, ಯೂನಿವರ್ಸಿಟಿ ಸೆನೆಟ್ಟು, ಮೂಲಶಿಕ್ಷಣ ಸಮಿತಿಗಳಿಗೆ ಸದಸ್ಯರಾಗಿ ನಾಮಕರಣಗೊಂಡಾಗ ನಿಜವಾದ ಅರ್ಥದಲ್ಲಿ ಜನಹಿತಕ್ಕೆ ದುಡಿದವರು.

ಗೊರೂರರ ಜೀವನದಲ್ಲಿ ದೇಶಸಂಬಂಧವಾದ ಈ ಕಾಳಜಿಗಳು ಬಹಳ ಮುಖ್ಯ. ಅವರ ಬರೆಹಗಳಲ್ಲಿ ಕಾಣುವ ಹಳ್ಳಿಜನರ ಬಗೆಗಿನ ಪ್ರೇಮ, ಅಪ್ಪಟ ವೈದಿಕರಾಗಿದ್ದೂ ಗಳಿಸಿಕೊಂಡ ಜಾತಿಮತ ಮುಕ್ತವಾದ ಚಿಂತನೆ, ಬೆಂಗಳೂರಿನಿಂದ ನ್ಯೂಯಾರ್ಕ್‌ವರೆಗೆ ಎಂಥ ಅತ್ಯಾಧುನಿಕ ನಗರದಲ್ಲಿದ್ದಾಗಲೂ ನಾಚದೆ ಉಳಿಸಿಕೊಂಡ ಸಾಚಾ ಹಳ್ಳಿಗತನ – ಇವೆಲ್ಲ ಅವರಿಗೆ ದಕ್ಕಿದ್ದು ಗಾಂಧೀಸಂಪರ್ಕ, ಗಾಂಧೀಚಿಂತನೆ ತಂದುಕೊಟ್ಟ ಹೊಸ ದೃಷ್ಟಿಯಿಂದಲೇ. ಗ್ರಾಮಜೀವನದ ಬಗ್ಗೆ ಯಾರೇ ಬರೆದಿರಲಿ, ಎಷ್ಟೇ ಬರೆದಿರಲಿ ಗೊರೂರರ ಬರೆಹದ ಬಣ್ಣ ಹದಗಳು ಅವಕ್ಕೆ ಕೊಡುವ ಕಾಂತಿ ತೇಜಸ್ಸು ಅನನ್ಯವಾದದ್ದು. ಆತ್ಮವಿಡಂಬನೆಯ ಅಂತಿಮ ನಿಕಷದಲ್ಲಿ ಮಿಂಚಿ ಬಂದ ಅದರ ಪರಿಮಳ ಶುಭ್ರತೆಗಳು ಮಾರ್ಕೆಟ್ಟಿನಲ್ಲಿ ನೀರು ಚಿಮುಕಿಸಿ ಇಟ್ಟ ನಿನ್ನೆಯ ಮಲ್ಲಿಗೆಯದಲ್ಲ, ಗಿಡದ ಹಸಿರಿನ ನಡುವೆ ಈಗಷ್ಟೆ ಬಿರಿದು ನಗುತ್ತಿರುವ ಜೀವಂತ ಮಲ್ಲಿಗೆಯದು.

ಹಳ್ಳಿಯ ಚಿತ್ರಗಳು, ನಮ್ಮೂರಿನ ರಸಿಕರು, ಬೈಲಹಳ್ಳಿ ಸರ್ವೆ, ಗರುಡಗಂಬದ ದಾಸಯ್ಯ, ಮೆರವಣಿಗೆ ಮೊದಲಾದ ಅವರ ಕೃತಿಗಳು ಗ್ರಾಮವೊಂದರ ಜೀವನ ರೀತಿಯನ್ನು, ಘಟನೆಗಳನ್ನು, ಥರಾವರಿ ವ್ಯಕ್ತಿಗಳನ್ನು ಅವರ ಮೂಲಸತ್ವದಲ್ಲಿ ಹಿಡಿದು ತೋರಿಸುವ ಕೃತಿಗಳು. ಪ್ರಬಂಧಾತ್ಮಕವಾದ ಈ ಬರೆಹಗಳು ಅಲ್ಲಲ್ಲಿ ಕಥೆಯಾಗುತ್ತ, ವ್ಯಕ್ತಿಚಿತ್ರವಾಗುತ್ತ, ರಸಾತ್ಮಕ ನಿರೂಪಣೆಯಾಗುತ್ತ ಒಟ್ಟಿನಲ್ಲಿ ರುಚಿಯುಕ್ಕಿಸುವ ಒಂದು ರಸಾಯನವಾಗಿ ಪರಿಣಮಿಸಿವೆ. ತಮ್ಮ ನೆಲದಿಂದ

ಮೇಲೆ ಜಿಗಿದು ನೋಡುವ ಗೊರೂರರ ಹದ್ದಿನ ಕಣ್ಣಿಗೆ ಹಳ್ಳಿಜನದ ಮುಗ್ಧತೆ, ಘನತೆ, ಮಂಗಬುದ್ಧಿ, ಕಿಲಾಡಿತನಗಳೆಲ್ಲ ದುರ್ಬೀನಿನಲ್ಲಿ ಎಂಬಂತೆ ಎಲ್ಲ ಸೂಕ್ಷ್ಮಗಳ ಸಹಿತ ಪ್ರತ್ಯಕ್ಷವಾಗುತ್ತವೆ. ರೈತ, ಬೆಸ್ತ, ಬಡಗಿ, ಹಜಾಮ, ಹರಿಜನ, ದಾಸಯ್ಯ, ಶಾನುಭೋಗ, ಅಮಲ್ದಾರ, ಮೋಜಿಣಿದಾರ, ಹಾರುವ, ತುರುಕ – ಇವರೆಲ್ಲ ತಮ್ಮ ನಗ್ನಸತ್ಯದಲ್ಲಿ ಹೊರಟ ಮಹಾಮೆರವಣಿಗೆ ಅದು. ಈ ಜನದ ಬಗ್ಗೆ ಇರುವ ಅಭಿಮಾನ ಪ್ರೀತಿಗಳಿಂದಾಗಿಯೇ ಅವರ ಮುಖಭಂಗಮಾಡದೆ ಹಾಸ್ಯ ಮಾಡಬಲ್ಲ, ಕಾಲೆಳೆದೂ ನಗಿಸಬಲ್ಲ ಕರಾಮತ್ತು ಗೊರೂರರಿಗೆ ಸಿದ್ಧಿಸಿದೆ. ತನ್ನನ್ನೇ ವಿಮರ್ಶಿಸಿಕೊಳ್ಳಬಲ್ಲ ಸತ್ಯಪ್ರೀತಿಗೆ ಮಾತ್ರ ಇದು ಸಾಧ್ಯ. ಹಾರುವ ವರ್ಗದ ಏಳು ಸುತ್ತಿನ ಕೋಟೆಯ ನಡುವೆಯೇ ಹುಟ್ಟಿ ಬೆಳೆದರೂ ಅದರ ಓರೆಕೋರೆಗಳನ್ನು ನಗೆಯುಕ್ಕಿಸುವಂತೆ ವಿಡಂಬಿಸಬಲ್ಲ ಅವರ ಸ್ಫೋಟಕಬುದ್ಧಿ, ತನ್ನ ಮೂಲಕ ಆ ವರ್ಗದ ಆತ್ಮವಿಮರ್ಶನ ಶಕ್ತಿಯನ್ನೂ ಬೆರಗು ಕವಿಸುವಂತೆ ಬೆಳಗಿಬಿಡುತ್ತದೆ. ಅದರಿಂದ ಸೃಷ್ಟಿಯಾಗುವ ನಿರ್ಮಲ ಹಾಸ್ಯ ಎಂಥದೆಂದರೆ ಅನ್ನಿಸಿಕೊಂಡವನನ್ನೂ ಅದು ನಗಿಸುತ್ತದೆ. ಅವರ ಇಂಥ ಬರೆಹವೊಂದರ ಬಗ್ಗೆ ಡಿವಿಜಿ ಬರೆದ ಮಾತು ಇದು:

"ನೆನ್ನೆ ರಾತ್ರಿ ನಿದ್ರೆ ಬರದ್ದರಿಂದ ಸುಮಾರು ಹನ್ನೆರಡು ಗಂಟೆಗೆ ನಿಮ್ಮ ಗರುಡಗಂಬದ ದಾಸಯ್ಯ ಓದಲು ಪ್ರಾರಂಭಿಸಿದೆ. ನಿದ್ರೆ ಬರದಾಗ ಇದು ನನ್ನ ಪದ್ಧತಿ. ಆಚಾರ ಕೆಟ್ಟರೂ ಆಕಾರ ಕೆಡಬಾರದೆಂಬುದನ್ನು ಓದುತ್ತಾ ತಡೆಯಲಾರದ ನಗು ಬಂತು. ಗಟ್ಟಿಯಾಗಿ ನಗತೊಡಗಿದೆ. ನಮ್ಮ ಹುಡುಗರು ಗಾಬರಿಯಿಂದ ಎದ್ದು ಬಂದರು. ವಿಷಯ ತಿಳಿದ ನಂತರ ಅವರೂ ನಗತೊಡಗಿದರು."

ಹೀಗೆಂದಾಗ ಹಾಸ್ಯವಷ್ಟೇ ಅವರ ಬರೆಹದ ಉದ್ದೇಶವಲ್ಲ. ಎಷ್ಟೋ ಸಲ ಅದು ಚಿತ್ರದ ಸುತ್ತ ಹಾಕಿದ ಚೌಕಟ್ಟು ಅಷ್ಟೇ. 'ಇಬ್ಬರು ಹೆಂಡಿರು' ಕಥೆಯಾಗಲೀ, 'ಬಿಸಿಲು ಕುದುರೆ' ಕಥೆಯಾಗಲೀ ಅಯ್ಯೋ ಎನ್ನಿಸುವ ವಿಷಾದದಲ್ಲಿ ಮುಗಿಯುವಂಥವು. ಅವರ ಅನೇಕ ಬರೆಹಗಳು ಶೃಂಗಾರ ಕರುಣ ಮೊದಲಾದ ವಿವಿಧ ರಸಗಳನ್ನು ಗರ್ಭೀಕರಿಸಿಕೊಂಡಿವೆ. ಆದರೆ ಮಾನವಾನುಭವವನ್ನೆಲ್ಲ ಅದರ ಮಂಗಾಟ ಸಹಿತವಾಗಿ ಅವರು ನೋಡಲಿಚ್ಛಿಸುವುದರಿಂದ ಎಲ್ಲ ಚಿತ್ರಗಳ ಸುತ್ತಲೂ ತೆಳುಹಾಸ್ಯದ ಒಂದು ಜರಿಯಂಚು ಹೆಣೆದುಕೊಳ್ಳುತ್ತದೆ. ಗೊರೂರರಿಗೆ ಹಾಸ್ಯ ಕಾಣುವ ವಸ್ತುವಲ್ಲ, ವಸ್ತುವಿನ ಸತ್ಯವನ್ನು ಕಾಣಿಸುವ ಕಣ್ಣು. ಇದು ಅರಿವಾದಾಗ ದೂರದಲ್ಲಿ ನಿಂತು ಜಗತ್ತನ್ನು ಹೀಗೆ ನೋಡುವ ಗೊರೂರರು ಒಬ್ಬ ದಾರ್ಶನಿಕನಂತೆ ಭಾಸವಾಗಿ ಬಿಡುವುದೂ ಉಂಟು.

ಮೇಲಿನ ಕೃತಿಗಳಲ್ಲದೆ ಗೊರೂರರು ಶಿವರಾತ್ರಿ, ಉಸುಬು, ಬೆಸ್ತರ ಕರಿಯ, ಮೊದಲಾದ ಕಥಾಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಪುನರ್ಜನ್ಮ, ಹೇಮಾವತಿ, ಊರ್ವಶಿ

ಎಂಬ ಕಾದಂಬರಿಗಳನ್ನು ಬರೆದಿದ್ದಾರೆ. ರಾಜನರ್ತಕಿ, ಮಲೆನಾಡವರು, ಕ್ರೌಂಚವಧ, ಭಗವಾನ್ ಕೌಟಿಲ್ಯ ಎಂಬ ಕಾಂದಬರಿಗಳು, ಕೊನೆಷ್ಟೈ ಕತೆಗಳು ಎಂಬ ಕಥಾಸಂಗ್ರಹ ಅವರು ಅನ್ಯಭಾಷೆಗಳಿಂದ ಕನ್ನಡಕ್ಕೆ ಮಾಡಿದ ಭಾಷಾಂತರಗಳು. ವೈಚಾರಿಕ ಕೃತಿಗಳೂ, ಜೀವನಚಿತ್ರಗಳೂ, ಅನುವಾದಗಳೂ ಸೇರಿದಂತೆ ಅವರು ಒಟ್ಟು ಐವತ್ತಕ್ಕೂ ಹೆಚ್ಚು ಪುಸ್ತಕ ಬರೆದಿದ್ದಾರೆ. ಅಮೆರಿಕದಲ್ಲಿ ಗೊರೂರು ಎಂಬ ಪ್ರವಾಸ ಕೃತಿ ಅವರ ಬರೆಹದ ಸಮಸ್ತ ಸಾಮರ್ಥ್ಯವನ್ನೂ ಗರ್ಭೀಕರಿಸಿಕೊಂಡ ಕೃತಿ. ಇದಕ್ಕೆ ೧೯೮೦ರ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ನೀಡಲಾಯಿತು. ೧೯೮೨ರಲ್ಲಿ ಸಿರಸಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅವರನ್ನು ಅಧ್ಯಕ್ಷರನ್ನಾಗಿ ಮಾಡಿ ಗೌರವಿಸಲಾಯಿತು. ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಿ ಅವರ ಕೃತಿಗಳು ವಿಶ್ವವಿದ್ಯೆಗೆ ಒಂದು ಕೊಡುಗೆ ಎಂಬುದನ್ನು ಸಾರಿತು.

ರಾಮಸ್ವಾಮಿ ಅಯ್ಯಂಗಾರ್ಯರು ಹಿರಿಯರ ಜೊತೆ ಹೇಗೇ ಇರಲಿ, ತಮಗಿಂತ ಚಿಕ್ಕವರ ಜೊತೆ ಸರಾಗವಾಗಿ ಬೆರೆಯುತ್ತಿದ್ದರು. ಉತ್ಸಾಹದಿಂದ ಮಾತಿನ ಚಟಾಕಿ ಹಾರಿಸುತ್ತಿದ್ದರು. ನನ್ನಂಥ ಚಿಕ್ಕವರು ಸಹ ಅವರ ಜೊತೆ ಎಗ್ಗಿಲ್ಲದೆ ಮಾತಾಡುವುದು ಸಾಧ್ಯವಿತ್ತು. ಏಳೆಂಟು ವರ್ಷಗಳ ಹಿಂದೆ ಒಮ್ಮೆ, ಬಾ ಅಂತ ಹೇಳಿಕಳಿಸಿದ್ದರು. ಹೋದೆ. ಸ್ವಲ್ಪಕಾಲ ಹರಟಿ ಮನೆಗೆ ಹೊರಟೆ. ನನ್ನನ್ನು ಬಿಡಲು ಹೊರಗೆ ಬಂದವರು ಅಂಗಳದ ಹಲಸಿನ ಮರ ನೋಡುತ್ತ "ಅಯ್ಯಾ ಬ್ರಾಹ್ಮಣ, ನಿಮಗೆ ಕೊಡೋಣ ಅಂದರೆ ಈ ಮರದಲ್ಲಿ ಒಂದೇ ಒಂದು ಹಲಸಿನಕಾಯಿ ಬೇಡವೆ? ಏನೇ ಇರಲಿ, ಅರ್ಹತೆ ಇದ್ದರೆ ಮಾತ್ರ ಪ್ರಾಪ್ತಿ ಎನ್ನುವ ಮಾತು ಎಷ್ಟು ನಿಜ" ಅಂತ ಛೇಡಿಸಿದರು. ನಾನೆಂದೆ "ಅದೇನೋ ಸರಿಯೇ. ಆದರೆ ಮರ ಕಾಯಿಬಿಡದ ಕಾಲದಲ್ಲಿ ಮನೆಗೆ ಕರೆಸಿ, ಖಾಲಿಮರ ತೋರಿಸಿ ಪಾರಾಗುವುದೇ? ಎಷ್ಟೋ ಆಗಲಿ ನನಗಿಂತ ಹಿರಿಯ ಹಾರುವರಲ್ಲವೆ? ದಾನ ಪಡೆದು ಗೊತ್ತೇ ಹೊರತು ಕೊಟ್ಟು ಗೊತ್ತಿರಬೇಕಲ್ಲ. ಇಲ್ಲವಾದರೆ ಇದ್ದದ್ದನ್ನು ಮರೆಸಿಡುತ್ತಾರಾ" ಎಂದೆ. "ಏನಪ್ಪಾ ನಿನ್ನ ಮಾತು ಅರ್ಥವಾಗಲಿಲ್ಲ" ಅಂದರು. "ನಿಮ್ಮ ಮನೆಯೊಳಗೆ ಮೂಲೆಯಲ್ಲಿ ನಾಲ್ಕೈದು ಬಣಸೌತೇಕಾಯಿ ತಪಸ್ಸು ಮಾಡುತ್ತಿವೆ. ನನಗೇನು ಮರದಿಂದ ಉದುರಿದ ಫಲವೇ ಆಗಬೇಕೆಂದಿಲ್ಲ; ಬಳ್ಳಿಯಿಂದ ಕಿತ್ತದ್ದಾದರೂ ಆಯಿತು" ಎಂದೆ. ಗೊರೂರರು ನಗುತ್ತ "ಎಲಾ ಮನುಷ್ಯ, ಒಳಗೆ ಮೂಲೆಯಲ್ಲಿರೋ ಪದಾರ್ಥದ ಮೇಲೆ ಅಷ್ಟು ಬೇಗ ಕಣ್ಣು ಹರಿಸಿದ್ದೀರಲ್ಲ. ಹೋದ ಜನ್ಮದಲ್ಲಿ ನೀವು ಏನಾಗಿದ್ದಿರಬಹುದು! ಹೋಗಲಿ ಬಿಡಿ, ಈಗ ಚೋರರ ಮಾತೆತ್ತಿ ಅವರಿಗೆ ಯಾಕೆ ಅವಮಾನ ಮಾಡಲಿ?" ಎನ್ನುತ್ತ ಬಣಸೌತೇಕಾಯಿ ತಂದು ಬಗಲಿನ ಚೀಲಕ್ಕೆ ಒತ್ತಾಯಮಾಡಿ ತುರುಕಿದರು. "ಇದರ ಸೀ ಹುಳಿ ಮೊಗದಸ್ತಾಗಿರುತ್ತೆ. ನೀವು ಮಲೆನಾಡ ಕಡೆ ಭಟ್ಟರಲ್ಲವ? ಎಲ್ಲ ಗೊತ್ತಿರುತ್ತೆ" ಅಂತ ಹೇಳಿ ಪ್ರೀತಿಯಿಂದ ಬೆನ್ನು ಸವರಿ ಕಳಿಸಿದರು.

ಎಪ್ಪತ್ತೈದನೆಯ ವಯಸ್ಸಿನಲ್ಲೂ ಗೊರೂರರು ಗಟ್ಟಿಮುಟ್ಟಾಗಿದ್ದರು. ಅವರ ಜೀವನೋತ್ಸಾಹ, ಜೀರ್ಣಶಕ್ತಿ ಯಾವುದೂ ಇಳಿಮುಖವಾಗಿರಲಿಲ್ಲ. ಸುಪ್ರಸಿದ್ಧ ನಟಿ ಇನ್‌ಗ್ರಿಡ್ ಬರ್ಗ್‌ಮನ್ ತೀರಿಕೊಂಡಾಗ ಹಾಮಾ ನಾಯಕರು ತಮ್ಮ ಬರೆಹವೊಂದರಲ್ಲಿ ಆಕೆಯ ಆತ್ಮಕಥೆಯ ಪ್ರಸ್ತಾಪ ಮಾಡಿದ್ದರು. ಬರೆಹ ಓದಿದ ಗೊರೂರರು ಹಾಮಾನಾಗೆ ಬರೆದರು.

"ಇನ್‌ಗ್ರಿಡ್ ಬರ್ಗ್‌ಮನ್ನಳ ಆತ್ಮಕಥೆಯನ್ನು ನಾನು ಓದಬೇಕು. ನಮ್ಮ ಯೌವನ ಮೀರುತ್ತಿದ್ದ ಕಾಲದಲ್ಲಿ ಆಕೆ ಘರದೆ ಮೇಲೆ ಬಂದಳು. ಅದೊಂದು ಅದ್ಭುತ ರೂಪ ಮತ್ತು ಅಭಿನಯ. ನಿಜವಾದ ಸುಂದರಿ. ಕತ್ತಲೆಯಲ್ಲಿ ಆಕೆ ಸಿನಿಮಾ ಘರದೆ ಮೇಲೆ ಬಂದರೆ ನಿಜವಾಗಿ ಗಾಳಿಯಲ್ಲಿ ತೂರುತ್ತಿರುವ ಊರ್ವಶಿಯಂತೆ ತೋರುತ್ತಿದ್ದಳು. ನಮಗೆ ತಡೆಯಲಾರದ ಆಕರ್ಷಣೆ. ನಾವು ಪರದೆ ಮೇಲಿನ ನೆರಳಿನ ಗೊಂಬೆಯನ್ನು ದೂರದಿಂದಲೇ ಚುಂಬಿಸಿ ಬಾಯಿ ಚಪ್ಪರಿಸಿದ್ದುಂಟು. ಆ ಪುಸ್ತಕ ನೀವು ಬಂದಾಗ ತಂದುಕೊಡಿ. ಓದಿ ಹಿಂದಿರುಗಿಸುತ್ತೇನೆ. ಖಂಡಿತ ಹಿಂದಿರುಗಿಸುತ್ತೇನೆ."

ಇದನ್ನು ಬರೆದಾಗ ಗೊರೂರರಿಗೆ ಎಪ್ಪತ್ತೆಂಟು ವರ್ಷ!

ಅವರ ಜೀರ್ಣಶಕ್ತಿ ಜೋರು ಎಂದೆನಷ್ಟೆ. ಸುಮಾರು ಏಳೆಂಟು ವರ್ಷಗಳ ಕೆಳಗೆ ನಮ್ಮ ಮನೆಯಲ್ಲಿ ಒಂದು ಊಟದ ಏರ್ಪಾಟು ಮಾಡಿದ್ದೆ. ಗೊರೂರರು ಬಂದಿದ್ದರು. ಜೊತೆಗೆ ಭೈರಪ್ಪ, ಪುತಿನ, ಹಾಮಾನಾ – ಇನ್ನೂ ಕೆಲವರು ಇದ್ದ ನೆನಪು. ಭೈರಪ್ಪನವರು ಸಿಹಿಭಕ್ಷ್ಯ ಕಂಡರೆ ಜೀವರಾಶಿಯ ಮೇಲೆ ನುಗ್ಗುವ ಯಮನಂತಾಗುತ್ತಾರೆ ಅಂತ ನನಗೆ ಗೊತ್ತಿತ್ತು. ಹಾಗಂತಲೇ ಶ್ಯಾವಿಗೆ ಪಾಯಸ, ಬಾಸುಂದಿ, ಜಾಮೂನು ಅಂತ ಮೂರು ಮೂರು ಸಿಹಿ ಮಾಡಿದ್ದೆವು. ಊಟ ಸಾವಧಾನವಾಗಿ ನಡೆಯಿತು. ಒಂದು ಘಟ್ಟದಲ್ಲಿ ಐವತ್ತರ ಭೈರಪ್ಪನವರನ್ನು ಎಪ್ಪತ್ತೈದರ ಗೊರೂರರು ಹಿಂದೆ ಹಾಕುತ್ತಿರುವಂತೆ ಕಂಡಿತು! ಆಗಲೇ ಎಲ್ಲರಿಗೂ ಕಂಠಪೂರ್ತಿ ಊಟ ಆಗಿದೆ. ಕಡೆಯದಾಗಿ ದೊನ್ನೆಯಲ್ಲಿ ನಾಲ್ಕು ನಾಲ್ಕು ಜಾಮೂನು ಬಂದುವು. ಹಾಮಾನಾ ತಮಗೆ ಸಾಧ್ಯವೇ ಇಲ್ಲವೆಂದು ಬದಿಗೆ ಸರಿಸಿಬಿಟ್ಟರು. ಅದನ್ನು ತೆಗೆದುಕೊಂಡು ಹೋಗಲು ನನ್ನ ಹೆಂಡತಿ ಬಂದಳು. ಆಗ ತಾನೇ ತಮ್ಮ ದೊನ್ನೆ ಖಾಲಿ ಮಾಡಿದ್ದ ಗೊರೂರರು "ಅದಿಷ್ಟನ್ನು ಇನ್ನೇನು ಒಳಗೆ ತೆಗೆದುಕೊಂಡು ಹೋಗುತ್ತೀಯಮ್ಮ. ನೀನು ಮಾಡಿದ ರುಚಿಯಾದ ಅಡಿಗೆಗೆ ಅದು ಅವಮಾನ, ಇಲ್ಲಿ ತಾ" ಅಂತ ಹೇಳಿ ಅಷ್ಟನ್ನೂ ಖಾಲಿ ಮಾಡಿದ್ದ ತಮ್ಮ ದೊನ್ನೆಗೆ ಬಗ್ಗಿಸಿಕೊಂಡು ಆರಾಮಾಗಿ ಮುಗಿಸಿದರು. ಬೆರಗಾದ ನನ್ನ ಹೆಂಡತಿ ಒಳಗೆ ಹೋಗಿ ಮತ್ತೆ

ಜಾಮೂನು ತಂದರೆ ಅದುವರೆಗೆ ತಿಂದದ್ದು ಬೇರೆ ಯಾರೋ ಎನ್ನುವಂತೆ ಇನ್ನೂ ಒಂದು ವಬ್ಬೆ ಮುಗಿಸಿದರು!

ಈಗ್ಗೆ ಎಂಟು ವರ್ಷಗಳ ಕೆಳಗೆ ನಾನು ಷೇಕ್ಸ್‌ಪಿಯರನ ಕೆಲವು ಸಾನೆಟ್ಟುಗಳನ್ನು ಅನುವಾದಿಸಿ ಒಂದು ಪುಸ್ತಕ ಪ್ರಕಟಿಸಿದ್ದೆ. ಅದರ ಬಿಡುಗಡೆ ಸಮಾರಂಭ ಮುಗಿದ ಮೂರು ದಿನಗಳಿಗೆ ಗೊರೂರರಿಂದ ನನಗೆ ಫೋನು ಬಂತು. "ಬೇರೆ ಯಾರೋ ಕೊಂಡಿದ್ದ ನಿಮ್ಮ 'ಸುನೀತ' ಪುಸ್ತಕದ ಪ್ರತಿ ನೋಡಿದೆ. ತುಂಬ ಇಷ್ಟವಾಯಿತು. ಬಹಳ ಶ್ರಮವಹಿಸಿ ಶ್ರದ್ಧೆಯಿಂದ ಕೆಲಸ ಮಾಡಿದ್ದೀರಿ. ಇವತ್ತು ನಿಮಗೆ ಒಂದು ಕಾಗದ ಬರೆದಿದ್ದೇನೆ" ಎಂದರು. ಮಾರನೆಯ ದಿನ ಆ ಪತ್ರ ಬಂತು. ಅದರ ಜೊತೆಗೆ ನನ್ನ ಹೆಸರಿಗೆ ಬರೆದ ನೂರು ರೂಗಳ ಒಂದು ಚೆಕ್ ಇತ್ತು. ಪತ್ರದಲ್ಲಿ "ನನಗೆ ನಿಮ್ಮ 'ಸುನೀತ' ಪುಸ್ತಕದ ಒಂದು ಪ್ರತಿ ಬೇಕು. ನಾನು ಅದರ ಬೆಲೆಯನ್ನು – ಪ್ರತಿಯ ಬೆಲೆ, ಸಾನೆಟ್ ಬೆಲೆ ಅಲ್ಲ – ಈ ಹಣದುಬ್ಬರದ ಕಾಲದಲ್ಲಿ ನೂರು ರೂಪಾಯಿ ಎಂದು ಕಟ್ಟುತ್ತೇನೆ. ಆದುದರಿಂದ ನಿಮಗೆ ಪುರುಸೊತ್ತಾದಾಗ ಒಂದು ಪ್ರತಿ ತಂದುಕೊಡಿ" ಎಂದು ಬರೆದಿದ್ದರು. ಪುಸ್ತಕ ಅವರಿಗೆ, ಹನ್ನೆರಡು ರೂಗಳಿಗೆ, ಮನೆ ಹತ್ತಿರದ ಅಂಗಡಿಯಲ್ಲೇ ಸಿಗುತ್ತಿರಲಿಲ್ಲವೇ? ಇದು ಅವರು ಕಿರಿಯರಿಗೆ ತೋರಿಸುತ್ತಿದ್ದ ಪ್ರೀತಿ ಪ್ರೋತ್ಸಾಹಗಳಿಗೆ ಒಂದು ನಿದರ್ಶನ ಅಷ್ಟೆ.

ಅಂಥ ಗೊರೂರು ರಾಮಸ್ವಾಮಿ ಅಯ್ಯಂಗಾರ‍್ಯರು ಇನ್ನಿಲ್ಲ. ಒಂದು ವಾರದ ಕೆಳಗೆ ಅವರ ಭೌತಿಕದೇಹ ಮರೆಯಾಯಿತು. ಆದರೆ ಅಷ್ಟೇ ವಿಶ್ವಾಸ ಪ್ರೀತಿ ತುಂಬಿರುವ ಅವರ ಬರೆಹ ನಮ್ಮೆದುರಿಗಿದೆ. ಏಟ್ಸ್ ಕವಿ ತನ್ನ 'ಸೇಲಿಂಗ್ ಟು ಬೈಜಾಂಟಿಯಮ್' ಕವಿತೆಯಲ್ಲಿ ಹೇಳುತ್ತಾನೆ, ನನಗೆ ಪ್ರಕೃತಿ ಕೊಟ್ಟ ಈ ದೇಹ ಕುಸಿದ ಮೇಲೆ ನಾನು ಎಂದೂ ನಾಶವಾಗದ ಚಿನ್ನದ ಹಕ್ಕಿಯಾಗಿ ಪರಿವರ್ತನೆಗೊಳ್ಳುತ್ತೇನೆ ಅಂತ. ಆ ಹಕ್ಕಿ ಬೈಜಾಂಟಿಯಮ್ ದೊರೆಯ ಆಸ್ಥಾನದಲ್ಲಿರುವ ಹೊನ್ನಿನ ಮರದ ರೆಂಬೆಯಲ್ಲಿ ಕೂರುವಂಥದ್ದು. ಲೋಹದ ಹಕ್ಕಿಯಾದರೂ ಜೀವಂತ ಹಕ್ಕಿಯಂತೆ ಕೂಗಬಲ್ಲ ಅಲೌಕಿಕ ಸ್ವರೂಪದ್ದು. ದೊರೆ ತೂಕಡಿಸುವಾಗ ಅದು ಅವನನ್ನು ಕೂಗಿ ಎಚ್ಚರಿಸುತ್ತದೆಯಂತೆ; ಸಭಿಕರಿಗೆ ಭೂತ ವರ್ತಮಾನ ಭವಿಷ್ಯತ್ತುಗಳನ್ನು ಹಾಡುತ್ತದೆಯಂತೆ.

ಗೊರೂರರೂ ತಮ್ಮ ಸತ್ವಯುತವಾದ ಕೃತಿಗಳ ಮೂಲಕ ಶಾಶ್ವತವಾದ ಒಂದು ಚಿನ್ನದ ಪಕ್ಷಿಯಾಗಿದ್ದಾರೆ; ನಮ್ಮ ವಿವೇಕ ತೂಕಡಿಸುವಾಗ ಕೂಗಿ ಎಚ್ಚರಿಸುವ ಶಕ್ತಿಯಾಗಿದ್ದಾರೆ.

●

ಆಪ್ತ ಗೆಳೆಯನಿಗೆ ಕಂಬನಿ

ಕನ್ನಡ ನಾಡಿನ ಚೆಲುನುಡಿ ದೇವಿಯ
ಮೊಗದ ಮೆಲುನಗೆಯ ಕಳೆಯೊಂದು
ನಂದಿತು ಗೊರೂರು ಹಳ್ಳಿಯ ಸುಪುತ್ರ
ಸರಿಯಲು ಸ್ವರ್ಗಕೆ ಕಳೆತಂದು–
ಮುಂಜಾನೆಯ ಹೊಳೆತಂಪಿನ ಸಂಪಗೆ
ಸುರಗಿ ಜಾಲಾರಿ ಕಂಪಿನೊಳು
ಸ್ನೇಹದ ಪರಿಮಳ ಬೆರಸುತಿದ್ದವನು
ತೆರಳಿದ – ನೆನೆವೆನು ದುಗುಡದೊಳು,
ಮರು ಮರಳಿ ಸತ್ತು ಹುಟ್ಟದವರಾರು
ಹುಟ್ಟಿದ ಊರನೆ ಉನ್ನತಿಗೆ
ಏರಿಸಿದೀತನೆ ಪುಣ್ಯವಂತನ್ನೈ
ಧನ್ಯನೀತ ಪಾತ್ರನು ನುತಿಗೆ.
ನವೆದು ನವೆದು ಪಾರಬ್ಧವ ತೀರಿಸಿ
ಮರು ಮೈ ಹುಟ್ಟನು ಪಡೆಯನಿವ
ಜಸದ ಮೈಯ ಮರ ಮರಳಿ ತಳೆಯುತ
ಬದುಕುವನಿವ ನಲ್ ಮುದ ಹರಡಿ
ಮಿತ್ರಹಾನಿ ತಟ್ಟಿಹುದೀ ಮನಕೆ
ಮುಪ್ಪಿನ ಹಾನಿಯ ಬೆಳೆಸುತ್ತ
ನಾಲ್ಕಿಪ್ಪತ್ತರ ಗೆಳೆತನದೈಸಿರಿ
ತೀರಿಹೋಗೆ ಪರಿತಪಿಸುತ್ತ.
ನೆನೆವೆನು ನಗುವೆನು ಇನ್ನೆಂದಿಗು ಇವ
ಗೋಚರಿಸನು ಹಂಬಲಿಸುವೆನು

ನನ್ನೊಳಗನರಿತು ಒಲಿದವರೆಲ್ಲರು
ಹೋದರೆತ್ತಲೋ ಹಲುಬುವೆನು

ವತ್ಸರ ಪ್ರಜೋತ್ಪತ್ತಿ ವರ್ಷ ಋತ ಭಾದ್ರಪದ
ಪಂಚಮೀ ಕೃಷ್ಣ ತಿಥಿ ಮಂದವಾರ
ಗೊರವರೂರಿನ ಪುತ್ರ ಖ್ಯಾತ ರಾಮಸ್ವಾಮಿ
ಪರವಾಸುದೇವನೊಳು ಬೆರೆತುಹೋದ.

– ಪು. ತಿ. ನರಸಿಂಹಾಚಾರ್ಯ

ಶುದ್ಧ ಪಾಂಡಿತ್ಯಕ್ಕೆ ಸುವರ್ಣದ ಪ್ರಭಾವಳಿ

ಡಿ. ಎಲ್. ಎನ್.

ಒಂದು ಮಹತ್ವದ ವಿಚಾರ ಎಲ್ಲಿ, ಯಾವಾಗ, ಹುಟ್ಟಿ ಬಿಡುತ್ತದೆ ಎಂದು ಯಾರೂ ಹೇಳುವಂತಿಲ್ಲ. ಊಟದ ಹೊತ್ತು ಇರಬಹುದು, ವಿಸರ್ಜನೆಯ ಹೊತ್ತು ಇರಬಹುದು. ಕೇಳಿದವರನ್ನೆಲ್ಲ ಚಕಿತಗೊಳಿಸಿಬಿಡಬಲ್ಲ ಒಂದು ಹೊಳವು ಪ್ರತಿಭಾಶಾಲಿಯೊಬ್ಬನ ತಲೆಯಲ್ಲಿ ಯಾವಾಗಬೇಕಾದರೂ ಮಿಂಚಬಹುದು. ಗ್ರೀಕ್ ವಿಜ್ಞಾನಿ ಆರ್ಕಿಮಿಡೀಸನ ತಲೆತಿನ್ನುತ್ತಿದ್ದ ಸಮಸ್ಯೆಯೊಂದಕ್ಕೆ ಅವನು ಸ್ನಾನಮಾಡುತ್ತಿದ್ದಾಗ ಥಟ್ಟನೆ ಉತ್ತರ ಹೊಳೆದುಹೋಯಿತು. ಆ ಸಂಭ್ರಮದಲ್ಲಿ ತಾನು ಬೆತ್ತಲೆ ಇದ್ದೇನೆ ಎಂಬ ಎಚ್ಚರವೂ ಇಲ್ಲದೆ ಆರ್ಕಿಮಿಡೀಸ್ 'ಯುರೇಕಾ ಯುರೇಕಾ' (ತಿಳಿದುಹೋಯಿತು) ಎಂದು ಕೂಗುತ್ತ ನಡುರಸ್ತೆಗೆ ಓಡಿಬಂದನಂತೆ!

ನಮ್ಮ ನಾಡಿನ ಅತ್ಯಂತ ಪ್ರತಿಭಾವಂತ ವಿದ್ವಾಂಸರಲ್ಲಿ ಒಬ್ಬರಾಗಿದ್ದ ಡಿ. ಎಲ್. ನರಸಿಂಹಾಚಾರ್ಯರಿಗೆ 'ಇಸಿಲ' ಎನ್ನುವುದು ಒಂದು ಕನ್ನಡ ಪದ ಎಂದು ಹೊಳೆದದ್ದೂ ಒಂದು ವಿಚಿತ್ರ ಸನ್ನಿವೇಶದಲ್ಲಿಯೇ. ಅದೇನು ಸಾಮಾನ್ಯ ಕಾಣ್ಕೆಯಲ್ಲ, ಅದರ ಫಲವಾಗಿ ಕನ್ನಡ ಭಾಷೆಯ ಅಸ್ತಿತ್ವದ ಕಾಲ ಆರೂವರೆ ಶತಮಾನಗಳಷ್ಟು ಹಿಂದಕ್ಕೆ ಸರಿದುಹೋಯಿತು!

ಡಿ. ಎಲ್. ಎನ್. ರನ್ನು ಬಹಳ ದಿನಗಳಿಂದ ಕಾಡುತ್ತಿದ್ದ ಸಮಸ್ಯಾತ್ಮಕ ಪದವೊಂದಿತ್ತು. ಅದು ಅಶೋಕ ಚಕ್ರವರ್ತಿ ಬ್ರಹ್ಮಗಿರಿಯಲ್ಲಿ ಕೊರೆಸಿದ ಪ್ರಾಕೃತ ಶಾಸನದಲ್ಲಿ (ಇಸಿಲಸಿ ಮಹಾಮಾತಾಸೇ ಅಯಸಿ ಎಂಬ ವಾಕ್ಯಭಾಗದಲ್ಲಿ) ಬರುವ 'ಇಸಿಲ' ಎಂಬ ಪದ. ಆ 'ಪ್ರಾಕೃತ' ಪದದ ಅರ್ಥ ನಿಗೂಢವಾಗಿತ್ತು. ಹೋದಲ್ಲಿ ಬಂದಲ್ಲಿ ಅದು ಅವರ ತಲೆಕೊರೆಯುತ್ತಿತ್ತು.

ಒಂದು ಬೆಳಿಗ್ಗೆ ಆಚಾರ್ಯರು ಕ್ಷೌರದ ಅಂಗಡಿಯೊಂದರಲ್ಲಿ ಕುರ್ಚಿಯಲ್ಲಿ ಕೂತಿದ್ದಾರೆ. ಕ್ಷೌರಿಕನ ಹರಿತವಾದ ಹತಾರಗಳು ತಲೆಯ ಮೇಲೆ ಆಡುತ್ತಿವೆ. ಆಚಾರ್ಯರ ಮನಸ್ಸು ಮಾತ್ರ 'ಇಸಿಲ'ವನ್ನು ಕುರಿತು ಧ್ಯಾನಿಸುತ್ತಿದೆ. ಇದ್ದಕ್ಕಿದಂತೆ ಆಚಾರ್ಯರ ಮುಖ ಸಂತೋಷದಿಂದ ಬೆಳಗಲಾರಂಭಿಸಿತು. ಇಸಿಲ ಪದದ ಅರ್ಥ ಹಠಾತ್ತನೆ ಹೊಳೆದುಹೋಗಿತ್ತು. ಧಿಗ್ಗನೆ ಕುರ್ಚಿಯಿಂದ ಎದ್ದು ಬಿಡುವಂಥ ಸಡಗರ, ಆದರೆ ಅದು ಅಪಾಯಕರ. ಆಚಾರ್ಯರು ಹೇಗೋ ತಮ್ಮನ್ನು ನಿಯಂತ್ರಿಸಿಕೊಂಡರು.

ಸಂಶೋಧನೆ ಅದ್ಭುತವಾದದ್ದಾಗಿತ್ತು. ಇಸಿಲ ಪ್ರಾಕೃತ ಪದವೇ ಅಲ್ಲ, ಪ್ರಾಕೃತ ಪದಗಳ ಮಧ್ಯೆ ಸಿಕ್ಕಿಕೊಂಡಿರುವ ಶುದ್ಧ ಕನ್ನಡ ಪದ. ಹಾಗೆಯೇ ಅದು ಬಿಡಿಪದವೂ ಅಲ್ಲ. (ಇಸು + ಇಲ್ ಸೇರಿ ಆದ) ಸಮಾಸಪದ. ಹಳಗನ್ನಡದಲ್ಲಿ 'ಇಸು' ಎಂದರೆ ಬಾಣಬಿಡು ಅಂತ ಅರ್ಥ. 'ಇಲ್' ಎಂದರೆ ಮನೆ. 'ಇಸಿಲ್' ಎಂದರೆ ಕೋಟೆ. ಇಸಿಲ ಎಂದರೆ ಕೋಟೆಯಿಂದ ಆವೃತವಾದ ಊರು – ಅಶೋಕನು ಮಹಾಮಾತ್ಯರನ್ನು ವಿಚಾರಿಸಿ ಊರಿನಿಂದ ಕಳಿಸಿರುವ ನಿರೂಪ ಎನ್ನುವುದು ಒಟ್ಟು ವಾಕ್ಯದ ಸ್ಥೂಲ ಅರ್ಥ. ಆಚಾರ್ಯರ ಆನಂದಕ್ಕೆ ಪಾರವೇ ಇರಲಿಲ್ಲ. ಅಶೋಕನ ಕಾಲದ್ದೇ ಎಂದು ಖಚಿತವಾಗಿ ಹೇಳಬಲ್ಲ ಕನ್ನಡ ಪದವೊಂದು ಸಿಕ್ಕಿಹೋಗಿತ್ತು. ಆವರೆಗೆ ನಮಗೆ ಗೊತ್ತಿದ್ದ ಅತಿಪ್ರಾಚೀನ ಕನ್ನಡ ಪದಗಳೆಂದರೆ ಕ್ರಿ.ಶ. ೪೫೦ರ ಹಲ್ಮಿಡಿ ಶಾಸನದಲ್ಲಿದ್ದ ಕನ್ನಡ ಪದಗಳು. ಈಗ 'ಇಸಿಲ'ದ ಪತ್ತೆಯಿಂದ ಕನ್ನಡ ಭಾಷೆಯ ಕಾಲ (ಬ್ರಹ್ಮಗಿರಿ ಶಾಸನದ ಕಾಲವಾದ) ಕ್ರಿ. ಪೂ. ಎರಡನೆಯ ಶತಮಾನಕ್ಕೆ ಎಂದರೆ ಆರೂವರೆ ಶತಮಾನದಷ್ಟು ಹಿಂದಕ್ಕೆ ಸರಿದಿತ್ತು! ಇದನ್ನು ಕುರಿತ ಲೇಖನವೊಂದನ್ನು ಮುಂದೆ ಅವರು ಮೈಸೂರಿನಲ್ಲಿ ನಡೆದ ಬೇಸಿಗೆ ಭಾಷಾಶಿಬಿರದಲ್ಲಿ ಮಂಡಿಸಿದರು. ಅದನ್ನು ಕೇಳಿ ಎಮೆನೊ, ಸುಕುಮಾರ ಸೇನ್‌ರಂಥ ಪ್ರಪಂಚ ಪ್ರಸಿದ್ಧ ಭಾಷಾಶಾಸ್ತ್ರಜ್ಞರು ಬೆರಗಾಗಿಹೋದರು.

ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಕನ್ನಡಕ್ಕೆ ಅಸಾಮಾನ್ಯ ಕೊಡುಗೆಯಿತ್ತ ನಾಲ್ವರು ನರಸಿಂಹಾಚಾರ್ಯರಿದ್ದರು. ಅವರೆಂದರೆ – ಕನ್ನಡ ಭಾಷಾಚರಿತ್ರೆ ಬರೆದು, ಕವಿಚರಿತೆಯ ಸಂಪುಟಗಳನ್ನು ಪ್ರಕಟಿಸಿದ ಆರ್. ನರಸಿಂಹಾಚಾರ್; ಓಲೆಗರಿಗಳಲ್ಲಿದ್ದ ಪ್ರಾಚೀನ ಕನ್ನಡ ಕೃತಿಗಳನ್ನು ಪತ್ತೆಮಾಡಿ ಕತ್ತಲಲ್ಲಿದ್ದ ಕೊಪ್ಪರಿಗೆಗಳನ್ನು ಬೆಳಕಿಗೆ ತಂದ ಎಸ್. ಜಿ. ನರಸಿಂಹಾಚಾರ್; ನವೋದಯ ಕಾವ್ಯದ ತ್ರಿಕೂಟಾಚಲಗಳಲ್ಲಿ ಒಬ್ಬರೆನಿಸಿದ ಪು. ತಿ. ನರಸಿಂಹಾಚಾರ್ ಮತ್ತು ತಮ್ಮ ನಿರಂತರ ಸಾರಸ್ವತ ತಪಸ್ಸಿನಿಂದ ಪರಿಶುದ್ಧ ಪಾಂಡಿತ್ಯಕ್ಕೆ ಸುವರ್ಣ ಪ್ರಭಾವಳಿ ರಚಿಸಿ ಅದು ಉಜ್ವಲವಾಗಿ ಬೆಳಗುವಂತೆ ಮಾಡಿದ ಡಿ.ಎಲ್. ನರಸಿಂಹಾಚಾರ್. ಅವರು ವಡ್ಡಾರಾಧನೆಯಂಥ ಪ್ರಾಚೀನ ಕನ್ನಡ ಕೃತಿಗಳನ್ನು ಸಂಪಾದಿಸಿ, ಕವಿಗಳ

ಕಾಲದೇಶಗಳ ಬಗ್ಗೆ ಚರ್ಚಿಸಿ, ಅರ್ಥ ಕಳೆದುಕೊಂಡು ಅನಾಥವಾಗಿದ್ದ ಎಷ್ಟೋ ಹಳೆಯ ಕನ್ನಡ ಶಬ್ದಗಳಿಗೆ ಮತ್ತೆ ಬಾಳು ನೀಡಿದವರು. 'ಕನ್ನಡ ಗ್ರಂಥ ಸಂಪಾದನೆ'ಯಂಥ ಅಪೂರ್ವ ಕೃತಿಯನ್ನು ರಚಿಸಿದವರು. ಕನ್ನಡದ ಆದಿಕವಿ ಪಂಪನ ವಿಕ್ರಮಾರ್ಜುನ ವಿಜಯಕ್ಕೆ 'ದೀಪಿಕೆ' ಬರೆದವರು. ಡಿಎಲ್‌ಎನ್ ಎಂದರೆ ಪಾಂಡಿತ್ಯ, ಪಾಂಡಿತ್ಯ ಎಂದರೆ ಡಿಎಲ್‌ಎನ್' ಎಂಬ ಪ್ರಶಂಸೆಗೆ ತಮ್ಮ ಜೀವಿತಕಾಲದಲ್ಲೇ ಪಾತ್ರರಾದವರು.

ನರಸಿಂಹಾಚಾರ್ಯರು ಹುಟ್ಟಿದ್ದು ಚಿಕ್ಕನಾಯಕನಹಳ್ಳಿಯಲ್ಲಿ, ೧೯೦೬ರಲ್ಲಿ. ಅವರ ಪೂರ್ವಿಕರ ಊರು ದೊಡ್ಡಬೆಲೆ. ತಂದೆ ಶಾಮಯ್ಯಂಗಾರ್ ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಗುಮಾಸ್ತೆಯಾಗಿದ್ದವರು. ತಂದೆಯ ತಂದೆ ಅಣ್ಣಾಸ್ವಾಮಿ ಅಯ್ಯಂಗಾರ್ ತಾಲೂಕು ಕಛೇರಿಯಲ್ಲಿ ರೆಕಾರ್ಡ್‌ಕೀಪರ್ ಆಗಿದ್ದರೂ ತಮ್ಮ ಭಾರತವಾಚನ ಕಲೆಯಿಂದ ಸುತ್ತಮುತ್ತಲ ಊರುಗಳಲ್ಲಿ ಗೌರವ, ಜನಪ್ರಿಯತೆ ಗಳಿಸಿದವರು. ಮಹಾ ಸ್ವಾಭಿಮಾನಿಯಾದ ಅವರು ಒಮ್ಮೆ ಸಬ್‌ಡಿವಿಜನ್ ಆಫೀಸರ್ ನಿಷ್ಕಾರಣವಾಗಿ ಜೋರುಮಾಡಿದರೆಂದು ಕೆರಳಿ, ಕೈಲಿದ್ದ ದಫ್ತರನ್ನು ಅಲ್ಲೇ ಎಸೆದು ರಾಜೀನಾಮೆ ಕೊಟ್ಟು ಬಂದರು. ಮುಂದೆ ಭಾರತವಾಚನಕ್ಕೆ ತಮ್ಮನ್ನು ಪೂರ್ತಿ ತೆತ್ತುಕೊಂಡರು. ಮೊಮ್ಮಗ, ತಾತನ ಈ ಕಾವ್ಯವಾಚನದ ಪ್ರಭಾವದಲ್ಲಿ ಬೆಳೆದ. ಹನ್ನೆರಡನೆಯ ವಯಸ್ಸಿಗೇ ಕನ್ನಡ ಜೈಮಿನಿಭಾರತದ ಎಷ್ಟೋ ಭಾಗಗಳನ್ನು ಕಂಠಪಾಠ ಮಾಡಿಬಿಟ್ಟಿದ್ದ. ಇನ್ನೂ ನಾಲ್ಕನೆಯ ಫಾರಂ ಓದುತ್ತಿದ್ದಾಗಲೇ ಗದಾಯುದ್ಧ, ಛಂದೋಂಬುಧಿ, ಪದ್ಯಸಾರದಂಥ ಪುಸ್ತಕಗಳನ್ನು ಓದಿಕೊಂಡಿದ್ದ. ಓಲೆಗರಿ ಕಾವ್ಯಗಳನ್ನು ಓದುವ ಕುತೂಹಲ ಆ ಕಾಲಕ್ಕೇ ಅವನಲ್ಲಿ ಒಂದು ಗೀಳಾಗಿ ಬೆಳೆಯುತ್ತಿತ್ತು. ಮುಂದೆ ಸಾರಸ್ವತಲೋಕದ ಒಬ್ಬ ಧೀಮಂತನಾಗಿ ಬೆಳಗಲಿದ್ದ ವ್ಯಕ್ತಿಗೆ ಹೇಳಿ ಮಾಡಿಸಿದಂತಿತ್ತು ಅವನ ಬಾಲ್ಯ.

ಡಿಎಲ್‌ಎನ್ ಬಿ.ಎ. ಓದುತ್ತಿದ್ದಾಗಲೇ ಕನ್ನಡ ಕಾವ್ಯಗಳಲ್ಲಿ ಋತುವರ್ಣನೆ ಎಂಬ ಸುದೀರ್ಘ ಲೇಖನ ಬರೆದಿದ್ದರು. ಆ ಹೊತ್ತಿಗೇ ಅವರು ಪ್ರಾಚೀನ ಕನ್ನಡ ಕಾವ್ಯಗಳನ್ನು ಎಷ್ಟು ಸಾದ್ಯಂತವಾಗಿ ಅಧ್ಯಯನ ಮಾಡಿದ್ದರೆಂಬುದಕ್ಕೆ ಅದು ಸಾಕ್ಷಿಯಾಗಿದೆ. ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಎಂ.ಎ. ತರಗತಿಯಲ್ಲಿ ಕುವೆಂಪು ಅವರಿಗೆ ಸಹಪಾಠಿ. ನರಸಿಂಹಾಚಾರ್ಯರು ವಿಶ್ವವಿದ್ಯಾಲಯದ ಎಲ್ಲ ಎಂ.ಎ. ವಿಭಾಗಗಳಿಗೂ ಮೊದಲಿಗರಾಗಿ ಚಿನ್ನದ ಪದಕ ಪಡೆದು ಉತ್ತೀರ್ಣರಾದರು. ಆದರೂ ಅವರಿಗೆ ಕಾಲೇಜಿನಲ್ಲಿ ಕೆಲಸ ಸಿಗಲಿಲ್ಲ. ಅವರು ಧೃತಿಗೆಡದೆ ಓರಿಯಂಟಲ್ ಹಸ್ತಪ್ರತಿ ಲೈಬ್ರರಿಯಲ್ಲಿ ಕನ್ನಡ ಪಂಡಿತರಾಗಿ ಕಡಿಮೆ ಸಂಬಳದ ಒಂದು ಕೆಲಸಕ್ಕೆ

ಸೇರಿದರು. ಮೇಲುನೋಟಕ್ಕೆ ಅನ್ಯಾಯವಾಗಿ ಕಂಡರೂ ಕನ್ನಡ ಸಾಹಿತ್ಯಕ್ಕೆ ಇದರಿಂದ ಮಹೋಪಕಾರವೇ ಆಯಿತು. ಅಲ್ಲಿದ್ದ ಅವಧಿಯಲ್ಲಿ ನರಸಿಂಹಾಚಾರ್ ಲೈಬ್ರರಿಯ ಕನ್ನಡ ಹಸ್ತಪ್ರತಿಗಳನ್ನೆಲ್ಲ ಅಧ್ಯಯನ ಮಾಡಿದರು. 'ವಡ್ಡಾರಾಧನೆ'ಯಂಥ ಅಪೂರ್ವ ಹಸ್ತಪ್ರತಿಯನ್ನು ಅವರು ಪತ್ತೆ ಮಾಡಿದ್ದು ಆಗಲೇ. 'ವಡ್ಡಾರಾಧನೆ' ಜೈನಕೇವಲಿಗಳ ಕಥೆಗಳನ್ನು ಹಳಗನ್ನಡದಲ್ಲಿ ಹೃದ್ಯಮಯ ಶೈಲಿಯಲ್ಲಿ ನಿರೂಪಿಸುವ, ಹತ್ತನೆಯ ಶತಮಾನದ ಮಹತ್ವದ ಗದ್ಯಗ್ರಂಥ. ಮುಂದೆ ಈ ಗ್ರಂಥವನ್ನು ಸಂಪಾದಿಸಿ ಡಿಎಲ್‌ಎನ್ ಬಹಳ ಮೌಲಿಕವಾದ ಕೆಲಸಮಾಡಿದರು. ಇದಲ್ಲದೆ ಹಸ್ತಪ್ರತಿಗಳ ಪರಿಶೀಲನೆಯಿಂದ ಅವರಿಗೆ ನಾನಾ ರೀತಿಯ ಪಾಠಸ್ಖಾಲಿತ್ಯಗಳ ಬಗ್ಗೆ, ಅವು ಆಗುವ ರೀತಿಯ ಬಗ್ಗೆ, ಲಿಪಿಕಾರರ ಬಗ್ಗೆ ವಿಶೇಷ ತಿಳಿವಳಿಕೆ ಸಿದ್ಧಿಸಿತು. ಅವರು ಮುಂದೆ ರಚಿಸಿದ 'ಕನ್ನಡ ಗ್ರಂಥಸಂಪಾದನೆ' ಎಂಬ ಅಮೂಲ್ಯ ಪುಸ್ತಕಕ್ಕೆ ಅಗತ್ಯವಾಗಿದ್ದ ವಿದ್ವತ್ತಿಗೆ ಪೂರ್ವಸಿದ್ಧತೆ ಇಲ್ಲಿದ್ದಾಗ ಆಯಿತು ಎನ್ನಬಹುದು.

ಕೆಲವರ್ಷಗಳ ನಂತರ ನರಸಿಂಹಾಚಾರ್ಯರು ಮಹಾರಾಜ ಕಾಲೇಜು, ಇಂಟರ್‌ಮೀಡಿಯೆಟ್ ಕಾಲೇಜು, ಸೆಂಟ್ರಲ್ ಕಾಲೇಜುಗಳಲ್ಲಿ ಅಧ್ಯಾಪಕರಾಗಿ, ಉಪಪ್ರಾಧ್ಯಾಪಕರಾಗಿ ದುಡಿದರು. ಸಾಹಿತ್ಯ ಪರಿಷತ್ತು ಕೈಗೆತ್ತಿಕೊಂಡಿದ್ದ ಕನ್ನಡ ನಿಘಂಟಿನ ಸಂಪಾದಕರಾಗಿ ಅಹರ್ನಿಶಿ ಶ್ರಮಿಸಿದರು. ಕಡೆಯಲ್ಲಿ ಮಹಾರಾಜ ಕಾಲೇಜಿಗೆ ಪ್ರಾಧ್ಯಾಪಕರಾಗಿ ಮರಳಿ ಬಂದರು. ಮಾನಸ ಗಂಗೋತ್ರಿ ರೂಪುಗೊಂಡ ಮೇಲೆ ಅಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ತೀನಂಶ್ರೀ ಗ್ರಂಥಸಂಪಾದನೆ ಎಂಬ ಹೊಸ ವಿಷಯದ ಅಧ್ಯಯನಕ್ಕೆ ಅವಕಾಶ ಕಲ್ಪಿಸಿದರು. ಆ ವಿಷಯವನ್ನು ಬೋಧಿಸಲು ನರಸಿಂಹಾಚಾರ್ಯರಿಗೆ ಮೀರಿದ ವಿದ್ವಾಂಸರು ಯಾರೂ ಇರಲಿಲ್ಲ. ತೀನಂಶ್ರೀಯವರ ಆಗ್ರಹದ ಮೇರೆಗೆ ಅವರು ಅಲ್ಲಿಗೂ ಬಂದು, ವಾರಕ್ಕೆ ಎರಡು ಗಂಟೆ ಪಾಠ ಹೇಳಿ ಆ ಅಧ್ಯಯನ ಶಾಖೆಗೆ ಸಾರ್ಥಕತೆ ತಂದರು.

ಮೂರು ವರ್ಷಗಳ ಕಾಲ ಈ ಮಹಾನುಭಾವರ ಪಾಠ ಕೇಳುವ ಅದೃಷ್ಟ ನನ್ನದಾಗಿತ್ತು. ಮುಂದೆ ಲೇಖನರೂಪದಲ್ಲಿ ಹೊರಬಂದು ಕನ್ನಡ ವಿದ್ವತ್ ಪ್ರಪಂಚಕ್ಕೆ ದೊಡ್ಡ ಕೊಡುಗೆಯಾಗಿ ಪರಿಣಮಿಸಿದ ತಮ್ಮ ಅನೇಕ ಸಂಶೋಧನೆಗಳನ್ನು ಅವರು ತರಗತಿಯಲ್ಲಿ ಮೊದಲು ನಮಗೆ ಹೇಳಿದ್ದುಂಟು. ಅವು ಲೇಖನಗಳಾಗಿ ಹೊರಬರುತ್ತಿದ್ದದ್ದು ಎಷ್ಟೋ ಕಾಲದ ಮೇಲೆ. ಪಾಠ ಕೇಳಿದ ವಿದ್ಯಾರ್ಥಿಗಳು ಆ ವಿಷಯಗಳನ್ನು ತಮ್ಮ ಉತ್ತರಪತ್ರಿಕೆಯಲ್ಲಿ ಬರೆಯುವುದು ಸಹಜವಷ್ಟೆ. ಆ ಮೂಲಕ ಅವು ಬೇರೆಯವರ ಕಣ್ಣಿಗೆ ಬಿದ್ದು ಆ ವಿಶಿಷ್ಟ ಸಂಶೋಧನೆಗಳೆಲ್ಲ ಪರರ ಪಾಲಾಗಿಬಿಡುವ ಅಪಾಯವಿರುತ್ತಿತ್ತು. ಅಂಥದೆಲ್ಲ ಆಗಿಲ್ಲವೆಂದೂ ಅಲ್ಲ. ಅವರಿಗೆ

ಮುಖ್ಯವಾಗಿದ್ದದ್ದು ಆ ಸಂಶೋಧನೆಗಳಿಂದ ಕನ್ನಡಕ್ಕಾಗುವ ಪ್ರಯೋಜನ ಅಷ್ಟೇ; ಸ್ವಂತ ಲಾಭನಷ್ಟಗಳ ಬಗ್ಗೆ ಅವರು ಎಂದೂ ತಲೆಕೆಡಿಸಿಕೊಂಡವರೇ ಅಲ್ಲ.

'ವಡ್ಡಾರಾಧನೆ'ಯನ್ನು ಪರಿಷ್ಕರಿಸಿ ಹೊರತಂದದ್ದು, 'ಶಬ್ದಮಣಿದರ್ಪಣ' ಎಂಬ ಹಳಗನ್ನಡ ವ್ಯಾಕರಣಗ್ರಂಥವನ್ನು ಸಂಪಾದಿಸಿದ್ದು, 'ಕನ್ನಡ ಗ್ರಂಥ ಸಂಪಾದನೆ'ಯನ್ನು ರಚಿಸಿದ್ದು, ಪಂಪ ಭಾರತಕ್ಕೆ ದೀಪಿಕೆಯನ್ನು ಬರೆದದ್ದು ಮತ್ತು ಪೊರಸು, ಬಾಡುಬೆ, ಹುಡುಕುನೀರು, ತ್ರಾಸು, ಒಲ್ಲಣಿಗೆ, ಕಾರೋಹಣದ ಪಳಿ, ಡಂಗಹಾಕು – ಇಂಥ ಅದೆಷ್ಟೋ ಪದ, ಪದಪುಂಜಗಳ ಮೂಲಚೂಲಗಳನ್ನು ಶೋಧಿಸಿ ಅವುಗಳ ಸಮರ್ಪಕ ರೂಪವನ್ನು ನಿರ್ಣಯಿಸಿ ಅರ್ಥೈಸಿದ್ದು ನರಸಿಂಹಾಚಾರ್ಯರ ಮುಖ್ಯ ಕೆಲಸಗಳಲ್ಲಿ ಸೇರುತ್ತವೆ. ಸುಕುಮಾರಚರಿತ, ಸಿದ್ಧರಾಮ ಚಾರಿತ್ರಗಳನ್ನು ಅವರು ಸಂಪಾದನ ಕಾರ್ಯಕ್ಕೆ ಮಾದರಿಯೆನ್ನುವಂತೆ ಪರಿಷ್ಕರಿಸಿದ್ದಾರೆ. ಮರಳಿಮಣ್ಣಿಗೆಯಂಥ ಸಾಹಿತ್ಯ ಕೃತಿಗಳಿಗೆ ಬರೆದ ವಿಮರ್ಶೆ ಅವರ ರಸಜ್ಞತೆಗೆ ಸಾಕ್ಷಿಯಾಗಿದೆ. ಅವರ 'ಕನ್ನಡ ಗ್ರಂಥ ಸಂಪಾದನೆ' ಹೊರಬಂದಾಗ ಆ ವಿಷಯ ಕುರಿತ ಇನ್ನೊಂದು ಗ್ರಂಥ ಯಾವ ದೇಶೀಯ ಭಾಷೆಯಲ್ಲೂ ಹೊರಬಂದಿರಲಿಲ್ಲ. ಇಡೀ ಭಾರತದಲ್ಲಿ ಆ ಬಗ್ಗೆ ಮುಂಚೆ ಬಂದಿದ್ದ ಒಂದೇ ಒಂದು ಗ್ರಂಥವೆಂದರೆ ಡಾ. ಎಸ್. ಎಂ. ಕತ್ರೆಯವರು ಇಂಗ್ಲಿಷಿನಲ್ಲಿ ಬರೆದಿದ್ದ An Introduction to Indian Textual Criticism ಎಂಬ ಪುಸ್ತಕ. ಮುಂದೆ ಆ ಗ್ರಂಥವನ್ನು ನಾನು ಕನ್ನಡಕ್ಕೆ ಅನುವಾದಿಸಿದಾಗ ಆಚಾರ್ಯರೇ ಅದಕ್ಕೆ ಪ್ರೀತಿಯಿಂದ ದೀರ್ಘವಾದ ಮುನ್ನುಡಿ ಬರೆದುಕೊಟ್ಟರು. ಆ ಮುನ್ನುಡಿ ಕೂಡ ಆವರೆಗೆ ಕನ್ನಡದಲ್ಲಿ ನಡೆದ ಗ್ರಂಥಸಂಪಾದನೆಯ ಚರಿತ್ರೆ ಕುರಿತ ಮೊದಲ ಮೌಲಿಕ ಲೇಖನ. ನನ್ನ ಚೊಚ್ಚಲು ಕೃತಿಗೆ ಎಂಥ ಎತ್ತರದ ಮುನ್ನುಡಿ ಎಂದು ನಾನು ಹಿಗ್ಗಿದ್ದೇ ಹಿಗ್ಗಿದ್ದು!

ನಾಡು ನರಸಿಂಹಾಚಾರ್ಯರನ್ನು ಬೀದರ್ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಿ ಗೌರವಿಸಿತು. ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಿ ಅಭಿನಂದಿಸಿತು. ನಾಡಿನ ಪ್ರಸಿದ್ಧ ಲೇಖಕರ ಬರೆಹಗಳಿರುವ 'ಉಪಾಯನ' ಮತ್ತು 'ಜ್ಞಾನೋಪಾಸಕ' ಎಂಬ ಅಭಿನಂದನ ಗ್ರಂಥಗಳು ಅವರಿಗೆ ಶಿಷ್ಯರು, ಸ್ನೇಹಿತರು ಸಮರ್ಪಿಸಿದ ಕೃತಜ್ಞತೆಯ ಉಡುಗೊರೆ.

ನಾನು, ನನ್ನ ಗೆಳೆಯರು ಮಹಾರಾಜ ಕಾಲೇಜಿನಲ್ಲಿ ಓದುತ್ತಿದ್ದ ದಿನಗಳಲ್ಲಿ ಮೈಸೂರು ವಿಶ್ವವಿದ್ಯಾಲಯದ ರತ್ನತ್ರಯರೆಂದು ಪ್ರಸಿದ್ಧರಾಗಿದ್ದವರು – ಕುವೆಂಪು, ತೀನಂಶ್ರೀ ಮತ್ತು ಡಿಎಲ್‌ಎನ್. ಅಂಥ ಭೂಮಿತೂಕದ ವ್ಯಕ್ತಿಗಳ ಸನ್ನಿಧಿಯಲ್ಲಿ ನಮ್ಮ ವಿದ್ಯಾಭ್ಯಾಸ ನಡೆಯಿತೆನ್ನುವುದು ನಾವು ಎಂದೆಂದೂ ಹೇಳಿಕೊಂಡು ಹಿಗ್ಗ ಬಹುದಾದ ಹೆಮ್ಮೆಯ ಸಂಗತಿ.

●

ಶ್ರೀ ಗುರುಚರಣಶ್ರೀಗೆ

ನಿಮ್ಮ ಒಲುಮೆಗೆ ನಿಮ್ಮ ಹೆಸರೊಂದೆ ಸಾಕು ಓ,
ನರಸಿಂಹ ನಾಮಧೇಯ! ಗುಡುಗುದನಿ ಕಡಲ ಮೊರೆ,
ಕಂಠವಾದರು ಮನವು ಮಗುವಿಗೂ ಮುದ್ದು ಮುದ್ದು!
ಪಾಂಡಿತ್ಯ ಕೆನೆಗಟ್ಟಿ ಕಡೆದೆದ್ದ ನವನೀತ!
ಕನ್ನಡದ ಕೈ ಒಡಿದು ಕಷ್ಟಗಳ ಕಟ್ಟಿಕೊಂ-
ಡದರೊಳೇ ಸೊದೆಸಲೆಯನರಸಿದಿರಿ ನುಡಿಗಡಲ
ಕುಡಿದ ಕನ್ನಡ ನುಡಿಯಗಸ್ತ್ಯರೇ, ಹರಿಯಬಿಡಿ
ಅರ್ಥಕೋಶದ ಶಬ್ದಸಾಗರಕೆ! ನಿಮ್ಮಲ್ಲಿ
ಕೃತಿಯಿಲ್ಲ ಕಿರಿಕಿರಿದು ಕಣ್ಗೆ; ಆ ಕೀರ್ತಿಗೇಂ
ಕಿರಿದೆಂಬುದಿದೆಯೇ ! ನುಡಿನುಡಿಗು ನಡೆವಾ ಹೊಡೆತ
ಬಡಿತಗಳು ನಿಮ್ಮೊಂದೆ ದರ್ಶನಕೆ ಶಾಂತಶಾಂತ!
ಶಬ್ದಶಬ್ದದ ಯುದ್ಧರಂಗವೆಲ್ಲವೂ ನಿಮಗೆ
ಶಬ್ದವಿಹರಣದುಪವನಂಗಳಾಚಾರ್ಯರೇ!
ನಿಮ್ಮಂಥ ವ್ಯಕ್ತಿತ್ವ ನಿಮ್ಮಲ್ಲೆ ಮೊದಲು
ಇನ್ನದಕೆ ದೊರಕುವುದು ಬೇರೆಲ್ಲಿ ಬದಲು!

– ಗುಂಡ್ಮಿ ಚಂದ್ರಶೇಖರ ಐತಾಳ

ಕನ್ನಡಕ್ಕೆ ಮೊದಲ ಸಾಹಿತ್ಯ ಚರಿತ್ರೆ ನೀಡಿದ

ರಂಗನಾಥ ಶ್ರೀನಿವಾಸ ಮುಗಳಿ

ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಅದೊಂದು ಆಚಾರ್ಯ ಕೃತಿ, ಶಾಸ್ತ್ರ ಸಾಹಿತ್ಯದ ಒಂದು ಮೈಲಿಗಲ್ಲು. ಅಂಥ ಕೃತಿ ಪ್ರಕಟವಾಗುತ್ತಿದ್ದಂತೆಯೇ ಅದಕ್ಕೆ ವಿಮರ್ಶೆಯ ಸಂಭ್ರಮದ ಸ್ವಾಗತ ದೊರೆತದ್ದು ಸಹಜವೇ. ಆದರೆ ಅದರ ಜೊತೆಗೇ ಸಾಹಿತ್ಯಪ್ರೇಮಿಗಳನ್ನು ಬೆಚ್ಚಿಸುವ ಒಂದು ವಿಕೃತ ಪ್ರತಿಕ್ರಿಯೆಯೂ ಎದುರಾಯಿತು. ಕರ್ನಾಟಕದ ಒಂದೆರಡು ಕಡೆಗಳಲ್ಲಿ ಕೋಮುಭಾವದಿಂದ ಪೀಡಿತರಾದ ಕೆಲವರು ಅದಕ್ಕೆ ಧಿಕ್ಕಾರ ಕೂಗಿ ಆ ಕೃತಿಯ ಪ್ರತಿಯನ್ನು ಸುಟ್ಟರು. ಶಿವರಾಮ ಕಾರಂತರು ಆ ಘಟನೆಯನ್ನು ಟೀಕಿಸುತ್ತಾ ವ್ಯಂಗ್ಯವಾಗಿ ಹೇಳಿದರು. "ಸುಡುವುದಂತೂ ಸುಟ್ಟರು, ಒಂದು ನೂರು ಪ್ರತಿಗಳನ್ನಾದರೂ ಸುಟ್ಟಿದ್ದರೆ ಅಷ್ಟು ಪ್ರತಿಗಳ ಮಾರಾಟವಾದರೂ ಆಗುತ್ತಿತ್ತು." ಇಂಥ ಇಬ್ಬಗೆಯ ಪ್ರತಿಕ್ರಿಯೆಯನ್ನು ಪಡೆದ ಕನ್ನಡದ ಆ ಅಪೂರ್ವ ಗ್ರಂಥ ಡಾ.ರಂ.ಶ್ರೀ. ಮುಗಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ.'

ಕನ್ನಡ ಸಾಹಿತ್ಯ ಚರಿತ್ರೆ ಆ ಬಗೆಯಗ್ರಂಥಗಳಲ್ಲಿ ಮೊದಲಿನದು. ಅದಕ್ಕೆ ಮುಂಚೆ ಆರ್. ನರಸಿಂಹಾಚಾರ್ಯರ ಕವಿಚರಿತ್ರೆಯ ಮೂರು ಸಂಪುಟಗಳು ಬಂದಿದ್ದುವು. ಇ.ಪಿ.ರೈಸ್‌ರವರು ಇಂಗ್ಲಿಷಿನಲ್ಲಿ ಬರೆದ ಒಂದು ಕನ್ನಡ ಸಾಹಿತ್ಯ ಚರಿತ್ರೆಯೂ ಪ್ರಕಟವಾಗಿತ್ತು. ಇದಲ್ಲದೆ ಹಿಂದಿನ ಕವಿಗಳನ್ನು ಕುರಿತು ಅಚ್ಚಾಗಿದ್ದ ಕೆಲವು ಬಿಡಿಲೇಖನಗಳೂ ಇದ್ದುವು. ಇಷ್ಟಾದರೂ ಕನ್ನಡ ಸಾಹಿತ್ಯದ ಬಗ್ಗೆ ಆಧುನಿಕ ಸಾಹಿತ್ಯಪ್ರಜ್ಞೆಯ ಹಿನ್ನಲೆಯಲ್ಲಿ ಗಂಭೀರ ವಿಮರ್ಶೆ, ವಿವೇಚನೆ, ಚರ್ಚೆಗಳನ್ನೊಳಗೊಂಡ ಸಮಗ್ರ ಗ್ರಂಥವೊಂದು ಇರಲಿಲ್ಲ. ಆವರೆಗೆ ಬಂದಿದ್ದ ಲೇಖನಗಳೆಲ್ಲ ಬಹುಮಟ್ಟಿಗೆ ಕವಿಗಳ ಕಾಲ, ದೇಶ, ಮತಗಳಂಥ ವಿಷಯಗಳ ಚರ್ಚೆಯೋ ಅಥವಾ ಕೃತಿಯೊಂದರ ವಿಮರ್ಶೆಯೋ ಆಗಿದ್ದವು. ಸಮಗ್ರ ಸಾಹಿತ್ಯ ಚರಿತ್ರೆಯೊಂದರ

ಅಭಾವ ಎದ್ದು ಕಾಣುತ್ತಿತ್ತು. ಕೂಲಂಕಷವಾದ ಸಾಹಿತ್ಯಚರಿತ್ರೆಯೊಂದು ಎಲ್ಲಿದೆ ಎಂದು ವಿದ್ಯಾರ್ಥಿಗಳು ಕೇಳಿದಾಗ "ಅದು ಇನ್ನೂ ನನ್ನ ತಲೆಯಲ್ಲಿದೆ ಎಂದು ನಾನು ಉತ್ತರಕೊಡುತ್ತಿದ್ದೆ." ಎಂದು ಮುಗಳಿಯವರೇ ವಿನೋದವಾಗಿ ತಮ್ಮ ಜೀವನಚರಿತ್ರೆಯಲ್ಲಿ ಹೇಳಿಕೊಂಡಿದ್ದಾರೆ. ಈ ಕೃತಿಯ ವಿಶೇಷತೆಯನ್ನು ವಿವರಿಸುತ್ತ ಪ್ರಸಿದ್ಧ ವಿಮರ್ಶಕ ಕೀರ್ತಿನಾಥ ಕುರ್ತಕೋಟಿಯವರು ಹೇಳಿರುವ ಮಾತು ಇದು. "ಇದಕ್ಕಿಂತ ಮೊದಲು ಪ್ರಕಟವಾದ ಇತಿಹಾಸಗ್ರಂಥಗಳ ಅಪೂರ್ಣತೆಗಳನ್ನೆಲ್ಲ ಇದು ತುಂಬಿಕೊಟ್ಟಿದೆ. ಆಧುನಿಕರಿಗೆ ಮಾತ್ರ ಸಾಧ್ಯವಾಗುವ ಇತಿಹಾಸ ಪ್ರಜ್ಞೆಯ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದ ಸಮಗ್ರಚಿತ್ರ ದೊರೆಯುವುದರಿಂದ ಆ ಸಾಹಿತ್ಯದ ನೆಲೆಬೆಲೆಗಳು ಹೆಚ್ಚು ಸ್ಪಷ್ಟವಾಗಿ ಕಾಣಸಿಗುತ್ತವೆ. ಒಂದು ಅರ್ಥದಲ್ಲಿ ಮುಗಳಿಯವರು ಕನ್ನಡಸಾಹಿತ್ಯವನ್ನು ಪುನಃ ಸೃಷ್ಟಿಸಿದ್ದಾರೆಂದು ಧೈರ್ಯವಾಗಿ ಹೇಳಬಹುದು.."

ಬರೆಯಲು ಹಲವು ವರ್ಷಗಳೇ ಹಿಡಿಯುವ ಇಂಥ ಕೃತಿಯನ್ನು ಮುಗಳಿಯವರು ಬರೆದು ಸಿದ್ಧಪಡಿಸಿದ ಸಂಗತಿ ಕುತೂಹಲಕರವಾಗಿದೆ. ಆ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಪಾಠಪ್ರವಚನ, ಕಾಲೇಜಿನ ಆಡಳಿತ ವ್ಯವಹಾರಗಳನ್ನೆಲ್ಲ ಮುಗಿಸಿದ ಮೇಲೂ ಅವರು ರಾತ್ರಿ ಬಹಳ ಹೊತ್ತಿನವರೆಗೆ ಕಾಲೇಜಿನಲ್ಲಿಯೇ ಉಳಿದು ಗ್ರಂಥವ್ಯಾಸಂಗದಲ್ಲಿ, ಬರವಣಿಗೆಯಲ್ಲಿ ಮಗ್ನರಾಗಿರುತ್ತಿದ್ದರು. ಕಾಲೇಜಿನಿಂದ ಮನೆಗೆ ಹಿಂತಿರುಗುವಾಗ ಎಲ್ಲ ಕಡೆ ಕತ್ತಲು. ಕಾಲೇಜಿನ ವಾಚ್‌ಮನ್ ಒಂದು ಲಾಟೀನು ಹಿಡಿದು ದಾರಿ ತೋರಿಸುತ್ತ ಅವರನ್ನು ಮುಖ್ಯರಸ್ತೆಯವರೆಗೆ ಕರೆತರುತ್ತಿದ್ದ. ಮನೆಗೆ ಬಂದ ಮೇಲೂ ಅವರ ಅಧ್ಯಯನ ನಡುರಾತ್ರಿ ಮೀರಿ ನಡೆಯುತ್ತಿತ್ತು. ಇಂಥ ನಿರಂತರ ದುಡಿಮೆ, ಕಾರ್ಯತನ್ಮಯತೆ, ಶ್ರದ್ಧೆ ಸಂಕಲ್ಪಶಕ್ತಿಗಳನ್ನು ಮಾಸ್ತಿಯವರು ತಕ್ಕ ಮಾತುಗಳಲ್ಲಿ ಕೈವಾರಿಸಿದ್ದಾರೆ. "ಮುಗಳಿಯವರ ಚೇತನ ಹುಟ್ಟುತ್ತ ದೊರೆಯಾಗಿತ್ತು; ಚಿಕ್ಕಂದೇ ಪಕ್ವವಾಗಿತ್ತು. ಸೂಕ್ಷ್ಮವಾದ ರಸಿಕತೆ, ಸೋಲರಿಯದ ದುಡಿಮೆ, ವಿಸ್ತಾರವಾದ ಪಾಂಡಿತ್ಯ, ವಿಶಾಲವಾದ ಸಹಾನುಭೂತಿ, ಸ್ಥಿರವಾದ ಪ್ರಜ್ಞೆ, ಅನಸೂಯ ಪದಸಮೃದ್ಧಿ ಅವರ ಬಾಳಿನಲ್ಲಿ ಹುಟ್ಟಿನಿಂದಲೇ ಸೇರಿ ಬಂದಿವೆ. ದೈವ ಅನುಗ್ರಹಿಸಿದ ಈ ಬಹುಮುಖದ ಸಂಪತ್ತನ್ನು ಇವರು ಗರ್ವದಿಂದ ಹೊರೆಯಂತೆ ಹೊರದೆ, ವಿನಯದಿಂದ ಹೂವಿನಂತೆ ತಳೆದಿದ್ದಾರೆ."

ರಂಗನಾಥ ಶ್ರೀನಿವಾಸ ಮುಗಳಿಯವರು ಜನಿಸಿದ್ದು ೧೯೦೬ ರಲ್ಲಿ, ಧಾರವಾಡ ಜಿಲ್ಲೆಯ ಹೊಳೆ ಆಲೂರಿನಲ್ಲಿ. ಬೊಂಬಾಯಿ ವಿಶ್ವವಿದ್ಯಾನಿಲಯದ ಬಿ.ಎ. ಪದವಿಗೆ ಓದುವಾಗ ಅವರು ದಕ್ಷಿಣಾ ಫೆಲೊ ಆಗಿ ದೀಪದ ಪದಕ ಪಡೆದರು. ೧೯೩೦ ರಲ್ಲಿ ಎಂ.ಎ. ಪದವಿ ಪಡೆದು ವಿದ್ಯಾರಣ್ಯ ಬಹುಮಾನ ಗಳಿಸಿದರು. ಅದರ ಹಿಂದೆಯೇ ಬಿ.ಟಿ. ಪದವಿಯನ್ನೂ ಮುಗಿಸಿದರು.

ಹುಬ್ಬಳ್ಳಿಯ ನ್ಯೂ ಇಂಗ್ಲೀಷ್ ಶಾಲೆಯಲ್ಲಿ ಅಧ್ಯಾಪಕರಾಗಿ ವೃತ್ತಿ ಆರಂಭಿಸಿದ ಮುಗಳಿಯವರು ಮರಾಠಿ ವಾತಾವರಣ ಪ್ರಬಲವಾಗಿದ್ದ ಸಾಂಗ್ಲಿಯ ವಿಲ್ಲಿಂಗ್‌ಡನ್ ಕಾಲೇಜಿಗೆ ಪ್ರಿನ್ಸಿಪಾಲರಾಗಿ ಹೋದರು. ನಿವೃತ್ತರಾದ ಮೇಲೆ ಬೆಂಗಳೂರು ವಿಶ್ವವಿದ್ಯಾಲಯದ ಮೊದಲ ಕನ್ನಡ ಪ್ರಾಧ್ಯಾಪಕರಾಗಿ ಮತ್ತು ವಿಭಾಗ ಮುಖ್ಯಸ್ಥರಾಗಿ ದುಡಿದರು. ತಮ್ಮ ವಿದ್ವತ್ತು ಸಾಧನೆಗಳ ಬಲದಿಂದ ಹೊರದೇಶಗಳಿಗೂ ಹೋಗಿ ಮನ್ನಣೆ ಪಡೆದು ಬಂದರು. ೧೯೬೩ ರಲ್ಲಿ ತುಮಕೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಅವರಿಗೆ ದೊರೆಯಿತು. ಇದಕ್ಕೆ ಮೊದಲೇ ಅವರ ಕನ್ನಡ ಸಾಹಿತ್ಯ ಚರಿತ್ರೆಗೆ ಪುಣೆ ವಿಶ್ವವಿದ್ಯಾಲಯದ ಮೊದಲ ಡಿ.ಲಿಟ್ ಪದವಿ ನೀಡಲಾಗಿತ್ತು.

ಮುಗಳಿಯವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಕನ್ನಡದಲ್ಲಿ ಎರಡನೆಯದಾಗಿ ಪಡೆದ ಧೀಮಂತರು. ತಮ್ಮ ಈ ಸಾಹಿತ್ಯ ಚರಿತ್ರೆಯಿಂದ ಅವರು ಎಷ್ಟು ಪ್ರಸಿದ್ಧರಾಗಿಬಿಟ್ಟರೆಂದರೆ ಸಾಹಿತ್ಯದ ಬೇರೆ ಪ್ರಕಾರಗಳಲ್ಲಿ ಅವರು ಮಾಡಿದ ಉತ್ತಮ ಕೆಲಸ ಕೂಡ ಹೆಚ್ಚು ಗಮನ ಸೆಳೆಯದೇ ಹೋಯಿತು. ಹಾಮಾ ನಾಯಕರು ಹೇಳಿರುವಂತೆ "ವೈಜ್ಞಾನಿಕವಾದ, ವ್ಯವಸ್ಥಿತವಾದ, ಆಧಾರಪೂರ್ವಕವಾದ ಹಾಗೂ ವಸ್ತುನಿಷ್ಠವಾದ ಮೊಟ್ಟಮೊದಲ ಸಾಹಿತ್ಯ ಚರಿತ್ರೆಯನ್ನು ಕನ್ನಡಕ್ಕೆ ನೀಡಿದ್ದು ಅವರ ಜೀವಮಾನದ ಮಹತ್ಸಾಧನೆಯೇ ಆಗಿದೆ. ಆಕರ ಸಾಮಗ್ರಿಗಳು ಸುಲಭವಾಗಿ ದೊರೆಯದಿರುವ ಸಾಂಗ್ಲಿಯಂಥ ದೂರದ ಊರಿನಲ್ಲಿದ್ದುಕೊಂಡು ಅವರು ಕನ್ನಡ ಸಾಹಿತ್ಯಚರಿತ್ರೆಯನ್ನು ರಚಿಸಿದ್ದು ಒಂದು ಪವಾಡವೇ ಸರಿ. ಮುಂದೆ ಬರುವ ಯಾವನೇ ಸಾಹಿತ್ಯ ಚರಿತ್ರಕಾರ ಅವರ ಈ ಕೃತಿಯನ್ನು ಗಮನಿಸದೆ, ಮುಂದೆ ಸಾಗುವುದು ಸಾಧ್ಯವೇ ಇಲ್ಲ ಎಂದರೆ ಅದು ಅತಿಶಯೋಕ್ತಿಯಾಗಲಾರದು. ಹೀಗಾಗಿ ಅದು ಇತಿಹಾಸವನ್ನೆ ಸೃಷ್ಟಿಸಿದ ಕೃತಿಯೆನ್ನಿಸಿಕೊಂಡಿದೆ."

ಕನ್ನಡ ಸಾಹಿತ್ಯದ ಬಹುತೇಕ ಎಲ್ಲ ಪ್ರಕಾರಗಳಲ್ಲಿಯೂ ಮುಗಳಿಯವರು ಗಮನಾರ್ಹವಾದ ಕೃತಿಗಳನ್ನು ರಚಿಸಿದ್ದಾರೆ. 'ಪ್ರಾಚೀನ ಕನ್ನಡ ಸಾಹಿತ್ಯರೂಪಗಳು', 'ಮಹಾಕೃತಿ' ಎಂಬ ಎರಡು ಹೊತ್ತಗೆಗಳೂ ಕನ್ನಡಕ್ಕೆ ಅವರ ಅರ್ಥಪೂರ್ಣ ಕೊಡುಗೆಗಳು. ರನ್ನನ ಕೃತಿರತ್ನ, ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ–ಇವು ಅವರ ವಿಮರ್ಶಾಕೃತಿಗಳು. ಕಾವ್ಯಪ್ರಕಾರದಲ್ಲಿ ಅವರು ಬಾಸಿಗ, ಅಪಾರ ಕರುಣೆ,

ಓಂ ಅಶಾಂತಿ, ನವಮಾನವ ಮೊದಲಾದ ಏಳು ಸಂಗ್ರಹಗಳನ್ನು ಹೊರತಂದರು. ಇವೆಲ್ಲ ನವೋದಯ ಮಾರ್ಗದ ಭಾವಗೀತ ಕಾವ್ಯರೂಪದಲ್ಲಿ ಪ್ರಕಟವಾದಂಥವು. ಅವರ ಕವಿತೆಯ ರೀತಿಗೆ 'ಬಂದಾರ ತಂದಾರ ಮಂದಾರ ಹೂವಾ' ಎಂಬ ಭಾವಗೀತೆ ಉತ್ತಮ ನಿದರ್ಶನ, ಸುಶ್ರಾವ್ಯವಾದ ಗೀತೆಯಾಗಿ ಕರ್ನಾಟಕದ ಎಲ್ಲ ಕಡೆ ಜನಪ್ರಿಯವಾಗಿರುವ ಕವಿತೆ ಇದು. ಇಂದ್ರನ ನಂದನವನದ ಮಂದಾರ ಹೂವುಗಳನ್ನು ಅಲ್ಲಿಯ ಹೂವಾಡಿಗಿತ್ತಿಯರು ಮಾರಾಟ ಮಾಡಲೆಂದು ಈ ಲೋಕಕ್ಕೆ ತಂದರಂತೆ. ಅವು ಸಾಮಾನ್ಯ ಪುಷ್ಪಗಳಲ್ಲ, ಸ್ವರ್ಗದ ಪುಷ್ಪಗಳು. ಆದರೆ ಇಲ್ಲಿಯ ಜನ ಮಾತ್ರ ಒಂದು ಹೂವನ್ನೂ ಕೊಳ್ಳಲಿಲ್ಲ. ಶ್ರೇಷ್ಠವಾದದ್ದರ ಬಳಿಗೇ ಸುಳಿಯದ ಮಾನವರ ಕಳಪೆ ರುಚಿಯನ್ನು ಈ ರೂಪಕಾತ್ಮಕವಾದ ಕವಿತೆ ಸಮರ್ಥವಾಗಿ ವಿಡಂಬಿಸುತ್ತದೆ. ಈ ಕವನ ಸಂಕಲನಗಳಲ್ಲದೆ ಅರವಿಂದರ 'ಸಾವಿತ್ರಿ' ಎಂಬ ಮಹಾಕಾವ್ಯವನ್ನು ಅವರು ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ.

ಕಾದಂಬರಿ, ನಾಟಕ, ಸಣ್ಣಕತೆ, ಜೀವನ ಚರಿತ್ರೆ, ವೈಚಾರಿಕ ಪ್ರಬಂಧಗಳ ಪ್ರಕಾರಗಳಲ್ಲಿಯೂ ಮುಗಳಿಯವರು ಹುಲುಸಾದ ಬೆಳೆ ತೆಗೆದಿದ್ದಾರೆ, ಬಾಳುರಿ, ಅನ್ನ, ಕಾರಣಪುರುಷ, ಅಗ್ನಿವರ್ಣ–ಇವು ಅವರ ನಾಲ್ಕು ಕಾದಂಬರಿಗಳು. 'ಅನ್ನ' ಬಂಗಾಳದಲ್ಲಿ ಹಿಂದೆ ತಲೆದೋರಿದ್ದ ಭೀಕರ ಕ್ಷಾಮವನ್ನು ಕಥಾತ್ಮಕವಾಗಿ ವರ್ಣಿಸುತ್ತದೆ. ಮೇಲಿನ ಕಾದಂಬರಿಗಳಲ್ಲಿ ಮೊದಲ ಮೂರು ಸಾಮಾಜಿಕ ಕಾದಂಬರಿಗಳು. ಇವುಗಳಲ್ಲಿ ಜನಪರವಾದ ಕಾಳಜಿಗಳು, ಆದರ್ಶದ ಗುಂಗು, ಅನನ್ಯತೆಯ ಹಂಬಲ, ಕನ್ನಡ ಭಾಷೆಯನ್ನು ಉದ್ಧರಿಸಬೇಕೆಂಬ ಬಯಕೆಗಳು ಒಡೆದು ಕಾಣುತ್ತವೆ – ಎಂದು ಅವರ ಜೀವನ ಚರಿತ್ರೆಯನ್ನು ಬರೆದ ತಾಳ್ತಜೆ ವಸಂತಕುಮಾರರು ಅಭಿಪ್ರಾಯಪಡುತ್ತಾರೆ. ಎತ್ತಿದ ಕೈ, ಸೇವಾಪ್ರದೀಪ, ನಾಮಧಾರಿ, ನಕ್ ನಕ್ ಸತ್ರು ಮೊದಲಾಗಿ ಹನ್ನೆರಡು ನಾಟಕಗಳನ್ನೂ ಮುಗಳಿ ರಚಿಸಿದ್ದಾರೆ. 'ಕನಸಿನ ಕೆಳದಿ' ಎನ್ನುವುದು ಅವರ ಹನ್ನೊಂದು ಸಣ್ಣಕಥೆಗಳ ಸಂಗ್ರಹ. ಇವಲ್ಲದೆ 'ಕನ್ನಡದ ಕರೆ' 'ಮಾತೆಂಬುದು ಜ್ಯೋತಿರ್ಲಿಂಗ' ಮೊದಲಾದ ಒಂಬತ್ತು ಲಘು ನಿಬಂಧ ಹಾಗೂ ವೈಚಾರಿಕ ಲೇಖನಗಳ ಸಂಗ್ರಹವನ್ನೂ ಮುಗಳಿ ಪ್ರಕಟಿಸಿದ್ದಾರೆ.

ಗೋಕಾಕರಂತೆ ಮುಗಳಿಯವರೂ ಕವಿ ಬೇಂದ್ರೆಯವರ ಗೆಳೆಯರ ಗುಂಪಿನಲ್ಲಿದ್ದು ಅವರ ವ್ಯಕ್ತಿತ್ವದಿಂದ ಆಕರ್ಷಿತರಾಗಿ ಅವರ ಗಾಢಪ್ರಭಾವಕ್ಕೆ ಒಳಗಾಗಿದ್ದವರು, ಗೋಕಾಕರಂತೆ ಬೇಂದ್ರೆಯವರನ್ನು ಗುರುವಿನ ನೆಲೆಯಲ್ಲಿ

ಕಂಡವರು. ಎ.ಆರ್. ಕೃಷ್ಣಶಾಸ್ತ್ರಿ ಮತ್ತು ವೆಂಕಣ್ಣಯ್ಯನವರನ್ನು ಕನ್ನಡದ ಆಶ್ವಿನೀದೇವತೆಗಳು ಎಂದು ಜನ ಗೌರವಿಸಿದರಷ್ಟೆ. ಹಾಗೆಯೇ ಗೋಕಾಕ್ ಮತ್ತು ಮುಗಳಿಯವರನ್ನು ಉತ್ತರ ಕರ್ನಾಟಕದ ಭಾಗದಲ್ಲಿ ಕನ್ನಡದ ಅಶ್ವಿನೀದೇವತೆಗಳೆಂದು ಕರೆದದ್ದುಂಟು.

ಮುಗಳಿಯವರ ವ್ಯಕ್ತಿತ್ವದ ಒಂದು ಹೆಚ್ಚುಗಾರಿಕೆಯೆಂದರೆ ಮರಾಠೀ ವಾತಾವರಣ ಪ್ರಬಲವಾಗಿದ್ದ ಸಾಂಗ್ಲಿಯಂಥ ನೆಲದಲ್ಲಿ ನಿಂತು ಅವರು ಕನ್ನಡ ಸಾಹಿತ್ಯ ಚರಿತ್ರೆಯಂಥ ಗ್ರಂಥವನ್ನು ರಚಿಸಿದ್ದು ಮಾತ್ರವಲ್ಲ, ಅವರು ಅಲ್ಲಿ ಒಂದು ಕನ್ನಡ ಶಾಲೆಯನ್ನೂ ಆರಂಭಿಸಿದರು. ತಮ್ಮ ಮಕ್ಕಳನ್ನೂ ಆ ಶಾಲೆಗೆ ಸೇರಿಸಿದರು. ಅಲ್ಲಿಯ ಮಹಿಳಾ ಜೈನಾಶ್ರಮವೊಂದರಲ್ಲಿ ಕನ್ನಡಕವಿ ರತ್ನಾಕರವರ್ಣಿಯ 'ಭರತೇಶವೈಭವ' ಕಾವ್ಯವನ್ನು ರಾಗವಾಗಿ ಹಾಡಿತೋರಿಸಿ ಅದನ್ನು ಸರಳ ವ್ಯಾಖ್ಯಾನ ಸಹಿತ ನಿರೂಪಿಸುವ ಒಂದು ಕಾರ್ಯಕ್ರಮವನ್ನೂ ಕೆಲಕಾಲ ನಡೆಸಿದರು. ಗೋಕಾಕರು ಅಲ್ಲಿದ್ದಾಗ ಅವರ ಜೊತೆಸೇರಿ 'ವರುಣ ಕುಂಜ' ಎಂಬ ಸಾಹಿತ್ಯಕೂಟವನ್ನು ಆರಂಭಿಸಿ ಸಾಹಿತ್ಯ ಸಂಬಂಧವಾದ ವಾಚನ, ಚರ್ಚೆಗಳಿಗೆ ಅವಕಾಶ ಕಲ್ಪಿಸಿದರು. ಕನ್ನಡದ ಮೊದಲ ನವ್ಯಕವಿತೆ ಬರೆದವರೆಂಬ ಅಗ್ಗಳಿಕೆಗೆ ಪಾತ್ರರಾದ ಪೇಜಾವರ ಸದಾಶಿವರಾವ್ ಮತ್ತು ಪ್ರಸಿದ್ಧ ಕಥನಕವಿ ಎಕ್ಕುಂಡಿಯವರು ಈ ವರುಣ ಕುಂಜದ ಪ್ರಭಾವದೊಳಗೆ ಬಂದವರು. ಹೀಗೆ ಅನ್ಯಭಾಷೆಯ ದಟ್ಟ ಪ್ರಭಾವವಿದ್ದ ವಾತಾವರಣದಲ್ಲಿಯೂ ಮುಗಳಿಯವರು ಕನ್ನಡದ ಏಳಿಗೆಗೆ ದುಡಿದರು. ಇಷ್ಟಾಗಿಯೂ ಮರಾಠಿ ನೆಲದ ಬಗೆಗೂ ಅವರಿಗೆ ತುಂಬ ಗೌರವವಿತ್ತು. "ಕರ್ನಾಟಕವು ನನ್ನನ್ನು ಹೆತ್ತ ತಾಯಿ. ಮಹಾರಾಷ್ಟ್ರವು ನನ್ನನ್ನು ಹೊತ್ತ ತಾಯಿ" ಎಂದು ಅವರು ಹೇಳುತ್ತಿದ್ದುದುಂಟು.

ಕನ್ನಡ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ವಿಪುಲವಾಗಿ ಪ್ರೌಢ ಬರಹವನ್ನು ಪ್ರಕಟಿಸಿದ್ದರೂ ಕನ್ನಡನಾಡು ಇವತ್ತಿಗೂ ಮುಗಳಿಯವರಿಗೆ ವಿಶೇಷವಾಗಿ ಕೃತಜ್ಞರಾಗಿರುವುದು ಅವರ ಕನ್ನಡ ಸಾಹಿತ್ಯಚರಿತ್ರೆಗೆ. ಅದು ಅವರ ಆಚಾರ್ಯಕೃತಿ. ಒಂದೂವರೆ ಸಾವಿರ ವರ್ಷಗಳ ಅವಧಿಯಲ್ಲಿ ಹರಡಿ ನಿಂತ ವಿಪುಲವೂ ಸತ್ವಪೂರ್ಣವೂ ಆದ ಕನ್ನಡ ಸಾಹಿತ್ಯವನ್ನು ಒಂದು ಅರ್ಥಪೂರ್ಣ ಚೌಕಟ್ಟಿನೊಳಗೆ ವ್ಯವಸ್ಥಿತವಾಗಿ ವಿಂಗಡಿಸಿ ಓದುಗರ ಗ್ರಹಿಕೆಗೆ ಒಳಪಡುವಂತೆ ವ್ಯಾಖ್ಯಾನಿಸಿ ವಿಮರ್ಶಿಸಿದ್ದು ಸಾಮಾನ್ಯಸಂಗತಿಯಲ್ಲ. ಅವರ ವಿವರಣೆ ಬಹುಮಟ್ಟಿಗೆ ಸಮರ್ಪಕವಾಗಿದ್ದು ವಿಮರ್ಶೆ ರಸಾತ್ಮಕವಾಗಿದೆ. ಚರಿತ್ರೆಯಾದರೂ ನೀರಸ ಬರೆಹವಾಗದೆ ವಾಚನೀಯವಾಗಿದೆ. ಪಂಪ, ಬಸವಣ್ಣ, ಕುಮಾರವ್ಯಾಸ , ಜನ್ನ,

ರತ್ನಾಕರವರ್ಣಿಯಂಥ ಶ್ರೇಷ್ಠ ಕವಿಗಳ ಬಗ್ಗೆ ಬರೆಯುವಾಗ ಅವರ ಶೈಲಿ ರಸೋತ್ಕಟ ನೆಲೆಗೆ ಏರುತ್ತದೆ. ಮಧ್ಯೆ ಮಧ್ಯೆ ಮಿಂಚುವ ಉಪಮೆಗಳು ಅದಕ್ಕೆ ಕಾವ್ಯದ ಸತ್ವವನ್ನೂ ತಂದುಕೊಡುತ್ತದೆ. "ಪ್ರಭುದೇವ ಹಿರಿಯ ಜ್ಞಾನಿಯಾದರೆ ಬಸವಣ್ಣ ಹಿರಿಯ ಭಕ್ತ. ಬೇರೆ ಬೇರೆಯಾಗಿ ಬೆಳೆದು ಎತ್ತರದಲ್ಲಿ ಬೆರೆತ ಮರಗಳಂತೆ ಅವರು ಕೂಡಿಕೊಂಡರು" ಎಂಬಂಥ ಸಾಲುಗಳು ಇದಕ್ಕೆ ಸಾಕ್ಷಿ. ಬಸವಣ್ಣ, ಅಲ್ಲಮ, ಪುರಂದರದಾಸರ ಬಗ್ಗೆ ಬರೆಯುವಾಗ ಅವರ ವಚನ, ಕೀರ್ತನೆಗಳಲ್ಲಿನ ಉತ್ಕಟ ಅರ್ಥಭಾವಗಳ ಸಾಲುಗಳನ್ನು ತಮ್ಮ ವಿಮರ್ಶೆಗೆ ಪೂರಕವಾಗಿ ತರುತ್ತಾರೆ. ಪುರಂದರದಾಸರಿಂದ ಐವತ್ತಕ್ಕಿಂತಲೂ ಹೆಚ್ಚು ಶ್ರೇಷ್ಠವಾದ ಕೀರ್ತನೆಗಳ ಸಾಲುಗಳನ್ನು ಮತ್ತು ಬಸವಣ್ಣ, ಅಲ್ಲಮ, ಅಕ್ಕಮಹಾದೇವಿಯರಿಂದ ಶ್ರೇಷ್ಠವಚನಗಳನ್ನು ಇಡಿ ಇಡಿಯಾಗಿ ಉದ್ಧರಿಸುತ್ತಾರೆ. ಎಲ್ಲ ಉದ್ಧರಣಗಳೂ ಔಚಿತ್ಯಪೂರ್ಣವಾಗಿದ್ದು, ಮತ್ತೆ ಮತ್ತೆ ಅಭ್ಯಾಸ ಮಾಡಿ ಆಯ್ದ ಸೂಕ್ತಿಗಳಾಗಿ ಹೊಳೆಯುತ್ತವೆ. ಪಂಪ-ಕಾಳಿದಾಸ, ಪಂಪ-ಕುಮಾರವ್ಯಾಸರ ಸಂಬಂಧದಲ್ಲಿ ಹೋಲಿಕೆ, ಭೇದಗಳನ್ನು ವಿವರಿಸುವಾಗ ನಿರೂಪಣೆಯು ತೌಲನಿಕ ವಿಮರ್ಶೆಯಾಗಿ ಹೊಸ ಪರಿಣಾಮವನ್ನು ಸಾಧಿಸುತ್ತದೆ; ಬರೆಹ ಅತ್ಯಂತ ವಾಚನೀಯವಾಗುತ್ತದೆ. ಹಿಂದೆ ಹಿರಿಯ ವಿದ್ವಾಂಸರು, ವಿಮರ್ಶಕರು ಕನ್ನಡ ಕವಿಗಳ ಬಗ್ಗೆ ಮಾಡಿರುವ ಶ್ರೇಷ್ಠ ಹೇಳಿಕೆಗಳೆಲ್ಲವೂ ಆಯಾ ಕವಿಯ ಸಂದರ್ಭದಲ್ಲಿ ಆಯವರಿತು ಪ್ರಸ್ತಾಪಗೊಳ್ಳುತ್ತವೆ. ಹೀಗೆ ಈ ಕೃತಿ ಎತ್ತರದ ಪಾಂಡಿತ್ಯ, ಉತ್ತಮ ವಿಮರ್ಶೆ, ಸೂಕ್ಷ್ಮ ಒಳನೋಟದ ಮಾತುಗಳಿಂದ ಕೂಡಿ ಮನೋಜ್ಞವಾದ ಕೃತಿಯಾಗಿದೆ.

●

ದೇವರ ವಿರುದ್ಧ ಯುದ್ಧ ಸಾರಿದ ಮೂರ್ತಿರಾಯರು

– ಒಂದು ಸಂವಾದ

ಪ್ರೊ॥ ಎ. ಎನ್. ಮೂರ್ತಿರಾಯರದು ಕನ್ನಡ ಸಾಹಿತ್ಯ ವಲಯದಲ್ಲಿ ಬಹಳ ಗಣ್ಯವಾದ ಹೆಸರು. ಇಂಗ್ಲಿಷ್ ಪ್ರಾಧ್ಯಾಪಕರಾಗಿ ಅವರು ಸಹಸ್ರಾರು ವಿದ್ಯಾರ್ಥಿಗಳ ಅಭಿಮಾನ ಗೌರವಗಳನ್ನು ಗೆದ್ದವರು; ಯಾವ ಇಂಗ್ಲಿಷ್ ಪ್ರಬಂಧಕಾರನಿಗೂ ಕಡಮೆಯಲ್ಲದಂತೆ ಕನ್ನಡದಲ್ಲಿ ರುಚಿರುಚಿಯಾದ ಪ್ರಬಂಧಗಳನ್ನು ಬರೆದು ಆ ಸಾಹಿತ್ಯ ಪ್ರಕಾರವನ್ನೇ ಮೇಲೆತ್ತಿದವರು; 'ಪತ್ರಗಳು ಚಿತ್ರಗಳು' ಎಂಬ ರಸಾತ್ಮಕ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದವರು. ಮೈಸೂರು ವಿಶ್ವವಿದ್ಯಾನಿಲಯ ಅವರ ವ್ಯಕ್ತಿತ್ವದ ಎತ್ತರಕ್ಕೆ ಬಾಗಿ ಗೌರವ ಡಿ. ಲಿಟ್ ಪದವಿ ಇತ್ತಾಗ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಅವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಿ 'ನಾಡೋಜ'ರೆಂದು ಗೌರವಿಸಿದಾಗ ಎಲ್ಲರಿಗೂ ಅದು ತೀರ ಸಹಜವಾದ ಮನ್ನಣೆಯಾಗಿ ಕಂಡಿತು. ಅವರ ಮಾತಿಗೆ ಸಾಹಿತ್ಯವಲಯದಲ್ಲಿ ಇರುವ ಗೌರವ ಎಷ್ಟೆನ್ನುವುದನ್ನು ನನ್ನ ಒಂದು ಅನುಭವದಿಂದಲೇ ನಿದರ್ಶಿಸಬಹುದು. ನಾನು ಯಾಕಾಗಿಯೋ ಅನುವಾದಿಸಿದ್ದ ಷೇಕ್ಸ್‌ಪಿಯರನ ಸಾನೆಟ್ಟೊಂದನ್ನು ಅವರು ತುಂಬ ಮೆಚ್ಚಿ ಈತ ಇನ್ನಷ್ಟು ಸಾನೆಟ್ ಅನುವಾದ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಎಂದು ಯಾರಿಗೋ ಹೇಳಿದರು. ಆ ಮಾತು ನನ್ನ ಕಿವಿ ಮುಟ್ಟಿತು. ಮೂರ್ತಿರಾಯರ ಮೆಚ್ಚಿಕೆ ಮಾತಿಗಿಂತ ದೊಡ್ಡ ಮನ್ನಣೆಯೇ? ಸ್ವಭಾವತಃ ತುಂಬ ಅಲಸಿಯಾದ ನಾನು ಆ ಮಾತಿನಿಂದ ಹುರುಪುಗೊಂಡು ಷೇಕ್ಸ್‌ಪಿಯರನ ನೂರು ಸಾನೆಟ್ಟು ಅನುವಾದಿಸಿಬಿಟ್ಟೆ!

೧೯೯೦ರ ಕೊನೆ ಇರಬಹುದು. ಮೂರ್ತಿರಾಯರ 'ಸಂಜೆಗಣ್ಣಿನ ಹಿನ್ನೋಟ' ಕೃತಿಯನ್ನು ಓದುತ್ತಿದ್ದೆ. ಕೇವಲ ವೃತ್ತಾಂತಗಳಿಂದಲೇ ಇಡಿಕಿರಿದ ಸ್ವಾರಸ್ಯಕರವಾದ

ಬರೆಹ ಅದು. ಆತ್ಮಕಥೆಯ ರೂಪದಲ್ಲಿದ್ದರೂ ತನ್ನ ಕಾಲವನ್ನು, ಸುತ್ತಮುತ್ತಲ ಪರಿಸರವನ್ನು, ಅದರ ಸಂಸ್ಕೃತಿ ವೈಚಾರಿಕತೆಗಳನ್ನು ಜೊತೆಗೆ ಹೊತ್ತು ತಂದ ಕೃತಿ. ಅದರ ಒಂದು ಭಾಗದಲ್ಲಿ ಭಾರತೀಯರ ದೈವಕಲ್ಪನೆ ಕುರಿತು ಅವರು ಮಂಡಿಸಿದ್ದ ವಿಚಾರ ನನ್ನಲ್ಲಿ ಕುತೂಹಲ ಹುಟ್ಟಿಸಿತು. ಅವರು ಆ ಬಗ್ಗೆ ಇನ್ನಷ್ಟು ಬರೆದಿದ್ದರೆ ಆಗುತ್ತಿತ್ತು ಎನ್ನಿಸಿತು. ಈಶ್ವರವಾದವನ್ನು ಕುರಿತ ತಮ್ಮ ಹೆಚ್ಚಿನ ಅನಿಸಿಕೆಗಳನ್ನು ಬರಲಿರುವ ಪುಸ್ತಕದಲ್ಲಿ ಹೇಳಿರುವುದಾಗಿ ಮೂರ್ತಿರಾಯರು ಅಲ್ಲಿ ತಿಳಿಸಿದ್ದರು. ಆ ಪುಸ್ತಕದ ಬಿಡುಗಡೆಗೆ ನಾನು ತುದಿಗಾಲ ಮೇಲೆ ಕಾದೆ. ಬಂದೊಡನೆ ತಂದು ಓದಿದೆ. ಪುಸ್ತಕದ ಹೆಸರು 'ದೇವರು'.

ಅಚ್ಚುಕಟ್ಟಾದ ಕನ್ನಡ, ತೊಡಕಿಲ್ಲದ ನಿರೂಪಣೆ, ವಿಚಾರದ ತರ್ಕಬದ್ಧಚಲನೆ, ಶಂಕಿಸಲಾಗದ ಪ್ರಾಮಾಣಿಕತೆ. ಆ ಬರೆಹ ನನಗೆ ಅವರಲ್ಲಿದ್ದ ಗೌರವವನ್ನು ಇಮ್ಮಡಿಸಿತು. ಅದು ದೈವದ ಅಸ್ತಿತ್ವವನ್ನು ನಿರಾಕರಿಸುವ ಬರೆಹವಾಗಿತ್ತು.

ಆದರೂ ಅಲ್ಲಿ ಪ್ರತಿಪಾದಿತವಾಗಿದ್ದ ನಿಲುವು ನನ್ನ ಗಂಟಲಿನಲ್ಲಿ ಇಳಿಯಲಿಲ್ಲ. ಕಾರಣ ಏನೆಂದು ನನಗೇ ಸ್ಪಷ್ಟವಾಗಲಿಲ್ಲ. ನನ್ನನ್ನೇ ನಾನು ಅನುಮಾನಿಸಿಕೊಂಡೆ. ಎಂಟು ಹತ್ತು ದಿನ ಅದು ನನ್ನನ್ನು ಕಾಡುತ್ತಲೇ ಇತ್ತು. ನನ್ನ ಅಸಮ್ಮತಿಯ ಕಾರಣ ಏನೆನ್ನುವುದು ಕ್ರಮೇಣ ನನಗೆ ಅಸ್ಪಷ್ಟವಾಗಿ ಹೊಳೆಯಿತು. ದೈವದ ಅಸ್ತಿತ್ವ ಕುರಿತ ಗ್ರಹಿಕೆ ಕೇವಲ ತರ್ಕದಿಂದ ಸಿದ್ಧಿಸುವಂಥದೆ? ಬುದ್ಧಿ ಕಲ್ಪನೆ ಭಾವನೆಗಳಂಥ ಹಲವು ಎಳೆಗಳು ಒಟ್ಟಾಗಿ ಹುರಿಗೊಂಡ ಧ್ಯಾನಚೋದಿತ ಚಿತ್ತಕ್ಕೆ ಕೂಡ ಹೊಳೆದರೆ ಹೊಳೆದೀತು, ಬಿಟ್ಟರೆ ಬಿಟ್ಟೀತು ಎನ್ನುವ ಸೂಕ್ಷ್ಮ ಅನುಭವ ತರ್ಕದ ಕಪಲೆತೂತುಗಳ ಜಾಳುಬಲೆಯಲ್ಲಿ ಸಿಕ್ಕಿ ಬೀಳಬಲ್ಲುದೆ ಎನಿಸಿತು. ಇದನ್ನೆಲ್ಲ ಪ್ರಶ್ನಿಸಿ ನನ್ನ ಪ್ರತಿಕ್ರಿಯೆ ತಿಳಿಸುವ ಒಂದು ಪತ್ರ ಬರೆಯಲು ಕೂತೆ. ಅದು ಅರ್ಧಕ್ಕೇ ನಿಂತುಹೋಯಿತು. ಎರಡು ಮೂರು ದಿನ ಕಳೆದಿರಬಹುದು. ಪದ್ಯರೂಪದ ಕೆಲವು ಸಾಲು ಹೊಳೆದುವು. ಬರೆಯುತ್ತ ಹೋದೆ. ಪದ್ಯ ದೀರ್ಘವಾಗಿ ಬೆಳೆಯಿತು. ಆಶ್ಚರ್ಯವೆಂದರೆ ಅದು ಪ್ರತಿಕ್ರಿಯಾರೂಪದ್ದಾಗಿರಲಿಲ್ಲ. ಎಷ್ಟೋ ಕಾಲದಿಂದ ನನ್ನ ಅಂತಃಕರಣದ ಸುಳಿ, ಮಡುವುಗಳಲ್ಲಿ ಸಿಕ್ಕಿ ಹಾಕಿಕೊಂಡು, ಹಿಂದೆ ಬರೆದ ಪದ್ಯ, ಗೀತೆಗಳಲ್ಲಿ ಅಷ್ಟಿಷ್ಟು ಮುಖ ತೋರಿಸಿ ಮೈಗರೆದಿದ್ದ ಸಂವೇದನೆ ಅದು. ಈಗ ತಾನೇತಾನಾಗಿ ದಿಢೀರನೆ ಹೊರಬಂದಂತಿತ್ತು. ಸರಳ ಕವನವಾಗಿರದೆ ಅನೇಕ ಒಳಟಿಸಿಲು ಬೆಳೆಸಿಕೊಂಡಿತ್ತು. ಪದ್ಯವನ್ನು ಸ್ನೇಹಿತರಿಗೆ ತೋರಿಸಿದೆ. ಅದನ್ನು ಒಂದು ಧ್ವನಿಸುರುಳಿಯಲ್ಲಿ ಓದಿ ಲಾಸ್ ಏಂಜಲೀಸ್‌ನಲ್ಲಿರುವ ಇಂದ್ರಾಣಿಮೂರ್ತಿಗೆ ಕಳಿಸಿದೆ. ಕಾಕತಾಳೀಯವೆಂಬಂತೆ ಮೂರ್ತಿರಾಯರು ಅಲ್ಲೇ ಇದ್ದರು. ಪದ್ಯವನ್ನು ಅವರೂ ಕೇಳಿದರು. ಭಾರತಕ್ಕೆ

ಬಂದವರೇ ಫೋನ್ ಮಾಡಿದರು. "ನಿಮ್ಮ ಅರುಣಗೀತೆ ಪದ್ಯ ಕೇಳಿದೆ. ಇಷ್ಟವಾಯಿತು. ದೇವರು ವಿಷಯ ಕುರಿತು ನಿಮ್ಮ ಜೊತೆ ಬಹಳ 'ಜಗಳ'ವಾಡುವುದಿದೆ! ತಪ್ಪಿಸಿಕೊಳ್ಳಬೇಡಿ. ಯಾವಾಗ ಬರುತ್ತೀರಿ ಹೇಳಿ?"

ಅಂಥ ಒಂದು 'ಜಗಳ'ಕ್ಕಾಗಿ ನಾನೂ ಕಾಲು ಕೆರೆದುಕೊಂಡೇ ಇದ್ದೆ! ಆದರೂ ಹೋಗುವುದಾಗಿರಲಿಲ್ಲ. ಉದಯವಾಣಿ ಪತ್ರಿಕೆ ಇದ್ದಕ್ಕಿದ್ದಂತೆ ಒಂದು ಸಂದರ್ಭ ಕಲ್ಪಿಸಿತು. 'ದೇವರು' ಎಂಬ 'ಕಲ್ಪನೆ' ಕುರಿತು ಇಬ್ಬರೂ ಚರ್ಚೆ ಮಾಡಿ ಕಳಿಸಿ. ವಿಶೇಷ ಲೇಖನವಾಗಿ ಪ್ರಕಟಿಸುತ್ತೇವೆ ಎಂದಿತು. ಈ ಸಂವಾದ ಅದರ ಫಲ.

ನಾನು: ಸಾರ್, ನೀವು ಕರೆದಂತೆಯೇ ಬಂದಿದ್ದೇನೆ. ಚರ್ಚೆಯನ್ನು ಎಲ್ಲಿ ಶುರು ಮಾಡೋದು ಅನ್ನೋ ಸಮಸ್ಯೆಯೇನೂ ಇಲ್ಲ. 'ದೇವರು' ಪುಸ್ತಕದಲ್ಲಿ ನೀವು ದೇವರ ಮೇಲಿನ ದಾಳಿಯನ್ನು ಗಣಪತಿಯಿಂದಲೇ ಆರಂಭಿಸಿದ್ದೀರಿ! ನಿರೀಶ್ವರವಾದಿಯಾದ ನೀವೇ ಗಣಪತಿಗೆ ಮೊದಲ ಪೂಜೆ ಸಲ್ಲಿಸಿ ಸಂಪ್ರದಾಯ ಪಾಲಿಸಿರುವಾಗ ನಾನು ಕ್ರಮಕ್ಕೆ ತಪ್ಪುವದು ಯಾಕೆ?

ಮೂರ್ತಿರಾವ್: ಕಾರಣವಿಲ್ಲದೆ ಯಾಕೆ ಕ್ರಮ ಮುರೀತೀರಪ್ಪಾ! ಗಣಪತಿಯ ಕಲ್ಪನೆ ನನಗೂ ಇಷ್ಟವಾದದ್ದೇ. ನಾನು ಅವನ ಅಸ್ತಿತ್ವವನ್ನು ನಿರಾಕರಿಸುವವನೇ ಹೊರತು ಅವನ ಕಲ್ಪನೆಯ ಹಿಂದಿರುವ ನಮ್ಮ ಜನದ ನಿರ್ಮಲ ಹಾಸ್ಯ ಮನೋಧರ್ಮವನ್ನಲ್ಲ. ಜನಕ್ಕೆ ಅವನಲ್ಲಿ ಭಕ್ತಿ ಇರಬಹುದು. ನಾನು ನನ್ನ ಮನಸ್ಸಿನಲ್ಲಿ ಭಕ್ತಿಗೆ ಬದಲಾಗಿ ಆ ಕಲ್ಪನೆಯ ಹಿಂದಿನ ಆಕರ್ಷಕತೆಯನ್ನು ತುಂಬಿಕೊಂಡಿದ್ದೇನೆ.

ನಾನು: ಗಣಪತಿ, ಶಿವ, ವಿಷ್ಣು, ಇಂದ್ರ – ಇಂಥ ದೇವತೆಗಳ ಕಥೆಗಳಲ್ಲಿ ಕಾಣುವ ಪರಸ್ಪರ ವಿರೋಧದ ಅಂಶಗಳನ್ನು ತೋರಿಸಿ ನೀವು ಅವುಗಳನ್ನು ಗೇಲಿ ಮಾಡಿದ್ದೀರಿ. ಅವು ಏನಿದ್ದರೂ ಪುರಾಣ ಕಥೆಗಳು; ಈಶ್ವರವಾದದ ಗಂಭೀರ ಕಲ್ಪನೆಯಿಲ್ಲದ ಜನ ಸೃಷ್ಟಿಸಿರಬಹುದಾದದ್ದು. ಈಶ್ವರವಾದವನ್ನು ಅಲ್ಲಗಳೆಯುವವರು ತಮ್ಮ ಚರ್ಚೆಗೆ ಗುರಿ ಮಾಡಬೇಕಾದದ್ದು ಉಪನಿಷತ್ತು, ಗೀತೆ, ಬ್ರಹ್ಮಸೂತ್ರಗಳಂಥ ಕೃತಿಗಳಲ್ಲಿರುವ ಗಂಭೀರ ಹೇಳಿಕೆಗಳನ್ನು ಅಲ್ಲವೆ?

– ಇನ್ನು ಪುರಾಣ ಕಥೆಗಳ ಪ್ರಯೋಜನವೂ ಬೇರೆಯೇ ಇಲ್ಲವೆ? ಅವುಗಳನ್ನು ಪ್ರತೀಕಾತ್ಮಕವಾದ ಮಿಥಕಗಳಾಗಿ ನೊಡಬಹುದಲ್ಲ. ಎಲ್ಲ ದೇಶದ ಸಾಹಿತ್ಯ ಇಂಥ ಮಿಥಕ (Myths)ಗಳನ್ನು ಅರ್ಥವತ್ತಾಗಿ ಬಳಸಿ ತುಂಬ ಶ್ರೀಮಂತವಾಗಿವೆ. ನಮ್ಮ ಕಾಲದ ಗಾಢ ಅನುಭವಗಳನ್ನು ಎಲ್ಲ ಕಾಲಕ್ಕೂ ದಾಟಿಸಲು ಬೇಕಾದ ಧ್ವನಿಪೂರ್ಣವಾದ ಪ್ರತೀಕಗಳ ಸೃಷ್ಟಿಗೆ ಅವು ಪಕ್ಕಾ ಸಾಮಗ್ರಿಗಳಾಗಿವೆ. ಇಂದ್ರ

ಅಹಲ್ಯೆಯರ ಕಥೆ ಪುರಾಣದಲ್ಲಿ ಹೇಗಾದರೂ ಇರಲಿ, ಕವಿ ಪುತಿನ ಅದನ್ನು ತಮ್ಮ ಅಹಲ್ಯೆ ಕಾವ್ಯನಾಟಕದಲ್ಲಿ ದಾಂಪತ್ಯ ಜೀವನದ ವಿಷಮ ಸಮಸ್ಯೆಗಳನ್ನು, ಮಾರ್ಮಿಕ ಪಲ್ಲಟಗಳನ್ನು ಹೇಳಲು ಬಳಸಿಲ್ಲವೆ? ಅದರ ಮೂಲಕ ಬೆರಗುಗೊಳಿಸುವ ಪ್ರೇಮಮೀಮಾಂಸೆಯನ್ನೇ ಮಂಡಿಸಿಲ್ಲವೆ? ಗಣಪತಿಯ ಕಲ್ಪನೆ ಕೂಡ ಬಲಿಷ್ಠ ಆನೆಯ ಬೃಹನ್ಮುಖ, ಪುಟ್ಟ ಆಕೃತಿಯ ಚುರುಕು ಇಲಿ, ಅದನ್ನು ನುಂಗುವ ಹಾವು, ಮನುಷ್ಯ ದೇಹ – ಇಂಥ ವೈಪರೀತ್ಯಗಳನ್ನು, ದ್ವಂದ್ವಗಳನ್ನು ಏಕತ್ರ ರೂಢಿಸಿಕೊಂಡ ಅರ್ಥವತ್ತಾದ ಸಂಕೇತವಾಗಿಲ್ಲವೆ?

ಮೂರ್ತಿರಾವ್: ಅದನ್ನು ನಾನೂ ಒಪ್ಪುತ್ತೇನೆ. ಆದರೆ ನಮ್ಮ ಜನ ಗಣಪತಿಯನ್ನು ಕೇವಲ ಪ್ರತೀಕ ಮಾತ್ರವಾಗಿ ಕಂಡಿಲ್ಲವಲ್ಲ! ಅವನನ್ನು ದೇವರೆಂದೂ, ವಿಘ್ನನಿವಾರಕನೆಂದೂ ಭಕ್ತಿಯಿಂದ ಆರಾಧಿಸುವ ಜನರೇ ಹೆಚ್ಚು. ಹಿಂದಿನವರಿರಲಿ, ಇಪ್ಪತ್ತನೆಯ ಶತಮಾನದಂಥ ವೈಚಾರಿಕ ಯುಗದ ಜನ ಕೂಡ ಕೃಷ್ಣನ ಗೋಪೀ ವಸ್ತ್ರಾಪಹರಣ, ರಾಸಕ್ರೀಡೆ, ರಾಧೆಯ ಪ್ರಣಯ, ವಿಷ್ಣುವಿನಿಂದ ಬೃಂದೆಯ ಪಾತಿವ್ರತ್ಯ ಭಂಗ – ಇಂಥ ಕಥೆಗಳ ಬಗ್ಗೆ ಪ್ರಶ್ನೆ ಎತ್ತಲೊಲ್ಲರು. ಈ ಬಗೆಯ ಆಕ್ಷೇಪಣೆಯನ್ನು ಮಡಿವಂತಿಕೆ ಎಂದು ತಳ್ಳಿಹಾಕುವುದು ಸುಲಭ. ಆದರೆ ನಮ್ಮನ್ನೇ ಯಾರಾದರೂ ಹಾಗೆ ಚಿತ್ರಿಸಿದರೆ ನಮಗೆ ಇಷ್ಟವಾಗುತ್ತದೆಯೆ? ಇಂಥದನ್ನೆಲ್ಲ ಒಪ್ಪಿ, ಅವುಗಳ ಕಾರಣಮೂರ್ತಿಗಳನ್ನು ದೇವರೆಂದು ಪೂಜಿಸುವುದರಲ್ಲಿ ಅರ್ಥವಿಲ್ಲ ಎಂದು ನನ್ನ ಭಾವನೆ.

ಇನ್ನು ನೀವು ಹೇಳಿದ ಮತ್ತೊಂದು ವಿಷಯ. ಉಪನಿಷತ್ತು, ಗೀತೆ ಮೊದಲಾದುವು ಎತ್ತಿ ಹಿಡಿಯುವ ಈಶ್ವರ ಕಲ್ಪನೆಯ ಬಗ್ಗೆಯೂ ನನ್ನ ಪುಸ್ತಕದಲ್ಲಿ ವಿಸ್ತಾರವಾಗಿ ಚರ್ಚಿಸಿದ್ದೇನೆ. ಸರ್ವಜ್ಞನೂ ಸರ್ವಶಕ್ತನೂ ಆದ ಒಬ್ಬ ದೇವರು ಇದ್ದಾನೆ ಎನ್ನುವುದು ಅವುಗಳ ತಾತ್ಪರ್ಯ. ಅಂಥವನೊಬ್ಬ ಇಲ್ಲ ಎನ್ನುವುದೇ ನನ್ನ ಚರ್ಚೆಯ ಸಾರ.

ಸರ್ವಜ್ಞತೆ ಮತ್ತು ಸರ್ವಶಕ್ತತೆ ಒಂದಕ್ಕೊಂದು ಅಡ್ಡಿಯಾಗದೆ ಏಕಕಾಲದಲ್ಲಿ ಒಬ್ಬನೇ ವ್ಯಕ್ತಿಯಲ್ಲಿ ಇರುವುದು ಸಾಧ್ಯವಿಲ್ಲ. ದೇವರು ಸರ್ವಜ್ಞನಾದರೆ ಮುಂದೆ ಇಂಥ ಘಟನೆ ನಡೆಯುತ್ತದೆ, ಯಾರೂ ಅದನ್ನು ಬದಲಿಸಲು ಅಥವಾ ತಪ್ಪಿಸಲು ಸಾಧ್ಯವಿಲ್ಲ ಎಂಬ ನಿಶ್ಚಿತ ಅರಿವು ಅವನಿಗೆ ಇರಬೇಕು. ಹಾಗೆ ಇದ್ದಲ್ಲಿ ಅದನ್ನು ಬದಲಿಸುವ ಅಥವಾ ತಪ್ಪಿಸುವ ಶಕ್ತಿ ಯಾರಿಗೂ ಇರಬಾರದು. ಸ್ವತಃ ದೇವರಿಗೂ ಇರಬಾರದು. ಆದರೆ ಆ ಶಕ್ತಿ ಇಲ್ಲದಿದ್ದರೆ ದೇವರು ಸರ್ವಶಕ್ತ ಎಂಬ ಮಾತು ಸುಳ್ಳಾಗುತ್ತದೆ.

ನಾನು: ವಿಸ್ಮಯಕಾರಕವಾದ ಈ ವಿಶ್ವದ ರಚನೆ ಭಾರಿ ಭಾರಿ ವಿಜ್ಞಾನಿಗಳನ್ನೂ ಸೋಜಿಗಪಡಿಸುವಷ್ಟು ನಿಗೂಢವಾಗಿದೆಯಲ್ಲವೆ? ಇದು ಮನುಷ್ಯನ ಬುದ್ಧಿಶಕ್ತಿಗಳಿಗೂ ಮೀರಿದ ಪ್ರಜ್ಞಾಶಕ್ತಿಯೊಂದರ ಆವಿರ್ಭಾವವಾಗಿರಬಹುದು ಎನ್ನಿಸುವುದಿಲ್ಲವೆ?

ಮೂರ್ತಿರಾವ್: ಹಾಗೆ ಸೋಜಿಗಕಾರಕವಾದ ಕೆಲವು ನಿರ್ದಿಷ್ಟ ಸಂಗತಿಗಳನ್ನು ಪ್ರಸ್ತಾಪಿಸುತ್ತೀರಾ?

ನಾನು: ರಾತ್ರಿ ಹೊತ್ತು ಕತ್ತೆತ್ತಿದರೆ ಸಾಕು, ಲಕ್ಷಾಂತರ ನಕ್ಷತ್ರಗಳಿಂದ ತುಂಬಿಹೋಗಿರುವ ಆಕಾಶದ ನೀಲಿಯಂಗಳ ಝುಗಝುಗಿಸುವುದು ಕಾಣುತ್ತದೆ. ನಮ್ಮ ಕಣ್ಣು ಹಾಯುವಷ್ಟು ದೂರವೂ ಚುಕ್ಕೆಗಳು ಇಡಿಕಿರಿದಿವೆ. ನಮಗೆ ತಿಳಿದಿರುವಂತೆಯೇ ಅನೇಕ ನಕ್ಷತ್ರಗಂಗೆಗಳಿವೆ; ತಿಳಿಯದಂತೆ ಎಷ್ಟಿವೆಯೋ! ಒಂದೊಂದರಲ್ಲೂ ಲೆಕ್ಕಕ್ಕೆ ಸಿಗದಷ್ಟು ಚುಕ್ಕೆಗಳು. ಹೀಗೆ ಹುಚ್ಚಾಪಟ್ಟೆ ಎರಚಿದಂತಿರುವ ನಕ್ಷತ್ರಗಳ ನಡುವೆಯೂ ಭೂಮಿಯ ದೃಷ್ಟಿಯಿಂದ ತುಂಬ ಅರ್ಥವತ್ತಾದ ಸಂಬಂಧ ಇದೆ. ಎರಡು ನಕ್ಷತ್ರಗಳ ನಡುವಿನ ಅಂತರ ಸರಾಸರಿ ಇಪ್ಪತ್ತು ಮಿಲಿಯನ್ ಮಿಲಿಯನ್ (೨೦,೦೦೦,೦೦೦,೦೦೦,೦೦೦) ಮೈಲಿಗಳು. ಈ ಅಗಾಧ ಅಂತರದ ಆಚೀಚೆ ನಿಂತ ನಕ್ಷತ್ರಗಳು ಭೂಮಿಯ ಮೇಲಿರುವ ಜೀವರಾಶಿಯ ಮೇಲೆ ನಿಶ್ಚಿತ ಪರಿಣಾಮ ಬೀರಬಲ್ಲವು ಎಂದು ಯಾರಾದರೂ ಹೇಳಿದರೆ ಅವರನ್ನು ಜ್ಯೋತಿಷಿಗಳು ಎಂದು ಹಾಸ್ಯಮಾಡಿಯೇವು. ಆದರೆ ಅದು ನಿಜ. ಈ ಅಂತರ ಎರಡು ಮಿಲಿಯನ್ ಮಿಲಿಯನ್ ಮೈಲಿಗಳೋ ಅಥವಾ ಹತ್ತು ಮಿಲಿಯನ್ ಮಿಲಿಯನ್ ಮೈಲಿಗಳೋ ಆಗಿದ್ದಲ್ಲಿ ಭೂಮಿಯ ಮೇಲೆ ಜೀವ ಇರುವುದೇ ಸಾಧ್ಯವಿರಲಿಲ್ಲ. ಇದನ್ನು ಹೇಳುವವನು ಫ್ರೀಮನ್ ಡೈಸನ್ ಎಂಬ ಜಗದ್ವಿಖ್ಯಾತ ಭೌತವಿಜ್ಞಾನಿ. ಆತ ಇಂಥ ಇನ್ನೂ ಹಲವು ವಿಸ್ಮಯಕರ ಸಂಗತಿಗಳ ಬಗ್ಗೆ ವಿಜ್ಞಾನದ ಆಧಾರ ಕೊಟ್ಟು ಮಾತಾಡುತ್ತಾನೆ. ನಮ್ಮ ಬುದ್ಧಿ ತರ್ಕಗಳಿಗೆ ಗ್ರಹಿಸಲೂ ಕಷ್ಟವಾಗುವ ಈ ಅರ್ಥವತ್ತಾದ ವ್ಯೂಹ ಯಾವ ಉದ್ದೇಶವನ್ನೂ ಧ್ವನಿಸುವುದಿಲ್ಲವೆ?

ಮೂರ್ತಿರಾವ್: ನನ್ನ ಮಟ್ಟಿಗೆ ಹೇಳುವುದಾದರೆ ಇಲ್ಲ. ಈ ಬಗೆಯದು ಏನು ಇದೆಯೋ ಅದು ಆಕಸ್ಮಿಕವಾಗಿ ಆದದ್ದು ಎನ್ನಿಸುತ್ತದೆ. ಈ ರೀತಿಯ 'ಅರ್ಥವಂತಿಕೆ' ಪ್ರಕಟವಾಗದ ಎಷ್ಟೋ ಭಾಗಗಳೂ ಈ ವಿಶ್ವದಲ್ಲಿ ಇರಬೇಕಷ್ಟೆ? ಅವುಗಳಿಗೆ ಏನು ಹೇಳೋಣ. ಇರುವುದು ಇಲ್ಲದಿರುವುದು ಎರಡೂ ಆಕಸ್ಮಿಕ. ಇವುಗಳಲ್ಲಿ ಯೋಜನಾಬದ್ಧವಾಗಿ ಇರುವಂತೆ ಕಾಣುವುದಷ್ಟನ್ನೇ ನಾವು ಗಮನಿಸುತ್ತೇವೆ. ಆ ವ್ಯವಸ್ಥೆಯ ಮೂಲಕ ಪ್ರಕಟವಾಗುವಂತೆ ತೋರುವ 'ಅರ್ಥವಂತಿಕೆಗೆ' ಬೆರಗಾಗುತ್ತೇವೆ. ಅದರ ಹಿಂದೆ ಒಂದು ಉದ್ದೇಶ ಇರಬೇಕು ಎಂದು ಯೋಚಿಸಲು

ತವಕಪಡುತ್ತೇವೆ. ಈ ಬಗೆಯ ಪರಿಣಾಮಕ್ಕೆ ಕಾರಣವಾಗಿಲ್ಲದ ಇತರ ಆಕಸ್ಮಿಕಗಳನ್ನು ನಾವು ಗಮನಿಸುವುದೇ ಇಲ್ಲ. ಎಂದರೆ ಅರ್ಥವತ್ತಾದುದನ್ನು ಕಾಣಲು ನಾವು ನಮಗೆ ತಿಳಿಯದೆಯೇ ಕಾತರರಾಗಿರುತ್ತೇವೆ.

ನಾನು : ಇನ್ನೂ ಹೆಚ್ಚಿನ ರಹಸ್ಯಾತ್ಮಕ ಸಂಗತಿಗಳಿವೆ ನೋಡಿ. ಭೌತ ಜಗತ್ತಿಗೂ ಜೀವ ಜಗತ್ತಿಗೂ ನಡುವಿನ ಸಂಬಂಧ ಎಷ್ಟು ನಿಗೂಢವಾಗಿದೆ. ಲೋಕದಲ್ಲಿ ಗಾಳಿ, ನೀರು, ಬೆಳಕು, ಶಾಖ ಇತ್ಯಾದಿಗಳಿವೆ. ಇವುಗಳೆಲ್ಲ ಜೀವಪೋಷಕವಾದ ವಸ್ತುಗಳು. ಅವು ಆ ಉದ್ದೇಶದಿಂದ ಉಂಟಾದುವಲ್ಲ, ಯಾವುದೋ ಕಾರ್ಯಕಾರಣ ಸಂಬಂಧದಿಂದ ಉತ್ಪತ್ತಿಯಾದ ಆಕಸ್ಮಿಕಗಳು ಎಂದುಕೊಂಡರೂ ಅವುಗಳನ್ನು ಬಳಸಲು ಬೇಕಾಗುವ ಅಂಗಗಳು ಮನುಷ್ಯನಲ್ಲಿ ಹೇಳಿ ಮಾಡಿಸಿದಂತೆ ಇರುವುದು ಆಶ್ಚರ್ಯವಲ್ಲವೆ? ಲೋಕದಲ್ಲಿ ವಸ್ತುಗಳಿವೆ; ಅವುಗಳನ್ನು ಕಾಣಲೆಂಬಂತೆ ನಮಗೆ ಕಣ್ಣುಗಳಿವೆ. ಗಾಳಿ ಇದೆ; ಅದನ್ನು ಉಸಿರಾಡಿ ಬದುಕಿಕೊಳ್ಳಲು ಮೂಗು, ಶ್ವಾಸಕೋಶ ಇವೆ. ಶಬ್ದ ಇದೆ; ಅದನ್ನು ಆಲಿಸಲು ಕಿವಿಯಿದೆ. ಬಿಸಿಲು ಚಳಿ ಇದೆ; ಅವನ್ನು ಗ್ರಹಿಸಲು ಸಂವೇದನೆಯಿರುವ ಚರ್ಮವಿದೆ. ಮರದಲ್ಲಿ ಹಣ್ಣು ಇದ್ದರೆ ಮುಗಿಯಲಿಲ್ಲ. ಅದನ್ನು ತಿನ್ನುವಂತೆ ಪ್ರಚೋದಿಸಲು ನಾಲಗೆಯಲ್ಲಿ ರುಚಿಗ್ರಂಥಿ (Taste bud) ಇದೆ. ಹೀಗೆ. ಜಡ – ಜೀವಗಳ ಮಧ್ಯೆ ಏರ್ಪಟ್ಟಿರುವ ಸಂಬಂಧವೂ ಆಕಸ್ಮಿಕವೇ? ಈ ನಿಗೂಢ ಸಂಬಂಧ ಕಂಡು ಬೆರಗಾಗಿಯಲ್ಲವೆ, 'ಸವಿಯು ಸಕ್ಕರೆಯೊಳಗೊ, ಸಕ್ಕರೆಯು ಸವಿಯೊಳಗೊ, ಸವಿ ಸಕ್ಕರೆಗಳೆರಡೂ ನಿನ್ನೊಳಗೊ ಹರಿಯೆ' ಎಂಬ ವೇದಾಂತದ ಉದ್ಗಾರ ಹೊರಟದ್ದು; ತಾಯಿಶಕ್ತಿಯೊಂದರ ಅಸ್ತಿತ್ವ ಕುರಿತ ಆಲೋಚನೆಗೆ ಪುಟ ಸಿಕ್ಕದ್ದು?

ಮೂರ್ತಿರಾವ್: ನಿಮ್ಮ ವಿಸ್ಮಯ ನನಗೆ ತಿಳಿಯುತ್ತದೆ. ನಾನೂ ಹೀಗೆ ಅಚ್ಚರಿಪಡುವವನೇ. ಈ ಸಂಬಂಧ ಬೆರಗುಗೊಳಿಸುವಂಥದ್ದು ಎಂದು ಒಪ್ಪಿದರೂ ಅದು ಪ್ರಜ್ಞಾಶಾಲಿಯಾದ ಲೋಕೋತ್ತರವಾದ ಶಕ್ತಿಯೊಂದರ ಉದ್ದೇಶಪೂರ್ವಕ ಕ್ರಿಯೆ ಎಂದು ನನಗನ್ನಿಸುವುದಿಲ್ಲ. ವಿಕಾಸವಾದ ಹೇಳುವಂತೆ ಮೊದಲು ಅಮೀಬಾದಂಥ ಒಂದು ಜೀವಿ ಕಾಣಿಸಿಕೊಂಡಿತು. ಹಲವು ಸಹಸ್ರ ವರ್ಷಗಳ ದೀರ್ಘಕಾಲಾವಧಿಯಲ್ಲಿ, ಸುತ್ತಲ ಲೋಕವನ್ನು ಬಳಸಲು ಆಗುವಂತೆ ಅದರ ದೇಹರಚನೆ ಸಂಕೀರ್ಣವಾಗುತ್ತ ವಿಕಾಸದ ಮಾರ್ಗದಲ್ಲಿ ನಡೆಯಿತು. ಬಿತ್ತವೊಂದು ಸಸಿಯಾಗಿ, ಗಿಡವಾಗಿ, ಮೊಗ್ಗು ಹೂ ಕಾಯಾಗಿ ಫಲಿಸುವಂತೆ ಕ್ರಮ ಕ್ರಮವಾಗಿ ಇದರ ವಿಕಾಸ ಆಗಿದೆ. ಆ ಬೆಳವಣಿಗೆಯ ವಿವರ ನಮ್ಮ ಕಣ್ಣೆದುರಿಗಿಲ್ಲ; ಕೇವಲ ಅದರ ಪರಿಣಾಮವಷ್ಟೇ ಕಾಣುತ್ತಿದೆ. ಅದರಿಂದ ಹೀಗೆ ಬೆರಗುಪಡುವಂತಾಗುತ್ತದೆ.

ನಾನು : ಸೃಷ್ಟಿಗೆ ಒಂದು ಉದ್ದೇಶವಿಲ್ಲ, ಅದರ ಬುಡಕ್ಕೆ ಯಾವ ಪ್ರಜ್ಞೆಯೂ ಇಲ್ಲ ಅನ್ನುತ್ತೀರಿ. ಅದು ಇಲ್ಲದೆ ಜೀವಸೃಷ್ಟಿಯ ಪ್ರಕ್ರಿಯೆ ರೂಪುಗೊಂಡಿತೆ? ನೆಲ ಜಲ ವಾಯುಮಂಡಲಗಳಲ್ಲಿ ಇರುವ ಕೋಟ್ಯಾಂತರ ಜೀವಯೋನಿಗಳಲ್ಲಿಯೂ ಗಂಡು ಹೆಣ್ಣುಗಳ ಭೇದ ಇದೆ. ಅವುಗಳಿಗೆ ಪರಸ್ಪರ ಅದಮ್ಯವಾದ ಆಕರ್ಷಣೆ ಇದೆ. ಗಂಡು ಹೆಣ್ಣುಗಳ ಮೈಯ ರಚನೆ ಭಿನ್ನವಾಗಿದ್ದರೂ ಜೀವಸೃಷ್ಟಿಯ ಕ್ರಿಯೆಗೆ ಪೂರಕವಾಗಿದೆ. ಕೇವಲ ತಮ್ಮ ಕಾಮನೆಯ ಪೂರೈಕೆಗಾಗಿ ಪರಸ್ಪರ ಕೂಡುತ್ತಿರುವಂತೆ ಗಂಡು ಹೆಣ್ಣು ಭಾವಿಸಿಕೊಂಡರೂ ಸೃಷ್ಟಿಯ ನಿರಂತರ ಮುಂದುವರಿಕೆಗಾಗಿ ಬೇರೆ ಯಾವುದೋ ಒಂದು ಶಕ್ತಿ ಅವರನ್ನು ತನ್ನ ಸಾಧನವಾಗಿ ಬಳಸುತ್ತಿದೆಯೋ ಎಂಬಂತೆ ಇಡೀ ಸೃಷ್ಟಿಯ ಜೀವೋತ್ಪಾದಕ ಪ್ರಕ್ರಿಯೆ ಸಾಗಿರುವಂತೆ ಕಾಣುವುದಿಲ್ಲವೆ? ಐನ್‌ಸ್ಟೈನ್, ಕಾಪ್ರಾ, ಹಾಲ್ಡೇನ್, ಅಲೆಕ್ಸಿ ಕೆರೆಲ್ ಮೊದಲಾದ ಮಹಾಮೇಧಾವಿಗಳು ಈ ಸೃಷ್ಟಿಯ ರಚನೆ, ತುಡಿತ, ಕ್ರಿಯೆಗಳ ಮೂಲಕ ಪ್ರಕಾಶಗೊಳ್ಳುತ್ತಿರುವ ಅದ್ಭುತವಾದ ಅರಿವಿನ ಬಗ್ಗೆ ತಮ್ಮ ಬೆರಗನ್ನು ವ್ಯಕ್ತಪಡಿಸಿದ್ದಾರಲ್ಲ? ಇದನ್ನು ಅಮಿತವಾದ ಪರಮಚೇತನವೆಂದು ಭಾವಿಸಿದ್ದಾರಲ್ಲ? ನಮಗೆ ಮೀರಿದ ಒಂದು ಶಕ್ತಿ ಇಲ್ಲ ಎಂದು ನಿಮ್ಮ ಅಭಿಪ್ರಾಯವೇ? ಅಥವಾ ಇದ್ದರೂ ಅದು ಪ್ರಜ್ಞೆಯಿಂದ ಕೂಡಿದ್ದಲ್ಲವೆ?

ಮೂರ್ತಿರಾವ್: ಇಲ್ಲ ಎನ್ನಲಾಗುವುದಿಲ್ಲ. ವಿಶ್ವದ ಸೃಷ್ಟಿಗೆ ಮೂಲವಾಗಿ ಯಾವುದೋ ಒಂದು Intelligence ಇದ್ದಿರಬಹುದು. Intelligence ಅಂದ ಮೇಲೆ ಅದು ಪ್ರಜ್ಞಾಪೂರ್ಣವಾದದ್ದೂ ಆಗಿರಬೇಕು. ಆದರೆ ಅದು ಪರಿಪಕ್ವವಾದ ಜ್ಞಾನ ಇದ್ದಿರಲಾರದು. ವೈಟ್ ಹೆಡ್ ಎಂಬ ವಿದ್ವಾಂಸನೊಬ್ಬನ ಸಿದ್ಧಾಂತವನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಈ ಸೃಷ್ಟಿಯಲ್ಲಿ ಇರುವ ಯಾವುದೇ ಜೀವಿಯ ಪ್ರಜ್ಞೆ ಸಾಮರ್ಥ್ಯಗಳಿಗೂ ಮೀರಿದ ಒಂದು ಶಕ್ತಿ ಇದ್ದು, ಸದ್ಯದ ಸೃಷ್ಟಿ ಅದು ನಡೆಸಿರುವ ಪ್ರಯೋಗವಾಗಿರಬಹುದು. ಈ ಪ್ರಯೋಗದಿಂದ ಹೊರಪಡಬಹುದಾದ ದೋಷಗಳನ್ನು ತಿಳಿದು ಅದನ್ನು ಸರಿಪಡಿಸಿಕೊಂಡು ಮುಂದೆ ಇನ್ನಷ್ಟು ಪ್ರಗತಿ ಸಾಧಿಸುವ ರೀತಿ ಅದರದ್ದಿರಬಹುದು. ಆದರೆ ಒಂದು ವಿಷಯ. ಈ ವಿಶ್ವ ಈಗಿರುವಂತೆ ದೋಷಮುಕ್ತ ಅಲ್ಲ. ಆದ್ದರಿಂದ ಇದನ್ನು ಸೃಷ್ಟಿಸಿದ ಸರ್ವಜ್ಞ ಅಥವಾ ಸರ್ವಶಕ್ತನೊಬ್ಬ ಇರಲಾರ.

ನಾನು: ಸಾರ್, ದೈವಶಕ್ತಿಯೊಂದು ಖಂಡಿತವಾಗಿ ಇದೆ ಎನ್ನುವುದು ಒಂದು ತುದಿ. ಇಲ್ಲವೇ ಇಲ್ಲ ಎನ್ನುವುದು ಇನ್ನೊಂದು ತುದಿ. ಎರಡೂ ತುದಿಗಳು ವಿಷಯ ಖಚಿತವಾದವರ ನೆಲೆಗಳು. ನೀವು ಒಂದು ತುದಿಯಲ್ಲಿ ಇದ್ದೀರಿ. ಈಶ್ವರ ನಿರಾಕರಣೆಗೆ ನಿಮಗಿರುವ ದೃಢ ಆಧಾರ ಯಾವುದು?

ಮೂರ್ತಿರಾವ್ : ಲೋಕದಲ್ಲಿ ಎಲ್ಲೆಂದರಲ್ಲಿ ಕಾಣುವ ಕೇಡು, ಸಂಕಟ. ಕೆಲವು ಮತಗಳು ಸದ್ಗುಣನಿಧಿಯಾದ ದೇವರೊಬ್ಬ ಇರುವಂತೆ ದುರ್ಗುಣಗಳ ಗಣಿಯಾದ ಒಂದು ಶಕ್ತಿಯೂ ಇದೆ ಎಂದು ನಂಬುತ್ತವೆ. ಬೈಬಲ್ ಅವನನ್ನು ಸೈತಾನ ಎಂದು ಕರೆಯುತ್ತದೆ. ಆದರೆ ಈ ಸೈತಾನ ದೇವರಷ್ಟು ದೊಡ್ಡವನಲ್ಲ. ಅವನು ತನ್ನನ್ನು ತಾನೇ ಸೃಷ್ಟಿಸಿಕೊಳ್ಳಲಿಲ್ಲ. ಎಲ್ಲ ಸೃಷ್ಟಿಗೂ ಕರ್ತಾರನಾದವನು ದೇವರೊಬ್ಬನೇ ಎಂದ ಮೇಲೆ ಕೇಡೂ ದೇವರ ಸೃಷ್ಟಿ ಎಂದೇ ಆಯಿತು. ಸಕಲ ಕೇಡುಗಳ ತವರಾದ ಈ ಸೈತಾನನನ್ನು ದೇವರು ಯಾಕೆ ಸೃಷ್ಟಿಸಿದ? ಈ ಪ್ರಶ್ನೆಗೆ ಸಮರ್ಪಕವಾದ ಉತ್ತರವಿಲ್ಲ. ಕೇಡು ಇದೆ, ಆದ್ದರಿಂದ ದೇವರಿಲ್ಲ ಎನ್ನಬೇಕಾಗುತ್ತದೆ.

ನಾನು: ಬಾಳಿಗೆ ಕೊನೆ ತರುವ ಸಾವು ಹೇಗೆ ಜೀವನಕ್ಕೆ ಒಂದು ಅರ್ಥವಂತಿಕೆಯನ್ನು ಕಲ್ಪಿಸಿ ಅದರ ಬೆಲೆ ಹೆಚ್ಚಿಸಿದೆಯೋ ಹಾಗೆಯೇ ನೋವೂ ಬಾಳಿನ ಸಂಕೀರ್ಣತೆಗೆ, ಅದರ ಸ್ವರೂಪದ ಗಂಭೀರತೆಗೆ ಕಾರಣವಾಗಿರಬಹುದಲ್ಲವೆ? ಸಂಕಟ ಅದರ ತೀವ್ರತೆಯಲ್ಲಿ ಒದಗಿದಾಗ ಬದುಕನ್ನು ಅಲ್ಲಾಡಿಸಿಬಿಡುತ್ತದೆ, ನಿಜ. ಆದರೆ ಸಂಕಟದ ಪ್ರಸಂಗವೊಂದು ಸದಾಕಾಲ ಒಂದೇ ತೀವ್ರತೆಯಲ್ಲಿ ಇರುವುದಿಲ್ಲ. ಪ್ರೀತಿಯ ಹೆಂಡತಿಯ ಸಾವಿನಿಂದ ಕಂಗಾಲಾಗಿ ಇನ್ನು ಈ ಬದುಕೇ ಸಾಕು ಎಂದು ಸಂತಪ್ತನಾದ ಅನುರಕ್ತ ಪತಿಯೂ ವರ್ಷ ದಾಟುವಷ್ಟರಲ್ಲಿಯೇ ಮತ್ತೆ ಮದುವೆಯಾದ ನಿದರ್ಶನಗಳಿವೆ! ಘಟಿಸಿದಾಗಿನ ಅನುಭವದ ತೀವ್ರತೆಗೂ, ನೆನಪಿಸಿಕೊಂಡಾಗಿನ ಅನುಭವದ ಆರಿದ ಸ್ಥಿತಿಗೂ ಖಂಡಿತ ಅಂತರವಿದೆ. ನೀವು ಅತೀವವಾದ ಸಂಕಟವೊಂದು ಅದರ ದುರ್ಭರಸ್ಥಿತಿಯಲ್ಲೇ ಒಬ್ಬನನ್ನು ಸದಾ ಕುದಿಸುತ್ತಿದ್ದರೆ ಹೇಗೋ ಹಾಗೆ ಕಲ್ಪಿಸುತ್ತಿದ್ದೀರಿ. ಅಲ್ಲದೆ ಕಷ್ಟ ನೋವುಗಳಲ್ಲಿಯೂ ಬೇರ ಬೇರೆ ಬಗೆಯವು ಇವೆ. ಎಲ್ಲವೂ ಅಷ್ಟೊಂದು ದುರ್ಭರವಲ್ಲ.

ಮೂರ್ತಿರಾವ್: ಯಾವ ಬಗೆಯ ಕಷ್ಟ ನೋವುಗಳೇ ಆಗಲಿ ಯಾಕೆ ಇರಬೇಕು? ಅದರ ಪ್ರಯೋಜನ ಏನು? ಅವುಗಳಿಂದ ಬಾಳು ಕಹಿಯಾಗುವುದಿಲ್ಲವೆ? ಅದು ಬಾಳಿನ ಸಂಕೀರ್ಣತೆಗೆ, ಗಂಭೀರತೆಗೆ ಕಾರಣವಾಗುತ್ತದೆ ಎಂದಿರಿ. ಅದು ಹೇಗಾದೀತು? ಅಲ್ಲದೆ ಕೇಡು ಮಾಡಿದವರಿಗೆ ಶಿಕ್ಷೆ ಕೊಟ್ಟು ಒಂದು ಬಗೆಯ ಸಮಾಧಾನ ತಂದುಕೊಂಡೀರಿ. ತಪ್ಪೇ ಇಲ್ಲದೆ ನೋವಿಗೆ ಗುರಿಯಾದವರ ಬಗ್ಗೆ ಏನು ವಿವರಣೆ ಕೊಡಲಾದೀತು?

ನಾನು: ಸಂಕಟದ ಸಮಸ್ಯೆ ಮತ್ತು ಕೇಡಿನ ಸಮಸ್ಯೆ ಕುರಿತು ವಿಚಾರಮಾಡುವಾಗ ಅದನ್ನು ಒಟ್ಟು ಮಾನವ ಕುಲದ ಸಮಸ್ಯೆಯಾಗಿ ನೋಡಬೇಕೇ ಹೊರತು ಬಿಡಿ ವ್ಯಕ್ತಿಗಳ ಸಮಸ್ಯೆಯಾಗಿ ಅಲ್ಲ ಅಂತ ನನಗನ್ನಿಸುತ್ತದೆ. ಮಾನವನಿಗೆ

ತಿಳುವಳಿಕೆ ಇದೆ. ಸರಿ ತಪ್ಪುಗಳ ಸಾಮಾನ್ಯ ವಿವೇಚನಾಶಕ್ತಿ ಇದೆ. ಕೇಡಿನ ಸ್ವರೂಪವನ್ನು ಅರಿತು ಅದನ್ನು ನಿವಾರಿಸಿಕೊಳ್ಳುವವರೆಗೆ ಮಾನವಕುಲ ಈ ಬಗೆಯ ಶಿಕ್ಷೆಗೆ ಗುರಿಯಾಗುತ್ತಲೇ ಇರಬೇಕಾಗುತ್ತದೆ. ಕೇಡು ಮಾಡಿದವನು, ಅದಕ್ಕೆ ತುತ್ತಾದವನು ಎಂದು ಪ್ರತ್ಯೇಕಿಸುವುದಲ್ಲ. ಇದು ಒಟ್ಟು ಮಾನವಕುಲದ ಸಮಸ್ಯೆ.

ಕಷ್ಟ ನೋವುಗಳಿಂದ ಬಾಳು ಕಹಿಯಾಗುತ್ತದೆ ಎಂಬ ಮಾತು ಬಂತು. ಸುಖ ಸಂತೋಷಗಳಂತೆಯೇ ದುಃಖ ನೋವುಗಳೂ ಇವೆ. ಕಷ್ಟ ತನಗೆ ತಾನೇ ಪ್ರತ್ಯೇಕವಾಗಿ ಇಲ್ಲ. ಬಯಕೆ ಭರವಸೆ ಸುಖ ನಿರೀಕ್ಷೆಗಳೆಲ್ಲ ಇರುವ ಒಟ್ಟು ಜೀವನದ ನಡುವೆ ಅದು ಘಟಿಸುತ್ತದೆ. ಅವುಗಳ ನೆರೆಹೊರೆಯಲ್ಲಿ ಕಷ್ಟವೂ ಸಹ್ಯವಾಗುತ್ತದೆ. ಬಗೆ ಬಗೆ ರುಚಿಗಳಿಂದ ಕೂಡಿದ ಭರ್ಜರಿ ಊಟವನ್ನು ಷಡ್ರಸ ಭೋಜನ ಎನ್ನುತ್ತೇವಷ್ಟೆ. ಷಡ್ರಸ ಎಂದರೆ ಸಿಹಿ ಒಂದೇ ಅಲ್ಲವಲ್ಲ; ಉಳಿದವೂ ಇವೆ. ಅವುಗಳಲ್ಲಿ ಕಹಿಯೂ ಇದೆ. ಹಾಗಲಕಾಯಿ ತನಗೆ ತಾನೇ ಘೋರ ಕಹಿ. ಆದರೆ ಉಪ್ಪು, ಹುಳಿ, ಖಾರ, ಸಿಹಿಗಳ ಜೊತೆ ಬೆರೆತ ಹಾಗಲಕಾಯಿಯ ಗೊಜ್ಜು ಎಲ್ಲರಿಗೂ ಪ್ರಿಯವೇ. ಬಾಳಿನ ಇತರ ಅನುಭವಗಳ ಒಟ್ಟು ಸಂದರ್ಭದಲ್ಲಿ ಕಷ್ಟವನ್ನು ಇಟ್ಟು ಅದರ ಬೆಲೆ ಕಟ್ಟಬೇಕು. ಎಷ್ಟೋ ಸಲ ಕಹಿ ಅನುಭವದಿಂದಾಗಿ ಆ ನಂತರ ಒದಗುವ ಸುಖದ ಬೆಲೆ ಹೆಚ್ಚಬಹುದು – ವಿಯೋಗದ ನಂತರದ ಸಮಾಗಮದಂತೆ.

ಮೂರ್ತಿರಾವ್: ಈ ತರ್ಕವನ್ನು ನಾನು ಒಪ್ಪುವುದಿಲ್ಲ. ಸುಖದ ಆಸ್ವಾದಕ್ಕೆ ಕಷ್ಟದ ಹಿನ್ನೆಲೆ ಯಾಕೆ ಬೇಕು? ಖಂಡಿತ ಅದರ ಅಗತ್ಯವಿಲ್ಲ. ಕಹಿಯ ಅನುಭವವೇ ಇಲ್ಲದ ಮೂರುದಿನದ ಮಗುವಿನ ಬಾಯಿಗೆ ಸಕ್ಕರೆ ಇಡಿ; ಚಪ್ಪರಿಸಿಕೊಂಡು ತಿನ್ನುತ್ತದೆ. ನನಗೆ ಮಕ್ಕಳಿಲ್ಲದವರ ಸಂಕಟ ಅನುಭವಕ್ಕೆ ಬಂದಿರಲಿಲ್ಲ. ಮಕ್ಕಳ ಜವಾಬ್ದಾರಿಯೇ ಬೇಡ. ಮಕ್ಕಳಾದರೆ ಅವನ್ನು ಯರಿಗಾದರೂ ದತ್ತುಕೊಟ್ಟುಬಿಡುತ್ತೇನೆ ಎನ್ನುತ್ತಿದ್ದೆ. ಆದರೆ ಮಕ್ಕಳಾದಾಗ ಸಂತೋಷಪಟ್ಟೆ, ಸಂತೋಷದಿಂದಲೇ ಅವುಗಳ ಜವಾಬ್ದಾರಿ ಹೊತ್ತೆ – ಆ ಸಂತೋಷಕ್ಕೆ ಪೂರ್ವಭಾವಿಯಾಗಿ ಸಂಕಟದ ಅನುಭವ ಇಲ್ಲದೆಯೇ ನಾನು ಸುಖಪಟ್ಟೆ.

ನಾನು: ಮಗು ಸಕ್ಕರೆಯನ್ನು ಚಪ್ಪರಿಕೊಂಡು ತಿಂದದ್ದನ್ನು ಒಪ್ಪೋಣ. ಆದರೆ ಅದು ಬಾಲರುಚಿ. ಪ್ರೌಢರ ರುಚಿಮಟ್ಟವೇ ಬೇರೆ. ಮಗುವಿನ ಬಾಯಿಗೆ ಕೊಂಚ ಕಹಿ ಸೋಕಿಸಿದರೂ ಅದು ಮುಖ ಸಿಂಡರಿಸುತ್ತದೆ. ಆದರೆ ಬೆಳೆದವರು ಖಾರ ಕಹಿಗಳನ್ನೂ ಬಯಸುತ್ತಾರೆ. ಸಾಕಷ್ಟು ಹಣ ತೆತ್ತು ಕಹಿಯಾದ ಬಿಯರ್

ಸವಿಯುವವರು ಎಷ್ಟೊಂದು ಜನ ಇಲ್ಲ? ಮನೆಯಲ್ಲಿ ಡಬ್ಬದ ತುಂಬ ಸಕ್ಕರೆ ಇದ್ದರೂ ಅದನ್ನು ಹಾಗೇ ಮುಕ್ಕದೆ ಕಾಫಿಯ ಕಹಿ ಜೊತೆ ಬೆರೆಸಿ ಕುಡಿಯುವುದಿಲ್ಲವೆ? ಉಳಿದುದರ ಜೊತೆಯಲ್ಲಿ ಕಷ್ಟವೂ ನಮ್ಮ ಅನುಭವದ ವೈವಿಧ್ಯವನ್ನು ಹೆಚ್ಚಿಸುತ್ತದೆ; ಬದುಕನ್ನು ಗಂಭೀರವಾಗಿ ಕಾಣುವುದನ್ನು ಕಲಿಸುತ್ತದೆ ಎಂದು ನನ್ನ ಭಾವನೆ. ಎಷ್ಟೇ ಕಷ್ಟವಿದ್ದವರೂ ಬಾಳಬೇಕು ಎಂದೇ ಬಯಸುತ್ತಾರೆ. ಯಾರೂ ಸಾಯಲು ಸಿದ್ಧರಿಲ್ಲ. ಇದರ ಅರ್ಥ, ಕಷ್ಟವನ್ನೂ ಸಹಿಸಿಕೊಂಡು ಬದುಕಬೇಕು ಎನ್ನುವಷ್ಟು ಬಾಳು ಆಕರ್ಷಕವಾಗಿದೆ. ಅಲ್ಲದೆ, ಇಂದಲ್ಲ ನಾಳೆ ಈ ಕಷ್ಟ ಮುಗಿಯುತ್ತದೆ ಎಂಬ ವಿಚಿತ್ರ ಭರವಸೆ ಕೂಡ ಮನುಷ್ಯ ಹೃದಯದಲ್ಲಿ ಸತತವಾಗಿ ಪುಟಿಯುತ್ತಲೇ ಇರುವುದಲ್ಲ?

ಮೂರ್ತಿರಾವ್: ಇಂಥ ವಿಚಾರಗಳನ್ನು ಚರ್ಚಿಸುವಾಗ ಹೋಲಿಕೆಗಳನ್ನು ಬಳಸುವುದು ಸರಿಯಾಗುವುದಿಲ್ಲ ಅನ್ನಿಸುತ್ತೆ. ಯಾವ ಎರಡು ಸಂಗತಿಗಳೂ ಪರಸ್ಪರ ಸಮಸಮ ಅಲ್ಲವಾಗಿ ಹೋಲಿಕೆ ಸರಿಯಲ್ಲ. ಕಷ್ಟವನ್ನು ಕಹಿಗೆ ಹೋಲಿಸುವುದಲ್ಲ. ಕಹಿ ಕಾಫಿಯನ್ನು ನಾನು ಇಷ್ಟಪಡುತ್ತೇನೆ. ಆದರೆ ಕಷ್ಟವನ್ನು ಬಯಸುವುದಿಲ್ಲ. ಕಷ್ಟಬಂದಾಗ ತಾಳಿಕೊಳ್ಳುವುದು ಬೇರೆ, ಅದನ್ನು ಬಯಸುವುದೇ ಬೇರೆ.

ನಾನು: 'ದೇವರು' ಪುಸ್ತಕದಲ್ಲಿ ದೈವಶ್ರದ್ಧೆಯಿಂದ ಆಗಬಹುದಾದ ಕೇಡುಗಳ ಬಗ್ಗೆ ಹೇಳಿದ್ದೀರಿ.

ಮೂರ್ತಿರಾವ್ : ಹೌದು, ದೇವರಲ್ಲಿನ ನಂಬಿಕೆಯಿಂದ ಆದ ಕೆಲವು ದುರಂತಗಳನ್ನು ಪ್ರಸ್ತಾಪಿಸಿದ್ದೇನೆ. ಇಲ್ಲಿ ಒಂದು ಮಾತು ಹೇಳಬೇಕು. ನನ್ನಂಥ ನಿರೀಶ್ವರವಾದಿಗಳೂ ಸೇರಿದಂತೆ ಇಡೀ ಮನುಕುಲಕ್ಕೇ ಕರುಣಾರ್ದ್ರ ಹೃದಯನೂ ಪ್ರೇಮಸ್ವರೂಪಿಯೂ ಆದ ದೇವರು ಬೇಕು. ದೇವರು ಇಲ್ಲ ಎಂದುಕೊಳ್ಳುವಾಗ ನನ್ನ ಮನಸ್ಸಿನಲ್ಲಿ ಇರುವುದು ಸಂತೋಷವಲ್ಲ. ಅದನ್ನು ವಿಷಾದ ಎಂದು ಕರೆಯಬಹುದೇನೋ. ಜೀವಕೋಟಿಯ ಸಂಕಟವನ್ನು ಪರಿಹರಿಸಬಲ್ಲ ದೇವರು – ಅಂಥ ದೇವರು ಇರುವುದಾದರೆ – ಯಾರಿಗೆ ಬೇಡ? ದೇವರು ಬೇಕು, ಆದರೆ ಅವನಿಲ್ಲ! ಇದೇ ನಮ್ಮ ಕರುಣಾಜನಕ ಐರನಿ. ಇಲ್ಲದ ದೇವರಲ್ಲಿ ಇಟ್ಟ ನಂಬಿಕೆ ಎಲ್ಲಿಗೆ ಮುಟ್ಟಿದೆಯೆಂದರೆ ಅದಕ್ಕಾಗಿ 'ಧರ್ಮಯುದ್ಧ'ಗಳೇ ನಡೆದು ರಕ್ತದ ಹೊಳೆ ಹರಿದಿವೆ. ದೊಡ್ಡವರು ಇರಲಿ, ಮಕ್ಕಳೂ ಧರ್ಮಯುದ್ಧ ನಡೆಸಿ ಹೃದಯವಿದ್ರಾವಕ ರೀತಿಯಲ್ಲಿ ಸತ್ತಿದ್ದಾರೆ. ಇದು ದೈವಶ್ರದ್ಧೆಯ ಫಲ!

ನಾನು: ದೈವಶ್ರದ್ಧೆಯಿಂದ ಫಲಿಸಿದ ಬೇಕಾದಷ್ಟು ಅದ್ಭುತಗಳೂ ಇವೆಯಲ್ಲ? ಪರಮಹಂಸ, ವಿವೇಕಾನಂದ, ಗಾಂಧಿ, ಮದರ್ ಥೆರೇಸಾ – ಮೊದಲಾದವರು ಮನುಷ್ಯನ ಘನತೆಯನ್ನು ಮುಗಿಲೆತ್ತರಕ್ಕೆ ಎತ್ತಿದವರಲ್ಲವೆ? ಇವರೆಲ್ಲ ದೈವಶ್ರದ್ಧೆಯನ್ನೇ ಉಸಿರಾಡಿ ಬೆಳೆದವರು. Prayer is the key of the morning and bolt of the evening ಎನ್ನುವ ಮಾತು ಗಾಂಧಿಯವರದೇ. ಅವರು ಭಗವದ್ಗೀತೆಯನ್ನು ತಮ್ಮ ಮಾರ್ಗದರ್ಶಕ ಕೃತಿ ಎಂದು ಭಾವಿಸಿದ್ದವರು. ಉಪವಾಸ ಮೌನಗಳ ಆಚರಣೆಯಿಂದ ದೇಹ ಮನಸ್ಸುಗಳನ್ನು ದಂಡಿಸಿ ಜೀವನವೇ ಒಂದು ಕ್ರಿಯಾಮಯವಾದ ಪ್ರಾರ್ಥನೆಯೆಂಬಂತೆ ಬಾಳಿದವರು. ಅವರೆಲ್ಲ ಅಂಥ ಎತ್ತರಕ್ಕೆ ಏರಲು ಅವರಲ್ಲಿದ್ದ ಸಹಜಶಕ್ತಿಯ ಜೊತೆಗೆ ಅವರ ದೈವಶ್ರದ್ಧೆಯೂ ಕಾರಣವಲ್ಲವೇ?

ಮೂರ್ತಿರಾವ್: ನನಗೆ ಹಾಗೆನ್ನಿಸುವುದಿಲ್ಲ. ದೈವಶ್ರದ್ಧೆ ಗಾಂಧಿಯವರಲ್ಲಿತ್ತು ನಿಜ. ನೀವು ಹೇಳಿದ ಇತರರಲ್ಲೂ ಇತ್ತು ಎಂದು ಒಪ್ಪುತ್ತೇನೆ. ಆದರೆ ಅದಿಲ್ಲದಿದ್ದರೂ ಅವರೆಲ್ಲ ಅಷ್ಟೇ ದೊಡ್ಡವರಾಗುತ್ತಿದ್ದರು. ಅವರಲ್ಲಿ ಸಹಜವಾಗಿದ್ದ ಸತ್ಯಪ್ರೇಮ, ಅಹಿಂಸೆ, ನಿಷ್ಕರ್ಮ ಫಲದೃಷ್ಟಿಗಳಿಂದಲೇ ಅದು ಸಾಧ್ಯವಾಯಿತೇ ಹೊರತು ಅವರ ದೈವಶ್ರದ್ಧೆಯಿಂದಲ್ಲ.

ನಾನು: ದೇವರು ಇಲ್ಲದಿದ್ದರೂ ಅವನನ್ನು ಕಲ್ಪಿಸಬೇಕಾಗುತ್ತದೆ ಎಂಬ ವಾದವನ್ನು ಪ್ರಸ್ತಾಪಿಸಿ "ಈ ವಾದದಲ್ಲಿ ಹುರುಳಿಲ್ಲ, ಇದು ನಾವೇ ಕಲ್ಪಿಸಿಕೊಂಡದ್ದು ಎಂದು ತಿಳಿದೂ ಆ ಭ್ರಮೆಯನ್ನು ನೆಚ್ಚಿ ಬದುಕಬೇಕೇ ಎಂದು 'ದೇವರು' ಪುಸ್ತಕದಲ್ಲಿ ಹೇಳಿದ್ದೀರಿ. ಕಲ್ಪಿತವಾದ ಸಂಗತಿಗಳಿಂದಲೂ ಮನುಷ್ಯ ಕುಲಕ್ಕೆ ನೆಮ್ಮದಿ ಸಿಕ್ಕಿದೆ. ಸಂಸ್ಕೃತಿ ಎನ್ನುವುದು ಕಲ್ಪಿತವಾದದ್ದು ತಾನೆ? ನಿಸರ್ಗಸತ್ಯದ ದೃಷ್ಟಿಯಿಂದ ಗಂಡಿನ ಪಾಲಿಗೆ ಎಲ್ಲ ಹೆಣ್ಣೂ ಒಂದೇ. ಹಾಗೇ ಹೆಣ್ಣಿನ ಪಾಲಿಗೆ ಎಲ್ಲ ಗಂಡೂ ಒಂದೇ. ಆದರೆ ಹೆಣ್ಣನ್ನು ತಾಯಿ, ಅಕ್ಕ, ತಂಗಿ, ಮಗಳು ಎಂದೂ, ಗಂಡನ್ನು ಅಪ್ಪ, ಅಣ್ಣ, ತಮ್ಮ, ಮಗ ಎಂದೂ ಬೇರೆ ಬೇರೆ ಸಂಬಂಧದಲ್ಲಿ ನಡೆಸಿಕೊಳ್ಳುತ್ತೇವೆ. ಇದು ಮನುಷ್ಯನ ಬಾಳಿಗೆ ಒಂದು ಚೆಲುವನ್ನು, ಘನತೆಯನ್ನು ಭಾವವೈವಿಧ್ಯವನ್ನು ತಂದಿದೆ; ಪಶುವಿನಂತಿದ್ದ ಆದಿ ಮಾನವನನ್ನು ಸುಸಂಸ್ಕೃತ ವ್ಯಕ್ತಿಯನ್ನಾಗಿ ಮಾಡಿದೆ. ಈ ಸಂಬಂಧಗಳು ನಾವೇ ಕಲ್ಪಿಸಿಕೊಂಡದ್ದು ನಿಜ. ಆದರೂ ಅದನ್ನು ಬಿಡಬಹುದೆ? ದೈವಕಲ್ಪನೆಯೂ ಹೀಗೆ ಅಲ್ಲವೆ? ಅದು ಒಂದು ಭಾವಸತ್ಯ. ಅದರಿಂದ ಬದುಕಿಗೆ ಚೆಲುವು, ಘನತೆ ಬಂದಿದೆ. ಹಬ್ಬ ಹರಿದಿನ ಪೂಜೆ ವ್ರತ ನೇಮ ಮೊದಲಾದ ಸುಂದರ ವಿಧಿಗಳು ಅದರ ಆಧಾರದ ಮೇಲೆ ಸೃಷ್ಟಿಯಾಗಿವೆ. ಅಂಥ ಭಾವಸತ್ಯವೊಂದನ್ನು, ಅದು ಕಲ್ಪಿತವಾದದ್ದಾದರೂ ಯಾಕೆ ಗೌರವಿಸಬಾರದು?"

ಮೂರ್ತಿರಾವ್: ನೀವು ಹೇಳಿದ ಸಂಸ್ಕೃತಿ ಒಂದು ಸಮೂಹ ಒಪ್ಪಿ ಆಚರಿಸಿದ ವಿಷಯವಾಯಿತು. ನಮ್ಮ ಸಂಬಂಧಿಕರು ನಮ್ಮ ಜೊತೆ ಇರುತ್ತ, ನಾವು ಪ್ರೀತಿ ತೋರಿಸಿದಂತೆ ಅವರೂ ನಮಗೆ ಪ್ರೀತಿ ತೋರುತ್ತ ನಡೆದುಕೊಳ್ಳುವುದರಿಂದ ಇದು ಸಾಧ್ಯವಾಗುತ್ತೆ. ದೇವರ ಬಗ್ಗೆಯೂ ನಮ್ಮ ಸಂಬಂಧ ಹೀಗೇ ಇರುವುದಾದರೆ, ಎಂದರೆ ರಾಮಕೃಷ್ಣ ಪರಮಹಂಸರಂಥವರು ದೇವರನ್ನು ತನ್ನ ಸುತ್ತ ಇದ್ದ ವ್ಯಕ್ತಿಗಳಷ್ಟೇ ಸತ್ಯ ಎಂದು ತಿಳಿದು ದೇವರ ಪ್ರೀತಿಯನ್ನು ಅನುಭವಿಸಿದಂತೆ ನಾವೂ ಅನುಭವಿಸುವುದು ಸಾಧ್ಯವಾಗುವುದಾದರೆ ದೇವರು ಅನ್ನೋ ಕಲ್ಪನೆಯನ್ನು ನಾವೂ ಒಪ್ಪಬಹುದು.

ನಾನು: ನನಗೇನೋ ದೈವಕಲ್ಪನೆ ತನಗೆ ತಾನೇ ಸುಂದರವೆನ್ನಿಸಿದೆ. ದೈವಶ್ರದ್ಧೆಯನ್ನು ತಪ್ಪು ದಾರಿಯಲ್ಲಿ ಬಳಸಿದರೆ ಅದು ಮನುಷ್ಯನ ತಪ್ಪೇ ಹೊರತು ಆ ಕಲ್ಪನೆಯದಲ್ಲ. ಈ ಮಾತನ್ನು ವಿಜ್ಞಾನಕ್ಕೂ ಅನ್ವಯಿಸಬಹುದು. ಬಳಸುವವನ ಬುದ್ಧಿ ಸರಿಯಾಗಿಲ್ಲದಿದ್ದರೆ ದೈವಶ್ರದ್ಧೆಯಿಂದ ಮಾತ್ರವಲ್ಲ ವಿಜ್ಞಾನದ ಅರಿವಿನಿಂದಲೂ ಮನುಷ್ಯ ಕೇಡನ್ನೇ ತಂದುಕೊಂಡಾನು. ಇಲ್ಲದಿದ್ದರೆ ಐನ್‌ಸ್ಟೈನನ ವೈಜ್ಞಾನಿಕ ಸಿದ್ಧಿಯೊಂದು ಅಣುಬಾಂಬಿನ ಸೃಷ್ಟಿಯಲ್ಲಿ ಪರಿಣಮಿಸುತ್ತಿತ್ತೆ?

ದೈವಕಲ್ಪನೆಗೆ ನಮ್ಮ ಸಾಹಿತ್ಯ ಪರಂಪರೆ ಕೂಡ ಎಷ್ಟೊಂದು ಋಣಿಯಾಗಿರಬೇಕು ಅದರಿಂದ ಉದ್ದೀಪನಗೊಂಡು ಸಾಹಿತ್ಯ ಸೃಷ್ಟಿಸಿದವರ ಬರೆಹ ಬಿಟ್ಟರೆ ಬೇರೆ ಏನೂ ಉಳಿಯುವುದೇ ಇಲ್ಲ. ರಾಮಾಯಣ, ಭಾರತಗಳಾಗಲೀ, ಬಸವಣ್ಣ, ಅಲ್ಲಮ, ಕುಮಾರವ್ಯಾಸ, ಪುರಂದರ, ಶರೀಫರಂಥವರ ಬರೆಹಗಳಾಗಲೀ ಆ ಶ್ರದ್ಧೆಯ ವೃಕ್ಷಕ್ಕೇ ಒಡೆದ ಟಿಸಿಲುಗಳು. ನಿರೀಶ್ವರವಾದಿಗಳೆನ್ನಬಹುದಾದ ಎ.ಕೆ. ರಾಮಾನುಜನ್ ಅಂಥವರೂ ನಮ್ಮ ಸಂಸ್ಕೃತಿ – ಸಾಹಿತ್ಯಗಳ ಸಾರವನ್ನು ಹೊರ ಜಗತ್ತಿಗೆ ಅನುವಾದಿಸಿ ಕೊಡಬೇಕಾಗಿ ಬಂದಾಗ ಅವರು ಆಸ್ತಿಕತೆಯ ನೀರು ಗೊಬ್ಬರ ಹೀರಿ ಬೆಳೆದ ಸಾಹಿತ್ಯವನ್ನೇ ಕೊಟ್ಟರು. ಅವರ Speaking of Siva, Hymns for the drowning ಇವೆಲ್ಲ ಅಂಥ ಕೃತಿಗಳೇ ತಾನೆ?

ಇರಲಿ. ಇನ್ನೊಂದು ಪ್ರಶ್ನೆ. ಈವರೆಗಿನ ದೀರ್ಘಾವಧಿಯಲ್ಲಿ ನೀವು ಬೇಕಾದಷ್ಟು ಶ್ರೇಷ್ಠ ಕೃತಿಗಳನ್ನು ಓದಿದ್ದೀರಿ. ಅವುಗಳಲ್ಲಿ ನಿಮ್ಮ ಮೇಲೆ ತುಂಬ ಪ್ರಭಾವ ಬೀರಿದ ಆಪ್ತವಾದ ಕೃತಿಗಳು ಯಾವುವು?

ಮೂರ್ತಿರಾವ್ : ಆಪ್ತವಾದ ಕೃತಿಗಳನ್ನು ಎರಡು ಗುಂಪು ಮಾಡಬಹುದು. ಮೊದಲಿನದು ನನಗೆ ಬಹಳ ಪ್ರಿಯವಾದ ಕೃತಿಗಳು. ಇವು ನನ್ನ ಮೇಲೆ ಗಾಢವಾದ ಪರಿಣಾಮ ಮಾಡಿವೆ ಅಂತ ಅಲ್ಲ; ಓದಿದಾಗ ತುಂಬ ಸುಖ, ಸಂತೋಷ ಕೊಟ್ಟಿವೆ. ಇಂಥವು ಸಾಕಷ್ಟು ಇವೆ. ಅವುಗಳನ್ನು ನಾನು ಪಟ್ಟಿಮಾಡಲು ಹೋಗುವುದಿಲ್ಲ.

ಎಳಡನೆಯದು ನನ್ನನ್ನು ಮತ್ತೆ ಮತ್ತೆ ಆಲೋಚನೆಗೆ, ವಿಚಾರಕ್ಕೆ ಹಚ್ಚಿದಂಥ ಕೃತಿಗಳು. ಹಾರ್ಡಿಯ ಕೆಲವು ಕಾದಂಬರಿಗಳು, ಷೇಕ್ಸ್‌ಪಿಯರನ ಎರಡು ದುರಂತ ನಾಟಕಗಳು ಮತ್ತು ಮಹಾಭಾರತ. ಹಾರ್ಡಿಯ ಕಾದಂಬರಿಗಳ ಕೆಲವು ಪಾತ್ರಗಳ ದುರ್ವಿಧಿ, ಪ್ರಸಂಗಗಳ ವೈಚಿತ್ರ್ಯ ನನ್ನಲ್ಲಿ ಗಾಢವಾದ ವಿಷಾದವನ್ನು ಕವಿಸಿದ್ದುಂಟು.

ಷೇಕ್ಸ್‌ಪಿಯರನ ದುರಂತ ನಾಟಕಗಳಲ್ಲಿ ನನಗೆ ವಿಶೇಷವಾಗಿ ಮೆಚ್ಚಿಕೆಯಾದವು ಮ್ಯಾಕ್‌ಬೆತ್ ಮತ್ತು ಕಿಂಗ್‌ಲಿಯರ್. ಹಿಂಜರಿಯುತ್ತ ಹಿಂಜರಿಯುತ್ತ ಮಾಡಿದ ಒಂದು ಕರಾಳಕೃತ್ಯ, ಮ್ಯಾಕ್‌ಬೆತ್‌ನನ್ನು ಒಂದಾದಮೇಲೊಂದು ಭಯಂಕರ ಕೃತ್ಯಗಳಿಗೆ ಹಚ್ಚುತ್ತದೆ. ಮಹಾತ್ವಾಕಾಂಕ್ಷೆಯ ಕೀಲುಕುದುರೆ ಅವನನ್ನು ಹಿಂಸೆ ತುಂಬಿದ ಭಯಾನಕ ಅಡವಿಯಲ್ಲಿ ಕೆಡವಿ ಮರೆಯಾಗಿದೆ. ಹಿಂದಿನ ಕೊಲೆಗೆ ಪರಿತಪಿಸುತ್ತ ಮುಂದಿನ ಕೊಲೆ ಮಾಡಿಸಬೇಕಾಗಿದೆ. ನನ್ನ ತಲೆ ಚೇಳುಗಳ ಸಂತೆಯಾಗಿ ಹೋಗಿದೆ ಎನ್ನುತ್ತಾನೆ ಮ್ಯಾಕ್‌ಬೆತ್. ನಿದ್ದೆಯಿಲ್ಲದೆ ಸಾಲುರಾತ್ರಿಗಳನ್ನು ಕಳೆದ ಅವನಿಗೆ, ತನ್ನಿಂದಾಗಿ ಸತ್ತಿರುವ ಡಂಕನ್ ಗೋರಿಯಲ್ಲಿ ಸುಖವಾಗಿ ಮಲಗಿದ್ದಾನೆ ಎನ್ನಿಸಿಬಿಡುತ್ತದೆ.

Duncan is in his grave
After life's fetful fever
He sleeps well.

ಎನ್ನುವ ಮಾತು ಮ್ಯಾಕ್‌ಬೆತ್ತನ ಬದುಕಿನ ಭೀಕರತೆಗೆ ಹಿಡಿದ ಕನ್ನಡಿ, ಮನುಷ್ಯ ಒಮ್ಮೆ ಕೇಡಿನ ಜೊತೆ ಕೈಕುಲುಕಿದನೋ ಮುಗಿಯಿತು. ಮತ್ತೆ ಅವನು ನೆಮ್ಮದಿಯ ದಡ ಸೇರಿದ ಹಾಗೆಯೇ!

ಮಹಾಭಾರತದಲ್ಲಿ ಉದ್ದಕ್ಕೂ ಕೇಡಿನ ವಿಜೃಂಭಣೆಯೇ. ಎಂಥೆಂಥವರ ಬಾಳೂ ಸಂಕಟದ ಮಡುವಾಗಿದೆ. ಬಹಳ ಭೀಕರವಾದದ್ದೆಂದರೆ ಅದರ ಅಂತ್ಯ. ಕೃಷ್ಣ ಕೌರವ ಕುಲವನ್ನು ದಾರಿಗೆ ಹಚ್ಚಲು ಹೋದವನು. ಆದರೆ ತನ್ನ ಯಾದವ ಕುಲವನ್ನು ರಕ್ಷಿಸುವುದೇ ಅವನಿಂದಾಗಲಿಲ್ಲ. ಎಷ್ಟೊಂದು ಜನರಿಗೆ ವೀರಮರಣ ಕಲ್ಪಿಸಿದ ಅವನಿಗೇ ಅಂಥ ಮರಣವಿಲ್ಲ. ಯಾರೋ ಒಬ್ಬ ಬೇಡ (ಯೋಗಾರೂಢನಾಗಿ) ಮಲಗಿದ್ದ ಅವನನ್ನು ಒಂದು ಸಾಮಾನ್ಯ ಬಾಣದಿಂದ ಕೊಲ್ಲುತ್ತಾನೆ. ಅಟ್ಟಿಬಂದ ನೀಚರಿಂದ ತಮ್ಮನ್ನು ಕಾಪಾಡುವಂತೆ ದ್ವಾರಕೆಯ ಸ್ತ್ರೀಯರು ಅರ್ಜುನನಿಗೆ ಮೊರೆಯಿಡುತ್ತಾರೆ. ಆದರೆ ಆ ತ್ರಿಲೋಕವೀರನಿಗೆ ಧನುಸ್ಸಿಗೆ ಹೆದೆ ಕಟ್ಟುವುದೇ ಪ್ರಯಾಸವಾಗಿಬಿಡುತ್ತದೆ. ಅವನ ಎದುರೇ ಕಳ್ಳರು ಕಂಡಕಂಡದ್ದನ್ನು

ಲೂಟಿ ಹೊಡೆದು ಹೆಂಗಸರನ್ನು ಎಳೆದುಕೊಂಡು ಹೋಗುತ್ತಾರೆ. ಸಮುದ್ರ ಉಕ್ಕಿ ಬಂದು ಹೆಬ್ಬಾವಿನಂತೆ ದ್ವಾರಕೆಯನ್ನು ನಿಧಾನವಾಗಿ ಕಬಳಿಸುತ್ತ ಹೋಗುತ್ತದೆ. ಎಂಥ ಯುಗಕ್ಕೆ ಎಂಥ ಅಂತ್ಯ! ವ್ಯಾಸರಿಗೆ ಸಿದ್ಧಿಸಿದ ಕೇಡಿನ ದರ್ಶನ ಅದ್ಭುತವಾದದ್ದು.

ಆಗಲೇ ಬಹಳ ಹೊತ್ತಾಗಿತ್ತಾಗಿ ನಮ್ಮ ಸಂವಾದ ಮುಗಿಯಿತು. ಮನೆಗೆ ಬಂದರೂ ಮೂರ್ತಿರಾಯರ ಮಾತೇ ನನ್ನನ್ನು ಕಾಡುತ್ತಿತ್ತು. ದೈವ ಎನ್ನುವುದು ತರ್ಕದಿಂದ ಸಾಧಿಸಬಹುದಾದದ್ದೆ? ಅದು ಶ್ರದ್ಧೆ, ಧ್ಯಾನ, ತಪಸ್ಸುಗಳಿಂದ ಅನುಭವಕ್ಕೆ ತಂದುಕೊಳ್ಳಬಹುದಾದ ಒಂದು ಭಾವಸತ್ಯವಲ್ಲವೆ? ತರ್ಕದಿಂದ ಅದನ್ನು ಕಾಣಹೊರಡುವುದು ಎಷ್ಟು ಸರಿ? ಒಂದು ವಸ್ತುವನ್ನು ಅದಕ್ಕೆ ಹೊಂದದ ಮಾಪನದಿಂದ ಅಳೆಯ ಹೊರಡುವುದು ಮೀನು ಹಿಡಿಯುವ ಬಲೆಯಿಂದ ನೀರು ಎತ್ತಲು ಹೋದಂತಲ್ಲವೆ? ಋಷಿಪ್ರಣೀತವಾದ ಮಾರ್ಗದಲ್ಲಿ ಸಾಧಿಸಲು ಹೋಗಿ ವಿಫಲರಾದಲ್ಲದೆ ಅದನ್ನು ನಿರಾಕರಿಸಬಹುದೆ? ಹೀಗೆ ಯೋಚಿಸುತ್ತಲೇ ನಮ್ಮ ಸಂವಾದವನ್ನು ಬರೆಯಲು ಕೂತೆ.

●

'ಆಟವೊ ಬೂಟಾಟವೋ ನೋಟವೆಂದ ದೇವುಡು'

ಭಗವದ್ಗೀತೆಯನ್ನು ಕುರಿತು ಒಂದು ಉಪನ್ಯಾಸ ನೀಡುವ ಸಲುವಾಗಿ ದೇವುಡು ನರಸಿಂಹಶಾಸ್ತ್ರಿ ಉಡುಪಿಗೆ ಬಂದಿದ್ದರು. ಉಪನ್ಯಾಸಕ್ಕಾಗಿ ವೇದಿಕೆ ಹತ್ತುತ್ತಿದ್ದಂತೆ ಯಾರೋ ಅವರಿಗೆ ಒಂದು ಟೆಲಿಗ್ರಾಂ ತಂದುಕೊಟ್ಟರು. ಓದಿಕೊಂಡ ದೇವುಡು ಮುಖದಲ್ಲಿ ಆತಂಕ ವಿಷಾದಗಳ ಛಾಯೆ ಕಾಣಿಸಿಕೊಂಡಿತು. ಏನು ಟೆಲಿಗ್ರಾಂ ಎಂದು ಕಾರ್ಯನಿರ್ವಾಹಕರು ಕೇಳಿದರು. "ಯಾವುದೋ ಪ್ರಕಾಶನಕ್ಕೆ ಸಂಬಂಧಿಸಿದ್ದು. ಬಹಳ ಮುಖ್ಯವಾದದ್ದು. ಉಪನ್ಯಾಸ ಮುಗಿದ ಮೇಲೆ ನಾನು ಇಲ್ಲಿ ಉಳಿಯುವುದಿಲ್ಲ. ಕೂಡಲೇ ಬೆಂಗಳೂರಿಗೆ ಹೊರಡಬೇಕು" ಎಂದು ದೇವುಡು ಉಪನ್ಯಾಸಕ್ಕೆ ಅಣಿಯಾದರು.

ದೇವುಡು ಉತ್ತಮ ಭಾಷಣಕಾರರು. ಜೊತೆಗೆ ಭಗವದ್ಗೀತೆ ಅವರಿಗೆ ಅತ್ಯಂತ ಪ್ರಿಯವಾದ ವಿಷಯ. ಅದನ್ನು ಕುರಿತ ಅವರ ಉಪನ್ಯಾಸಗಳೆಲ್ಲ ಚೇತೋಹಾರಿಯಾಗಿರುತ್ತಿದ್ದವು. ಆ ದಿನವಂತೂ ಭಾಷಣ ಅಮೋಘವಾಗಿತ್ತು. ಇಡೀ ಸಭೆ ಮೆಚ್ಚಿ ತಲೆದೂಗಿತು. ದೇವುಡು ಕೂಡಲೇ ಅಲ್ಲಿಂದ ಊರಿಗೆ ಹೊರಟರು. ಸ್ವಲ್ಪ ಹೊತ್ತಿನ ನಂತರ ತಮ್ಮ ಜೊತೆಯಲ್ಲಿದ್ದ ಬೆಳಗೆರೆ ಕೃಷ್ಣಶಾಸ್ತ್ರಿಗಳಿಗೆ ಟೆಲಿಗ್ರಾಂ ವಿಷಯ ತಿಳಿಸಿದರು. ಅವರ ಮಗ ರಾಮು ತೀರಿಕೊಂಡಿದ್ದ. ಕೂಡಲೇ ಹೊರಟು ಬರುವುದೆಂದು ಟೆಲಿಗ್ರಾಂ ತಿಳಿಸಿತ್ತು. ವಿಷಯ ತಿಳಿದ ಕೃಷ್ಣಶಾಸ್ತ್ರಿ ನಡುಗಿಹೋದರು!

"ಇಂಥ ಅಘಾತಕರ ವಿಷಯ ತಿಳಿದ ಮೇಲೂ ಹೇಗೆ ಅಷ್ಟು ಅದ್ಭುತವಾಗಿ ಮಾತನಾಡಿದಿರಿ? ಅದು ಹೇಗೆ ಸಾಧ್ಯವಾಯಿತು? ಎಂದು ಕೇಳಿದಾಗ ದೇವುಡು ಹೇಳಿದರು." ನಿಜ. ಅಲ್ಲಿ ಯಾರಿಗೂ ನಾನು ಉಪನ್ಯಾಸ ನೀಡಲಿಲ್ಲ, ಗೀತೆಯಲ್ಲಿನ ಸ್ಥಿತಪ್ರಜ್ಞನ ಲಕ್ಷಣವನ್ನು ನನಗೆ ನಾನೇ ಬೋಧಿಸಿಕೊಂಡೆ. ದುಃಖಗಳಲ್ಲಿ ಅನುದ್ವಿಗ್ನನಾಗಿರಬೇಕು. ಸುಖಗಳಲ್ಲಿ ವಿಗತಸ್ಪೃಹನಾಗಿರಬೇಕು. ಇದು ಗೀತಾಚಾರ್ಯ

ನಮಗೆಲ್ಲ ಬೋಧಿಸಿರುವ ಮಾತು. ಅದನ್ನು ಅರಿವಿಗೆ ತಂದುಕೊಂಡೆ. 'ಮಾಮೇಕಂ ಶರಣಂವ್ರಜ' ಎಂಬ ಮಾತನ್ನು ನೆನೆದೆ. ಮನಸ್ಸು ಸ್ಥಿಮಿತಕ್ಕೆ ಬಂತು. ಮಾತು ಸಾಧ್ಯವಾಯಿತು." ಕೃಷ್ಣಶಾಸ್ತ್ರಿಗಳು ಸ್ತಬ್ದರಾಗಿ ಹೋದರು!

ದೇವುಡು ತತ್ವಶಾಸ್ತ್ರವನ್ನು ಆಳದಲ್ಲಿ ಅರಗಿಸಿಕೊಂಡಿದ್ದವರು ಮಾತ್ರವಲ್ಲ, ಅದನ್ನು ಬಾಳಿನಲ್ಲೂ ತಂದುಕೊಂಡಿದ್ದರು. ಜೀವನದಲ್ಲಿ ಹಲವಾರು ಏರುಪೇರು ಕಂಡ ಅವರು ಅದೆಲ್ಲವನ್ನು ಅಘಾತಕ್ಕೊಳಗಾಗದೆ ಸಹಿಸಿಕೊಳ್ಳಬಲ್ಲ ಅದ್ಭುತ ವ್ಯಕ್ತಿಯಾಗಿದ್ದರು.

ಕಳೆದ ಪೀಳಿಗೆಯ ಹಿರಿಯರಲ್ಲಿ ಒಬ್ಬರಾದ ದೇವುಡು ವಿಶೇಷ ಪ್ರತಿಭೆ ಮತ್ತು ಅಗಾಧ ವಿದ್ವತ್ತುಗಳ ಅಪರೂಪದ ಸಂಗಮವಾಗಿದ್ದರು. ತತ್ವಶಾಸ್ತ್ರ ಮತ್ತು ಸಾಹಿತ್ಯ ಎರಡೂ ಅವರ ಎರಡು ಕಣ್ಣಾಗಿದ್ದುವು. ಭಾರತ, ರಾಮಾಯಣ, ಭಗವದ್ಗೀತೆ ಉಪನಿಷತ್ತುಗಳು ಅವರಿಗೆ ಕರತಲಾಮಲಕವಾಗಿದ್ದುವು. ಭಾರತ ಆಧುನಿಕವಾಗುವ ಭರದಲ್ಲಿ ಪಾಶ್ಚಾತ್ಯರ ಅನುಕರಣೆಗೆ ತೊಡಗಿದೆ. ಅದು ಮತ್ತೆ ತನ್ನ ಪ್ರಾಚೀನ ವಿಚಾರ ಸಂಪತ್ತನ್ನು ಗಳಿಸಿಕೊಳ್ಳಬೇಕಾಗಿದೆ ಎನ್ನುವುದು ಅವರ ದೃಢ ಉದ್ದೇಶವಾಗಿತ್ತು. ಆ ಗುರಿಯ ಕಡೆಗೆ ಅವರ ಜೀವನ, ಚಿಂತನೆ, ಸಾಹಿತ್ಯ, ಸಾಮಾಜಿಕ ಚಟುವಟಿಕೆಗಳೆಲ್ಲ ಸಾಗಿದ್ದುವು. ಬಾಲ್ಯದಿಂದಲೇ ಅವರ ಬಾಳು ಆ ಕಡೆಗೆ ಒಲಿದಿತ್ತು. ಒಮ್ಮೆ ಒಬ್ಬ ಕ್ರೈಸ್ತಪಾದ್ರಿ ಜನರೆದುರು ಹಿಂದೂಧರ್ಮವನ್ನು ಹೀಯಾಳಿಸುತ್ತ "ಕೃಷ್ಣ ಕೊಳಲನ್ನು ನುಡಿಸಿದಾಗ ಒಣಗಿದ ಮರಗಳೆಲ್ಲ ಚಿಗುರಿದವು ಎಂದು ನಿಮ್ಮ ಭಾಗವತ ಗ್ರಂಥ ಹೇಳುತ್ತದೆಯಲ್ಲ, ಹಾಗಿದ್ದರೆ ಕೃಷ್ಣನ ಕೈಯಲ್ಲಿ ಇದ್ದ ಕೊಳಲು ಏಕೆ ಚಿಗುರಲಿಲ್ಲ?" ಎಂದು ಕೇಳಿದ. ಆಗ ಅಲ್ಲೇ ಇದ್ದ ಬಾಲಕ ದೇವುಡು ತಕ್ಷಣ ಉತ್ತರಕೊಟ್ಟ "ಚಿಗುರಿದರೆ ಕೃಷ್ಣ ಎಲ್ಲಿ ತನ್ನನ್ನು ಬಿಸಾಡಿಬಿಡುತ್ತಾನೋ ಎಂಬ ಭಯದಿಂದ ಅದು ಚಿಗುರಲಿಲ್ಲ." ಪ್ರಶ್ನೆ ಕೇಳಿದ ಪಾದ್ರಿ ದಂಗಾಗಿ ಹೋದ!

* * *

ಮಧುಮೇಹದ ಕಾರಣದಿಂದಾಗಿ ಜೀವಿತದ ಕಡೆಯ ಭಾಗದಲ್ಲಿ ದೇವುಡುರವರ ಒಂದು ಕಾಲನ್ನು ತೊಡೆಯ ಕೆಳಭಾಗದವರೆಗೆ ಕತ್ತರಿಸಿ ತೆಗೆಯಲಾಗಿತ್ತು. ಆಸ್ಪತ್ರೆಯಲ್ಲಿದ್ದ ಅವರನ್ನು ಕಾಣಲು ಕೀರ್ತಿನಾಥ ಕುರ್ತಕೋಟಿ ಮತ್ತು ಮನೋಹರ ಗ್ರಂಥಮಾಲೆಯ ಜಿ.ಬಿ.ಜೋಷಿ ಬಂದಿದ್ದರು. ಅವರು ತಮ್ಮ ಪರಿತಾಪ ವ್ಯಕ್ತಪಡಿಸುತ್ತ ಛೇ ಎಂಥ ದುರ್ಘಟನೆ ಇದು! ಹೀಗಾಗಬಾರದಿತ್ತು ಎಂದು ಮರುಗಿದರು. ಕೂಡಲೇ ದೇವುಡು "ನನಗೆ ಏನಾಗಿದೆ" ಒಂದು ಕಾಲು ಹೋದರೇನು ಇನ್ನೊಂದಿಲ್ಲವೇ?" ಎಂದು ಇನ್ನೊಂದು ಕಾಲಿನ ತೊಡೆ ತಟ್ಟಿ

ತೋರಿಸಿದರಂತೆ. ಎಂಥ ದಾರುಣ ಸ್ಥಿತಿಯಲ್ಲೂ ಕೆಚ್ಚು ಕಳೆದುಕೊಳ್ಳದ ಮನಸ್ಥೈರ್ಯ ಅವರದಾಗಿತ್ತು. ಕಾಲು ಹೋದ ಮೇಲೂ ಅವರು ಹಲವುಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದುಂಟು ಒಮ್ಮೆ ಅವರನ್ನು ಕಾರಿನಲ್ಲಿ ಕೂರಿಸಲು ನಾಲ್ಕು ಜನ ಎತ್ತಿ ಹಿಡಿದಾಗ, "ನೋಡಿರಯ್ಯಾ ಉಳಿದವರಿಗೆ ಪಲ್ಲಕ್ಕಿಸೇವೆ ತೀರಿಕೊಂಡ ಮೇಲೆ. ನನಗೆ ಬದುಕಿರುವಾಗಲೇ ಆ ವೈಭವ, ಹೇಗಿದೆ?' ಎಂದು ಜೋರಾಗಿ ನಕ್ಕರಂತೆ. ಎಂಥ ಕಷ್ಟದಲ್ಲೂ ಅವರು ತೋರುತಿದ್ದ ಸ್ಥಿತಪ್ರಜ್ಞತೆ ಬೆರಗುಗೊಳಿಸುವಂಥದಾಗಿತ್ತು.

ಕನ್ನಡ ಇಂಗ್ಲಿಷ್ ಸಂಸ್ಕೃತ ಭಾಷೆ–ಸಾಹಿತ್ಯಗಳಲ್ಲಿ ದೇವುಡು ವಿಶೇಷ ಪ್ರೌಢಿಮೆ ಹೊಂದಿದ್ದರು. ಸಾಹಿತ್ಯ ಮತ್ತು ತತ್ವಶಾಸ್ತ್ರಗಳಿಗೆ ಸಂಬಂಧಿಸಿದಂತೆ ಅವರು ಮಾಡಿರುವ ಕೆಲಸ ವಿಶಿಷ್ಟವಾದದ್ದು. ಐತಿಹಾಸಿಕ, ಸಾಮಾಜಿಕ ಮತ್ತು ಪೌರಾಣಿಕ–ಮೂರೂ ಕ್ಷೇತ್ರಗಳಲ್ಲಿ ಅವರು ಮೌಲಿಕ ಕಾದಂಬರಿಗಳನ್ನು ರಚಿಸಿದ್ದಾರೆ. ೨೦ನೇ ಶತಮಾನದ ಮೊದಲ ದಶಕಗಳಲ್ಲಿ ಗಳಗನಾಥ ಮತ್ತು ವೆಂಕಟಾಚಾರ್ಯರು ಮರಾಠಿ ಮತ್ತು ಬಂಗಾಳಿ ಭಾಷೆಗಳಿಂದ ಕೆಲವು ಐತಿಹಾಸಿಕ ಕಾದಂಬರಿಗಳನ್ನು ಅನುವಾದಿಸಿದರಷ್ಟೆ. ಸ್ವಾತಂತ್ರ್ಯ ಸಂಗ್ರಾಮದ ಆ ದಿನಗಳಲ್ಲಿ ಜನರಲ್ಲಿ ದೇಶಭಕ್ತಿಯನ್ನು ಎಚ್ಚರಿಸುವುದೂ ಈ ಕಾದಂಬರಿಗಳ ಉದ್ದೇಶವಾಗಿತ್ತು. ದೇವುಡು ಅದೇ ಉದ್ದೇಶದಿಂದ 'ಮಯೂರ' ಎಂಬ ಸ್ವತಂತ್ರ ಐತಿಹಾಸಿಕ ಕಾದಂಬರಿ ರಚಿಸಿದರು. ಕರ್ನಾಟಕದ ಮೊದಲ ದೇಶೀರಾಜವಂಶವಾದ ಕದಂಬ ಕುಲದ ಮಯೂರವರ್ಮ ಇದರ ಕಥಾನಾಯಕ. ಅವನು ತಮ್ಮನ್ನು ಆಳುತ್ತಿದ್ದ ಪಲ್ಲವರಾಜರನ್ನು ಗೆದ್ದು ಕರ್ನಾಟಕವನ್ನು ಅವರಿಂದ ಸ್ವತಂತ್ರಗೊಳಿಸಿ ಪಲ್ಲವ ರಾಜಪುತ್ರಿಯನ್ನು ಮದುವೆಯಾಗಿ ಕದಂಬ ಸಾಮ್ರಾಟನಾದ ಕಥೆ ಇದು. ಐತಿಹಾಸಿಕಾಂಶಗಳಿರುವಂತೆಯೇ ಕೆಲವು ಕಲ್ಪಿತ ಅಂಶಗಳೂ ಇದರಲ್ಲಿವೆ. ಇದೊಂದು ವಾಚನೀಯವಾದ ರಮ್ಯಾದ್ಭುತ ಕಥೆ. ಬಹಳ ಜನಪ್ರಿಯವಾದ ಈ ಕಥೆ ಚಲನಚಿತ್ರವಾಗಿ ರಜತ ಪರದೆಯ ಮೇಲೂ ಮೆರೆಯಿತು.

'ಕಳ್ಳರ ಕೂಟ' ದೇವುಡು ಬರೆದ ಮೊದಲ ಸಾಮಾಜಿಕ ಕಾದಂಬರಿ. ಗಯಟೆಯ 'ಫೆಲೋ ಕಲ್ಪ್ರಿಟ್ಸ್' ಎಂಬ ಕಥೆಯನ್ನಾಧರಿಸಿ ಬರೆದ ಈ ಪುಸ್ತಕ ಪತ್ತೇದಾರಿ ಕಥಾನಕದಂತಿದೆ. 'ಟಾಕಿ' ಇರದಿದ್ದ ಆ ಕಾಲದಲ್ಲಿ (೧೯೨೬) ಮೂಕ ಚಿತ್ರವಾಗಿ ಇದನ್ನು ಹೊರತರಲು ಗುಬ್ಬಿವೀರಣ್ಣ, ಹಿರಣ್ಣಯ್ಯ ಮುಂತಾದವರ ಜೊತೆಸೇರಿ ದೇವುಡು ಪ್ರಯತ್ನಿಸಿದ್ದುಂಟು. ಆದರೆ ಕಾರಣಾಂತರದಿಂದ ಆ ಚಿತ್ರ ಪೂರ್ಣಗೊಳ್ಳಲಿಲ್ಲ. ಮುಂದೆ 'ಒಡೆದ ಮುತ್ತು','ಮಲ್ಲಿ', 'ಡಾ.ವೀಣಾ', 'ಅಂತರಂಗ' ಮೊದಲಾದ ಕಾದಂಬರಿಗಳು ಹೊರಬಂದುವು. ಕಾಮ ಪ್ರೇಮಗಳ ಹೊಯ್ದಾಟವನ್ನು ಚಿತ್ರಿಸುವ 'ಅಂತರಂಗ' ಕನ್ನಡದ ಮೊಟ್ಟಮೊದಲ ಮನೋವಿಶ್ಲೇಷಣಾತ್ಮಕ ಕಾದಂಬರಿ ಎಂದು ಕರೆಸಿಕೊಂಡಿದೆ. ಆಚಾರವಂತನಾದ ವಿವಾಹಿತ ಬ್ರಾಹ್ಮಣನೊಬ್ಬನ ಅಲೌಕಿಕ

ಸಿದ್ಧಿಗೆ ಮಾರುಹೋದ ಬಸವಿಯೊಬ್ಬಳು ಅವನಲ್ಲಿ ಅನುರಕ್ತಳಾಗಿ ಕೂಡುವ ಘಟನೆ, ಅದು ಮುಂದೆ ಎಬ್ಬಿಸುವ ಘರ್ಷಣೆ ಅದರಲ್ಲಿದೆ. ಅನಂತಮೂರ್ತಿಯವರ ಸಂಸ್ಕಾರ ಕಾದಂಬರಿಯ ಒಂದು ಭಾಗ ಇದನ್ನು ಹೋಲುತ್ತದೆ. ಮೇಲಿನ ಎಲ್ಲ ಕಾದಂಬರಿಗಳೂ ಕಾಮಜೀವನದ ಕೆಲವು ಸಮಸ್ಯೆಗಳ ಚಿತ್ರಣವಾಗಿವೆ.

ಕನ್ನಡ ಸಾಹಿತ್ಯಕ್ಕೆ ದೇವುಡು ಅವರ ಅನುಪಮ ಕೊಡುಗೆಯೆಂದರೆ ಮಹಾಬ್ರಾಹ್ಮಣ, ಮಹಾಕ್ಷತ್ರಿಯ ಮತ್ತು ಮಹಾದರ್ಶನ ಎಂಬ ಮೂರು ಪೌರಾಣಿಕ ಕಾದಂಬರಿಗಳು. ಭಾವನಾತ್ಮಕತೆಯಂತೆಯೇ ಬುದ್ಧಿವಿಲಾಸವನ್ನೂ ಮೇಳವಿಸಿಕೊಂಡ ಇಂಥ ಕಾದಂಬರಿಗಳು ಯಾವ ಭಾಷೆಯಲ್ಲಿಯೇ ಆಗಲಿ ಅಪರೂಪವಾದುವು. ಇದಕ್ಕೆ ಕಾರಣ ದೇವುಡು ಅವರಿಗೆ ಸೃಜನಾತ್ಮಕ ಪ್ರತಿಭೆಯ ಜೊತೆಗೆ ಭಾರತೀಯ ದರ್ಶನಶಾಸ್ತ್ರದಲ್ಲಿಯೂ ಇದ್ದ ಅಗಾಧ ತಿಳುವಳಿಕೆ. ಈ ಕಾದಂಬರಿಗಳು ಅವೆರಡರ ಹೃದ್ಯಸಂಗಮವಾಗಿವೆ.

ಈ ಮೂರು ಕಾದಂಬರಿಗಳಲ್ಲಿ 'ಮಹಾಬ್ರಾಹ್ಮಣ' ಅತ್ಯುತ್ತಮ ಕೃತಿ. ಇದರ ವಸ್ತು ವೇದಕಾಲದ್ದು. ವಿಶ್ವಾಮಿತ್ರ ಇದರ ಕೇಂದ್ರಪಾತ್ರ, ಕ್ಷತಿಯನಾಗಿದ್ದ ಕೌಶಿಕ ಬ್ರಹ್ಮರ್ಷಿಯ ನೆಲೆಗೇರಿ ವಿಶ್ವಾಮಿತ್ರನಾಗುವುದನ್ನು ಇದು ಚಿತ್ರಿಸುತ್ತದೆ. ಪ್ರಾಚೀನ ಗ್ರಂಥಗಳಲ್ಲಿ, ಮುಖ್ಯವಾಗಿ ರಾಮಾಯಣದಲ್ಲಿ ದೊರೆಯುವ ವಿಶ್ವಾಮಿತ್ರನ ಸಂಬಂಧದ ಕಥಾಂಶಗಳನ್ನು ಸಂದರ್ಭೋಚಿತವಾಗಿ ಅಳವಡಿಸಿ, ಅವುಗಳನ್ನು ಪ್ರತಿಭೆ ಕಲ್ಪನೆಗಳಿಂದ ಬೆಳೆಸಿ ದೇವುಡು ಈ ಕೃತಿಯನ್ನು ರಚಿಸಿದ್ದಾರೆ. ವಿಶ್ವಾಮಿತ್ರ ಮೇನಕೆಯರ ಮಿಲನ, ಘೃತಾಚಿ ಎಂಬ ಅಪ್ಸರೆಯ ಜೊತೆ ದಾಂಪತ್ಯ, ಯಜ್ಞಕ್ಕೆ ಪಶುವಾಗಿ ಬಲಿಯಾಗಬೇಕಾಗಿದ್ದು ಪಾರಾದ ಶುನಶ್ಯೇಫ, ವಿಶ್ವಾಮಿತ್ರ ಮತ್ತು ಅವನ ಮಕ್ಕಳ ನಡುವಿನ ಘರ್ಷಣೆ, ಬಹ್ಮರ್ಷಿ ಪದವಿ ಪಡೆದು ಕೌಶಿಕ ವಿಶ್ವಾಮಿತ್ರನಾಗುವುದು, ಗಾಯತ್ರೀ ಮಂತ್ರಸಿದ್ಧಿ–ಇವು ಕಾದಂಬರಿಯ ಮುಖ್ಯ ಪ್ರಸಂಗಗಳು. ಇವು ಹಂತ ಹಂತವಾಗಿ ರೂಪುಗೊಳ್ಳುತ್ತ ಕಾದಂಬರಿ ಅರ್ಥಪೂರ್ಣವೂ ರೋಚಕವೂ ಆಗುತ್ತದೆ. ವರ್ಣವೆನ್ನುವುದು ಇಲ್ಲಿ ಜಾತಿಸೂಚಕವಾಗಿ ಬರದೆ ವೇದಕಾಲದಲ್ಲಿದ್ದಂತೆ ವೃತ್ತಿ ಸೂಚಕವಾಗಿ ಚಿತ್ರಿತವಾಗಿದೆ. ವಸಿಷ್ಠರು ವಿಶ್ವಾಮಿತ್ರನ ಎದುರಾಳಿಯೆಂಬಂತೆ ಮೇಲುನೋಟಕ್ಕೆ ಕಾಣಿಸಿದರೂ ವಿಶ್ವಾಮಿತ್ರನ ಏಳಿಗೆಗೆ ಕಾರಣವಾಗುವ ಪ್ರಸಂಗಗಳನ್ನು ಅವರೇ ರೂಪಿಸುತ್ತಾರೆ. ಸಾಮಾನ್ಯರು, ಋಷಿವರೇಣ್ಯರು, ದೇವತೆಗಳು ಎಲ್ಲರೂ ಇಲ್ಲಿ ಪಾತ್ರಗಳಾಗಿ ಬರುತ್ತಾರೆ. ಹೀಗೆ ಈ ಕಾದಂಬರಿ ವಿಸ್ತಾರವಾದ ಭೂಮಿಕೆಯಲ್ಲಿ ಮನುಷ್ಯನೊಬ್ಬನ ಸಾಹಸಾದ್ಭುತಗಳನ್ನು ಮನೋಜ್ಞವಾಗಿ ಚಿತ್ರಿಸುವ ಕೃತಿಯಾಗಿದೆ. ಇದರಲ್ಲಿ ಸನಾತನ ಸಂಸ್ಕೃತಿಯ ಪುನರ್ ನಿರ್ಮಾಣ ಪ್ರಯತ್ನ ಇದೆ.

ಎರಡನೆಯ ಕಾದಂಬರಿ 'ಮಹಾಕ್ಷತ್ರಿಯ'. ಮಾನವನಾದ ನಹುಷ ಚಕ್ರವರ್ತಿ ಇಂದ್ರಪದವಿಗೇರಿ ಮತ್ತೆ ಅಜಗರವಾಗಿ ಭೂಮಿಗೆ ಮರಳುವ ಕಥೆ ಇದು. ಮಹಾಭಾರತದಲ್ಲಿ ಬರುವ ಈ ಕತೆಯಲ್ಲಿ ದೇವುಡು ಉಚಿತವೆನಿಸುವ ಕೆಲವು

ಬದಲಾವಣೆಗಳನ್ನು ಅಳವಡಿಸಿಕೊಂಡಿದ್ದಾರೆ. ಇಂದ್ರ–ಬೃಹಸ್ಪತಿಗಳ ಘರ್ಷಣೆ, ಬೃಹಸ್ಪತಿಯ ಪದವಿಯಲ್ಲಿ ವಿಶ್ವರೂಪಾಚಾರ್ಯನ ನೇಮಕ. ವಿಶ್ವರೂಪನ ಸಂಹಾರ, ವೃತ್ರಾಸುರನ ಸೃಷ್ಟಿ, ಇಂದ್ರವೃತ್ರರ ಯುದ್ಧ, ಇಂದ್ರನ ಪಲಾಯನ, ನಹುಷನಿಗೆ ಇಂದ್ರಪದವಿ, ಶಿಬಿಕೋತ್ಸವ, ಕಡೆಯಲ್ಲಿ ಮತ್ತೆ ನಹುಷ ಭೂಮಿಗೆ ಮರಳುವುದು, ಸ್ವರ್ಗಕ್ಕೆ ಇಂದ್ರನ ಪುನರಾಗಮನ–ಇಂಥ ಪ್ರಸಂಗಗಳೊಂದಿಗೆ ಕಾದಂಬರಿ ಆಕರ್ಷಕವಾಗಿ ಚಲಿಸುತ್ತದೆ. ನಹುಷ ಇಂದ್ರಪತ್ನಿಯಾದ ಶಚಿಯನ್ನು ಕಾಮಿಸಿ ತನ್ನ ಪತನಕ್ಕೆ ತಾನೇ ಕಾರಣನಾಗುವುದು ಮಹಾಭಾರತದಲ್ಲಿನ ಕಥೆ. ಆದರೆ ದೇವುಡು ನಹುಷನನ್ನು ಒಬ್ಬ ಧೀರೋದಾತ್ತ ವ್ಯಕ್ತಿಯಾಗಿ ಚಿತ್ರಿಸಿದ್ದಾರೆ. ಶಚೀದೇವಿಯೇ ನಹುಷನನ್ನು ಗೌರವಿಸಿ ಮಾತನಾಡುತ್ತಾಳೆ. ನಹುಷ ಸ್ವರ್ಗಕ್ಕೆ ಹೋಗುವಾಗ ತನ್ನ ಪತ್ನಿ ವಿರಜಾದೇವಿಯನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾನೆ. ಅಲ್ಲಿಯೂ ಮಾನವಧರ್ಮಕ್ಕೆ ಚ್ಯುತಿಬಾರದಂತೆ ಮಹಾನುಭಾವನಾಗಿಯೇ ಬಾಳುತ್ತಾನೆ. ಇಂದ್ರನೇ ಅವನೆದುರು ತೇಜೋಹೀನನಾಗಿ ಕಾಣಿಸುತ್ತಾನೆ. ಮಹಾಬ್ರಾಹ್ಮಣದಲ್ಲಿ ಉದಾರ ಬ್ರಾಹ್ಮಣ್ಯವನ್ನು ಎತ್ತಿ ಹಿಡಿದ ದೇವುಡು ಇಲ್ಲಿ ಉದಾತ್ತ ಕ್ಷತ್ರಿಯನೊಬ್ಬನ ಚಿತ್ರಣ ನೀಡಿದ್ದಾರೆ.

ಮೂರನೆಯ ಪೌರಾಣಿಕ ಕಾದಂಬರಿ 'ಮಹಾದರ್ಶನ', ಇದು ಮಹಾಜ್ಞಾನಿ ಯಾಜ್ಞವಲ್ಕ್ಯರ ಕಥೆ. ಮಹರ್ಷಿ ಯಾಜ್ಞವಲ್ಕ್ಯ ಮತ್ತು ಅವನ ಪತ್ನಿಯರಾದ ಕಾತ್ಯಾಯಿನಿ, ಮೈತ್ರೇಯಿ ಮೊದಲಾದವರು ಇಲ್ಲಿ ಬರುತ್ತಾರೆ. ಆತ್ಮ, ಬ್ರಹ್ಮ ಮೃತ್ಯು ಮೊದಲಾದುವನ್ನು ಮಹರ್ಷಿ ವಿವರಿಸುವ ಭಾಗ ಬಹಳ ಪ್ರೌಢವಾಗಿದ್ದು ಈ ಕೃತಿ ಮಹಾದರ್ಶನವೆಂಬ ಹೆಸರಿಗೆ ತಕ್ಕುದಾಗಿ ರೂಪುಗೊಂಡಿದೆ. ಆದರೆ ಇಲ್ಲಿ ಕಥಾಭಾಗಕ್ಕಿಂತ ತತ್ತ್ವ ನಿರೂಪಣೆಯ ಮೇಲೆ ಒತ್ತು ಬಿದ್ದಿದೆ. ಮೇಲಿನ ಮೂರೂ ಕೃತಿಗಳನ್ನು ದೇವುಡುರಂಥ ತತ್ವಜ್ಞ ಮಾತ್ರವೇ ಬರೆಯಬಲ್ಲವರಾಗಿದ್ದರು ಎನಿಸುತ್ತದೆ. ಇವುಗಳ ನಂತರ ಆದಿಶಂಕರರನ್ನು ಕುರಿತು 'ಮಹಾಸನ್ಯಾಸಿ' ಎಂಬ ಕಾದಂಬರಿಯನ್ನು ರಚಿಸುವ ಆಶಯವೂ ಅವರಿಗಿತ್ತು. ಆದರೆ ಅಷ್ಟರಲ್ಲಿ ಅವರ ಜೀವಿತವೇ ಕೊನೆಮುಟ್ಟಿತು.

ದೇವುಡು 'ಸಾವಿತ್ರಿ' 'ದುರ್ಮಂತ್ರಿ' ಮೊದಲಾಗಿ ನಾಲ್ಕು ನಾಟಕಗಳನ್ನು ಬರೆದಿದ್ದಾರೆ. ಕಂಪೆನಿಯನ್ನು ದೃಷ್ಟಿಯಲ್ಲಿಟ್ಟು ಬರೆದ ಉತ್ತಮ ನಾಟಕಗಳಾಗಿದ್ದರೂ ಇವು ಪ್ರದರ್ಶನಗೊಂಡಂತೆ ಕಾಣುವುದಿಲ್ಲ. ಇದಲ್ಲದೆ ದೇವುಡು ಮಕ್ಕಳ ಸಾಹಿತ್ಯ ರಚನೆಯಲ್ಲೂ ವಿಶೇಷವಾಗಿ ದುಡಿದಿದ್ದಾರೆ. 'ದೇಶಾಂತರ ಕಥೆಗಳು', 'ತಂತ್ರಗಾರ ನರಿ ಮತ್ತು ಇತರ ಕಥೆಗಳು', 'ವಿಚಿತ್ರ ಶಿಕ್ಷೆ' ಮೊದಲಾಗಿ ಇಪ್ಪತ್ತಮೂರು ಕಥಾಸಂಕಲನಗಳನ್ನೇ ಪ್ರಕಟಿಸಿದ್ದಾರೆ. ಇವುಗಳಲ್ಲಿ ಇತರ ದೇಶದ ಕಥೆಗಳೂ ಇವೆ. ಮಕ್ಕಳ ಬುದ್ಧಿಯನ್ನು ಅರಳಿಸುವುದು, ಅವರನ್ನು ಯೋಗ್ಯರಾಗಿ ಬೆಳೆಸುವುದು ಈ

ಕಥೆಗಳ ಉದ್ದೇಶ. ಮಕ್ಕಳಿಗಾಗಿಯೇ ಅವರು ಚಿರಂಜೀವಿ, ಪಂಚತಂತ್ರ ಮೊದಲಾಗಿ ಒಂಬತ್ತು ನಾಟಕ ಬರೆದರು. ಅನುವಾದ ಮತ್ತು ಪತ್ರಿಕೋದ್ಯಮಗಳಲ್ಲೂ ಅವರ ಸೇವೆ ವಿಶಿಷ್ಟವಾಗಿದೆ. ಮೀಮಾಂಸಾ ದರ್ಪಣವಂತೂ ಅವರ ಅತ್ಯುತ್ತಮ ವಿಮರ್ಶಾಕೃತಿ.

ದೇವುಡು ಬಹಳ ಉದಾರಿ, ಅಷ್ಟೇ ಸ್ವಾಭಿಮಾನಿ. ಪರರಿಗಾಗಿ ತಮ್ಮ ಶಕ್ತಿ ಮೀರಿ ಖರ್ಚು ಮಾಡುತ್ತಿದ್ದರು. ದೊಡ್ಡ ಸಂಬಳ ತರುವ ಅಧಿಕಾರಗಳನ್ನು ಅವರು ಪರರಿಗಾಗಿ ಕೈಬಿಟ್ಟರು. ರಾಜ್ಯಸರಕಾರದ 'ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆ ಅವರ ಸೂಚನೆ ಪ್ರೇರಣೆಗಳಿಂದಲೇ ಆರಂಭವಾದದ್ದು. ಆದರೆ ಅದರ ನಿರ್ದೇಶಕ ಪದವಿಯನ್ನು ಒಪ್ಪಿಕೊಳ್ಳಬೇಕೆಂಬ ಮುಖ್ಯಮಂತ್ರಿಗಳ ಮನವಿಯನ್ನು ಅವರು ಮನ್ನಿಸಲಿಲ್ಲ. ಅದನ್ನು ಸಿ.ಕೆ. ವೆಂಕರಾಮಯ್ಯನವರಿಗೆ ಕೊಡಿಸಿಬಿಟ್ಟರು. ನಾಡಿಗಾಗಿ ಅವರು ಮಾಡಿದ ಸೇವೆಯನ್ನು ಗಮನಿಸಿ ಕೆ. ಹನುಮಂತಯ್ಯನವರು ಅವರಿಗೆ ಪೆನ್‌ಷನ್ ಮತ್ತು ಸೈಟ್ ಕೊಡಿಸಲು ಮುಂದೆ ಬಂದಾಗ ದೇವುಡು ಅದನ್ನು ನಿರಾಕರಿಸಿದರು. ರಾಜಕೀಯ ಕ್ಷೇತ್ರದಲ್ಲಿದ್ದಾಗ ಅವರು ಸಕಾರದ ತಪ್ಪುಗಳನ್ನು ಉಗ್ರವಾಗಿ ಟೀಕಿಸಿದ್ದುಂಟು. ಇದನ್ನು ತಪ್ಪಿಸಲು ದಿವಾನ್ ಮಿರ್ಜಾರವರು "ನೀವು ರಾಜಕೀಯದಿಂದ ನಿವೃತ್ತರಾಗುವುದಾದರೆ ನಿಮಗೆ ಸರ್ಕಾರದಿಂದ ಪ್ರತಿ ತಿಂಗಳೂ ನೂರು ರೂಪಾಯಿ ನಿವೃತ್ತಿವೇತನ ಕೊಡಿಸುತ್ತೇನೆ" ಎಂದಾಗ ದೇವುಡು "ಕ್ಷಮಿಸಿ, ನೀವು ನನ್ನನ್ನು ತಪ್ಪಾಗಿ ಬೆಲೆಕಟ್ಟಿದಿರಿ" ಎಂದು ನಕ್ಕುಬಿಟ್ಟರು.

ದೇವುಡು ಕಾಲಿಡದ, ಕೈಹಾಕದ ಸಾಂಸ್ಕೃತಿಕ ವಲಯವೇ ಇರಲಿಲ್ಲ. ಎಲ್ಲದರಲ್ಲೂ ಅವರ ಕೆಲಸ ಬಹಳ ಮೌಲಿಕವಾಗಿತ್ತು. ಅದೆಲ್ಲಕ್ಕೂ ಅವರನ್ನು ಪ್ರೇರೇಪಿಸಿದ್ದು ದೇಶಾಭಿಮಾನವೊಂದೇ. ಭಾರತ ಪಾಶ್ಚಾತ್ಯರ ಅನುಕರಣೆಯಿಂದ ಪಾರಾಗಿ ತನ್ನ ಪೂರ್ವವೈಭವಕ್ಕೆ ಮರಳಬೇಕೆಂಬುದೇ ಅವರ ಹಿರಿಯ ಆಶಯವಾಗಿತ್ತು. ಏರುಪೇರುಗಳಿಂದ ಕೂಡಿದ ಅವರ ಜೀವನ ಹಲವು ವಿಶೇಷಾಂಶಗಳ ಸಂಗಮವಾಗಿತ್ತು. ಬಾಲಕನ ನಿಷ್ಕಪಟತೆ, ಹುಚ್ಚು ಎಂಬಂತೆ ಅವರನ್ನು ಅವರಿಸಿಬಿಡುತ್ತಿದ್ದ ಕಾರ್ಯಮಗ್ನತೆ, ಇತಿಮಿತಿಯಿಲ್ಲದ ಅಲೆದಾಟ, ಸ್ವಂತ ವಿಷಯಗಳಲ್ಲಿ ತೀರ ಅನಾಸಕ್ತರಾಗಿದ್ದರೂ ಅನ್ಯರ ವಿಷಯದಲ್ಲಿ ತೋರುತ್ತಿದ್ದ ಔದಾರ್ಯ–ಇದೆಲ್ಲ ಸೇರಿ ಅವರು ಒಬ್ಬ ಅವಧೂತನಂತೆ ಬಾಳಿದರು. ಹಾಗೆಂದೇ ಬೇಂದ್ರೆ ಅವರನ್ನು ತಮ್ಮ ಕವನವೊಂದರಲ್ಲಿ ಹೀಗೆ ಬಣ್ಣಿಸಿದರು.

"ಬಾಲನಂಥ ದೇವುಡು, ಉನ್ಮತ್ತನಂಥ ದೇವುಡು।
ಜಡಪಿಶಾಚ ದೇವುಡು, ಹುಚ್ಚು ಮರುಳು ದೇವುಡು।
ಜೀವನವೇ ನಾಟಕ, ತಾನೂ ಒಬ್ಬ ನೋಟಕ।
ಆಟವೊ ಬೂಟಾಟವೋ, ನೋಟವೆಂದ ದೇವುಡು".

ಕನ್ನಡದ ವೀರಸೇನಾನಿ
ಅ.ನ.ಕೃ.

ನಾನು ಶಿವಮೊಗ್ಗದ ಸರ್ಕಾರಿ ಹೈಸ್ಕೂಲಿನಲ್ಲಿ ಓದುತ್ತಿದ್ದ ದಿನಗಳು ಅವು. ಆ ದಿನ ಅ.ನ.ಕೃ ನಮ್ಮ ಶಾಲೆಯ ಒಂದು ಸಮಾರಂಭ ನಡೆಸಿಕೊಡಲು ಬಂದಿದ್ದರು. ನಮಗೆಲ್ಲ ಎಲ್ಲಿಲ್ಲದ ಸಡಗರ ಸಂಭ್ರಮ; ಕರ್ನಾಟಕದ ಪ್ರಸಿದ್ಧ ಕಾದಂಬರಿಕಾರರನ್ನು ಪ್ರತ್ಯಕ್ಷ ಕಾಣುತ್ತಿದ್ದೇವೆ ಎನ್ನುವ ಪುಳಕ. ವೇದಿಕೆಯ ಮೇಲೆ ನಿಂತ ಅ.ನ.ಕೃ. ನಿರರ್ಗಳವಾಗಿ ಮಾತಾಡುತ್ತಿದ್ದಾರೆ. ನಾವೆಲ್ಲ ಧಾರಾಕಾರವಾಗಿ ಹರಿಯುವ ಅವರ ಮಾತಿನ ಪ್ರವಾಹದಲ್ಲಿ ಮೈಮರೆತಿದ್ದೇವೆ. ಬೇರೆ ಬೇರೆ ಮತಧರ್ಮಗಳು ಅನ್ಯೋನ್ಯವಾಗಿ ಬೆರೆತ ಉದಾಹರಣೆಗಳನ್ನು ಹೇಳುತ್ತಿದ್ದ ಅ.ನ.ಕೃ. ಧರ್ಮಸ್ಥಳ, ಬಾಬಾಬುಡನ್‌ಗಿರಿಯ ದತ್ತಾತ್ರೇಯ ಪೀಠಗಳ ಬಗ್ಗೆ ಹೇಳಿ ಹಠಾತ್ತಾಗಿ ಒಂದು ಕವಿತೆಯ ಭಾಗ ಉದ್ಧರಿಸಿದರು.

ಸೋರುತಿಹುದು ಮನೆಯ ಮಾಳಿಗಿ
ಅಜ್ಞಾನದಿಂದ

ಸೋರುತಿಹುದು ಮನೆಯ ಮಾಳಿಗಿ
ದಾರು ಗಟ್ಟಿ ಮಾಳ್ಪರಿಲ್ಲ
ಕಾಳ ಕತ್ತಲಯೊಳಗೆ ನಾನು
ಮೆಲಕೇರಿ ಹೋಗಲಾರೆ
ಸೋರುತಿಹುದು ಮನೆಯ ಮಾಳಿಗಿ.

ಮುರುಕು ತೊಲೆಯು ಹುಳುಕು ಜಂತಿ
ಕೊರೆದು ಸರಿದು ಕೀಲ ಸಡಲಿ
ಹರುಕು ಚಪ್ಪರ ಜೇರುಗಿಂಡಿ
ಮೇಲಕೇರಿ ಹೋಗಲಾರೆ
ಸೋರುತಿಹುದು ಮನೆಯ ಮಾಳಿಗಿ.

"ಎಷ್ಟು ಅರ್ಥ ತುಂಬಿದೆ ನೋಡಿ ಮಾತಿನಲ್ಲಿ; ಸೋರುತ್ತಿರುವುದು ಮನೆಯ ಮಾಳಿಗೆ ಮಾತ್ರವಲ್ಲ. ಅದು ಹೊರಗಿನ ಅರ್ಥ. ಇಂದ್ರಿಯಗಳ ಮಂಗಕುಣಿತಕ್ಕೆ, ಲೋಭ ಮೋಹಗಳ ಜೀರುಂಡೆ ಕೊರೆತಕ್ಕೆ ಸಿಕ್ಕು, ಬದುಕಿನ ಭಾವಣಿಯೇ ಮುರಿಯುತ್ತಿದೆ, ಕುಸಿಯುತ್ತಿದೆ. ಅರಕ್ಷಿತವಾದ ಬಾಳಿನೊಳಗೆ ದುಃಖ ಸಂಕಟಗಳ ಮಳೆನೀರು ಸೋರುತ್ತಿದೆ. ಜೀವ ಅಜ್ಞಾನದ ಕತ್ತಲೆಯಲ್ಲಿ ಸಿಕ್ಕಿ ಮೇಲುನೆಲೆಗೆ ಏರಲಾರದೆ ಹೋಗಿದೆ. ಎಷ್ಟು ಅರ್ಥ, ಎಂಥ ಸರಳ ಮಾತಿನಲ್ಲಿ!" ಎಂದರು ಅ.ನ.ಕೃ. ಅವರ ಮುಂದಿನ ಮಾತು ತೀರ ಅನಿರೀಕ್ಷಿತವಾಗಿತ್ತು. "ಹಿಂದೂ ವೇದಾಂತದ ದೃಷ್ಟಿಕೋನದಿಂದ ಮೂಡಿದ ಈ ಗೀತೆ ಬರೆದವನು ಯಾರೋ ನಾಡಾಡಿ ಅಲ್ಲ; ಮತ ಜಾತಿಗಳ ಗಡಿದಾಟಿ ನಿಂತ ಒಬ್ಬ ದೊಡ್ಡ ಮನುಷ್ಯ, ಶರೀಫ್ ಸಾಹೇಬ. ನಮ್ಮ ಕರ್ನಾಟಕದ ಕಬೀರ."

ನಮಗೆಲ್ಲ ಎಲ್ಲಿಲ್ಲದ ಆಶ್ಚರ್ಯ. ಮುಸ್ಲಿಮರೊಬ್ಬರ ಕನ್ನಡ ಕವಿತೆಯ ಬಗ್ಗೆ ನಾವು ಕೇಳಿದ್ದು ಅದೇ ಮೊದಲು. ಅವರ ಮಾತು ನನ್ನ ಮನಸ್ಸಿನಲ್ಲಿ ನೆಟ್ಟುಹೋಯಿತು. ಕೇಳಿದ ಕೂಡಲೆ ಮನಸ್ಸಿಗೆ ತಾಗುವ ದೇಸಿ ಕನ್ನಡದ ಸರಳ ಸಾಲುಗಳು, ಅವು ಒಟ್ಟಾಗಿ ಕಟ್ಟುವ ಒಂದು ಇಡಿಯ ಚಿತ್ರ, ಆ ಚಿತ್ರದ ಮರೆಗಿರುವ ವಿಶೇಷವಾದ ಅರ್ಥ, ಪೈಜಾಮ ಜುಬ್ಬ ಧೀರ ನಿಲುವುಗಳ ಅ.ನ.ಕೃ. ಅದನ್ನು ವಿವರಿಸಿದ ಬಗೆ – ಎಲ್ಲ ಒಟ್ಟಾಗಿ ನನ್ನ ಮನಸ್ಸಿನಲ್ಲಿ ಏನೋ ಸುಖದ ಕಲಮಲವಾಗಿ ಹೋಯಿತು.

ಶಿಶುನಾಳ ಶರೀಫ ಸಾಹೇಬರನ್ನು ಕುರಿತು ಅ.ನ.ಕೃ. ಆಡಿದ ಮಾತುಗಳು ಹುಡುಗನಾಗಿದ್ದ ನನ್ನ ಮನಸ್ಸಿನಾಳದಲ್ಲಿ ಭದ್ರವಾಗಿ ಕುಳಿತುಬಿಟ್ಟವು. ಶರೀಫರ ತತ್ವಪದಗಳ ಗೀಳನ್ನು ಹಚ್ಚಿಕೊಂಡ ನಾನು ಮುಂದೆ ಆ ದಾರಿಯಲ್ಲಿ ಸಾಕಷ್ಟು ಕೆಲಸ ಮಾಡಿದೆ. ಅವರ ಅನೇಕ ಪದಗಳನ್ನು ಕಲೆಹಾಕಿದೆ. ಶರೀಫರ ತತ್ವಪದಗಳೇ ಇರುವ ಧ್ವನಿಸುರುಳಿಯೊಂದು ಹೊರಬರಲು ಅಶ್ವಥ್‌ರ ಜೊತೆ ಸೇರಿ ಕೆಲಸಮಾಡಿದೆ. ಅವರ ಪದ್ಯಗಳಿರುವ ಪುಸ್ತಕವೊಂದನ್ನು ಹೊರತಂದೆ. ಈ ಎಲ್ಲ ಕೆಲಸಕ್ಕೆ ಅನಕೃ ಮಾತುಗಳೇ ಮೂಲ ಪ್ರೇರಣೆಯಾಗಿದ್ದುವು. ನಾಡಿನಾದ್ಯಂತ ಓಡಾದುತ್ತ, ಸ್ಫೂರ್ತಿಕಾರಕ ಭಾಷಣಗಳನ್ನು ಮಾಡುತ್ತ, ಸಾಹಿತಿ ಕಲಾವಿದರ ಜೊತೆ ಆತ್ಮೀಯವಾಗಿ ಬೆರೆಯುತ್ತ ಇಂಥ ಅನೇಕ ಕಾರ್ಯಗಳಿಗೆ ಅನಕೃ ಪ್ರೇರಣೆ ನೀಡಿದ್ದುಂಟು. ಶರಣರ ವಚನಗಳನ್ನು ರಾಗಕ್ಕೆ ಅಳವಡಿಸಿ ಹಾಡುವಂತೆ ಗಾಯಕ ಮಲ್ಲಿಕಾರ್ಜುನ ಮನಸೂರರಿಗೆ ಕುಮ್ಮಕ್ಕು ನೀಡಿದವರೂ ಅವರೇ. ಆ ಪ್ರೇರಣೆ ಎಂಥ ಫಲಕೊಟ್ಟಿತು ಎನ್ನುವುದು ಈಗ ಎಲ್ಲರಿಗೂ ತಿಳಿದ ಸಂಗತಿ.

ಅನಕೃ ಅವರ ಓಜಸ್ವೀ ವ್ಯಕ್ತಿತ್ವದ ಬಹುಭಾಗ ಅವರ ಸ್ವಂತ ಶಕ್ತಿ ಸಾಧನೆಗಳಿಂದ ರೂಪುಗೊಂಡದ್ದೇ ಆದರೂ ಅಂಥ ವ್ಯಕ್ತಿತ್ವಕ್ಕೆ ಪೋಷಕವಾದ ಕೌಟುಂಬಿಕ ಹಿನ್ನೆಲೆಯೂ ಅವರಿಗಿತ್ತು. ಅನಕೃ ಅವರ ಸಾಹಿತ್ಯಾಸಕ್ತಿ, ನಿರ್ಭಯತೆ, ಧಾರಾಳಬುದ್ಧಿಗಳಿಗೆ ಪ್ರೇರಕವೆನಿಸುವ ಕೆಲವು ಅಂಶಗಳು ಅವರ ಹಿರಿಯರಲ್ಲೇ ಇದ್ದವು. ಅನಕೃ ಪೂರ್ವಜರು ಹಾಸನ ಜಿಲ್ಲೆಯ, ಹೇಮಾವತಿ ತೀರದ ಅರಕಲಗೂಡಿನಿಂದ ಬಂದವರು. ಅವರ ತಾತನ ಹೆಸರು ಕೃಷ್ಣಪ್ಪ. ಅವರು ಪಾಳೆಯಗಾರರ ವಕೀಲಿವೃತ್ತಿ ಮಾಡುತ್ತಿದ್ದವರು. ಕನ್ನಡ, ಸಂಸ್ಕೃತ, ತೆಲುಗು ಭಾಷೆಗಳಲ್ಲಿ ಸಾಕಷ್ಟು ಪ್ರಭುತ್ವವಿದ್ದ ಅವರು ಕನ್ನಡದಲ್ಲಿ ಭಗವದ್ಗೀತಾಸಾರ, ಉಪನಿಷತ್ ಕೀರ್ತನೆ, ಬೆಳಗುತ್ತಿ ಪಾಳೆಯಗಾರರ ಚರಿತ್ರೆ ಎಂಬ ಕೃತಿಗಳನ್ನು ರಚಿಸಿದ್ದರು. ತೆಲುಗಿನಲ್ಲಿ ಪರಮಾರ್ಥಸಾರ, ಪರಮಾರ್ಥ ಪ್ರಕಾಶಿಕೆ ಎಂಬ ಗ್ರಂಥಗಳನ್ನೂ ಕಾಮಶಾಸ್ತ್ರ ಕುರಿತ ಒಂದು ಗ್ರಂಥವನ್ನೂ ಬರೆದಿದ್ದರು. ಪಾಳೆಯಗಾರರಂತೆ ಅವರದೂ ವೈಭವಯುತ ಜೀವನ. ಮನೆಯಲ್ಲಿ ನಿತ್ಯ ಉತ್ಸವ ಎನ್ನುವಂತೆ ಬಂದು ಹೋಗುವವರಿಗೆಲ್ಲ ಅನ್ನ ಸಂತರ್ಪಣೆ. ಅವರ ಮನೆ ಪಂಡಿತರಿಗೆ, ಕಲಾವಿದರಿಗೆ ಒಂದು ಆಸರೆಯಾಗಿತ್ತು.

ಒಮ್ಮೆ ಅರಳೇಪೇಟೆಯಲ್ಲಿ ಇದ್ದ ರಸ್ತೆಯೊಂದನ್ನು ಸರಿಪಡಿಸುವಾಗ ರಸ್ತೆಯ ಬದಿಯಲ್ಲಿದ್ದ ಅವರ ಮನೆಯ ಮುಂಭಾಗವನ್ನು ಅಧಿಕಾರಿಗಳು ಕೊಂಚ ಒಡೆಸಿದರು. ಇದನ್ನು ತಿಳಿದ ಕೃಷ್ಣಪ್ಪನವರು ಒಳಗಿನಿಂದ ಒಂದು ಕೋವಿ ಸಹಿತ ಬಂದು, ಅದನ್ನು ಎತ್ತಿ ಹಿಡಿದು, ಮನೆ ಒಡೆಸುತ್ತಿದ್ದ ಅಧಿಕಾರಿಗಳನ್ನು ಓಡಿಸಿದರಂತೆ. ದರ್ಪದಿಂದ ನಡೆದುಕೊಂಡ ಅಧಿಕಾರಿಗಳು ಎರಡು ದಿನ ಬಿಟ್ಟು ಬಂದರು. ಮನೆಯ ಮುಂಭಾಗವನ್ನು ಒಡೆಯಬೇಕಾಗಿ ಬಂದ ಸನ್ನಿವೇಶವನ್ನು ಕೃಷ್ಣಪ್ಪನವರಿಗೆ ವಿನಯವಾಗಿ ವಿವರಿಸಿದರು. ಮನೆಯ ಹಿಂಭಾಗದಲ್ಲಿ, ನಷ್ಟಕ್ಕೆ ಪರಿಹಾರವಾಗಿ, ಎರಡರಷ್ಟು ಜಾಗಕೊಟ್ಟ ಮೇಲೆ ಕೃಷ್ಣಪ್ಪನವರು ಅವರ ಕೆಲಸಕ್ಕೆ ಅನುಮತಿ ನೀಡಿದರು. ಸೌಜನ್ಯ, ಸಮಜಾಯಿಷಿಯಿಲ್ಲದೆ ನಡೆದುಕೊಳ್ಳುವವರು ಎಷ್ಟು ಬಲಿಷ್ಠರೇ ಇರಲಿ, ಅವರಿಗೆ ಬಗ್ಗದ ಧೃತಿ ಕೃಷ್ಣಪ್ಪನವರಿಗಿತ್ತು. ಕೆಲವು ಸಂದರ್ಭಗಳಲ್ಲಿ ಅನಕೃ ತೋರುತ್ತಿದ್ದ ಆತ್ಮಪ್ರತ್ಯಯ ಈ ಬಗೆಯದೇ ಆಗಿತ್ತು. ಸಾರಸ್ವತಶಕ್ತಿ ಹೇಗೋ ಹಾಗೆಯೇ ವ್ಯಾವಹಾರಿಕ ಕೆಚ್ಚೂ ಅವರಿಗೆ ವಂಶದಿಂದ ಬಂದದ್ದು ಎನ್ನಬಹುದು.

ಅನಕೃ ಅವರ ತಂದೆ ನರಸಿಂಗರಾಯರು ರಿಜಿಸ್ಟ್ರಾರ್ ಕಛೇರಿಯ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ರೆವಿನ್ಯೂ ಆಫೀಸರಾದರು. ಅವರ ಕಾರ್ಯದಕ್ಷತೆ, ಶುಭ್ರವ್ಯವಹಾರ ಎಲ್ಲರ ಮೆಚ್ಚಿಗೆ ಗಳಿಸಿದ್ದುವು. ಅವರಿಂದ ಉಪಕೃತರಾದವರು ಬಹಳ ಜನ. ಆ ಮನೆಯ ಆಸರೆ ಪಡೆದು ಬೆಳೆದವರಲ್ಲಿ ವಿಶ್ವೇಶ್ವರಯ್ಯನವರೂ ಒಬ್ಬರು.

ವಿಶ್ವೇಶ್ವರಯ್ಯನವರು ದಿವಾನರಾದಾಗ ಹಿಂದೆ ತಮಗೆ ಆಸರೆ ಕೊಟ್ಟ ಮನೆಯನ್ನು ಮರೆಯದೆ ಅವರಿಗೆ ಏನಾದರೂ ಸಹಾಯ ಮಾಡಬೇಕೆಂದು ಆಶಿಸಿದರು. ಆದರೆ ನರಸಿಂಗರಾಯರು ಯಾವ ಸಹಾಯ ಪಡೆಯಲೂ ಒಪ್ಪಲಿಲ್ಲ.

ಪ್ರಿನ್ಸ್ ಆಫ್ ವೇಲ್ಸ್ ಭಾರತಕ್ಕೆ ಬಂದಾಗ ಬೆಂಗಳೂರಿಗೂ ಭೇಟಿಕೊಟ್ಟಿದ್ದರಷ್ಟೆ ಆಗ ನರಸಿಂಗರಾಯರ ವಿಷಯವೆಲ್ಲ ತಿಳಿದು ಅವರಿಗೆ ಒಂದು ವಿಶೇಷ ಸಂದರ್ಶನ ನೀಡಿದರು. ನರಸಿಂಗರಾಯರಿಗೆ ಬ್ರಿಟಿಷ್ ರಾಜಮುದ್ರೆ ಇದ್ದ ಒಂದು ಬಂಗಾರದ ಸಿಗರೇಟ್ ಕೇಸನ್ನು ಬಹುಮಾನವಾಗಿ ಕೊಟ್ಟರು. ನರಸಿಂಗರಾಯರು ಬಹಳ ಕಟ್ಟುಪಾಡುಗಳಿದ್ದ ಜಾತಿಯೊಂದರಲ್ಲಿ ಹುಟ್ಟಿದ್ದರೂ ಆ ಕಟ್ಟುಪಾಡುಗಳು ಸಮಾಜದ ಜೊತೆ ಧಾರಾಳವಾಗಿ ಬೆರೆಯಲು ಅಡ್ಡಿಯಾಗದಂತೆ ಬಾಳಿದವರು. ತಂದೆಯ ಈ ಗುಣ ಮಗನಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆದು ಬಂತು.

ಅನಕೃ ಅವರ ವ್ಯಕ್ತಿತ್ವದ ಮೇಲೆ ತುಂಬ ಪ್ರಭಾವ ಬೀರಿದ ವ್ಯಕ್ತಿ ಅವರ ತಾಯಿ ಅನ್ನಪೂರ್ಣಮ್ಮ. ಅನಕೃ ಕಾದಂಬರಿಗಳಲ್ಲಿ ಭಾರತೀಯ ಸಂಸ್ಕೃತಿಯನ್ನು ಬಾಳಿನಲ್ಲಿ ಅರಗಿಸಿಕೊಂಡಂತಿರುವ, 'ಸಂಧ್ಯಾರಾಗ'ದ ಮೀನಾಕ್ಷಮ್ಮನವರಂಥ ಹಲವು ಪಾತ್ರಗಳು ಬರುತ್ತವಷ್ಟೆ. ಅವುಗಳ ಮೂಲ ನಕ್ಷೆ ಅನಕೃ ಅವರಿಗೆ ತಾಯಿಯಲ್ಲೇ ಸಿಕ್ಕಿರಬೇಕು. ಅತ್ತೆಯ ಮನೆಗೆ ಬಂದ ಮೇಲೆ ಹೆಚ್ಚಿನ ಓದುಕಲಿತ ಅನ್ನಪೂರ್ಣಮ್ಮ ಸುತ್ತ ಮುತ್ತಲ ಮನೆಯ ಹೆಣ್ಣುಮಕ್ಕಳಿಗೆ ಶ್ರೀ ಕೃಷ್ಣಯೋಗಿಗಳ ಭಗವದ್ಗೀತಾರ್ಥಸಾರ, ಮಹಲಿಂಗರಂಗನ ಅನುಭವಾಮೃತ ಮೊದಲಾದ ಗ್ರಂಥಗಳನ್ನು ಓದಿ ವಿವರಿಸುತ್ತಿದ್ದರು. ಅನ್ಯರ ನೆರವಿಗೆ ಸದಾ ಧಾವಿಸಿ ಬರುತ್ತಿದ್ದ ಅವರು ಬಡವ ಮುಸ್ಲಿಮನೊಬ್ಬನಿಗೆ ಒಂದು ಹೋಟೆಲು ಆರಂಭಿಸಲು ಸಹಾಯ ಮಾಡಿದರಂತೆ. ಆಶ್ಚರ್ಯವೆಂದರೆ ಆತನ ಮಕ್ಕಳು ಕೂಡ ಇಂದಿಗೂ ಅದನ್ನು ಕೃತಜ್ಞತೆಯಿಂದ ನೆನೆಯುವುದು. ಇಂದಿಗೂ ಅನ್ನಪೂರ್ಣಮ್ಮನವರ ಶ್ರಾದ್ಧದ ದಿನ ಅವರು ಮಸೀದಿಯಲ್ಲಿ ಬಡಬಗ್ಗರಿಗೆ ಅನ್ನದಾನ ಮಾಡುವ ಅಭ್ಯಾಸವನ್ನು ಇಟ್ಟುಕೊಂಡಿದ್ದಾರಂತೆ. ಇಂಥ ಅಪ್ಪಟ ಭಾರತೀಯ ಸ್ತ್ರೀಯ ಆದರ್ಶ ಅನಕೃ ಅವರ ಕಣ್ಣೆದುರಿಗೆ ಚಿಕ್ಕಂದಿನಿಂದಲೇ ಇರುತ್ತ ಅವರ ಮೇಲೆ ಗಾಢಪ್ರಭಾವ ಬೀರಿದ್ದರೆ ಆಶ್ಚರ್ಯವಿಲ್ಲ.

ಅನಕೃ ಅವರನ್ನು, ಮೊದಲ ಬರವಣಿಗೆಗೆ ತೊಡಗಿಸಿದ ಘಟನೆ ತುಂಬ ನಾಟಕೀಯವೂ ಸ್ವಾರಸ್ಯಕರವೂ ಆಗಿದೆ. ಅವರ ಮನೆಗೆ ಪ್ರಸಿದ್ಧ ನಟ ವರದಾಚಾರ್ಯರು ಆಗಾಗ ಬರುತ್ತಿದ್ದರು ಯುವಕರಾಗಿದ್ದ ಅನಕೃ ವರದಾಚಾರ್ಯರನ್ನು, ಅವರ ಅಭಿನಯವನ್ನು ಬಹಳ ಮೆಚ್ಚಿಕೊಂಡಿದ್ದರೂ ಅವರು

ಆಡುತ್ತಿದ್ದ ನಾಟಕಗಳ ವಸ್ತು ಅನಕೃಗೆ ಬಹಳ ಸಪ್ಪೆಯಾಗಿ ಕಾಣಿಸುತ್ತಿತ್ತು. ವರದಾಚಾರ್ಯರು ಆಡಿಸುತ್ತಿದ್ದ, ರತ್ನಾವಳಿ, ಶಾಕುಂತಲ, ನಿರುಪಮಾಗಳಂಥ ನಾಟಕಗಳಿಂದ ನಮ್ಮ ಸಮಾಜಕ್ಕೆ ಏನು ಉಪಯೋಗ, ಅವೆಲ್ಲ ನಮ್ಮ ಸಮಾಜವನ್ನು ಪ್ರತಿಬಿಂಬಿಸಲಾರವು ಸುಧಾರಿಸಲಾರವು ಎಂದು ಅನಕೃರವರ ವಿಚಾರವಾಗಿತ್ತು. ಒಮ್ಮೆ ವರದಾಚಾರ್ಯರು ಬಂದಾಗ ಯುವಕ ಅವರಿಗೆ ಅದೇ ಪ್ರಶ್ನೆ ಕೇಳಿದ. ಬೇರೆ ಹೊಸ ನಾಟಕಗಳಿಲ್ಲವಾಗಿ ತಾವು ಆ ನಾಟಕಗಳನ್ನು ಆಡುತ್ತಿರುವುದಾಗಿ ವರದಾಚಾರ್ಯರು ಉತ್ತರಿಸಿದರು. ಹೊಸ ನಾಟಕ ದೊರೆತರೆ ಆಡಲು ಅವರು ಸಿದ್ಧವೇ ಎಂದು ಅನಕೃ ಕೇಳಿದರು. ಖಂಡಿತ ಸಿದ್ಧ ಎಂಬ ಉತ್ತರ ಬಂತು. ನಾಟಕ ಯಾವಾಗ ದೊರೆಯುತ್ತದೆ ಎಂದು ವರದಾಚಾರ್ಯರು ಕೇಳಿದ್ದಕ್ಕೆ ನಾಳೆಯೇ ಎಂದರು ಅನಕೃ. ಅಷ್ಟೇ ಅಲ್ಲ, ಆ ದಿನ ಇಡೀ ಹಗಲು ರಾತ್ರಿ ಕುಳಿತು ಒಂದು ನಾಟಕ ಬರೆದರು. ಮಾರನೆಯ ದಿನ ವರದಾಚಾರ್ಯರು ಬಂದಾಗ ನಾಟಕ ಸಿದ್ಧವಾಗಿತ್ತು. ಆ ನಾಟಕದ ಹೆಸರು 'ಮದುವೆಯೋ ಮನೆಹಾಳೋ' ಅಂತ. ಈ ಘಟನೆ ನಡೆದದ್ದು ೧೯೨೪ರಲ್ಲಿ ಆಗ ಅನಕೃಗೆ ಇನ್ನೂ ಹದಿನಾರು ವರುಷ! ಆ ವಯಸ್ಸಿಗಾಗಲೇ ಅವರು ವರದಾಚಾರ್ಯರಂಥ ಶ್ರೇಷ್ಠ ಕಲಾವಿದರ ಕೋರಿಕೆಯನ್ನು ನಡೆಸಿಕೊಡಲು ಒಂದು ನಾಟಕ ರಚಿಸಿಬಿಟ್ಟಿದ್ದರು!

ಅನಕೃ ಅವರ ಸಾಹಿತ್ಯರಚನೆ ಆರಂಭವಾದದ್ದು ಹೀಗೆ ನಾಟಕ ನಿರ್ಮಾಣದ ಮೂಲಕ. ಮುಂದೆ ಅವರು ಸುಮಾರು ಇಪ್ಪತ್ತೈದು ನಾಟಕಗಳನ್ನು ಬರೆದರು. ಅವುಗಳಲ್ಲಿ ಸ್ವರ್ಣಮೂರ್ತಿ, ಹಿರಣ್ಯಕಶಿಪು ಇತ್ಯಾದಿ ಪೌರಾಣಿಕ ನಾಟಕಗಳಿವೆ; ಜಗಜ್ಯೋತಿ ಬಸವೇಶ್ವರ, ಕಿತ್ತೂರ ರಾಣಿ ಚೆನ್ನಮ್ಮ ಮೊದಲಾದ ಐತಿಹಾಸಿಕ ನಾಟಕಗಳಿವೆ; ಮದುವೆಯೋ ಮನೆಹಾಳೋ, ಗೋಮುಖ ವ್ಯಾಘ್ರಗಳಂಥ ಸಾಮಾಜಿಕ ನಾಟಕಗಳೂ ಇವೆ. ಸಾಮಾಜಿಕ ನಾಟಕಗಳು ನಮ್ಮ ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಢಾಳವಾಗಿ ಚಿತ್ರಿಸಿ, ಸಮಾಜ ಎಷ್ಟು ರೋಗಗ್ರಸ್ತವಾಗಿದೆ ಎನ್ನುವುದನ್ನು ಮನವರಿಕೆ ಮಾಡಿಕೊಟ್ಟು, ಆ ರೋಗ ಪರಿಹಾರಕ್ಕೆ ಚಿಕಿತ್ಸೆಯನ್ನೂ ಸೂಚಿಸುವಂಥವು. ಅವರ ನಾಟಕಗಳೆಲ್ಲ ವೈಚಾರಿಕತೆಯ ಮಡಿಲಲ್ಲಿ ಬೆಳೆದಂಥವು. ಮಾನವಾನುಭವದ ನಿಗೂಢತೆಯನ್ನು ಬಗೆಯುವುದಕ್ಕಿಂತ ಹೆಚ್ಚಾಗಿ ಸಮಾಜ ಸುಧಾರಣೆ ಈ ನಾಟಕಗಳ ಉದ್ದೇಶವಾಗಿರುವಂತೆ ಕಾಣುತ್ತದೆ. ತಮ್ಮ ಕಾದಂಬರಿಗಳಲ್ಲಿ ಅದ್ಭುತವಾದ ಭಾವಮಯತೆಯನ್ನು ಸಾಧಿಸಿ ಬಿಡುವ ಅನಕೃ ಬರೆಹ ಇಲ್ಲಿ ಆ ಗುಣವನ್ನು ಅಷ್ಟಾಗಿ ಪ್ರಕಟಿಸುವುದಿಲ್ಲ. ಅನಕೃ ರಂಗನಾಟಕಗಳೊಂದಿಗೆ ಚಲನಚಿತ್ರಕ್ಕಾಗಿಯೂ ಬರೆದರು. 'ಜೀವನ ನಾಟಕ' ಎಂಬ ಕೃತಿ ಸಿನಿಮಾರಂಗಕ್ಕಾಗಿ ಬರೆದ ಒಂದು ವಿಶೇಷ ಕೃತಿ. ಅನಕೃ ನಾಟಕಗಳಲ್ಲಿ "ಸಂಭಾಷಣೆಗಳು ಪುಟ

ಚೆಂಡಿನಂತೆ ಚಕಚಕಿತವಾಗಿವೆ. ಚಿಕ್ಕ, ಚೊಕ್ಕ, ರಸಪೂರ್ಣ. ಮಾರ್ಮಿಕ ಮಾತುಗಳು, ಸೆರೆಹಿಡಿಯುವ ಸಂಭಾಷಣೆ ಅನಕೃ ಲೇಖನಿ ಸಾಧಿಸಿದ ಒಂದು ವಿಶೇಷ ಕಲೆ" ಎಂದು ಎನ್ಕೆ ಅಭಿಪ್ರಾಯ ಪಡುತ್ತಾರೆ.

ಅನಕೃ ತಮ್ಮ ಅಭಿವ್ಯಕ್ತಿಗೆ ಆಯ್ದುಕೊಂಡ ಪ್ರಕಾರನೆಂದರೆ ಸಣ್ಣಕಥೆ. ಅವರ ಮೊದಲ ಎರಡು ನಾಟಕಗಳ ಬೆನ್ನ ಹಿಂದೆಯೇ 'ಮಿಂಚು' ಮತ್ತು 'ಕಿಡಿ' ಎಂಬ ಕಥಾಸಂಗ್ರಹಗಳು ಹೊರಬಂದುವು. ಮುಂದೆ ಕಾದಂಬರಿ ಪ್ರಕಾರವನ್ನು ಬಳಸಿ ಅದರಲ್ಲಿ ವಿಪುಲ ಸಾಹಿತ್ಯರಚನೆ ಮಾಡುತ್ತಿದ್ದಾಗಲೂ ಅವರು ಸಣ್ಣಕಥೆಗಳನ್ನು ಆಲಕ್ಷಿಸದೆ ಮಧ್ಯೆ ಮಧ್ಯೆ ಕಥಾ ಸಂಕಲನಗಳನ್ನು ಪ್ರಕಟಿಸಿದರು. 'ಪಾಪ – ಪುಣ್ಯ' 'ಕಣ್ಣು ಮುಚ್ಚಾಲೆ' 'ಅಗ್ನಿಕನ್ಯೆ' 'ಕಾಮನ ಸೋಲು' 'ಶಿಲ್ಪಿ' 'ಸಮರ ಸುಂದರಿ' – ಹೀಗೆ ೧೯೬೦ರವರೆಗೂ ಅವರ ಕಥಾ ಸಂಗ್ರಹಗಳು ಹೊರಬಂದುವು. ಅನಕೃ ತಮ್ಮ ಸಾಹಿತ್ಯ ಜೀವನದ ಆರಂಭದ ದಿನಗಳಲ್ಲಿಯೇ 'ಕಥಾಂಜಲಿ' ಎಂಬ ಸಣ್ಣಕಥೆಗಳ ಮಾಸಪತ್ರಿಕೆಗೆ ಸಂಪಾದಕರಾಗಿ ದುಡಿದಿದ್ದರು. ಬೇರೆ ಬೇರೆ ಲೇಖಕರ ಉತ್ತಮ ಸಣ್ಣಕಥೆಗಳನ್ನು ಆಯ್ದು 'ಕಾಮನ ಬಿಲ್ಲು' ಎಂಬ ದೊಡ್ಡ ಕಥಾ ಸಂಪುಟವನ್ನು ಹೊರತಂದರು. ಈ ಸಂಪುಟ ಕನ್ನಡ ಸಣ್ಣಕತೆಗಳ ಬೆಳವಣಿಗೆಯಲ್ಲಿ ಒಂದು ಮೈಲಿಗಲ್ಲು ಎನ್ನಬಹುದು. ಮುಂದೆ ಮಾರ್ಕ್ಸಿಸಂನ ಪ್ರಭಾವದಿಂದ ಭಾರತೀಯ ಸಾಹಿತ್ಯ ಪ್ರಪಂಚದಲ್ಲಿ ಕಾಣಿಸಿಕೊಂಡ ಪ್ರಗತಿಶೀಲ ಚಳುವಳಿಯನ್ನು ಕನ್ನಡದಲ್ಲಿಯೂ ಆರಂಭಿಸುವ ವಿಚಾರ ಮೂಡಿದಾಗ ಅನಕೃ ಅದರ ನಿರ್ದೇಶನ ಸೂತ್ರಗಳನ್ನು ಹಿಡಿದರು. ಅವರ ಸಣ್ಣಕಥೆಗಳಲ್ಲಿ ಮುಕ್ಕಾಲು ಪಾಲು ಕಥೆಗಳು ಪ್ರಗತಿಶೀಲ ಸಾಹಿತ್ಯದ ಧ್ಯೇಯಧೋರಣೆಗಳನ್ನು ಪ್ರತಿಬಿಂಬಿಸುತ್ತವೆ. ಅವರಷ್ಟು ಪ್ರಮಾಣದಲ್ಲಿ, ಅಷ್ಟು ಸಮಗ್ರವಾಗಿ ದೀನರನ್ನೂ, ದಲಿತರನ್ನೂ, ಶೋಷಿತರನ್ನೂ, ವಸ್ತುವಾಗಿ ತಮ್ಮ ಕಥೆಗಳಿಗೆ ಆಯ್ಕೆ ಮಾಡಿಕೊಂಡವರು ಬಹಳ ವಿರಳ. ಮುಖ್ಯವಾದ ಮಾತೆಂದರೆ ಬರೆಹದ ಮೂಲಕ ಸಮಾಜವನ್ನು ಸುಧಾರಿಸಬೇಕು, ಅದನ್ನು ಪ್ರಗತಿಯ ಕಡೆಗೆ ಕೊಂಡೊಯ್ಯಬೇಕು ಎನ್ನುವುದು ಅವರ ಸಣ್ಣ ಕಥೆಗಳ ಉದ್ದೇಶವಿದ್ದಂತೆ ತೋರುತ್ತದೆ. ಅನ್ನದ ಕೂಗು, ಗಿರಿಜವ್ವನ ರೊಟ್ಟಿ, ಮಣ್ಣಿನ ಮಗ, ಇಂಥ ಶೀರ್ಷಿಕೆಗಳೇ ಅನಕೃ ಬರೆಹದ ಉದ್ದೇಶಗಳನ್ನು ಹೊರಗೆಡುಹುತ್ತವೆ. ಹೆಣ್ಣಿನ ಬಾಳಿನ ಘನತೆ ಗೌರವಗಳನ್ನು ಎತ್ತಿ ಹಿಡಿಯುವ ಕೆಲವು ಮನಕಲಕುವ ಕಥೆಗಳು, ಹಿಂದೂ ಮುಸ್ಲಿಮರ ನಡುವೆ ಸೌಹಾರ್ದ ಪ್ರಪಂಚವನ್ನು ಸೃಷ್ಟಿಸಲೆಳಸುವ ಕಥೆಗಳನ್ನೂ ಅನಕೃ ಬರೆದಿದ್ದಾರೆ. ಬೂಬಮ್ಮ, ಕರುಳಿನ ಕೂಗು, ಮೃತ್ಯುಶಾಂತಿ, ಅಗ್ನಿಕನ್ಯೆ ಇಂಥ ಕಥೆಗಳು.

ಸಾಮಾನ್ಯವಾಗಿ ಅನಕೃರವರ ಕಥೆ ಒಂದು ನಿರ್ದಿಷ್ಟ ವಿಚಾರವನ್ನು ಮೊದಲೇ ಇಟ್ಟುಕೊಂಡು ಅದರ ಉದ್ದೇಶ ಸಾಧನೆಗೆ ಎಂಬಂತೆ ಬೆಳೆಯುತ್ತದೆ. ಇದರಿಂದ ಆಗಲೇ ಸಿದ್ಧವಾದ ವಿಚಾರಕ್ಕೆ ಒಂದು ನಿದರ್ಶನವನ್ನು ಸಿದ್ಧಪಡಿಸುವ ಕೆಲಸ ಸಾಹಿತ್ಯಕ್ಕೆ ಬೀಳುತ್ತದೆ. ಇಂಥ ಕಥೆಗಳು ನಮ್ಮ ಜೀವನಾನುಭವ ಸೃಷ್ಟಿಸುವ ವಿನ್ಯಾಸಕ್ಕೆ ಅನುಗುಣವಾಗಿ ಹರಿಯುವ ಬದಲು ಮುಂಚೆಯೇ ರೂಪಿಸಿ ಸಿದ್ಧಮಾಡಿಕೊಂಡ ವಿಚಾರಗಳಿಂದ ನಿಯಂತ್ರಿತವಾಗಿ ಬಿಡುತ್ತವೆ. ಕಲಾಕೃತಿಗೆ ಯಾವ ವೈಚಾರಿಕ ಉದ್ದೇಶವೂ ಇರುವುದಿಲ್ಲವೆಂದಾಗಲೀ, ಇರಬಾರದೆಂದಾಗಲೀ ಈ ಮಾತಿನ ಅರ್ಥವಲ್ಲ. ಆದರೆ ಬರೆಹವೊಂದನ್ನು ಪೂರ್ವನಿಶ್ಚಿತ ವಿಚಾರಗಳು ಮಾತ್ರವೇ ನಿಯಂತ್ರಿಸದೆ ಬರೆಹಗಾರನ ಜೀವನಾನುಭವ, ಅದರಿಂದ ಉದ್ದೀಪನಗೊಳ್ಳುವ ಸೃಷ್ಟಿಶೀಲತೆ, ವಸ್ತುನಿಷ್ಠತೆಗಳು ರೂಪಿಸಬೇಕು. ಹೀಗಿದ್ದಾಗ ಬರೆಹ ಕಲಾತ್ಮಕವಾಗುವುದು ಮಾತ್ರವೇ ಅಲ್ಲದೆ ಬದುಕಿನ ಸೂಕ್ಷ್ಮತೆ, ಸತ್ಯತೆ, ನಿಗೂಢತೆಗಳನ್ನು ಹಿಡಿಯಲು ಶಕ್ತವಾಗುತ್ತದೆ, ನಿಜವಾದ ಅರ್ಥದಲ್ಲಿ ಸೃಜನಾತ್ಮಕವಾಗುತ್ತದೆ. ಅನಕೃರವರ ಸಣ್ಣಕಥೆಗಳಲ್ಲಿ ಎದ್ದು ಕಾಣುವ ಅಂಶವೆಂದರೆ ಕಥಾಕ್ಷೇತ್ರದಲ್ಲಿ ಅವರು ಸಾಧಿಸಿದ ವಸ್ತು ವಿಸ್ತಾರ. ನಮ್ಮ ಹಿರಿಯ ಕಥೆಗಾರರಾದ ಮಾಸ್ತಿಯವರು ಅನಕೃರವರ ಸಣ್ಣ ಕಥೆಗಳ ಬಗ್ಗೆ ಬರೆಯುತ್ತ ಹೇಳುವ ಮಾತಿನಲ್ಲಿ ಈ ಅಂಶ ವ್ಯಕ್ತವಾಗಿದೆ. "ಬಡವರ ಬಾಳಿನೊಂದಿಗೆ ಸಹಾನುಭೂತಿ, ಹಳ್ಳಿಯ ಜನರ ಮೇಲೆ ಪ್ರೀತಿ, ಎಲ್ಲಾ ಜೀವನವನ್ನೂ ಕುರಿತು ಪ್ರೇಮ, ಕಷ್ಟವನ್ನು ಕುರಿತು ವಿಚಾರ – ಇವೆಲ್ಲ ಅನಕೃ ಕಥೆಗಳಲ್ಲಿ ಬಂದು ಈ ಕ್ಷೇತ್ರದ ವ್ಯಾಪ್ತಿಯನ್ನು ವಿಸ್ತಾರಪಡಿಸುವುದರಲ್ಲಿ ಶ್ಲಾಘ್ಯವಾದ ಕೆಲಸವನ್ನು ಶ್ರೀಯುತರು ಮಾಡಿದ್ದಾರೆ."

ಅನಕೃ ಅವರ ಸಾಹಿತ್ಯಕ ವ್ಯಕ್ತಿತ್ವಕ್ಕೆ ಹಲವು ಆಯಾಮಗಳು ಇದ್ದುವಾದರೂ ಅವರು ಮುಖ್ಯವಾಗಿ ಕಾದಂಬರಿಕಾರರಾಗಿದ್ದರು. ಅವರ ಬರೆಹಗಳಲ್ಲಿ ಉತ್ತಮವಾದುವೆಲ್ಲ ಕಾದಂಬರಿಗಳ ಮೂಲಕವೇ ಹೆಚ್ಚಾಗಿ ಬಂದಿರುವುದು ಇದಕ್ಕೆ ಸಾಕ್ಷಿ. ನಾಡಿನ ಜನರಲ್ಲಿ ಕನ್ನಡ ಕೃತಿಗಳನ್ನು ಓದುವ ಅಭಿರುಚಿಯನ್ನು ಹುಟ್ಟಿಸುವ ದೊಡ್ಡ ಕೆಲಸವೊಂದನ್ನು ಅನಕೃ ಮಾಡಿದರಷ್ಟೆ. ಅದನ್ನು ಅವರು ಸಾಧಿಸಿದ್ದು ಕಾದಂಬರಿಗಳ ಮೂಲಕವೇ. ಅವರು ನೂರಕ್ಕಿಂತಲೂ ಹೆಚ್ಚು ಕಾದಂಬರಿಗಳನ್ನು ಬರೆದ ಮೊದಲ ಲೇಖಕರು. ಬರವಣಿಗೆಯ ಗುಣದಲ್ಲಿ ಎಷ್ಟೇ ಏರುಪೇರುಗಳಿದ್ದರೂ ವೈವಿಧ್ಯಪೂರ್ಣವಾದ ವಸ್ತುಲೋಕವೊಂದರ ಬಲವಿಲ್ಲದೆ ಇದು ಸಾಧ್ಯವಾಗುವಂಥದಲ್ಲ. ಅವರ ಬರವಣಿಗೆಯ ಸುಗಮತೆ ವಿಪುಲವಾಗಿ ಬರೆಯುವ ಅವಕಾಶವನ್ನು ಅವರಿಗೆ ನೀಡಿತೆಂದು ವಾದಿಸಿದರೂ ಮಧ್ಯಮವರ್ಗದ ವಿದ್ಯಾವಂತ ಸಮಾಜದ ಮನಸ್ಸನ್ನು ಸೆರೆಹಿಡಿಯಬಲ್ಲ ಅಸಾಧಾರಣ ಕೌಶಲ ಆ ಎಲ್ಲ ಬರೆಹಗಳಲ್ಲೂ ಇದ್ದಿತೆನ್ನುವುದನ್ನು ಮರೆಯುವಂತಿಲ್ಲ.

ಕೃಷ್ಣರಾಯರ ಮೊದಲ ಕಾದಂಬರಿ 'ಜೀವನಯಾತ್ರೆ'. ಇದನ್ನು ಅವರು ಬರೆದದ್ದು ೧೯೩೪ರಲ್ಲಿ; ಎದರೆ ಅವರ ಮೊದಲ ಕೃತಿ ಹೊರಬಂದ ಹತ್ತು ವರ್ಷಗಳ ಮೇಲೆ. ಆಗ ಅವರಿಗೆ ೨೬ ವರ್ಷ ವಯಸ್ಸು. ಈ ಚಿಕ್ಕ ವಯಸ್ಸಿನಲ್ಲಿ ಬರೆದ ಕಾದಂಬರಿಯಲ್ಲಿಯೇ ಅವರು ಮುಂದಿನ ಕೃತಿಗಳಲ್ಲಿ ನಿರ್ವಹಿಸಲಿದ್ದ ವಸ್ತುವಿನ ಅನೇಕ ಮುಖಗಳು ಹಣಿಕಿವೆ. ಅನಕೃ ಇದನ್ನು ಬರೆಯುವ ಮುನ್ನ ಅವರು ಪ್ರೇಮಾಯತನದಲ್ಲಿ ಪಂಡಿತ ತಾರಾನಾಥರನ್ನು ಕಂಡಿದ್ದರು. ತಾರಾನಾಥರು ಒಬ್ಬ ಕ್ರಾಂತಿಕಾರ ವ್ಯಕ್ತಿಯೆಂದೂ ಸಮಾಜ ಸುಧಾರಣೆಯ ಹರಿಕಾರರೆಂದೂ, ಪ್ರತಿಭಾಸಂಪನ್ನರೆಂದೂ ಹೆಸರಾಗಿದ್ದವರು. 'ಜೀವನಯಾತ್ರೆ'ಯ ವಸ್ತುವನ್ನು ಸೂಚಿಸಿದವರು ಅವರೇ ಎಂದು ಅನಕೃ ಹೇಳಿಕೊಂಡಿದ್ದಾರೆ. ಅದಕ್ಕೆ ಬರೆದ ದೀರ್ಘ ಮುನ್ನುಡಿಯಲ್ಲಿ ಪ್ರೇಮ, ವಿವಾಹ, ಧರ್ಮ, ಸ್ತ್ರೀಸಮಸ್ಯೆ ಮುಂತಾದ ವಿಷಯಗಳ ಬಗ್ಗೆ ಅನಕೃ ಸಾಕಷ್ಟು ಚರ್ಚಿಸಿದ್ದಾರೆ. ಮೊದಲ ಕಾದಂಬರಿಗೇ ಆರಿಸಿಕೊಂಡ ಈ ವಸ್ತು ಅವರ ಅಸಾಮಾನ್ಯ ಧೈರ್ಯವನ್ನು ತೋರಿಸುವಂಥದು. "ಇದು ಅನನುಭವಿ ಲೇಖನ ಕೃತಿಯೆಂದು ಒಮ್ಮೆಲೇ ಕಂಡು ಬಂದರೂ ಅನಕೃ ತಮ್ಮ ಜೀವನದುದ್ದಕ್ಕೂ ಎತ್ತಿಕೊಂಡ ಲೈಂಗಿಕತೆ, ವಿವಾಹ, ವೇಶ್ಯಾ ವೃತ್ತಿಗಳಂಥ ವಸ್ತುವಿನ ಅವಿರ್ಭಾವದಿಂದಾಗಿ ಮಹತ್ವವನ್ನು ಹೊಂದಿದೆ" ಎಂದು ಆಮೂರರು ಅಭಿಪ್ರಾಯ ಪಡುತ್ತಾರೆ.

ಅನಕೃ ತಮ್ಮ ಬರೆಹಕ್ಕೆ ಆರಿಸಿಕೊಂಡ ದಾರಿ ವಾಸ್ತವ ಮಾರ್ಗ. ಈ ಮಾರ್ಗದ ಕೃತಿಗಳು ಹಲವು ಆದರ್ಶಗಳನ್ನು ಮಂಡಿಸಲೆಳಸಿದ್ದು ನಿಜ. 'ಸಂಧ್ಯಾರಾಗ'ದ ಮೀನಾಕ್ಷಮ್ಮ, ಸಾವಿತ್ರಮ್ಮ, 'ಮಂಗಳ ಸೂತ್ರ' ಕಾದಂಬರಿಯ ಲಕ್ಷ್ಮಮ್ಮ, ನಾರಣಪ್ಪ, ರತ್ನ, 'ಕಣ್ಣೀರಿನ' ಗೌರಿ – ಇವು ಅಂಥ ಒಂದು ಆದರ್ಶಕ್ಕೆ ಬದ್ಧವಾಗಿ ಬೆಳೆದುನಿಂತ, ಭಾರತೀಯ ಸಂಸ್ಕೃತಿಯ ಸತ್ವವನ್ನು ಎತ್ತಿ ಹಿಡಿಯುವ ಪಾತ್ರಗಳು, ಅತಿ ಉದಾರಿಗಳಾಗಿ, ತ್ಯಾಗಜೀವಿಗಳಾಗಿ ಕಂಡರೂ ಇಂಥ ಜನ ನಮ್ಮ ಸುತ್ತಲ ಸಮಾಜದಲ್ಲಿ ಇದ್ದಾರೆ ಎನ್ನುವುದನ್ನು ನಿರಾಕರಿಸಲಾಗದು. ಹೀಗೆ ಅನಕೃ ವಾಸ್ತವದ ಹಳ್ಳ, ದಿನ್ನೆ ದೋಷ, ವಕ್ರತೆ ವಿಕೃತಿಗಳನ್ನು ಹೊರಹಾಕಿದಂತೆಯೇ ಅದರ ಗಡಿಯೊಳಗೇ ಕಾಣಸಿಗುವ ಉದಾತ್ತ ಗುಣಗಳ ಪಾತ್ರಗಳನ್ನು ಆಕರ್ಷಕವಾದ ನಿಲುವಿನಲ್ಲಿ ಕಡೆದರು ಎನ್ನುವುದನ್ನು ಒಪ್ಪಬೇಕಾಗುತ್ತದೆ.

ಸಂಧ್ಯಾರಾಗಕ್ಕಿಂತ ಮೊದಲೇ ಅನಕೃ ಜೀವನಯಾತ್ರೆ, ಉದಯರಾಗ ಎಂಬ ಎರಡು ಕಾದಂಬರಿಗಳನ್ನು ಬರೆದಿದ್ದರೂ ಅವರು ಶಕ್ತಿಯುತ ಕಾದಂಬರಿಕಾರರಾಗಿ, ಹೊರಹೊಮ್ಮಿದ್ದು ಸಂಧ್ಯಾರಾಗದಿಂದಲೇ. ಮಾಸ್ತಿಯವರ 'ಸುಬ್ಬಣ್ಣ' ಕೃತಿ ಹೇಗೆ ಒಬ್ಬ

ಸಂಗೀತ ಕಲಾವಿದನ ಕಥೆಯೋ ಹಾಗೆಯೇ ಸಂಧ್ಯಾರಾಗ ಕೂಡ. ಆದರೆ ಸುಬ್ಬಣ್ಣ ಒಂದು ನೀಳ್ಗತೆಯಾಗಿದ್ದರೆ ಸಂಧ್ಯಾರಾಗ ಅದಕ್ಕಿಂತ ಹೆಚ್ಚು ವಿಸ್ತೃತವಾದ ಒಂದು ಕಾದಂಬರಿ. ಈ ಕಾದಂಬರಿಯ ವಿಶೇಷತೆ ಅದರ ಸುಮುಖವಾದ ಬಂಧದಲ್ಲಿದೆ. ಇಲ್ಲಿಯ ಎಲ್ಲ ಘಟನೆಗಳೂ, ಪಾತ್ರಗಳೂ ಒಂದು ಕೇಂದ್ರ ಆಶಯಕ್ಕೆ ದುಡಿಯುತ್ತವೆ. ಅನಕೃರವರ ಹಲವು ಕಾದಂಬರಿಗಳಲ್ಲಿ ಬರುವ ಉಪಘಟನೆ, ಉಪಕಥೆಗಳು ಯಾವುವೂ ಇಲ್ಲಿ ಬರುವುದಿಲ್ಲ. ಹಾಗಾಗಿ ಯಾವ ಹೊರ ತಿರುವುಗಳಿಗೆ ಸಿಕ್ಕಿಕೊಳ್ಳದೆ ಕತೆ ತನ್ನ ಎಲ್ಲ ಸಾಮಗ್ರಿಯನ್ನೂ ಒಮ್ಮುಖವಾಗಿ ದುಡಿಸಿಕೊಂಡು ಲಗುಬಗೆಯಿಂದ ಧಾವಿಸುತ್ತದೆ. ಕೃಷ್ಣರಾಯರ ಆಕರ್ಷಕ ಶೈಲಿ, ಕಥನ ಕಲೆ ಇಲ್ಲಿ ರೋಚಕವಾದ ವಸ್ತುವಿನೊಂದಿಗೆ ಹಾಳತವಾಗಿ ಹೊಂದಿಕೊಂಡು ಒಂದು ಮನೋಹರವಾದ ಭಾವಗೀತೆಯಂತೆ ಸುಗಮವಾಗಿ ಹರಿದಿದೆ. ಕಥೆ ಕೊನೆಗೊಳ್ಳುತ್ತಿರುವಂತೆ ಲಕ್ಷ್ಮಣ ಕೊನೆಯುಸಿರೆಳೆದು ಓದುಗನ ಮನಸ್ಸು ಒಂದು ವಿಚಿತ್ರ ಆವೇಗಕ್ಕೆ ಸಿಕ್ಕರೂ ಅವನ ಜೀವನದ ಸಾಧನೆ ಸಾರ್ಥಕ ಎಂಬಂಥ ಮುಕ್ತಾಯವನ್ನು ಕಂಡದ್ದರಿಂದಾಗಿ ಆ ಆವೇಗ ಕಳವಳಗಳಿಂದ ಮುಕ್ತವಾಗುತ್ತದೆ. ಅನಕೃರವರ ಸಾಹಿತ್ಯಶಕ್ತಿ ಅತ್ಯಂತ ಸಾರ್ಥಕವಾಗಿ ಸೃಜನಾತ್ಮಕ ನೆಲೆಯಲ್ಲಿ ಕ್ರಿಯಾಶೀಲವಾಗಿರುವುದು ಈ ಕಾದಂಬರಿಯಲ್ಲಿಯೇ ಎಂದು ಅವರ ಎಲ್ಲ ಕಾದಂಬರಿಗಳನ್ನೂ ಓದಿದ ಯಾರಿಗಾದರೂ ಅನ್ನಿಸುತ್ತದೆ.

ಸಂಧ್ಯಾರಾಗ ಬರೆದ ನಂತರ ಅನಕೃ ಒಂದೇ ಸಮನೆ ಕಾದಂಬರಿಗಳನ್ನು ರಚಿಸುತ್ತ ನಡೆದು ಹಲವು ನಿರ್ದಿಷ್ಟ ಗುಣಗಳ ಒಂದು ಸಂಪ್ರದಾಯವನ್ನು ನಿರ್ಮಿಸಿದರು. ಕುರ್ತಕೋಟಿಯವರು ಹೇಳುವಂತೆ "ಈ ಸಂಪ್ರದಾಯದ ವ್ಯಾಪ್ತಿ ಬಹಳ ದೊಡ್ಡದಾಗಿದೆ. ಅಲ್ಲದೆ ಈ ಸಂಪ್ರದಾಯದ ಅತಿರೇಕ ಅನಕೃ ಅವರ ಬರವಣಿಗೆಯಲ್ಲಿನ ಒಳ್ಳೆಯ ಗುಣಗಳನ್ನು ಕೂಡ ಮರೆಸುವಂತೆ ಮಾಡಿದೆ. ಲೋಕ ಪ್ರಿಯತೆಯೊಂದೇ ಲೇಖಕನ ಗುಣಾವಗುಣಗಳ ಮಾನದಂಡವಾಗಿದ್ದರೆ ಅನಕೃ ಅವರಿಗೆ ನಿಶ್ಚಯವಾಗಿ ಅಗ್ರಸ್ಥಾನ ಸಲ್ಲುತ್ತದೆ. ಅವರ ಬರವಣಿಗೆಯ ಸುಗಮತೆ ಓದುಗರನ್ನು ಮಂತ್ರಮುಗ್ಧರನ್ನಾಗಿ ಮಾಡಿತು. ಆದರೆ ಅದೇ ಸುಗಮತೆ ಕಾದಂಬರಿಯ ಬರವಣಿಗೆಯ ಮೇಲೆ ದುಷ್ಪರಿಣಾಮವನ್ನು ಬೀರಿತು. ಭಾಷೆಯ ನುಣುಪು ಅದರ ಸತ್ವವನ್ನು ಹಾಳು ಮಾಡಿತು. ಸೈನಿಕರ ಸಮವಸ್ತ್ರದಂತೆ ಈ ಶೈಲಿ ಎಲ್ಲ ಕಾದಂಬರಿಗಳಿಗೂ ಹೊಂದಿಕೆಯಾಗುವ ಶೈಲಿಯಾಗಿ ಪರಿಣಮಿಸಿತು. ಈ ಪೇಟೆಂಟ್ ಶೈಲಿಯ ರಹಸ್ಯ ದೊರೆತ ಮೇಲೆ ಈ ಪರಂಪರೆಯ ಲೇಖಕರು ಸ್ವಂತ ಪ್ರತಿಭೆಯನ್ನು ಮಾರಿಕೊಂಡವರಂತೆ ಪ್ರಯತ್ನಶೀಲತೆಯನ್ನು ಕಳೆದುಕೊಂಡುಬಿಟ್ಟರು. ಎರಡನೆಯದಾಗಿ ಈ ಬಗೆಯ ಕಾದಂಬರಿಯ ರೂಪವಿನ್ಯಾಸವೂ ಬಹಳ ಸುಲಭವಾಯಿತು. ಇಷ್ಟು ಅನುಕೂಲವಾದ ರಾಜಮಾರ್ಗ ದೊರೆತ ಮೇಲೆ ಲೇಖಕರು

ಉಳಿದ ಪ್ರಯೋಗಗಳ ಹವ್ಯಾಸವನ್ನು ಬಿಟ್ಟುಬಿಟ್ಟರು. ಪ್ರಣಯ ಇಲ್ಲವೆ ಆದರ್ಶವಾದವನ್ನು ಜೀವನದ ವಿವಿಧ ಪರಿಸರದಲ್ಲಿ ಚಿತ್ರಿಸುವ ಕಾದಂಬರಿಗಳೇ ಹೆಚ್ಚಾಗಿರುವುದಕ್ಕೆ ಇದೇ ಕಾರಣವಾಗಿದೆ."

ಅನಕೃ ಬರೆದ ಕಾದಂಬರಿಗಳಲ್ಲಿ ನಗ್ನ ಸತ್ಯ, ಶನಿಸಂತಾನ, ಸಂಜೆಗತ್ತಲು, ಅಪರಂಜಿ – ಇವು ವೇಶ್ಯಾಸಮಸ್ಯೆಯನ್ನು ಕುರಿತವಾದರೆ ಸಾಹಿತ್ಯರತ್ನ, ಗಾಜಿನಮನೆ, ಕನ್ನಡಮ್ಮನ ಗುಡಿಯಲ್ಲಿ, ದೀಪಾರಾಧನೆ – ಸಾಹಿತ್ಯ ಜಗತ್ತಿನ ವಕ್ರತೆಗಳನ್ನು ಲೇವಡಿ ಮಾಡುತ್ತವೆ. ಆದರೆ ಈ ಬರೆಹಗಳಲ್ಲಿ ಸೂಕ್ಷ್ಮಚಿತ್ರಣಕ್ಕಿಂತ ಲೋಲುಪತೆಯಿಂದ ವಸ್ತುವನ್ನು ಬಳಸುವುದು, ಪಾತ್ರಗಳ ಬಾಯಿಯಲ್ಲಿ ದೊಡ್ಡದೊಡ್ಡ ವಿಷಯಗಳ ಬಗ್ಗೆ ಒಂದು ಭಾಷಣ ಮಾಡಿಸುವುದು, ತಮ್ಮ ಸುತ್ತಲಿನ ವ್ಯಕ್ತಿಗಳನ್ನೇ ಕೊಂಚ ವೇಷ ಬದಲಿಸಿ ತಂದು ಲೇವಡಿ ಮಾಡುವುದು ಇಂಥದೂ ನಡೆದಿದೆ. ಕಾದಂಬರಿಯನ್ನು ಒಂದು ಗಂಭೀರ ಕಲೆಯಾಗಿ ತೆಗೆದುಕೊಂಡು ಅದನ್ನು ಜೀವನಸತ್ಯಕ್ಕೆ ನಿಷ್ಠೆಯಿಂದ ನಡೆಸುತ್ತೇನೆ ಎಂದು ಹೊರಟವರು ಕೃತಿಗಳ ನಿರ್ವಹಣೆಯನ್ನು ಇಷ್ಟು ಲಘುರೀತಿಯಲ್ಲಿ ಮಾಡಲಾಗದು.

ಇದೇನೇ ಇದ್ದರೂ ಸುಮಾರು ನೂರ ಹತ್ತರಷ್ಟು ಕಾದಂಬರಿಗಳನ್ನೂ, ಹಲವು ಸಣ್ಣ ಕಥಾ ಸಂಗ್ರಹಗಳನ್ನೂ, ನಾಟಕಗಳನ್ನೂ ವೈಚಾರಿಕ ಗ್ರಂಥಗಳನ್ನೂ, ಸಂಪಾದಿತ ಕೃತಿಗಳನ್ನೂ ಪ್ರಕಟಿಸಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹುಲುಸಾದ ಬೆಳೆ ತೆಗೆದು ಜನರನ್ನು ಕನ್ನಡ ಕೃತಿಗಳ ಓದಿಗೆ ಹಚ್ಚಿದವರೆಂದು ಅನಕೃ ಎಂದೆಂದಿಗೂ ಸ್ಮರಣೀಯರಾಗಿರುತ್ತಾರೆ. ಅವರು ಆರಂಭಿಸಿದ ಪ್ರಗತಿಶೀಲ ಸಾಹಿತ್ಯ ಅವರೆಮರಿಗೇ ಕೊನೆಯುಸಿರೆಳೆವಂತೆ ಕಂಡರೂ ಮುಂದೆ ಅದು ಬಂಡಾಯ ಸಾಹಿತ್ಯದಲ್ಲಿ ತನ್ನ ಹಲವು ವಿಚಾರಗಳನ್ನು ಉಳಿಸಿಕೊಂಡಿತು ಎನ್ನಬಹುದು.

ಅನಕೃ ಅವರ ಕನ್ನಡ ಪ್ರೇಮ ಅಸಾಧಾರಣವಾದದ್ದು, ಅನನ್ಯವಾದದ್ದು. ಕನ್ನಡ ಜನ, ಭಾಷೆ, ಸಂಸ್ಕೃತಿಗಳ ಏಳಿಗೆಗಾಗಿ ಅವರು ನಡೆಸಿದ ಹೋರಾಟ ಅವಿಸ್ಮರಣೀಯವಾದದ್ದು. ಅದಕ್ಕಾಗಿ ಅವರು ದೊಡ್ಡ ಚಳುವಳಿ ಮಾಡಿದರು; ಒಂದು ಯುವಸೇನೆಯನ್ನೇ ಕಟ್ಟಿದರು. ಸಾಮಾನ್ಯ ಜನರಲ್ಲಿ ಕನ್ನಡ ಪ್ರೇಮವನ್ನು ಜಾಗೃತಗೊಳಿಸಿದರು. ಕನ್ನಡ ನಾಡು ನುಡಿಗೆ ಸಂಬಂಧಿಸಿದಂತೆ ಸರ್ಕಾರ ಕೂಡ ಸಾಕಷ್ಟು ಗಮನ ಕೊಡಲೇಬೇಕು ಎನ್ನುವಂಥ ಪರಿಸ್ಥಿತಿ ಇಂದು ನಿರ್ಮಾಣವಾಗಿದ್ದರೆ ಅದಕ್ಕೆ ಕಾರಣಪುರುಷ ಅ. ನ. ಕೃಷ್ಣರಾಯರೇ ಎನ್ನುವುದರಲ್ಲಿ ಎರಡು ಮಾತಿಲ್ಲ. ಅವರು ಕನ್ನಡದ ಒಬ್ಬ ಅಸಾಧಾರಣ ಸಾಹಿತಿ ಮಾತ್ರವಲ್ಲ, ಕನ್ನಡದ ವೀರಸೇನಾನಿಯೂ ಹೌದು.

ಸುದರ್ಶನ

ಹೂವ ಜೇನಿನ ಸವಿಗೆ ಕಡಲ ಮೊರೆತದ ಕರೆಗೆ
ದೇವ ದೇವನ ಪ್ರೀತಿ ವಾತ್ಸಲ್ಯ ಸುಧೆಗೆ
ಪ್ರೀತಿ ಕರುಳಿನ ಬಳ್ಳಿ
ಜೇಡ ಮಣ್ಣಿನ ಜೀವ
ಚಿಗಿತು ಚಿಲಿಪಿಲಿಗಾನ – ರಸಚೇತನ.
ಮರದ ಹೊದರಿನ ಗುಟುಕು ಬೆಚ್ಚಗಿನ ಚಿಕ್ಕೆಯಲಿ
ಶ್ರೀಗಂಧ ಚೆಂದದೀ ಸುದರ್ಶನ
ದೇಹ ವಸಂತವನೇ ಸರ್ವೆ ಮಾಡಿದ
ಬೆರಳು ಹಿಡಿದ ಗರಿಯದುವೆ
ಮೊಳಕೆ ಬೀರಿ–
ಹಾಡಿತ್ತು–ಕಂಪನ ಲಕ್ಷ ಮುತ್ತಿನ ಸಾಲು
ಕೂಗಿತೋ ಹಸುರಿಂದ ಕನ್ನಡದ ಕೊರಳು.
ಹಳೆ ಮನೆಯ ಮಾಡುಗಳು, ನೆರೆ ಹೊರೆಯ ಗೋಡೆಗಳು
ಎಲ್ಲ ಮರಗಳ ನೆರಳು, ಭೂತ ಸೂಡಿಗಳು,
ನವ್ಯತೆಯ ಜಾಡಲ್ಲಿ ತಿರುವುಮುರುವುಗಳೆಲ್ಲ, ಸೋಲುಗೆಲುವೆಲ್ಲ
ಬಂಣ ತಳೆದೆದ್ದು ಮೈಯ ಪುಟಗೊಟ್ಟು
ರಕ್ತ – ಮಾಂಸವು ಎಲ್ಲ ಶುದ್ಧವಾಗಿ
ನಾಗ ತಾವರೆ ಮಿಲನ ಸಹಜವಾಯ್ತು.
ಮಾತಿನೇಟನು ತಾಳಿ 'ನಗ್ನ ಸತ್ಯ'ದಿ ನಿಂತು
ಮೊಳಗಿತದೋ ಜಯಭೇರಿ – 'ಜೀವನವು ಕನ್ನಡ'!
ಹೆಣ್ಣು ಹೊನ್ನಿನ ಮರ್ಮ, ದೇಹ ದುಡಿಮೆಯ ಕರ್ಮ
ಕೊಳೆತ ಮಿದುಳಿನ ನಾತ ಎಲ್ಲ ನೋಡಿ
ಭಟ್ಟಿ ಇಳಿಸಿದನೋ ಇವನು ಕರ್ಮಯೋಗಿ
ಬಂದದ್ದ ಕಾರಿ ಕಂಡದ್ದ ಹೀರಿ ಗೇಣು ಅಳತೆಯಲಿ ತೂಗಿ ತೂಗಿ
ನೀಡಿದ್ದ ಇವನು–
'ಕನ್ನಡಮ್ಮನ ಗುಡಿ'ಯ 'ಸಂಜೆಗತ್ತಲ' ಕಳೆಯೆ

ಉರಿಸಿದನೊ ನೂರಾರು ಪಂಜುಗಳ ಪುಂಜ!
ಹಾಡಿದವು ಮೋಡಗಳು, ಕುಣಿದವೋ ತಾರೆಗಳು
ಸುರಿಯಿತೋ ಮಳೆಯದುವೆ ಶುಭವನ್ನು ಕೋರಿ
ಅ–ಅಸ್ಖಲಿತ ಪ್ರತಿಭಾವಂತ
ನ–ನಯವಿನಯ ಸಂಪನ್ನ
ಕೃ–ಕೃಪಾ ಕೃಪಾಣಧಾರಿ
ಧ್ವನಿಸಿತೋ ಕನ್ನಡದ ದಿವ್ಯ ತುತ್ತೂರಿ
ಮೂಲೆ ಮೂಲೆಗಳಿಗೆಲ್ಲ ಕಂಪು–ಕಸ್ತೂರಿ
ನುಡಿದಿದ್ದೇ ಶೈಲಿ
ಗೀಚಿದ್ದೇ ಕಾದಂಬರಿ.

– ಜಯಂತಕುಮಾರ ಕಾಯ್ಕಿಣಿ

ಎತ್ತರದಲ್ಲು ಬಾಗಿ ಹತ್ತಿರ ಬರುವ ಮಹತಿ
ವಿ. ಕೃ. ಗೋಕಾಕ್

ಕನ್ನಡಕ್ಕೆ ಮತ್ತೆ ಜ್ಞಾನಪೀಠ ಪ್ರಶಸ್ತಿ! ಅದೂ ಐದನೆಯ ಸಲ ! ಭಾರತದ ಬೇರೆ ಯಾವ ಭಾಷೆಗೂ ದಕ್ಕಿಲ್ಲದ ಗೌರವ ಕನ್ನಡಕ್ಕೆ. ನಾಲ್ಕು ವರ್ಷಗಳ ಹಿಂದೆ ಭರತಖಂಡದ ಅತ್ಯಂತ ಶ್ರೇಷ್ಠ ಲೇಖಕನಿಗೆಂದು ಸ್ಥಾಪಿಸಿದ ಕಬೀರ್ ಸಮ್ಮಾನ್ ಕೂಡ ಮೊದಲ ಸಲಕ್ಕೇ ಇನ್ನೊಬ್ಬ ಕನ್ನಡ ಕವಿ ಅಡಿಗರಿಗೆ ಬಂದಿತ್ತು. ಕನ್ನಡಿಗನನ್ನು ತಡೆಯುವವರು ಯಾರು? ವ್ಯಾಸ ಭಾಸ ಕಾಳಿದಾಸರೆಲ್ಲ ತನ್ನ ನೆಲದಲ್ಲಿ ಮತ್ತೊಮ್ಮೆ ಹುಟ್ಟಿ ಬಂದಿರುವಂತೆ ಅವನಿಗೆ ಅನ್ನಿಸಿದರೆ ಆಶ್ಚರ್ಯವೇನಿಲ್ಲ.

ಐದನೆಯ ಜ್ಞಾನಪೀಠವನ್ನು ಗೆದ್ದು ತಂದ ಕೀರ್ತಿ ಅಂತಾರಾಷ್ಟ್ರೀಯ ಖ್ಯಾತಿಯ ಕನ್ನಡಿಗ ವಿನಾಯಕ ಕೃಷ್ಣ ಗೋಕಾಕರದು. ಎಂಬತ್ತಮೂರನೆಯ ವಯಸ್ಸಿನಲ್ಲಿ ರಾಷ್ಟ್ರಕೀರ್ತಿಯ ಹೊಂಬಿಸಿಲಿಗೆ ಮೈಯೊಡ್ಡಿ ಕುಳಿತಿರುವ ಆ ಭೀಮಸದೃಶ ವ್ಯಕ್ತಿ ಸೃಜನಶೀಲರಷ್ಟೇ ಅಲ್ಲ, ಮಹಾ ಧೀಮಂತ ಕೂಡ. ದೇಶದಲ್ಲೇ ಅಗ್ರಗಣ್ಯ ಇಂಗ್ಲಿಷ್ ಪ್ರಾಧ್ಯಾಪಕರೆಂದು ಹೆಸರಾದ ಗೋಕಾಕ್ ಅಸಾಧಾರಣ ವಾಗ್ಮಿ, ಘನ ವಿದ್ವಾಂಸ; ಭಾರತದ ಹಲವು ಕಡೆ ಹಿರಿಯ ಸಾರಸ್ವತ ಪೀಠಗಳನ್ನು ಅಲಂಕರಿಸಿ ಕನ್ನಡಿಗರ ಮೇಧೆ ವಿದ್ವತ್ತುಗಳ ಬಗ್ಗೆ ಹೊರಗಿನ ವಿದ್ವಾಂಸರೂ ತಲೆದೂಗುವಂತೆ ಮಾಡಿದ ಪ್ರಜ್ಞಾವಂತ. ಜ್ಞಾನಪೀಠದ ಗೌರವಫಲಕ ಮತ್ತೊಮ್ಮೆ ಈ ನಾಡಿಗೆ ಬರುವಂತೆ ಮಾಡಿದ ಶ್ರೀ ವಿನಾಯಕರಿಗೆ ನಮ್ಮ ಕೃತಜ್ಞತೆಯ ನಮಸ್ಕಾರ.

ವಿನಾಯಕ ಕೃಷ್ಣ ಗೋಕಾಕರು ಕನ್ನಡದ ಅತ್ಯಂತ ಮಹಾತ್ವಾಕಾಂಕ್ಷೆಯ ಲೇಖಕರಲ್ಲಿ ಒಬ್ಬರು. ತಾನೊಬ್ಬ ಮಹಾಕವಿಯಾಗಬೇಕೆಂಬ ಹಂಬಲದಿಂದ ಏನೆಲ್ಲ ಪೂರ್ವಸಾಧನೆ ಮಾಡಿದ ಇಂಗ್ಲಿಷ್ ಕವಿ ಮಿಲ್ಟನ್ನನಂತೆ, ಕನ್ನಡದ ಇನ್ನೊಬ್ಬ ಕವಿ

ಪುಟ್ಟಪ್ಪನವರಂತೆ ಅವರ ಸಾಧಕ ಜೀವನ. ಬಾಳಿನ ಉಳಿದೆಲ್ಲ ಸಂಗತಿಗಳನ್ನು ತಮ್ಮ ಸಾರಸ್ವತ ಸಾಧನೆಗೆ ನಂತರದ್ದಾಗಿ ಕಂಡವರು ಇವರು. ಜೀವನದ ಬಹುಭಾಗವನ್ನು ಹೀಗೆ ಸರಸ್ವತೀ ಪಾದಗಳಿಗೆ ಧಾರೆ ಎರೆದರೆಂದೇ ಗೋಕಾಕರ ಬರೆಹ ಏಳು ಸಹಸ್ರ ಪುಟಗಳಿಗೂ ಮೀರಿಹರಿದಿದೆ; ಕಾವ್ಯ, ಕಾದಂಬರಿ ಕಾವ್ಯಮೀಮಾಂಸೆ, ಸಾಹಿತ್ಯ ವಿಮರ್ಶೆ, ಪ್ರವಾಸ ಸಾಹಿತ್ಯ, ಪ್ರಬಂಧ ಸಾಹಿತ್ಯ, ನಾಟಕ – ಹೀಗೆ ಸಾಹಿತ್ಯದ ಬಗೆ ಬಗೆ ವಲಯಗಳನ್ನು ಆವರಿಸಿ ಹಬ್ಬಿದೆ. ಇಷ್ಟೆಲ್ಲ ಬರೆಹದ ಉದ್ದಕ್ಕೂ ಅವರು ಪ್ರಯೋಗಶೀಲರಾಗಿಯೇ ಉಳಿದವರು; ನವೋದಯದ ಕಾವ್ಯ ಇನ್ನೂ ಎತ್ತರದ ಸೋಪಾನಗಳಿಗೆ ಹತ್ತುತ್ತಿರುವ ದಿನಗಳಲ್ಲೇ ಅದರಿಂದ ಆಚೆಹೋಗಿ ಹೊಸತನ್ನು ಸಾಧಿಸಬೇಕೆಂಬ ಹಂಬಲವನ್ನು ಪ್ರಕಟಿಸಿದವರು. ನವ್ಯಮಾರ್ಗದ ಮೂಲನಕ್ಷೆಯನ್ನು ಮೊದಲಿಗೆ ಶಾಸ್ತ್ರೀಯವಾಗಿ ಗ್ರಹಿಸಿ ವಿವೇಚಿಸಿದವರೂ ಅವರೇ. ಮಹಾಕಾವ್ಯಗಳ ಕಾಲ ಮುಗಿಯಿತೆಂದು ಎಲ್ಲರೂ ಭಾವಿಸಿರುವ ಈ ದಿನಗಳಲ್ಲಿ, ಪುಟ್ಟಪ್ಪನವರಂತೆ ಅಂಥ ಕಾವ್ಯಕ್ಕೆ ತೊಡಗಿ ಪೂರೈಸಿದ ವ್ಯಕ್ತಿ ವಿನಾಯಕರು. ಇದರ ಜೊತೆಗೆ ಅವರು ಶಾರದೆಯ ಸೆರಗು ಹಿಡಿದು ದೇಶ ವಿದೇಶ ತಿರುಗಿದ್ದಾರೆ; 'ಐದು ಖಂಡಗಳಲ್ಲಿ ಅಲೆದಾಡಿ' ಬಂದಿದ್ದಾರೆ; ಸಾವಿರಾರು ವಿದ್ಯಾರ್ಥಿಗಳಿಗೆ ಜ್ಞಾನದಾನ ಮಾಡಿ ಇಂದಿಗೂ ಅವರ ಹೃದಯಗಳಲ್ಲಿ ಹೆಮ್ಮೆ ಗೌರವ ಉಕ್ಕಿಸುವ ಪ್ರಾಧ್ಯಾಪಕರಾಗಿ ಉಳಿದಿದ್ದಾರೆ. ವಿನಾಯಕರ ಬಾಹ್ಯವ್ಯಕ್ತಿತ್ವದ ಎತ್ತರ ಅವರ ಅಂತರಂಗದ ಉನ್ನತಿಯನ್ನೂ ಬಿಂಬಿಸುವಂಥದು. ಅಷ್ಟು ಎತ್ತರವಾಗಿದ್ದೂ ಕಿರಿಯರ ಜೊತೆ ಸಲೀಸಾಗಿ ಬೆರೆಯಬಲ್ಲ ಸೌಜನ್ಯ ಘನತೆ ಅವರದ್ದು. ಹಾಗೆಂದೇ–

> **ಎತ್ತರದಲ್ಲು ಬಾಗಿ ಹತ್ತಿರ ಬರುವ ಮಹತಿ;**
> **ಸಂಕ್ರಾಂತಿ : ಕೈ ಕುಲುಕಿದಂತೆ ದ್ಯಾವಾ ಪೃಥಿವಿ.**

ಎಂಬ ಕಣವಿಯವರ ಸಾಲುಗಳು ಆ ವ್ಯಕ್ತಿತ್ವದ ಯಥಾರ್ಥ ವರ್ಣನೆಯಾಗಿದೆ.

ಜ್ಞಾನಪೀಠ ಪ್ರಶಸ್ತಿ ಗೋಕಾಕರಿಗೆ, ಅವರ ಎಂಬತ್ತೆರಡನೆಯ ಹುಟ್ಟು ಹಬ್ಬಕ್ಕೆ ದೇಶ ಹರಸಿ ನೀಡಿದ ಉಡುಗೊರೆಯೆಂಬಂತೆ ಆ ದಿನದ ಹತ್ತಿರದಲ್ಲೇ ದೊರೆತಿದೆ. ವಿನಾಯಕರು ಹುಟ್ಟಿದ್ದು ೧೯೦೯ನೆಯ ಆಗಸ್ಟ್ ಹತ್ತರಂದು, ಧಾರವಾಡ ಜಿಲ್ಲೆಯಲ್ಲಿ ಸವಣೂರಿನಲ್ಲಿ. ಅವರ ಅಜ್ಜ (ತಾಯಿಯ ತಂದೆ) ಪಾಂಡುರಂಗ ಜೋಯಿಸರು ಒಬ್ಬ 'ಮೇಸ್ತ್ರು'. ತಂದೆ ಕೃಷ್ಣರಾಯರು ವಕೀಲರು. ಪರೀಕ್ಷೆ ಪಾಸು ಮಾಡದೆಯೇ ವಕೀಲರಾಗಿ ಆ ವೃತ್ತಿಯಲ್ಲಿ ಹೆಸರು ಮಾಡಿದವರು; ಪಂತ್ ಮಹಾರಾಜ ಎಂಬ ಸಂತರ ಶಿಷ್ಯರು. ಆರ್ಥಿಕವಾಗಿ ಅಷ್ಟೇನೂ

ಉತ್ತಮವಾಗಿಲ್ಲದಿದ್ದರೂ ದೈವ ಶ್ರದ್ಧೆಯ ಸೌಭಾಗ್ಯದಲ್ಲಿ ಅದನ್ನೆಲ್ಲ ಲೆಕ್ಕಿಸದೆ ಬಾಳಿದ ಮನೆತನ ಅದು. ಕೃಷ್ಣರಾಯರ ಸತ್ಯನಿಷ್ಠೆ, ನಿಸ್ಪೃಹತೆ ಮಾತ್ರ ಊರಲ್ಲೆಲ್ಲ ಪ್ರಸಿದ್ಧವಾಗಿತ್ತು.

ಒಮ್ಮೆ ಹಳ್ಳಿಯ ಶ್ರೀಮಂತನೊಬ್ಬ ಯಾವುದೋ ಸೊಕ್ಕಿನಲ್ಲಿ ತನ್ನ ಬಡಪಾಯಿ ಆಳನ್ನು ಮೆಟ್ಟಿನಿಂದ ಥಳಿಸಿದ. ಕೃಷ್ಣರಾಯರು ಬಡವನ ಪರ ಹಿಡಿದು ಕೇಸು ಹೂಡಿದರು. ತಪ್ಪು ಕೋರ್ಟಿನಲ್ಲಿ ಸಿದ್ಧವಾಗುವಂತೆ ಕಂಡಾಗ ಶ್ರೀಮಂತ ಹೆದರಿಹೋದ. ಕೇಸನ್ನು ಬೀಳಿಸಲು ಸವಣೂರು ಸಾವುಕಾರನೊಬ್ಬನ ಮೂಲಕ ಕೃಷ್ಣರಾಯರಿಗೆ ಸಾವಿರ ರೂಪಾಯಿ 'ಸಂಭಾವನೆ' ಕಳಿಸಿದ. ಆ ಕಾಲಕ್ಕೆ ಸಾವಿರ ರೂಪಾಯಿ ಭಾರಿ ಮೊತ್ತವೆ. ಆದರೆ ಕೃಷ್ಣರಾಯರು ಮುಂದಿದ್ದ ಹಣವನ್ನು ತಿರಸ್ಕಾರದಿಂದ ತಳ್ಳಿಬಿಟ್ಟರು. ಮುಂದ ಶ್ರೀಮಂತ ಭಯದಿಂದ ಹಣ್ಣಾಗಿ ಪಶ್ಚಾತ್ತಾಪ ಪಡುವಂತಾದ ಮೇಲೆ ಅವನನ್ನು ಕರೆಸಿ ಸಾರ್ವಜನಿಕವಾಗಿ ಕ್ಷಮಾಯಾಚನೆ ಮಾಡಿಸಿದರು; ತಮಗೆ ಕೊಡಬಂದಿದ್ದ ಸಂಭಾವನೆಯಲ್ಲಿ ಅರ್ಧವನ್ನು ನೊಂದಿದ್ದ ಆಳಿಗೂ ಇನ್ನರ್ಧವನ್ನು ಆ ಗ್ರಾಮದ ಬಸವಣ್ಣ ಗುಡಿಯ ಜೀರ್ಣೋದ್ಧಾರಕ್ಕೂ ಕೊಡಿಸಿದರು!

ವಿನಾಯಕ ಇಂಥ ತಂದೆಯ ಮಗ. ಅಜ್ಜನೋ, ಮೊಮ್ಮಗನ ಸಾಹಿತ್ಯಾಭಿರುಚಿಗೆ ಆರಂಭದಿಂದಲೇ ನೀರೆರೆದವರು. ಬಾಲ್ಯದಲ್ಲೇ ಕಂಡ ಕಂಡ ಕಥೆ ಪುಸ್ತಕಗಳನ್ನು, ಸದ್ಬೋಧ ಚಂದ್ರಿಕೆ, ಗಳಗನಾಥರ ಕಾದಂಬರಿಗಳನ್ನು ಹುಡುಗ ತೀರದ ಹಸಿವಿನಿಂದ ಎಂಬಂತೆ ಓದುತ್ತಿದ್ದ. ಆರು – ಏಳನೆಯ ತರಗತಿಯಲ್ಲಿ ಇದ್ದಾಗಲೇ ಅವನಿಗೆ ಮಾತನ್ನು ಲಯಕ್ಕೆ ಹೊಂದಿಸುವ, ಪ್ರಾಸಕ್ಕೆ ಜೋಡಿಸುವ ಚಪಲ. ಬೇರೆ ಹುಡುಗರು ತಮ್ಮ ಪುಸ್ತಕದ ಮೇಲೆ ತೆಪ್ಪಗೆ ತಮ್ಮ ಹೆಸರು ಬರೆದರೆ, ಇವನು

It belongs to V. K. Gokak
Whoever takes it
Give it back

ಎಂದು ಪದ್ಯ ಹೊಸೆದು ಗೀಚುತ್ತಿದ್ದ! ಆರಂಭದಿಂದಲೇ ವ್ಯವಹಾರ ವಿರೋಧಿ! ಇಂಥ ಬೃಹಸ್ಪತಿ ಮುಂದೆ ಡಾಕ್ಟರೋ ಮಂತ್ರಿಯೋ ಆಗದೆ ವಿಶ್ವವಿದ್ಯಾಲಯದ ಕುಲಪತಿಯಾದದ್ದರಲ್ಲಿ ಆಶ್ಚರ್ಯವೇನಿದೆ?

ವಿನಾಯಕರು ಫಸ್ಟ್ ಕ್ಲಾಸಿನಲ್ಲಿ ಮೆಟ್ರಿಕ್ ಮುಗಿಸಿ ಕಾಲೇಜು ಓದಿಗಾಗಿ ಧಾರವಾಡಕ್ಕೆ ಬಂದರು. ಅವರ ಬಾಳಿನಲ್ಲಿ ಬದಲಾವಣೆಯ ಭಾರಿ ಗಾಳಿಯನ್ನೇ ಎಬ್ಬಿಸಿದ ಗಾರುಡಿಗ ಬೇಂದ್ರೆ ಅವರಿಗೆ ಗಂಟು ಬಿದ್ದಿದ್ದು ಇಲ್ಲಿಯೇ. ಶೆಲ್ಲಿ, ಎಇ,

ಟಾಗೋರ್, ಅರವಿಂದ ಮೊದಲಾದವರ ಬರೆಹದ ಗೀಳು ಬೇಂದ್ರೆಗೆ ಅಂಟಿತ್ತು, ತಮ್ಮ ಹತ್ತಿರ ಬಂದವರಿಗೆಲ್ಲ ಬೇಂದ್ರೆ ಆ ಗೀಳು ಹತ್ತಿಸುತ್ತಿದ್ದರು: ಸಾಹಿತ್ಯದ ಹುಚ್ಚಿಗೆ ಸಿಕ್ಕಿದ್ದ ಯುವಕರನ್ನೆಲ್ಲ ಬಲೆಬೀಸಿ ಗೆಳೆಯರ ಗುಂಪಿಗೆ ಎಳೆಯುತ್ತಿದ್ದರು. ಅರವಿಂದರ 'ಆರ್ಯ' ಪತ್ರಿಕೆ ತರಿಸಿ ಗೆಳೆಯರ ಗುಂಪಿಗೆ ಓದಿ ವ್ಯಾಖ್ಯಾನಿಸುತ್ತಿದ್ದರು. ಪಂತ್ ಮಹಾರಾಜರ ಪ್ರಭಾವ ವಲಯದಲ್ಲಿ ಬೆಳೆದ ಹುಡುಗ ವಿನಾಯಕನಿಗೆ ಆ ಆಧ್ಯಾತ್ಮಿಕ ವಿಚಾರವೆಲ್ಲ ತನ್ನ ಸ್ವಂತದ ಮಾತು, ತನಗಾಗಿಯೇ ಹೇಳಿದ್ದು ಎನಿಸುತ್ತಿತ್ತು. ಇಂಗ್ಲಿಷಿನಲ್ಲಿ ಬರೆಯುವ ವ್ಯಸನಕ್ಕೆ ಬಿದ್ದಿದ್ದ ವಿನಾಯಕರನ್ನು ಕನ್ನಡದ ಹಾದಿಗೆ ಹಚ್ಚಿದ್ದು ಕೂಡ ಬೇಂದ್ರೆಯೇ. ಇದೆಲ್ಲದರಿಂದಲೇ ಇರಬೇಕು. ವಿನಾಯಕರು ಬೇಂದ್ರೆಯವರನ್ನು ಬರಿದೆ ತಮ್ಮ ಸ್ನೇಹಿತರೆಂದು ಭಾವಿಸದೆ ಕಾವ್ಯಗುರು, ಮಾರ್ಗದರ್ಶಿ ಎಂದು ಸ್ವೀಕರಿಸಿದರು.

ಗೋಕಾಕರ ವಿದ್ಯಾರ್ಥಿಜೀವನ ಉದ್ದಕ್ಕೂ ಉಜ್ವಲವಾದದ್ದು. ಬಿ.ಎ.ನಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾದ ಅವರು ಎಂ.ಎ. ಪರೀಕ್ಷೆಗೆ ಕೂತಾಗ ತಾಯಿಗೆ ಖಾಯಿಲೆಯಾಗಿ ಪರಿಸ್ಥಿತಿ ತುಂಬ ಗಂಭೀರವಾಯಿತು. ಆಕೆಯ ಆಸೆಗೆ ಮಣಿದು ಗೋಕಾಕರು ಆಗಲೇ ಮದುವೆಯಾಗಬೇಕಾಯಿತು. ಇದೆಲ್ಲದರಿಂದ ಅಧ್ಯಯನಕ್ಕೆ ತೊಡಕಾಗಿ ಆ ಸಲ ಎಂ. ಎ. ಪರೀಕ್ಷೆ ತೆಗೆದುಕೊಳ್ಳಬಾರದೆಂದು ಅವರು ನಿಶ್ಚಯಿಸಿದರು. ಆದರೆ ಕಡೆಗೆ ತಂದೆಯ ಒತ್ತಾಯದಿಂದಾಗಿ ಪರೀಕ್ಷೆಗೆ ಕೂರಲೇಬೇಕಾಯಿತು. ಆದರೂ ಗೋಕಾಕರು ಪರೀಕ್ಷೆಯನ್ನು ಪಾಸು ಮಾಡಿದ್ದು ಮಾತ್ರ ಫಸ್ಟ್ ರ್‍ಯಾಂಕಿನಲ್ಲಿ!

ಕೂಡಲೇ ಅವರಿಗೆ ಪೂನಾದ ಪ್ರಸಿದ್ಧ ಫರ್ಗ್ಯುಸನ್ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ನೇಮಕವಾಯಿತು. ಗೋಕಾಕರಿಗೆ ಆಗ ಕೇವಲ ಇಪ್ಪತ್ತೊಂದು ವರ್ಷ ವಯಸ್ಸು! ಜೊತೆಗೆ ಕನ್ನಡಿಗರ ಪ್ರತಿಭೆಯನ್ನು ಸುಲಭವಾಗಿ ಒಪ್ಪಿಕೊಳ್ಳದ ಆಗಿನ ಮರಾಠೀ ವಾತಾವರಣದಲ್ಲಿ ಕೆಲಸ. ಆದರೂ ಅವರು ಕೆಲವೇ ದಿನಗಳಲ್ಲಿ ಅಸಾಮಾನ್ಯ ಅಧ್ಯಾಪಕರೆಂದು ಹೆಸರಾಗಿ ಹೋದರು. ಅವರ ಇಂಗ್ಲಿಷ್ ಉಪನ್ಯಾಸಗಳು ಎಷ್ಟು ಆಕರ್ಷಕವಾಗಿ ಇರುತ್ತಿದ್ದವೆಂದರೆ ಬೇರೆ ಕಾಲೇಜುಗಳ ವಿದ್ಯಾರ್ಥಿಗಳೂ ಅವರ ಉಪನ್ಯಾಸ ಕೇಳಲು ಮುತ್ತುತ್ತಿದ್ದರು. ಮುನ್ನೂರಕ್ಕೂ ಮೀರಿದ ವಿದ್ಯಾರ್ಥಿಸಭೆಗಳಿಗೆ ಗೋಕಾಕರು ಪಾಠಮಾಡಿದ್ದುಂಟು! ಅವರ ಉಪನ್ಯಾಸ ವೈಖರಿಗೆ ಮನಸೋತ ಪ್ರಸಿದ್ಧ ಮರಾಠಿ ಸಾಹಿತಿ (ಮುಂದೆ ಜ್ಞಾನಪೀಠ ವಿಜೇತ) ವಿ. ಎಸ್. ಖಾಂಡೇಕರರು ಒಮ್ಮೆ ಸಾರ್ವಜನಿಕ ಸಭೆಯಲ್ಲಿ ಗೋಕಾಕರನ್ನು ಪ್ರಶಂಸಿಸುತ್ತ ಹೇಳಿದರಂತೆ. "ನಾನು ಗೋಕಾಕಕ್ಕೆ ಹೋದಾಗ ಎರಡು ವಸ್ತುಗಳನ್ನು ಕಂಡಿದ್ದೆ. ಒಂದು ಗೋಕಾಕದ ಭೋರ್ಗರೆವ ಜಲಪಾತ, ಇನ್ನೊಂದು ಅಲ್ಲಿಯ

ಮನೋಹರವಾದ ಬಣ್ಣದ ಆಟಿಗೆಗಳು. ಗೋಕಾಕರ ಇಂಗ್ಲಿಷ್ ಉಪನ್ಯಾಸ ಭೋರ್ಗರೆವ ಜಲಪಾತದಂತಿದೆ; ಅವರ ಕನ್ನಡ ಭಾಷಣ ಬಣ್ಣದ ಆಟಿಗೆಗಳಂತಿವೆ!",

ಫರ್ಗ್ಯುಸನ್ ಕಾಲೇಜು ವಿಶೇಷ ಅಭ್ಯಾಸಕ್ಕೆಂದು ಗೋಕಾಕರನ್ನು ಆಕ್ಸ್‌ಫರ್ಡಿಗೆ ಕಳಿಸಿತು. ಅಲ್ಲಿ ಎರಡು ವರ್ಷಗಳ ಅಧ್ಯಯನ. ಪರೀಕ್ಷೆ ಬರೆದದ್ದಾಯಿತು. ವೈವಾ ಪರೀಕ್ಷೆ ಮಾತ್ರ ಉಳಿದಿತ್ತು. ಇದ್ದಕ್ಕಿದ್ದಂತೆ ಗೋಕಾಕರು ಕರುಳಬೇನೆಗೆ ಸಿಕ್ಕು ಆಸ್ಪತ್ರೆ ಸೇರಿ ಶಸ್ತ್ರಚಿಕಿತ್ಸೆಗೆ ಒಳಗಾದರು. ಸಾವು ಉಳಿವುಗಳ ನಡುವೆ ಅವರ ಪ್ರಾಣ ತೂಗುತ್ತಿದ್ದಾಗ ವೈವಾ ಪರೀಕ್ಷೆ! ಅದು ಆಸ್ಪತ್ರೆಯಲ್ಲಿಯೇ ನಡೆಯುವುದೆಂದಾಯಿತು. ಆದರೆ ಅವರಿಗೆ ಒಂದು ಆಶ್ಚರ್ಯ ಕಾದಿತ್ತು. ಗೋಕಾಕರ ಉತ್ತರ ಪತ್ರಿಕೆಗಳನ್ನು ಪರಿಶೀಲಿಸಿದ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ವಿದ್ಯಾರ್ಥಿ ಅತ್ಯುತ್ತಮವಾಗಿ ಬರೆದಿರುವುದರಿಂದ ಆತನಿಗೆ ವೈವಾ ಅನಗತ್ಯವೆಂದು ತಿಳಿಸಿ ಆತ ಪ್ರಥಮ ದರ್ಜೆಯಲ್ಲಿ ಪಾಸು ಮಾಡಿರುವುದಾಗಿ ಪ್ರಕಟಿಸಿತು. ಆಕ್ಸ್‌ಫರ್ಡ್‌ನಲ್ಲಿ ಇಂಗ್ಲಿಷ್ ಸಾಹಿತ್ಯ ಓದಿ ಹೀಗೆ ಫಸ್ಟ್‌ಕ್ಲಾಸ್ ಪಡೆದ ಮೊದಲ ಭಾರತೀಯ ವಿದ್ಯಾರ್ಥಿಯೆಂದರೆ ಗೋಕಾಕರೇ! ಇದು ಆ ದಿನಗಳಲ್ಲಿ ಎಂಥ ವಿಶೇಷ ಸಂಗತಿಯಾಗಿತ್ತೆಂದರೆ ಗೋಕಾಕರು ಸ್ವದೇಶಕ್ಕೆ ಮರಳಿ, ಧಾರವಾಡಕ್ಕೆ ಬಂದಾಗ ಅವರನ್ನು ಮನೆಗೆ ಕರೆದೊಯ್ಯಲು ಸ್ವತಃ ಸವಣೂರಿನ ನವಾಬ ಕಾರು ಸಹಿತ ಸ್ಟೇಷನ್ನಿಗೆ ಬಂದಿದ್ದ!

ಗೋಕಾಕರ ಈ ವಿದೇಶಯಾತ್ರೆಯಿಂದ ಕನ್ನಡ ಸಾಹಿತ್ಯಕ್ಕಾದ ಲಾಭವೆಂದರೆ 'ಸಮುದ್ರದಾಚೆಯಿಂದ' ಎಂಬ ಅವರ ದಿನಚರಿ ರೂಪದ ಪ್ರವಾಸಕೃತಿ ಮತ್ತು 'ಸಮುದ್ರ ಗೀತಗಳು' ಎಂಬ ಪ್ರಯೋಗಾತ್ಮಕ ಕವನ ಸಂಗ್ರಹ. ಈ ಎರಡೂ ಗೋಕಾಕರ ಬರೆಹಗಳಲ್ಲಿ ಅತ್ಯುತ್ತಮವಾದದ್ದರ ಗುಂಪಿಗೆ ಸೇರುತ್ತವೆ.

ಸ್ವಿಫ್ಟ್ ಒಬ್ಬ ಪ್ರಸಿದ್ಧ ಇಂಗ್ಲಿಷ್ ಲೇಖಕ. 'ಎ ಟೇಲ್ ಆಫ್ ಟಬ್' ಎಂಬ ತನ್ನ ಮೊದಲ ಕೃತಿಯನ್ನು ಅನೇಕ ವರ್ಷಗಳ ನಂತರ ಒಮ್ಮೆ ಓದಿ What a genius I was when I wrote that book ಎಂದು ಉದ್ಗಾರ ತೆಗೆದನಂತೆ. ಆ ಹೊತ್ತಿಗಾಗಲೇ ಅವನು ಇನ್ನೂ ದೊಡ್ಡ ಸಾಹಿತಿಯಾಗಿ ಬೆಳೆದಿದ್ದ. ಆದರೆ ಪ್ರಾಯದ ದಿನಗಳಲ್ಲಿನ ಉತ್ಸಾಹ, ಬೆರಗು, ಸಂಭ್ರಮ, ಭಾವತೀವ್ರತೆ ಬರೆಹಕ್ಕೆ ಕೊಡುವ ಬಣ್ಣವೇ ಬೇರೆ. ಮಾಗಿದ ಮನಸ್ಸು ಸೃಷ್ಟಿಸುವ ಫಲದ ರಸವಂತಿಕೆಯೇ ಬೇರೆ. ಎರಡಕ್ಕೂ ಅದರದ್ದೇ ರುಚಿಯಿದೆ. ಆದರೆ ಎರಡೂ ಭಿನ್ನ.

'ಸಮುದ್ರದಾಚೆಯಿಂದ' ಕೃತಿಯ ನಿರೂಪಣೆಯಲ್ಲಿ ಪ್ರಾಯದ ಕಾಂತಿ, ಲವಲವಿಕೆ, ಪ್ರಫುಲ್ಲತೆ ಇವೆ. "ಅಂದಿನ ಅನುಭವವನ್ನು ಅಂದಿಗೇನೇ ತಟ್ಟನೆ ಅಭಿವ್ಯಕ್ತಗೊಳಿಸಿದಾಗ ನಿರೂಪಿತವಾದ ಅಭಿಪ್ರಾಯದಲ್ಲಿ ಒಂದು ಚಿಗುರುಗೆಂಪು

ಇದೆ; ಮುಗಿಲಿನಿಂದ ನೆಲಕ್ಕೆ ಬೀಳಲಿರುವ ಮಳೆಹನಿಗಳ ಪಾವಿತ್ರ್ಯ ಇದೆ." ತನ್ನ ಸಂಸ್ಕೃತಿಗೆ ಪ್ರತಿ ಎನ್ನಬಹುದಾದ ಇನ್ನೊಂದು ಸಂಸ್ಕೃತಿಯನ್ನು ಒಬ್ಬ ಲೇಖಕ ಎದುರುಗೊಳ್ಳುವ ಬಗೆಯನ್ನು ಇಲ್ಲಿ ಕಾಣಬಹುದು. ಇಂಗ್ಲಿಷ್ ಜನರ ನಡವಳಿಕೆ, ವಿಚಾರ, ಸಂಸ್ಕೃತಿ ವಿಭಿನ್ನತೆ, ಆಕ್ಸ್‌ಫರ್ಡ್‌ನಲ್ಲಿ ನಡೆಯುತ್ತಿದ್ದ ಸಾಹಿತ್ಯಕ ಸಾಂಸ್ಕೃತಿಕ ಉತ್ಸವಗಳ ಬಗ್ಗೆ ನಿರೂಪಕನ ಪ್ರತಿಕ್ರಿಯೆ – ಇವೆಲ್ಲ ಇಲ್ಲಿ ರಸಭರಿತವಾಗಿ ಚಿತ್ರಿತವಾಗಿವೆ. ಗೋಕಾಕರ ಸಂಪರ್ಕಕ್ಕೆ ಬಂದ ಅನೇಕ ಜನರು ಕಥಾಪಾತ್ರಗಳಂತೆ ಇಲ್ಲಿ ಹಾದು ಹೋಗುತ್ತಾರೆ. ತುದಿತನಕ ಉಳಿಯುವವರು ಟರ್ನರ್, ಅವನ ಹೆಂಡತಿ ಮತ್ತು ಕಾಲೇಜು ಮಾತ್ರ. ತಮ್ಮ ಸ್ವಭಾವಕ್ಕೆ ಎಷ್ಟೂ ಸೇರದ ಸಂಗತಿಗಳ ಬಗ್ಗೆ ಕೂಡ ಗೋಕಾಕರು ಒಬ್ಬ ಸಾಕ್ಷೀ ವ್ಯಕ್ತಿಯೆಂಬಂತೆ ಬಣ್ಣಗೆಡದೆ ಮಾತಾಡುವ ರೀತಿ ಬೆರಗು ಕವಿಸುವಷ್ಟು ಪ್ರೌಢವಾಗಿದೆ. ಕೀಟ್ಸ್ ಮತ್ತು ಷೇಕ್ಸ್‌ಪಿಯರರ ಮನೆಯನ್ನು ನೋಡಿ ರೋಮಾಂಚಿತರಾಗಿ ಬರೆಯುವ ಭಾವೋದ್ದೀಪಕ ಬರೆಹ ಕವಿತೆಯೆಂಬಷ್ಟು ಸುಂದರವಾಗಿದೆ. ಗಂಡನನ್ನು ಬೈದುಕೊಂಡೇ ಅವನನ್ನು ಸಾಕುವ ಖಾನಾವಳಿಯ ಒಡತಿ ಶ್ರೀಮತಿ ಟರ್ನರ್, ಅವಳ ಉಡಾಳ ಗಂಡ, ಹೊಡೆಯಲು ಬಂದ ಹುಡುಗರಿಗೆ ಹಲ್ಲು ಮುರಿದು ಕಳಿಸಿದ ಅವಳ ಹೀರೋ ಮಗ, ಕೇಶಾಲಂಕಾರ ಸ್ಪರ್ಧೆಯಲ್ಲಿ ಗೆದ್ದು ಸ್ಥಳೀಯ ಪತ್ರಿಕೆಯಲ್ಲಿ ಚಿತ್ರ ಸಹಿತ ವರದಿಯಾದ ಮಗಳ ಬಗ್ಗೆ ಶ್ರೀಮತಿ ಟರ್ನರಳ ಹಿಡಿಸಲಾರದ ಹೆಮ್ಮೆ – ಇದನ್ನೆಲ್ಲ ಬರೆಯುವಾಗ ಪ್ರಕಟವಾಗುವ ಪ್ರೀತಿ ಮಿಶ್ರಿತ ಹಾಸ್ಯ ಈ ಬರೆಹವನ್ನು ಇಂದಿಗೂ ಬೆಚ್ಚಗಿಟ್ಟಿದೆ.

ಗೋಕಾಕರು ಇಂಗ್ಲೆಂಡಿಗೆ ಪ್ರಯಾಣ ಮಾಡಿದ್ದು ಒಂದು ಹಡಗಿನಲ್ಲಿ. ಹಲವು ದಿನಗಳೇ ಹಿಡಿದ ಈ ಪ್ರಯಾಣದಲ್ಲಿ ಸಮುದ್ರದ ಜೊತೆ ಅವರ ಬಾಂಧವ್ಯ ಗಾಢವಾಗಿ ಬೆಳೆದಿರಬೇಕು. ಆ ಅನುಭವ ಸೃಷ್ಟಿಸಿದ ಕವಿತೆಗಳೇ ಸಮುದ್ರ ಗೀತೆಗಳು.

ನಮ್ಮ ಹಳಗನ್ನಡದ ಕವಿಗಳು ಬೇಕಾದಷ್ಟು ಸಮುದ್ರ ವರ್ಣನೆ ಮಾಡಿದ್ದಾರೆ. ಆದರೆ ಅವೆಲ್ಲ ವೃತ್ತ ಕಂದಗಳ ಇಕ್ಕಟ್ಟುಗಳಲ್ಲಿ ಸಿಕ್ಕಿಬಿದ್ದಿವೆ. ಅಲ್ಲದೆ ಅದರ ಬಹುಭಾಗ ಕಾಣದ ವಸ್ತುವೊಂದರ ಕೃತಕ ವರ್ಣನೆಯೂ ಆಗಿದೆ. ಈ ಇಕ್ಕಟ್ಟು ಕೃತಕತೆಗಳಿಂದ ಸಮುದ್ರರಾಜನನ್ನು ಮೊದಲು ಮುಕ್ತಗೊಳಿಸಿದವರು ಗೋಕಾಕರೇ. 'ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು' ಎಂದು ಸಾರಿ ಗದ್ಯಗಂಧಿಯಾದ ಮುಕ್ತಛಂದದಲ್ಲಿ ಅವರು ಸಮುದ್ರ ವರ್ಣನೆಗೆ ಕೈಹಾಕಿದರು. ಸಮುದ್ರದ ವಿರಾಟ್ ಸ್ವರೂಪವನ್ನು ಮೊದಲ ಬಾರಿಗೆ ಕಂಡಾಗ ಉಂಟಾಗುವ ಭಯ ವಿಸ್ಮಯ ಸಂಭ್ರಮಗಳು ಈ ಗೀತೆಗಳಲ್ಲಿವೆ; ಕಡಲು ಹಗಲಲ್ಲಿ ಇರುಳಲ್ಲಿ, ಬೆಳಗಿನಲ್ಲಿ ಬೈಗಿನಲ್ಲಿ, ಕಗ್ಗತ್ತಲಲ್ಲಿ ಬೆಳುದಿಂಗಳಲ್ಲಿ ಬಗೆಬಗೆಯಾಗಿ ತನ್ನ ರೂಪ ತೋರುವ ರೀತಿ ಢಾಳಾಗಿ ಚಿತ್ರಿತವಾಗಿದೆ. ಬಹಳ ಶಕ್ತವಾಗಿ ಮೂಡುವ ವರ್ಣನೆಯೆಂದರೆ ಏಳುತ್ತ ಬೀಳುತ್ತ ಸಾಗುವ ದೈತ್ಯಾಕೃತಿಯ ಹಡಗಿನದು.

ಹೇಗೆ ಕಣ್ಣುಬಿಡುತಿದೆ ನೋಡು
ಒಕ್ಕಣ್ಣ ರಾಕ್ಷಸನಂತೆ
ಹೇಗೆ ಒದ್ದಾಡುತಿದೆ ನೋಡು
ಚಿಗರೆಯ ಮೆದ್ದ ಹೆಬ್ಬಾವಿನಂತೆ
ಮಿಕಿ ಮಿಕಿ ನೋಡುತಿದೆ ನೋಡು
ಇಲಿಯ ಗುದ್ದುಗಳಂಥ ದಿಟ್ಟಿಗಳಿಂದ.

ಈ ಸಾಲುಗಳಲ್ಲಿ ಕಾಣುವ ಶೈಲಿ ಪ್ರತಿಮೆ ಲಯಗಳೆಲ್ಲ ಆಗಿನ ದಿನಗಳ ಕನ್ನಡ ಕಾವ್ಯದ ಸಿದ್ಧ ನುಡಿಗಟ್ಟಿಗೆ ಹೊರತಾದಂಥವು. ಗೋಕಾಕರ ಪ್ರಯೋಗಶೀಲತೆಗೆ ಈ ಕೃತಿ ಒಂದು ಸ್ಪಷ್ಟ ನಿದರ್ಶನ.

ಇಂಗ್ಲೆಂಡಿನಿಂದ ಹಿಂದಿರುಗಿದ ಗೋಕಾಕರು ಸಾಂಗ್ಲಿಯ ವಿಲ್ಲಿಂಗ್‌ಡನ್ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಕಗೊಂಡರು. ಆಗ ಅವರಿಗೆ ಮೂವತ್ತು ವರುಷ! ನಾಲ್ಕು ವರ್ಷಗಳವರೆಗೆ ಆ ಕಾಲೇಜನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋದರು. ಆದರೆ ಆ ಸಂಸ್ಥೆಯ ಅಜೀವಸದಸ್ಯರ ಜಗಳ, ತಿಕ್ಕಾಟ, ಗುಂಪುಗಾರಿಕೆ, ರಾಜಕೀಯಗಳನ್ನು ಕಂಡು ಅವರ ಮನಸ್ಸು ರೋಸಿಹೋಗಿತ್ತು. ಒಂದು ಸರ್ವಸದಸ್ಯರ ಸಭೆ ನಡೆಯುತ್ತಿದ್ದಾಗ ಮೂಡಿದ ಕ್ಷುಬ್ಧ ವಾತಾವರಣವನ್ನು ಸಹಿಸಲಾರದೆ ಅವರು ಮುಂದಿದ್ದ ಅಜೆಂಡಾ ಪತ್ರದ ಕೊನೆಯ ಭಾಗವನ್ನೇ ಹರಿದು, ರಾಜೀನಾಮೆ ಬರೆದು ಬಿಸಾಡಿ ಹೊರಬಂದರು. ಇದಾದ ನಂತರ ಅವರು ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ, ಉಪಕುಲಪತಿಗಳಾಗಿ ಅನೇಕ ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ದುಡಿದರು.

೧೯೫೮ರಲ್ಲಿ ಬಳ್ಳಾರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ವಿನಾಯಕರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ಅವರ ಸಾಂಸ್ಕೃತಿಕ ಸೇವೆಯನ್ನು ಗುರುತಿಸಿ ಕೇಂದ್ರಸರ್ಕಾರ ಅವರಿಗೆ ಪದ್ಮಶ್ರೀ ಗೌರವ ನೀಡಿತು. ಸುಮಾರು ಇಪ್ಪತ್ತೈದು ವರ್ಷಗಳ ಅಂತರದಲ್ಲಿ ಗೋಕಾಕರು ಜಪಾನ್, ಬೆಲ್ಜಿಯಂ, ಅಮೆರಿಕ, ಪೂರ್ವ ಆಫ್ರಿಕಾ, ಗ್ರೀಸ್, ರೋಮ್‌ಗಳಿಗೆ ಮತ್ತು (ಮತ್ತೊಮ್ಮೆ) ಇಂಗ್ಲೆಂಡಿಗೆ ಸಾಹಿತ್ಯಕ ಸಾಂಸ್ಕೃತಿಕ ಚಟುವಟಿಕೆಗಳ ಸಂಬಂಧದಲ್ಲಿ ಹೋಗಿಬಂದರು. ಶಿಕ್ಷಣ ತಜ್ಞರಾಗಿ ಹಲವು ಹೆಸರಾದ ಸಂಸ್ಥೆಗಳ ಆಡಳಿತ ನಿರ್ವಹಿಸಿದ ಗೋಕಾಕರು ಪ್ರೌಢ ವಿದ್ಯಾಭ್ಯಾಸದಲ್ಲಿ ಕನ್ನಡಕ್ಕೆ ಇರಬೇಕಾದ ಸ್ಥಾನವನ್ನು ನಿರೂಪಿಸಿ ರಾಜ್ಯಸರ್ಕಾರಕ್ಕೆ ವರದಿ ನೀಡಿದರು. ಅದು ಗೋಕಾಕ್ ವರದಿಯೆಂದೇ ಪ್ರಸಿದ್ಧವಾಯಿತು. ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಆಯ್ಕೆಯಾದ ಗೋಕಾಕರು ಆ ಪೀಠವನ್ನು ಅಲಂಕರಿಸಿದ ಮೊದಲ ಕನ್ನಡಿಗರು.

ಗೋಕಾಕರಿಗೆ ಸಾಹಿತ್ಯದಷ್ಟೇ ತೀವ್ರವಾದ ಇನ್ನೊಂದು ಆಸಕ್ತಿಯೆಂದರೆ ಆಧ್ಯಾತ್ಮ. ಅವರ ಸಾಹಿತ್ಯದುದ್ದಕ್ಕೂ ಇದು ಅಂಚುಗಟ್ಟಿ ಬರುತ್ತದೆ. ಈ ಸೃಷ್ಟಿಯಲ್ಲಿನ ಪ್ರತಿಯೊಂದು ಘಟನೆ, ಸಂಗತಿಗಳೂ ಪೂರ್ವಯೋಜಿತವೆಂದೂ ದೈವನಿಯಾಮಕವೆಂದೂ ನಂಬುವ ತುದಿಯಲ್ಲಿ ಅವರು ನಿಲ್ಲುತ್ತಾರೆ. ಹೀಗಿದ್ದರೂ ಗೋಕಾಕರು ಈ ನೆಲವನ್ನಾಗಲೀ ಇಲ್ಲಿಯ ಬಾಳನ್ನಾಗಲೀ ಮನುಷ್ಯನ ಪೌರುಷವನ್ನಾಗಲೀ ಎಂದೂ ತಿರಸ್ಕರಿಸಿದವರಲ್ಲ. ತಮ್ಮ ಜೀವನವನ್ನು ಅವರು ನೆಲದಿಂದ ಆಕಾಶದೆತ್ತರಕ್ಕೆ ಕಟ್ಟಿಕೊಂಡದ್ದೇ ಇದಕ್ಕೆ ನಿದರ್ಶನ. ಸನಾತನಿಯಾದರೂ ಅವರು ಒಂದು ಧರ್ಮದ ಕಣ್ಣುಕಟ್ಟಿಗೆ ಸಿಕ್ಕು ಅದಕ್ಕೆ ಹೊರತಾದದ್ದಕ್ಕೆ ಕುರುಡಾದವರಲ್ಲ. 'ಬಾಳದೇಗುಲದಲ್ಲಿ' ಕವನ ಸಂಗ್ರಹದಲ್ಲಿ ತಂದೆ ಎಳೆಯನಿಗೆ ಹೇಳುವ ಮಾತು ಇದು:

ನಂಬದಿರು ಒಂದೆ ಧರ್ಮದ ಒಂದೆ ಮಾರ್ಗವನು
ಇಂಬುಗೊಡದಿರು ಯಾವುದೊಂದೆ ಶ್ರುತಿಗೆ
ತೆಕ್ಕೆ ಬೀಳಾಗಸಕೆ, ಎಲ್ಲ ದರ್ಶನಗಳಿಗೆ
ನೆಲವೆ ಒರೆಗಲ್ಲೆಂಬ ಶ್ರದ್ಧೆ ಬಿಡದೆ

ಹಾಗೆಯೇ, ಮನೆಗೆ ಬಂದ ಹೊಸಜೀವವನ್ನು ಸ್ವಾಗತಿಸುವ ತಂದೆಗೆ ಒಂದು ವಿಷಯ ಸ್ಪಷ್ಟವಾಗಿದೆ. ಯಾವುದೇ ಜೀವ ತನ್ನಷ್ಟಕ್ಕೆ ಸ್ವತಂತ್ರವಾದದ್ದು; ನಮ್ಮ ನಿಯಮ ರುಚಿ ನಂಬಿಕೆಗಳಿಂದ ಅದನ್ನು ಬಂಧಿಸಲಾಗದು. ಆ ಜೀವದ ಲೀಲೆಗೆ ನಮ್ಮ ಮನೆ ಒಂದು ಅಂಗಳ ಮಾತ್ರ ಎಂದು ಅವನ ನಂಬಿಕೆ. ಹಾಗೆಂದೇ ಮನೆಗೆ ಬಂದ ಮಗುವನ್ನು

ನಿನ್ನ ದೈವದ ಗಂಟ ನಿನ್ನೊಡನೆ ತಂದಿರುವೆ
ನಮ್ಮ ಮನೆಯಲ್ಲದನು ಬಿಚ್ಚಿ ನೋಡು
ಆಟಕೆಂದಿಳಿದಿಂದು ಧಾರುಣಿಗೆ ಬಂದಿರುವೆ
ನಮ್ಮಂಗಳದಿ ಮೊದಲಿನಾಟನಾಡು.

ಎಂದು ಸ್ವಾಗತಿಸುತ್ತಾನೆ.

೧೯೬೦ರಲ್ಲಿ 'ದ್ಯಾವಾ ಪೃಥಿವೀ' ಎಂಬ ಕಾವ್ಯಕೃತಿಗಾಗಿ ಗೋಕಾಕರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಲಾಯಿತು. ದ್ಯಾವಾ ಪೃಥಿವೀ ಒಂದು ಖಂಡಕಾವ್ಯ. ಭೂಮಿ ಆಕಾಶಗಳೇ ಇದರ ವಸ್ತು. ಇದರಲ್ಲಿ ನೀರದ ಮತ್ತು ಇಳಾಗೀತ ಎಂಬ ಎರಡು ಭಾಗಗಳಿದ್ದು ಒಂದೊಂದು ಭಾಗವೂ ಹತ್ತು 'ಎಸಳು' ಗಳಿಂದ ಕೂಡಿದೆ. ವಿನಾಯಕರ ಪಾಶ್ಚಾತ್ಯ ಸಾಹಿತ್ಯಾಧ್ಯಯನ, ಭಾರತೀಯ ಪುರಾಣ – ದರ್ಶನಗಳ ತಿಳುವಳಿಕೆ ಇಲ್ಲಿ ಹದವರಿತು ಬಳಕೆಯಾಗಿವೆ. ಹೊಸ ಬಗೆಯ ವಸ್ತು ಚಿಂತನೆಗಳಿರುವ ಈ ಕೃತಿಯಲ್ಲಿ ಅಲ್ಲಲ್ಲಿ ಆಕರ್ಷಕ ಚಿತ್ರಗಳು ಪ್ರತ್ಯಕ್ಷವಾಗುತ್ತವೆ:

ದುರ್ಗಾಮಾತೆಯ ವಾಹನದೊಲು ಮೆರೆದು
ಆಯಾಲನು ಕೊಡವಿ
ಮುನ್ನಡೆದಿದೆ ಪಂಚಾನನ ಮೇಘ
ಮರಿಗಳ ಮೈದಡವಿ.
ವೀಣಾಪಾಣಿಯು ಧ್ಯಾನದೊಳಿರಲು
ಅವಳ ಮೇಘಮಯೂರ
ಸೋಗೆ ಗರಿಗಳನು ಮುಗಿಲ ತುಂಬ ಹರವಿ
ನಡೆದಿದೆ – ದೂರ, ದೂರ!

'ತ್ರಿವಿಕ್ರಮರ ಆಕಾಶಗಂಗೆ' ಮತ್ತು 'ಇಂದಿಲ್ಲ ನಾಳೆ' ವಿನಾಯಕರು ಆಧುನಿಕ ಕನ್ನಡದಲ್ಲಿ ನಡೆಸಿದ ಹೊಸ ಚಂಪೂ ಪ್ರಯೋಗಗಳು. ಕಾವ್ಯ ಮತ್ತು ಗದ್ಯಗಳೆರಡನ್ನೂ ಬಳಸಿ ಬರೆದ ಕೃತಿ ಇದು. ಇಲ್ಲಿಯ ಗದ್ಯವೂ ಕಾವ್ಯಸತ್ವದಿಂದ ಕೂಡಿದ್ದು ಕಾವ್ಯಭಾಗದ ಜೊತೆ ಕೂಡಿಕೊಳ್ಳಲು ಅನುವಾಗುವ ರೀತಿಯಲ್ಲಿದೆ. 'ತ್ರಿವಿಕ್ರಮರ ಆಕಾಶಗಂಗೆ'ಯ ವಸ್ತುವೇ ಹೊಸ ರೀತಿಯದಾಗಿದ್ದು ಗೋಕಾಕರ ಪ್ರಯೋಗಶೀಲತೆಗೆ ಕುರುಹಾಗಿದೆ.

ಗೋಕಾಕರು 'ಸಮುದ್ರ ಗೀತಗಳು' ಕೃತಿಯನ್ನು ಹೊರತಂದಾಗಲೇ ಕನ್ನಡದಲ್ಲಿ ನವ್ಯಪ್ರಯೋಗ ಮೊದಲಾಯಿತು ಎಂದು ಭಾವಿಸುವವರಿದ್ದಾರೆ. ಗೋಕಾಕರಿಗೂ ನವ್ಯಕ್ಕೂ ಸಂಬಂಧವೇ ಇಲ್ಲ ಎನ್ನುವವರಿದ್ದಾರೆ. ವಾಸ್ತವವಾಗಿ ಇವೆರಡೂ ಅತಿರೇಕದ ವಾದಗಳು. ಗೋಕಾಕರು ನವ್ಯಕಾವ್ಯವನ್ನು ಕನ್ನಡದಲ್ಲಿ ತರಲು ಯತ್ನಮಾಡಿದ ಮೊದಲಿಗರು ಎನ್ನುವುದರಲ್ಲಿ ತಪ್ಪಿಲ್ಲ. ೧೯೫೦ರಲ್ಲಿ ನಡೆದ ಮುಂಬಯಿ ಸಾಹಿತ್ಯ ಸಮ್ಮೇಳನದ ಲೇಖಕ ಗೋಷ್ಠಿಯ ಅಧ್ಯಕ್ಷಪೀಠದಿಂದ ಅವರು ನವ್ಯಕಾವ್ಯದ ಬಗ್ಗೆ ಮೊದಲು ಪ್ರಸ್ತಾಪ ಮಾಡಿದ್ದಲ್ಲದೆ ಅದನ್ನು ಸಮರ್ಥಿಸಿ ಮಾತನಾಡಿದರು. ಅದರ ಸ್ವರೂಪದ ಶಾಸ್ತ್ರೀಯ ವಿವರಣೆಯನ್ನು ಮೊದಲು ನೀಡಿದವರು ಅವರೇ. ಮೊಟ್ಟಮೊದಲ ನವ್ಯಕವಿ ಗೋಪಾಲಕೃಷ್ಣ ಅಡಿಗರೇ ಎಂದು ಪ್ರತಿಪಾದಿಸುವ ಹಿರಿಯ ವಿಮರ್ಶಕರು ಕೂಡ, ಅದನ್ನು ಮೊದಲು ಪ್ರಸ್ತಾಪಿಸಿದ ಮತ್ತು ವೈಚಾರಿಕವಾಗಿ ಅದರ ಸ್ವರೂಪವನ್ನು ಗ್ರಹಿಸಲು ಯತ್ನಿಸಿದ ಗೌರವವನ್ನು ವಿನಾಯಕರಿಗೇ ಬಿಟ್ಟುಕೊಡುತ್ತಾರೆ.

ವಿನಾಯಕರು ವಿಮರ್ಶೆ ಮತ್ತು ಸಾಹಿತ್ಯ ಮೀಮಾಂಸೆಗಳ ಕ್ಷೇತ್ರಕ್ಕೂ ಬೆಲೆಬಾಳುವ ಕೊಡುಗೆ ಸಲ್ಲಿಸಿದ್ದಾರೆ. ಇಂದಿನ ಕನ್ನಡ ಕಾವ್ಯದ ಗೊತ್ತುಗುರಿಗಳು, ನವ್ಯತೆ ಹಾಗೂ ಕಾವ್ಯ ಜೀವನ, 'Bendre, the Poet and the seer', 'The Poetic Approach to Language', 'An Integral view of poetry' ಮೊದಲಾದವು ಆ ದಿಕ್ಕಿನಲ್ಲಿ ಅವರು ರಚಿಸಿದ ಕೆಲವು ಮುಖ್ಯ ಗ್ರಂಥಗಳು. 'ಜನನಾಯಕ', 'ವಿಮರ್ಶಕ ವೈದ್ಯ'ಗಳಂಥ ನಾಟಕಗಳನ್ನು ಬರೆದ ಅವರು ಸಮರಸವೇ ಜೀವನ ಎಂಬ ಸಾವಿರದ ಇನ್ನೂರು ಪುಟಗಳಿಗೆ ಮೀರಿದ

ಬೃಹತ್ ಕಾದಂಬರಿಯನ್ನೂ ರಚಿಸಿದ್ದಾರೆ. ಈ ಕಾದಂಬರಿಯ ಅಧಿಕಾರಿಯುತವಾದ, ನಿಷ್ಪಕ್ಷಪಾತವಾದ ವಿಮರ್ಶೆ ಕನ್ನಡದಲ್ಲಿ ಇನ್ನೂ ಬಂದಿಲ್ಲವೆಂದೇ ಹೇಳಬೇಕು.

ವಿನಾಯಕರ ಅತ್ಯಂತ ಮಹತ್ವಾಕಾಂಕ್ಷೆಯ ಕೃತಿ ಎಂದರೆ ೧೯೮೨ರಲ್ಲಿ ಪ್ರಕಟವಾದ 'ಭಾರತ ಸಿಂಧುರಶ್ಮಿ'. ಇದು ಹನ್ನೆರಡು ಕಾಂಡಗಳಲ್ಲಿ ಹರಡಿಕೊಂಡಿರುವ ಇಪ್ಪತ್ತನಾಲ್ಕು ಸಾವಿರ ಸಾಲುಗಳ ಒಂದು ಮಹಾಕಾವ್ಯ. ಏಳು ವರ್ಷಗಳ ದೀರ್ಘಾವಧಿಯಲ್ಲಿ ರೂಪುಗೊಂಡ ಈ ಕೃತಿ ಗಾತ್ರದಲ್ಲಿ ಬಹುಶಃ ಯಾವುದೇ ಆಧುನಿಕ ಕನ್ನಡ ಮಹಾಕಾವ್ಯಕ್ಕಿಂತ ದೊಡ್ಡದು. ಇತಿಹಾಸಪೂರ್ವ ಭಾರತದ ಸಂಕ್ರಮಣ ಜೀವನಾವಸ್ಥೆಯನ್ನು ಸವಿವರವಾಗಿ ಕಲ್ಪಿಸಿಕೊಡುವುದು ಮತ್ತು ಸುದಾಸನಂಥ ಚಕ್ರವರ್ತಿಯ ಪ್ರಯತ್ನದಿಂದಾಗಿ ಭರತಖಂಡ ಹೇಗೆ ಒಂದು ರಾಷ್ಟ್ರವಾಗಿ ರೂಪುಗೊಂಡು ಭಾರತವಾಯಿತೆಂಬುದನ್ನು ನಿರೂಪಿಸುವುದು ಇದರ ಗುರಿ. ವೇದ ಉಪನಿಷತ್ತು, ಸ್ಮೃತಿ, ಪುರಾಣ, ಮಹಾಕಾವ್ಯಗಳಲ್ಲಿ ಉಕ್ತರಾಗಿರುವ ಅನೇಕ ಜನ ಋಷಿಗಳು, ಜಿಜ್ಞಾಸುಗಳು, ರಾಜರುಗಳನ್ನು ಮತ್ತು ಅವರಿಗೆ ಸಂಬಂಧಿಸಿದ ಕಥೆಗಳನ್ನು ಈ ಕಾವ್ಯದ ಕಥಾನಕಕ್ಕೆ ಮೂಲ ಸಾಮಗ್ರಿಯಾಗಿ ಬಳಸಲಾಗಿದೆ. ಪುರಾಣಸ್ಥ ಸಂಗತಿಗಳ ಕಲ್ಪಕತೆ ಹಾಗೂ ಪುರಾಣದಲ್ಲಿ ತಲೆಮರೆಸಿಕೊಂಡು ಜೀವಿಸುತ್ತಿರಬಹುದಾದ ಇತಿಹಾಸದ ವಾಸ್ತವತೆ ಎರಡೂ ಮೇಳಗೊಂಡಿರುವ ಈ ವಸ್ತು ಮಹಾಕಾವ್ಯ ಮೈಪಡೆಯಲೆಳಸುವ ಅದ್ಭುತ ಜಗತ್ತಿಗೆ ಹೇಳಿಮಾಡಿಸಿದ ವಸ್ತುವಾಗಿದೆ. ರಾಮಾಯಣ ಮಹಾಭಾರತಗಳ ನಂತರ ಬಂದ ಮಹಾಕಾವ್ಯಗಳೆಲ್ಲ ತಿರುತಿರುಗಿ ಅವುಗಳಿಂದಲೇ ತಮ್ಮ ವಸ್ತುವನ್ನು ಪಡೆದುಕೊಂಡಿವೆ. ಹಾಗಲ್ಲದೆ ಸ್ವತಂತ್ರವೂ ಸಂಕೀರ್ಣವೂ ರಾಷ್ಟ್ರೀಯ ವ್ಯಾಪಕತೆಯುಳ್ಳದ್ದೂ ಆದ ಹೊಸ ಕಥಾನಕವೊಂದು ಮಹಾಕಾವ್ಯಕ್ಕೆ ವಸ್ತುವಾಗುತ್ತಿರುವುದು ಇದೇ ಮೊದಲು. ಈ ದೃಷ್ಟಿಯಿಂದ ಭಾರತ ಸಿಂಧುರಶ್ಮಿ ಒಂದು ಹೊಸ ವಿಕ್ರಮ ಸ್ಥಾಪಿಸಿದೆ ಎನ್ನಬಹುದು.

ಆರ್ಯರು ಮತ್ತು ದ್ರಾವಿಡರ ನಡುವಿನ ಘರ್ಷಣೆ ಇನ್ನೂ ಕೊನೆಗೊಂಡಿರದ, ಭರತಖಂಡದ ಅಖಂಡ ಕಲ್ಪನೆ ಇನ್ನೂ ರೂಪು ಪಡೆದಿರದ ಕಾಲದ ಜೀವನ ಈ ಕಾವ್ಯದ ವಸ್ತು. ವಿಶ್ವಾಮಿತ್ರ ಈ ಕಾವ್ಯದ ಕೇಂದ್ರ ಪಾತ್ರ, ಸಾಹಸ ಪೂರ್ಣವಾದ ಅವನ ಬದುಕಿಗೆ ಹತ್ತಿಕೊಂಡಂತೆ ಬರುವ ಗಾಧಿ, ಉರ್ವೀದೇವಿ, ಸಾಂಕೃತಿ, ಜಮದಗ್ನಿ, ತ್ರಿಶಂಕು, ಸುದಾಸ, ವಸಿಷ್ಠ, ವಾಮದೇವ, ಶುನಶ್ಯೇಫ ಇಂಥ ಹಲವು ಪಾತ್ರಗಳೇ ಅಲ್ಲದೆ ಆ ಕಾಲದ ವಾತಾವರಣವನ್ನು ಸಂಭಾವ್ಯವಾಗಿ ಮತ್ತೆ ಸೃಷ್ಟಿಸಿಕೊಡುವ ರೌಹಿಣ, ಹಿರಣ್ಯಕೇಶ, ಕಿರ್ಮೀರ, ವೃತ್ರ, ಫಣಿ, ಆಭೀರ ಇಂಥ ನೂರಾರು ಇತರ ಪಾತ್ರಗಳ ಒಂದು ವೈಭವಪೂರ್ಣ ಮೆರವಣಿಗೆಯೇ ಈ

ಕಾವ್ಯದಲ್ಲಿ ನಡೆದಿದೆ. ಆರ್ಯ ಮತ್ತು ದಸ್ಯು ಕುಲಗಳ ಮಿಶ್ರರಕ್ತದಿಂದ ಬಂದ ಸುದಾಸನ ನೇತೃತ್ವದಲ್ಲಿ ಸಪ್ತ ಸಿಂಧೂದೇಶ, ದಸ್ಯುಖಂಡ ಮತ್ತು ದಕ್ಷಿಣಾಪಥ – ಇವೆಲ್ಲ ಸಮ್ಮಿಲನಗೊಂಡು ಈ ದೇಶ ಭಾರತ ಎಂದು ಹೆಸರು ಪಡೆಯುವುದೂ ಇಲ್ಲಿ ಕಥನಗೊಂಡಿದೆ. ಚಕ್ರವರ್ತಿಯಾಗಿ ಸುದಾಸನ ಮತ್ತು ಮಹರ್ಷಿಯಾಗಿ ವಿಶ್ವಾಮಿತ್ರನ ಜೀವನ ಇಲ್ಲಿ ಢಾಳಾಗಿ ಚಿತ್ರಿತವಾಗಿವೆ. ಈ ಇಬ್ಬರೂ ಕುಲದ, ವರ್ಣದ ಗಡಿ ದಾಟಿ ಬೆಳೆದವರಾಗಿರುವುದು ಮತ್ತು ಅವರ ಪ್ರಯತ್ನದಲ್ಲಿ ಎರಡು ಭಿನ್ನ ಜನಾಂಗಗಳು ಸಮ್ಮಿಲನಗೊಳ್ಳುವುದು ಗಮನಿಸಬೇಕಾದ ಅಂಶ. ವಸಿಷ್ಠಾಶ್ರಮದಲ್ಲಿ ಪಡೆದ ಅನುಭವದ ಫಲವಾಗಿ ರಾಜ್ಯತ್ಯಾಗ ಮಾಡಿ ಋಷಿ ಜೀವನಕ್ಕೆ ಕುರಿಯುವುದು. ದಾಶರಾಜ್ಞಯುದ್ಧದಲ್ಲಿ ಗೆಲ್ಲಲು ಸುದಾಸನಿಗೆ ಬೆಂಬಲ ನೀಡುವುದು. ತ್ರಿಶಂಕುವನ್ನು ಸಜೀವ ಸ್ವರ್ಗಕ್ಕೆ ಏರಿಸುವುದು ವೃತ್ರ ಹೂಡುವ ಕಠಿಣ ಪರೀಕ್ಷೆಗಳಲ್ಲಿ ಎಡವಿ ಬೀಳುತ್ತಲೇ ಗೆಲ್ಲುವುದು, ಶುನಶ್ಯೇಫನನ್ನು ರಕ್ಷಿಸುವುದು – ಇಂಥ ಸಾಹಸಗಳ ಮೂಲಕ ಸ್ಫುಟವಾಗಿ ಮೂಡುವ ವಿಶ್ವಾಮಿತ್ರನ ಪಾತ್ರ ತುಂಬ ಮಾನುಷವಾಗಿರುತ್ತಲೇ ಪರಿಪೂರ್ಣತೆಯತ್ತ ತುಡಿಯುವ ರೀತಿ ಪರಿಣಾಮಕಾರಿಯಾಗಿ ಚಿತ್ರಿತವಾಗಿದೆ.

ಋಗ್ವೇದ ಈ ಕಾವ್ಯಕ್ಕೆ ವಸ್ತುವನ್ನೊದಗಿಸಿರುವ ಪ್ರಮುಖ ಆಕರ. ಅಲ್ಲಿ ಬೀಜರೂಪವಾಗಿ ದೊರೆತ ಸಂಗತಿಗಳನ್ನು ಬಿತ್ತಿ ಬೆಳೆಸಿದ ಫಲಭರಿತ ನೋಟ ಈ ಕಾವ್ಯ. ಋಗ್ವೇದದಲ್ಲಿನ ೨೮ ಪಂಕ್ತಿಗಳ ಯಮ ಯಮೀ ಸಂವಾದ ಇಲ್ಲಿ ೧೩೦ ಸಾಲುಗಳ ಸುಂದರ ಘಟನೆಯಾಗಿ ಅರಳುತ್ತದೆ. ಐದಾರು ಸಾಲುಗಳಲ್ಲಿರುವ ಭುಜ್ಯುವಿನ ಕಥೆ ೨೬ ಪುಟಗಳ ದೀರ್ಘಕಥೆಯಾಗುತ್ತದೆ. ವಿಶ್ವಾಮಿತ್ರ ಭಿನ್ನ ಸಂದರ್ಭಗಳಲ್ಲಿ ಸ್ಫೂರ್ತಿಗೊಂಡು ರಚಿಸುವ ಸೂಕ್ತಗಳು ಋಗ್ವೇದದಿಂದಲೇ ತೆಗೆದುಕೊಂಡವಾಗಿವೆ.

ಅರವಿಂದರ 'ಸಾವಿತ್ರಿ' ಮಹಾಕಾವ್ಯಕ್ಕೂ ಈ ಕೃತಿ ವಿಶೇಷವಾಗಿ ಋಣಿಯಾಗಿದೆ. ಸಾವಿತ್ರಿಯ ತಂದೆಯಾದ ಅಶ್ವಪತಿಯ ಅನುಭವವನ್ನು ಇಲ್ಲಿನ ಪುಲಹ, ದಕ್ಷಬ್ರಹ್ಮ, ನಾರದರ ಅನುಭವ ಕಥನದಲ್ಲಿ ಬಳಸಲಾಗಿದೆ. ಅರವಿಂದರು ನೀಡುವ Super Mind ನ ವಿವರಣೆ ಮತ್ತು ಅನ್ನಮನ, ಪ್ರಾಣಮನ, ಬುದ್ಧಿಮನ ಮೊದಲಾದವುಗಳ ನಿರೂಪಣೆ ಇಲ್ಲಿ ಧಾರಾಳವಾಗಿ ಬಳಕೆಯಾಗಿದೆ. ಭಾರತ ಸಿಂಧುರಶ್ಮಿ ಎಂಬ ಶೀರ್ಷಿಕೆಯೇ ಅರವಿಂದರ ಒಂದು ವಿವರಣೆಯನ್ನು ಆಧರಿಸಿದೆ. ವೇದಗಳಲ್ಲಿ ವಿಶೇಷವಾಗಿ ಪ್ರಸ್ತಾಪಿತವಾಗುವ ಸಪ್ತರಶ್ಮಿಗಳನ್ನು ಅರವಿಂದರು ಸಪ್ತ ಗೋವುಗಳೆಂದು ವಿವರಿಸುತ್ತಾರೆ. ಈ ಏಳು ಗೋವುಗಳು ಏಳು ನದಿಗಳ ನೀರನ್ನು ಕುಡಿಯದೆ ಪೂರ್ಣತೆಯೆಂಬುದಿಲ್ಲ. ಎಂದರೆ ಪ್ರಜ್ಞೆ ಎನ್ನುವುದು ಕೇವಲ

ಗ್ರಹಿಕೆಯಾಗದೆ ಆಗುವಿಕೆಯಾಗಬೇಕು. ಏನನ್ನಾದರೂ ತಿಳಿಯುವುದೆಂದರೆ ಅದನ್ನು ಅನುಭವವಾಗಿ ಪಡೆಯುವುದು. ಈ ಏಳು ಪ್ರಜ್ಞಾಸ್ಥಿತಿಗಳನ್ನು, ಏಳು ವಿಶ್ವಗಳನ್ನು ಅರವಿಂದರು ವಿವರಿಸುತ್ತಾರೆ. ಆ ವಿಚಾರವೇ ಈ ಕೃತಿಯ ದರ್ಶನ ಭಿತ್ತಿಯಾಗಿದೆ.

ಪಾಶ್ಚಾತ್ಯ ಕೃತಿಗಳಿಂದಲೂ ಗೋಕಾಕರು ಸಾಕಷ್ಟು ಸಹಾಯ ಪಡೆದಿದ್ದಾರೆ. ಇರುವೆಗಳ ಕಾಳಗದ ಭಾಗವನ್ನು ಚಿತ್ರಿಸುವಲ್ಲಿ 'ಥೋರೋ'ನ 'ದಿ ವಾಲ್ಡನ್' ಕೃತಿ ಅವರಿಗೆ ಸಾಮಗ್ರಿಯೊದಗಿಸಿದರೆ 'ಏನ್ಷಂಟ್ ಮ್ಯಾರಿನರ್' ಮತ್ತು 'ದಿ ಓಲ್ಡ್ ಮ್ಯಾನ್ ಅಂಡ್ ದಿ ಸೀ' ಕೃತಿಗಳು ಭುಜ್ಯುವಿನ ಸಮುದ್ರಯಾನದ ದೀರ್ಘ ವರ್ಣನೆಯ ಮೇಲೆ ಪ್ರಭಾವ ಬೀರಿವೆ. ಶ್ಯೇನಪಕ್ಷಿಯು 'ಏನ್ಷಂಟ್ ಮ್ಯಾರಿನರ್' ಕೃತಿಯ ಕಡಲ ಹಕ್ಕಿಯನ್ನು ನೆನಪಿಸುತ್ತದೆ.

ಗೋಕಾಕರು ಈ ಕಾವ್ಯಕ್ಕೆ ಹೊರಗಿನಿಂದ ಪಡೆದಿರುವ ವಸ್ತು ಮೂರನೆಯ ಒಂದು ಭಾಗದಷ್ಟು. ಉಳಿದದ್ದು ಅದನ್ನು ಆಧರಿಸಿದ, ಔಚಿತ್ಯವರಿತ ಕಲ್ಪನೆ. ಆ ಬಗ್ಗೆ ಕವಿಯೇ ಹೀಗೆ ಹೇಳುತ್ತಾರೆ.

ಅಲ್ಲ ಬರಿ ಪ್ರತಿಸರ್ಗ ನಿಸರ್ಗದಂತೆ ನವೀನ.

ಅಲ್ಲಲ್ಲಿ ಚೆಲ್ಲಿರುವ ಕಲ್ಲುಮಣ್ಣನು ತಂದು
ಮೂರು ಪಾಲಿರದ ಮಳಲನು ನನ್ನ ಕಲ್ಪಕತೆ
ಸಲ್ಲಿಸಲು, ಸ್ವಂತದನುಭವದ ನೀರನು ಬೆರಸಿ,
ಒಗೆಯುತ ಕಥಾಪಾತ್ರದಲ್ಲಿ ವಿವೇಕದ ಸುಣ್ಣ
ದರ್ಶನಾಗ್ನಿಯು ಜ್ವಲಿಸಿ ಕತಕತನೆ ಕುದಿದಿರಲು
ಸಿದ್ಧಗೊಂಡಿತ್ತಾಗ ವಜ್ರಗಾರೆಯ ಸುಡಿಯು;
ಗಾರುಡಿಯು, ಸಾವಿರಗಂಬದ ರನ್ನ ಬಸದಿಯನು
ಕಟ್ಟಲಣಿಗೊಂಡು ಸಂಕಲ್ಪಿಸಿದೆ ವರದೃಷ್ಟಿ

ಇಂಥ ರೀತಿಯಲ್ಲಿ ಸಿದ್ಧವಾದ ತಮ್ಮ ಕೃತಿ 'ಕೈಲಾಸವನೆ ಬೆನ್ನಮೇಲೆ ತೂಗಿರುವ ಗಜ' ಎಂದು ಕವಿಯ ಹೇಳಿಕೆ.

ಜ್ಞಾನಪೀಠ ಪ್ರಶಸ್ತಿ ಪಡೆದು ಗೋಕಾಕರು ಎಲ್ಲರ ದೃಷ್ಟಿಯನ್ನು ತಮ್ಮ ಸಾಹಿತ್ಯ ಕೃತಿಗಳ ಕಡೆಗೆ ಸೆಳೆದಿದ್ದಾರೆ. ಅವರ ಕೃತಿಗಳ ವಸ್ತುನಿಷ್ಠ ವಿಮರ್ಶೆಗೆ ಈ ಪ್ರಶಸ್ತಿ ಕಾರಣವಾಗಲಿ ಎಂದು ಹಾರೈಸಬಹುದು.

●

ವಿನಾಯಕರಿಗೆ ವಂದನೆ

ತುಂಬಿದ ತಲೆಯ ಬೆಳ್ಳಿಗೂದಲಿಗೆ ಬೆರಳಾಡಿ
ಚಿಂತನೆಯ ಅಷ್ಟಪೈಲಿನ ಹರಳ ಹೊರಳಿಸುತ
ಅಂತಃಕರಣದಂಗೈಯಲ್ಲಿ ತೂಗಿ, ಬದುಕ
ಬೆಲೆಗೈವ : 'ಅದೇನದಲ್ಲ' ಅದೆಲ್ಲವ ಕೂಡಿ.
ಕನ್ನಡಕ ದಾಟಿ, ನುಣ್ಣಗೆ ಎದೆಯ ಮೀಟಿ, ಹದ
ಬರುವವರೆಗು ಮಿದಿಯುವ ದೃಷ್ಟಿ, ಸೂಟುಬೂಟನು
ಕಳಚಿ ಲಂಡಂಗಿ ಧೋತರದಿ ಮುಗುಳ್ನಗೆ ಹದನು.
'ಹಲೋ ಬರ‍್ರಿ': ತೆರೆಯುವದು ನಡುಮನೆಯ ಕಿಡಕಿ ಕದ.
ಎಂಟು ದಿಕ್ಕಿನ ಗಾಳಿಗಲ್ಲಿ ಕಡಲಿನ ಹಾಡು,
ಮೂಡ – ಪಡುವಣ ನೆಳಲು – ಬೆಳಕಿನಲಿ ತೇಲುವರ–
ಸಂಚೆ, ಬಾಳ ದೇಗುಲದಿ ಸಮನ್ವಯ – ತೇರ
ಸಿಂಗಾರ. ಅರವತ್ತರಲು ಭಾರಿ ಕಸರತ್ತು.
ಎತ್ತರದಲ್ಲು ಬಾಗಿ ಹತ್ತಿರ ಬರುವ ಮಹತಿ:
ಸಂಕ್ರಾಂತಿ : ಕೈಕುಲುಕಿದಂತೆ ದ್ಯಾವಾ ಪೃಥಿವಿ.

– ಚೆನ್ನವೀರ ಕಣವಿ

ಸಾಹಿತ್ಯ-ಶಾಸ್ತ್ರ-ವಾಗ್ಮಿತೆಗಳ ಮಿಲನ
ಎಂ.ಆರ್.ಶ್ರೀ

ಕಳೆದ ಪೀಳಿಗೆಯ ಪುಸ್ತಕ ಪ್ರೇಮಿ ಕನ್ನಡಿಗರಲ್ಲಿ 'ರಂಗಣ್ಣನ ಕನಸಿನ ದಿನಗಳು' ಎಂಬ ಕೃತಿಯನ್ನು ಓದದವರು ಅಪರೂಪ. ಹಾಸ್ಯರಂಜಿತ ಪ್ರಸಂಗಗಳಿಂದ ಕೂಡಿದ, ಶಾಲಾಜೀವನದ ಅನುಭವಗಳನ್ನು ದೃಶ್ಯವತ್ತಾಗಿ. ರಸವತ್ತಾಗಿ ಬಣ್ಣಿಸುವ ಕೃತಿ ಅದು. ಕುವೆಂಪು ಕೂಡ ಅದನ್ನು ಒಂದು ಚಿತ್ರ ಕಾದಂಬರಿ ಎಂದು ಮೆಚ್ಚಿ ಹೊಗಳಿದ್ದಾರೆ. "ಆಧುನಿಕ ಕನ್ನಡ ಸಾಹಿತ್ಯದ ಜೀವಂತ ಗ್ರಂಥಗಳಲ್ಲಿ ಒಂದು" "ತಾಜಾ ಅನುಭವದ ರಸವತ್ತಾದ ಕೃತಿ" "ಶಾಲಾ ಉಪಾಧ್ಯಾಯರ ಮತ್ತು ಇನ್ಸ್‌ಪೆಕ್ಟರುಗಳ ಬದುಕು ಬಾಳ್ವೆಗಳ ಭಾರತ" ಎಂದೆಲ್ಲ ಪ್ರಶಂಸೆ ಸೂರೆ ಮಾಡಿದ ಈ ಪುಸ್ತಕವನ್ನು ರಚಿಸಿದವರು ಸ್ವತಃ ಶಾಲಾ ಇನ್ಸ್‌ಪೆಕ್ಟರಾಗಿ ಜನಪ್ರಿಯರಾಗಿದ್ದ ಎಂ.ಆರ್. ಶ್ರೀನಿವಾಸಮೂರ್ತಿ. ಶಾಸ್ತ್ರಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎರಡು ಕ್ಷೇತ್ರಗಳಲ್ಲೂ ಬಹಳ ಉಪಯುಕ್ತವಾದ ಬರೆಹ ಮಾಡಿದ ಸವ್ಯಸಾಚಿ ಅವರು. ವಚನಧರ್ಮಸಾರ, ಭಕ್ತಿಭಂಡಾರಿ ಬಸವಣ್ಣದಂಥ ಮಹತ್ವದ ಶಾಸ್ತ್ರಗ್ರಂಥಗಳನ್ನು ಬರೆದ ಅವರು 'ನಾಗರಿಕ'ದಂಥ ಮಾರ್ಮಿಕ ನಾಟಕವನ್ನೂ 'ರಂಗಣ್ಣನ ಕನಸಿನ ದಿನ'ಗಳಂಥ ರಸವತ್ತಾದ ಕಾದಂಬರಿಯನ್ನೂ ಬರೆದರು. ಕಳೆದ ಶತಮಾನದ ಪೂರ್ವಾರ್ಧದಲ್ಲಿ ಎಂದರೆ ಹೊಸಗನ್ನಡ ಸಾಹಿತ್ಯದ ತುಂಬು ಯೌವನದ ದಿನಗಳಲ್ಲಿ ಬರೆದು ಬಾಳಿದ ಲೇಖಕ ಅವರು. ಆಧುನಿಕ ಕನ್ನಡ ಸಾಹಿತ್ಯವನ್ನು ಕಟ್ಟಿದ ಎತ್ತರದ ವ್ಯಕ್ತಿಗಳಲ್ಲಿ ಒಬ್ಬರೆಂದು ಹಾಮಾನಾಯಕರು ಅವರನ್ನು ಕೀರ್ತಿಸಿರುವುದುಂಟು.

ಎಂ.ಆರ್.ಶ್ರೀಯವರು ೧೮೯೨ ರಲ್ಲಿ ಹುಟ್ಟಿ ಅರವತ್ತೊಂದು ವರ್ಷ ಬಾಳಿ ೧೯೫೩ ರಲ್ಲಿ ತೀರಿಕೊಂಡರು. ಬಿ.ಎ. ಪದವಿ ಮುಗಿಸಿ ಶಿಕ್ಷಣ ಕ್ಷೇತ್ರದಲ್ಲಿ ಉಪಾಧ್ಯಾಯರಾಗಿ, ಇನ್ಸ್‌ಪೆಕ್ಟರಾಗಿ, ಜಿಲ್ಲಾ ವಿದ್ಯಾಧಿಕಾರಿಯಾಗಿ ಕೆಲಸ ಮಾಡಿದ

ಅವರು ಅಷ್ಟಕ್ಕೆ ಮಿತಗೊಳ್ಳದೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಮೈಸೂರು ವಿಶ್ವವಿದ್ಯಾಲಯದ ಇಂಗ್ಲೀಷ್-ಕನ್ನಡ ನಿಘಂಟಿನ ಸಹಸಂಪಾದಕರೂ ಆಗಿ ಬಹಳ ಎತ್ತರದ ನೆಲೆಯಲ್ಲಿ ದುಡಿದರು. ೧೯೫೦ ರಲ್ಲಿ ಸೊಲ್ಲಾಪುರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನದ ಗೌರವವೂ ಅವರಿಗೆ ಸಂದಿತು.

ಮೂರ್ತಿಯವರ ಬೌದ್ಧಿಕ ವ್ಯಕ್ತಿತ್ವದಂತೆ ಅವರ ಬಾಹ್ಯವ್ಯಕ್ತಿತ್ವವೂ ವಿಶಿಷ್ಟವಾಗಿತ್ತು. ಒಮ್ಮೆ ಕಂಡವರು ಎಂದೂ ಮರೆಯಲಾಗದಂಥ ಚಿತ್ರ ಅವರದು. ಶಿವಮೊಗ್ಗದ ಸರ್ಕಾರೀ ಹೈಸ್ಕೂಲಿಗೆ ಉಪನ್ಯಾಸಕ್ಕಾಗಿ ಬಂದ ಅವರನ್ನು ಹುಡುಗನಾಗಿದ್ದ ನಾನು ಎದುರಿಗೇ ಕುಳಿತು ಕಣ್ತುಂಬ ನೋಡಿದ್ದೆ. ಅವರ ರಸವತ್ತಾದ ಭಾಷಣ ಕೇಳಿದ್ದೆ. ನಾವೆಲ್ಲ ಬಿದ್ದು ಬಿದ್ದು ನಗುವಷ್ಟು ಹಾಸ್ಯರಂಜಿತವಾಗಿ ಮಾತನಾಡಿದ ಅವರು ನಮ್ಮೆಲ್ಲರ ಮನಸ್ಸಿನಲ್ಲಿ ಶಾಶ್ವತವಾಗಿ ನಿಂತುಹೋದರು. ಡಿವಿಜಿ ಒಂದು ಕಡೆ ಅವರ ವ್ಯಕ್ತಿತ್ವದ ವರ್ಣನೆ ಮಾಡಿದ್ದಾರೆ. ಅವರು "ಎತ್ತರವಾದ ಆಳು, ಕೆಂಬಿಳುಪಿನ ಮೈಬಣ್ಣ, ನಗುಮುಖ, ಸರಿಗೆಯ ಪಂಚೆ, ಜರಿಯ ಪೇಟ, ಪಟ್ಟಿಯಾಗಿ ಮಡಿಸಿದ ಶಲ್ಯ, ಎದ್ದು ತೋರುವ ಕಿವಿಯ ಹತ್ತಕಡಕು." ಯಾರ ಕಣ್ಣನ್ನೂ ಸೆಳೆಯುವ ಆಕರ್ಷಕ ವ್ಯಕ್ತಿತ್ವ.

"ಮೂರ್ತಿಯವರು ಹುಟ್ಟು ರಸಿಕರು. ರಸಿಕತೆ ಎಂದರೆ ಜೀವನದ ಎಲ್ಲ ರಂಗಗಳಲ್ಲಿಯೂ ಸೊಗಸನ್ನು ಹುಡುಕುವ ಪ್ರವೃತ್ತಿ ಮತ್ತು ಇರುವ ಸೊಗಸನ್ನು ಸವಿಯುವ ಶಕ್ತಿ." ಇದು ಮೂರ್ತಿಯವರ ನಿತ್ಯಜೀವನ ಮತ್ತು ಸಾಹಿತ್ಯಸೃಷ್ಟಿ ಎರಡರಲ್ಲಿಯೂ ಒಡೆದು ಕಾಣುವಂತಿತ್ತು.

ಒಮ್ಮೆ ಹೆಸರಾದ ಗಮಕಿಯಾಗಿದ್ದ ಭಾರತದ ಬಿಂದೂರಾಯರು ಮತ್ತು ಶ್ರೀನಿವಾಸಮೂರ್ತಿಗಳು ಹಾವಾನಾಯಕರ 'ಮನೆಯ ಅತಿಥಿಗಳಾಗಿ ಇಳಿದುಕೊಂಡಿದ್ದರು. ಅವತ್ತು ಗುರುವಾರ. ಬಿಂದೂರಾಯರು ನಿಯಮನಿಷ್ಠೆಗಳ ವ್ಯಕ್ತಿ. ತಾವು ಗುರುವಾರ ರಾತ್ರಿ ಊಟ ಮಾಡುವುದಿಲ್ಲವೆಂದೂ ಕೇವಲ ಫಲಾಹಾರ ತೆಗೆದುಕೊಳ್ಳುವುದಾಗಿಯೂ ತಿಳಿಸಿದರು. ಅಲ್ಲೇ ಇದ್ದ ಮೂರ್ತಿಯವರು ಗಂಭೀರವಾಗಿ ನಾಯಕರಿಗೆ "ನೋಡಪ್ಪಾ, ಫಲಾಹಾರದ ಪ್ರಮಾಣ ಊಟಕ್ಕಿಂತ ಕಡಿಮೆಯಾಗಿರಬಾರದು ತಿಳಿಯಿತೆ?" ಎಂದರು. ಸುತ್ತಲಿದ್ದವರೆಲ್ಲ ಹೋ ಎಂದು ನಕ್ಕರು.

ಮೂರ್ತಿಯವರು ವಿನೋದ ಪ್ರವೃತ್ತಿಯವರಾಗಿರುತ್ತಲೇ ವಿದ್ಯಾರ್ಥಿಗಳ ಓದು ಬರೆಹದ ವಿಷಯದಲ್ಲಿ ಕಟ್ಟುನಿಟ್ಟಾಗಿದ್ದವರು. ಅವರು ತೀರ್ಥಹಳ್ಳಿಯ ಬಾಲಕರ ಪ್ರೌಢಶಾಲೆಯಲ್ಲಿ ಉಪಾಧ್ಯಾಯರಾಗಿದ್ದಾಗ ಒಂದು ಪ್ರಸಂಗ ನಡೆಯಿತು.

ತರಗತಿಯಕೆಲವು ವಿದ್ಯಾರ್ಥಿಗಳು ಶಾಲೆಯಲ್ಲಿ ತಮಗೆಕೊಟ್ಟಿದ್ದ ಮನೆಗೆಲಸವನ್ನು ಮಾಡಿಕೊಂಡು ಬರಲಿಲ್ಲ. ಅವರನ್ನು ಹಾಗೇ ಬಿಡುವುದು ಸರಿಯಲ್ಲವೆಂದೂ ಅದರಿಂದ ಇತರವಿದ್ಯಾರ್ಥಿಗಳ ಶಿಸ್ತು ಕೆಡುವುದೆಂದೂ ಮೂರ್ತಿಯವರಿಗೆ ಅನಿಸಿತು. ಮಾರನೆಯ ದಿನ ಅದನ್ನು ತಪ್ಪದೆ ಮಾಡಿಯೇ ತರಬೇಕೆಂದೂ ಇಲ್ಲವಾದರೆ ಶಿಕ್ಷೆಗೆ ಗುರಿಯಾಗುವರೆಂದೂ ಅವರು ಹುಡುಗರಿಗೆ ಎಚ್ಚರಿಕೆ ಕೊಟ್ಟರು. ಆ ಎಲ್ಲ ವಿದ್ಯಾರ್ಥಿಗಳು ಮಾರನೆಯ ದಿನವೂ ಅದಕ್ಕೆ ತಪ್ಪಿದರು. ಮೇಷ್ಟ್ರು ಏನು ಶಿಕ್ಷೆ ಕೊಡುವರೋ ಎಂದು ಉಳಿದೆಲ್ಲ ವಿದ್ಯಾರ್ಥಿಗಳಿಗೂ ಕುತೂಹಲ. ಮೂರ್ತಿಯವರು ಜವಾನನನ್ನು ಕರೆದು ಆ ಹುಡುಗರನ್ನು ಅಲ್ಲೇ ಸ್ವಲ್ಪ ದೂರದಲ್ಲಿದ್ದ ಹೆಣ್ಣುಮಕ್ಕಳ ಶಾಲೆಯವರೆಗೂ ಕರೆದುಕೊಂಡು ಹೋಗಿ ಅವರಿಗೆ ಆ ಶಾಲೆ ತೋರಿಸಿ. ವಾಪಸ್ಸು ಕರೆತರಬೇಕೆಂದು ಆಜ್ಞೆ ಮಾಡಿದರು! ಆ ಕಾಲಕ್ಕೆ ಇದು ನಾಚಿಕೆಗೆ ಈಡುಮಾಡುವ ವಿಶಿಷ್ಟ ಶಿಕ್ಷೆಯಾಗಿತ್ತು. ಅಲ್ಲಿಂದ ಮುಂದೆ ಯಾವ ವಿದ್ಯಾರ್ಥಿಯೂ ಮನೆಗೆಲಸ ತಪ್ಪಿಸಲಿಲ್ಲ!

ಶ್ರೀನಿವಾಸ ಮೂರ್ತಿಯವರು ಒಮ್ಮೆ ಯಾವುದೋ ಚಿಕ್ಕ ಪುಸ್ತಕವೊಂದನ್ನು ವಿಮರ್ಶೆ ಮಾಡುವ ಸಲುವಾಗಿ ವಚನಸಾಹಿತ್ಯದ ಪುಸ್ತಕವೊಂದನ್ನು ಓದಿದರು. ವಚನಸಾಹಿತ್ಯ ಅವರನ್ನು ಎಷ್ಟು ಸೆಳೆಯಿತೆಂದರೆ ಮುಂದೆ ಅವರು ಅದರ ಗಾಢವಾದ ಅಭ್ಯಾಸಕ್ಕೆ ತೊಡಗಿದರು. ಕೇವಲ ವಚನಗಳ ಅಧ್ಯಯನ ಮಾತ್ರವಲ್ಲದೆ ವೀರಶೈವ ಸಾಹಿತ್ಯವನ್ನೆಲ್ಲ, ಅವರು ಆಳವಾಗಿ, ಅಮೂಲಾಗ್ರವಾಗಿ ಅಧ್ಯಯನ ಮಾಡಿದರು. ಅಷ್ಟೇ ಅಲ್ಲ, ಅ ಸಾಹಿತ್ಯದ ಅಧಿಕೃತ ವಿದ್ವಾಂಸರೆನಿಸಿಕೊಂಡರು. ಆ ಕಾಲದ ಒಬ್ಬ ನುರಿತ ವಾಗ್ಮಿಯೂ ಆಗಿದ್ದ ಅವರು ಅನೇಕ ಕಡೆ ಆ ಸಾಹಿತ್ಯದ ಬಗ್ಗೆ ದೀರ್ಘ ಉಪನ್ಯಾಸಗಳನ್ನು ನೀಡಿ ಅದರ ಪ್ರಸಾರಕ್ಕೆ ದುಡಿದರು. ವೀರಶೈವ ಪುರಾಣ ಲಕ್ಷಣಗಳು, ಶೂನ್ಯ ಸಂಪಾದನೆಗಳು, ಚನ್ನಬಸವಪುರಾಣ, ಪ್ರಭುಲಿಂಗಲೀಲೆ, ಷಡಕ್ಷರಿಯ ಕೃತಿಗಳು, ಹರಿಹರನ ಗಿರಿಜಾಕಲ್ಯಾಣ, ಪ್ರಭುದೇವರ ಪದಗಳು, ಮುಂತಾದುವನ್ನು ಕುರಿತು ಗಂಭೀರ ಲೇಖನಗಳನ್ನು ಬರೆದರು. ಹರಿಹರ ಮತ್ತು ಷಡಕ್ಷರಿ ಇಬ್ಬರೂ ಅವರಿಗೆ ಬಹಳ ಪ್ರಿಯರಾದ ಕವಿಗಳಾಗಿಬಿಟ್ಟರು. ಮೂರ್ತಿಯವರ ಈ ವೀರಶೈವ ಸಾಹಿತ್ಯದಸೇವೆಯಲ್ಲಿ ಇಂದಿಗೂ ಬಹಳ ಎತ್ತರದಲ್ಲಿ ನಿಂತಿರುವ ಕೃತಿಗಳೆಂದರೆ 'ವಚನ ಧರ್ಮಸಾರ' ಮತ್ತು 'ಭಕ್ತ ಭಂಡಾರಿ ಬಸವಣ್ಣ'. ಅವರು ಇಂಥ ಶ್ರೇಷ್ಠ ಕೃತಿಗಳನ್ನು ಬರೆಯುವಾಗ ಈಗಿನಷ್ಟು ವಿಪುಲವಾದ ಸಹಾಯಕ ಸಾಹಿತ್ಯ ಇರಲಿಲ್ಲ. ಮುಂದೆ ಆ ಸಾಹಿತ್ಯ ಕುರಿತು ಪುಂಖಾನುಪುಂಖವಾಗಿ ಬಂದ ಲೇಖನಗಳಿಗೆಲ್ಲ ಮೂರ್ತಿಯವರ ಬರೆಹಗಳೇ ಮೂಲನಿಧಿ. ಅವರ 'ಹಿಸ್ಟರಿ ಆಫ್ ಫಿಲಾಸಫಿ ಅಂಡ್ ಲಿಂಗಾಯಿತ್ ರಿಲಿಜಿಯನ್' ಎಂಬ ಬರೆಹ

ತಮ್ಮದಕ್ಕಿಂತ ಭಿನ್ನವಾದ ಮತವೊಂದವನ್ನು ಕುರಿತು ಅವರಿಗಿದ್ದ ಆಳವಾದ ಸಾಹಿತ್ಯ ಮತ್ತು ಧಾರ್ಮಿಕ ಸಹಾನುಭೂತಿಯನ್ನು ತೋರಿಸುತ್ತದೆ.

ಶ್ರೀನಿವಾಸ ಮೂರ್ತಿಯವರು ಕನ್ನಡ ಎಂ.ಎ. ತರಗತಿಗಳಂಥ ಪ್ರೌಢ ಸಾಹಿತ್ಯಾಧ್ಯಯನದ ತರಗತಿಗಳಲ್ಲಿ ಕುಳಿತು ಕಲಿತವರಲ್ಲ. ಅವರು ಓದಿದ್ದು ವಿಜ್ಞಾನವನ್ನು . ಮಕ್ಕಳಿಗೆ ಕಲಿಸಿದ್ದೂ ಅದನ್ನೇ, ಅವರ ಪ್ರೌಢ ಕನ್ನಡ ವಿದ್ವತ್ತಿಗೆ ತಳಪಾಯ ಅವರ ಸ್ವಂತ ಓದು. ಈ ಓದು ಎಷ್ಟು ಮೇಲ್ಮಟ್ಟದ್ದಾಗಿತ್ತೆಂದರೆ ಗೋವಿಂದ ಪೈ, ಡಿ.ಎಲ್. ನರಸಿಂಹಾಚಾರ್ಯರಂಥ ಸಂಶೋಧನ ವಿದ್ವಾಂಸರ ಬರಹಗಳನ್ನೂ ಅವರು ವಿಮರ್ಶಿಸಿರುವುದುಂಟು. ಹೀಗೆ ಅವರು ಹೊಸಗನ್ನಡ ಸಾಹಿತ್ಯದ ಒಬ್ಬ ಹಿರಿಯ ವಿದ್ವಾಂಸರಾಗಿ ಪರಿಗಣನೆಗೆ ಬಂದರು. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಅವರ ಸಮಗ್ರ ಲೇಖನ ಸಂಪುಟ 'ಸಾಹಿತ್ಯಾಲೋಕ'ವನ್ನು ಸಂಪಾದಿಸಿ, ಅವರ ಬರಹಗಳನ್ನು ವಿಮರ್ಶಿಸಿರುವ ವಿದ್ವಾಂಸ ಡಾ.ಎನ್.ಎಸ್. ತಾರಾನಾಥರು "ಎಂ.ಆರ್. ಶ್ರೀ ಅವರು ಶ್ರೇಷ್ಠ ದರ್ಜೆಯ ಸಂಶೋಧಕ ಪ್ರವೃತ್ತಿಯವರಾಗಿದ್ದರಷ್ಟೇ ಅಲ್ಲದೆ ಗುಣದೋಷಗಳನ್ನು ಖಚಿತವಾಗಿ ಗ್ರಹಿಸಿ ನಿರ್ಣಯಿಸಬಲ್ಲ ನಿಷ್ಠುರ ವಿಮರ್ಶಕರೂ ಆಗಿದ್ದರು" ಎಂದು ಸಾಧಾರವಾಗಿ ಪ್ರತಿಪಾದಿಸಿದ್ದಾರೆ.

ಆಧುನಿಕ ಸಾಹಿತ್ಯ ಕೃತಿಗಳನ್ನು ಕುರಿತು ಮೂರ್ತಿಯವರು ತೀಕ್ಷ್ಣವಾದ ವಿಮರ್ಶೆ ಮಾಡಿದ್ದಿದೆ. ಅವರ ಬರೆಹಗಳಲ್ಲಿ ಆ ಕಾಲಕ್ಕೆ ಇನ್ನೂ ಅಷ್ಟು ಪ್ರಚಲಿತವಾಗಿರದಿದ್ದ ತೌಲನಿಕ ವಿಧಾನ ಕೂಡ ಕಾಣುತ್ತದೆ. ಮಾಸ್ತಿಯವರಂಥ ಮೇಲುನೆಲೆಯ ಲೇಖಕರ ಮತ್ತು ಪ್ರಸಿದ್ಧ ಜನಜಪ್ರಿಯ ಲೇಖಕ ಅನಕೃರಂಥ ಬರೆಹಗಾರರ ಬಗ್ಗೆ ಬರೆಯುವಾಗ ಅವರ ಕೃತಿಗಳ ಗುಣಗಳ ಜೊತೆಗೆ ದೋಷಗಳನ್ನೂ ತೋರಿಸಿ ವಸ್ತುನಿಷ್ಠವಾಗಿ ವಿವೇಚಿಸಿರುವುದು ಅವರ ಹಿಂಜರಿಕೆಯಿಲ್ಲದ ನ್ಯಾಯದೃಷ್ಟಿಗೆ ಸಾಕ್ಷಿಯಾಗಿದೆ.

ಆ ಕಾಲದಲ್ಲಿ ಬಹಳ ಹೆಸರಾಗಿದ್ದ ವಾಗ್ಮಿಗಳೆಂದರೆ ಸಿ.ಕೆ. ವೆಂಕಟ್ರರಾಮಯ್ಯನವರು ಮತ್ತು ಮೂರ್ತಿಗಳು. ವೆಂಕಟರಾಮಯ್ಯನವರ ಶೈಲಿ ತೀರ ಗಂಭೀರವಾದದ್ದು; ವಿದ್ವತ್ತು ಮೇಲಕ್ಕೇ ಕಾಣುವಂಥ ರೀತಿಯದು. ಮೂರ್ತಿಯವರದು ಸರಳವಾದ, ಸೊಗಸಾದ ನಿರೂಪಣೆಯ ಹಾಸ್ಯಸಿಂಚಿತ ಶೈಲಿ. ಇದಕ್ಕೆ ಕಳೆಕೊಡುತ್ತಿದ್ದುದು ಅವರ ಆಕರ್ಷಕ ಆಕೃತಿ ಮತ್ತು ಕಂಚಿನಂಥ ಕಂಠ. ಅವರ ಮುಖದಿಂದ ಪುಂಖಾನುಪುಂಖವಾಗಿ ವಚನಗಳು ಮತ್ತು ಇತರ ಕನ್ನಡ ಪದ್ಯ ಭಾಗಗಳು ಹೊರಹೊಮ್ಮುತ್ತಿದ್ದುವು. ಸಮಗ್ರ ವಚನ ಸಾಹಿತ್ಯ

ಯಾವ ಕಾರಣದಿಂದಲಾದರೂ ಕೈತಪ್ಪಿದರೆ ಅದನ್ನು ಉಳಿಸುವ ನೆನಪು ಅವರದಾಗಿತ್ತು" ಎಂದು ಡಿ.ಎಲ್. ನರಸಿಂಹಚಾರ್ಯರು ಒಮ್ಮೆ ಹೇಳಿದ್ದರು. "ಕನ್ನಡ ನಾಡಿನ ಪುಸ್ತಕ ಭಂಢಾರಗಳಲ್ಲಿರುವ ವೀರಶೈವ ಗ್ರಂಥಗಳೆಲ್ಲಾ ನಶಿಸಿಹೋದರೂ ಶ್ರೀನಿವಾಸಮೂರ್ತಿಯವರು ಒಬ್ಬರಿದ್ದರೆ ಅದನ್ನು ಪುನರುಜ್ಜೀವನಗೊಳಿಸಬಹುದು" ಎಂಬ ಅಂಥದೇ ಮಾತನ್ನು ಅನಕೃ ಹೇಳಿದ್ದುಂಟು. ಅವರ ನೆನಪಿನ ಶಕ್ತಿ ಅನ್ಯಾದೃಶ್ಯವಾದದ್ದು ಎಂದು ಡಿವಿಜಿಯವರು ಕೊಂಡಾಡಿದ್ದಾರೆ.

ಸೃಜನಸಾಹಿತ್ಯಕ್ಕೂ ಮೂರ್ತಿಯವರ ಕೊಡುಗೆ ಇದೆ ಎಂದು ಹೇಳಿತಷ್ಟೆ ಅದು ಸಾಕಷ್ಟು ಪ್ರಮಾಣಯುತವೂ ಮೌಲಿಕವೂ ಆದದ್ದು. ಒಟ್ಟು ಏಳು ನಾಟಕ ಮತ್ತು ಮೂರು ಕಾದಂಬರಿಗಳನ್ನು ಅವರು ರಚಿಸಿದ್ದಾರೆ. 'ಧರ್ಮದುರಂತ' ಎನ್ನುವ ನಾಟಕ ಟಿಪ್ಪುಸುಲ್ತಾನನ ಕಾಲದಲ್ಲಿ ನಡೆಯಿತೆನ್ನಲಾದ ಪ್ರಸಂಗವೊಂದನ್ನು ಕೇಂದ್ರವಾಗಿ ಉಳ್ಳದ್ದು. ನಾಸ್ತಿಕತೆ–ಆಸ್ತಿಕತೆಗಳ ಸಂಘರ್ಷದಿಂದ ಕೂಡಿದ 'ಸಾಗರಿಕ' ನಾಟಕ ಹೆಚ್ಚು ಯಶಸ್ವಿಯಾದದ್ದು. ಸಾವಿತ್ರಿ, ಮಹಾತ್ಯಾಗ ಮತ್ತು ರಂಗಣ್ಣನ ಕನಸಿನ ದಿನಗಳು–ಎಂಬ ಮೂರು ಕಾದಂಬರಿಗಳಲ್ಲಿ 'ಮಹಾತ್ಯಾಗ' ಚಲನಚಿತ್ರವೂ ಆಗಿ ಹೊರಬಂದಿದೆ.

'ರಂಗಣ್ಣನ ಕನಸಿನ ದಿನಗಳು' ಈ ಮುಂಚೆ ಹೇಳಿದಂತೆ ವಿನೋದ ಪ್ರಸಂಗಗಳಿಂದ ಕೂಡಿದ ಚಿತ್ರವತ್ತಾದ ಕಾದಂಬರಿ. ಶ್ರೀನಿವಾಸಮೂರ್ತಿಯವರ ಪ್ರತಿನಿಧಿ ಎನ್ನಬಹುದಾದ ಇನ್ಸ್‌ಪೆಕ್ಟರ್ ರಂಗಣ್ಣನೇ. ಇದರ ಕೇಂದ್ರ ಪಾತ್ರ. ಹಳ್ಳಿಯ ಉಪಾಧ್ಯಾಯರ ವಿಲಕ್ಷಣ ಪಾಠಕ್ರಮ, ಅವರ ಹತ್ತೆಂಟು ಬವಣೆಗಳು, ಹಳ್ಳಿಯ ರಾಜಕೀಯ–ಇವನ್ನೆಲ್ಲ ಹಾಸ್ಯಪ್ರಸಂಗಗಳ ಮೂಲಕವೇ ನಿರೂಪಿಸುವ ಈ ಕೃತಿ ವಿಷಯ ಭರಿತವಾಗಿರುತ್ತಲೇ ತುಂಬ ಕಲಾತ್ಮಕವೂ ಆಗಿದೆ. ರಂಗಣ್ಣನಿಗೆ ತರಹಾವರಿ ಉಪಾಧ್ಯಾಯರು ಎದುರಾಗುತ್ತಾರೆ. ಶಾಲೆಯ ಪಾಠದ ಹಾಲಿನಲ್ಲೇ ನಡುವೆ ಒಂದು ಅಡ್ಡಪರದೆ ಕಟ್ಟಿ ಅಲ್ಲಿ ಕ್ಷೌರದ ಸೆಲೂನು ನಡೆಸುವ ಮುನಿಸ್ವಾಮಿ ಎಂಬ ಉಪಾಧ್ಯಾಯ ಇಲ್ಲಿ ಬರುತ್ತಾನೆ. ಇನ್ಸ್‌ಪೆಕ್ಟರ್‌ಗೆ ತಾನು ಹಿಂದೆ ಅವರ ಶಿಷ್ಯನೆಂದು ನೆನಪು ಮಾಡಿಕೊಟ್ಟು ಗುರುಸೇವೆ' ಎಂದು ಹೇಳಿ ಅವರ ತಲೆಕೂದಲ ಮೇಲೂ ತನ್ನ ಕೈಚಳಕ ತೋರಿಸಿಬಿಡುತ್ತಾನೆ! ಮಡಿವಾಳ ಉಪಾಧ್ಯಾಯನೊಬ್ಬ ತನಗೆ ಒಗೆಯಲು ಬಂದ ಮದುವಣಿಗನೊಬ್ಬನ ಭರ್ಜರಿ ಉಡುಪನ್ನು ಧರಿಸಿ ಇನ್ಸ್‌ಪೆಕ್ಟರಿಗೂ ಮೀರಿದ ಠೀವಿ ಬಟ್ಟೆಯಲ್ಲಿ ಅವರಿಗೆ ಕಾಣಿಸಿಕೊಳ್ಳುತ್ತಾನೆ! ತನ್ನ ರುಮಾಲನ್ನೇ 'ಡಸ್ಟರ್' ಆಗಿಯೂ ಬಳಸುವ ಬಡಮೇಷ್ಟ್ರು, "ಆಗಸ ತೊಳೆದಂತೆಸೆದಿಹುದು" ಎಂಬ ಕವಿತೆಯ ಸಾಲನ್ನು "ಅಗಸಾ ತೊಳೆದಂತೆಸೆದಿಹುದು"

ಎಂದು ತಿದ್ದುಪಡಿ ಮಾಡಿಕೊಂಡ ಮಡಿವಾಳ ಉಪಾಧ್ಯಾಯ– ಇವರೆಲ್ಲ ಓದುಗರನ್ನು ನಗುವಿನ ಹೊಳೆಯಲ್ಲಿ ಮುಳುಗಿಸಿಬಿಡುತ್ತಾರೆ. ಕಡೆಯಲ್ಲಿ ರಂಗಣ್ಣನ ಪತ್ನಿ ಅವನ ಇನ್ಸ್‌ಪೆಕ್ಟರ್ ಠೀವಿಯನ್ನು ಮೂದಲಿಸಿ ಮಂಗಳಾರತಿ ಮಾಡಿ, ಅವನಿಗೇ ಪಾಠ ಹೇಳಿಕೊಡುವ ಪ್ರಸಂಗ ಮೂರ್ತಿಯವರು ತಮ್ಮನ್ನೂ ಹೇಗೆ ವಿಮರ್ಶೆಗೆ ಒಡ್ಡಿಕೊಳ್ಳುತ್ತಾರೆ ಎನ್ನುವುದನ್ನು ಮಾರ್ಮಿಕವಾಗಿ ಧ್ವನಿಸುತ್ತದೆ. ಮೊದಲಿನಿಂದ ಕಡೆಯವರೆಗೂ ಸರಸವಾಗಿ ಓದಿಸಿಕೊಂಡು ಹೋಗುವ ಈ ಕಾದಂಬರಿ ಶ್ರೀನಿವಾಸ ಮೂರ್ತಿಯವರ ನೈಜ ವ್ಯಕ್ತಿತ್ವದ ಪ್ರಾತಿನಿಧಿಕ ಬರೆಹ ಎಂದರೆ ಸಮರ್ಪಕವಾದೀತು.

ಯಾವ ಪ್ರತಿಫಲಾಪೇಕ್ಷೆಯಿಲ್ಲದೆ ಕೇವಲ ಆತ್ಮಸಂತೃಪ್ತಿಗಾಗಿ ಕನ್ನಡಕ್ಕಾಗಿ ದುಡಿದ ಇಂಥ ಸುಸಂಸ್ಕೃತ ಕನ್ನಡಿಗ ಹುಟ್ಟಿದುದು ಸೆಪ್ಟೆಂಬರ್ ಹದಿನಾರರಂದು.ಅವರು ಹುಟ್ಟಿ ಅಂದಿಗೆ ನೂರ ಹದಿನೈದು ವರ್ಷ ತುಂಬುತ್ತದೆ.

●

ಶಿಷ್ಯವಾತ್ಸಲ್ಯದ ಅನನ್ಯ ನಿದರ್ಶನ
ತ. ಸು. ಶಾಮರಾಯ

ಗೋಪಾಲಕೃಷ್ಣ ಅಡಿಗರ ಕೂಪಮಮಂಡೂಕ ಕವನದಲ್ಲಿ ಆರಂಭದಲ್ಲಿಯೇ–

ಗೊನೆ ಮಾಗಿ ಬಾಳೆ ಜೀವನ್ಮುಕ್ತ ಹಳಸುತಿದೆ
ಹಿಂಡುಹಿಳ್ಳುಗಳಲ್ಲಿ ಪ್ರಾಣವೂರಿ

ಎಂಬ ಒಂದು ಅಪೂರ್ವ ಪ್ರತಿಮೆ ಪ್ರತ್ಯಕ್ಷವಾಗುತ್ತದೆ.

ಬಾಳೆಯ ಗಿಡವೊಂದು ಎತ್ತರಕ್ಕೆ ಬೆಳೆದು ನಿಂತಿದೆ. ಅದರ ಮಡಿಲಲ್ಲಿ ಮಾಗಿದ ಬಾಳೆಯ ಗೊನೆ ತೂಗುತ್ತಿದೆ. ವಾಸ್ತವವಾಗಿ ಗಿಡದ ಬಾಳಿನ ಮುಖ್ಯ ಕೆಲಸ ಮುಗಿದಿದ್ದು, ಜೀವಿಸಿರುವಂತೆಯೇ ಅದು ಎಲ್ಲ ಬಂಧನಗಳಿಂದ ಮುಕ್ತವಾಗಿದೆ. ಮತ್ತೆ ಗೊನೆ ಬಿಡಲಾಗದ ಅದು ಥಟ್ಟನೆ ನಿರುಪಯಕ್ತವೆಂಬಂತೆ ಕಾಣುತ್ತಿದ್ದರೂ ಬುಡದಲ್ಲಿ ತಲೆಯೆತ್ತಿರುವ ಬಾಳೆಯ ಸಸಿಗಳು ಗಿಡದ ಜೀವನ ಈಗಾಗಲೆ ಸಾರ್ಥಕವಾಗಿದೆ ಎಂದು ಸಾರುತ್ತಿವೆ.

ತ. ಸು. ಶಾಮರಾಯರು ಬದುಕಿನ ಇಂಥ ಸಾರ್ಥಕ ನೆಲೆಗೆ ತಲುಪಿದ ಒಂದು ಕೃತಕೃತ್ಯ ಜೀವ. ಕೊಟ್ಟು ಸಂತೋಷ ಪಡೆಯುವ ಬುದ್ಧಿ ಅವರಿಗೆ ಜನ್ಮಜಾತವಾಗಿ ಬಂದದ್ದು ಮಾತ್ರವಲ್ಲ, ಕುಟುಂಬದಿಂದಲೂ ದತ್ತವಾದದ್ದು. ಶಾಮರಾಯರು ಪ್ರೊ. ಟಿ. ಎಸ್. ವೆಂಕಣ್ಣಯ್ಯನವರ ತಮ್ಮ. ವೆಂಕಣ್ಣಯ್ಯನವರು ಕುವೆಂಪುರವರಂಥ ಒಂದು ಹಿರಿಯ ಚೇತನದ ಕೃತಜ್ಞತೆಗೆ ಪಾತ್ರರಾದವರು; ಒಬ್ಬ ದೇವತಾಮನುಷ್ಯ ಎಂದು ಕರೆಸಿಕೊಂಡವರು. ಅಂಥ ಅಣ್ಣ ಶಾಮರಾಯರಿಗೆ ಆದರ್ಶ.

ಸಾವಿರದ ಒಂಬೈನೂರ ಐವತ್ತೈದು. ನಾನು ಕನ್ನಡ ಆನರ್ಸ್ ಮೊದಲ ವರ್ಷದಲ್ಲಿದ್ದೆ. ಒಂದು ದಿನ ಬೆಳಿಗ್ಗೆ ವಾರದೂಟಕ್ಕಾಗಿ ಹೋಗಿದ್ದ ನಾನು

ಶಾಮರಾಯರ ಮನೆಯ ಹಾಲಿನಲ್ಲಿ ಕೂತಿದ್ದೇನೆ. ಸುಮಾರು ಒಂಬತ್ತೂವರೆ ಗಂಟೆ. ಒಳಗೆ ಪೂಜೆ ನಡೆಯುತ್ತಿದೆ. ಗಂಟೆಯ ಶಬ್ದ ಶುರುವಾಯಿತು. ಮಂಗಳಾರತಿ ಸಮಯ. ಇನ್ನೇನು ಪೂಜೆ ಮುಗಿಯುವ ಹೊತ್ತು. ಇದ್ದಕ್ಕಿದ್ದಂತೆ ಗಂಟೆಯ ಶಬ್ದ ನನ್ನ ಕಡೆಗೇ ಬರುತ್ತಿದೆ ಎನ್ನಿಸಿತು. ಶಾಮರಾಯರು ದೇವರ ಮನೆಯಿಂದ ಹಾಲಿಗೇ ಬಂದರು. ಗೋಡೆಯ ಮೇಲೆ ಎತ್ತರದಲ್ಲಿ ನಿಲ್ಲಿಸಿದ್ದ ವೆಂಕಣ್ಣಯ್ಯನವರ ಭವ್ಯಚಿತ್ರಕ್ಕೆ ಮಂಗಳಾರತಿ ಎತ್ತಿ ತಲೆಬಾಗಿದರು. ನಾನು ಅವಾಕ್ಕಾಗಿ ಹೋದೆ. ದೇವ ವಿಗ್ರಹಗಳಿಗೆ ಮಂತ್ರಪೂರ್ವಕ ಎತ್ತಿದ ಆರತಿಯನ್ನು ತನ್ನ ಅಣ್ಣನ ಚಿತ್ರಕ್ಕೂ ಎತ್ತುತ್ತಿದ್ದಾನೆ ತಮ್ಮ! ಇಂಥ ದೃಶ್ಯವನ್ನು ನಾನು ಆವರೆಗೂ ನೋಡಿರಲಿಲ್ಲ, ಈವರೆಗೂ ಬೇರೆ ನೋಡಿಲ್ಲ. ಅನೇಕ ವರ್ಷ ಜೊತೆಯಲ್ಲೇ ಬಾಳಿದ ಅಣ್ಣನನ್ನು ದೇವರ ನೆಲೆಯಲ್ಲಿ ಕೂರಿಸಬೇಕಾದರೆ ಆ ಅಣ್ಣನ ಎತ್ತರ ಎಂಥದು! ಅದನ್ನು ಗ್ರಹಿಸಿದ ಈ ತಮ್ಮನ ಸಂಸ್ಕಾರ ಎಂಥದು!

ಅನೇಕ ವರ್ಷಗಳ ನಂತರ ನಾನು ಅವರ ಬಳಿ ಈ ಘಟನೆಯನ್ನು ಪ್ರಸ್ತಾಪಿಸಿ ಹಾಸ್ಯಕ್ಕಾಗಿ ರೇಗಿಸಿದೆ. ಆದರೆ ಶಾಮರಾಯರು ಭಾವಪರವಶರಾಗಿ ಹೇಳಿದರು. "ಅಯ್ಯೋ ಪೆದ್ದುಮುಂಡೇದೆ! ವೆಂಕಣ್ಣಯ್ಯ ನನ್ನ ಅಣ್ಣ ಅಂತ ಹೇಳಿದವರು ಯಾರು? ಅದು ನಮ್ಮ ರೂಪನ್ನೇ ಹೊತ್ತು, ನಮ್ಮ ಸುತ್ತಮುತ್ತಲೇ ಓಡಾಡುತ್ತ ನಿಜ ಮರೆಸಿಕೊಂಡಿದ್ದ ದೇವತೆ. ಗುರುತಿಸುತ್ತಾರೋ ಹೇಗೋ ನೋಡೋಣ ಅಂತ ಇಂಥ ಪರೀಕ್ಷೆ. ನಾನು ಗುರುತಿಸಿಬಿಟ್ಟೆ, ಅಷ್ಟೆ" ಎಂದರು!

ಶಾಮರಾಯರು ಇಂಥ ರೋಮಾಂಚಕ ಭಾವಸಮೃದ್ಧಿಯಲ್ಲಿ ಬದುಕಿದ ಜೀವ. ಅವರು ಕಾವ್ಯ ಪಾಠಹೇಳಿದವರು ಮಾತ್ರವಲ್ಲ, ಕಾವ್ಯದಂಥ ಬಾಳು ನಡೆಸಿ ಕೃತಕೃತ್ಯರಾದವರು. ಆಕರ್ಷಕ ಮಾತುಗಾರಿಕೆಯ ಪ್ರಾಧ್ಯಾಪಕರಾಗಿ, ಸಮನಿಲ್ಲದ ಶಿಷ್ಯವತ್ಸಲರಾಗಿ, ಪರೋಪಕಾರಿಗಳಾಗಿ, ಗ್ರಂಥಕರ್ತರಾಗಿ ಅವರು ಹಳೆ ಮೈಸೂರಿನ ಸಾಹಿತ್ಯವಲಯದಲ್ಲೆಲ್ಲ ತೀರ ಪರಿಚಿತರಾದವರು. ತಾವು ವಿದ್ಯಾರ್ಥಿಗಳಾಗಿದ್ದಾಗ ಅವರು ತೋರಿದ ವಾತ್ಸಲ್ಯಕ್ಕಾಗಿ ಇಂದಿಗೂ ಅವರನ್ನು ಪ್ರಾಮಾಣಿಕವಾಗಿ ನೆನೆಯುವ ನೂರಾರು ಕನ್ನಡ ಅಧ್ಯಾಪಕರು, ಲೇಖಕರು ಮತ್ತು ಇತರ ಅಧಿಕಾರಿಗಳಿದ್ದಾರೆ. ಮನೆಗೆ ಹೋಗಿ ಅವರೆದುರು ನಮ್ರರಾಗಿ ಕೂತು ಮಾತಾಡಿ ಕೃತಜ್ಞತೆಯಿಂದ ನಮಸ್ಕರಿಸಿ ಬಂದ ಮಂತ್ರಿ, ಮುಖ್ಯಮಂತ್ರಿಗಳಿದ್ದಾರೆ. ಅನ್ಯರಿಗೆ ತಾನು ನೀಡಿದರೂ, ತನಗಾಗಿ ಯಾರನ್ನೂ ಕೇಳದ, ಕೇಳಿದರೂ ಅದು ತನಗಾಗಿರದ ಇಂಥ ಜೀವಗಳ ಬಗ್ಗೆ ಮಾತಾಡಲು ಹೊರಟಾಗ ಆಡುವವನಿಗೆ ಒಂದು ಅನುಮಾನ ಹುಟ್ಟಿಬಿಡುತ್ತದೆ – ಈ ಮನುಷ್ಯನ ಬಗ್ಗೆ ನಾನು ಹೇಳುತ್ತಿರುವ ಈ ಸಂಗತಿಗಳನ್ನೆಲ್ಲ ಕೇಳುವವರು ನಂಬುತ್ತಾರೋ ಹೇಗೆ?

ಶಾಮರಾಯರು ಸಮೃದ್ಧಸತ್ವದ ಮನೆತನದಿಂದ ಬಂದವರು. ಶಾಮರಾಯರ ತಂದೆ ಹಲವು ನಾಟಕಗಳನ್ನು ಬರೆದು, ಆಡಿಸಿ ಹಾಡಿಸಿದ ಗ್ರಾಮಕವಿ ತಳುಕಿನ ಸುಬ್ಬಣ್ಣ. ಅವರ ಹಿರಿಯ ಮಗ ಹೊಸಗನ್ನಡದ ಅಶ್ವಿನೀ ದೇವತೆಗಳಲ್ಲಿ ಒಬ್ಬರೆಂದು ಕರೆಸಿಕೊಂಡ ಪ್ರೊ. ಟಿ. ಎಸ್. ವೆಂಕಣ್ಣಯ್ಯ. ಆ ವೆಂಕಣ್ಣಯ್ಯನವರ ತಮ್ಮ ಶಾಮರಾಯರು. ಅವರ ಅಣ್ಣನ ಮಗ ಪ್ರಸಿದ್ಧ ಕಾದಂಬರಿಕಾರ ತರಾಸು. ಶಾಮರಾಯರ ಭಾವ ಲೇಖಕ ಕ್ಷೀರಸಾಗರ. ಕ್ಷೀರಸಾಗರರ ತಂದೆ ಸಮರ್ಥ ಆಶುಕವಿ ಚಂದ್ರಶೇಖರ ಶಾಸ್ತ್ರಿಗಳು. ಅವರ ಮಗಳು ಬೆಳಗೆರೆ ಜಾನಕಮ್ಮ ಬೇಂದ್ರೆಯವರ ಒಂದು ಕವಿತೆಗೆ ವಸ್ತುವಾದ ಕವಯಿತ್ರಿ. ಈಗಲೂ ಸಾಹಿತ್ಯದ ಹುಚ್ಚು ತಲೆಗೆ ಹಚ್ಚಿಕೊಂಡು ಅಲೆಯುವ ಜನಾನುರಾಗಿ ಬೆಳಗೆರೆ ಕೃಷ್ಣಶಾಸ್ತ್ರಿ ಆಕೆಯ ಅಣ್ಣ. ರವಿಬೆಳಗೆರೆ ಅವರ ಸೋದರಳಿಯ. ಹೀಗೆ ಶಾಮರಾಯರ ವಂಶ ಮತ್ತು ಅವರ ಜೊತೆ ಕೊಡುಕೊಳುಗೆ ನಡೆಸಿದ ವಂಶ ಎರಡೂ ಸತ್ವಸಂಪನ್ನವಾದ ಮನೆತನಗಳು.

ಶಾಮರಾಯರ ತಂದೆ ಸುಬ್ಬಣ್ಣ ಪರೋಪಕಾರಿಗಳಾಗಿ ಬಡತನವನ್ನು ಕಷ್ಟಪಟ್ಟು ಉಳಿಸಿಕೊಂಡು ಬಂದವರು. ವೆಂಕಣ್ಣಯ್ಯನವರ ಕಾಲದಲ್ಲಿ ಅವರ ಮನೆಗೆ ಅಗಡಿ ಆನಂದವನದ ಸಾಧುಗಳ ಜೊತೆ ಆಪ್ತತೆ ಪ್ರಾಪ್ತವಾಯಿತು. ದೈವಶ್ರದ್ಧೆ, ಸಾಧುಸಂತರ ಬಗ್ಗೆ ಗೌರವ, ಸಾಹಿತ್ಯಪ್ರೇಮ, ಪರೋಪಕಾರ ಪ್ರವೃತ್ತಿ – ಇವು ಅಂದಿನಿಂದ ಇಂದಿನವರೆಗೂ ಆ ಮನೆತನದ ಲಕ್ಷಣಗಳಾಗಿ ಬೆಳೆದುಬಂದಿವೆ.

ಕುಟುಂಬದ ಬಡತನ ಎಷ್ಟಿತ್ತೆಂದರೆ ಶಾಮರಾಯರು ಲೋಯರ್ ಸೆಕೆಂಡರಿ ಮುಗಿದ ಕೂಡಲೆ ಹದಿಮೂರನೆಯ ವಯಸ್ಸಿನಲ್ಲಿ ಪ್ರೈಮರಿ ಶಾಲೆಯ ಅಧ್ಯಾಪಕರಾಗಿ ಕೆಲಸಕ್ಕೆ ಸೇರಿದರು. ಹಿರಿಯರ ಆಸೆ ಪೂರೈಸಲು ಹದಿನಾರಕ್ಕೇ ಅವರಿಗೆ ಮದುವೆಯೂ ಆಯಿತು. ಆದರೆ ಅಣ್ಣ ವೆಂಕಣ್ಣಯ್ಯನವರಂತೆ ತಾನೂ ಕಾಲೇಜು ಅಧ್ಯಾಪಕನಾಗಬೇಕೆಂದು ಅವರ ಆದಮ್ಯ ಆಸೆ. ಅದನ್ನು ಅವರು ಪಟ್ಟು ಹಿಡಿದು ಸಾಧಿಸಿದರು. ಪ್ರೈಮರಿ ಶಾಲೆಯಿಂದ ಮಾಧ್ಯಮಿಕ ಶಾಲೆಯ ಉಪಾಧ್ಯಾಯರಾಗಿ ದುಡಿದು, ನಂತರ ಕೆಲಸವನ್ನೇ ಬಿಟ್ಟು ಆನರ್ಸ್ ಪದವಿಗೆ ಓದಿದರು. ಎಲ್ಲ ಆನರ್ಸ್ ತರಗತಿಗಳಿಗೂ ಪ್ರಪ್ರಥಮ ರ್‍ಯಾಂಕು ಗಳಿಸಿ ಕಾಲೇಜು ಅಧ್ಯಾಪಕರೂ ಆದರು.

ಶಾಮರಾಯರ ಉಪನ್ಯಾಸದ ವೈಖರಿಯೇ ವೈಖರಿ. ಅವರು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ ದಿನಗಳಲ್ಲಿ ನಾನು ಆನರ್ಸ್ ವಿದ್ಯಾರ್ಥಿಯಾಗಿದ್ದೆ. ಆಗ ಏಳೆಂಟು ಆನರ್ಸ್ ತರಗತಿಗಳ ವಿದ್ಯಾರ್ಥಿಗಳು ಕನ್ನಡ, ಇಂಗ್ಲಿಷ್ ಪಾಠಗಳಿಗೆ

ಒಟ್ಟಾಗಿ ಒಂದೇ ತರಗತಿಯಲ್ಲಿ ಕೂಡುವ ಪದ್ಧತಿ ಇತ್ತು. ಎಷ್ಟೋ ಸಲ ಬಡಕಲಾಗಿ ಕಾಣುತ್ತಿದ್ದ ಈ ತರಗತಿ ಶಾಮರಾಯರ ಪಾಠವಿದ್ದ ಪೀರಿಯಡ್ಡಿನಲ್ಲಿ ವಿದ್ಯಾರ್ಥಿಗಳಿಂದ ಕಿಕ್ಕಿರಿದು ಹೋಗುತ್ತಿತ್ತು. ಬೇರೆ ವಿದ್ಯಾರ್ಥಿಗಳೂ ಗೋಡೆಬದಿಯಲ್ಲಿ, ಬಾಗಿಲ ಬಳಿಯಲ್ಲಿ ನಿಂತಿರುತ್ತಿದ್ದುದು ಉಂಟು. ಅವರ ಪಾಠ ಆರಂಭವಾದರೆ ಮುಗಿಯಿತು. ವಿದ್ಯಾರ್ಥಿಗಳಿಗೆ ತಾವು ಕೂತಿದ್ದೇವೆ ನಿಂತಿದ್ದೇವೆ ಎಂಬ ಪರಿವೆ ಹಾರಿಹೋಗುತ್ತಿತ್ತು. ಮೊದಲ ದಿನ ಅವರ ಭಾವಪೂರ್ಣವಾದ ಉಪನ್ಯಾಸವನ್ನು ಪರವಶರಾಗಿ ಕೇಳಿದ ನಾವೆಲ್ಲ ಅವರ ಮಾತಿನ ಸಮ್ಮೋಹಕ ಆಕ್ರಮಣಕ್ಕೆ ದಂಗುಬಡಿದು ಹೋದೆವು. ಮಡಿಕೇರಿಯಿಂದ ಬಂದಿದ್ದ ಕರುಣಾಕರನ್ ಎಂಬ ನನ್ನ ಸಹಪಾಠಿ ತರಗತಿ ಮುಗಿಸಿ ಹೊರಬಂದವನೆ ಬೆರಗಿನಿಂದ ನನ್ನ ಕಡೆ ತಿರುಗಿ "ಏನಯ್ಯಾ ಇದು? ಈತ ಎಷ್ಟು ಅದ್ಭುತವಾಗಿ ಮಾತಾಡ್ತಾರೆ! ಇಂಥ ಉಪನ್ಯಾಸ ನಾನು ಕೇಳಿದ್ದು ಇದೇ ಮೊದಲು. ಕನ್ನಡ ಆನರ್ಸ್ ತೆಗೆದುಕೊಂಡದ್ದಕ್ಕೆ ನನಗೆ ಕೊಂಚ ಅಳುಕು ಇತ್ತು. ಈಗ ಎಲ್ಲ ನಿರಾಳವಾಗಿ ಹೋಯ್ತು. ಇನ್ನು ಮೂರು ನಾಲ್ಕು ವರ್ಷ ಇವರ ಪಾಠ ಕೇಳ್ತೀವಲ್ಲ, ನಮ್ಮ ಅದೃಷ್ಟ" ಎಂದ.

ಶಾಮರಾಯರ ಶಿಷ್ಯವಾತ್ಸಲ್ಯಕ್ಕೆ ಮೇರೆಯೇ ಇರಲಿಲ್ಲ. ಡಾ. ಜಿ. ಎಸ್. ಶಿವರುದ್ರಪ್ಪನವರು ಅವರ ವಿದ್ಯಾರ್ಥಿ. ಆನರ್ಸ್ ಓದಲು ಹೋದಾಗ ಅವರು ತುಂಬ ತೊಂದರೆಯಲ್ಲಿದ್ದರು. ಅವರಿಗೆ ಸುತ್ತೂರು ಹಾಸ್ಟೆಲಿನಲ್ಲಿ ಊಟದ ಏರ್ಪಾಟು ಮಾಡಿದವರು ಶಾಮರಾಯರು. ಅವರಿಗೆ ಫೀಜು ಕಟ್ಟಲು ಸಾಧ್ಯವಾಗದೆ ತರಗತಿಗಳಿಗೆ ಗೈರುಹಾಜರಾದಾಗ ತಾವೇ ಫೀಜು ಕಟ್ಟಿ ವಿದ್ಯಾರ್ಥಿ ತರಗತಿಗೆ ಬರುವಂತೆ ಮಾಡಿದವರು. ಶಿವರುದ್ರಪ್ಪ ಬರೆಯುತ್ತಿದ್ದ ಕವಿತೆಗಳನ್ನೆಲ್ಲ ಹೊರತೆಗೆಸಿ, ಓದಿಸಿ ಕೇಳಿ ಮೆಚ್ಚುಗೆಯ ಮಾತಾಡಿದ್ದಲ್ಲದೆ ಅವುಗಳಲ್ಲಿ ಕೆಲವನ್ನು ಆಯ್ದು, ಪುಟ್ಟಪ್ಪನವರಿಂದ ಮುನ್ನುಡಿ ಬರೆಸಿ ಅದನ್ನು ಪ್ರಕಟಿಸಿದ ವ್ಯಕ್ತಿಯೂ ಅವರೇ. ಬರೆಹದ ಹಾದಿಗೆ ಹೊರಳಿದ ಜೀವಕ್ಕೆ ಇದು ಎಂಥ ದೊಡ್ಡ ಪ್ರೋತ್ಸಾಹ ಎಂದು ವಿವರಿಸಬೇಕಾಗಿಲ್ಲ. ಮುಂದೆ ಒಮ್ಮೆ ಜಿ.ಎಸ್.ಎಸ್. ನನ್ನ ಬಳಿ ಮಾತಾಡುತ್ತಿದ್ದಾಗ "ನಾನು ಚಿಕ್ಕ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡೆ. ಆದರೆ ಶಾಮರಾಯರು ತಾಯಿವಾತ್ಸಲ್ಯ ಎಂಥದೆಂಬುದರ ರುಚಿ ತೋರಿಸಿ ಅದರ ಕೊರತೆಯನ್ನು ಬಹುಮಟ್ಟಿಗೆ ಕಳೆದರು" ಎಂದು ಹೇಳಿದ್ದುಂಟು. ಆ ವಾತ್ಸಲ್ಯದ ಮಳೆ ಎಲ್ಲರಿಗಿಂತ ಹೆಚ್ಚಾಗಿ ಸುರಿದದ್ದು ನನ್ನ ಮೇಲೆ ಎನ್ನಬೇಕು. ಓದುವ ಹುಚ್ಚು ಹತ್ತಿ, ಹಿಂದು ಮುಂದು ನೋಡದೆ, ಜೇಬಲ್ಲಿ ಕಾಸಿಲ್ಲದೆ ಮೈಸೂರಿಗೆ ಹೋದ ನನ್ನನ್ನು ಕಂಡಕ್ಷಣವೇ ಆದರಿಸಿ, ಧೈರ್ಯನೀಡಿ, ಅನ್ನಹಾಕಿ, ಪಾಠ ಹೇಳಿ ನನ್ನ ಬದುಕಿಗೆ ಒಂದು ರೂಪ ಕೊಟ್ಟ ಹಿರಿಯರು ಅವರು.

ಯಾವ ವಿದ್ಯಾರ್ಥಿಯೇ ಆಗಲಿ, ಶಾಮರಾಯರು ಅವನನ್ನು ಕರೆಯುತ್ತಿದ್ದುದು ಏಕವಚನದಲ್ಲಿಯೇ. ಅದು ನಮಗೆ ಬಹಳ ಪ್ರಿಯವೂ ಆಗಿರುತ್ತಿತ್ತು. ಅವರು ಅಪರೂಪವಾಗಿ ಬಹುವಚನ ಬಳಸಿದರೆ ಮೇಸ್ಟರಿಗೆ ಕೋಪ ಬಂದಿದೆ ಅಂತ ನಮಗೆ ಥಟ್ಟನೆ ಗೊತ್ತಾಗುತ್ತಿತ್ತು. "ಏನು ಮಗೂ, ಹೇಗಿದ್ದೀಯ? ಯಾವಾಗ ಬಂದೆ? ಊಟ ಆಯ್ತೇ?" ಇದು ಅವರು ಮಾತಾಡಿಸುವ ರೀತಿ. ಅವರ ಸಹಾಯ ಪಡೆಯಲು ನಾವೇನಾದರೂ ಸಂಕೋಚಪಟ್ಟರೆ "ಅಯ್ಯೋ ಮುಂಡೇದೇ, ಯಾಕೆ ಹೀಗಾಡ್ತಿದೀಯ ಇವತ್ತು? ಸಂಕೋಚ ಬೇರೆ ಕೇಡು ನಿನಗೆ. ತೆಪ್ಪನೆ ಹೇಳಿದ ಹಾಗೆ ಕೇಳು" ಅಂತ ಹೇಳಿ ತಮ್ಮ ದಾರಿಗೆ ಎಳೆದುಕೊಂಡು ಬಿಡುತ್ತಿದ್ದರು. ಹಾವನೂ ನಾಯಕ, ತಿಪ್ಪೇರುದ್ರಸ್ವಾಮಿ, ಪ್ರಭುಶಂಕರ, ಸುಬ್ರಮಣ್ಯಂ, ಚಿದಾನಂದಮೂರ್ತಿ, ಸುಜನಾ, ಸಿಪಿಕೆ, ಸಾಶಿ ಮರುಳಯ್ಯ, ಬ್ರಹ್ಮಪ್ಪ – ಇನ್ನೂ ಅನೇಕರು ಶಾಮರಾಯರ ವಾತ್ಸಲ್ಯದ ಸವಿಯನ್ನು ಬಲ್ಲವರು. ಅವರ ಪ್ರೀತಿ ನಿರ್ಮಲಗಂಗೆಯಂತೆ. ಅದಕ್ಕೆ ಜಾತಿ ಮತಗಳ ಸೋಂಕೇ ಇರಲಿಲ್ಲ. ಆ ಔದಾರ್ಯ ಯಾವ ಬಗೆಯದೆಂದರೆ ಅವರ ಮನೆಯಲ್ಲಿ ವಾರಾನ್ನ ಮಾಡಿಕೊಂಡು ಓದಿದವರ ಲೆಕ್ಕ ಅವರಿಗೇ ಹತ್ತಿರಲಾರದು. ಆ ಮನೆ ವಾಸ್ತವವಾಗಿ ಒಂದು ಅನ್ನಸತ್ರ ಎಂದು ಎಷ್ಟೋ ಸಲ ನನಗೆ ಅನ್ನಿಸಿದ್ದುಂಟು. ಶಾಮರಾಯರೇನೋ ಯಾವುದರ ಪರಿವೆಯೂ ಇಲ್ಲದೆ ಬಯಸಿದವರಿಗೆಲ್ಲ ತಮ್ಮ ಪ್ರೀತಿಯ ಸಹಾಯಹಸ್ತ ಚಾಚಿಬಿಡುತ್ತಿದ್ದರು. ಆದರೆ ಇಪ್ಪತ್ತೈದು ಮೂವತ್ತು ವರ್ಷಗಳ ಕಾಲ ಹೀಗೆ ಬಂದುಹೋಗುವ ಜನರನ್ನೆಲ್ಲ, ಒಂದು ಸಲವೂ ಹುಬ್ಬುಗಂಟು ಹಾಕದೆ ಉಪಚರಿಸಿ ಕಳಿಸುವುದಿದೆಯಲ್ಲ, ಅದು ಅಸಾಮಾನ್ಯವಾದದ್ದು. ಅದನ್ನು ನಿರ್ವಹಿಸಿದವರು ಅವರ ಸಧರ್ಮಿಣಿ ಶ್ರೀಮತಿ ಸುಬ್ಬಮ್ಮನವರು. ಶಾಮರಾಯರ ಪ್ರೀತಿ ಎಷ್ಟು ದೊಡ್ಡದೋ, ಅಷ್ಟೇ ದೊಡ್ಡದು ಸುಬ್ಬಮ್ಮನವರ ತಾಯಿಹೃದಯ.

ಮಹಾರಾಜ ಕಾಲೇಜಿನ ಉಪಾಧ್ಯಾಯರಲ್ಲೆಲ್ಲ ಕುವೆಂಪು ಅವರಿಗೆ ಬಹಳ ಆಪ್ತರಾಗಿದ್ದವರು ಶಾಮರಾಯರು. ಅವರು ಪುಟ್ಟಪ್ಪನವರ ಶಿಷ್ಯರೂ ಹೌದು. ರಾಮಾಯಣ ದರ್ಶನದ ಮೊದಲ ಓದುಗ ಶಾಮರಾಯರೇ. ಅದನ್ನು ಬರೆ ಬರೆದಂತೆ ಕುವೆಂಪು ಶಿಷ್ಯನಿಗೆ ಓದಿ ಹೇಳುತ್ತಿದ್ದರು. ಅವರಿಬ್ಬರೂ ಕೂಡಿ ಗಂಟೆಗಟ್ಟಲೆ ವಾಕಿಂಗ್ ಹೋಗುತ್ತಿದ್ದುದುಂಟು. ಈ ಪ್ರೀತಿಗೆ ಒಂದು ಹಿನ್ನೆಲೆಯೂ ಇತ್ತು. ಕುವೆಂಪು ಅವರಿಗೆ ಅತ್ಯಂತ ಪ್ರಿಯರಾದ ಗುರುಗಳೆಂದರೆ ಟಿ ಎಸ್. ವೆಂಕಣ್ಣಯ್ಯನವರು. ಅವರು ತಮ್ಮ ಬಾಳಿನಲ್ಲಿ ಹಾದುಹೋದ ಒಂದು ದಿವ್ಯಶಕ್ತಿ ಎಂದು ಕುವೆಂಪು ಭಾವಿಸಿದ್ದರು ಶಾಮರಾಯರು ಆ ವೆಂಕಣ್ಣಯ್ಯನವರ ತಮ್ಮ, ಅಣ್ಣನ ಗುಣಗಳನ್ನು ಭಟ್ಟಿ ಇಳಿಸಿಕೊಂಡವರು. ಶಾಮರಾಯರಿಗಂತೂ ಪುಟ್ಟಪ್ಪನವರು

ತಮ್ಮ ಹಿರಿಯಣ್ಣನೆಂಬಷ್ಟೇ ಪ್ರೀತಿ, ಗೌರವ. ಈ ನಂಟು ಒಂದು ಘಟ್ಟದಲ್ಲಿ ಎಷ್ಟು ಗಾಢವಾಗಿತ್ತೆಂದರೆ ಶಾಮರಾಯರು ಕುವೆಂಪು ಬರೆಹವನ್ನು ಕಟುವಾಗಿ ಟೀಕಿಸಿಯೂ ಆ ನಂಟು ಮಿಸುಕಾಡದೆ ಹಾಗೇ ಉಳಿದದ್ದುಂಟು.

ಪುಟ್ಟಪ್ಪನವರು ಬರೆದಿದ್ದ ಹಲವು ಕಥೆಗಳಲ್ಲಿ ತಮಗೆ ಕಂಡ ಅವಾಸ್ತವಿಕ ಅಂಶಗಳ ಬಗ್ಗೆ ಒಮ್ಮೆ ಶಾಮರಾಯರು ಒಂದು ಲೇಖನದಲ್ಲಿ ಪ್ರಸ್ತಾಪಿಸಿದ್ದರು. ಈ ವಿಷಯ ಅವರಿಬ್ಬರ ಮಧ್ಯೆ ಮತ್ತೆ ಚರ್ಚೆಗೆ ಬಂದಾಗ ಶಾಮರಾಯರು ಆಖೈರಾಗಿ ಹೇಳಿದರು. "ಮಾಸ್ತಿಯವರು ಕವನಗಳನ್ನು ಬರೆಯದಿದ್ದರೆ ಕಾವ್ಯಜಗತ್ತಿಗೆ ಯಾವ ಅನ್ಯಾಯವೂ ಆಗುವುದಿಲ್ಲ. ನೀವು ಕಥೆಗಳನ್ನು ಬರೆಯದಿದ್ದರೂ ಅಷ್ಟೆ. ಕಥಾಲೋಕಕ್ಕೇನೂ ನಷ್ಟವಿಲ್ಲ. ಕನ್ನಡದಲ್ಲಿ ಕಥೆಗಳಿಗೆ ಮಾಸ್ತಿ, ಕವನಗಳಿಗೆ ಕುವೆಂಪು ಅಗ್ರಗಣ್ಯರು." ಪುಟ್ಟಪ್ಪನವರು ಇದನ್ನು ಮಾತಿಲ್ಲದೆ ಒಪ್ಪಿಕೊಂಡರು. ಇನ್ನೊಂದು ಸಲ ಶಾಮರಾಯರು ಕುವೆಂಪು ಅವರಿಗೆ ಹೇಳಿದರು "ನೀವು ನಿಮ್ಮ ಬರವಣಿಗೆಯಷ್ಟು ದೊಡ್ಡವರಾಗಿಲ್ಲ. ಅಷ್ಟು ದೊಡ್ಡವರೇ ಆಗಬೇಕು." ಪುಟ್ಟಪ್ಪನವರ ವಿಮರ್ಶಾ ಸ್ವೀಕಾರದ ವಿಧಾನ ಎಷ್ಟು ಎತ್ತರದ ನೆಲೆಯದಾಗಿತ್ತೆಂದರೆ ಅವರು ಸ್ವಲ್ಪವೂ ಕೋಪಿಸಿಕೊಳ್ಳದೆ "ಹೌದು, ಅದು ನಿಮಗಿಂತ ಚೆನ್ನಾಗಿ ನನಗೇ ಗೊತ್ತಿದೆ" ಎಂದುಬಿಟ್ಟರು.

ಶಾಮರಾಯರು ಹತ್ತಾರು ವರ್ಷಗಳ ಕಾಲ ಕೇವಲ ಹಂಗಾಮಿ ಅಧ್ಯಾಪಕರಾಗಿದ್ದರು. ಕುವೆಂಪು ಆಗ ಕನ್ನಡ ವಿಭಾಗದ ಮುಖ್ಯಸ್ಥರು. ಲೌಕಿಕ ವ್ಯವಹಾರಗಳ ಕಡೆ ಅಷ್ಟಾಗಿ ಗಮನವಿರದ ಕುವೆಂಪು ಲಕ್ಷ್ಯಕ್ಕೆ ಇದು ಅಷ್ಟಾಗಿ ಬಂದಿರಲೇ ಇಲ್ಲ. ಒಮ್ಮೆ ಶಾಮರಾಯರನ್ನು ಕಂಡರೆ ಆಗದ ಒಬ್ಬ ಅಧ್ಯಾಪಕರು ತರಗತಿಯಲ್ಲಿ ಹುಡುಗರೆದುರು ಅವರನ್ನು ಪರೋಕ್ಷವಾಗಿ ನಿಂದಿಸಿದರು. "ಹೇಳಿ ಕೇಳಿ ಆತ ಒಬ್ಬ ಹಂಗಾಮಿ ಅಧ್ಯಾಪಕ. ನಾನು ಆತನಿಗಿಂತ ಸೀನಿಯರ್. ಆತ ನನ್ನ ಕೈಕೆಳಗಿನವರು" ಅಂದರು. ರೇಗಿದ ಹುಡುಗರು ಈ ವಿಷಯವನ್ನು ಕುವೆಂಪು ತನಕ ಒಯ್ದರು. ಶಾಮರಾಯರನ್ನು ಕರೆಸಿ ಕೇಳಿದಾಗ ಅವರಿನ್ನೂ ಹಂಗಾಮಿ ಅಧ್ಯಾಪಕರೆಂದೂ, ಸಂಬಳ ಕೇವಲ ಎಪ್ಪತ್ತೈದು ರೂಪಾಯಿ ಎಂದೂ ತಿಳಿದು ಕುವೆಂಪು ಹೌಹಾರಿದರು. ಅವತ್ತೇ ಉಪಕುಲಪತಿಗಳನ್ನು ಕಂಡು ಶಾಮರಾಯರಿಗಾಗಿರುವ ಅನ್ಯಾಯದ ಬಗ್ಗೆ ಗಂಭೀರವಾಗಿ ಚರ್ಚಿಸಿದರು. ಅದರ ಫಲವಾಗಿ ಶಾಮರಾಯರ ಸಂಬಳ ಒಂದೇ ಸಲಕ್ಕೆ ನೂರ ಎಪ್ಪತ್ತೈದು ರೂಪಾಯಿಗಳಿಗೆ ಜಿಗಿಯಿತು!

ಅಧ್ಯಾಪಕರೇ ಅಲ್ಲದೆ ಶಾಮರಾಯರು ಮೈಸೂರು ವಿಶ್ವವಿದ್ಯಾಲಯದ ಪ್ರಕಟನ ವಿಭಾಗದ ಮುಖ್ಯಸ್ಥರಾಗಿ ಮತ್ತು ಪುಸ್ತಕ ಭಂಡಾರದ ಗ್ರಂಥಪಾಲರಾಗಿ ತುಂಬ ಕೆಲಸ ಮಾಡಿದರು. ನಿವೃತ್ತರಾದ ಮೇಲೆ ಗುಬ್ಬಿಯ ಚಿದಂಬರಾಶ್ರಮಕ್ಕೆ

ಹೋಗಿ ಅಲ್ಲಿಯ ಹೈಸ್ಕೂಲನ್ನು ಒಂದು ಸ್ವರೂಪಕ್ಕೆ ತಿದ್ದಿ. ಹುಡುಗರಿಗೆ ಹಾಸ್ಟೆಲು ಸೌಕರ್ಯ, ಅಧ್ಯಾಪಕರಿಗೆ ವಸತಿಸೌಕರ್ಯ ಕಲ್ಪಿಸಿ ಬಂದರು.

'ಊರ ಉಸಾಬರಿ ಕಟ್ಟಿಕೊಂಡು ಕಾಸಿಂ ಸಾಬ ಕಂಗೆಟ್ಟ' ಅಂತ ಒಂದು ಗಾದೆ ಇದೆ. ಆದರೆ ಶಾಮರಾಯರ ವಿಷಯದಲ್ಲಿ ಈ ಗಾದೆ ಸುಳ್ಳಾಯಿತು. ತಮ್ಮ ಅಮಿತ ಜನಸಂಪರ್ಕ ಸ್ನೇಹಗಳ ನಡುವೆಯೂ ಅವರು ಸಾಕಷ್ಟು ಗ್ರಂಥರಚನೆ ಮಾಡಿದ್ದಾರೆ. ಅವರು ರಚಿಸಿರುವ 'ಶಿವಶರಣ ಕಥಾರತ್ನಕೋಶ' ಒಂದು ಬೃಹತ್ತಾದ, ಉಪಯುಕ್ತವಾದ ರೆಫರೆನ್ಸ್ ಗ್ರಂಥ. ತಮ್ಮ ಎಂ. ಎ. ಪದವಿ ಪಡೆಯಲು ಅವರು ಬರೆದ 'ಕನ್ನಡ ನಾಟಕ' ಎಂಬ ಮಹಾಪ್ರಬಂಧ ನಾಟಕವಿಮರ್ಶೆಯ ಕ್ಷೇತ್ರದಲ್ಲಿ ಆ ಬಗೆಯ ಮೊದಲ ಕೃತಿ. ಒಂದು ಮನೆತನದ ಮೂರು ಪೀಳಿಗೆಗಳ ಸಂಸ್ಕೃತಿ, ಜೀವನವಿಧಾನಗಳನ್ನು ಕಾದಂಬರಿಯಂತೆ ರಸವತ್ತಾಗಿ ನಿರೂಪಿಸುವ 'ಮೂರು ತಲೆಮಾರು' ಎಂಬ ಗ್ರಂಥ ರಾಜ್ಯ ಸಾಹಿತ್ಯ ಅಕಾಡೆಮಿಯ ವರ್ಷದ ಅತ್ಯುತ್ತಮ ಪುಸ್ತಕ ಪ್ರಶಸ್ತಿ ಪಡೆದಿದೆ. ಡಿಎಲ್ಎನ್‌ರವರ ಪಂಪಭಾರತ ದೀಪಿಕೆಯ ಮಾದರಿಯಲ್ಲಿ ಪ. ನಾಗರಾಜಯ್ಯನವರ ಜೊತೆಗೂಡಿ ಹೊರತಂದಿರುವ 'ಆದಿಪುರಾಣ ದೀಪಿಕೆ' ಒಂದು ವಿಶಿಷ್ಟ ವಿದ್ವದ್ಗ್ರಂಥ. ಅವರ ವಚನ ರಾಮಾಯಣ, ವಚನ ಭಾಗವತಗಳು ಎ. ಆರ್. ಕೃಷ್ಣಶಾಸ್ತ್ರಿಗಳ ವಚನ ಭಾರತದಂತೆ ಮನೋಜ್ಞವಾದ ಗದ್ಯಕೃತಿಗಳು. ಇವಲ್ಲದೆ ಮುದ್ದಣ, ಗುರುನಾನಕ್, ಟಿ. ಎಸ್. ವೆಂಕಣ್ಣಯ್ಯ ಎಂಬ ಪುಸ್ತಕಗಳನ್ನು ಅವರು ಬರೆದಿದ್ದಾರೆ. ಶಬ್ದಮಣಿದರ್ಪಣಕ್ಕೆ ವ್ಯಾಖ್ಯಾನ ರಚಿಸಿದ್ದಾರೆ. ಕುಮಾರವ್ಯಾಸ ಭಾರತದ ಹಲವು ಪರ್ವಗಳನ್ನು ಉಪಯುಕ್ತ ಮುನ್ನುಡಿಗಳ ಸಹಿತ ಸಂಪಾದಿಸಿ ಸಂಗ್ರಹಿಸಿದ್ದಾರೆ. ತಮ್ಮ ಅಣ್ಣವೆಂಕಣ್ಣಯ್ಯನವರಿಗೆ ಅವರು ಒಂದು ಸಂಭಾವನಾ ಗ್ರಂಥ ಹೊರತಂದು, ಅದನ್ನು ಮಾರಿ ಬಂದ ಲಾಭವನ್ನು ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಮುಡಿಪು ಮಾಡಿದ್ದಾರೆ. ತಮ್ಮ ಮನೆತನದ ತವರಾದ ತಳುಕಿನಲ್ಲಿ ಅಣ್ಣನ ಹೆಸರಿನಲ್ಲಿ ಒಂದು ದೊಡ್ಡ ಪುಸ್ತಕ ಭಂಡಾರವನ್ನು ರೂಪಿಸಿದ್ದಾರೆ.

ಮೈಸೂರು ವಿಶ್ವವಿದ್ಯಾಲಯ ಶಾಮರಾಯರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಅಭಿನಂದಿಸಿತು. ಸ್ನೇಹಿತರು, ಶಿಷ್ಯರು ಮತ್ತು ಇತರ ಸಾಹಿತಿಗಳು ಬರೆದ ಮೌಲಿಕ ಲೇಖನಗಳಿರುವ 'ಸೃಷ್ಟಿ' ಎಂಬ ಅಭಿನಂದನಾ ಗ್ರಂಥವನ್ನು ಅವರಿಗೆ ಅರ್ಪಿಸಲಾಗಿದೆ. ಜೈನ ಸಾಹಿತ್ಯಕ್ಕೆ ಅವರು ನೀಡಿದ ಕೊಡುಗೆಗಾಗಿ 'ಚಾವುಂಡರಾಯ ಪ್ರಶಸ್ತಿ' ನೀಡಿ ಗೌರವಿಸಲಾಗಿದೆ.

ಪರರಿಗೆ ಇಷ್ಟೊಂದು ಸಹಾಯವಾಗಿ ಬಾಳಿದ ಶಾಮರಾಯರು ಒಂದು ಹಂತದಲ್ಲಿ ತಾವು ಕೊಂಡು ವಾಸವಾಗಿದ್ದ ಮನೆಯನ್ನು ಮಾರಿದರು; ಬಾಡಿಗೆ

ಮನೆಯಲ್ಲಿ ವಾಸನಿಂತರು. ಆದರೂ ಅವರ ಮನಸ್ಥಿತಿ ಕದಡಲಿಲ್ಲ. ನಜೀರ ಸಾಬರಂಥ ಪ್ರಿಯಶಿಷ್ಯ, ಬಂಗಾರಪ್ಪನವರಂಥ ಭಾವುಕ ವಿದ್ಯಾರ್ಥಿ ತಮಗೆ ಸಹಾಯ ನೀಡಲು ಮುಂದೆ ಬಂದಾಗ ಅವರು ಕಷ್ಟದಲ್ಲಿದ್ದ ಇತರರಿಗೆ ಅವರಿಂದ ನೆರವು ಕೊಡಿಸಿದರು. ಇದು ಶಾಮರಾಯರು ತಮ್ಮ ಪರಿಚಿತ ಅಧಿಕಾರವರ್ಗವನ್ನು ಬಳಸಿದ ರೀತಿ.

ಶಾಮರಾಯರು ಹುಟ್ಟಿದ್ದು ಗೋಕುಲಾಷ್ಟಮಿಯ ದಿನ. ಅದಕ್ಕೇ ಅವರಿಗೆ ಶ್ಯಾಮ ಎಂಬ ಹೆಸರು. ಮೊನ್ನೆಗೆ ಅವರಿಗೆ ತೊಂಬತ್ತು ತುಂಬಿತು. ಇವತ್ತು ಭಾನುವಾರ ಅವರ ಜನ್ಮದಿನದ ಆಚರಣೆ ಇದೆ. ಅನೇಕ ಶಿಷ್ಯ ಪ್ರಶಿಷ್ಯರು ಅವರ ಮನೆಗೆ ಅಭಿನಂದನೆ ಹೇಳಲು ಬರುತ್ತಾರೆ. ದೇಹಾರೋಗ್ಯ ಚೆನ್ನಾಗಿಲ್ಲದೆ ಅವರು ಈಗ ಒಂದು ಮೂಲೆ ಹಿಡಿದಿದ್ದಾರೆ. ಆದರೇನು, ಬಾಗಿಲಲ್ಲಿ ಶಿಷ್ಯರ ದನಿ ಕೇಳಿಸಿದೊಡನೆಯೇ ಅವರು ಹುರುಪುಗೊಂಡು ಅಲ್ಲಿಂದಲೇ ಕೂಗುತ್ತಾರೆ. 'ಯಾರು ಭಟ್ಟನೇನೋ? ಅಯ್ಯೋ ಅಯೋಗ್ಯ! ಎಷ್ಟು ದಿನ ಮಾಡಿ ಬರೋದೋ? ಏಳು, ಏಳು, ಕಾಲು ತೊಳೆದುಕೊ. ಮೊದಲು ಊಟ ಮಾಡುವಿಯಂತೆ.'

●

ಶಾಮರಾಯರ ಲೆಕ್ಕ

ಕವಿತೆ ಬರೆವುದು ಕಷ್ಟ; ಅದಕಿಂತಲೂ ಕಷ್ಟ
ಬಾಳನ್ನೆ ಕವಿತೆ ಮಾಡುವುದು, ಬರೆಯುವುದಕ್ಕೆ
ಬೇಕು ಚತುರತೆ ಪ್ರತಿಭೆ. ಬಾಳಕವಿತೆಗೆ ಬೇಕು
ಹೃದಯದಾಳದ ಒಲುಮೆ, ಕರುಣೆ ವಾತ್ಸಲ್ಯಗಳೆ
ಮೈತಾಳಿದಂತೆ ಬಾಳಿದಿರಿ, ತಾಯಿಯೆ ಆಗಿ
ಬಳಿ ಬಂದ ಎಳೆಯರನು ಬಾಚಿ ಮೇಲೆತ್ತಿದಿರಿ;
ಔದಾರ್ಯಚರಿತರಿಗೆ ವಸುಧೆಯೆ ಕುಟುಂಬ
ಎಂಬ ಮಾತನ್ನು ನಿಜಮಾಡಿ ಬೀಗಿದಿರಿ.
ಅಣ್ಣ ವೆಂಕಣ್ಣಯ್ಯ ಬರೆದ ಮೇಲ್ಪಂಕ್ತಿಯನ್ನು
ದಿನ ದಿನಾ ಸರಿನೋಡಿ ಬರೆದದ್ದೆ ಬರೆದದ್ದು,
ದುಡಿದದ್ದನೆಲ್ಲ ಅವರಿವರ ಕಷ್ಟಕೆ ಸುರಿದು
ಇದ್ದ ಮನೆ ಮಾರಿ ಬಾಡಿಗೆ ಮನೆಯ ಹೊಕ್ಕದ್ದು;
ನಿಮ್ಮಂಥ ಅಪರೂಪದವರಿಗಷ್ಟೇ ಗೊತ್ತು
ಕೊಟ್ಟದ್ದು ಮಾತ್ರ ಉಳಿಯುವುದೆಂಬ ತತ್ವ,
ದಿನವೆಲ್ಲ ಕುಳಿತು ಕಂಪ್ಯೂಟರನು ಬಳಸಿದರು
ಬಿಡಿಸಬಾರದು ನಮಗೆ ಶಾಮರಾಯರ ಲೆಕ್ಕ.

– ಎಸ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಶ್ರೇಷ್ಠತೆ ಜನಪ್ರಿಯತೆಗಳ ಸಂಗಮ
ಕೆ. ಎಸ್. ನರಸಿಂಹಸ್ವಾಮಿ

ಮೂವತ್ತೆರಡು ವರ್ಷಗಳಷ್ಟು ಹಿಂದಿನ ಮಾತು. ಒಂದು ಮದುವೆ ಮನೆ. ಮದುವೆ ಮುಗಿದಿದೆ. ವರವಧು ಜೊತೆಗೇ ಕೂತಿದ್ದಾರೆ. ಸುತ್ತ ಹರೆಯದ ಹುಡುಗಿಯರ ಒಂದು ಗುಂಪು ಮುತ್ತಿಕೊಂಡು ಭಾರಿ ಗಲಾಟೆ ಎಬ್ಬಿಸಿದೆ. ಇಬ್ಬರ ಕೈಲೂ ಹಾಡು ಹೇಳಿಸಬೇಕು ಅಂತ ಅದರ ಹಟ. ಹುಡುಗಿ ನಾಚಿಹೋಗಿದ್ದಾಳೆ; ಏನು ಮಾಡಿದರೂ ಜಪ್ಪಯ್ಯ ಅನ್ನುತ್ತಿಲ್ಲ. ಕಡೆಗೆ ಹುಡುಗ 'ಇರಲಿ ಬಿಡಿ, ನಾನೇ ಮೊದಲು ಹಾಡುತ್ತೇನೆ' ಅಂತ ಹೇಳಿ ಹುಡುಗಿಯ ಕಡೆ ಮುಖ ಮಾಡಿಕೊಂಡು ಹಾಡು ಶುರುಮಾಡಿದ.

ನವಿಲೂರಿನೊಳಗೆಲ್ಲ
ನೀನೆ ಬಲು ಚೆಲುವೆ
ಅದಕೆ ನಮ್ಮಿಬ್ಬರಿಗೂ
ಈ ದಿನವೆ ಮದುವೆ

ತೆಳ್ಳ ತೆಳ್ಳಗೆ ಬೆಳ್ಳ-
ಬೆಳ್ಳಗಿಹೆ ನೀನು
ಬೇಟೆಗಾರನ ಬಿಲ್ಲಿ-
ನಂತಿರುವೆ ನೀನು

ಇಷ್ಟು ಕೇಳುತ್ತಿದ್ದಂತೆಯೇ ಹುಡುಗಿಯರಿಗೆ ಪರಮಾನಂದವಾಗಿ ಹೋಯಿತು. ಹೋ ಅಂತ ಉದ್ಗಾರ ಎದ್ದಿತು. ಎಲ್ಲರಿಗೂ ಖುಷಿಯೋ ಖುಷಿ. ನಾಚಿದ್ದ ಹುಡುಗಿಯ ಮುಖದಲ್ಲೂ ಅರಳಿದ ಮಲ್ಲಿಗೆಯಂಥ ಒಂದು ಮೋಹಕನಗು! ನನಗೆ ಅನ್ನಿಸಿತು. ಹುಡುಗ ಜಾಣ. ಕಂಠ ಎಂಥದೇ ಇರಲಿ, ಪಕ್ಕಾ ಹಾಡು ಆರಿಸಿಕೊಂಡು ಸಂದರ್ಭಕ್ಕೆ ಕೊಂಚ ಹೊಂದಿಸಿ ಪ್ರಯೋಗಿಸಿದ್ದಾನೆ!

ಆ ಹಾಡು ಬರೆದವರು ಕವಿ ಕೆ. ಎಸ್. ನರಸಿಂಹಸ್ವಾಮಿ. ಮೈಸೂರು ಮಲ್ಲಿಗೆಯ ಕವಿತೆ ಅದು. ಹಾಡಿದ ಹುಡುಗನಿಗೆ ಅದನ್ನು ಬರೆದ ಕವಿಯ ಹೆಸರೂ ಗೊತ್ತೋ ಇಲ್ಲವೋ, ಕವಿತೆಯಂತೂ ಗೊತ್ತಿದೆ. ಬರೆದ ಕವಿಯ ಆಸೆ ತಾನೆ ಇನ್ನೇನು? ತಮ್ಮ ಕವಿತೆಯೊಂದರಲ್ಲಿ ಅವರೇ ಹೇಳುತ್ತಾರೆ. ಗೋವು ಕರುಗಳ ಮಂದೆ ಕಣಿವೆಯನ್ನು ದಾಟುತ್ತದೆ. ಕರೆತಂದ ಗೊಲ್ಲ ಅದು ಎಬ್ಬಿಸಿದ ಹೊನ್ನಧೂಳಿಯಲ್ಲಿ ಹಿಂದೆ ಉಳಿಯುತ್ತಾನೆ; ಹಾಗೇ ಮರೆಯಾಗುತ್ತಾನೆ.

ಯಾವ ಕವಿತೆಗಳ ಮೂಲಕ ಜನ ತಮ್ಮ ಭಾವನೆಗಳನ್ನು ಹೇಳಲು ತೊಡಗುತ್ತಾರೋ ಅಂಥ ಕವಿತೆ ಬರೆದವನೇ ನಿಜವಾದ ಕವಿ. ನರಸಿಂಹಸ್ವಾಮಿ ತಮ್ಮ ಮೊದಲ ಸಂಕಲನವಾದ ಮೈಸೂರು ಮಲ್ಲಿಗೆಯಲ್ಲೇ ಇದನ್ನು ಸಾಧಿಸಿಬಿಟ್ಟರು. ನಾಡಿನ ಅಂತಃಕರಣವನ್ನು ಅವರಂತೆ ಆರಂಭದಲ್ಲೇ ಸೂರೆಗೊಂಡ ಕವಿ ಯಾರಿದ್ದಾರೆ? ಜೀವಜಾಲಕ್ಕೆಲ್ಲ ಮರುಳುಕವಿಸುವ ಪ್ರೀತಿಯ ಮಾಯೆಯೇ ವಸ್ತುವಾಗಿ ಅವರ ಕಾವ್ಯ ಹುಟ್ಟಿಬಂತು. ನವದಂಪತಿಗಳ ಪಿಸುಮಾತಿನಷ್ಟು ಸವಿಯಾದ ಅವರ 'ಮೈಸೂರು ಮಲ್ಲಿಗೆ'ಯನ್ನು ನಾಡಿಗೆ ನಾಡೇ ಸಡಗರದಿಂದ ಮುಡಿಗಿಟ್ಟುಕೊಂಡಿತು. 'ಮೈಸೂರು ಮಲ್ಲಿಗೆಯನ್ನು ತಂಗಾಳಿಗೊಡ್ಡಿದ ನರಸಿಂಹಸ್ವಾಮಿಯವರ ಪ್ರತಿಭೆ ಅಪ್ಸರೆಯಂತೆ. ಈ ಲಾವಣ್ಯ ಮಣ್ಣುನೆಲದಿಂದ ಬಂದದ್ದಲ್ಲ ಎನಿಸಿಬಿಟ್ಟಿದೆ' ಎಂದು ಕವಿ ಬೇಂದ್ರೆ ಬರೆದರು. 'ಕಸ್ತೂರಿಯ ನೆಲದಲ್ಲಿ ಕಾಮನಬಿಲ್ಲನ್ನು ಬಿತ್ತಿ ಬೆಳೆಯಿಸಿದ ಹೂದೋಟ' ಎಂದು ಡಿ. ಎಲ್. ನರಸಿಂಹಾಚಾರ್ಯರಂಥ ಶ್ರೇಷ್ಠ ವಿದ್ವಾಂಸರು ಹೊಗಳಿದರು. ಅಲ್ಲಿಂದಾಚೆ ಈ ಕವಿ ಉತ್ತಮೋತ್ತಮವಾದ ಇನ್ನೂ ಅನೇಕ ಕೃತಿಗಳನ್ನು ಜನದ ಮಡಿಲಿಗೆ ಹಾಕಿದ್ದಾರೆ. ಆದರೂ ಜನ ಮಲ್ಲಿಗೆಯನ್ನು ಬಿಟ್ಟುಕೊಟ್ಟಿಲ್ಲ. ನಾಲ್ಕು ವರ್ಷದ ಹಿಂದೆ ಅದರ ಹತ್ತೊಂಬತ್ತನೆಯ ಮುದ್ರಣ ಹೊರಬಂತು! ಕನ್ನಡದಲ್ಲಿ ಇಷ್ಟೊಂದು ಸಲ ಅಚ್ಚಾದ ಇನ್ನೊಂದು ಕವನಸಂಕಲನವೇ ಇಲ್ಲ.

ಕವಿಯ ಹೆಸರನ್ನು ತಿಳಿಯದ ಜನರೂ ಅವನ ಕವಿತೆಗಳನ್ನು ಪ್ರೀತಿಸಿ ಬಳಸುವುದು ಬಹುಶಃ ಜನಪ್ರಿಯತೆಯ ಪರಮಾವಧಿ. ನರಸಿಂಹಸ್ವಾಮಿ ಅಂಥ ಪಟ್ಟವನ್ನು ಅನಾಯಾಸ ಸಾಧಿಸಿದವರು. ಒಂದಿರುಳು ಕನಸಿನಲಿ, ಬಳೆಗಾರ ಚೆನ್ನಯ್ಯ, ಹತ್ತು ವರುಷದ ಹಿಂದೆ, ರಾಯರು ಬಂದರು, ಮದುವೆಯಾಗಿ ತಿಂಗಳಿಲ್ಲ, ಹೆಂಡತಿಯ ಕಾಗದ – ಇವೆಲ್ಲ ಅವರು ಮೊದಲ ಇನ್ನಿಂಗ್ಸಿನಲ್ಲೇ ಹೊಡೆದ ಸಿಕ್ಸರುಗಳು. ಪುಸ್ತಕ ನೋಡದೆ, ಕವಿಯ ಹೆಸರು ತಿಳಿಯದೆ, ಈ ಕವಿತೆಗಳು ಜನರ ಬಾಯಿಂದ ಬಾಯಿಗೆ ಹರಿದುಹೋದದ್ದುಂಟು. ಈ ಹಾಡುಗಳಲ್ಲಿನ ದಂಪತಿಗಳು ಸಾವುನೋವಿಲ್ಲದ ಗಂಧರ್ವರಾದರು; ನಾಡಿನ ಜನಕ್ಕೆ ಯೌವನದ ಪ್ರತಿನಿಧಿಗಳಾದರು.

ಸುಮಾರು ಹದಿನೆಂಟು ವರ್ಷಗಳ ಹಿಂದಿನ ಸಂಗತಿ. ನಾನು ಶಿವಮೊಗ್ಗದ ಬಸ್ ಹತ್ತಿದ್ದೆ. ಕೆ.ಎಸ್.ನ ಜೊತೆಗೆ ಸಿಕ್ಕರು. ಶಿವಮೊಗ್ಗದಲ್ಲಿ ಅವರನ್ನು ನನ್ನ ಭಾವನ ಮನೆಗೆ ಕರೆದುಕೊಂಡು ಹೋದೆ. ಒಳಗಿದ್ದ ಅಕ್ಕನ ಹತ್ತಿರ ಹೋಗಿ ಕೆ. ಎಸ್. ನರಸಿಂಹಸ್ವಾಮಿ ಬಂದಿದ್ದಾರೆ' ಎಂದೆ. ಅವಳಿಗೆ ತಿಳಿಯಲಿಲ್ಲ. 'ಕವಿಗಳು ಕಣೇ' ಎಂದೆ ತಿಳಿಯಲಿಲ್ಲ. 'ರಾಯರು ಬಂದರು ಮಾವನ ಮನೆಗೆ ಕವಿತೆ ಬರೆದವರು' ಎಂದೆ. ನನ್ನಕ್ಕ ಸಂಭ್ರಮದಿಂದ ಮೇಲೆದ್ದಳು. 'ನಮ್ಮ ಮನೆಗೆ ಬಂದಿದ್ದಾರೇನೋ!' ಎಂದಳು. ಹತ್ತು ವರ್ಷ ಚಿಕ್ಕವಳಂತೆ ಸಡಗರದಿಂದ ಓಡಾಡಿದಳು. ಅರ್ಧ ಗಂಟೆಯಲ್ಲಿ ಒಂದು ಬಿಸಿಬಿಸಿ ಅಡಿಗೆ ಸಿದ್ಧವಾಯಿತು. ಎಲೆ ಹಾಕಿ ಬಡಿಸಿ, ದೇವರಿಗೆ ತುಪ್ಪದ ದೀಪ ಹಚ್ಚಿಟ್ಟು ಪವಿತ್ರ ಭಾವದ ಒಂದು ಪುಟ್ಟ ಆತಿಥ್ಯ ನಡೆದುಹೋಯಿತು. ಬೆರಗಾಗಿ ನಾನು ಅಂದುಕೊಂಡೆ. "ಈ ಕವಿ ಅಂತಿಂಥವರಲ್ಲ. ಇವರ ಕಾವ್ಯ ಜನರ ಮನಸ್ಸಿನಲ್ಲಿ ತಮ್ಮ ಯೌವನದ ತೀವ್ರ ಸ್ಮರಣೆಯನ್ನು ಉಕ್ಕಿಸುತ್ತದೆ. ಇದೇ ಆ ಕಾವ್ಯಕ್ಕೆ ದೊರೆಯುವ ಗೌರವದ ರಹಸ್ಯ."

ನರಸಿಂಹಸ್ವಾಮಿಯವರ ಕವಿತೆ ಅವರು ಹೋಗದ ಕಡೆಯೆಲ್ಲ ಹೋಗಿದೆ. ಅವರಿಗೆ ತಿಳಿಯದ್ದನ್ನೆಲ್ಲ ಮಾಡಿದೆ. ಜನಕ್ಕೆ ಸಂತೋಷಕೊಟ್ಟದ್ದು ಮಾತ್ರವಲ್ಲ, ಕವಿಗೆ ಧನ್ಯಭಾವ ತರುವ ಪುಣ್ಯಕರವಾದ ಕೆಲಸವನ್ನೂ ಮಾಡಿದೆ. ಅದು ನನ್ನ ಒಂದು ಹೊತ್ತಿನ ಊಟ ಕಸಿದಿದ್ದೂ ಉಂಟು!

ಕೆ.ಎಸ್.ನ. ಅವರ ಒಬ್ಬ ಮಗ ಧಾರವಾಡದಲ್ಲಿ ಕೆಲಕಾಲ ಕೆಲಸಮಾಡುತ್ತಿದ್ದರು. ಮಗನನ್ನು ನೋಡಿ ಬರಲು ಕವಿ ಅಲ್ಲಿಗೆ ಹೋದರು. ಒಂದು ಸಂಜೆ ಅವರು ಮಾರ್ಕೆಟ್ಟಿನಲ್ಲಿ ತರಕಾರಿ ಕೊಂಡು ಬಸ್ಸು ಹತ್ತಿಕೂತಿದ್ದಾರೆ. ಕುರುಡು ಹುಡುಗನೊಬ್ಬ ಅದೇ ಬಸ್ಸು ಹತ್ತಿ ಭಿಕ್ಷೆ ಕೇಳುತ್ತ ಹಾಡತೊಡಗಿದ– 'ಅಂತಿಂಥ ಹೆಣ್ಣು ನೀನಲ್ಲ, ನಿನ್ನಂಥ ಹೆಣ್ಣು ಇನ್ನಿಲ್ಲ.' ಹಾಡು ಎಲ್ಲರ ಗಮನ ಸೆಳೆಯಿತು. ಸುತ್ತಮುತ್ತ ಕೂತಿದ್ದವರಿಂದ ಹುಡುಗನ ಕೈಗೆ ಕಾಸು ಬಿತ್ತು. ಹುಡುಗ ನರಸಿಂಹಸ್ವಾಮಿಯವರ ಹತ್ತಿರವೂ ಬಂದು ಹಾಡತೊಡಗಿದ. ಅವನಿಗೆ ತಿಳಿಯದು, ತಾನು ಹಾಡು ಒಪ್ಪಿಸುತ್ತಿರುವುದು ಅದನ್ನು ಬರೆದ ಕವಿಗೇನೇ ಅಂತ! ಕವಿ ಅವನ ಬೆನ್ನು ತಟ್ಟಿ ಕೈಗೆ ಎಂಟಾಣೆ ಹಾಕಿ ಭೇಷ್ ಎಂದರು. ಹುಡುಗ ಹೇಳಿದ: 'ಈ ಹಾಡು ಇಲ್ಲ ಜನಕ್ಕೆ ಇಷ್ಟ ಸಾರ್. ಇದನ್ನು ಹೇಳಿದಾಗೆಲ್ಲ ನನಗೆ ಹೆಚ್ಚು ಕಾಸು ಸಿಗುತ್ತದೆ.' ಕೇಳಿ ಕವಿಯ ಕಣ್ಣು ಒದ್ದೆಯಾಯಿತು. ಚಿಂತಿಲ್ಲ, ತಮ್ಮ ಕವಿತೆ ಇಲ್ಲಿಯತನಕ ಬಂದಿದೆ. ತಮಗೇ ತಿಳಿಯದೆ ಯಾರೋ ಬಡ ಹುಡುಗನೊಬ್ಬನ ಕಂಬನಿ ಒರೆಸುತ್ತಿದೆ. ಇದಕ್ಕಿಂತ ದೊಡ್ಡದು ಏನು ತಾನೇ ಇದೆ?

ನಾನು ಮೈಸೂರಿನಲ್ಲಿ ಓದುತ್ತಿದ್ದ ದಿನಗಳು. ಆಗ ನಾನು ವಾರಾನ್ನದ ಹುಡುಗ. ಆ ದಿನ ಪ್ರೊ. ಎಸ್. ವಿ. ರಂಗಣ್ಣನವರ ಮನೆಗೆ ರಾತ್ರಿಯ ಊಟಕ್ಕೆ ಹೊರಟಿದ್ದೇನೆ. ದಾರಿಯಲ್ಲಿ ಗಣೇಶ ಟಾಕೀಸ್ ಪಕ್ಕದಲ್ಲಿ ಒಂದು ಚಪ್ಪರ. ವೇದಿಕೆಯ ಮೇಲೆ ಒಬ್ಬ ಸ್ಫುರದ್ರೂಪಿ ಯುವಕ ಮ್ಯಾಂಡಲೀನ್ ನುಡಿಸುತ್ತ ತಾರಸ್ವರದಲ್ಲಿ ಅದ್ಭುತ ಎನ್ನುವಂತೆ ಹಾಡುತ್ತಿದ್ದಾನೆ. ಭಾರೀ ಜನಸಂದಣಿ. ರಸ್ತೆ ಬಂದಾಗಿ ಹೋಗಿದೆ. ವಾಹನಗಳೆಲ್ಲ ಬಲ್ಲಾಳ ಹೋಟೇಲಿನ ಪಕ್ಕದ ಕ್ರಾಸಿನಲ್ಲಿ ತಿರುಗಿ ಹೋಗುತ್ತಿವೆ. ಯುವಕ ಬೇಂದ್ರೆಯವರ ಕವಿತೆ ಹಾಡುತ್ತಿದ್ದಾನೆ. ಒಂದು ನಿಮಿಷ ಕೇಳಿ ಹೋಗೋಣ ಎಂದು ನಿಂತೆ. ಹಾಡು ಮುಗಿಯಿತು. ಇನ್ನೇನು ಹೊರಡಬೇಕು 'ರಾಯರು ಬಂದರು' ಎಂಬ ಗೀತೆ ಶುರುವಾಯಿತು. ಇದೊಂದನ್ನು ಕೇಳಿಬಿಡುವುದು ಅಂತ ತಡೆದೆ. ಮುಂದೆ 'ಬಳೆಗಾರ ಚೆನ್ನಯ್ಯ', 'ನವಿಲೂರಿನೊಳಗೆಲ್ಲ', 'ಹತ್ತು ವರುಷದ ಹಿಂದೆ', 'ಒಂದಿರುಳು ಕನಸಿನಲಿ' – ಇತ್ಯಾದಿ ಹಾಡಿನ ಮೇಲೆ ಹಾಡು. ಮಧುರವಾದ ಕವಿತೆ, ಮೋಹಕವಾದ ಗಾಯನ. ಒಂದಕ್ಕಿಂತ ಒಂದು ಚೆನ್ನ. ಹಾಡು, ಚಪ್ಪಾಳೆ; ಹಾಡು, ಚಪ್ಪಾಳೆ. ಏನೋ ಅರ್ಥವಾಗದ ಕುರುಡು ಮೋಡಿ. ಮಲ್ಲಿಗೆ ಮುಡಿದ ಹುಡುಗಿಯರು, ಮೀಸೆ ಚಿಗುರಿದ ಯುವಕರು, ಮೈಸೂರು ಮಲ್ಲಿಗೆಯ ಹಾಡುಗಳು – ಭ್ರಾಮಕವಾದ ವಾತಾವರಣ. ಈ ಯಕ್ಷಿಣಿಯಿಂದ ನಾನು ಎಚ್ಚರಾದಾಗ ಗಂಟೆ ಒಂಬತ್ತು ದಾಟಿದೆ! ವಾರದ ಹುಡುಗ ಅಷ್ಟು ತಡವಾಗಿ ಊಟಕ್ಕೆ ಹೋಗಬಹುದೆ? ಸರಿ, ಅಲ್ಲೇ ನಿಂತೆ. ಆ ರಾತ್ರಿ ನನ್ನನ್ನು ಹಾಗೆ ಮರುಳುಮಾಡಿ ಊಟ ಕಸಿದ ಕವಿ ಕೆ. ಎಸ್. ನರಸಿಂಹಸ್ವಾಮಿ; ಗಾಯಕ ಮೈಸೂರು ಅನಂತಸ್ವಾಮಿ.

ನರಸಿಂಹಸ್ವಾಮಿ ಹುಟ್ಟಿದ್ದು (೧೯೧೫) ಬೆಳೆದದ್ದು ಮೈಸೂರಿನಲ್ಲಿ. ಅವರ ತಂದೆ ಕಿಕ್ಕೇರಿ ಸುಬ್ಬರಾಯರು ಒಂದು ಬಟ್ಟೆಯಂಗಡಿಯಲ್ಲಿ ಗುಮಾಸ್ತರಾಗಿದ್ದರೂ ಸೊಗಸಾಗಿ ಪಿಟೀಲು ನುಡಿಸಲು ಕಲಿತವರು. ಅವರಿಗೆ ಹಿರಿಯ ಸಂಗೀತಗಾರರ ಸಂಪರ್ಕವೂ ಇತ್ತು. ಚಿಕ್ಕಂದಿನಿಂದ ಮಗ ಈ ನಾದದ ಧಾರೆಯಲ್ಲಿ ತೇಲಿ ಬೆಳೆದವನು. 'ನಿನ್ನ ಕೈಬೆರಳು ಉದ್ದವಾಗಿ ಚೆನ್ನಾಗಿವೆ; ಪಿಟೀಲು ನುಡಿಸಲು ಕಲಿತುಕೊ' ಎಂದು ಅಪ್ಪ ಮಗನನ್ನು ಪುಸಲಾಯಿಸಿದ್ದೂ ಉಂಟು. ಆದರೆ ಮಗ ಆ ದಿಕ್ಕಿಗೆ ಹೊರಳಲಿಲ್ಲ. ಹೀಗೆ ಒಂದರ್ಥದಲ್ಲಿ ತಂದೆಯ ಮಾತು ಮೀರಿದರೂ ಉತ್ತಮ ಸಂಗೀತಕ್ಕೆ ಕಡಮೆಯಿಲ್ಲದ ಕಾವ್ಯ ರಚಿಸಿ ಮತ್ತೊಂದರ್ಥದಲ್ಲಿ ಅದನ್ನು ನಡೆಸಿಕೊಟ್ಟರು.

ಕೆ.ಎಸ್.ನ. ಓದಿದ್ದು ಮಹಾರಾಜ ಹೈಸ್ಕೂಲು, ಯುವರಾಜ ಕಾಲೇಜು ಮತ್ತು ಸೆಂಟ್ರಲ್ ಕಾಲೇಜುಗಳಲ್ಲಿ, ಅವರು ಕುವೆಂಪು ಮುಖದಿಂದ ರಾಘವಾಂಕನ ಹರಿಶ್ಚಂದ್ರ ಕಾವ್ಯದ ಪಾಠ ಕೇಳಿದವರು. ವಾಸ್ತವವಾಗಿ ನರಸಿಂಹಸ್ವಾಮಿ ಕನ್ನಡದ ವಿದ್ಯಾರ್ಥಿಯೇ ಅಲ್ಲ. ಆದರೆ ಕವಿಯ ಪಾಠ ಕೇಳುವ ಆಸೆಯಿಂದ ಅವರ ತರಗತಿಗೆ ಹೋಗಿ ಕೂರುತ್ತಿದ್ದರು. ಆ ಕಾವ್ಯದ ಬಗೆಗೆ ಕುವೆಂಪು ಅವರು

ಮಾಡುತ್ತಿದ್ದ ವ್ಯಾಖ್ಯಾನ ರೋಮಾಂಚಕವಾಗಿರುತ್ತಿತ್ತು ಎಂದು ಕೆ.ಎಸ್.ನ ಈಗಲೂ ಹೇಳುವುದುಂಟು.

ಮನೆಯ ಹೊಣೆಗಾರಿಕೆ ಹೆಗಲಿಗೆ ಬಿತ್ತು. ಬಿ.ಎ. ಮುಗಿಸದೆ ಕೆ.ಎಸ್.ನ. ಹತ್ತೊಂಬತ್ತಕ್ಕೇ ಕಾಲೇಜು ಬಿಟ್ಟರು. ಬೇಗ ಮದುವೆಯಾಗಬೇಕೆಂದು ತಾಯಿಯ ಒತ್ತಾಯ. ಆ ಸಂಬಂಧದಲ್ಲಿ ಹೆಣ್ಣು ನೋಡಲು ಕೆ.ಎಸ್.ನ. ತಿಪಟೂರಿಗೆ ಹೋಗಬೇಕಾಯಿತು.

ಊರೊಳಗೆ ಹೋಗುವಾಗ ಸಂಜೆ ಐದು ಗಂಟೆ. ಸ್ಕೂಲು ಆಗ ತಾನೇ ಬಿಟ್ಟಿದೆ. ದಾರಿಯಲ್ಲಿ ಒಂದು ದೊಡ್ಡ ಹುಣಿಸೆಮರ. ಅದರ ಕೆಳಗೆ ನಾಲ್ಕೈದು ಹುಡುಗರು, ಒಂದು ಹುಡುಗಿ – ಸ್ಲೇಟು ಪುಸ್ತಕ ಹಿಡಿದುಕೊಂಡೇ ಹುಣಿಸೇಕಾಯಿಗೆ ಕಚ್ಚಾಡುತ್ತಿವೆ. ಲೊಟ್ಟೆ ಹುಳಿ ಕಾಯಿಗೆ ಬಡಿದಾಡುವ ಎಳಸುಗಳನ್ನು ನೋಡಿ ನಗುತ್ತ ಕೆ.ಎಸ್.ನ. ಹುಡುಗಿಯ ಮನೆ ಸೇರಿದರು. ವಿಶ್ರಾಂತಿ ಮುಗಿದು ತಿಂಡಿ ಕಾಫಿ ಆಯಿತು. ಇನ್ನು ಹುಡುಗಿಯನ್ನು ನೋಡಬೇಕು. ಹೆಣ್ಣಿನ ತಂದೆ ಸ್ವಲ್ಪ ಇಲ್ಲಿ ಬಂದು ಹೋಗಮ್ಮ ಅಂತ ಹುಡುಗಿಯನ್ನು ಕರೆದರು. ಜರತಾರಿ ಉಟ್ಟು, ಆಭರಣ ತೊಟ್ಟು ಹೂ ಮುಡಿದಿದ್ದ ಹುಡುಗಿಯೊಂದು ಬಂದು ನಿಂತಿತು. ನರಸಿಂಹಸ್ವಾಮಿ ತಲೆಯೆತ್ತಿ ನೋಡಿದರು. ಅವರ ಮುಖದ ಮೇಲೆ ಒಂದು ದೊಡ್ಡ ನಗು ಹರಡಿಕೊಂಡಿತು. ಬಂದು ನಿಂತಿದ್ದ ಹೆಣ್ಣು ಬೇರೆ ಯಾರೂ ಅಲ್ಲ, ಸ್ವಲ್ಪ ಹೊತ್ತಿನ ಕೆಳಗೆ ಹುಡುಗರ ಜೊತೆ ಹುಣಿಸೇಕಾಯಿಗೆ ಕಚ್ಚಾಡುತ್ತಿದ್ದ ಹುಡುಗಿಯೇ!

ಹದಿನಾರನೆಯ ವಯಸ್ಸಿಗೇ ನರಸಿಂಹಸ್ವಾಮಿ ತಮ್ಮ ಮೊದಲ ಕವನ ಬರೆದರು. ಕವನದ ಹೆಸರು 'ಕಬ್ಬಿಗನ ಕೂಗು'. ಮುಂದೆ 'ಶ್ರೀ'ಯವರ ಇಂಗ್ಲಿಷ್ ಗೀತೆಗಳು, ತೀನಂಶ್ರೀಯವರ ಒಲುಮೆ, ಜನಪದ ಗೀತೆಗಳು ಮತ್ತು ಬರ್ನ್ಸ್ ಕವಿಯ ಪ್ರೇಮ ಕವನಗಳು ಅವರ ಮೇಲೆ ಪ್ರಭಾವ ಬೀರಿದುವು. ಫಲವಾಗಿ ಮೈಸೂರು ಮಲ್ಲಿಗೆಯ ಹೂವುಗಳು ಒಂದೊಂದಾಗಿ ಅರಳಿದುವು.

ಮೈಸೂರು ಮಲ್ಲಿಗೆಯ ಕವನಗಳು ಈ ಕಾಲದ ಇತರ ಸಮರ್ಥ ಕವಿಗಳ ಪ್ರೇಮಗೀತೆಗಳಿಗಿಂತ ಭಿನ್ನವಾಗಿದ್ದು ತಮ್ಮದೇ ಸ್ವಂತಿಕೆ ಪಡೆದಿವೆ. ಎಚ್. ಎಸ್. ವೆಂಕಟೇಶಮೂರ್ತಿ ಹೇಳುವಂತೆ 'ಬೇಂದ್ರೆಯವರ ಕವಿತೆಗಳು ಬದುಕಿನ ರುದ್ರ ಅರಿವಿನ ಫಲಗಳು; ಕೆಂಡದ ಪದಕಗಳುಳ್ಳ ಕೊರಳ ಸರಗಳು. ಕುವೆಂಪು ಅವರ ಪ್ರೇಮಕವಿತೆಗಳು ಆಧ್ಯಾತ್ಮದ ಗುಂಗಿನವು; ಹವಳದ ಮಣಿಗಳ ಜೊತೆಗೆ ರುದ್ರಾಕ್ಷಿ ಪೋಣಿಸಿ ಕಟ್ಟಿದ ಮಾಲೆಗಳು. ನರಸಿಂಹಸ್ವಾಮಿಯವರ ಪ್ರೇಮಿಕವಿತೆಗಳು ಹದಿಹರೆಯದ ಮುಗ್ಧ ಪ್ರೇಮ ವಿರಹಗಳ ಮೋಹಕ ಚಿತ್ರಗಳು; ಹಸಿರು ಬೆರೆಸಿ ಕಟ್ಟಿದ ಚೆಲುವಾದ ಮಲ್ಲಿಗೆ ಹಾರಗಳು.'

ಮೈಸೂರು ಮಲ್ಲಿಗೆಯ ಕವನಗಳ ಮೂಲಕ ಎ. ಆರ್. ಕೃಷ್ಣಶಾಸ್ತ್ರಿ, ಟಿ. ಎಸ್. ವೆಂಕಣ್ಣಯ್ಯ, ತೀನಂಶ್ರೀ ಇವರೆಲ್ಲರ ಮೆಚ್ಚಿಗೆ ಗಳಿಸಿಕೊಂಡ ನರಸಿಂಹಸ್ವಾಮಿ ಮುಂದೆ ಐರಾವತ, ದೀಪದ ಮಲ್ಲಿ, ಇರುವಂತಿಗೆ, ಉಂಗುರ ಕವಿತಾ ಸಂಕಲನಗಳನ್ನು ಹೊರತಂದರು. ಅದು ಅವರ ಕಾವ್ಯಜೀವನದ ಮೊದಲ ಹಂತ. ಅಲ್ಲಿಯ ಬಹುಪಾಲು ಕವನಗಳು ಭಾವನಾತ್ಮಕವಾದ, ನವೋದಯ ಮನೋಧರ್ಮದ ರಚನೆಗಳು. ಅಲ್ಲಿ ಕಾವ್ಯಕ್ಕೆ ಹಾಡಿನ ಬೆಂಬಲವೂ ಉಂಟು ಆ ಕಾವ್ಯಸಾಮಗ್ರಿ ಸಹ ರಾಗಾಪೇಕ್ಷಿಯಾದದ್ದೆ. ಮುಂದೆ ಕಾವ್ಯವನ್ನು ಕುರಿತ ಅವರ ಚಿಂತನೆ ಇನ್ನಷ್ಟು ಬೆಳೆಯಿತು; ಕಾವ್ಯಕ್ಕೂ ಗದ್ಯಕ್ಕೂ ನಡುವಿನ ಅಂತರ ತೀರ ಹೆಚ್ಚಿನದಾಗಿ ಕಂಡಿತು; ಕವಿತೆ ಮಾತಿಗೆ ಹತ್ತಿರವಾಗಿರುತ್ತ ಗದ್ಯದಿಂದ ಪುಷ್ಟಿ ಪಡೆಯಬೇಕು ಅನಿಸಿತು. ಅಡಿಗ ಅನಂತಮೂರ್ತಿಯವರಂಥ ಚಿಂತನಶೀಲರ ವಿಚಾರಗಳ ಪ್ರಭಾವ ಅವರ ಮೇಲೆ ಆಗಿರಬೇಕು. ಅವರ ಕಾವ್ಯದ ಅಭಿವ್ಯಕ್ತಿ ಬದಲಾಯಿತು. ಫಲವಾಗಿ 'ಶಿಲಾಲತೆ', 'ಮನೆಯಿಂದ ಮನೆಗೆ' ಎಂಬ ಹೊಸಬಗೆಯ ಕವನಸಂಗ್ರಹಗಳು ಹೊರಬಂದವು.

ಮೇಲೆ ಹೇಳಿದ ಎರಡು ಕೃತಿಗಳು ಕೆ.ಎಸ್.ನ. ಅವರ ಅಸಾಮಾನ್ಯವಾದ ರೂಪಕಶಕ್ತಿಗೆ ಸಾಕ್ಷಿ ಎನ್ನಬಹುದು. ಆ ಸಂಗ್ರಹಗಳಲ್ಲಿರುವ ಗಡಿಯಾರದಂಗಡಿಯ ಮುಂದೆ, ಬರಿಗೊಡಗಳಿಗೆ ಸಮಾಧಾನ, ಬಿಳಿಯ ಹೂಗಳ ಕವಿತೆ, ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ, ಬುದ್ಧಸ್ಮಿತ, ಮನೆಯಿಂದ ಮನೆಗೆ, ಬೆಟ್ಟದ ಮುಡಿಯ ಬೆಳಕು ಮೊದಲಾದ ಕವನಗಳು ಯಾವ ಕವಿಗೂ ಕೀರ್ತಿ ತರುವಂಥವು. ಅವು ಹೆಜ್ಜೆ ಹೆಜ್ಜೆಗೂ ಥಳಥಳಿಸುವ ರೂಪಕಗಳಿಂದ ಇಡಿಕಿರಿದಿದ್ದು ಕಡೆದಿಟ್ಟ ರತ್ನಮಾಲೆಯಂತಿವೆ. ನಮ್ಮ ಹಿರಿಯ ವಿಮರ್ಶಕರಾದ ಕೀರ್ತಿನಾಥ ಕುರ್ತಕೋಟಿಯವರು ಹೇಳುವಂತೆ 'ಜೀವನದ ಸಣ್ಣ ಸಣ್ಣ ಅನುಭವಗಳೂ ಕೂಡ ಕವಿಕಲ್ಪನೆಯ ಸಹಾಯದಿಂದ ಕೈಕಾಲು ರೆಕ್ಕೆಗಳನ್ನು ಪಡೆದು ಪ್ರತ್ಯಕ್ಷವಾಗುವಂತೆ ಈ ಪ್ರತಿಮೆಗಳ ಸೌಂದರ್ಯವಿದೆ. ಈ ಪ್ರತಿಮೆಗಳು ಕವಿಯ ತೀವ್ರವಾದ ಕಲ್ಪನಾಶಕ್ತಿಯ ಫಲಗಳಾಗಿವೆ.' ಕೆ.ಎಸ್.ನ. ಅವರನ್ನು ಕಾವ್ಯಕರ್ಮದ ಕೌಶಲ್ಯಕ್ಕಾಗಿ ಹೀಗೆ ಪ್ರಶಂಸಿಸಿದ – ವಿಮರ್ಶಕರೇ ಅವರ ಕವಿತೆಗಳಲ್ಲಿ ಕೆಲವು ಕಡೆ ಪ್ರತಿಮೆಗಳಿಗೆ ಕವಿತೆಯ ಕೇಂದ್ರ ಆಶಯದೊಡನೆ ಸಾವಯವ ಸಂಬಂಧ ಇಲ್ಲದಿರುವುದನ್ನೂ ಎತ್ತಿ ತೋರಿಸಿದರು.

ವಿಮರ್ಶಕರ ಆಕ್ಷೇಪಣೆಯನ್ನು ಗಂಭೀರವಾಗಿ ತೆಗೆದುಕೊಂಡದ್ದರ ಫಲವಿರಬಹುದು; ಕೆ.ಎಸ್.ನ. 'ತೆರೆದ ಬಾಗಿಲು' ಎಂಬ ತಮ್ಮ ಮುಂದಿನ ಕಾವ್ಯ ಸಂಗ್ರಹದಲ್ಲಿ ಬೇರೊಂದು ಬಗೆಯ ಅಭಿವ್ಯಕ್ತಿಗೆ ಯತ್ನಿಸಿ ಸಫಲರಾದರು. ಕವನದ ನಡುವಿನ ಬಿಡಿರೂಪಕಗಳು ಬದಿಗೆ ಸರಿದು ಇಡಿಯ ಕವನವೇ ಒಂದು ರೂಪಕವಾಗುವಂಥ ಹೊಸ ರೀತಿಗೆ ಈ ಸಂಕಲನ ಬಾಗಿಲು ತೆರೆಯಿತು. ಹೀಗೆ

ನರಸಿಂಹಸ್ವಾಮಿಯವರ ಕಾವ್ಯ ಮೂರು ಹಂತಗಳಲ್ಲಿ ಬೆಳೆದಿದೆ. ತನ್ನ ಕಾಲದಲ್ಲಿ ನಡೆದ ಕಾವ್ಯಕ್ರಾಂತಿಗಳಲ್ಲಿ ಪಾಲುಗೊಳ್ಳುತ್ತ, ಜೊತೆಗೇ ಅವುಗಳನ್ನು ಮೀರುತ್ತ, ಬದಲುತ್ತ, ಉದ್ದಕ್ಕೂ ಹೊಸಬನಾಗುತ್ತ ನಡೆದ ಯೇಟ್ಸ್ ಕವಿಯ ಕಾವ್ಯಜೀವನವನ್ನು ನೆನಪಿಸುವಂತೆ ಈ ಕವಿ ತಮ್ಮ ಕಾವ್ಯಪಥದಲ್ಲಿ ಎಲ್ಲೂ ತಡೆದು ನಿಲ್ಲದೆ ಒಂದೊಂದೇ ಹಂತವೇರುತ್ತ ಸಾಗಿದ್ದಾರೆ; ತಮ್ಮ ಕಾವ್ಯವನ್ನು ಹಸಿರಾಗಿ ಉಳಿಸಿಕೊಂಡಿದ್ದಾರೆ. ಹಿಂದಿನ ಸಂಕಲನಗಳಲ್ಲಿನ ಚಿತ್ರಸಮೃದ್ಧ ಭಾಷೆಗೂ ಇಲ್ಲಿಯ ನಿರಲಂಕಾರ ಭಾಷೆಗೂ ಭಾರಿ ಅಂತರವೇ ಇದೆ. ಪತ್ತಲ ಉಟ್ಟು, ಆಭರಣ ತೊಟ್ಟು, ನೀಳ ಜಡೆಯಲ್ಲಿ ಹೂ ಮುಡಿದು ಪೇಟೆಗೆ ಹೊರಟ ಸಾಲಂಕೃತ ಹೆಣ್ಣಿನಂತಿದ್ದ ಭಾಷೆ, ದಿನನಿತ್ಯದ ಸೀರೆಯಲ್ಲಿ, ಒಂದು ಗೌರಿಗಂಟು ಹಾಕಿಕೊಂಡು ಮನೆಗೆಲಸದಲ್ಲಿ ತೊಡಗಿರುವ ಸಂತೃಪ್ತ ಗರತಿಯಂತೆ ಬದಲಾಗಿದೆ. ಪ್ರತಿ ಪದ್ಯದಲ್ಲೂ ಒಂದು ಗಟ್ಟಿಮುಟ್ಟಾದ ಸಂಗತಿಯ, ಕಡೆದಿಟ್ಟಂತೆ ಖಚಿತವಾದ, ಮಿತಮಾತಿನ ವರ್ಣನೆಯಿದೆ. ಇವುಗಳಲ್ಲಿ ಹೆಚ್ಚಿನವು ನೇರ ಅರ್ಥಕ್ಕೆ ಮಾತ್ರವೇ ಬದ್ಧವಾಗದೆ, ಅದರಾಚೆಗಿನ ಇನ್ನೂ ವಿಶಾಲವಾದ ಅರ್ಥಪ್ರಾಂತ್ಯಗಳನ್ನು ಕವಿಯುತ್ತವೆ. ತೆರೆದ ಬಾಗಿಲು, ಸಾಕುಮಗ, ಭೂತಗನ್ನಡಿ, ಮುಚ್ಚಿದ ಕಿಟಕಿ – ಇವೆಲ್ಲ ಅಂಥ ಕವನಗಳು. ಕಡೆಯಲ್ಲಿ ಋತುವೈಭವ ಎಂಬ ಸೊಗಸಾದ ಗೀತಗುಚ್ಛವಿದೆ. ಇದು ವರ್ಷದ ಆರೂ ಋತುಗಳ ಮನೋಹರವಾದ ಚಿತ್ರಮಾಲೆ. ಇವು ಕಾಳಿದಾಸನ ಋತುಸಂಹಾರದ ಕೆಲವು ಭಾಗಗಳಿಗೆ ಎಣೆಯಾಗಿವೆಯೆಂದರೆ ಖಂಡಿತ ಉತ್ಪ್ರೇಕ್ಷೆಯಲ್ಲ. ಕೇಂದ್ರ ಸಾಹಿತ್ಯ ಅಕಾಡೆಮಿ ಈ ಕವನ ಸಂಗ್ರಹಕ್ಕೆ ರಾಷ್ಟ್ರಪ್ರಶಸ್ತಿ ನೀಡಿ ಕವಿಯನ್ನು ಗೌರವಿಸಿತು.

ಉಪವನ ಈ ಕವಿಯ ಗದ್ಯ ಬರೆಹಗಳ ಒಂದು ಸಂಗ್ರಹ. ಅದರಲ್ಲಿರುವ 'ನಾಯಿ ಮಲ್ಲಿಗೆ' ಮತ್ತು 'ತುಂಗಭದ್ರೆ' ಎಂಬ ಪ್ರಬಂಧಗಳು ಘನಿಸಿದ ಕಾವ್ಯವೆನ್ನುವಷ್ಟು ಸೊಗಸಾಗಿವೆ. ಅವರ ವಿಮರ್ಶೆ ಕೂಡ ಗಮನಿಸಬೇಕಾದದ್ದು. 'ಮಿಂಚಿದ ಮಾತಿಗೆ ಕರುಣೆಯ ಅಂಚಿದ್ದರೆ ಚೆನ್ನಾಗಿತ್ತು', 'ಬೇಂದ್ರೆಯವರ ಭಾವಗೀತ ನಕ್ಷತ್ರಗಳನ್ನು ಮೆಟ್ಟಿದ ರತ್ನಗಂಬಳಿ', 'ಮಾಸ್ತಿಯವರು ಕವಿತೆಯಲ್ಲಿ ಕಷ್ಟಪಡುವವರೂ ಅಲ್ಲ, ಕಷ್ಟ ಕೊಡುವವರೂ ಅಲ್ಲ. ಇದು ಅವರ ಸಾಹಿತ್ಯದ ಅಹಿಂಸಾಯೋಗ'– ಇದು ನರಸಿಂಹಸ್ವಾಮಿಯವರ ಮಾತಿನ ವೈಖರಿ.

ಮೈಸೂರು ಮಲ್ಲಿಗೆಯ ಪ್ರೇಮಕವಿಗೆ ಹೆಣ್ಣುಕೊಟ್ಟ ಊರು ಕುವೆಂಪು ಅವರಿಗೆ ಹೆಣ್ಣು ಕೊಟ್ಟ ಶಿವಮೊಗ್ಗವೇ. ಹದಿಮೂರು ವರ್ಷಗಳ ಕೆಳಗೆ ಆ ಊರಿನಲ್ಲಿ ಸಾಹಿತ್ಯ ಸಮ್ಮೇಳನ ನಡೆಯಿತಷ್ಟೆ. ಆಗ ಕವಿಗೋಷ್ಠಿಯ ಅಧ್ಯಕ್ಷ ಪೀಠಕ್ಕೆ ಆಯ್ಕೆಯಾದದ್ದು ಆ ಊರಿನ ಅಳಿಯನೇ! ಜೊತೆಗೆ ಪರಿಷತ್ತು ತನ್ನ ಸುವರ್ಣ ಮಹೋತ್ಸವದಲ್ಲಿ ಕಾವ್ಯಕ್ಕಾಗಿ ಅವರನ್ನು ಗೌರವಿಸಿತು. ಅದಕ್ಕೆ ಮೊದಲೇ ನಾಡಿನ

ಕವಿ – ವಿಮರ್ಶಕರೆಲ್ಲ ಸೇರಿ ನರಸಿಂಹಸ್ವಾಮಿಗಳಿಗೆ 'ಚಂದನ' ಎಂಬ ಒಂದು ಅಭಿನಂದನ ಗ್ರಂಥವಿತ್ತು ಸನ್ಮಾನಿಸಿದ್ದರು.

ತಂದೆ ಸುಬ್ಬರಾಯರು, ತಾಯಿ ನಾಗಮ್ಮ, ಪತ್ನಿ ವೆಂಕಮ್ಮ, ನಾಲ್ಕು ಗಂಡು ನಾಲ್ಕು ಹೆಣ್ಣು ಮಕ್ಕಳಿರುವ ನರಸಿಂಹಸ್ವಾಮಿ ಸಂತತವಾದ ಕಷ್ಟಗಳ ಕಾಡಿನ ನಡುವೆಯೂ ನಿರ್ಮಲವಾದ ತೊರೆಯಂತೆ ಹರಿದು ಬಂದವರು. ಹೌಸಿಂಗ್ ಬೋರ್ಡಿನಲ್ಲಿ ಕೆಲಸಮಾಡಿ ನಿವೃತ್ತರಾದ ಈ ಕವಿ ತಮ್ಮ ಎಪ್ಪತ್ತೆರಡನೆಯ ವಯಸ್ಸಿನಲ್ಲಿ ಬಹಳ ಕಷ್ಟದಿಂದ ಒಂದು ಸ್ವಂತಮನೆ ಕಟ್ಟಿಕೊಂಡಿದ್ದಾರೆ ಎಂದರೆ ಅವರ ಜೀವನ ಎಷ್ಟು ಪ್ರಾಮಾಣಿಕವಾದದ್ದು ಎಂದು ತಿಳಿದೀತು. ಈಗಲೂ ಅವರು ತೊಂದರೆಗಳ ನಡುವೆಯೇ ಹೋರಾಡಿಕೊಂಡು ಇದ್ದಾರೆ. ಆದರೆ ಬದುಕಿನಲ್ಲಿ ಪಟ್ಟ ಬವಣೆಯಿಂದ ಅವರ ದೃಷ್ಟಿ ವ್ಯಗ್ರವಾಗಲಿಲ್ಲ, ಅವರ ಜೀವನಪ್ರೀತಿ ಕುಗ್ಗಲಿಲ್ಲ. ಅದ್ದರಿಂದಲೇ, ಕುರ್ತಕೋಟಿಯವರು ಹೇಳುವಂತೆ 'ಬದುಕಿನ ನಿರ್ಮಲವಾದ ಆನಂದ ಕೆ.ಎಸ್.ನ. ಕಾವ್ಯದ ಜೀವಾಳವಾಗಿ ನಿಂತಿದೆ.'

●

ಕೆ. ಎಸ್. ನರಸಿಂಹಸ್ವಾಮಿ

ಶಬ್ದಕೋಶವ ಎಸೆದು ಜನದ ನಾಲಿಗೆಯಿಂದ
ಮಾತನೆತ್ತಿದ ಜಾಣ, ನೇರ ಗಿಡದಿಂದಲೇ
ಹೂವ ಬಿಡಿಸುವ ಧ್ಯಾನ; ತೊಟ್ಟ ಮಾತೆಲ್ಲವೂ
ಗುರಿಗೆ ತಪ್ಪದ ಬಾಣ. ಕವಿತೆ ಜೊತೆ ಮೊದಲೆಲ್ಲ
ಮನ್ಮಥ ಮಹೋತ್ಸವ, ಪ್ರೀತಿಗೆ ರಥೋತ್ಸವ.
ಮಲ್ಲಿಗೆಯ ಹೆದೆಯಲ್ಲಿ ಹೂಡಿ ಚಿಮ್ಮಿದ ನುಡಿಗೆ
ಇಡಿಯ ನಾಡೇ ಸ್ತಬ್ಧ, ಸಂತೃಪ್ತ. ಆದರೂ
ಜೊತೆಯವರ ಕೊಂಕುನುಡಿ: "ಎಷ್ಟು ದಿನ ನಡೆದೀರಿ
ಸೀರೆಯ ಸೆರಗ ಹಿಡಿದು? ಬಿಟ್ಟು ಬಿಡಿ" ಬಿಟ್ಟ ಕವಿ,
ಹತ್ತಿ ಹಚ್ಚಿದ ಶಿಖರದಿಂದ ಶಿಖರಕ್ಕೇರಿ
ಬೆಟ್ಟದ ಮುಡಿಗೆ ಬೆಳಕ. ಕಣಿವೆಯಾಳಕ್ಕೂ ಈಗ
ಮಾತನಾಡುವ ತನಕ, ಟೀಕಾಕಾರ ಮೂಕ.
ನಿಮ್ಮಂತೆ ಅರಳಿ, ಸುತ್ತೆಲ್ಲ ಪರಿಮಳ ಚೆಲ್ಲಿ ಯಾರು ಬಾಳಿದರು?
ಜನರ ಎದೆಎದೆಯಲ್ಲೂ ಸಿಂಹಾಸನವೇರಿ ಯಾರು ಆಳಿದರು?

– ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಹೊಸ ಕಾವ್ಯಮಾರ್ಗದ ಪ್ರವರ್ತಕ ಗೋಪಾಲಕೃಷ್ಣ ಅಡಿಗ

೧೯೯೨ರ ನವಂಬರ್ ಐದನೇ ತಾರೀಖು; ಬೆಳಿಗ್ಗೆ ಎಂಟೂವರೆ ಗಂಟೆ. ಜಯನಗರದಲ್ಲಿ ಕವಿ ಗೋಪಾಲಕೃಷ್ಣ ಅಡಿಗರ ನಿವಾಸ. ವಿಶಾಲವಾದ ನಡುಮನೆಯಲ್ಲಿ ಮಂಚದ ಮೇಲೆ ಮಲಗಿರುವ ಅಡಿಗರ ಕಳೇಬರ. ಮುಖ ಮಾತ್ರ ಬಿಟ್ಟು ಉಳಿದೆಲ್ಲ ಭಾಗ ಪುಷ್ಪಹಾರ, ಗಂಧದ ಹಾರ ತುರಾಯಿಗಳಿಂದ ಮುಚ್ಚಿಹೋಗಿದೆ. ಮನೆಯ ಒಳಗೆ, ಹೊರಗೆ ಸಾಹಿತಿಗಳು, ಕಲಾವಿದರು, ಬಂಧುಗಳು ತುಂಬಿಹೋಗಿದ್ದಾರೆ. ಒಳಗೆ ಕೂತ ಗಾಯಕ ಅಶ್ವತ್ಥರಿಗೆ ಯಾರೋ ಹೇಳಿದರು: "ಎರಡು ಕವಿತೆ ಹೇಳಿ ನಿಮ್ಮ ಶ್ರದ್ಧಾಂಜಲಿ ಸಲ್ಲಿಸಿಬಿಡಿ." ನೋವಿನಲ್ಲೂ ಸ್ಫುರಣಗೊಂಡು ಅಶ್ವತ್ಥ ಹಾಡತೊಡಗಿದರು.

ಅಮೃತವಾಹಿನಿಯೊಂದು
ಹರಿಯುತಿದೆ ಮಾನವನ
ಎದೆಯಿಂದ ಎದೆಗೆ ಸತತ

ಗೀತೆ ಮುಗಿಯುತ್ತಿದ್ದಂತೆ ಅಲ್ಲಿಯೇ ಇದ್ದ ರತ್ನಮಾಲಾ, ಮಾಲತಿ ಒಟ್ಟಾಗಿ ದನಿಗೂಡಿಸಿದರು.

ಯಾವ ಮೋಹನ
ಮುರಲಿ ಕರೆಯಿತು
ದೂರ ತೀರಕೆ ನಿನ್ನನು?
ಯಾವ ಬೃಂದಾ-
ವನವು ಸೆಳೆಯಿತು
ನಿನ್ನ ಮಣ್ಣಿನ ಕಣ್ಣನು?

ಹಾಡುವವರ, ಕೇಳುವವರ ಎಲ್ಲರ ಕಣ್ಣಲ್ಲೂ ನೀರು. ಸಂದರ್ಭವೇ ಕಾರಣವಾಗಿ ಸ್ವತಃ ಕವಿಗೇ ಅನ್ವಯವಾಗುತ್ತಿರುವ ಅವನ ಸಾಲುಗಳು ! ಕವಿ ಯಾವುದೋ ಮೋಹನ ಮುರಳಿಯ ಕರೆಯ ಬೆನ್ನು ಹತ್ತಿದವನಂತೆ ಸಾಗಿದ್ದರೂ ಅವನು ಸೃಷ್ಟಿಸಿದ ಅಮೃತವಾಹಿನಿ ಅವನ ನಂತರವೂ ಕಾವ್ಯಪ್ರೇಮಿಗಳ ಎದೆಯಿಂದ ಎದೆಗೆ ಹರಿಯುತ್ತಿದೆ: ಕೇಳುವ ಎಲ್ಲರ ಮನಸ್ಸನ್ನು ಆರ್ದ್ರಗೊಳಿಸಿ ಹರಿಯುತ್ತಿದೆ!

ಶರೀರ ಸಾಗಿಸುವ ಮುಂಚೆ ಕಡೆಯ ವಿಧಿಯಾಗಿ ಬಂಧುಗಳು ಅದರ ಬಾಯಿಗೆ ಅಕ್ಕಿಯ ಕಾಳು ಹಾಕಬೇಕು. ಅದು ಶುರುವಾಯಿತು. ಎಷ್ಟೋ ಜನ ಕವಿಗಳು, ವಿಮರ್ಶಕರು ಸಾಲಲ್ಲಿ ಬಂದು ನಿಂತರು. ಪುರೋಹಿತರು ಹೇಳಿದರು "ಎಲ್ಲರೂ ಅಲ್ಲ, ಬಂಧುಗಳು ಮಾತ್ರ." ಸಾಲಲ್ಲಿ ನಿಂತಿದ್ದ ಕವಿ ಲಕ್ಷ್ಮಣರಾವ್ ಹೇಳಿದರು. "ನಮ್ಮ ಎದೆಯಲ್ಲಿ ಕವಿತೆಯ ಬೆಳಕು ಹಚ್ಚಿ ಹೊಸಜನ್ಮ ಕೊಟ್ಟ ತಂದೆ ಇವರು. ನಾವೂ ಪಿತೃಋಣ ಸಲ್ಲಿಸಬೇಕು. ನಾವೂ ಹಾಕುತ್ತೇವೆ."

ಮನಸ್ಸು ದ್ರವಿಸಿ ಹೋಗುವ ಶೋಕದ ವಾತಾವರಣ. ಹೊರಗೆ ನಿಂತಿದ್ದ ಹೆಸರಾದ ಕವಿ – ವಿಮರ್ಶಕರ ಗುಂಪೊಂದರ ನಡುವೆ ಶೋಕದಿಂದಾಗಿ ಉಕ್ಕಿದ ಕ್ರೋಧ ಹೊಗೆಯಾಡುತ್ತಿತ್ತು. "ಜಗತ್ತಿನ ಅತ್ಯಂತ ಶ್ರೇಷ್ಠ ಕವಿಗಳ ಕಾವ್ಯವನ್ನೆಲ್ಲ ನಾವು ಓದಿದ್ದೇವಲ್ಲ. ಅಡಿಗರು ಅವರಲ್ಲಿ ಯಾರಿಗೆ ಕಡಮೆ? ಅಷ್ಟೇ ಅಲ್ಲ, ಸ್ವೋಪಜ್ಞತೆಯ ದೃಷ್ಟಿಯಿಂದ ಅವರಲ್ಲಿ ಹಲವರಿಗಿಂತ ಸ್ಪಷ್ಟವಾಗಿ ಮೇಲಿನವರು. ಆದರೆ ಜ್ಞಾನಪೀಠ, ಪಂಪ ಪ್ರಶಸ್ತಿ ಯಾವುದೂ ಅವರ ಹತ್ತಿರ ಬರಲಾರದೆ ಹೋದವು. ಎಲ್ಲ ದರಿದ್ರ ರಾಜಕಾರಣ!"

ಚಾಮರಾಜಪೇಟೆ ರುದ್ರಭೂಮಿಯಲ್ಲಿ ಸರಕಾರ ಗೊತ್ತು ಮಾಡಿದ್ದ ರಾಜ್ಯ ಮರ್ಯಾದೆಯೊಡನೆ ಶವದ ಅಂತ್ಯಸಂಸ್ಕಾರ ನಡೆಯಿತು. ಸಶಸ್ತ್ರ ಪೋಲೀಸರು ಸಾಲಾಗಿ ನಿಂತರು. ಗೌರವ ಸೂಚನೆಯಾಗಿ ಗುಂಡು ಹಾರಿದವು. ಪೋಲೀಸರು ಸಲ್ಯೂಟು ಸಲ್ಲಿಸಿ ಮೌನವಾಗಿ ನಡೆದು ಹೊರಗೆ ನಿಂತರು. ಮಂತ್ರಪೂರ್ವಕ ವಿಧಿಗಳು ನಡೆದು ಚಿತೆಗೆ ಅಗ್ನಿಸ್ಪರ್ಶವಾಯಿತು. ನಮ್ಮ ಕಾಲಕ್ಕೆ ತನ್ನನ್ನು ನೋಡಿಕೊಳ್ಳುವ ಕಣ್ಣುಕೊಟ್ಟ ಮತ್ತು ಎಲ್ಲ ಕಾಲಕ್ಕೆ ಆಳದಲ್ಲಿ ಸಲ್ಲುವ ಕಾವ್ಯವಾಗಿ ಪರಿಣಮಿಸಿಬಿಟ್ಟ ಮಹಾಕವಿಯೊಬ್ಬನ ಕಳೇಬರ ಭುಗಭುಗನೆ ಮೇಲೇಳುತ್ತಿದ್ದ ಜ್ವಾಲೆಯಲ್ಲಿ ಮರೆಯಾಗಿ ಹೋಯಿತು.

ಅಡಿಗರು ಸದಾ ತಮಗಿಂತ ಚಿಕ್ಕ ವಯಸ್ಸಿನವರ ಜೊತೆ ಪ್ರಸನ್ನವಾಗಿ ಬೆರೆಯುತ್ತಿದ್ದರು. ಅವರನ್ನ ತಮ್ಮ ಸಮಾನರಂತೆ ನಡೆಸಿಕೊಳ್ಳುತ್ತಿದ್ದರು. ಪಾರ್ಶ್ವವಾಯುವಿನಿಂದ ಚೇತರಿಸಿಕೊಂಡಿದ್ದರೂ ಅವರ ಮೈ ಬತ್ತಿಹೋಗಿತ್ತು.

ನಡೆಯುವುದೇ ಕಷ್ಟಕರವಾಗಿತ್ತು. ಇಂಥ ಕ್ಲೇಶದ ಸ್ಥಿತಿಯಲ್ಲಿ ಇದ್ದರೂ, ತಮಗೆ ಬರಬೇಕಾದ ಸಾಹಿತ್ಯ ಗೌರವಗಳೆಲ್ಲ ಹೀನ ರಾಜಕಾರಣದಿಂದಾಗಿ ತಪ್ಪಿಹೋಗಿದ್ದರೂ ಅವರ ಮನಸ್ಸು ಕಹಿಯಾಗಿರಲಿಲ್ಲ. ಸಿನಿಕತನ ಹತ್ತಿರವೂ ಸುಳಿಯಲಿಲ್ಲ. ಬರುವ ಕಾಲ, ಪೀಳಿಗೆ ನಮ್ಮದಕ್ಕಿಂತ ಚೆನ್ನಾಗಿರುತ್ತದೆ ಅಂತಲೇ ಅವರ ನಂಬಿಕೆಯಾಗಿತ್ತು. ದಿನವೂ ಸಂಜೆ ಅವರ ಕೈಹಿಡಿದು ಕಾಂಪೌಂಡಿನಲ್ಲೇ ವಾಕಿಂಗ್ ಮಾಡಿಸುತ್ತಿದ್ದ ನನ್ನ ಹುಡುಗ ಚೈತ್ರನನ್ನು ನಿರ್ದೇಶಿಸಿ ಒಮ್ಮೆ ಅವರು ಹೇಳಿದರು: "ನಿಮ್ಮ ಹುಡುಗನನ್ನೇ ನೋಡಿ. ಅವನೇನು ಸಾಹಿತ್ಯಭಕ್ತನ? ಅಲ್ಲ, ಇಂಜಿನೀಯರಿಂಗ್ ವಿದ್ಯಾರ್ಥಿ. ಹಳೆಯ ಆಚಾರ, ಸಂಪ್ರದಾಯ ಎಲ್ಲದರಿಂದ ಬಿಡುಗಡೆಯಾದ ಹುಡುಗ, ಹೊಸಕಾಲದವನು. ವ್ಯಾಸಂಗ, ಸ್ನೇಹಿತರು, ಕ್ರಿಕೆಟ್ ಆಟ ಏನೆಲ್ಲ ಇದೆ ಅವನಿಗೆ. ಆದರೂ ಪ್ರತಿದಿನ ಸಂಜೆ ಗಂಟೆ ಹೊಡೆದಂತೆ ಸಮಯಕ್ಕೆ ತಪ್ಪದೆ ಬರುತ್ತಾನೆ. ಎಷ್ಟು ಪ್ರೀತಿಯಿಂದ ನನ್ನ ಕೆಲಸ ಮಾಡಿಕೊಡುತ್ತಾನೆ! ಹೀಗೆ ಮಾಡಬೇಕಾದ ಯಾವ ಹಂಗೂ ಅವನಿಗೆ ಇಲ್ಲ. ಆದರೂ ಅವನಲ್ಲಿ ಈ ಘನತೆ ಯಾಕೆ? ಈಗ ಹೇಳಿ, ಮುಂದಿನ ಪೀಳಿಗೆ ನಮ್ಮ ನಿಮ್ಮದಕ್ಕಿಂತ ಉತ್ತಮ ಹೌದೋ ಅಲ್ಲವೋ?"

ಅಡಿಗರು ಹಿಂದೆ ಮೈಸೂರಿನ ಸೇಂಟ್ ಫಿಲೋಮಿನಾ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗ ಟಿ. ಜಿ. ರಾಘವ ಅವರ ವಿದ್ಯಾರ್ಥಿಯಾಗಿದ್ದರು. ಬಹಳ ನಿರ್ಮಲ ಮನಸ್ಸಿನ ಹುಡುಗ ಅಂತ ಅಡಿಗರಿಗೆ ಅವನ ಮೇಲೆ ಬಹಳ ಪ್ರೇಮ. ಒಮ್ಮೆ ದೇವತಾರಾಧನೆಯ ಸಂದರ್ಭದಲ್ಲಿ ಅಡಿಗರು ಅತಿಥಿಯಾಗಿ ಊಟಕ್ಕೆ ಬರುವಂತೆ ಕರೆದರು. ಮನೆಗೆ ಬಂದ ಕೂಡಲೇ ಉಪಚಾರ ಮಾಡಿ ಒಳಗೆ ಕರೆದೊಯ್ದು ಕಾಲು ತೊಳೆಯಲು ತಾವೇ ನೀರೆರೆದರು. ವಿದ್ಯಾರ್ಥಿ ಗಾಬರಿಯಾದ. "ತಂಬಿಗೆ ಕೊಡಿ ಸಾರ್, ನಾನೇ ಕಾಲ ತೊಳೆದುಕೊಳ್ಳುತ್ತೇನೆ" ಅಂತ ಅಂಗಲಾಚಿದ. ಗುರು ಕೇಳಲಿಲ್ಲ. ಅವರು ಮುಂದುವರೆದು ಶಿಷ್ಯನಿಗೆ ನಮಸ್ಕಾರವನ್ನು ಸಲ್ಲಿಸಲು ಹೊರಟಾಗ ವಿದ್ಯಾರ್ಥಿ ಪೂರಾ ಕಂಗಾಲಾದ. "ಸಾರ್, ಏನಿದು, ಏನು ಮಾಡುತ್ತಿದ್ದೀರಿ? ನಾನು ನಿಮ್ಮ ವಿದ್ಯಾರ್ಥಿ" ಅಂತ ಹೇಳಿ ಅವರನ್ನು ತಡೆಯಲು ಹೆಣಗಿದ. ಆದರೆ ಅಡಿಗರು "ನೀನು ನನ್ನ ವಿದ್ಯಾರ್ಥಿ ಎನ್ನುವುದು ನಿಜವೇ. ಆದರೆ ಇವತ್ತು ಮಾತ್ರ ನಾನು ಮನಸ್ಸೊಪ್ಪಿ ಕರೆದ ಅತಿಥಿ. 'ಅತಿಥಿ ದೇವೋಭವ' ಎಂಬ ಮಾತಿನಂತೆ ನಾನು ನಿನಗೆ ನಮಸ್ಕಾರ ಮಾಡುವುದು ನ್ಯಾಯವಾದದ್ದು ಅಂತ ಹೇಳಿ ನಮಸ್ಕಾರ ಸಲ್ಲಿಸಿಯೇ ಬಿಟ್ಟರು. ಅತಿಥಿಗಳಾಗಿ ಕರೆಯಲು ಇತರ ಜನಗಳು ಇರಲಿಲ್ಲವೆಂದಲ್ಲ. ಆದರೆ ಹೃದಯವಂತ ಅಂತ ತಮಗೆ ಖಾತರಿಯಾದ ವ್ಯಕ್ತಿ ಅವರಿಗೆ ಬೇಕಾಗಿತ್ತು. ಅಂಥವನು ವಿದ್ಯಾರ್ಥಿಯಾಗಿದ್ದರೆ ತಾನೆ ಏನಂತೆ? ಪೂಜೆಗೆ ಅರ್ಹವಾಗುವುದು ಗುಣವೇ ಹೊರತು ಲಿಂಗ, ವಯಸ್ಸು ಅಲ್ಲ. ಆ

ದಿನವೂ ಅವರು ಶಿಷ್ಯನಿಗೆ ಒಂದು ಪಾಠವನ್ನೇ ಬೋಧಿಸಿದ್ದರು. ಆದರೆ ಅದನ್ನು ಸಾಕ್ಷಾತ್ತಾಗಿ, ಆಚರಣೆಯ ಮೂಲಕ ಬೋಧಿಸಿದ್ದರು ಅಷ್ಟೆ. ಎಲ್ಲರೂ ತಮಗಿಂತ ಹಿರಿಯರಿಂದ ತಮ್ಮ ಪುಸ್ತಕಗಳಿಗೆ ಮುನ್ನುಡಿ ಬರೆಸುತ್ತಿದ್ದ ದಿನಗಳಲ್ಲಿ ಅವರು ತಮಗೆ ಶಿಷ್ಯ ಸಮಾನರಾದ ಅನಂತಮೂರ್ತಿಯವರಿಂದ ಭೂಮಿಗೀತಕ್ಕೆ ಮುನ್ನುಡಿ ಬರೆಸಿದರು. ನಾನೊಮ್ಮೆ ಅವರೊಡನೆ ಮಾತನಾಡುತ್ತ ಅನಂತಮೂರ್ತಿ ನಿಮ್ಮನ್ನು ಗುರು ಎಂಬಂತೆ ಭಾವಿಸುತ್ತಾರೆ ಎಂದಾಗ "ಹೌದು, ಅವನು ನನಗೆ ಶಿಷ್ಯ ನಿಜ, ಆದರೆ ಆತನಿಂದ ನಾನೂ ಹಲವು ಮಹತ್ವದ ವಿಷಯಗಳನ್ನು ಕಲಿತಿದ್ದೇನೆ. ಆದ್ದರಿಂದ ಆತ ನನಗೆ ಗುರುವೂ ಹೌದು" ಎಂದರು!

ಗಾಂಧೀಜಿಯ ಬಗ್ಗೆ ಬರೆಯುತ್ತ ಅಡಿಗರು "ತಂದೆ ನೀನು ತಂದೆ ಒಂದು ಶ್ರುತಿಶುದ್ಧಿಯ ಸೊಬಗನು" ಎಂದು ಹೇಳುತ್ತಾರೆ. ಸ್ವಾತಂತ್ರ್ಯಪೂರ್ವದ ಭಾರತೀಯ ಜನಜೀವನಕ್ಕೆ ಗಾಂಧೀಜಿ ರೂಪಿಸಿಕೊಟ್ಟ ಜೀವನಧರ್ಮದ ತಳಹದಿಯನ್ನು ಕುರಿತ ಮಾತು ಅದು. ಅಡಿಗರನ್ನು ಕುರಿತು ಬೇರೊಂದು ಸಂದರ್ಭದಲ್ಲಿ ನಾವು ಹೇಳಬಹುದಾದ ಮಾತಾದರೂ ಅದೇ. ಅವರು ತಮ್ಮ ಮುಂದಿನ ಪೀಳಿಗೆಯ ಸಾಹಿತ್ಯಕ್ಕೆ ಅಗತ್ಯವಾಗಿದ್ದ ಶುದ್ಧವಾದ ಶ್ರುತಿಯೊಂದನ್ನು ರೂಪಿಸಿದರು. ಅದನ್ನು ಆಧರಿಸಿ ಕಾವ್ಯವನ್ನೇ ಅಲ್ಲದೆ ಸಾಹಿತ್ಯದ ಇತರ ಕ್ಷೇತ್ರಗಳಲ್ಲೂ ಬಗೆ ಬಗೆ ಸ್ವರಗಳ ಮಧುರ ಸಂಯೋಜನೆಯಿಂದ ಕೂಡಿದ ಸಮ್ಮಿಶ್ರ ಗಾನಮೇಳವೊಂದು ಮೂಡಿತು; ಮೌಲಿಕವಾದ ಹೊಸ ಸೃಷ್ಟಿಯೊಂದಕ್ಕೆ ಅದು ಮಳೆ ಬಿಸಿಲಾಗಿ ಒದಗಿತ್ತು.

ಒಂದು ವರ್ಷದಷ್ಟು ಹಿಂದೆ ನಾನೇ ಮುಂದೆ ನಿಂತು ರೂಪಿಸಿದ 'ಸಮ್ಮಿಲನ' ಎಂಬ ಹೆಸರಿನ ಒಂದು ವಿಶಿಷ್ಟ ಕ್ಯಾಸೆಟ್ ಹೊರಬಂತು. ಹೆಸರಾದ ಹತ್ತು ಜನ ಕನ್ನಡ ಕವಿಗಳು ತಮ್ಮ ಎರಡೆರಡು ಕವನಗಳನ್ನು ತಾವೇ ವಾಚಿಸಿರುವ ಧ್ವನಿಸುರುಳಿ ಅದು. ಪುತಿನ, ನರಸಿಂಹಸ್ವಾಮಿ, ಅಡಿಗ ಮೊದಲಾದವರು ಅದರಲ್ಲಿದ್ದಾರೆ. ಅಡಿಗರ ಆರೋಗ್ಯ ತೀರ ಕೆಟ್ಟಿತ್ತಾಗಿ ತಮ್ಮ ಕವಿತೆಗಳಲ್ಲಿ ಒಂದನ್ನು ಮಾತ್ರ ಅವರು ಓದಿದ್ದಾರೆ. 'ನನ್ನ ನುಡಿ' ಎಂಬ ಆ ಪದ್ಯ ಅಡಿಗರು ಪ್ರಕಟಿಸಿದ್ದ ಮೊಟ್ಟಮೊದಲ ಕವಿತೆ. ಕವಿತೆಯ ಅರ್ಥ ಇದು: "ಎಷ್ಟೆಲ್ಲ ಹೂವುಗಳ ಪರಿಮಳ ಹೊತ್ತು ತರುವ ಗಾಳಿಯೇ, ನಿನಗೆ ಸ್ವಂತದ್ದೆನ್ನುವ ಗಂಧವೊಂದು ಇಲ್ಲದೆ ಹೋಯಿತೇ? ಬಿಸಿಲಿನ ಬಲದಿಂದ ಯಾವೆಲ್ಲ ಬಣ್ಣ ಮಿಂಚಿ ಹೊಳೆಯುವ ಮೇಘವೇ, ನಿನಗೆ ನಿನ್ನದೆನ್ನುವ ಒಂದು ಮೀಸಲು ಬಣ್ಣ ಇಲ್ಲದೆ ಹೋಯಿತೇ? ಈ ಭೂಮಿ ಬೆಳಗುವುದೇನಿದ್ದರೂ ಸೂರ್ಯ-ಚಂದ್ರರ ನೆರವಿನಿಂದ ಅಷ್ಟೆ. ಅದಕ್ಕೆ ತನ್ನದೆನ್ನುವ ಒಂದು ಪ್ರಕಾಶ ಇಲ್ಲವಾಯಿತೇ? ನನ್ನ ಪಾಡು ತಾನೇ ಇನ್ನೇನು? ಬೇರೆಯವರ ಮಾತನ್ನೇ ಮರುದನಿಸುವ ಅನುಕರಣೆಗಾಗಿ ಹೋಗಿದೆಯಲ್ಲ ನನ್ನ ಕವಿತೆ! ತನ್ನದನ್ನು ಹೇಳುವ

ದನಿ ಅದಕ್ಕೆ ಬರುವುದು ಯಾವಾಗ? ಹಾಗೆ ಹೇಳಲು ಸಾಧ್ಯವಾದಾಗ ಮಾತ್ರವೇ ನನ್ನದು ನಿಜವಾದ ಬಾಳು. ಆವರೆಗೆ ಇದು ಬಾಳಲ್ಲ, ನರಕ."

ಮೊದಲ ಪದ್ಯದಲ್ಲೇ ಎಂಥ ಗಾಢವಾದ ವಿಷಾದ ! ಇಡೀ ಕವಿತೆ ಆ ವಿಷಾದದ ಉರಿಯಿಂದ ಜ್ವಲಿಸುತ್ತಿದೆ. ಆದರೆ ಅದು ಶಕ್ತಿಯಿಲ್ಲದ ಅಳುಬುರುಕನೊಬ್ಬನ ಚೀರಾಟವಲ್ಲ; ಬೆಳೆಯಲಿರುವ ಮಹಾಕವಿಯೊಬ್ಬನ ಸೃಷ್ಟಿಕಾರಕವಾದ ವಿಷಾದ. ಅದು ತಿಳಿಯುವುದು ಧ್ವನಿಸುರುಳಿಯ ಮುಂದಿನ ಕವನವನ್ನು ಕೇಳಿದ ಮೇಲೆ. ಕನ್ನಡದ ಹಿರಿಯ ವಿಮರ್ಶಕ ಅನಂತಮೂರ್ತಿ 'ಭೂತ' ಎಂಬ ಆ ಕವನವನ್ನು (ಶ್ರೇಷ್ಠ ಕಾರ್ಯಕ್ಕೆ ವಿಮರ್ಶೆ ಸಲ್ಲಿಸುತ್ತಿರುವ ಗೌರವವೆನ್ನುವಂತೆ) ಓದಿದ್ದಾರೆ. ಸಾಲುಸಾಲಿಗೂ ಅರ್ಥದ ಮೆಟ್ಟಿಲೇರುತ್ತ, ಒಂದೊಂದು ಮಗ್ಗುಲಿಗೆ ಒಂದೊಂದು ಧ್ವನಿಕಾಂತಿಯನ್ನು ಚೆಲ್ಲುತ್ತ, ಭಾಷೆಯ ಶಕ್ತಿ ಮತ್ತು ಕವಿತೆಯ ಮಾಯೆ ಎರಡನ್ನೂ ಒಟ್ಟಿಗೇ ನಿದರ್ಶಿಸುತ್ತ ಬೆಳೆಯುವ ಆ ಕವನ ಅಡಿಗರು ಮಾಡಿದ ಒಂದು ಕಾವ್ಯಪವಾಡ ಎನ್ನಿಸಿಬಿಡುತ್ತದೆ. ಇಂಥ ಸ್ವವಿಮರ್ಶೆ, ಸೃಷ್ಟಿಶಕ್ತಿ ಎರಡೂ ಇತ್ತೆಂದೇ ಅಡಿಗರು ಕಾವ್ಯದಲ್ಲಿ ಹೊಸದಾರಿಯೊಂದನ್ನು ಕಂಡುಕೊಂಡರು; 'ಸ್ವಧರ್ಮ'ದಲ್ಲಿ ನೆಲೆನಿಂತರು.

ಈ ಶತಮಾನದ ಐವತ್ತರಿಂದ ಎಪ್ಪತ್ತೈದನೆಯ ವರ್ಷಗಳ ಅವಧಿಯಲ್ಲಿ ಅಡಿಗರ ಕಾವ್ಯ ಕನ್ನಡಸಾಹಿತ್ಯದ ಮೇಲೆ, ಅದರಲ್ಲೂ ಕನ್ನಡಕಾವ್ಯದ ಮೇಲೆ ಮಾಡಿದ ಪ್ರಭಾವ ಅಸಾಧಾರಣವಾದದ್ದು. ಜೀವನ, ಸಾಹಿತ್ಯಗಳನ್ನು ನೋಡಲು ಅಗತ್ಯವಾದ ಗಟ್ಟಿ ನಿಲುವೊಂದನ್ನು ಇದು ರೂಪಿಸಿಕೊಟ್ಟಿತೆನ್ನುವುದು ಈಗ ಹಳೆಯ ಮಾತು. ಕನ್ನಡ ಲೇಖಕರ ಒಂದು ತಲೆಮಾರು ಬದುಕನ್ನು ದಿಟ್ಟಗಣ್ಣಿನಿಂದ ನೋಡಲು ಕಲಿತದ್ದು ಅಡಿಗರ ಪ್ರಭಾವದ ಮೂಲಕವಾಗಿ. ಒಂದು ಜನಾಂಗದ ಕಣ್ಣನ್ನು ತೆರೆಯಿಸಿದ ಕವಿ ಎಂದು ಅಡಿಗರನ್ನು ಕುರಿತು ಲಂಕೇಶರು ಮಾಡಿದ ವರ್ಣನೆ ನಂತರದ ಪೀಳಿಗೆಯ ಒಬ್ಬ ಶಕ್ತಲೇಖಕ ತನ್ನ ಬಳಗದ ಪರವಾಗಿ ಅವರಿಗೆ ಸಲ್ಲಿಸಿದ ಕೃತಜ್ಞತೆಯ ವಂದನೆ ಎನ್ನಬಹುದು. ಕನ್ನಡ ಕಾವ್ಯ ಆ ಅವಧಿಯಲ್ಲಿ ಭಾರತದ ಇತರ ಭಾಷೆಗಳಲ್ಲಿ ಸೃಷ್ಟಿಯಾಗಿರುವ ಕಾವ್ಯವನ್ನು ಕೆಲಮಟ್ಟಿಗಾದರೂ ಹಿಂದೆ ಹಾಕಿದ್ದರೆ ಆ ಸಾಧನೆಯಲ್ಲಿ ಅಡಿಗರದು ಸಿಂಹಪಾಲು.

ಆ ದಿನಗಳು ಇನ್ನೂ ನನಗೆ ನೆನಪಿವೆ. ಅವರ 'ಚಂಡೆಮದ್ದಳೆ' ಪ್ರಕಟವಾಗಿ ಭೂಮಿಗೀತದ ಕವನಗಳು ಬಿಡಿಬಿಡಿಯಾಗಿ ಪ್ರಕಟಗೊಳ್ಳುತ್ತಿದ್ದ ಕಾಲ. ಹೊಸಗನ್ನಡ ಕಾವ್ಯದಲ್ಲಿ ಅದೊಂದು ಕೋಲಾಹಲಕರವಾದ ಘಟ್ಟ. ಆ ಕವನಗಳೇನೂ ವಿದ್ಯಾರ್ಥಿಗಳಾಗಿದ್ದ ನಮಗೆ ಇಡಿಯಾಗಿ ಹಿಡಿತಕ್ಕೆ ಸಿಕ್ಕಿದ್ದವೆಂದಲ್ಲ. ಆದರೆ ಅಲ್ಲಲ್ಲಿ

ಮಿಂಚಿ, ಉಳಿದಂತೆ ತೋರಮನಸ್ಸಿಗೆ ಕತ್ತಲಾಗಿ ಬಿಡುತ್ತಿದ್ದ ಆ ಕವನಗಳು ನನ್ನಂಥ ಯುವಕರ ಮನಸ್ಸಿನಲ್ಲಿ ಕವಿಸುತ್ತಿದ್ದ ಸೃಜನಾತ್ಮಕ ಗೊಂದಲ, ಉತ್ಸಾಹ, ಉದ್ವೇಗ ಮಾತ್ರ ಈಗಲೂ ಹಂಬಲ ಕೆರಳಿಸುವಂಥವು. ನಮಗೆ ತಿಳಿಯದ ಆಳದಲ್ಲಿ ಎಲ್ಲೋ ಗಕ್ಕನೆ ಹಿಡಿದು ಬಿಡುತ್ತಿದ್ದ ಅವರ ಕಾವ್ಯದ ಸಾಲುಗಳನ್ನು ಮತ್ತೆ ಮತ್ತೆ ಮೆಲುಕು ಹಾಕುತ್ತ, ಅವನ್ನು ಬುದ್ಧಿಯ ಹತೋಟಿಗೆ ದಕ್ಕಿಸಿಕೊಳ್ಳಲು ನಾವು ಹೆಣಗುತ್ತಿದ್ದ ರೋಮಾಂಚಕರ ಸಂದರ್ಭಗಳು ನನಗೆ ಇನ್ನೂ ನೆನಪಿವೆ. ನಮ್ಮ ಬುದ್ಧಿಭಾವಗಳನ್ನು ಹೀಗೆ ಆಕ್ರಮಿಸುತ್ತ ಆಗ ಅಡಿಗರು ಒಬ್ಬ ಕ್ರಾಂತಿಕಾರನಂತೆ, ಸಾಹಿತ್ಯ, ಜೀವನಗಳ ಎಲ್ಲ ನೈತಿಕತೆಗೆ, ಆದರ್ಶಕ್ಕೆ ಪ್ರತಿಮೆಯೆಂಬಂತೆ ನಮಗೆ ಭಾಸವಾದರು. ಅವರ ಈ ಪ್ರಖರ ವ್ಯಕ್ತಿತ್ವಕ್ಕೆ ನಾವು ತೋರುತ್ತಿದ್ದ ಪ್ರತಿಕ್ರಿಯೆಯೋ ತುಂಬ ರೊಮ್ಯಾಂಟಿಕ್ ಆಗಿತ್ತು. ದಾರಿಯಲ್ಲಿ ಹೋಗುತ್ತಿದ್ದ ಅವರನ್ನು ದೂರದಿಂದಲೇ ಉಸಿರು ಬಿಗಿ ಹಿಡಿದು ನಿಂತು ನೋಡಿದ್ದು; ಅವರ ಮುಖ ಮಾಟ ಗಾತ್ರಗಳಿಂದ ಹಿಡಿದು ತೊಟ್ಟ ಬಟ್ಟೆ, ಕೈಚೀಲ, ಸಾಗುತ್ತಿದ್ದ ಧಾಟಿಗಳವರೆಗೆ ಎಲ್ಲವನ್ನೂ ಕಣ್ಣಲ್ಲಿ ತುಂಬಿಕೊಂಡು, ಆಹ! ಎಂದುಕೊಂಡದ್ದು ಇನ್ನೂ ನನಗೆ ನೆಪಿದೆ. ಆ ಪ್ರತಿಕ್ರಿಯೆ ಎಷ್ಟೇ ಮುಗ್ಧವಾಗಿದ್ದರೂ, ಅದನ್ನು ನೆನೆದು ಈಗ ಥಟ್ಟನೆ ನಗು ಬಂದರೂ ಯೋಚಿಸಿದಾಗ ಮನಸ್ಸು ಸ್ತಬ್ಧವಾಗುತ್ತದೆ. ಅಧಿಕಾರ, ಹಣ ಯಾವುದೂ ಇಲ್ಲದ ವ್ಯಕ್ತಿ ಕೇವಲ ತನ್ನ ಕಾವ್ಯದ ಘನತೆಯಿಂದ ತರುಣರಲ್ಲಿ ಉಕ್ಕಿಸುತ್ತಿದ್ದ ಅಚ್ಚರಿ ಗೌರವಗಳ ಚರ್ಯೆಯಾಗಿ ಈಗಲೂ ಅವು ನನಗೆ ಅರ್ಥವತ್ತಾಗಿ ಕಾಣುತ್ತವೆ; ಕಣ್ಣು ತೇವಗೊಳಿಸುವ ದೃಶ್ಯಗಳಾಗಿ ಕಾಡುತ್ತವೆ.

ತಾವು ರೂಪಿಸಿದ ಹೊಸ ಕಾವ್ಯಮಾರ್ಗದ ಆರಂಭ ಅಂತ್ಯಗಳೆರಡರಲ್ಲೂ ಅಡಿಗರೇ ಮುಂದೆ ನಿಂತಿದ್ದ ಒಂದು ಆಶ್ಚರ್ಯಕರ ಸಂಗತಿ ನಮ್ಮೆದುರಿಗಿದೆ. 'ಚಂಡೆಮದ್ದಳೆ'ಯಿಂದ 'ವರ್ಧಮಾನ' ಸಂಕಲನವನ್ನೊಳಗೊಂಡ ಅಡಿಗರ ಬರಹ ಎರಡು ದಶಕಗಳ ಕನ್ನಡ ಕಾವ್ಯವನ್ನೇ ಸ್ಥೂಲವಾಗಿ ಪ್ರತಿನಿಧಿಸಿತು ಎನ್ನಬಹುದು. ಅತ್ಯಂತ ಫಲಪ್ರದ ಘಟ್ಟವೊಂದನ್ನು ನಡುವೆ ಪಡೆದ ಮೂರು ಹಂತಗಳು ಅವರ ಒಟ್ಟು ಕಾವ್ಯದಲ್ಲಿ ಎದ್ದುಕಾಣುತ್ತವೆ. ಚಂಡೆಮದ್ದಳೆವರೆಗಿನ ಕವನಗಳು ಅಡಿಗ ಕಾವ್ಯದ ಮೊದಲ ಘಟ್ಟ. ಮುಂದೆ ಅಡಿಗರನ್ನು ನಾವು ಮೆಚ್ಚಿಕೊಳ್ಳಲು ಕಾರಣವಾದ ಹಲವು ಅಂಶಗಳು ಅದರಲ್ಲಿಲ್ಲ. ಹಾಗೆ ನೋಡಿದರೆ ನವೋದಯ ಮಾರ್ಗದಲ್ಲಿ ಅಡಿಗರು ಬರೆದ ಕವನಗಳು (ಬೆರಳೆಣಿಕೆಯ ಆರೆಂಟು ಕವನಗಳನ್ನು ಬಿಟ್ಟರೆ) ಅವರ ಸಮಕಾಲೀನರಾದ ಶ್ರೇಷ್ಠ ನವೋದಯರ ಎತ್ತರಕ್ಕೆ ಮುಟ್ಟಲಿಲ್ಲ. ಆ ಮಾರ್ಗದಲ್ಲಿ ಸಾಗಿದಷ್ಟು ಕಾಲವೂ ಆ ಕೊರತೆಯನ್ನು ಅವರೂ ಅನುಭವಿಸಿದವರೇ ಅವರ ಸ್ವಭಾವ ದೃಷ್ಟಿಗಳಿಗೆ ನವೋದಯ ಮಾರ್ಗದ ಎಷ್ಟೋ ಮೂಲಭೂತ ಅಂಶಗಳೇ

ಒಗ್ಗಲಿಲ್ಲವಾಗಿ ಆ ದಾರಿ ಅವರದಾಗಲೇ ಇಲ್ಲ. ನವ್ಯ ಕವಿತೆ ಅಡಿಗರ ಒಂದು ವೈಯಕ್ತಿಕ ಅವಶ್ಯಕತೆಯಾಗಿ ಬಂತು ಎಂದು ಕೀರ್ತಿನಾಥ ಕುರ್ತಕೋಟಿಯವರು ಹೇಳಿದ್ದು ಈ ಅರ್ಥದಲ್ಲಿಯೇ. ಮುಂದೆ ಅದು ಒಂದು ಪೀಳಿಗೆಯ ಅಗತ್ಯವೂ ಆಗಿ ನಾಡಿನಗಲಕ್ಕೆ ತನ್ನ ಪ್ರಭಾವವನ್ನು ಬೆಳೆಯಿತು.

ಈ ಮೊದಲ ಘಟ್ಟಕ್ಕೆ ಸೇರುವ ಭಾವತರಂಗ, ಕಟ್ಟುವೆವು ನಾವು, ನಡೆದು ಬಂದ ದಾರಿ – ಸಂಕಲನಗಳಲ್ಲಿ ಕಡೆಯದಕ್ಕೆ ಐತಿಹಾಸಿಕವಾದ ಮಹತ್ವವಿದೆ. ಇದು ಅಡಿಗರ ಕಾವ್ಯದ ಬೆಳವಣಿಗೆಯಲ್ಲಿ ಒಂದು ಮೆಟ್ಟಿಲಷ್ಟೇ ಆಗಿರದೆ ಹೊಸಗನ್ನಡ ಕಾವ್ಯದ ಇತಿಹಾಸದಲ್ಲಿ ಒಂದು ಮಾರ್ಗದ ಕೊನೆಯನ್ನು, ಮತ್ತೊಂದರ ಆಗಮನವನ್ನು ಸೂಕ್ಷ್ಮವಾಗಿ ಸೂಚಿಸುತ್ತದೆ. ತನ್ನ ಮುನ್ನುಡಿ ಮತ್ತು (ವಿಫಲ, ಗಾಂಧಿ–ಗಳಂಥ) ಎರಡು ಮೂರು ಕವಿತೆಗಳ ಕಾರಣದಿಂದಾಗಿ ಈ ಕೃತಿ ಕನ್ನಡ ಕಾವ್ಯದ ಪಾಲಿಗೆ (ಇಂಗ್ಲೀಷ್ ಸಾಹಿತ್ಯದ) 'ಅರಿಕಲ್ ಬ್ಯಾಲಡ್ಸ್'ನಂತೆ ಚಾರಿತ್ರಿಕವಾಗಿದೆ.

'ಚಂಡೆಮದ್ದಳೆ'ಯಿಂದ 'ವರ್ಧಮಾನ' ಪೂರ್ತಿಯ ಕವನಗಳು ಒಬ್ಬ ಶ್ರೇಷ್ಠ ಕವಿಯ ಜೀವಫಲಗಳೆನ್ನಬಹುದು. ಚಂಡೆಮದ್ದಳೆ ಹೊಸ ಕಾವ್ಯಮಾರ್ಗವನ್ನು ಉದ್ಘಾಟಿಸಿದ ಕೃತಿ. ಹೊಸ ಭಾಷೆ, ಅರ್ಥಸಾಧಕ ಲಯ, ಕಣ್ಣು ಕುಕ್ಕುವಂಥ ನವೀನ ಪ್ರತಿಮೆಗಳು, ಆತ್ಮ ವಿಮರ್ಶಕ ವ್ಯಂಗ್ಯ – ಎಲ್ಲ ಹುರಿಗಟ್ಟಿ ಮೂಡಿದ ಕಾವ್ಯ ಅದು. ಈ ಕೃತಿಯಲ್ಲಿ ಕವಿ ಹಳೆಕಾವ್ಯದ ಅಚ್ಚನ್ನು ಒಡೆದು ಹೊಸ ದೃಷ್ಟಿದ್ರವ್ಯಕ್ಕೆ ಅನುರೂಪವಾದ ಕಾವ್ಯಶಿಲ್ಪವನ್ನು ನಿರ್ಮಿಸುತ್ತಿರುವ ಕಾಮಗಾರಿ ಎದ್ದು ಕಾಣುತ್ತದೆ. ಮಾತಿನ ರಭಸ, ಆವೇಶ, ರೇಗು ಕೆಚ್ಚುಗಳೆಲ್ಲ ಹೊಸ ರೂಪಕ್ಕಾಗಿ ದುಮು ದುಮಿಸುತ್ತಿರುವ ಅದಮ್ಯ ಕಾವ್ಯಸತ್ವದ ಅಬ್ಬರವನ್ನು ತೋರುತ್ತವೆ. ಇಲ್ಲಿಯ ಕವನಗಳಲ್ಲಿ ಕವಿ ತನ್ನ ರಸಾವೇಶವನ್ನು ಪೂರ್ತಿ ನಿಯಂತ್ರಿಸಿಕೊಂಡಿಲ್ಲವೆನ್ನುವುದೂ ನಿಜವೇ. ಕವನ ಇನ್ನೂ ಹಬೆಯಾಡುತ್ತಿರುವುದು ಕಾಣುತ್ತದೆ; ಮಾತಿನ ಸೊಕ್ಕು ಅಲ್ಲಲ್ಲಿ ಕವಿಯನ್ನೇ ಆಡಿಸುತ್ತದೆ. ಕವನ ಓದುವಾಗ ಆವೇಶದ ಝಳ ತಾಗಿ ಉರಿಯುವ ಒಲೆಗೆ ಹತ್ತಿರ ನಿಂತ ಅನುಭವವಾಗುತ್ತದೆ. ರಸಾನುಭವದ ನೆಲೆಯಿಂದ ಭಾವಾವೇಶದ ಕೆಳಸ್ತರಗಳಿಗೆ ಕವಿ ಲಾಳಿ ಹೊಡೆಯುವುದು ಪ್ರತಿಪುಟದಲ್ಲಿ ತಪ್ಪದ ದೃಶ್ಯವಾಗುತ್ತದೆ. 'ಗೊಂದಲಪುರ' ಕವನದಲ್ಲಿ ಇದು ಇತರ ಎಲ್ಲ ಕವನಗಳಿಗಿಂತ ಎದ್ದು ತೋರುತ್ತದೆ. ಆದರೆ ದೋಷಗಳಿದ್ದೂ ತನ್ನ ಹೊಸತನ ಸಮೃದ್ಧಿಗಳಿಂದ ಜ್ವಲಿಸುವ ತುಂಬು ಯೌವನದಂತೆ ಚಂಡೆಮದ್ದಳೆ ಕಾವ್ಯಪ್ರೇಮಿಯನ್ನು ಆಶ್ಚರ್ಯ ಸಂಭ್ರಮಗಳಲ್ಲಿ ಅದ್ದಿ ಸಂಭ್ರಾಂತಗೊಳಿಸಿಬಿಡುವ ಕಾವ್ಯ. ಹೊಸಕಾವ್ಯದ ನಿರ್ಮಾಣ ಕ್ರಿಯೆ ಮುಗಿದು, ಉಬ್ಬೆಗ ಕಳೆದು, ಕವಿ ಮಾತನ್ನು ಗೆದ್ದ ನಂತರ ರೂಪುಗೊಂಡ ಭೂಮಿಗೀತದ ಪ್ರಶಾಂತ ಕಾವ್ಯ ಪ್ರಪಂಚವೇ ಅಡಿಗ ಕಾವ್ಯದ ಶಿಖರಸ್ಥಾನವೆನ್ನುವುದು ನಿಜವಾದರೂ

ಕಾವ್ಯಕರ್ಮವನ್ನು ಆ ನೆಲೆಗೆ ತಂದುಕೊಳ್ಳಲು ನಡೆಸಿದ ಹೋರಾಟದ ಕೃತಿಯಾಗಿ 'ಚಂಡೆಮದ್ದಳೆ' ಅದ್ವಿತೀಯವೆನ್ನಬೇಕು.

ಭೂಮಿಗೀತ ಸಂಕಲನದ ಅಡಿಗರು ಈ ಶತಮಾನದ ಉತ್ತರಾರ್ಧ ಕಂಡ ಅತ್ಯುತ್ತಮ ಕವಿಯೆಂದು ನನ್ನೆಣಿಕೆ. ಇದನ್ನು ಬರೆದು ಅಡಿಗರು ಕನ್ನಡ ಕಾವ್ಯ ಪರಂಪರೆಯಲ್ಲಿ ಬಂದ ಕೆಲವೇ ಮಹಾಸತ್ವರ ಪಂಕ್ತಿಯಲ್ಲಿ ನಿಂತರು. ಭೂಮಿಗೀತ, ಭೂತ, ಹದ್ದು, ಪ್ರಾರ್ಥನೆಗಳಂಥ ಮಹತ್ವದ ಕವನಗಳನ್ನು ಒಳಗೊಂಡ ಕೃತಿ ಇದು. ನಂತರ ಬಂದ 'ವರ್ಧಮಾನ' ಕವನ ಸಂಗ್ರಹದಲ್ಲಿ ಕೂಪಮಂಡೂಕ, ವರ್ಧಮಾನ, ಶ್ರೀರಾಮನವಮಿಯ ದಿವಸ, ಅಜ್ಜ ನೆಟ್ಟಾಲದಂಥ ಸಾರ್ಥಕ ಕವನಗಳಿವೆ.

ಇಲ್ಲಿಂದ ಮುಂದೆ ಅಡಿಗರು ಐದಾರು ಸಂಕಲನಗಳನ್ನು ಪ್ರಕಟಿಸಿದರೂ ಅವರ ಕಾವ್ಯ ಒಂದು ಜಾಡಿಗೆ ಬಿದ್ದುಹೋಯಿತು. ಕವಿ ತಮ್ಮ ಹಿಂದಿನ ಕವನಗಳನ್ನು ಮತ್ತೆ ಅನುಕರಿಸುತ್ತಿದ್ದಾರೋ ಎನಿಸಿತು. ಸತ್ವ ಮುಗಿದೂ ಕವಿ ಬರೆಯುತ್ತಿರುವ ಸಾಮಾನ್ಯ ದೃಶ್ಯ ಶುರುವಾಯಿತು ಎನ್ನುತ್ತಿರುವಾಗ ಅಡಿಗರು ನಡುನಡುವೆ ಮತ್ತೆ ಚೈತನ್ಯ ಪೂರ್ಣವಾದ ಕವನಗಳನ್ನು ಬರೆದದ್ದುಂಟು. ಸಾಮಾನ್ಯನಂತೆ ಈ ನಾನು, ಚಿಂತಾಮಣಿಯಲ್ಲಿ ಕಂಡ ಮುಖ – ಇವು ಅಂಥ ಕವನಗಳು. ಅವರು ಕಟ್ಟಕಡೆಯದಾಗಿ ತೀರ ಈಚೆಗೆ ಪ್ರಕಟಿಸಿದ 'ತೀರ್ಥರೂಪರಿಗೆ' ಎಂಬ ಕವನದಲ್ಲಿ ಕವಿ ತನ್ನ ತಂದೆಯ ಸಾವಿನ ಚಿತ್ರವನ್ನು ಕೊಡುತ್ತಾರೆ.

ನಾನೇ ಬರಲಿದ್ದೇನೆ ನಿಮ್ಮ ಕಡೆಗೆ;
ಅದಕ್ಕೆಲ್ಲ ಸಿದ್ಧತೆಯ ನಡೆಸುತ್ತಲಿದ್ದೇನೆ.
ಎಲ್ಲವೂ ಮುಗಿಯುವುದು ಇಷ್ಟರಲ್ಲೇ.
ಎಲ್ಲೆ ಇದ್ದರು ನೀವು ನಿಮ್ಮ ಸಹವಾಸವೇ
ಗುರಿ ನನಗೆ. ಸೆಳೆದುಕೊಳ್ಳಿರಿ ನಿಮ್ಮ ತೆಕ್ಕೆಗೆ.
ಅದೇನೇ ಅಂತಿಮದ ಹಕ್ಕೆ ನನಗೆ.

ಎಂದು ಹೇಳುತ್ತ ಕವನವನ್ನು ಕೊನೆ ಮಾಡುತ್ತಾರೆ. ಈ ಕವನವನ್ನು ಜನದ ಕೈಗೆ ಕೊಟ್ಟ ತಿಂಗಳೊಳಗೆ ಅಡಿಗರು ಕಣ್ಮರೆಯಾದರು!

ಅಡಿಗರು ಎಲ್ಲ ಕಾಲದ ಎಲ್ಲ ದೇಶದ ಅತ್ಯಂತ ಎತ್ತರದ ಕವಿಗಳಲ್ಲಿ ಒಬ್ಬರು. ಅಷ್ಟು ದೊಡ್ಡ ಕವಿ ನಮ್ಮ ಸಮಕಾಲೀನರಾಗಿದ್ದರು ಎನ್ನುವುದೇ ನಮಗೆ ಒಂದು ದೊಡ್ಡ ಹೆಮ್ಮೆ. ನಾವು ಅವರ ಪ್ರಭಾವದ ಬೆಳಕಿನಲ್ಲಿ ಅರಳಿದೆವು ಎನ್ನುವುದು ಸದಾ ಸ್ಮರಿಸಬಹುದಾದ ಒಂದು ಭಾಗ್ಯ.

●

ಐವತ್ತರ ಅಡಿಗರು

೧

ಛೆ, ಏನು ಸೋಜಿಗ ಕಣ್ರೆ.
ಇದ್ದಕ್ಕಿದಂತೆ ಹಳೆಮನೆ ಬಿದ್ದು
ಅದರ ಪಾಯದ ಮೇಲೆ
ಹೊಸಮನೆ ಎದ್ದು
ಅಟ್ಟದ ಮೇಲೆ ಅಟ್ಟ ಅಟ್ಟದ ಮೇಲೆ ಅಟ್ಟ
ಹುಟ್ಟಿದ್ದು–
ಹಳೆಯ ಕತೆ. ಅಂತೀರ? ಅನ್ರಿ.
ಹಳೆಯ ಕತೆ, ಆದರೂ ಎಂಥ ಕತೆ. ಸ್ವಾಮಿ!
ಧಂಧೆಯಿಲ್ಲದ ದರಿದ್ರ ಜೋಭದ್ರ
ಮಾತು ಬರಿ ಮಾತುಗಳ ಜೋಲು ಕುಡಿ ಕತ್ತರಿಸಿ
ಕಸಿಮಾಡಿ, ಹೂಗಳ ಬಾಯಿ
ತುಂಬ ಮಣ್ಣಿನ ಬಾಸ ತುಂಬಿದಾಗ,
ಹೂ ತುತೂರಿಯಾಗಿ
ಮಣ್ಣಿನತ್ತರು ಸುತ್ತ ಸಿಂಪಡಿಸಿತು.
ಬೆರಳು ಮೋಹನ ಮುರಲಿ ತೂತ ತೊರೆದು,
ಬೆರಳು ಕೈಯಾಗಿ
ಚಂಡೆ ಮದ್ದಳೆಗೊಮ್ಮೆ ಕೈ ಹಚ್ಚಿದಾಗ
ಗಾರುಡಿಗ ಪುಂಗಿ
ಹಾವಿನ ಬುಟ್ಟಿಯಲ್ಲೇ ಮಂಗಮಾಯ.
ಮಲ್ಲಾಡದ ಹಕ್ಕಿ ಹಾಡು
ಓ ಅದು ದೊಡ್ಡ ರಾಮಾಯಣಂ.
ಚಂಡೆಸಪ್ಪಳ ಕೇಳಿ,
ಗೊಂದಲಾಪುರವಾಸಿನೀ ಈ ಸುವಾಸಿನಿ;
ನೆನ್ನೆ ಮೊನ್ನೆ
ಏಳು ಮಲ್ಲಿಗೆ ಮೊಗ್ಗೆ ತೂಗಿದ್ದ ನಮ್ಮ
ಕವಿತಾ ಕನ್ನೆ–
ಇದ್ದಕ್ಕಿದ್ದಂತೆ ದೊಡ್ಡವಳಾಗಿ

ಹೂವಾಗಿ ಕಾಯಾಗಿ
ಸಟ್ ಸಟ್ ಸಟ್
೧, ೨, ೩........ ಮಕ್ಕಳ ತಾಯಾಗಿ,
ಈಗ ಆಗಿದ್ದಾಳೆ ಹಣ್ಣು.
ಮಕ್ಕಳೆ,
ಕಿವುಚಬೇಡಿರಿ ಇನ್ನು.
ನಾ ಮತ್ತೆ ಕಾಯಾಗಿ ಮಿಡಿಯಾಗಿ ಹೂವಾಗಿ
ದೇಟಿನ ಗುಂಟ ಒಳಸೇರಿ ಬೀಜವಾಗಿ
ಮತ್ತೆ ಮುಗಿಲಿನ ಮಿಂಚ
ಮತ್ತೆ ಮುಗಿಲಿನ ಗುಡುಗ
ಬಯಸಿ, ಮುಗಿಲಿನ ದಾರಿ ಕಾಯಬೇಕು.
ಅಲ್ಲಿಯ ತನಕ
ನಿಮ್ಮ ನಿಮ್ಮ ಗುಬ್ಬಿ ಮನೆಗಳಲ್ಲಿ
ನಿಮ್ಮ ನಿಮ್ಮ ಕನ್ನೆಯರ ಕೂಡ
ಚಿನ್ನಾಟ ಕಟೆಯಿರಿ ನನ್ನ ಮೊದ್ದು ಕಂದಮ್ಮಗಳಿರ!

೨

ಈ ಪರಿಸ್ಥಿತಿ ಇತ್ತು. ಸರಿ,
ಈಗ ಅಡಿಗರಿಗೆ ೫೦
ಚಂಡೆ ಬಾರಿಸಿದ ಕೈ,
ಬೋಳು ತಲೆ ಮೇಲೆ
ಮುತ್ತಿನ ಕಿರೀಟ.
ಮುತ್ತಿನ ಕಿರೀಟದಲ್ಲಿ
ಅಲ್ಲಲ್ಲಿ ಗಾಜಿನ ಟುಕಡಿ.
ಕಾಜಿನ ಟುಕಡಿಯ ತುಂಬ
ಪರಾಕು ಪಂಪುಗಳ ಪ್ರತಿಬಿಂಬ.
ಅಡಿಗರಿಗೆ ಈಗ ತಾನೆ ೫೦
ಇನ್ನೂ ೧೦
ವರ್ಷ ಹರಕತ್ತಿಲ್ಲ–
ಅಂತೀರ ? ಅನ್ರಿ.

– ಚಂದ್ರಶೇಖರ ಪಾಟೀಲ

ಅಪ್ಪಟ ಸಾಹಿತ್ಯ ಪರಿಚಾರಕ
ಜಿ.ಪಿ. ರಾಜರತ್ನಂ

ರಾಜರತ್ನಂ ಒಂದು ದಿನ ತಮ್ಮ ಮನೆಯ ಬಳಿಯ ರಸ್ತೆಯೊಂದರಲ್ಲಿ ಹೋಗುತಿದ್ದಾಗ ರಸ್ತೆಯ ಬದಿಯಲ್ಲಿ ಇಬ್ಬರು ಪುಟ್ಟ ಹುಡುಗರು ಆಟವಾಡುತ್ತಿದ್ದರು. ಅವರಲ್ಲಿ ಒಬ್ಬ ರಾಜರತ್ನಂರನ್ನು ನೋಡಿದ. ಪಕ್ಕದ ಹುಡುಗನಿಗೆ ತೋರಿಸಿ "ಏ ನೋಡೋ ಅಲ್ಲಿಹೋಗ್ತಿದಾರಲ್ಲ ಅವರೇ ಕಣೋ ನಾಯಿಮರಿ ರಾಜರತ್ನಂ" ಅಂದ! ರಾಜರತ್ನಂ ಅವರ ನಾಯಿಮರಿ ಕವಿತೆ ಪ್ರೈಮರಿ ಶಾಲೆಯ ಪಠ್ಯಪುಸ್ತಕದಲ್ಲಿ ಇತ್ತು. ಹುಡುಗರಿಗೆಲ್ಲ ಅದು ಬಹಳ ಪ್ರಿಯವಾಗಿತ್ತು. ಹಾಗೆಂದೇ ಆ ಮುಗ್ಧ ಹುಡುಗ ತನ್ನ ಮಾತಿನ ಹಿಂದುಮುಂದು ತಿಳಿಯದೆಯೇ ಅವರಿಗೆ 'ನಾಯಿಮರಿ ರಾಜರತ್ನಂ' ಎಂಬ ಬಿರುದು ಕೊಟ್ಟು ಬಿಟ್ಟಿದ್ದ. ಕವಿತೆಯನ್ನಷ್ಟೇ ಅಲ್ಲ. ಕವಿತೆ ಬರೆದವರನ್ನೂ ಮಕ್ಕಳು ಗುರುತಿಟ್ಟುಕೊಂಡಿದ್ದವು. ರಾಜರತ್ನಂರಿಗೂ ಹುಡುಗನ ಮಾತು ಕೇಳಿಸಿತು. ಅವರಿಗೆ ನಗು, ಸಂತೋಷ, ಆಶ್ಚರ್ಯ!

ರಾಜರತ್ನಂ ಸಾಹಿತ್ಯದ ಎಲ್ಲ ಕ್ಷೇತ್ರಗಳಲ್ಲಿಯೂ ನಿರಂತರವಾಗಿ ಬರೆದವರು. ಮಕ್ಕಳ ಕವನಗಳನ್ನಂತೂ ಅವರು ವಿಪುಲವಾಗಿ ಬರೆದಿದ್ದಾರೆ. ಪುಟ್ಟ ಸಾಲುಗಳು, ಸರಳವಾದ ಭಾಷೆ, ಪ್ರಾಸಾನುಪ್ರಾಸಗಳ ರಂಜಕವಾದ ಚೌಕಟ್ಟುಗಳಲ್ಲಿ ಹೊಮ್ಮಿರುವ ಪುಟ್ಟ ಕವಿತೆಗಳು ಮಕ್ಕಳಿಗೆ ರುಚಿರುಚಿಯಾದ ತಿಂಡಿಯಷ್ಟೇ ಪ್ರಿಯವಾಗಿ ಹೋಗಿವೆ.

"ಅಡುಗೆಯ ಮನೆಯಲಿ ಗೋಡೆಯಲಿ
ತೂಗಿದ ಬಿದಿರಿನ ಗೂಡೆಯಲಿ
ಸರಸರವಾಗಿದೆ ಕೋಡುಬಳೆ
ನೋಡುತ ಕುಳಿತದೆ ಗೋಡೆ ಮೊಳೆ!"

"ರೊಟ್ಟಿಯಂಗಡಿಯ ಕಿಟ್ಟಪ್ಪ
ನನಗೊಂದು ರೊಟ್ಟಿ ತಟ್ಟಪ್ಪ
ಪುಟಾಣಿರೊಟ್ಟಿ ಕೆಂಪಗೆ ಸುಟ್ಟು
ಒಂಬತ್ತು ಕಾಸಿಗೆ ಕಟ್ಟಪ್ಪ
ಬಿದ್ದುಹೋದೀತು ಕಿಟ್ಟಪ್ಪ!"

"ದೊಡ್ಡಪಟ್ಟೆ ಹುಲಿ
ಕಾಡುದಾರಿಯಲಿ
ನಡುಗಿನಿಂತು ಹೇಳಿತಿಂತು
ಅಯ್ಯೊ ಅಪ್ಪ ಚಳಿ!"

ಇಂಥ ಚುಟುಕಗಳನ್ನು ಇಷ್ಟಪಡದ ಮಕ್ಕಳು ಎಲ್ಲಿವೆ?

ಐದು ವರ್ಷಗಳ ಕೆಳಗೆ ಅಮೇರಿಕದ ಆಸ್ಟಿನ್ ನಗರದಿಂದ ನನಗೊಂದು ಟೆಲಿಫೋನ್ ಕರೆ ಬಂತು. ಫೋನು ಮಾಡಿದವರು ಇಂಜಿನಿಯರ್ ವೆಂಕಟೇಶ್ ಮತ್ತು ಅವರ ಪತ್ನಿ ಪುಷ್ಪಾ "ಸಾರ್ ನಮ್ಮ ಪುಟ್ಟ ಮಗಳು ಮೇಘನಾ ನಿಮಗೆ ಗೊತ್ತಲ್ಲ. ಅವಳು ಇನ್ನು ಮೂರುದಿನಕ್ಕೆ ಇಲ್ಲಿಯ ಕನ್ನಡಕೂಟದ ಕಾರ್ಯಕ್ರಮದಲ್ಲಿ ಒಂದು ಡ್ಯಾನ್ಸ್ ಮಾಡಬೇಕಾಗಿದೆ. ಅದಕ್ಕೆ ರಾಜರತ್ನಂ ಬರೆದ 'ಬಣ್ಣದ ತಗಡಿನ ತುತ್ತೂರಿ' ಎಂಬ ಪದ್ಯಬೇಕು. ಇಲ್ಲಿ ಅದು ಸಿಗುವಂತಿಲ್ಲ, ದಯವಿಟ್ಟು ಏನಾದರೂ ಮಾಡಿ ನಾಳೆಯೊಳಗೆ ಅದು ನಮಗೆಸಿಗುವಂತೆ ಮಾಡಿ, ಪ್ಲೀಸ್' ಎಂದು ಆಗ್ರಹಪೂರ್ವಕ ಒತ್ತಾಯ ಮಾಡಿದರು. ನಾನು ಆಸ್ಟಿನ್ ನಗರಕ್ಕೆ ಹೋದಾಗ ಅವರ ಮನೆಯಲ್ಲಿ ತಂಗಿದ್ದೆ. ಮೇಘನಾ ನನಗೆ ಇಷ್ಟವಾದ ಹುಡುಗಿ. ಅವಳಿಗಾಗಿ ಈಗ ಆ ಪದ್ಯ ಕಳಿಸಲೇಬೇಕು.

ಮನೆಯಲ್ಲಿ, ಸ್ನೇಹಿತರ ಬಳಿ, ಹತ್ತಿರದ ಪುಸ್ತಕದಂಗಡಿಯಲ್ಲಿ ಹುಡುಕಿದ್ದಾಯಿತು. ಪದ್ಯ ಸಿಗಲಿಲ್ಲ. ಚಿಕ್ಕಂದಿನಲ್ಲಿ ನಾವೆಲ್ಲ ಇಷ್ಟಪಟ್ಟು ಹೇಳುತ್ತಿದ್ದ ಪದ್ಯ ಅದು. ಈಗಮರೆತುಹೋಗಿತ್ತು. ಹೋಗಲಿ.ನೆನಪಾಗುವ ಐದಾರು ಸಾಲುಗಳನ್ನಾದರೂ ಕಳಿಸೋಣ ಅಂತ ಪೆನ್ನು ಕಾಗದ ಹಿಡಿದು ಕೂತೆ. ನೆನಪಿಗೆತಂದುಕೊಳ್ಳಲು ಪ್ರಯತ್ನಿಸಿದೆ. ಮೊದಲ ಸಾಲು, ಕಡೆಯ ಸಾಲು, ನಡುವಿನ ಯಾವುದೋ ಒಂದು ಸಾಲು-ಹೀಗೆತಡೆತಡೆದು ಒಂದೊಂದು ಸಾಲುಹೊರಬಂದುವು. ಎಲ್ಲ ಜೋಡಿಸಿ,ಹೊಂದಿಸಿ, ಕೂಡಿಸಿ, ಇಟ್ಟಾಗ ಇಡೀ ಪದ್ಯ ಪ್ರತ್ಯಕ್ಷವಾಗಿ ಬಿಟ್ಟಿತ್ತು! ಫೋನು ಮಾಡಿ ವೆಂಕಟೇಶ್‌ಗೆ ಓದಿ ಹೇಳಿದೆ. ಅವರಿಗೆ ಖುಷಿಯೋ ಖುಷಿ. ಪ್ರೈಮರಿ ಕ್ಲಾಸಿನಲ್ಲಿದ್ದಾಗ ನಾನು ಇಷ್ಟಪಟ್ಟು ಹೇಳುತ್ತಿದ್ದ

ಪದ್ಯದ ಎಲ್ಲ ಸಾಲುಗಳೂ ಮನಸ್ಸಿನಾಳದ ಯಾವುದೋ ಮೂಲೆಗಳಲ್ಲಿ ಸೇರಿಕೊಂಡಿದ್ದುವು. ಈಗ ಇಲ್ಲವೂ ಮೆಲ್ಲಗೆ ಎದ್ದು ಬಂದಿದ್ದುವು. ಈಗ ಬೆಳೆದು ನಿಂತಿರುವ ನಮ್ಮನ್ನು ನಾವು ಮಕ್ಕಳಾಗಿದ್ದಾಗಲೇ ರಾಜರತ್ನಂ ಕೈವಶ ಮಾಡಿಕೊಂಡು ಬಿಟ್ಟಿದ್ದ ರೀತಿ ಆಶ್ಚರ್ಯಕರವಾಗಿ ತೋರಿತು.

ರಾಜರತ್ನಂ ಹುಟ್ಟಿದ್ದು ಹಿಂದೆ ಕ್ಲೋಸ್‌ಪೇಟೆ ಎಂದು ಕರೆಸಿಕೊಂಡಿದ್ದ, ಈಗಿನ ರಾಮನಗರದಲ್ಲಿ, ಬಹಳ ಹಿಂದೆ ತಮಿಳುನಾಡಿನಿಂದ ಬಂದ ಅವರ ಹಿರಿಯರಲ್ಲೊಬ್ಬರು 'ಗುಂಡ್ಲು' ಎಂಬ ಊರಿನಲ್ಲಿ ಆಯುರ್ವೇದ ಪಂಡಿತರಾಗಿದ್ದರಂತೆ. ಅವರಿಗೆ 'ಗುಂಡ್ಲುಪಂಡಿತ' ಎಂಬಹೆಸರು ಗಂಟುಬಿತ್ತು. ಹೀಗೆ ರಾಜರತ್ನಂ ಕೂಡ ಜಿ.ಪಿ. ಎಂದರೆ ಗುಂಡ್ಲು ಪಂಡಿತ ರಾಜರತ್ನಂ ಆದರು. ಮಾಸ್ತಿ ಡಿವಿಜಿ, ಕೈಲಾಸಂ, ಪುತಿನ, ಡಿ.ಎಲ್. ನರಸಿಂಹಾಚಾರ್ಯರಂತೆ ರಾಜರತ್ನಂ ಅವರ ಮಾತೃಭಾಷೆ ಕೂಡ ತಮಿಳು. ಆದರೆ ಅವರು 'ಕನ್ನಡ ಪರಿಚಾರಿಕೆ'ಯಲ್ಲಿ ತಮ್ಮ ಬದುಕನ್ನೆಲ್ಲ ಗಂಧದ ಕೊರಡಿನಂತೆ ತೇದು ಅಪ್ಪಟ ಕನ್ನಡಿಗರಾಗಿ ಕರ್ನಾಟಕದ ತುಂಬ ಪರಿಮಳವಾಗಿ ಹರಡಿಹೋದರು.

ರಾಜರತ್ನಂ ಕನ್ನಡದಲ್ಲಿ ದೊಡ್ಡ ಹೆಸರು, ತರಗತಿಯ ಪಾಠ, ಹೊರಗೆ ಉಪನ್ಯಾಸ, ಪದ್ಯವಾಚನ, ಪತ್ರಿಕಾಲೇಖನ, ರೇಡಿಯೋ ಭಾಷಣ, ಕರ್ನಾಟಕ ಸಂಘದ ಕಾರ್ಯಕ್ರಮ–ಹೀಗೆ ಯಾವಾಗಲೂ, ಎಲ್ಲೆಲ್ಲೂ ರಾರಾಜಿಸುತ್ತಿದ್ದ ಉಜ್ವಲ ವ್ಯಕ್ತಿತ್ವ ಅವರದ್ದು. ಇಂಥವರು ಎಂ.ಎ. ಪದವಿ ಓದಿ ಮುಗಿಸಿದಾಗ ಎಷ್ಟು ಪ್ರಯತ್ನಿಸಿದರೂ ಒಂದು ತಕ್ಕ ಕೆಲಸ ಸಿಗಲಿಲ್ಲ. ಬೇಸತ್ತ ರಾಜತ್ನಂ ಕೊನೆಗೆ ಸೆನ್ಸಸ್ ಇಲಾಖೆಯಲ್ಲಿ ಆರು ತಿಂಗಳಿಗೆ ಮಾತ್ರ ಖಾಲಿ ಇತ್ತು, ಇಪ್ಪತ್ತೈದು ರೂಪಾಯಿ ಸಂಬಳದ ಸಾರ್ಟರ್ ಕೆಲಸಕ್ಕೆಅರ್ಜಿ ಹಾಕಿದರು. ಆಗ ಆ ಇಲಾಖೆಯ ಕಮಿಷನರ್ ಆಗಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರರಿಗೆ ಅದು ತಿಳಿಯಿತು. ಎಂ.ಎ. ಮಾಡಿದ ವ್ಯಕ್ತಿಗೆ 'ಸಾರ್ಟರ್' ಕೆಲಸವೇ ಎನಿಸಿ ಅವರಿಗೆ ನೋವಾಯಿತು. ಅವರು ರಾಜರತ್ನಂರನ್ನು ಕರೆಸಿ "ಇದು ಆರುತಿಂಗಳ ಕೆಲಸಕಣಪ್ಪ. ಇದು ನಿನಗೆ ಬೇಡ. ನಾನೇ ನಿನಗೆ ಆರುತಿಂಗಳು ಎಪ್ಪತ್ತೈದು ರೂಪಾಯಿಸಂಬಳ ಕೊಡುತ್ತೇನೆ. ಯಾವುದಾದರೂ ಉಪಯುಕ್ತ ಕನ್ನಡ ಪುಸ್ತಕ ಬರಿ" ಎಂದು ಒಂದು ತಿಂಗಳ ಸಂಬಳ ಮುಂದಾಗಿಯೇ ಕೊಟ್ಟರು! ಅದಕ್ಕೆ ಸಂತೋಷದಿಂದ ಒಪ್ಪಿದ ರಾಜರತ್ನಂ ಆ ಅವಧಿಯಲ್ಲಿ ಚೀನಾದೇಶದ ಪ್ರವಾಸಿ ಫಾಹಿಯಾನನ ಭಾರತಯಾತ್ರೆಯ ಕುರಿತು ಬರೆದರು. ಮುಂದೆ ಹ್ಯೂಯೆನ್‌ತ್ಸಾಂಗ್ ಮೊದಲಾದ ಇತರ ಚೀನಾ ಪ್ರವಾಸಿಗಳ

ಬಗ್ಗೆಯೂ ಬರೆದು ಸೇರಿಸಿ "ಚೀನಾದೇಶದ ಬೌದ್ಧಯಾತ್ರಿಕರು" ಎಂಬ ಸೊಗಸಾದ ಪುಸ್ತಕ ಹೊರತಂದರು.

ತಮ್ಮ ಇಪ್ಪತ್ತನೆಯ ವಯಸ್ಸಿನಿಂದಲೇ ರಾಜರತ್ನಂ ಕನ್ನಡಧಲ್ಲಿ ಬರೆಹ ಆರಂಭಿಸಿಬಿಟ್ಟಿದ್ದರು. ವಿದ್ಯಾರ್ಥಿಯಾಗಿದ್ದಾಗಲೇ ಅವರು ಬರೆದ 'ತಾರೆ' ಎಂಬ ದೀರ್ಘ ಕವಿತೆ ಮೈಸೂರು ವಿಶ್ವವಿದ್ಯಾನಿಲಯದ ಬಿ.ಎಂ. ಶ್ರೀ ಕವನ ಸ್ಪರ್ಧೆಯಲ್ಲಿ ಸ್ವರ್ಣ ಪದಕ ಗೆದ್ದುಕೊಂಡಿತು. ಮುಂದೆ 'ರತ್ನನ ಪದಗಳು' ಹೊರಬಂದು ನಾಡಿನಾದ್ಯಂತ ಪ್ರಸಿದ್ಧವಾಯಿತು. ನಂತರ ಅದೇ ಮಾದರಿಯ 'ನಾಗನ ಪದಗಳು' ಹೊರಬರಲೂ ಅದು ಕಾರಣವಾಯಿತು. 'ಗಂಡುಗೊಡಲಿ' ಎನ್ನುವುದು ಅವರದೇ ಇನ್ನೊಂದು ಸತ್ವಪೂರ್ಣ ಸೃಜನಾತ್ಮಕ ಕಾವ್ಯನಾಟಕ. ಮುಂದೆ ಅವರಿಂದ ಬರೆಹಗಳ ಪ್ರವಾಹವೇ ಹರಿಯಿತು. ಜೈನಸಾಹಿತ್ಯ, ಬೌದ್ಧ ಸಾಹಿತ್ಯ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ನಲವತ್ತಕ್ಕೂ ಮೀರಿ ಹೊತ್ತಗೆಗಳು ಹೊರಬಂದವು. ಹಳಗನ್ನಡ ಕಾವ್ಯಗಳ ಅಧ್ಯಯನಕ್ಕೆ ನೆರವಾಗುವ 'ಶ್ರೀಕವಿ ರತ್ನ' ಶ್ರೀ ಕವಿ ಪಂಪ' ಮೊದಲಾಗಿ ಹದಿನೈದಕ್ಕೂ ಮೀರಿದ ಪುಸ್ತಕಗಳೂ ಮತ್ತು ವಿಷ್ಣುಭಕ್ತಿ ಸಾಹಿತ್ಯಕ್ಕೆ ಸಂಬಂಧಿಸುವ ಇಪ್ಪತ್ತು ಕೃತಿಗಳೂ ಹೊರಬಂದವು. ತಮಗೆ ಆಪ್ತರಾಗಿದ್ದ ನಾಟಕಕಾರ ಕೈಲಾಸಂರವರ ಸಂಬಂಧದಲ್ಲಿಯೇ ಹದಿನಾಲ್ಕು ಹೊತ್ತಗೆಗಳು ಪ್ರಕಟವಾದುವು. 'ಪುರುಷ ಸರಸ್ವತಿ' ಅವರಿಂದ ರಚಿತವಾದ ಸೊಗಸಾದ ವಿಡಂಬನ ಕೃತಿ. ನೂರಾರು ರೇಡಿಯೋ ಉಪನ್ಯಾಸಗಳನ್ನು ಮಾಡಿದ ರಾಜರತ್ನಂ 'ಸುಧಾ' ವಾರಪತ್ರಿಕೆಯಲ್ಲಿ 'ವಿಚಾರ ರಶ್ಮಿ' ಎಂಬ ಶೀರ್ಷಿಕೆಯಲ್ಲಿ ಹತ್ತೊಂಬತ್ತು ವರ್ಷಗಳ ಕಾಲ ಅಂಕಣ ಲೇಖನ ಬರೆದರು. ಮುಂದೆ ಅದು ಪುಸ್ತಕ ರೂಪದಲ್ಲಿ ಪ್ರಕಟವಾಯಿತು.

ತಮ್ಮ ವಿದ್ಯಾರ್ಥಿಗಳಲ್ಲಿ ಕನ್ನಡ ಪುಸ್ತಕ ಓದುವ, ಕನ್ನಡದಲ್ಲಿ ಬರೆಯುವ ಪ್ರವೃತ್ತಿಯನ್ನು ಅಗಾಧ ಪ್ರಮಾಣದಲ್ಲಿ ಬೆಳೆಸಿದವರು ರಾಜರತ್ನಂ. ಆ ಕೆಲಸದಲ್ಲಿ ಅವರನ್ನು ಮೀರಿಸಿದವರೇ ಇಲ್ಲ. ಮುಂದೆ ಪ್ರಸಿದ್ಧ ಲೇಖಕರಾಗಿ ಪರಿಣಮಿಸಿದ ನಿಸಾರ್ ಅಹಮದ್, ಲಂಕೇಶ್, ಸುಮತೀಂದ್ರನಾಡಿಗ ಮೊದಲಾದವರನ್ನು ಅವರ ವಿದ್ಯಾರ್ಥಿ ದೆಸೆಯಲ್ಲೇ ತಿದ್ದಿ ಅವರ ವ್ಯಕ್ತಿತ್ವ ರೂಪಿಸಿದ ಕೀರ್ತಿ ರಾಜರತ್ನಂ ಅವರದೇ. ಕೃಷ್ಣಶಾಸ್ತ್ರಿಗಳು ಕಟ್ಟಿದ ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘವನ್ನು ಇನ್ನಷ್ಟು ಬೆಳೆಸಿ, ಅದರ ಮೂಲಕ ವಿದ್ಯಾರ್ಥಿಗಳದ್ದೇ ಅಲ್ಲದೆ ಕೆಲವರು ಪ್ರಸಿದ್ಧ ಲೇಖಕರ ಕೃತಿಗಳನ್ನೂ ಅವರು ಪ್ರಕಟಿಸಿದರು. ಗಿಳಿವಿಂಡು, ಸೊಹ್ರಾಬ್-ರುಸ್ತುಂ, ಸಾಕ್ರಟೀಸನ ಮರಣ, ಪಂಚಕಲಶಗೋಪುರ ಇವು ಹಾಗೆ ಹೊರಬಂದ ಪುಸ್ತಕಗಳು.

ಜಿ.ಎಸ್. ಶಿವರುದ್ರಪ್ಪನವರ ಮೊದಲ ಕವಿತೆಯನ್ನು ಹಸ್ತಪ್ರತಿಯಲ್ಲೆ ಓದಿ, ಮೆಚ್ಚಿ ಮಾಸ್ತಿಯವರ ಜೀವನ ಪತ್ರಿಕೆಯಲ್ಲಿ ಅದು ಪ್ರಕಟವಾಗುವಂತೆ ಮಾಡಿದ

ರಾಜರತ್ನಂ, ನರಸಿಂಹಸ್ವಾಮಿಯವರಿಗೆ ಕವಿತಾ ವಾಚನದ ರೀತಿ ತೋರಿಸಿಕೊಟ್ಟವರು. ಗೆಳೆಯ 'ರಾಶಿ'ಯವರಿಗೆ ಗ್ರಂಥರಚನೆ ಮಾಡಲು ಪ್ರೇರೇಪಿಸಿದವರೂ ಅವರೇ.

ರಾಜರತ್ನಂಗೆ ತುಂಬ ಪ್ರಸಿದ್ಧಿ ತಂದುಕೊಟ್ಟ ಸೃಜನಾತ್ಮಕ ಕೃತಿಯೆಂದರೆ 'ರತ್ನನಪದಗಳು', ರತ್ನನ ಪದಗಳೆಲ್ಲ ಬಿಡಿಬಿಡಿಯಾದಕವಿತೆಗಳಾದರೂ ಒಟ್ಟಾಗಿ ಅದು ಅವನ ಆತ್ಮಕಥನದಂತಿದೆ. ಅವುಗಳಲ್ಲಿ ಮುಖ್ಯವಾಗಿ ಮೂರುನಾಲ್ಕು ಜನ ಬರುತ್ತಾರೆ. ರತ್ನ, ಅವನ ಪತ್ನಿ ಪುಟ್ಟನಂಜಿ, ಪಡಖಾನೆಯಲ್ಲಿ ಹೆಂಡ ಮಾರುವ ಮುನಿಯ ಮತ್ತು ರತ್ನ ಹಾಡುವ ಪದಗಳನ್ನೆಲ್ಲ ಬರೆದುಕೊಳ್ಳುವ 'ಬೇವಾರ್ಸಿ'. ರತ್ನ ಕೆಳವರ್ಗದಿಂದ ಬಂದೊಬ್ಬ ಬಡವ. ಕಷ್ಟಪಟ್ಟು ದುಡಿಯುವವ. ಆದರೆ ಅವನೊಬ್ಬ ಕುಡುಕ. ಅದು ಅವನ ದೌರ್ಬಲ್ಯ. ಹೀಗಿದ್ದರೂ ಅವನು ರತ್ನದಂಥ ಮನುಷ್ಯ. ತನ್ನ ಹೆಂಡತಿ ಪುಟ್ನಂಜಿಯ ವ್ಯಕ್ತಿತ್ವ, ರೂಪ, ತನಗೆ ಅವಳಲ್ಲಿರುವ ಅಪಾರ ಪ್ರೀತಿ, ಅವಳು ಒಲಿಯುತ್ತ, ಮುನಿಯುತ್ತ ತನ್ನನ್ನು ತಿದ್ದುವ ರೀತಿ, ಹೆಂಡಮಾರುವ ಮುನಿಯನ ಜೀನತನ, ವಂಚನೆಯಬುದ್ಧಿ–ಇದೆಲ್ಲ ಕುರಿತು ರತ್ನ ತನ್ನದೇ ಭಾಷೆಯಲ್ಲಿ ಪದ್ಯಗಳನ್ನು ಹಾಡುತ್ತಾನೆ. ಮನುಷ್ಯನ ನೀತಿ, ನಡತೆಗಳ ಬಗ್ಗೆಯೂ ಹೆಂಡದ ಮಹಿಮೆಯ ಬಗ್ಗೆಯೂ ಅವನದೇ ಆದ ವ್ಯಾಖ್ಯಾನವಿದೆ. ತನ್ನ ಪುಟ್ನಂಜಿಯ ಚೆಲುವನ್ನು ಅವನು ವರ್ಣಿಸುವ ರೀತಿ ತುಂಬ ಆಕರ್ಷಕವಾಗಿದೆ.

ಅಲ್ನಲ್ ಕಮಲದ ಊ ತೇಲ್ಬುಟ್ಟ
ಮೇಲ್ ಒಂದ್ ತೆಳ್ನೆ ಲೇಪ
ಚಿನ್ನದ್ ನೀರಲ್ಲೊಟ್ಟಂಗೈತೆ
ನನ್ ಪುಟ್ನಂಜಿ ರೂಪ

ಎಂದು ರತ್ನ ಹೆಮ್ಮೆಯಿಂದ ಕೊಚ್ಚಿಕೊಳ್ಳುತ್ತಾನೆ.

ಹೆಂಡ ಮಾರುವಾಗ ವಂಚನೆ ಮಾಡಬಾರದೆಂದು ಮುನಿಯನಿಗೆ ಬುದ್ಧಿ ಹೇಳುವ ರತ್ನ ಅವನ ಜೀನತನವನ್ನು ಹಳಿಯುವ ರೀತಿ ಇದು.

ಕಾಸಿಗ್ ಕಾಸ್ ಗಂಟಾಕಿ
ಒಟ್ಟೇಗ್ ಬೆಸ್ ಅಂಟಾಕಿ
ನಾನೂ ಒಬ್ ಶೆಟ್ಟಿ, ದುಡ್ಡೈತಿ ಗಟ್ಟಿ
ಅಂತಂತಿ ಮುನ್ಯ, ಚಂದಾನ ಮುನ್ಯ?

ರತ್ನನಿಗೆ ಕನ್ನಡ ಭಾಷೆಯ ಮೇಲಿರುವ ಪ್ರೀತಿ ಅಳತೆಗೆ ಮೀರಿದ್ದು. ಕನ್ನಡ ಅವನಿಗೆ ಎಲ್ಲಕ್ಕಿಂತ ದೊಡ್ಡದು. "ನರಕಕ್ ಇಳ್ಸಿ, ನಾಲ್ಗೆ ಸೀಳ್ಸಿ, ಬಾಯ್ ಒಲ್ಸಾಕಿದ್ರೂನೆ

ಮೂಗ್ನಲ್ ಕನ್ನಡ ಪದವಾಡ್ತೀನಿ. ನನ್ ಮನಸ್ಸನ್ ನೀ ಕಾಣೆ" ಎಂದು ಅವನು ಕನ್ನಡದ ಮೇಲೆ ನಮಗಿರಬೇಕಾದ ಆಭಿಮಾನವನ್ನು ಪರೋಕ್ಷವಾಗಿ ಆಡುತ್ತಾನೆ.

ದೆಹಲಿಯಲ್ಲಿ ನಡೆದ ೫೦ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಗೌರವಕ್ಕೆ ಪಾತ್ರರಾದ ರಾಜರತ್ನಂ ಅವರಿಗೆ ಮೈಸೂರು ವಿಶ್ವವಿದ್ಯಾಲಯ ಡಿ.ಲಿಟ್ ಪ್ರಶಸ್ತಿ ನೀಡಿತು. ಈ ಡಿಸೆಂಬರ್ ಐದಕ್ಕೆ ರಾಜರತ್ನಂ ಜನಿಸಿ ನೂರು ವರ್ಷ ತುಂಬುತ್ತದೆ.

ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳು ರಾಜರತ್ನಂ ಮತ್ತು ಅವರ ಸಾಹಿತ್ಯ ಕುರಿತ ಲೇಖನಗಳ ಒಂದು ಪುಸ್ತಕ ಬರೆದು ಗುರುಗಳಿಗೆ ಅರ್ಪಿಸಿದರು. ಆ ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ ಡಾ.ಎ.ಆರ್. ಕೃಷ್ಣಶಾಸ್ತ್ರಿಗಳು ಬರೆದ ಮಾತು ಇದು.

"ಶಿಷ್ಯ ಪ್ರೀತಿಯನ್ನು ಸಂಪಾದಿಸಿದ ರಾಜರತ್ನಂರಂಥ ಉಪಾಧ್ಯಾಯ ಪುಣ್ಯವಂತ. ಅವನ ಶಿಷ್ಯರು ಧನ್ಯರು. ಶಿಷ್ಯರಲ್ಲಿ ನಿಗೂಢವಾಗಿದ್ದ ಚೈತನ್ಯ ಮೊಳೆತು, ಬೆಳೆದು ಫಲಿಸುವಂತೆ ಮಾಡಿರುವ ಅವರಂಥ ಉಪಾಧ್ಯಾಯರು ಅತಿ ವಿರಳ. ಅವರ ಪ್ರಯತ್ನದಿಂದ ಎಷ್ಟೋ ಕಿರುತಾರೆಗಳು ಹಗಲು ಹೊತ್ತಿನಲ್ಲಿಯೇ ಕಣ್ಣಿಗೆ ಬೀಳುವಂತಾದುವು. ನನಗೆ ಇದು ಆನಂದದಾಯಕವಾದ ಸಂಗತಿ."

●

ಸಾರ್ಥಕ ಜೀವನದ ಕೀರ್ತಿಪ್ರಭೆಯಲ್ಲಿ ಜಿ. ಎಸ್.ಎಸ್.

ಎದೆ ತುಂಬಿ ಹಾಡಿದೆನು ಅಂದು ನಾನು
ಮನವಿಟ್ಟು ಕೇಳಿದಿರಿ ಅಲ್ಲಿ ನೀವು

ಈ ಸಾಲುಗಳನ್ನು ಕೇಳದಿರುವ, ಮನಸ್ಸಿನಲ್ಲೇ ಹಾಡಿಕೊಳ್ಳದಿರುವ ಕಾವ್ಯಪ್ರೇಮಿ ಯಾರು? ಕವಿ ಶಿವರುದ್ರಪ್ಪನವರು ಇದನ್ನು ಬರೆದಾಗ ಅವರ ಮನಸ್ಸಿನಲ್ಲಿ ಇದ್ದದ್ದು ಅವರ ಗುರುಗಳಾದ ತ. ಸು. ಶಾಮರಾಯರು ಒಬ್ಬರೇ. ಈ ಕವಿಯ 'ಬಾಳಿನ ಬಿರುಬಿಸಿಲ ಪಥದಲ್ಲಿ ನೆರಳಾಗಿ ನಿಂತ' ವೃಕ್ಷ ಅವರು. ಆದರೆ ಅಂದು ಒಬ್ಬ ಕವಿ ಒಬ್ಬ ಸಹೃದಯನ ಎದುರು ಆಡಿದ ಈ ಸಾಲುಗಳನ್ನು ಇಂದು ನೂರಾರು ಜನ ಗಾಯಕರು ಸಹಸ್ರ ಸಹಸ್ರ ಕಾವ್ಯಪ್ರೇಮಿಗಳಿಗೆ ಹಾಡುತ್ತಿದ್ದಾರೆ. ಕವಿಯೊಬ್ಬನ ಮನಸ್ಸಿನಲ್ಲಿ ಮೈತಾಳಿದ ಶಕ್ತಿಯುತವಾದ ಒಂದು ಕವಿತೆ ಹೀಗೆ ನೂರು, ಸಾವಿರ, ಲಕ್ಷ ಜನರ ಹೃದಯದೊಳಕ್ಕೆ ಹಿಗ್ಗಿನ ಹಾಡಾಗಿ ನುಗ್ಗಿ ಆನಂದದ ಲಹರಿಗಳೆನ್ನೆಬ್ಬಿಸುವ ಪವಾಡ ಎಷ್ಟು ಆಶ್ಚರ್ಯಕರವಾದದ್ದು! ಎಷ್ಟೇ ಪ್ರಸಿದ್ಧರಾಗಿದ್ದರೂ ಇಂಥ ಭಾಗ್ಯ ಎಲ್ಲ ಕವಿಗಳಿಗೆ ಇಲ್ಲ; ಎಲ್ಲೋ ಬೆರಳಲ್ಲೆಣಿಸುವಷ್ಟು ಕವಿಗಳಿಗೆ ಮಾತ್ರ. ಡಾ. ಜಿ. ಎಸ್. ಶಿವರುದ್ರಪ್ಪ ನವರು ಅಂಥ ಭಾಗ್ಯವಂತ ಕವಿಗಳಲ್ಲಿ ಒಬ್ಬರು.

ಶಿವರುದ್ರಪ್ಪನವರು ಹುಟ್ಟಿದ್ದು ಶಿಕಾರಿಪುರದಲ್ಲಿ. ತಂದೆ ಪ್ರೈಮರಿ ಶಾಲೆಯಲ್ಲಿ ಶಿಕ್ಷಕರು. ಮನೆ ತುಂಬ ಮಕ್ಕಳು. ಆಸ್ತಿಪಾಸ್ತಿಗಳಂಥ ಯಾವ ಅರ್ಥಾವರಣಗಳ ರಕ್ಷೆಯೂ ಇಲ್ಲದ ಬಡಕುಟುಂಬ ಅವರದ್ದು. ಹಿರಿಯ ಮಗ ದುಡಿಯಲು ನಿಂತರೆ ಬವಣೆ ಕೊಂಚ ಕಡಮೆಯಾದೀತು ಅಂತ ತಂದೆಗೆ ಅನ್ನಿಸಿದ್ದರೆ ಸಹಜವೇ. ಹೈಸ್ಕೂಲು ಮುಗಿದ ಕೂಡಲೇ ತಂದೆ ಮಗನನ್ನು ಬೆಂಗಳೂರಿನ 'ಏರೋಪ್ಲೇನ್ ಫ್ಯಾಕ್ಟರಿಗೆ' ಕೆಲಸಕ್ಕೆ ಹಾಕಲು ನೋಡಿದರು. ಆದರೆ ಬೆಂಗಳೂರಿಗೆ ಹೋದ

ಹುಡುಗ 'ಫಿಸಿಕಲ್ ಫಿಟ್‌ನೆಸ್' ಇಲ್ಲ ಅಂತ ವಾಪಸ್ಸು ಬಂದ. ಅಪ್ಪ ಬಿಡಲಿಲ್ಲ. ಪುನಃ ಬೆಂಗಳೂರು ಮುನಿಸಿಪಾಲಿಟಿಯ ಬಿಲ್ ಕಲೆಕ್ಟರ್ ಕೆಲಸಕ್ಕೆ ಅರ್ಜಿ ಹಾಕಿಸಿದರು.

ಇಂಟರ್‌ವ್ಯೂನಲ್ಲಿ ಅರ್ಜಿದಾರನನ್ನು ನೋಡಿದ ಸಾಹೇಬರು, ಹೊರಗೆ ನಿಂತಿದ್ದ ತಂದೆಯನ್ನು ಕರೆಸಿ ಹುಡುಗ ತೀರ ಚಿಕ್ಕದು. ಇನ್ನೆರಡು ವರ್ಷ ಓದಿಸಿ ಅಂತ ಬುದ್ಧಿ ಹೇಳಿ ವಾಪಸ್ಸು ಕಳಿಸಿದರು. ವಿಮಾನ ಕಾರ್ಖಾನೆ, ಮುನಿಸಿಪಾಲಿಟಿಗಳು ಮಾಡಿದ ನಿರಾಕರಣೆ ತಂದೆಯ ಪಾಲಿಗೆ ಒಂದು ಶಾಪದಂತೆ ಕಂಡಿರಬಹುದು. ಆದರೆ ಮುಂದೆ ರೂಪು ಪಡೆಯಲಿದ್ದ ಕವಿಗೆ ಮಾತ್ರ ಅದು ಪರೋಕ್ಷವಾಗಿ ಒಂದು ವರವೇ ಆಯಿತು. "ನಾನು ತಿಳಿಯದೆ ಸಲ್ಲಿಸಿದ ಬೇಡಿಕೆಗಳನ್ನೆಲ್ಲ ನಿನ್ನ ಕ್ರೂರ ಕರುಣೆಯಿಂದ ನಿರಾಕರಿಸಿ ನನ್ನನ್ನು ಕಾಪಾಡಿದ್ದೀಯೆ, ದಯಾಮಯ" ಅಂತ ರವೀಂದ್ರರು ಭಗವಂತನಿಗೆ ತಮ್ಮ ಕೃತಜ್ಞತೆ ಸಲ್ಲಿಸುವ ಮಾತೊಂದಿದೆ. ಶಿವರುದ್ರಪ್ಪನವರನ್ನು ಬಿಲ್ ಕಲೆಕ್ಟರ್ ಕೆಲಸ ತಪ್ಪಿಸಿ ಕಾಪಾಡಿದ್ದು ಇಂಥ 'ಕ್ರೂರ ಕರುಣೆ'ಯೇ. ಈಗ ನಿಂತಿರುವ ನೆಲೆಯಿಂದ ಹಿಂದೆ ನಡೆದು ಹೋದ ಘಟನೆಗಳ ಮೇಲೆ ಕಣ್ಣು ಹಾಯಿಸಿದಾಗ 'ಇಂದಿನ ಅನಿಷ್ಟಮೆಯೆ ತೊಟ್ಟಿಲಾಗದೆ ಮುಂದಣಭ್ಯುದಯ ಸುಖಕೆ' ಎಂಬ ಕುವೆಂಪು ಮಾತು ಕೆಲವರ ವಿಷಯಕ್ಕಾದರೂ ಅಕ್ಷರಶಃ ಸತ್ಯ ಎನ್ನಿಸುವುದುಂಟು.

ಕಾಣದ ಕೈಯೊಂದರ ಸಹಾಯದಿಂದ ಎಂಬಂತೆ ಇಂಥ ಇನ್ನೂ ಹಲವು ಅಡ್ಡಿತಡೆಗಳನ್ನು ದಾಟಿ ಬಂದ ಹುಡುಗ ಮೈಸೂರಿನ ಮಹಾರಾಜ ಕಾಲೇಜಿಗೆ ಬಂದು ಕನ್ನಡ ಆನರ್ಸ್ ಸೇರಿಕೊಂಡ. ಆಗ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಅಲ್ಲಿಗೆ ಬಂದ ಕುವೆಂಪು ಅವನಿಗೆ ಗುರುಗಳಾಗಿ ದೊರೆತರು. ಹುಡುಗನ ಪುಣ್ಯ ಈಗ ಪಲ್ಲವಿಸತೊಡಗಿತು. ಮುಂದೆ ನಾಲ್ಕು ವರ್ಷಗಳ ಕಾಲ ಕುವೆಂಪು ಅವರ ಪದತಲದಲ್ಲಿ ಕುಳಿತು ಕಾವ್ಯರಹಸ್ಯವನ್ನು ಆಲಿಸುವ ಭಾಗ್ಯ ಅವನದಾಯಿತು.

ಜಿ.ಎಸ್.ಎಸ್. ಆಗಲೇ ಬರೆಹಕ್ಕೆ ತೊಡಗಿದ್ದರು. ಅವರ ಕವಿತೆಯೊಂದನ್ನು ನೋಡಿ, ಮೆಚ್ಚಿ ಅದನ್ನು ಪ್ರಕಟಣೆಗಾಗಿ ಮಾಸ್ತಿಯವರಿಗೆ ಕೊಟ್ಟವರು ರಾಜರತ್ನಂ. ಜಿ.ಎಸ್.ಎಸ್. ಕವಿತೆ ಹೀಗೆ ಮೊದಲಬಾರಿಗೆ ಮಾಸ್ತಿ ಸಂಪಾದಕತ್ವದ ಜೀವನ ಪತ್ರಿಕೆಯಲ್ಲಿ ಪ್ರಕಟವಾಯಿತು. "ಶಿವರುದ್ರಪ್ಪನಂತಹ ಶ್ರೇಷ್ಠ ಕವಿಯ ಕವಿತೆಯನ್ನು ಮೊದಲು ಪ್ರಕಟಿಸಿದವನು ನಾನು" ಅಂತ ಮುಂದೆ ಮಾಸ್ತಿ ಹಲವು ಕಡೆ ಸಂತೋಷದಿಂದ ಹೇಳಿಕೊಂಡದ್ದುಂಟು.

ತಮಗೆ ಸಿಕ್ಕ ಬಡ ವಿದ್ಯಾರ್ಥಿಗಳನ್ನೆಲ್ಲ ತಮ್ಮ ಮಕ್ಕಳಂತೆಯೇ ಕಾಣುತ್ತ, ತಮ್ಮ ಸಾಮರ್ಥ್ಯಕ್ಕೆ ಮಿತಿಯೇ ಇಲ್ಲವೇನೋ ಎನ್ನುವಂತೆ ಕೆಲವರ ಊಟ

ವಸತಿಗಳ ಹೊಣೆಯನ್ನೂ ಹೆಗಲಿಗೆ ಕಟ್ಟಿಕೊಂಡು ಬಿಡುತ್ತಿದ್ದ ತ. ಸು. ಶಾಮರಾಯರು ಜಿ.ಎಸ್.ಎಸ್. ಅವರಿಗೆ ಒಂದು ನಿಧಿಯೆಂಬಂತೆ ದೊರೆತದ್ದು ಇಲ್ಲಿಯೇ. 'ಏನೋ ಮರಿ, ಏನು ಬರೆದಿದೀಯ ತಗೊಂಡು ಬಾ' ಅಂತ ಪ್ರೋತ್ಸಾಹಿಸುತ್ತ, ಹುಡುಗ ತಂದ ಪದ್ಯಗಳ ಮೇಲೆ ಕಣ್ಣಾಡಿಸಿ, ಅವು ಹೇಗೆ ಇದ್ದರೂ 'ಆಹಾ', 'ಓಹೋ'. 'ಶಹಭಾಸ್', 'ಏನು ಚೆನ್ನಾಗಿ ಬರೀತಿಯೋ ಮುಂಡೇದೇ' ಇತ್ಯಾದಿ ಉದ್ಗಾರ ತೆಗೆಯುತ್ತ ಅವನನ್ನು ಬರೆಹಕ್ಕೆ ಪ್ರೋತ್ಸಾಹಿಸಿದವರು ಶಾಮರಾಯರೇ. ಮುಂದೊಂದು ದಿನ ಪುಟ್ಟಪ್ಪನವರಿಗೆ ಹುಡುಗ ಪದ್ಯಗಳನ್ನು ಬರೀತಿದಾನೆ ಅನ್ನೋದು ತಿಳಿದು ಕುತೂಹಲದಿಂದ ಅವುಗಳನ್ನು ತರಿಸಿಕೊಂಡರು. ಪದ್ಯಗಳ ಮೇಲೆ ಕಣ್ಣಾಡಿಸಿ, ಕೆಲವನ್ನು ಪರವಾಗಿಲ್ಲ ಅಂತ ಗುರುತು ಮಾಡಿ ಪ್ರಬುದ್ಧ ಕರ್ನಾಟಕ ಪತ್ರಿಕೆಗೆ ಕೊಟ್ಟರು. ಅಲ್ಲಿಂದ ಮುಂದೆ ಹುಡುಗ ಬರೆದ ಪದ್ಯಗಳು ಅದರಲ್ಲಿ ಪ್ರಕಟವಾಗತೊಡಗಿದವು. ಬಹುಶಃ ಅಲ್ಲಿಗೆ ಜಿ.ಎಸ್.ಎಸ್. ಅವರ ಕಾವ್ಯಜೀವನ ಸ್ಪಷ್ಟವಾಗಿ ಆರಂಭವಾಯಿತು. ಮುಂದೆ ಅವರ ಮೊದಲ ಸಂಕಲನ ಸಾಮಗಾನಕ್ಕೆ ಪುಟ್ಟಪ್ಪನವರ ಮುನ್ನುಡಿಯೂ ಸಿಕ್ಕಿತು. ಪುಸ್ತಕ ಶಿವರುದ್ರಪ್ಪನವರದ್ದಾಗಿದ್ದರೂ ಅದಕ್ಕೆ ಮುನ್ನುಡಿ ಬರೆಸಿ ತಮ್ಮ ಪ್ರಕಾಶನದಲ್ಲಿ ಪ್ರಕಟಿಸಿ, ಅದು ತಮ್ಮ ಪುಸ್ತಕವೇ ಎಂಬಂತೆ ಎಲ್ಲರಿಗೂ ಹಂಚಿ ಹೆಮ್ಮೆಪಟ್ಟವರು ಮಾತ್ರ ಶಾಮರಾಯರೇ!

ಆನರ್ಸ್ ಮುಗಿಸಿ ದಾವಣಗೆರೆಯಲ್ಲಿ ಸ್ವಲ್ಪ ಕಾಲ ಅಧ್ಯಾಪಕರಾಗಿ ಕೆಲಸ ಮಾಡಿದ್ದ ಜಿ.ಎಸ್.ಎಸ್. ಮುಂದೆ ಎಂ.ಎ. ಮುಗಿಸಿ ಶಿವಮೊಗ್ಗ ಇಂಟರ್ ಮೀಡಿಯೆಟ್ ಕಾಲೇಜಿಗೆ ಲೆಕ್ಚರರ್ ಆಗಿ ಬಂದರು. ಅವರು ಪಟ್ಟಂಥದೇ ಕಷ್ಟದ ಹಾದಿ ಸವೆಸುತ್ತಿದ್ದ ನಾನು ಅಲ್ಲಿ ಅವರ ವಿದ್ಯಾರ್ಥಿಯಾದೆ. ಉಳಿದ ಪೀರಿಯಡ್ಡಿನಲ್ಲಿ ಅರ್ಧಂಬರ್ಧ ಖಾಲಿ ಇರುತ್ತಿದ್ದ ನಮ್ಮ ತರಗತಿ ಅವರ ಪೀರಿಯಡ್ಡಿನಲ್ಲಿ ತುಂಬಿ ಹೋಗಿರುತ್ತಿತ್ತು. ಅವರು ನಮಗೆ ಪಾಠ ಹೇಳುತ್ತಿದ್ದದ್ದು ಹರಿಹರ ಕವಿಯ ಗಿರಿಜಾಕಲ್ಯಾಣ ಎಂಬ ಕಾವ್ಯ ಮತ್ತು ಭಾರತೀಪ್ರಿಯರ ರುದ್ರವೀಣೆ ಎಂಬ ಕಥಾಸಂಗ್ರಹ.

ಫಸ್ಟ್‌ಟರ್ಮ್ ಪರೀಕ್ಷೆ ಆದಮೇಲೆ ಜಿ.ಎಸ್.ಎಸ್. ಮೌಲ್ಯಮಾಪನ ಮಾಡಿದ ಉತ್ತರ ಪತ್ರಿಕೆಗಳನ್ನು ತರಗತಿಗೆ ತಂದರು. ಉಪಾಧ್ಯಾಯರು ಉತ್ತರದ ಪ್ರತಿಯೊಂದು ಸಾಲನ್ನೂ ಓದಿ ನಂಬರು ಹಾಕುತ್ತಿದ್ದ ಕಾಲ ಅದು! ಜಿ.ಎಸ್.ಎಸ್. ಪತ್ರಿಕೆಗಳ ಕಟ್ಟಿನಿಂದ ಒಂದು ಉತ್ತರ ಪತ್ರಿಕೆಯನ್ನು ಹೊರಗೆ ತೆಗೆದು ಅದರ ಕೆಲವು ಸಾಲುಗಳನ್ನು ಓದಿ ಮೆಚ್ಚಿಕೆ ಸೂಚಿಸಿದರು. "ಗಿರಿಜಾ ಕಲ್ಯಾಣ ಯಾವುದೋ ಕಾಲದ ಒಂದು ಪುರಾಣಕಥೆ ಮಾತ್ರ ಅಲ್ಲ, ಶಕ್ತಿಸ್ವರೂಪಳಾದ ಗಿರಿಜೆ ವಿಜ್ಞಾನದ ಸಂಕೇತ. ನೃತ್ಯ

ಗುರುವಾದ ಶಿವ ಕಲೆಯ ಸಂಕೇತ. ಅವರ ಕಲ್ಯಾಣ ಕೇವಲ ಗಂಡುಹೆಣ್ಣಿನ ವಿವಾಹವಲ್ಲ, ವಿಜ್ಞಾನ ಕಲೆಗಳ ಮಹಾಸಂಗಮ. ಅಂಥ ಸಂಗಮದಿಂದಲೇ ಇಂದಿನ ಜಗತ್ತಿಗೆ ಮುಕ್ತಿ" ಇತ್ಯಾದಿ ಮಾತು ಅಲ್ಲಿತ್ತು. ಅದು ನನ್ನ ಪತ್ರಿಕೆ. ನಾನು ನಂಬಿದ್ದ ಥೋಂಗಿಗಳನ್ನೆಲ್ಲ ಬಹಳ ಭಾವುಕವಾಗಿ ವರ್ಣಿಸಿದ್ದೆ! ಮೇಷ್ಟ್ರು "ಇದನ್ನು ಬರೆದ ವಿದ್ಯಾರ್ಥಿ ಯಾರು?" ಎಂದು ಕೇಳಿದರು. ನಾನು ಹೊರಗೆ ಸಂಕೋಚಪಡುತ್ತ, ಒಳಗೆ ಬಹಳ ಹೆಮ್ಮೆ ಪಟ್ಟುಕೊಳ್ಳುತ್ತ ಮೆಲ್ಲಗೆ ಎದ್ದು ನಿಂತೆ. ಜಿ.ಎಸ್.ಎಸ್. "ಬಹಳ ಚೆನ್ನಾಗಿ ಬರೆದಿದ್ದೀರಿ. ತಗೊಳ್ಳಿ. ಹೀಗೇ ಚೆನ್ನಾಗಿ ಓದಿ" ಅಂತ ಹೇಳಿ ಪತ್ರಿಕೆ ಕೊಟ್ಟರು. ಕೈತುಂಬ ನಂಬರು ಹಾಕಿದ್ದರು. ನಾನೇ ಕ್ಲಾಸಿಗೆ ಫಸ್ಟು, ಎಲ್ಲರಿಗಿಂತ ಬಹಳ ಮೇಲೆ. ಎರಡನೆಯವನು ಅಲ್ಲೆಲ್ಲೋ ಕೆಳಗೆ ಪಾತಾಳದಲ್ಲಿದ್ದ!

ಇಂಟರ್ ಮೀಡಿಯೆಟ್ ಪಾಸಾದ ಮೇಲೆ ನಾನು, ಶ್ರೀಕಂಠಭಟ್ಟ, ಸತ್ಯ – ಹೀಗೆ ಮೂವರು ಸಹಪಾಠಿಗಳು ಮೇಸ್ಟರ ಮನೆಗೆ ಹೋದೆವು. ಶ್ರೀಕಂಠಭಟ್ಟ ಕೊಪ್ಪದವರು; ಮಾವಿನ ತೋಟ ಇದ್ದವರ ಮಗ; ಎರಡು ಗಿಣಿಮೂತಿ ಮಾವಿನಕಾಯಿ ಗುರುಕ್ಷಿಣೆಯಾಗಿ ತಂದಿದ್ದ. ಸತ್ಯ ಕಡೂರಿನಲ್ಲಿ ತೆಂಗಿನ ತೋಟ ಇಟ್ಟವರ ಮಗ; ಎರಡು ಗಿಟುಕು ಕೊಬ್ಬರಿ ತಂದಿದ್ದ. ನನಗೆ ಗುರುಗಳ ಬಗ್ಗೆ ಅಪಾರ ಭಕ್ತಿಯೇನೋ ಇತ್ತು. ಆದರೆ ಬರಿಗೈ ಸುದಾಮ! ಮೇಸ್ಟ್ರು ಬೇಡವೆಂದು ತಡೆಯುತ್ತಿದ್ದರೂ ಉಳಿದವರು ಗುರುದಕ್ಷಿಣೆ ಒಪ್ಪಿಸಿಯೇ ಬಿಟ್ಟರು. ನನಗೆ ಕಣ್ಣಲ್ಲಿ ನೀರು ಹಣಿಕುತ್ತಿತ್ತು. ಆದರೂ ಸಾವರಿಸಿಕೊಂಡು ದಿಢೀರನೆ ಗುರುಗಳ ಎದುರು ಸಾಷ್ಟಾಂಗ ಬಿದ್ದುಬಿಟ್ಟೆ. ಅವರಿಗೆ ಏನೋ ಕನಿಕರ. ನನ್ನನ್ನೆಬ್ಬಿಸಿ ಮುಂದೆ ಏನು ಮಾಡುತ್ತೀರಿ?" ಎಂದರು. "ನನಗೆ ಓದು ಮುಂದುವರಿಸಲು ಸಾಧ್ಯವೇ ಇಲ್ಲ ಸಾರ್, ಬಹುಶಃ ನನ್ನ ಕಥೆ ಮುಗೀತು. ಆದರೂ ಒಮ್ಮೊಮ್ಮೆ ಮೈಸೂರಿಗೆ ಹೋಗಿ ವಾರಾನ್ನ ಮಾಡಿಕೊಂಡಾದರೂ ಓದಬೇಕು ಅಂತ ಆಸೆಯಾಗುತ್ತೆ. ಅಲ್ಲಿ ಶಾಮರಾಯರು ಅಂತ ಇದಾರಂತಲ್ಲ, ಬಹಳ ಒಳ್ಳೆಯವರಂತೆ. ಅವರೇನಾದರೂ ಸಹಾಯ ಮಾಡುತ್ತಾರೋ ಅಂತ ನೋಡಬೇಕು" ಅಂದೆ. ಮೇಸ್ಟ್ರು "ಹೌದು, ಇದಾರೆ. ತುಂಬ ಒಳ್ಳೆಯವರು. ನನ್ನನ್ನು ಒಬ್ಬ ತಾಯಿಯೆನ್ನುವಂತೆ ಕಂಡವರು" ಎಂದರು. ನಾನು ಮನಸ್ಸಿನಲ್ಲಿ ಆಗಲೇ ಗುರುತು ಮಾಡಿಕೊಂಡಿದ್ದ ಹೆಸರು, ಅವರ ಬಾಯಲ್ಲಿ ಬಂತಷ್ಟೆ. ಮೈಸೂರಿಗೆ ಹೋದರೆ ಅವರನ್ನು ಕಾಣಲೇಬೇಕು ಅನ್ನುವ ಭಾವನೆ ಬಲವಾಯಿತು.

ಶಿವಮೊಗ್ಗದಲ್ಲಿ ಶಿವರುದ್ರಪ್ಪನವರ ವಿದ್ಯಾರ್ಥಿಯಾಗುವ ಕಾಲಕ್ಕಾಗಲೇ ನಾನು ಕವಿತೆ ಓದುವ ಗೀಳಿಗೆ ಬಿದ್ದಿದ್ದೆ. ಆಗ ನನ್ನ ಮನೋಧರ್ಮಕ್ಕೆ ತುಂಬ

ಹಿಡಿಸುತ್ತಿದ್ದ ಕವಿತೆಗಳೆಂದರೆ ಟಾಗೋರ್, ಕುವೆಂಪು ಮತ್ತು ಜಿ.ಎಸ್.ಎಸ್. ಅವರದ್ದು. ಆ ಹೊತ್ತಿಗೆ ಶಿವರುದ್ರಪ್ಪನವರ 'ಸಾಮಗಾನ', 'ಚೆಲುವು–ಒಲವು' ಪ್ರಕಟವಾಗಿದ್ದವು. ಅಲ್ಲಿಯ ಎಷ್ಟೋ ಕವನಭಾಗಗಳು ನನಗೆ ಬಾಯಿಪಾಠವಾಗಿ ಹೋಗಿದ್ದವು.

ಗಿರಿದರಿಯಲೆಲ್ಲೋ ಹುಟ್ಟಿರುವ ಹೊಳೆಗೆ
ಭೂಗೋಳಶಾಸ್ತ್ರ ಬೇಕೆ?....
ನಲಿದುಲಿವ ನದಿಗೆ ಕಡಲಿರುವ ಕಡೆಗೆ
ಕೈಮರದ ನೆರವು ಬೇಕೆ?

ನೋಡು ಇದೊ ಇಲ್ಲರಳಿ ನಗುತಿದೆ
ಏಳು ಸುತ್ತಿನ ಮಲ್ಲಿಗೆ
ಇಷ್ಟು ಹಚ್ಚನೆ ಹಸುರ ಗಿಡದಿಂ–
ದೆಂತು ಮೂಡಿತು ಬೆಳ್ಳಗೆ!

ಅದೊ ಬಂದ ಇವನೊಂದು ಕಿರಿಯ ಬಿರುಗಾಳಿ
ಮನೆಯ ಒಳಗೂ ಹೊರಗು ಇವನದೇ ಧಾಳಿ
ಇದ್ದುದೊಂದೆಡೆ ಇರದು ಇವನ ರಾಜ್ಯದಲಿ
ತುಂಟತನಕ್ಕಿನ್ನೆರಡು ಕಾಲ್ ಬಂದ ತೆರದಿ
ಬಂದುವಿವನಿಗೆ ಎರಡು ಪುಟ್ಟಕಾಲು
ಮನೆಯ ವಸ್ತುಗಳೆಲ್ಲ ದಿಕ್ಕುಪಾಲು!

ಭಿಕ್ಷಕ್ಕೆ ಬಂದವರ ಮುಂದೆ ಭಿಕ್ಷುಕನಾದೆ
ನನ್ನೆದೆಯ ಜೋಳಿಗೆಯ ನಾನೆ ತೆರೆದು
ಮುಂದೆ ನಡೆದರು ಅವರ ಹಾಡ ಸುರಿದು

ಇಂಥ ಆಕರ್ಷಕ ಕವನಭಾಗಗಳನ್ನೆಲ್ಲ ನಾನು ಗೆಳೆಯರ ಎದುರಿಗೆ ಸ್ವಂತ ವ್ಯಾಖ್ಯಾನ ಸಹಿತ ಮತ್ತೆ ಮತ್ತೆ ಹೇಳುತ್ತ ಖುಷಿಯ ಜೊತೆಗೆ ಅವರ ಮಧ್ಯೆ ಒಂದು ಪ್ರಾಮುಖ್ಯವನ್ನೂ ಗಳಿಸಿಕೊಂಡಿದ್ದೆ; 'ಬೆಳಗು ಬಾ ಹಣತೆಯನು' ಎಂಬ ಒಂದು ಗೀತೆಯನ್ನು ಹಾಡುತ್ತಲೂ ಇದ್ದೆ. ಆಗ ನನಗೆ ಗೊತ್ತಾಗದಿದ್ದ ವಿಷಯವೆಂದರೆ ಮುಂದೆ ಕವಿತೆ ಬರೆಯಲಿದ್ದ ನನಗೆ ಇಂಥ ಕಾವ್ಯಭಾಗಗಳ ಲಯ, ಭಾಷೆ, ಚಿತ್ರಸೃಷ್ಟಿಗಳು ಕೊಟ್ಟಿರಬಹುದಾದ ಸಂಸ್ಕಾರ.

ಮುಂದೆ ೧೯೫೫ರಲ್ಲಿ ನಾನು ಮೈಸೂರಿಗೆ ಹೋಗುವಾಗ ಶಿವರುದ್ರಪ್ಪನವರು ನನ್ನ ಕೈಯಲ್ಲಿ ಹಸ್ತಪ್ರತಿಯ ಒಂದು ಪ್ಯಾಕೆಟ್ಟನ್ನು ಕೊಟ್ಟು, "ಇದನ್ನು ಪ್ರಕಾಶಕ ಹೆಚ್. ಎಸ್. ಶಂಕರನಾರಾಯಣರಾಯರ ಕೈಗೆ ಕೊಟ್ಟುಬಿಡಿ, ಜೋಪಾನ" ಅಂದರು. ಅದು ಮುಂದೆ ಹೊರಬರಲಿದ್ದ 'ದೇವಶಿಲ್ಪ' ಸಂಕಲನದ ಹಸ್ತಪ್ರತಿ!

ಜೀವನದುದ್ದಕ್ಕೂ ತಾವೊಬ್ಬ ವಿದ್ಯಾರ್ಥಿಯೇ ಎಂದು ಭಾವಿಸಿಕೊಂಡವರು ಜಿ.ಎಸ್.ಎಸ್. ನಾನು ಹೇಗೋ ಮೈಸೂರು ಸೇರಿ ಓದು ಮುಂದುವರಿಸಿ ಎಂ.ಎ. ತರಗತಿಯಲ್ಲಿದ್ದಾಗ ಅವರು ನನಗೆ ಸಹಪಾಠಿಗಳೂ ಆದರು! ಫೆಲೋಷಿಪ್ ಪಡೆದು ಡಾಕ್ಟರೇಟ್ ಪ್ರಬಂಧ ಬರೆಯಲು ಮೈಸೂರಿಗೆ ಬಂದಿದ್ದ ಅವರು ತೀನಂಶ್ರೀಯವರ ಕಾವ್ಯ ಮೀಮಾಂಸೆಯ ತರಗತಿಗೆ ಬಂದು, ನಮ್ಮ ಜೊತೆ ವಿದ್ಯಾರ್ಥಿಯಂತೆ ಕುಳಿತು ಪಾಠ ಕೇಳುತ್ತಿದ್ದರು. ಹಿಂದೆ ಅವರಿಗೆ ಕುವೆಂಪು ಕಾವ್ಯಮೀಮಾಂಸೆ ಪಾಠ ಹೇಳಿದ್ದರು. ಈಗ ತೀನಂಶ್ರೀ! ಇಂಥ ಭಾಗ್ಯ ಎಷ್ಟು ಜನಕ್ಕೆ ಇರಬಲ್ಲದು! ಒಬ್ಬರು ಶ್ರೇಷ್ಠಕವಿ; ಇನ್ನೊಬ್ಬರು ಶ್ರೇಷ್ಠ ಕಾವ್ಯಮೀಮಾಂಸಕಾರ. ಇಬ್ಬರ ವಿಷಯ ನಿರೂಪಣಾ ಕ್ರಮವೂ ಅವರವರಿಗೇ ವಿಶಿಷ್ಟವಾದದ್ದು. "ನಾನು ಇಬ್ಬರು ಕಾವ್ಯಾಚಾರ್ಯರ ಪಾಠವನ್ನೂ ಕೇಳಿದ್ದೇನೆ. ಎರಡರಿಂದಲೂ ಬಹಳ ಲಾಭ ಪಡೆದಿದ್ದೇನೆ" ಎಂದು ವಿನಯದ ಮಾತಿನಲ್ಲೇ ಜಿ.ಎಸ್.ಎಸ್. ಜಂಬಕೊಚ್ಚಿಕೊಂಡದ್ದುಂಟು.

ಸಾಮಗಾನ, ಚೆಲುವು-ಒಲವು, ದೀಪದ ಹೆಜ್ಜೆ, ಕಾರ್ತೀಕ, ತೆರೆದ ದಾರಿ, ಗೋಡೆ – ಹೀಗೆ ಶಿವರುದ್ರಪ್ಪನವರು ಸುಮಾರು ೧೩ ಕವನಸಂಗ್ರಹವನ್ನು ಹೊರತಂದಿದ್ದಾರೆ. 'ತೀರ್ಥವಾಣಿ' ಹಲವು ಬಂಗಾಳೀ ಗೀತೆಗಳ ಸುಂದರ ಅನುವಾದ ಸಂಕಲನ. ನಾಲ್ಕು ದಶಕಗಳಷ್ಟು ಹಿಂದೆಯೇ ಅವರು ಚೆಲುವಾದ ಅನೇಕ ಭಾವಗೀತೆಗಳನ್ನು ಬರೆದಿದ್ದರು. 'ಉಡುಗಣವೇಷ್ಟಿತ', 'ಹೌದೇನೇ ಉಮಾ', 'ಎದೆತುಂಬಿ ಹಾಡಿದೆನು' ಮೊದಲಾದ ನಾಲ್ಕಾರು ಭಾವಗೀತೆಗಳು ಪದ್ಮಚರಣ – ಲೀಲಾವತಿ – ಅನಂತಸ್ವಾಮಿಯವರ ಪ್ರತಿಭೆಯ ಜೊತೆಗೂಡಿ, ಮನೋಹರವಾದ ಗೀತೆಗಳಾಗಿ ನಾಡಿನ ತುಂಬಾ ಜಿ.ಎಸ್.ಎಸ್. ಹೆಸರನ್ನು ಹರಡಿದ್ದವು. ಈಗ 'ಕಾಣದ ಕಡಲಿಗೆ', 'ಯಾವ ಹಾಡ ಹಾಡಲಿ', 'ಯಾವುದೀ ಪ್ರವಾಹವು', 'ಸ್ತ್ರೀ', 'ಎಲ್ಲೋ ಹುಡುಕಿದೆ', ಮೊದಲಾದ ಕವಿತೆಗಳೂ ಆ ಸಾಲಿಗೆ ಸೇರಿ ಕನ್ನಡ ಭಾವಗೀತೆ ಕಾವ್ಯದ ಸಂಪತ್ತನ್ನು ಬೆಳೆಸಿವೆ; ಕೆಲಕಾಲ ಜನರಿಂದ ದೂರವಾಗಿದ್ದ ಕನ್ನಡ ಕಾವ್ಯಕ್ಕೆ ಮತ್ತೆ ಸಹಸ್ರಗಟ್ಟಲೆ ಸಹೃದಯರನ್ನು ಕರೆತಂದಿವೆ. ಮಾರ್ದವತೆ, ಲಾಲಿತ್ಯ, ಕಮನೀಯತೆ ಜಿ.ಎಸ್.ಎಸ್. ಅವರ ಕಾವ್ಯಾಭಿವ್ಯಕ್ತಿಯ ಮುಖ್ಯ ಗುಣಗಳಾಗಿರುತ್ತ ಅವು ಕವಿಗೆ ಭಾರಿ ಸಹೃದಯಲೋಕವನ್ನೇ ಗೆದ್ದುಕೊಟ್ಟಿವೆ.

ಜಿ.ಎಸ್.ಎಸ್. ಕಾವ್ಯಸೃಷ್ಟಿಯ ಜೊತೆಜೊತೆಗೆ ಕಾವ್ಯಸ್ವರೂಪದ ಬಗ್ಗೆಯೂ ಗಾಢವಾಗಿ ಚಿಂತಿಸಿದವರು. ಕವಿಯೇ ಹೊರಹಾಕುವ ಕಾವ್ಯಸ್ವರೂಪದ ಚಿಂತನೆಗಳಿಗೆ ಒಂದು ಅಧಿಕೃತತೆ ಇರುತ್ತದೆ. ಹೆತ್ತ ತಾಯಿಗೆ ತನ್ನ ಮಗುವಿಗೆ ಬಗ್ಗೆ ಇರುವ

ಅರಿವಿನಂತೆ ಇದು. ಇದರ ಜೊತೆಗೆ ಆ ವಿಷಯ ಕುರಿತಂತೆ ಪೌರ್ವಾತ್ಯ, ಪಾಶ್ಚಾತ್ಯ ವಿದ್ವತ್ ಗ್ರಂಥಗಳು ತೆರೆದಿಡುವ ಆಲೋಚನೆಗಳನ್ನೂ ಅವರು ಅಧ್ಯಯನ ಮಾಡಿದ್ದಾರೆ; ವಿದ್ಯಾರ್ಥಿಗಳಿಗೆ ಬೋಧಿಸುವ ಮೂಲಕ ಅವುಗಳನ್ನು ಸ್ಪಷ್ಟಗೊಳಿಸಿಕೊಂಡಿದ್ದಾರೆ. ಇದರ ಫಲವಾಗಿ 'ವಿಮರ್ಶೆಯ ಪೂರ್ವ – ಪಶ್ಚಿಮ', 'ಪರಿಶೀಲನ', 'ನವೋದಯ', 'ಕನ್ನಡ ಸಾಹಿತ್ಯ ಸಮೀಕ್ಷೆ', 'ಪ್ರತಿಕ್ರಿಯೆ', 'ಮಹಾಕಾವ್ಯ ಸ್ವರೂಪ' – ಇತ್ಯಾದಿ ಗ್ರಂಥಗಳು ಹೊರಬಂದಿವೆ. 'ಸೌಂದರ್ಯ ಸಮೀಕ್ಷೆ' ಕುವೆಂಪು ಮಾರ್ಗದರ್ಶನದಲ್ಲಿ ಡಾಕ್ಟರೇಟ್ ಪದವಿಗಾಗಿ ಅವರು ಸಿದ್ಧಪಡಿಸಿದ ಒಂದು ಅಮೂಲ್ಯ ಗ್ರಂಥ. ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಗಳಿಸಿಕೊಟ್ಟ 'ಕಾವ್ಯಾರ್ಥಚಿಂತನ' ಅವರ ಈ ಬಗೆಯ ಬರೆಹಗಳಲ್ಲಿ ಕಿರೀಟಪ್ರಾಯವಾದ ಗ್ರಂಥ.

ಶಿವರುದ್ರಪ್ಪನವರ ವರ್ಣನೆ, ನಿರೂಪಣೆಗಳ ರೀತಿ ಆಕರ್ಷಕವಾದದ್ದು; ವಿಚಾರಭರಿತವಾದದ್ದು. ಪ್ರವಾಸಪ್ರಿಯರಾದ ಅವರು 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ', 'ಗಂಗೆಯ ಗಿರಿಶಿಖರಗಳಲ್ಲಿ', 'ಅಮೆರಿಕದಲ್ಲಿ ಕನ್ನಡಿಗ', 'ಇಂಗ್ಲೆಂಡಿನಲ್ಲಿ ಚಾತುರ್ಮಾಸ್ಯ' ಎಂಬ ಸೊಗಸಾದ ಪ್ರವಾಸ ಕಥನಗಳನ್ನು ಬರೆದಿದ್ದಾರೆ. ಈ ಕಥನಗಳನ್ನು ಬರೆದವರು ಒಬ್ಬ ಕವಿಯೇ ಹೌದೆನ್ನುವುದು ನಾಲ್ಕು ಪುಟ ಓದುವಷ್ಟರಲ್ಲಿ ಯಾರಿಗೂ ಮನವರಿಕೆಯಾಗಿ ಬಿಡುತ್ತದೆ. ಅವುಗಳ ಕಾವ್ಯಸತ್ವ ಅಂಥದು.

ಶಿವರುದ್ರಪ್ಪನವರ ಗುರುಕುಲ ನಾಡಿನಷ್ಟೇ ವಿಶಾಲವಾಗಿದೆ. ಅವರ ವಿದ್ಯಾರ್ಥಿಗಳು ಎಲ್ಲೆಲ್ಲೂ ಇದ್ದಾರೆ. ಚಿದಾನಂದಮೂರ್ತಿ, ಲಂಕೇಶ್, ವೆಂಕಟೇಶ ಮೂರ್ತಿ, ನರಹಳ್ಳಿ, ಡಿ. ಆರ್. ನಾಗರಾಜ್, ಕೆ. ವಿ. ನಾರಾಯಣ, ಅ. ರಾ. ಮಿತ್ರ, ಇಂತಹ ಪ್ರಸಿದ್ಧ ಲೇಖಕರು ಅವರ ಆಪ್ತ ಶಿಷ್ಯರು. ಉಳಿದವರಿರಲಿ ಎಸ್. ಎಲ್. ಭೈರಪ್ಪ, ಹಾಮಾನಾ ಕೂಡ ಅವರ ವಿದ್ಯಾರ್ಥಿಗಳಾಗಿದ್ದವರೆಂದರೆ ಆ ನೆಲೆಯ ಎತ್ತರ ತಿಳಿದೀತು.

ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗಕ್ಕೆ ಶಿವರುದ್ರಪ್ಪನವರು ಮುಖ್ಯಸ್ಥರಾದ ಮೇಲೆ ಅದಕ್ಕೆ ಹೊಸಕಳೆ ಬಂತು. ವಿಭಾಗ ವಿಸ್ತಾರಗೊಂಡಿತು. ಸಾಧನೆ, ಸಾಹಿತ್ಯ ವಾರ್ಷಿಕಗಳಂಥ ನಿಯತಕಾಲಿಕಗಳು ಆರಂಭವಾದವು. ಪ್ರತಿವರ್ಷ ಮಹತ್ವದ ವಿಮರ್ಶಕರನ್ನೆಲ್ಲ ಕರೆಸಿ ಸೆಮಿನಾರು ನಡೆಸುವುದು ಶುರುವಾಯಿತು. ತೌಲನಿಕ ಸಾಹಿತ್ಯಾಧ್ಯಯನದ ಶಾಖೆಯನ್ನು ತೆರೆಯಲಾಯಿತು. ಸೆಮಿನಾರಿನ ಪ್ರಬಂಧಗಳು ಪುಸ್ತಕಮಾಲೆಯಾಗಿ ಹೊರಬಂದವು. ಕನ್ನಡ ಸಾಹಿತ್ಯಚರಿತ್ರೆಯ ಸಂಪುಟಗಳು ಪ್ರಕಟವಾದವು. ಕನ್ನಡ ವಿಭಾಗ 'ಕನ್ನಡ ಅಧ್ಯಯನ ಕೇಂದ್ರ'ವಾಯಿತು.

ಕೇಂದ್ರಕ್ಕೆ ಎಂಥೆಂಥವರು ನೇಮಕಗೊಂಡರೆಂದರೆ ಅವರಲ್ಲಿ ಬಹುಮಟ್ಟಿಗೆ ಎಲ್ಲರೂ ಈಗ ನಾಡಿನಲ್ಲೇ ಪ್ರಸಿದ್ಧ ಲೇಖಕರೆನಿಸಿದ್ದಾರೆ.

ಬಂಡೆಯ ಸಂದಿಯಿಂದ ಜಿನುಗಿ ಹರಿಯುವ ನೀರಿನ ಗೆರೆ ಬರುಬರುತ್ತ ಮಹಾನದಿಯಾಗಿ ಬಿಡುವಂತೆ ಸಾಮಾನ್ಯರೀತಿಯಲ್ಲಿ ಆರಂಭವಾಗಿದ್ದ ಕನ್ನಡ ವಿಭಾಗ ಜಿ.ಎಸ್.ಎಸ್. ನಿವೃತ್ತರಾಗುವ ಹೊತ್ತಿಗೆ ವಿಶ್ವವಿದ್ಯಾಲಯದಲ್ಲೇ ಪ್ರಮುಖವೆನಿಸುವ ವಿಭಾಗವಾಗಿಹೋಯಿತು.

ಮುಂದೆ ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಜಿ.ಎಸ್.ಎಸ್. ಹೊರತಂದ 'ಸಾಲುದೀಪ'ದಂಥ ಗ್ರಂಥಗಳು, ಅವರು ಏರ್ಪಡಿಸಿದ ಷೇಕ್ಸ್‌ಪಿಯರ್ ಹಾಗೂ ಟಿ. ಎಸ್. ಎಲಿಯಟ್ ಸೆಮಿನಾರುಗಳು ತುಂಬ ಫಲಪ್ರದವಾದವು. ಇತರ ಭಾರತೀಯ ಭಾಷೆಗಳಿಂದ ಕನ್ನಡಕ್ಕೆ ಹಾಗೂ ಕನ್ನಡದಿಂದ ಇಂಗ್ಲಿಷಿಗೆ ಸಾಹಿತ್ಯಾನುವಾದ ನಡೆಸಲು ಅಕಾಡೆಮಿಯಲ್ಲಿ ಅವರು ಒಂದು ಸಾಹಿತ್ಯ ಪತ್ರಿಕೆಯನ್ನೇ ಆರಂಭಿಸಿದರು.

ಈ ಎಲ್ಲ ಸಾಧನೆಯನ್ನು ಮೆಚ್ಚಿ ಗೌರವಿಸುವ ರೀತಿಯಲ್ಲಿ ನಾಡು ಈ ವರ್ಷ ಅವರನ್ನು ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ. ಈ ಆಯ್ಕೆ ಎಲ್ಲರ ಮೆಚ್ಚಿಕೆಗೂ ಪಾತ್ರವಾಗಿರುವುದು ಅವರ ವ್ಯಕ್ತಿತ್ವದ ಘನತೆಯನ್ನು ಸಾರುವಂಥದು.

●

ಜಿ.ಎಸ್.ಎಸ್.

ತೆರೆದ ದಾರಿಯಲಿ ಸಾಲು ದೀಪದ ಹೆಜ್ಜೆ
ಸದ್ದುಗದ್ದಲವಿರದ ಮೌನ ಮೆರವಣಿಗೆ
ತೀರ್ಥವಾಣಿಯಲಿ ಮಿಂದು ಮಡಿಯಾಗಿ ಬಂತು
ಒಡಲು ತಿಳಿ ಬಾನ ಬಂಗಾರ ಮೆಡಲು
ಇವರ ಬಳಿ ನಿಂತೆ, ನನಗೂ ಎತ್ತರ ನಿಂತ
ಇವರ ತುತ್ತತುದಿ ಮುಟ್ಟುವುದು ಹೇಗೆ?
ಕೆಳಗಿದ್ದ ಮಣ್ಣು ಕೆದರಿ ಕುಸಿಯಬಹುದೇನೊ ಕಾದೆ
ಹಳ್ಳದಲಿ ನಾ ಬಿದ್ದೆ ಇನ್ನೂ ಕುಬ್ಜನಾದೆ
ಈ ಗಿರಿ ಮಿರಿಮಿರಿ ಮಿಂಚಿ ನಿಂತಿತ್ತು ಹಾಗೆ!
ಈ ಅಚ್ಛೋದ ಸರೋವರದಲ್ಲಿ ಮಿಂದವರೆಷ್ಟೊ?
ದಾಹ ಹಿಂಗಿಸಿಕೊಂಡವರೆಷ್ಟೋ, ತುಂಬಿ ಸಾಗಿದವರೆಷ್ಟೋ?
ಕೋಪಕ್ಕೆ, ಪ್ರತಾಪಕ್ಕೆ ಇಲ್ಲ ಚಪಲ ಚಿತ್ತಕ್ಕೆ
ಕದಡಿ ರಾಡಿಗೊಳಿಸಿದವರೆಷ್ಟೋ.
ಕ್ಷಣಮಾತ್ರ ಕಸಿವಿಸಿ ಹಿಂಸೆ ಚಂಚಲ
ಒಡನೆ ನಿಶ್ಚಲ ಗಂಭೀರ – ಕಂಡ ಕನ್ನಡಿ ನೀರ!
ಬೀಜದಿಂದ ಬೀಜಕ್ಕೆ ಬದುಕ ಬಿಚ್ಚಿ
ನಿಗೂಢ ಬದುಕು ತೊಡಕು ಎಲ್ಲ ಕಳಚಿ
ಆಚೀಚೆ ಸುತ್ತಮುತ್ತ ಎದ್ದ ಗೋಡೆ
ಅದರಾಚೆ ಪಿಳಿಪಿಳಿ ಕಣ್ಣು ಪಿರಿಪಿರಿ ಮಾತು
ಎಲ್ಲಕ್ಕೂ ಬರೀ ಒಂದೆಸಳು ನಗೆ
ಅರಿಯಲೇ ಆ ನೋವಿನ ಬಗೆ?
ಮನಸ್ಸು ಹಚ್ಚ ಹಸಿರುರೆಕ್ಕೆ ಬಿಚ್ಚಿದ ಮುಗಿಲು
ತೂಗಾಡುವ ತೆನೆ ಜೋಗುಳದ ಹಾಡು ಗಂಭೀರ ಗಾಳಿ
ಅಂತೆ ಕಾವ್ಯ ಬದುಕು ಬರಹ
ಅಂಕುಡೊಂಕಿಲ್ಲ ಎಲ್ಲಕ್ಕೂ ಹಾದಿ ನೇರ
ಈ ಗಂಭೀರಕ್ಕೆ ಆ ಮೌನಕ್ಕೆ ಬಿಚ್ಚು ಮಾತಿಗೆ
ಕಾವ್ಯಕ್ಕೆ ಸರಳಸ್ವಭಾವಕ್ಕೆ ನಾ ಸಾಟಿಯಾಗಲೆ?
ಇಲ್ಲ ಕಾಡಹರಟೆಯಲ್ಲಿ ಕಾಫಿ ಹೀರುತ್ತ ಕೂರಲೆ?

– ಎಂ. ಎನ್. ವ್ಯಾಸರಾವ್

ನಮ್ಮ ದೇಶದ ಹೆಮ್ಮೆಯ ಕಥನಕಾರ ಎಸ್. ಎಲ್. ಭೈರಪ್ಪ

ಕೆಲವು ಸಾಹಿತ್ಯ ಕೃತಿಗಳು ದಟ್ಟ ಮಾನವಾನುಭವಗಳ ಕಲಾತ್ಮಕ ಮಂಡನೆಯೆಂದು ವಿಮರ್ಶಕರ ಮೆಚ್ಚಿಕೆ ಪಡೆದಿರುತ್ತವೆ; ಆದರೆ ಅವುಗಳಿಗೆ ಜನಪ್ರಿಯತೆಯ ಸರ್ವಮಾನ್ಯತೆ ಇರುವುದಿಲ್ಲ. ಇನ್ನು ಕೆಲವು ಜನಪ್ರಿಯವಾಗಿರುತ್ತವೆ; ಆದರೆ ಅವು ಜೀವನದ ಆಳಕ್ಕೆ ಬೇರು ಬಿಟ್ಟು ಎದ್ದ ಕಲಾತ್ಮಕ ಕೃತಿಗಳಾಗಿರುವುದಿಲ್ಲ. ಶ್ರೇಷ್ಠವೂ ಆಗಿದ್ದು ಸರ್ವಮಾನ್ಯವೂ ಆದ ಸಾಹಿತ್ಯ ಕೃತಿಗಳು ಒಂದು ನಾಡಿನ ಭಾಗ್ಯ. ಅವು ಕ್ಷೀರದ ಹಾಗೆ. ಹಾಲು ಚಿಕ್ಕಮಗುವಿಗೆ ಹೇಗೋ ಹಾಗೆ ಒಬ್ಬ ಪೈಲ್ವಾನನಿಗೂ ಸಲ್ಲುವ ಸರಳ, ಗಟ್ಟಿ ಆಹಾರ, ಕಾಳಿದಾಸ, ಕುಮಾರವ್ಯಾಸ, ಟಾಗೋರ್, ಮಾಸ್ತಿ, ಖಾಂಡೇಲ್ಕರ್, ಕಾರಂತ – ಇಂಥ ಮಹಾಲೇಖಕರ ಕೃತಿಗಳು ಈ ಬಗೆಯ ಸೃಷ್ಟಿಗಳು; ತಮ್ಮ ಕಾಲಕ್ಕೂ ಸಲ್ಲುತ್ತ ಭವಿಷ್ಯದಲ್ಲೂ ತಲೆಯೆತ್ತಿ ನಿಲ್ಲಬಲ್ಲ ಶಾಶ್ವತ ಸಾಹಿತ್ಯ ಸ್ಮಾರಕಗಳು. ಡಾ. ಎಸ್. ಎಲ್. ಭೈರಪ್ಪ ಇಂಥ ಮಹಾ ಪ್ರಭೃತಿಗಳ ಸಾಲಿನಲ್ಲಿ ನಿಂತಿರುವ ವ್ಯಕ್ತಿ. ಅವರು ಕನ್ನಡದ, ಮಾತ್ರವಲ್ಲ ಭಾರತದ ಹೆಮ್ಮೆಯ ಕಾದಂಬರಿಕಾರ. ಕಾದಂಬರಿಗಳ ರೂಪದಲ್ಲಿ ತಮ್ಮ ಮಹಾಕಾವ್ಯವನ್ನು ಬರೆದ ಶ್ರೇಷ್ಠ ಭಾರತೀಯ ಸಾಹಿತಿ.

ಗಮನಾರ್ಹವಾದ ವಿಚಾರವೆಂದರೆ ಭೈರಪ್ಪ ಅನ್ಯಭಾಷಿಕರ ದೃಷ್ಟಿಯಲ್ಲಿ ಕನ್ನಡವನ್ನು ಎತ್ತರಕ್ಕೇರಿಸಿದವರು. ಬೇರೆ ಕನ್ನಡ ಲೇಖಕರ ಕೃತಿಗಳಿಗಿಂತ ಭೈರಪ್ಪನವರ ಕೃತಿಗಳು ಹೆಚ್ಚು ಭಾರತೀಯ ಭಾಷೆಗಳಿಗೆ ಅನುವಾದವಾಗಿವೆ; ಹೆಚ್ಚು ಸಂಖ್ಯೆಯಲ್ಲಿ ಆಗಿವೆ. ಮಾತ್ರವಲ್ಲ, ಒಬ್ಬ ಲೇಖಕನಿಗೆ ಧನ್ಯತೆಯ ಭಾವ ತಂದುಕೊಡುವಷ್ಟು ಆ ಭಾಷಿಕರ ಮೆಚ್ಚುಗೆ ಗಳಿಸಿವೆ. ಮಹಾರಾಷ್ಟ್ರದಲ್ಲಿ ಅವರು ಕರ್ನಾಟಕದಲ್ಲಿಗಿಂತ ಹೆಚ್ಚು ಮನ್ನಣೆ ಪಡೆದ ಲೇಖಕ ಎನ್ನುವುದು ಅತಿಶಯೋಕ್ತಿಯಂತೆ ತೋರಿದರೂ

ಅದು ಸತ್ಯ. ಮರಾಠೀ ವಿಮರ್ಶಕರೊಬ್ಬರು ಭೈರಪ್ಪನವರ ಬಗ್ಗೆ ಹೇಳಿದ ಮಾತು ಇದು. "ಇವರ ಮಟ್ಟದಲ್ಲಿ ಒಂದು ಅಥವಾ ಎರಡು ಕೃತಿಗಳನ್ನು ಬರೆದ ಶ್ರೇಷ್ಠ ಲೇಖಕರು ನಮ್ಮಲ್ಲಿದ್ದಾರೆ. ಆದರೆ ಆ ಬಗೆಯ ಕೃತಿಗಳನ್ನು ಒಂದಾದ ಮೇಲೊಂದರಂತೆ ನೆಗಸುಕ್ಕಿ ಬರೆಯುವ ಇವರಂಥ ಕೃತಿಕಾರ ಇಲ್ಲವೇ ಇಲ್ಲ. ಈ ಭೈರಪ್ಪ ನಮಗೆ ಒಂದು ನಿರಂತರ ವಿಸ್ಮಯ."

ಇಂಥ ಅಪ್ರತಿಮ ಲೇಖಕನನ್ನು ಕನಕಪುರದಲ್ಲಿ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಆಯ್ಕೆ ಮಾಡುವ ಮೂಲಕ ಸಾಹಿತ್ಯ ಪರಿಷತ್ತು ನಾಡಿನ ಜನದ ಕಣ್ಣಲ್ಲಿ ತನ್ನ ಮಟ್ಟವನ್ನು ಮುಂಚಿಗಿಂತ ಎತ್ತರಿಸಿಕೊಂಡಿದೆ. ಅಧ್ಯಕ್ಷತೆಯ ಆಯ್ಕೆಯ ಹಿಂದೆ ಆರ್ಥಿಕ, ಸಾಮಾಜಿಕ, ಲೈಂಗಿಕ, ಸ್ಥಳೀಯ ಮೊದಲಾದ ಸಾಹಿತ್ಯೇತರ ಪರಿಗಣನೆಗಳೂ ಕೆಲಸ ಮಾಡುತ್ತವೆ. ಹಾಗಾಗಿ ಕೆಲವು ಆಯ್ಕೆಗಳು ಜನರಲ್ಲಿ ಉತ್ಸಾಹ, ಗೌರವಭಾವಗಳನ್ನು ಉದ್ದೀಪಿಸುವಂಥವಾಗಿರುವುದಿಲ್ಲ. ಆದರೆ ಕುವೆಂಪು, ಕಾರಂತ, ಮಾಸ್ತಿ, ಬೇಂದ್ರೆಯಂಥವರ ಆಯ್ಕೆ ಸಾಹಿತ್ಯ ಸಮ್ಮೇಳನಕ್ಕೆ ಹೆಚ್ಚಿನ ಅರ್ಥ, ಮಹತ್ವ ತಂದುಕೊಡುವಂಥವು. ಭೈರಪ್ಪನವರಂಥ ಸತ್ವಶಾಲೀ ಸಾಹಿತಿ ಅಧ್ಯಕ್ಷಪೀಠದಿಂದ ಮಾತಾಡುವ ದೃಶ್ಯ ಬಹುಸಂಖ್ಯೆಯ ಸಾಹಿತ್ಯಪ್ರಿಯರಿಗೆ ರೋಮಾಂಚನ ಉಂಟುಮಾಡುವಂಥದು. ಹಾಗೆಂದೇ ಭೈರಪ್ಪನವರ ಆಯ್ಕೆ ಅವಿರೋಧವಾಗಿ ಆದದ್ದರಲ್ಲಿ ಯಾವ ಅಚ್ಚರಿಯೂ ಇಲ್ಲ.

ಭೈರಪ್ಪನವರು ಹುಟ್ಟಿದ್ದು ೧೯೩೩ರ ಜುಲೈ ೨೬ ರಂದು, ಹಾಸನ ಜಿಲ್ಲೆಯ ಸಂತೆಶಿಬಿರ ಎಂಬ ಊರಿನಲ್ಲಿ. ಬಾಲ್ಯದಿಂದ ಯೌವನದವರೆಗೂ ಭೈರಪ್ಪ ದಾರುಣ ಬಡತನದಲ್ಲಿ ಹಾದು ಬಂದವರು. ಬರಿಯ ಬಡತನ ಮಾತ್ರವಲ್ಲ, ಸಾವು ಅವರ ಕುಟುಂಬದ ಮೇಲೆ ನಡೆಸಿದ ದಾಳಿ ಅತ್ಯಂತ ಕ್ರೂರವಾದದ್ದು; ಎಂಥ ಎದೆಗುಂಡಿಗೆ ಇದ್ದವರೂ ಹುರುಪಳಿಸಿ ಕಂಗಾಲಾಗಿ ಹೋಗುವಂಥದು. ಒಂಬತ್ತು ವರ್ಷದ ಚಿಕ್ಕ ಹುಡುಗನಾಗಿದ್ದಾಗ ಒಂದೇ ದಿನ ಅವರ ಅಕ್ಕ ಅಣ್ಣ ಇಬ್ಬರೂ ತೀರಿಕೊಂಡರು. ಹನ್ನೊಂದು ವರ್ಷಕ್ಕೆ ತಾಯಿ ಮರೆಯಾದರು. ಹದಿನಾಲ್ಕರಲ್ಲಿ ತಮ್ಮ ಸತ್ತಾಗ ಭೈರಪ್ಪ ಹೆಗಲಮೇಲೆ ಅವನ ಶವ ಹೊತ್ತು ಸ್ಮಶಾನದಲ್ಲಿ ಕಾಡುಕಟ್ಟಿಗೆ ಸೇರಿಸಿ ಬೆಂಕಿಹಾಕಿ ಸುಟ್ಟು ಬಂದರು. ದೊಡ್ಡವನಾಗಬೇಕಾದ ಲೇಖಕ ದೊಡ್ಡ ಆಘಾತಗಳನ್ನೂ ಸಹಿಸಿರಬೇಕಾಗುತ್ತದೆ. ಬೇರೆಯವರಿಗೆ ಬೆಳಕಾಗಲು ಸ್ವತಃ ಉರಿಯಬೇಕಾಗುತ್ತದೆ. "ದೊಡ್ಡವರದೆಲ್ಲವೂ ದೊಡ್ಡದೆಂಬುವ ಮಾತು ಸುಳ್ಳಲ್ಲ" ಎಂಬ ಬೇಂದ್ರೆ ಮಾತು ಈ ಅರ್ಥದಲ್ಲಿ ತುಂಬ ನಿಜವಾದದ್ದು. ಸಾವಿನ ಸ್ವರೂಪದ ಬಗ್ಗೆ ಮುಂದೆ ಗಹನವಾಗಿ ಚಿಂತಿಸಿದ ಈ ಲೇಖಕ ಬಾಲ್ಯದಲ್ಲೇ ಯಮನನ್ನು

ಮುಖಾಮುಖಿಯಾಗಿ ನೋಡಿದ್ದು, ಸೋಕಿದೆ ಎಂಬ ಹತ್ತಿರದಲ್ಲಿ ಸಾಗಿದ್ದು ವಿಧಿ ಅವರ ಪಾಲಿಗೆ ತೋರಿದ ಕ್ರೂರ ಕರುಣೆ ಎನಿಸುತ್ತದೆ. ಭೈರಪ್ಪನವರ ಕಾದಂಬರಿಗಳಲ್ಲಿ ಪ್ರತ್ಯಕ್ಷವಾಗುವ ಅನುಭವಲೋಕ ತನ್ನ ಮಾನುಷತೆಯಿಂದ, ಸತ್ಯದ ಕಾಂತಿಯಿಂದ ಥಳಥಳಿಸುತ್ತಿದ್ದರೆ ಅದಕ್ಕೆ ಕಾರಣ ಅದು ಅನುಭವದ ಗಟ್ಟಿ ಪಾಯದ ಮೇಲೆ ನಿಂತಿರುವುದು. ಶೋಷಣೆ, ಒಂಟಿತನ, ಉಪೇಕ್ಷೆ, ಕ್ರೌರ್ಯ, ಬಡತನ, ಅನಾಥ ಜೀವನ ಈ ಎಲ್ಲ ಅನುಭವ ದ್ರವ್ಯಗಳ ಮೂಸೆಯಿಂದ ಭೈರಪ್ಪನವರ ವ್ಯಕ್ತಿತ್ವ ಎದ್ದು ಬಂದಿದೆ. ಹೊಟೆಲ್ ಮಾಣಿ, ಸಿನಿಮಾ ಗೇಟ್‌ಕೀಪರ್, ವಿಕ್ಟೋರಿಯಾ ಕುದುರೆ ಗಾಡಿಯ ಸಾರಥಿ. ಎಲ್ಲ ಬಗೆಯ ಕೆಲಸಗಳನ್ನು ಮೇಲು ಕೀಳೆನ್ನದೆ ಅವರು ನಿರ್ವಹಿಸಿದ್ದಿದೆ. ಕಲ್ಲು ಮುಳ್ಳು ತುಂಬಿದ ಇಂಥ ಭಯಂಕರ ದಾರಿಯಲ್ಲಿ ಕಾಲುಗೆಡದೆ, ಕಣ್ಣುಗೆಡದೆ ಹಾದುಬಂದ ಈ ವ್ಯಕ್ತಿಯ ಕೆಚ್ಚನ್ನು ನೋಡಿದಾಗ ಭೈರಪ್ಪ ಎಂಥ 'ಗಟ್ಟಿಪಿಂಡ' ಎನ್ನುವುದು ತಿಳಿಯುತ್ತದೆ.

ಭೈರಪ್ಪ ತತ್ವಶಾಸ್ತ್ರದಲ್ಲಿ ಎಂ.ಎ. ಮತ್ತು ಪಿಎಚ್.ಡಿ. ಪದವಿ ಪಡೆದವರು. ಅಷ್ಟೇ ಅಲ್ಲ, ಅಧ್ಯಯನದಲ್ಲೂ ಪ್ರಚಂಡರಾದ ಅವರು ಸಾಮಾನ್ಯ ಪಿಎಚ್.ಡಿ. ಪದವೀಧರನಂತಲ್ಲದೆ ದೊಡ್ಡ ತತ್ವಶಾಸ್ತ್ರಜ್ಞರಂತೆ ಜ್ಞಾನಸಂಗ್ರಹ ಮಾಡಿದವರು; 'ಸತ್ಯ ಮತ್ತು ಸೌಂದರ್ಯ' 'ಸಾಹಿತ್ಯ ಮತ್ತು ಪ್ರತೀಕ' 'ಕಥೆ ಮತ್ತು ಕಥಾವಸ್ತು' 'ನಾನೇಕೆ ಬರೆಯುತ್ತೇನೆ'- ಈ ಗ್ರಂಥಗಳು ಅವರ ದಾರ್ಶನಿಕ ಮತ್ತು ಸಾಹಿತ್ಯ ವೈಚಾರಿಕತೆಯ ಮಟ್ಟ ಎಷ್ಟು ಎತ್ತರದ್ದೆನ್ನುವುದಕ್ಕೆ ಬೆಳಕಿಂಡಿಯಾಗಬಲ್ಲಂಥವು. ಭೈರಪ್ಪ ತಮ್ಮ ಜ್ಞಾನವನ್ನು ನೇರವಾಗಿ ಮಂಡಿಸುವ ಕೆಲಸವನ್ನು ಇಷ್ಟಪಟ್ಟವರಲ್ಲ. ಅವರ ದಾರ್ಶನಿಕತೆ, ವಿಚಾರ, ಜಿಜ್ಞಾಸೆಗಳೆಲ್ಲ ಅನುಭವ ಕಲ್ಪನೆಗಳ ಬಲದಿಂದ ತಾನಾಗಿ ಮೂಡುವ ಕೃತಿಗಳ ತಾತ್ವಿಕ ಭಿತ್ತಿಯಾಗಿ ರೂಪು ಪಡೆಯುತ್ತವೆ. ಅವರ ಆತ್ಮಕಥೆಯಾದ 'ಭಿತ್ತಿ' ಕೂಡ ಒಂದು ಕಾದಂಬರಿಯ ಹದ ಪಡೆದೇ ನಿರೂಪಿತವಾಗಿರುವುದನ್ನು ಗಮನಿಸಬೇಕು. ಸಮಕಾಲೀನವಾಗಿರುತ್ತಲೇ ನಮ್ಮ ಪರಂಪರೆಯ ಅರಿವನ್ನು ಮೈಗೂಡಿಸಿಕೊಂಡು ಬೆಳೆಯುವ ವಿಶಿಷ್ಟತೆ ಅವುಗಳದ್ದು. ಅವರ ಕೃತಿಗಳು ಗಂಗಾಪ್ರವಾಹದಂತೆ. ಗಂಗೆ ಸಮಕಾಲೀನ ಬದುಕಿಗೆ ಸಲ್ಲುತ್ತಲೇ ಭಾರತೀಯ ಪರಂಪರಾ ಪ್ರಪಂಚದ ನೂರಾರು ಕಥೆ, ವಿಚಾರ, ಭಾವನೆಗಳನ್ನು ತನ್ನೊಡನೆ ಹೊತ್ತು ಹರಿಯುತ್ತಿದೆ.

ಈವರೆಗೆ ಭೈರಪ್ಪ ಹದಿನೆಂಟು ಕಾದಂಬರಿಗಳನ್ನು ಬರೆದಿದ್ದಾರೆ. ಅವರೇ ನಿರಾಕರಿಸಿಕೊಂಡಿರುವ ಮೊದಲ ಎರಡು ಕೃತಿಗಳು ಇವುಗಳಲ್ಲಿ ಸೇರಿಲ್ಲ. ಅವರ ಕೃತಿಗಳೆಲ್ಲವೂ ಜನಮಾನ್ಯವಾಗಿದ್ದರೂ ವಂಶವೃಕ್ಷ, ನಾಯಿನೆರಳು, ತಬ್ಬಲಿಯು

ನೀನಾದೆ ಮಗನೆ, ಗೃಹಭಂಗ, ದಾಟು, ಪರ್ವ, ಸಾಕ್ಷಿ, ತಂತು – ಇವು ಹೆಚ್ಚು ಧ್ವನಿದಟ್ಟವಾಗಿವೆ. ಅವರ ಇತ್ತೀಚಿನ ಕೃತಿ 'ಸಾರ್ಥ' ಎಂಟನೆಯ ಶತಮಾನದ ಭಾರತೀಯ ಜೀವನದ ಆವರಣದಿಂದ ಎದ್ದುಬಂದ ಕೃತಿ. ಗಟ್ಟಿಮುಟ್ಟಾದ, ಆಶ್ಚರ್ಯವೆನಿಸುವಷ್ಟು ವೈವಿಧ್ಯಭರಿತವಾದ ಅನುಭವಲೋಕ ತಮ್ಮೊಡನಿದ್ದರೂ ಭೈರಪ್ಪ ಅಷ್ಟಕ್ಕೇ ತೃಪ್ತರಾಗುವವರಲ್ಲ. ತಮ್ಮ ವಸ್ತು ಆದಷ್ಟು 'ಅಥೆಂಟಿಕ್' ಆಗಲು ಅವರು ಇನ್ನಷ್ಟು ಅನುಭವ ಮಾಹಿತಿಗಳ ಸಂಗ್ರಹಕ್ಕಾಗಿ ಶ್ರಮಪಡುತ್ತಾರೆ, ಸಂಚಾರ ಮಾಡುತ್ತಾರೆ. ಅವರ ದೇಶ ವಿದೇಶಗಳ ಪ್ರವಾಸ ಕೂಡ ಇಂಥ ಕಳಕಳಿಯ ಹಿನ್ನೆಲೆ ಹೊಂದಿದವು. 'ನಾನೇಕೆ ಬರೆಯುತ್ತೇನೆ' ಎಂಬ ಕೃತಿ ತಮ್ಮ ಒಂದೊಂದು ಕಾದಂಬರಿಗೂ ಅವರು ಹೇಗೆ ಶ್ರಮಿಸುತ್ತಾರೆ ಎನ್ನುವುದಕ್ಕೆ ಒಂದು ಇಣುಕುನೋಟ ನೀಡಬಲ್ಲದು.

ಭೈರಪ್ಪನವರ ಕೆಲವಾರು ಕಾದಂಬರಿಗಳನ್ನಾದರೂ ಓದದ ಸಾಹಿತ್ಯಾಸಕ್ತ ಕನ್ನಡಿಗರೇ ಇಲ್ಲ. ಪ್ರಪಂಚಾದ್ಯಂತ ಕನ್ನಡಿಗರು ಅವರ ಕೃತಿಗಳನ್ನು ಓದಿದ್ದಾರೆ, ಸ್ವಂತದ ಪುಸ್ತಕ ಸಂಗ್ರಹಕ್ಕೆ ಕೊಂಡು ಸೇರಿಸಿದ್ದಾರೆ. ಇಲ್ಲಿರಲಿ, ದೂರದ ಅಮೆರಿಕೆಯಲ್ಲಿ ಕೂಡ ಭೈರಪ್ಪ ಸಾಹಿತ್ಯಾಸಕ್ತ ಕನ್ನಡಿಗರ ಪ್ರಥಮ ಆಯ್ಕೆ. ಅವರ ಕೃತಿಗಳ ಬಗ್ಗೆ ಇಲ್ಲಿ ಚರ್ಚೆಯೇ ಆಗುವುದಿಲ್ಲ, ಸೆಮಿನಾರುಗಳಲ್ಲಿ ಯಾರೂ ಅವರ ಹೆಸರನ್ನೇ ಎತ್ತುವುದಿಲ್ಲ ಎಂದು ಕೇಳಿ ಅವರಿಗೆ ಪರಮಾಶ್ಚರ್ಯ. ಅಲ್ಲಿ ಕೂಡ ಕನ್ನಡಿಗರು ಭೈರಪ್ಪನವರ ಕಾದಂಬರಿಗಳಿಗಾಗಿ ಇಲ್ಲಿಯವರಂತೇ ತವಕದಿಂದ ಕಾಯುತ್ತಾರೆ. ಇದನ್ನೆಲ್ಲ ನೋಡಿದಾಗ ಈಚೆಗೆ ಹಾಮಾ ನಾಯಕರು ಬರೆದ ಮಾತು ಸತ್ಯವೆನ್ನಿಸುತ್ತದೆ. "ಭೈರಪ್ಪನವರು, ಶಿವರಾಮ ಕಾರಂತರ ಮತ್ತು ಅ. ನ. ಕೃಷ್ಣರಾಯರ ನಂತರದ ಮಹಾಕಾದಂಬರಿಕಾರರು. ಕಾರಂತರ ಕಾದಂಬರಿಗಳಲ್ಲಿ ಕಂಡು ಬರುವ ಜೀವನಾನುಭವ ಹಾಗೂ ಅ.ನ.ಕೃಷ್ಣರಾಯರು ಸಂಪಾದಿಸಿದ ಜನಪ್ರಿಯತೆಗಳೆರಡೂ ಭೈರಪ್ಪನವರಲ್ಲಿ ಮೇಳವಿಸಿವೆ. ಯಾರು ಒಪ್ಪಲಿ, ಬಿಡಲಿ, ಇಂದಿನ ಭಾರತೀಯ ಕಾದಂಬರಿಕಾರರಲ್ಲಿ ಅವರು ತುಂಬ ಮಹತ್ವದವರು, ಅಗ್ರಗಣ್ಯರು."

ಭೈರಪ್ಪ ಅಧಿಕಾರ, ಹಣ, ಪ್ರಶಸ್ತಿಗಳ ಬೆನ್ನು ಹತ್ತಿ ಹೋದವರಲ್ಲ, ಅನುಭವದ ಬೆನ್ನುಹತ್ತಿ ಹೋದವರು. ತಮ್ಮೆಲ್ಲ ಕಾಲವನ್ನು ಚಿಂತನೆಗೆ, ಸಂಶೋಧನೆಗೆ, ಕಥಾನಕಗಳ ಮೂಲಕ ಅವುಗಳಿಗೆ ಕಲಾತ್ಮಕ ಅಭಿವ್ಯಕ್ತಿ ನೀಡುವುದಕ್ಕೆ ಮೀಸಲಿಟ್ಟವರು. ಲಾಭಕಾರಕವಾದ ಈ ಕಾಲದ ಹುಸಿ ನಿಲುವುಗಳಿಗೆ ಬಲಿಹೋಗದೆ, ಲೌಕಿಕ ಲಾಭಗಳ ಆಕರ್ಷಣೆಗೆ ಸಿಕ್ಕು ಲೂಟಿಯಾಗದೆ ನೂರಕ್ಕೆ ನೂರು ಪ್ರಾಮಾಣಿಕವಾಗಿ ಉಳಿದವರು; ಅದರ ಫಲವಾಗಿ ನಿರಂತರವಾಗಿ ಮೌಲಿಕ ಬರೆಹವನ್ನು

ಹೊರತರುತ್ತಿರುವವರು. ಹೀಗಿದ್ದರೂ ನಮ್ಮ ನಾಡಿನ ಕೆಲವರು ವಿಮರ್ಶಕರು ಅವರ ಕೃತಿಗಳಿಗೆ ಒಮ್ಮುಖದ ವ್ಯಾಖ್ಯಾನ ಮಾಡಿ ಅವುಗಳ ಮಹತ್ವವನ್ನು ಅಲಕ್ಷಿಸಿದ್ದಾರೆ. ಪಾಶ್ಚಾತ್ಯ ಸಾಹಿತ್ಯ ಕೃತಿಗಳ ಅಧ್ಯಯನದಿಂದ ಮೂಡಿ ಬಂದ ವಿಮರ್ಶೆಯ ಮಾನದಂಡಗಳನ್ನು ಅವರ ಕೃತಿಗಳಿಗೆ ಅನ್ವಯಿಸಿ ತೂಗಲೆಳಸಿದ್ದಾರೆ. ಸರಿಯೆ? ಇದು ಯಾರಿಗೋ ಹೊಲಿಸಿದ ಅಂಗಿಯನ್ನು ಯಾರಿಗೋ ತೊಡಿಸಿ, ಅಳತೆಗೆ ಹೊಂದದ ಇವನ ಮೈ ವಿಕೃತವಾಗಿದೆ ಎಂದು ಜರಿದಂತೆ. ಭಾರತೀಯ ಪರಂಪರೆಯ ನೋಟ ನಿಲುವುಗಳ ಅರಿವಿಲ್ಲದವರು ಆ ಅರಿವಿನ ಫಲವಾಗಿ ಮೂಡಿದ ಕೃತಿಗಳನ್ನು ತೂಗಲು ಹೊರಡುವುದು ಅವುಗಳಿಗೆ ಅನ್ಯಾಯ ಮಾಡಿದಂತೆ.

'ಭೈರಪ್ಪ ಒಬ್ಬ ಪ್ರತಿಗಾಮಿ ಲೇಖಕ; ಹಿಂದೂ ಸಮಾಜದ ಹಳೆಯ ನಂಬಿಕೆ ಆಚರಣೆಗಳನ್ನು ಹಾಗೆ ಹಾಗೇ ಇಂದಿನ ಕಾಲದಲ್ಲೂ ತಮ್ಮ ಕಾದಂಬರಿಗಳಲ್ಲಿ ಸಮರ್ಥಿಸುತ್ತಾರೆ; ಪ್ರಗತಿಮುಖವಾಗಿ ಸಾಗುವ ಸಮಾಜವನ್ನು ಮತ್ತೆ ಹಿಂದಕ್ಕೆ ಕೊಂಡೊಯ್ಯಲು ಯತ್ನಿಸುತ್ತಾರೆ' ಎನ್ನುವುದು ಈ ಕೆಲ ವಿಮರ್ಶಕರು ಹಬ್ಬಿಸಿರುವ ಕೂಗು. ಇದಕ್ಕೆ ಅವರು ಕೊಡುವ ನಿದರ್ಶನ 'ವಂಶವೃಕ್ಷ' ಮತ್ತು 'ತಬ್ಬಲಿಯು ನೀನಾದೆ ಮಗನೆ' – ಇಂಥ ಕಾದಂಬರಿಗಳು. ವಂಶವೃಕ್ಷದಲ್ಲಿ ವಿಧವಾ ವಿವಾಹದ ವಿರುದ್ಧ ನಿಂತು ಕಾತ್ಯಾಯನಿಯನ್ನು ಶಿಕ್ಷಿಸುತ್ತಾರೆ. 'ತಬ್ಬಲಿ'ಯಲ್ಲಿ ಗೋವುಗಳ ಪರ ನಿಂತ, ವೆಂಕಟರಮಣನನ್ನು ಮನ್ನಿಸಿ ಪ್ರಗತಿಪರ ನಿಲುವಿನ ಕಾಳಿಂಗನನ್ನು ಶಿಕ್ಷಿಸುತ್ತಾರೆ ಎನ್ನುವುದು ಆಕ್ಷೇಪಣೆಗಳ ಒಟ್ಟು ಸಾರ.

ವಂಶವೃಕ್ಷ ಒಂದು ಕುಲದ ಒಟ್ಟು ಚಿತ್ರದಲ್ಲಿ ಅವಿಭಾಜ್ಯ ರೇಖೆಯಾಗಿ ನಿಲ್ಲುವ ವ್ಯಕ್ತಿ ಜೀವನದ ಘನತೆಯನ್ನೂ, ದಾಂಪತ್ಯ ಜೀವನದಲ್ಲಿ ಮಾತೃತ್ವದ ಅರ್ಥಪೂರ್ಣತೆಯನ್ನೂ ಗಾಢವಾದ ಜಿಜ್ಞಾಸೆಗೆ ಒಳಪಡಿಸುವ ಕಾದಂಬರಿ. ಇದ್ದ ಮಗ ತನ್ನ ಪಾಲಿಗೆ ಇಲ್ಲವಾಗಿ, ಪಡೆಯಬಹುದಾದ ಮಕ್ಕಳಿಗೆ ಎರವಾಗಿ ಕಡೆಯುಸಿರೆಳೆದ ಕಾತ್ಯಾಯನಿ ಮತ್ತು ವಂಶ ಜೀವನದ ಚೌಕಟ್ಟಿನೊಳಗೆ ವ್ಯಕ್ತಿ ಜೀವನಕ್ಕೆ ದೊರಕುವ ಸಾರ್ಥಕತೆಯನ್ನು ಸದಾ ಪ್ರತಿಪಾದಿಸುತ್ತ ಕಡೆಗೆ ತನ್ನದೆಂದು ನಂಬಿದ್ದ ವಂಶದಿಂದಲೇ ಕತ್ತರಿಸಿ ಹೋದ ಶ್ರೋತ್ರಿ ಇವರಿಬ್ಬರ ಸುತ್ತ ಮುಖ್ಯವಾಗಿ ಕಥೆ ಹಬ್ಬಿಕೊಳ್ಳುತ್ತದೆ. ಕಾತ್ಯಾಯನಿ ತನ್ನ ಆಯ್ಕೆಯಿಂದ ತನ್ನ ದುಃಸ್ಥಿತಿಗೆ ಕಾರಣಳಾದರೆ ಶ್ರೋತ್ರಿ ಒಬ್ಬ ಋಷಿಯಂತೆ ಬಾಳಿಯೂ ವಿಧಿಯ ವ್ಯಂಗ್ಯಕ್ಕೆ ಬಲಿಯಾಗುತ್ತಾನೆ. ಇಬ್ಬರಿಗೂ ಶಿಕ್ಷೆಯಾಗುತ್ತದೆ. ಕಾತ್ಯಾಯನಿ ಪ್ರಾಪಂಚಿಕ ಸುಖವನ್ನರಸಿ ಹೋಗಿ ತನ್ನೊಳಗೇ ಬೆಳೆಯಗೊಟ್ಟ ದ್ವಂದ್ವ ಘರ್ಷಣೆಗಳಿಗೆ ಬಲಿಯಾದರೆ ಶ್ರೋತ್ರಿ ತಾನು ನಂಬಿ ನಡೆಸಿದ ಶ್ರದ್ಧಾಜೀವನ ಕೊಟ್ಟ ಬಲದಲ್ಲಿ ಶಿಕ್ಷೆ ಪಡೆದೂ ಬಣ್ಣಗೆಡದೆ

ಉಳಿಯುತ್ತಾರೆ. ಪರಂಪರಾಗತ ವಿಚಾರ ನಂಬಿಕೆಗಳನ್ನೂ ಅದರ ವಿರುದ್ಧನಿಲುವನ್ನೂ ಆಕರ್ಷಕವಾದ ಕಥಾನಕದ ಮೂಲಕ ಮಂಡಿಸುವ ಈ ಕೃತಿ ಅಪಾರ ಜನಪ್ರಿಯತೆ ಗಳಿಸಿ ಕನ್ನಡಕ್ಕೆ ಮಹಾಲೇಖಕನೊಬ್ಬನ ಬರವನ್ನು ಸಾರಿತು. ಆದರೂ ಹಲವರು ವಿಮರ್ಶಕರು ಈ ಕಾದಂಬರಿಯಲ್ಲಿ ಭೈರಪ್ಪನವರ ಪಕ್ಷಪಾತದ ನಿಲುವನ್ನು ಕಂಡರು. ಪ್ರಗತಿಪರ ನಿಲುವಿನ ವಿಧವಾ ವಿವಾಹವನ್ನು ಒಪ್ಪುದ ಕೃತಿಕಾರ ಸುಳ್ಳೇ ಕಾತ್ಯಾಯನಿಯನ್ನು ಶಿಕ್ಷಿಸುತ್ತಾರೆ ಎಂಬ ಮಾತುಗಳೆದ್ದವು. ಆದರೆ ಕಾತ್ಯಾಯನಿಯ ದುರಂತದ ಬೀಜ ಅವಳ ಮನಸ್ಸಿನ ತಾಕಲಾಟದೊಳಗೇ ಇರುವ ಬಗ್ಗೆ ಕಾದಂಬರಿ ಧ್ವನಿಪೂರ್ಣವಾಗಿ ನುಡಿಯುವುದನ್ನು ಈ ವಿಮರ್ಶಕರು ಅಲಕ್ಷಿಸಿದರೆಂಬಂತೆ ತೋರುತ್ತದೆ. ತನ್ನ ವಿರುದ್ಧ ಗತಿಯಲ್ಲಿರುವ ಶ್ರೋತ್ರಿಯರ ನಿಲುವು ನಡತೆಗಳ ಬಗ್ಗೆ ಅಪಾರ ಗೌರವವಿರುವ ಕಾತ್ಯಾಯನಿ ಅವರ ವಿಚಾರಗಳನ್ನು ಎದುರಿಸಲಾಗದೆ ತನ್ನ ಮಗನನ್ನು ಅವರಿಂದ ತರಲಾಗದೆ ಹೋಗುವುದು, ಕಪಿಲಾನದಿಯ ಗೌರೀಘಟ್ಟದ ಬಳಿ ಅದೇ ದಿನ ಸಂಜೆ ಆತ್ಮಹತ್ಯೆಯ ಆಲೋಚನೆ ಮಾಡುವುದು – ಇವೆಲ್ಲ ಅವಳಿಗೇ ತಿಳಿಯದಂತೆ ಸೂಕ್ಷ್ಮವಾಗಿ ಅವಳೊಳಗೇ ಹುದುಗಿದ್ದ ದ್ವಂದ್ವ, ತಾಕಲಾಟಗಳನ್ನು ಹೇಳುತ್ತವೆ. ಪರಂಪರೆಯ ನಂಬಿಕೆಗಳನ್ನು ತಿರಸ್ಕರಿಸಿ ಹೋಗುವವರು ತಮ್ಮ ಹೊಸ ವಿಚಾರಗಳಲ್ಲಿ ಶ್ರದ್ಧೆಯುಳ್ಳವರಾಗಿರಬೇಕು, ಇಲ್ಲವಾದರೆ ಅವರೊಳಗೇ ಬೆಳೆಯುವ ದ್ವಂದ್ವ ಪಾಪಪ್ರಜ್ಞೆಗಳು ಅವರ ಸಂಭಾವ್ಯ ಪ್ರಾಪ್ತಿಯನ್ನೇ ಕಬಳಿಸಿ ಬಿಡುತ್ತವೆ. ಇದು ಕಾದಂಬರಿಯ ನಿಲುವು. ಶ್ರೋತ್ರಿ ವಂಶ, ವಂಶ ಎಂದು ಉದ್ದಕ್ಕೂ ಅದರ ಘನತೆಯನ್ನು ನಂಬಿ ಪ್ರತಿಪಾದಿಸುತ್ತಾನೆ. ಆದರೆ ತಾನು ಆರಾಧಿಸಿದ ವಂಶಕ್ಕೆ ತಾನೇ ಎರವಾಗಿ, ಅದನ್ನು ಬಿಟ್ಟುಹೋದಂತೆ ಕಂಡ ಸೊಸೆ ಆ ವಂಶಕ್ಕೇ ಹೋಗಿ ಸೇರಿರುವ ವಿಡಂಬಕ ಸತ್ಯವನ್ನು ಅವನು ಜೀರ್ಣಿಸಿಕೊಳ್ಳಬೇಕಾಗುತ್ತದೆ. ಕೃತಿಕಾರ ಯಾರ ಪರವಾಗಿಯೂ ಇಲ್ಲ. ಪಕ್ಷಪಾತದ ಪ್ರಶ್ನೆಯೇ ಏಳುವುದಿಲ್ಲ. ಶಿಕ್ಷೆಯನ್ನು ಸ್ವೀಕರಿಸಿ ಅರಗಿಸಿಕೊಳ್ಳುವ ರೀತಿಯಲ್ಲಿ ಮಾತ್ರ ಪಾತ್ರಗಳು ತಮ್ಮ ಬಾಳಿನ ಸಂಸ್ಕಾರಕ್ಕೆ ಅನುಗುಣವಾಗಿ ಸೋಲುವುದು ಗೆಲ್ಲುವುದು ನಡೆಯುತ್ತದೆ.

'ತಬ್ಬಲಿಯು ನೀನಾದೆ ಮಗನೆ' ಕಾದಂಬರಿಯ ಸಂಬಂಧದಲ್ಲಿಯೂ ಕೃತಿಕಾರರ ಮೇಲೆ ಮಾಡಿರುವ ಆಕ್ಷೇಪಣೆ ಹುರುಳಿಲ್ಲದ್ದು. ಹಿಂದೂ ಪರಂಪರೆಯ ವಿಚಾರ ಕ್ರಮದಲ್ಲಿ ಗೋವಿಗೆ ಇರುವ ಪ್ರಾಮುಖ್ಯ ಪಾವಿತ್ರ್ಯಗಳನ್ನು ಪ್ರತಿಪಾದಿಸುವ ವೆಂಕಟರಮಣನ ಪರ ಲೇಖಕರು ನಿಂತಿಲ್ಲ. ಮೇಲುನೋಟಕ್ಕೆ ವೆಂಕಟರಮಣನೇ ಗೆದ್ದು ಕಾಳಿಂಗ ನಿರ್ವಿಣ್ಣನಾದಂತೆ ಕಂಡರೂ ವಾಸ್ತವವಾಗಿ ಗೆಲ್ಲುವವನು ಕಾಳಿಂಗನೇ. ದೇವಸ್ಥಾನದ ಅರ್ಚಕನಾದರೂ ವೆಂಕಟರಮಣ ಬಹಳ ಹಠಮಾರಿಯಾಗಿ ಕ್ರೂರಿಯಾಗಿ ವರ್ತಿಸುತ್ತಾನೆ. ಕಾಳಿಂಗ ಮತ್ತು ಹಿಲ್ಡಾ (ಕಡೆಗೆ ಅವರ ಚಿಕ್ಕಮಗುವಿನ)

ಬಗ್ಗೆ ಅವನು ಬಳಸುವ ಕ್ರೂರ, ಹೊಲಸು ಮಾತುಗಳು ಅವನ ದೇವತಾರ್ಚನೆಯ ವಿಫಲತೆಯನ್ನು ಸಾರಿಹೇಳುತ್ತವೆ. ಬಲಿಷ್ಠ ಎದುರಾಳಿಯೇ ಆದರೂ ಕಾಳಿಂಗನ ಬಾಯಲ್ಲಿ ಎಂದೂ ಅಂಥ ಮಾತು, ಆ ಪ್ರಮಾಣದಲ್ಲಿ ಬರುವುದಿಲ್ಲ. ಮಂತ್ರ ಹೇಳುವಷ್ಟೇ ಸಲೀಸಾಗಿ, ಅದಕ್ಕಿಂತ ಪರಿಣಾಮಕಾರಿಯಾಗಿ ವೆಂಕಟರಮಣ ಬಳಸುವ ಬಯ್ಗುಳ, ತಳೆಯುವ ಕಠೋರ ನಿಲುವುಗಳು ಅವನ ಉದ್ಧಟತನವನ್ನು ಎತ್ತಿ ತೋರಿಸುತ್ತವೆ. ಅರ್ಚಕನಾಗಿ ಊರಿನವರ ಕಣ್ಣಲ್ಲಿ ಗಳಿಸಿಕೊಂಡ ಗೌರವವೇ ಕಾರಣವಾಗಿ ಸಲಸಲವೂ ಅವನ ಪಿತ್ಥ ನೆತ್ತಿಗೇರುತ್ತದೆ. ಅಹಂಕಾರವನ್ನೇ ಆತ್ಮಗೌರವವೆಂದು, ತಿರಸ್ಕರಿಸಿ ಬಾಳುವುದನ್ನೇ ಕೆಚ್ಚೆಂದು ಭಾವಿಸುವ ಅವನ ಗರ್ವದ ನಡತೆಯ ಎದುರು ಕಾಳಿಂಗ ತುಂಬ ನಾಗರಿಕನಾಗಿ ಮಾನವೀಯವಾಗಿ ಕಾಣುತ್ತಾನೆ. ತಾಯಿಯ ಸಾವಿನ ಹೊತ್ತಿಗೆ ಜನರು ತನ್ನನ್ನು ತಿರಸ್ಕಾರದಿಂದ ಕಾಣುವರೆಂದು ತಿಳಿದೂ ಕಾಳಿಂಗ ಅಲ್ಲಿ ಬಂದು ನಿಲ್ಲುವುದು, ಮಾಚನ ಮೂಲಕ ಸುಳ್ಳು ಹೇಳಿಯಾದರೂ ಅವಳ ಹೆಸರಲ್ಲಿ ಪೂಜೆ ಮಾಡಿಸುವುದು, ಹೆಂಡತಿಯ ನೋವನ್ನು ಅರ್ಥಮಾಡಿಕೊಂಡು ಅವಳನ್ನು ಸಂತೈಸುವುದು, ಗೋವುಗಳನ್ನು ಕಟುಕರಿಗೆ ಮಾರಿದ್ದು ತಪ್ಪೆಂದು ಆತ್ಮವಿಮರ್ಶೆ ಮಾಡಿಕೊಂಡು ಆ ತಪ್ಪನ್ನು ತಿದ್ದಿಕೊಳ್ಳಲು, ಹೆಂಡತಿ ತಡೆದರೂ ಬೊಂಬಾಯಿಗೆ ಓಡುವುದು – ಇವೆಲ್ಲ ಕಾಳಿಂಗನ ಬಗ್ಗೆ ಸೂಕ್ಷ್ಮಗ್ರಹಿಕೆಯ ಓದುಗರಲ್ಲಿ ಸಹಾನುಭೂತಿಯನ್ನು ಬೆಳೆಸುತ್ತವೆ. ವೆಂಕಟರಮಣನ ಅಹಂಕಾರ, ಉದ್ಧಟತನ, ಕೀಳು ಬೈಗುಳಗಳ ಚಿತ್ರಣ ಸೋದ್ದಿಶ್ಯವಾದದ್ದು. ವಂಶವೃಕ್ಷದ ಶ್ರೋತ್ರಿಯೂ ವೆಂಕಟರಮಣ ನಂತೆ ಪರಂಪರಾಗತ ವಿಚಾರಗಳ ಪ್ರತಿನಿಧಿಯೇ. ಆದರೆ ಇಬ್ಬರ ನಡತೆಗಳಲ್ಲಿ ಎಂಥ ವಿರೋಧ!

'ಪರ್ವ' ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಒಂದು ಅಪೂರ್ವಕೃತಿ. ಇದು ಭೈರಪ್ಪನವರು ಬರೆದ ಗದ್ಯ ಮಹಾಕಾವ್ಯ. ಇದರ ದರ್ಶನ ವೈಚಾರಿಕತೆಗಳು ಮುಂಚೆ ಅವರು ಬರೆದಿದ್ದ ಇತರ ಕಾದಂಬರಿಗಳಿಗಿಂತ ವಿಭಿನ್ನವಾದದ್ದು. ಪರ್ವ ತಮಗೆ ಮರುಹುಟ್ಟು ತಂದುಕೊಟ್ಟ ಕೃತಿಯೆಂದು ಭೈರಪ್ಪನವರೇ ಹೇಳಿಕೊಂಡಿದ್ದಾರೆ. ಇಪ್ಪತ್ತನೆಯ ಶತಮಾನ ಮಹಾಭಾರತಕ್ಕೆ ಬರೆದ (ಕಾದಂಬರಿ ರೂಪದ) ಒಂದು ಸೃಜನಾತ್ಮಕ ವ್ಯಾಖ್ಯಾನ ಎಂದೂ ಇದನ್ನು ಕರೆಯಬಹುದೇನೋ.

ಮಹಾಭಾರತವನ್ನು ಹಿಂದೆ ಈ ಪ್ರಮಾಣದಲ್ಲಿ, ಕನ್ನಡ ಭಾಷೆಯಲ್ಲಿ ಮರು ಸೃಷ್ಟಿಸಿದವರು ಇಬ್ಬರು. ಒಬ್ಬ ಹತ್ತನೆಯ ಶತಮಾನದ ಆದಿ ಕವಿ ಪಂಪ; ಇನ್ನೊಬ್ಬ ಹದಿನೈದನೆಯ ಶತಮಾನದ ಮಹಾಕವಿ ಕುಮಾರವ್ಯಾಸ. ಆ ಇಬ್ಬರಿಗಿಂತ ಭಿನ್ನವಾಗಿ, ಸ್ವವಿಶಿಷ್ಟವಾಗಿ, ಸಮಕಾಲೀನ ಜೀವನದ್ರವ್ಯವನ್ನು ಹೇರಳ ಪ್ರಮಾಣದಲ್ಲಿ

ಮೈತುಂಬಿಕೊಂಡ ಸೃಜನಾತ್ಮಕ ಬರೆಹವಾಗಿ 'ಪರ್ವ' ಅನ್ಯಾದೃಶವಾಗಿದೆ. ಇದನ್ನು ರಚಿಸಿ ಭೈರಪ್ಪನವರು ಪಂಪ ಕುಮಾರವ್ಯಾಸ ಮಹಾಕವಿಗಳ ಜೊತೆಗೂಡಿ ನಿಂತ ಮಹಾ ಕಾದಂಬರಿಕಾರರಾಗಿದ್ದಾರೆ.

ಹಿಂದೆ ಮಹಾಭಾರತದ ವಸ್ತುವನ್ನು ಬಳಸಿ ಬರೆದ ಯಾವ ಕೃತಿಗಳೇ ಆಗಲಿ ಪರ್ವದ ಹಾಗೆ ಹೊಸ ಕ್ರಮವೊಂದರಲ್ಲಿ ಮಹಾಭಾರತವನ್ನು ಹೂಡಿಲ್ಲ. ತಮ್ಮ ಕಾಲದ ವೈಚಾರಿಕತೆ, ಜೀವನ ಮೌಲ್ಯ, ದರ್ಶನಗಳನ್ನು ಆ ಕಥಾನಕದಲ್ಲಿ ಹುಟ್ಟುಹಾಕಿ ಇಷ್ಟು ವ್ಯಾಪಕವಾದ, ಒತ್ತಾದ ಬೆಳೆ ತೆಗೆದಿಲ್ಲ. ಹಾಗೆಂದೇ ಪರ್ವಕ್ಕೆ ಬಂದ ಪ್ರತಿಕ್ರಿಯೆ ಅವರ ಇತರ ಕೃತಿಗಳಿಗೆ ಬಂದ ಪ್ರತಿಕ್ರಿಯೆಗಿಂತ ತುಂಬ ಭಿನ್ನವಾದದ್ದಾಗಿದೆ, ವಿವಾದಾತ್ಮಕವಾದದ್ದಾಗಿವೆ. ಮಹಾಭಾರತವನ್ನು ನಮ್ಮ ಕಾಲಕ್ಕೆ ಅತ್ಯಂತ ಸಮೀಪದ ಕಥೆಯನ್ನಾಗಿ, ನಮ್ಮ ಕಥೆಯನ್ನೇ ಆಗಿ ಮರುಸೃಷ್ಟಿಸಿಕೊಟ್ಟದ್ದೆಂಬ ಪ್ರಶಂಸೆಯನ್ನು ಅದು ಗಳಿಸಿದೆ. ಹಾಗೆಯೇ ಪುರಾಣ ಪಾತ್ರಗಳನ್ನು ವಾಸ್ತವದ ನೆಲೆಗಿಳಿಸಿ ಅವುಗಳ ಪ್ರಭಾವಳಿಯನ್ನು ಕಿತ್ತು ಹಾಕಿ ವಿರೂಪಗೊಳಿಸಿದೆಯೆಂಬ ನಿಂದೆಗೂ ಸಿಕ್ಕಿದೆ. ವಾಸ್ತವವೆಂದರೆ ಭೈರಪ್ಪ ಇವೆರಡನ್ನೂ ಮಾಡಿದ್ದಾರೆ. ಹಾಗೆ ಮಾಡುವಾಗ ಆ ಎಲ್ಲ ಬದಲಾವಣೆಗೆ ಮಾರ್ಗದರ್ಶಕವಾಗಿ ಅವರು ಒಂದು ಸಂಭಾವ್ಯ ಸತ್ಯವನ್ನು ಬಳಸಿದ್ದಾರೆ. ಈ ಸಂಭಾವ್ಯ ಸತ್ಯದ ಪ್ರಾಂತ್ಯ ಎಷ್ಟು ವಿಸ್ತಾರವಾಗಿದೆಯೆಂದರೆ ನಾಸ್ತಿಕತೆಯ ಇಹದ ಅಡಿಯಿಂದ ಆಧ್ಯಾತ್ಮಿಕವಾದ ಪರದ ತುದಿಯವರೆಗೆ ಅದರ ಓಡಾಟವಿದೆ. ಪ್ರಾಕೃತಿಕ ಜೀವನದ ತಪ್ಪಲಿನಿಂದ ಸುಸಂಸ್ಕೃತ ಜೀವನದ ಶಿಖರದವರೆಗೆ ಅದರ ಹರಹಿದೆ. ಸ್ವಾರ್ಥವನ್ನೇ ಮಾನದಂಡ ವಾಗಿಟ್ಟುಕೊಂಡ ಕೆಳನೆಲೆಯಿಂದ ತ್ಯಾಗ ಜೀವನದ ಗಡಿಗಳನ್ನು ತಾಗುವತನಕ ಅದು ಸಂಚರಿಸಿದೆ; ಇದನ್ನೆಲ್ಲ ಚಿತ್ರಿಸುವಾಗ ಈ ನೆಲದ ಮೇಲೆ ನಿಂತವರು ಬಳಸಲೇಬೇಕಾದ ವ್ಯವಹಾರಧರ್ಮವನ್ನೂ ಜೀವನವಿವೇಕವನ್ನೂ ಅದು ತನ್ನ ಎರಡು ಕಣ್ಣುಗಳಾಗಿ ಮಾಡಿಕೊಂಡಿದೆ. ಆದ್ದರಿಂದಲೇ ಈ ಕೃತಿ ಕಡೆದುಕೊಡುವ ಲೋಕದರ್ಶನ, ಮಹಾಭಾರತದ ವಸ್ತುವನ್ನು (ಇಡಿಯಾಗಿ ಇಲ್ಲದೇ ಭಾಗಶಃ) ಬಳಸಿದ ಬೇರೆ ಎಲ್ಲ ಕೃತಿಗಳ ಲೋಕದರ್ಶನಕ್ಕಿಂತ ಭಿನ್ನ ನೆಲೆಯದ್ದೂ, ತೀರ ಮಾನುಷವೂ, ಆದ್ದರಿಂದಲೇ ಹೆಚ್ಚು ಸಂಭಾವ್ಯವೂ ಶ್ರೇಷ್ಠವೂ ಆಗಿದೆ.

'ಪರ್ವ' ಬರೆದು ಭೈರಪ್ಪನವರು ತಮ್ಮನ್ನು ಪರಂಪರೆಯ ಭೋಳೇ ಹಿಂಬಾಲಕರೆಂದು ಬಣ್ಣಿಸುತ್ತಿದ್ದವರ ಬಾಯಿ ಕಟ್ಟಿಬಿಟ್ಟರು. ಆದರೆ ಪಾಶ್ಚಾತ್ಯ ವಿಮರ್ಶೆಯ ಪರಿಭಾಷೆಯ ನೆರವು ಪಡೆದು ಈ ಕಾದಂಬರಿಯನ್ನು ಮಹಾಭಾರತದ deymythification ಎಂದು ಆಕ್ಷೇಪಿಸಲಾಯಿತು. ಮಹಾಭಾರತದಲ್ಲಿ ಮೇಲು

ನೋಟಕ್ಕೇ ಅಸಂಭಾವ್ಯವಾಗಿ ಕಾಣುವ ಸಂಗತಿಗಳೆಲ್ಲ ರೂಪಕಗಳಾಗಿ ಹೇಳಿದಂಥವು. ಅವುಗಳ ಹಿಂದಿನ ಯಥಾರ್ಥತೆಯನ್ನು ಕೆದಕಿ ನೋಡಿ ಅವುಗಳನ್ನು ವಾಸ್ತವದ ವಾಚ್ಯನೆಲೆಗೆ ಎಳೆದಿರುವುದು ರೂಪಕ – ಭಂಜಕ ವಿಧಾನ. ಇದು ಸರಿಯಲ್ಲ ಎನ್ನುವುದು ರೂಪಕಾರಾಧಕರ ಒಂದು ವಾದ. ಇಂಥ ಮಾತಿಗೆ ಒಂದು ಸಮಾಧಾನ ಹೇಳಬಹುದು. ಇಪ್ಪತ್ತನೆಯ ಶತಮಾನದ ವಾಸ್ತವ ದೃಷ್ಟಿ ಈ ರೂಪಕಗಳ ಸಂಭಾವ್ಯ ಸತ್ಯವನ್ನೇ ಬೇಡುವಂಥದು. ಅಂಥ ವ್ಯಾಖ್ಯಾನವೊಂದರ ಅಗತ್ಯ ಇಲ್ಲವೇ? ಅಲ್ಲದೆ ರೂಪಕಾತ್ಮಕವಾದ ಮೂಲಮಹಾಭಾರತವೊಂದು ಇದ್ದೇ ಇದೆ; ಅವುಗಳ ಸಂಭಾವ್ಯ ಸತ್ಯವನ್ನು ಅನಾವರಣಗೊಳಿಸುವ ಸೃಜನಾತ್ಮಕ ವ್ಯಾಖ್ಯಾನವೊಂದು ಯಾಕೆ ಇರಬಾರದು? ಅದು ಒಂದು ಕಾದಂಬರಿ ರೂಪದಲ್ಲಿ ಯಾಕೆ ಮೈಪಡೆಯಬಾರದು?

ವಿಮರ್ಶಕರ ಒಂದು ಚಿಕ್ಕ ಗುಂಪು ಏನೇ ತಗಾದೆ ತೆಗೆಯಲಿ, ಕನ್ನಡ ಸಹೃದಯಲೋಕ ಭೈರಪ್ಪನವರ ಕಾದಂಬರಿಗಳನ್ನು ಪ್ರೀತಿ ಉತ್ಸಾಹಗಳಿಂದ ಸದಾ ಸ್ವಾಗತಿಸಿದೆ. ಭೈರಪ್ಪ ಕೂಡ ವಿಮರ್ಶೆಯ ನಿಂದೆ ಪ್ರಶಂಸೆಗಳಿಂದ ಎಂದೂ ವಿಚಲಿತರಾದವರಲ್ಲ. ಅವರಿಗೆ ಮುಖ್ಯವಾದದ್ದು ತಮ್ಮ ಅಂತಃಕರಣಕ್ಕೆ ತೃಪ್ತಿ, ತುಷ್ಟಿ ನೀಡಬಲ್ಲ ಮತ್ತೊಂದು ಹೊಸ ಕೃತಿಯ ಸೃಷ್ಟಿ. ಸಾಹಿತ್ಯ ತತ್ವಶಾಸ್ತ್ರಗಳಷ್ಟೇ ಸಂಗೀತದಲ್ಲೂ ಗಾಢ ಆಸಕ್ತಿ ಅನುಭವಗಳಿರುವ ಭೈರಪ್ಪ ಈಗ ಆ ಸಂಬಂಧವಾದ ತಮ್ಮ ಅನುಭವ ಚಿಂತನೆಗಳನ್ನು ಪುನಸ್ಸಂಯೋಜಿಸಿ ಹೊಸ ಕೃತಿಯೊಂದನ್ನು ನಿರ್ಮಿಸುವ ಸನ್ನಾಹದಲ್ಲಿದ್ದಾರೆ.

●

ನಮ್ಮ ನಾಡಿನ ಹೆಮ್ಮೆ ನೀವು

ನಮ್ಮ ನಾಡಿನ ಹೆಮ್ಮೆ ನೀವು ನಿಮ್ಮೊಳಗಿಂದ
ಹರಿದ ಕಥನದ ಧಾರೆ ಭರತಖಂಡವನೆಲ್ಲ
ಸುತ್ತಿ ಬೆಳೆದಿದೆ ಜನರ ಹೃದಯದಲಿ ನಿಬ್ಬೆರಗು
ರಸದ ರೋಮಾಂಚನ. ಹಿಂದೆ ಕನ್ನಡದಲ್ಲಿ
ಇಂಥ ಸಾಧನೆ ಮಾಡಿದಂಥ ಸಾರಸ್ವತರು
ಬಂದಿಲ್ಲ, ನೀವೇರಿದೆತ್ತರಕೆ ಸಂದಿಲ್ಲ.
ಬೆರಗುಗೊಳಿಸುವ ನಿಮ್ಮ ಸಾಂದ್ರ ಅನುಭವ, ಆಳ
ವಿಸ್ತಾರ ವೈವಿಧ್ಯ ಕಲ್ಪಕತೆ ಕಥನಕತೆ
ಕೌಶಲವ ಜನ ಮೆಚ್ಚಿ ಭಲೆ ಎನ್ನುವರು ಮುಂದೂ.

ನವಿಲು ಮಾತ್ರವೆ ಸೃಷ್ಟಿಯಲ್ಲಿ? ಕೆಂಬೂತವೂ
ಉಂಟು. ನವಿಲನು ಹಳಿದು ತಾನೆ ಮಿಗಿಲೆನುವಂತೆ
ಪುಕ್ಕವಾಡಿಸಿದೆ. ಅಸೂಯೆ ಆಟಗಳೆಲ್ಲ
ಎಷ್ಟು ದಿನ ನಡೆದಾವು? ಬಲ್ಲ ಜನಕ್ಕೆಲ್ಲ ಇದು
ಗೊತ್ತು ಬಿಡಿ ಈಗಲೇ, ಮುಂದಂತೂ ಸರಿಯೆ ಸರಿ.
ದೀರ್ಘಧ್ಯಾನಕೆ ಇಳಿವ ಋಷಿ ನೀವು. ಬೇಕಿಲ್ಲ

ಕುರ್ಚಿ ಅಧಿಕಾರ ಪತ್ರಿಕೆಯ ಕ್ಷಣಿಕ ಪ್ರಚಾರ.
ನಿಮ್ಮಂತೆ 'ಊರ್ಧ್ವರೇತಸ್ಕರಾಗೊಬ್ಬಂಟಿ
ಮೇಲು ಮಾಳಿಗೆಯ ಕಿರುಕೋಣೆ ಮೈಮರೆವನ್ನು
ತಾಳಿ' ಸಾರ್ಥಕ ಸೃಷ್ಟಿಯಲ್ಲಿ ಎಚ್ಚರಗೊಳುವ
ಧೀರರೆಲ್ಲಿದ್ದಾರೆ? ರಾಜಕಾರಣಿ ಮನೆಯ
ಜಗಲಿಯಲಿ ಕ್ಷುದ್ರ ಲೌಕಿಕಗಳಿಗೆ ಕೈಚಾಚಿ
ಕೂತ ಯಾಚಕರೆ ಸುತ್ತೆಲ್ಲ.

ಸಾಲು ಸಾಲಾಗಿ ತೆರೆದಿರಿ ಭವ್ಯಕಥನಗಳ
ನವ್ಯದೃಷ್ಟಿಗೆ ಸಲ್ಲುವಂತೆ ಭಾರತಕಥೆಯ
ಸೃಜಿಸಿ ಅಸಮಾನರೆನಿಸಿದಿರಿ ಈ ಕಾಲಕ್ಕೆ
ಪಂಪ ಕುವರವ್ಯಾಸರೊಡನೆ ನಿಂತಿರಿ ನಮ್ಮ
ಕನ್ನಡ ಪರಂಪರೆಯ ಭವ್ಯ ಇತಿಹಾಸಕ್ಕೆ.

– ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಮಾಲ್ಗುಡಿಯ ಸೃಷ್ಟಿಕರ್ತ ಆರ್. ಕೆ. ನಾರಾಯಣ್

ಹುಡುಗ ಇಂಟರ್‌ಮೀಡಿಯೆಟ್ ಪರೀಕ್ಷೆ ಕಟ್ಟಿದ್ದಾನೆ; ಬಹಳ ಚುರುಕು, ಬುದ್ಧಿವಂತ. ಅದರಲ್ಲೂ ಇಂಗ್ಲಿಷ್ ಅವನಿಗೆ ಅಚ್ಚುಮೆಚ್ಚಾದ ವಿಷಯ. ಸಾಹಿತ್ಯ ಪ್ರಿಯರಾದ ತಂದೆ ಮನೆಯಲ್ಲಿ ಪೇರಿಸಿ ಇಟ್ಟಿದ್ದ ವರ್ಡ್ಸ್‌ವರ್ತ್, ಷೇಕ್ಸ್‌ಪಿಯರ್, ಬ್ರೌನಿಂಗ್, ಬೈರನ್, ಕಾರ್ಲೈಲ್, ರಸ್ಕಿನ್ – ಇಂಥ ಪ್ರಸಿದ್ಧರ ಅನೇಕ ಬರೆಹಗಳಲ್ಲಿ ಅವನ ಮನಸ್ಸು ಓಡಿಯಾಡಿದೆ. ಹೀಗಿರುವಾಗ ಇಂಗ್ಲಿಷ್‌ನಲ್ಲಂತೂ ಅವನು ಅತ್ಯುತ್ತಮವಾಗಿ ಪಾಸುಮಾಡಬೇಕು. ಇದು ಅವನನ್ನು ಬಲ್ಲವರೆಲ್ಲರ ನಿರೀಕ್ಷೆ.

ಫಲಿತಾಂಶ ಹೊರಬಂತು. ಉಳಿದವು ಇರಲಿ, ಇಂಗ್ಲಿಷಿನಲ್ಲೇ ಹುಡುಗ ಫೇಲು! ಎಲ್ಲರಿಗೂ ಆಶ್ಚರ್ಯ. ಮಕ್ಕಳ ಜೊತೆ ಸಲಿಗೆಯಿಂದ ಇರುತ್ತಿದ್ದ ತಂದೆಗೂ ಇದು ತಡೆಯಲಾಗಲಿಲ್ಲ. ಮಗನನ್ನು ಕರೆದು ಏರುದನಿಯಲ್ಲೇ "ಏನೋ ಮೂರ್ಖಶಿಖಾಮಣಿ! ಎಲ್ಲಾ ಬಿಟ್ಟು ಇಂಗ್ಲಿಷಿನಲ್ಲಿ ಧುಮುಕಿ ಹೊಡೆದಿದ್ದೀಯಲ್ಲೋ, ಛಿ!" ಎಂದು ಚುಚ್ಚಿದರು.

ಆ ಹುಡುಗ ಬೇರೆ ಯಾರೂ ಅಲ್ಲ, ಮುಂದೆ ಇಂಗ್ಲಿಷಿನಲ್ಲಿ ಮೂವತ್ತೈದಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿ ಅಂತಾರಾಷ್ಟ್ರೀಯ ಖ್ಯಾತಿ ಪಡೆದ ಲೇಖಕ; ತನ್ನ ಸಾಧನೆಗೆ ಭಾರತದ ಪದ್ಮಭೂಷಣ ಪ್ರಶಸ್ತಿ, ಲೋಕಸಭೆಯ ಸದಸ್ಯತ್ವ ಪಡೆದ ಆರ್. ಕೆ. ನಾರಾಯಣ್!

ದೊಡ್ಡವರ ವಿಷಯವೆಲ್ಲ ಹೀಗೇ ತಿರುಗು ಮುರುಗು ಅಂತಕಾಣುತ್ತೆ. ಕನ್ನಡ ಸಾಹಿತ್ಯಕ್ಷೇತ್ರದ ದಿಗ್ಗಜಗಳಲ್ಲಿ ಒಬ್ಬರಾದ ಡಿವಿಜಿ ಎಸ್.ಎಸ್.ಎಲ್.ಸಿ. ಫೇಲು! ಕಾರಂತ ಇಂಟರ್‌ಮೀಡಿಯೆಟ್ ದಾಟಲಿಲ್ಲ. ಅನಕೃ ಅದರ ಹತ್ತಿರಕ್ಕೇ ಹೋಗಲಿಲ್ಲ. ಉದ್ದಾಮ ಕವಿ ಬೇಂದ್ರೆ ಕನ್ನಡ ಎಂ.ಎ.ನಲ್ಲಿ ಥರ್ಡ್‌ಕ್ಲಾಸ್! ಆರ್. ಕೆ. ನಾರಾಯಣ್ ಈ ಗುಂಪಿನವರು.

ಹುಡುಗ ಮತ್ತೆ ಪರೀಕ್ಷೆಗೆ ಕೂತು ಪಾಸುಮಾಡಿದ. ಆ ವಿಷಯ ಬೇರೆ. ಆದರೆ ಪಠ್ಯಪುಸ್ತಕ ಬಿಟ್ಟು ಬೇರೆ ಪುಸ್ತಕಗಳಲ್ಲೇ ಅವನ ಆಸಕ್ತಿ ಹರಿಯುತ್ತಿದ್ದದ್ದು. ಮುಂದೆ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪರೀಕ್ಷೆ ಪಾಸು ಮಾಡಿದ. ಆ ಡಿಗ್ರಿ ಕೂಡ ಅವನಿಗೆ ಯಾವ ವಿಷಯದಲ್ಲಿ ಸಹಾಯ ಮಾಡಿತೋ ಬಿಟ್ಟಿತೋ, ಆದರೆ ಮುಂದೆ ಇಂಗ್ಲಿಷ್ ಸಾಹಿತ್ಯಲೋಕದ ಅಚ್ಚುಮೆಚ್ಚಿನ ಕೃತಿಗಳಲ್ಲೊಂದಾದ 'ದಿ ಬ್ಯಾಚುಲರ್ ಆಫ್ ಆರ್ಟ್ಸ್' ಕೃತಿಗೆ ಅಗತ್ಯವಾದ ಅನುಭವ ಕೊಟ್ಟಿತು.

ಸಾಂಪ್ರದಾಯಿಕ ಶಿಕ್ಷಣ ಪದ್ಧತಿ ನಾರಾಯಣ್‌ಗೆ ಎಂದೂ ಹಿಡಿಸಿರಲಿಲ್ಲ. ಸದಾ ಅವರು ಅದರ ವಿರುದ್ಧವೇ. ಹಾಗಂತಲೇ ಮುಂದೆ ಅವರು ರಾಜ್ಯಸಭೆಯ ಸದಸ್ಯರಾಗಿದ್ದಾಗ ಭಾರತದಲ್ಲಿ ಮಕ್ಕಳಿಗೆ ಇರುವ ಶಿಕ್ಷಣಪದ್ಧತಿಯ ದೋಷಗಳ ಬಗ್ಗೆ ಖಾರವಾಗಿ ಮಾತನಾಡಿದರು. ಅದನ್ನು ಗಂಭೀರವಾಗಿ ತೆಗೆದುಕೊಂಡ ಸರ್ಕಾರ ಅದನ್ನು ಪರಿಶೀಲಿಸಲು ಸಮಿತಿಯೊಂದನ್ನು ನೇಮಿಸಿತು.

ಆರ್ಕೆಯವರ ಮೊದಲ ಕೃತಿ ಹೊರಬಂದದ್ದು ೧೯೩೫ರಲ್ಲಿ. ಆಗ ಅವರಿಗೆ ೨೯ ವರ್ಷ. ಕೃತಿಯ ಹೆಸರು 'ಸ್ವಾಮಿ ಅಂಡ್ ಹಿಸ್ ಫ್ರೆಂಡ್ಸ್'. ನಾರಾಯಣರ ಬಾಲ್ಯದ ಅನುಭವಗಳೆಲ್ಲ ಕಲ್ಪನೆಯ ಕಣ್ಣಿನಲ್ಲಿ ಹಾದು ರಕ್ತಮಾಂಸ ಕೂಡಿಕೊಂಡು ಈ ಕೃತಿ ಹುಟ್ಟಿತ್ತು. ಇದಕ್ಕೆ ಭೂಮಿಕೆಯಾಗಿ ನಾರಾಯಣ್ 'ಮಾಲ್ಗುಡಿ' ಎಂಬ ಗ್ರಾಮವನ್ನು ಸೃಷ್ಟಿಸಿದರು. ಗ್ರಾಮದ ಚಿಕ್ಕಪುಟ್ಟ ವಿವರಗಳನ್ನೂ ನಿರೂಪಿಸಿದರು. ಆ ಹೆಸರಿನ ಒಂದು ಗ್ರಾಮ ನಿಜದಲ್ಲಿ ಇಲ್ಲವೇ ಇಲ್ಲ. ಆದರೂ ಅದು ಮೈಸೂರಿನ ಯಾವುದೇ ಪುಟ್ಟ ಊರನ್ನು ಸಾರವತ್ತಾಗಿ ಪ್ರತಿನಿಧಿಸಬಲ್ಲಷ್ಟು ನೈಜವಾಗಿತ್ತು. ನಾರಾಯಣ್ ಮುಂದೆ ಬರೆದ ಇತರ ಅನೇಕ ಸೃಜನಾತ್ಮಕ ಕೃತಿಗಳಿಗೂ ಈ ಮಾಲ್ಗುಡಿಯೇ ಬಳಕೆಯಾಯಿತು. ಊರಿನ ವಿವರಗಳೂ ಮೊದಲ ಕೃತಿಯಲ್ಲಿರುವಂತೆಯೇ ಇತರ ಕೃತಿಗಳಿಗೂ ದಾಟಿಕೊಂಡವು. ಅದರ ಅಸ್ತಿತ್ವ ಕೃತಿಯಿಂದ ಕೃತಿಗೆ ಗಟ್ಟಿಗೊಳ್ಳುತ್ತ ಹೋಯಿತು. ನಾರಾಯಣರ ಪುಸ್ತಕಗಳನ್ನು ಓದಿದವರಿಗೆ ಈ ಹೆಸರಿನ ಗ್ರಾಮವೊಂದು ನಿಜವಾಗಿ ಇದೆ ಎನ್ನಿಸಿಬಿಟ್ಟಿದೆ. ಹತ್ತು ಸಲ ನೋಡಿ, ಓಡಾಡಿ ಬಂದ ಊರಿನಂತೆ ಸಹೃದಯರ ಮನೋಲೋಕದಲ್ಲಿ ಅದು ನಿಂತುಬಿಟ್ಟಿದೆ. ಎಷ್ಟೆಂದರೆ ಮೊನ್ನೆ ಭಾರತದ ಪ್ರಸಿದ್ಧ ಪತ್ರಕರ್ತ ಖುಷವಂತ ಸಿಂಗ್ ಮಾತನಾಡುತ್ತಾ– "ಆರ್.ಕೆ.ಗೆ ನಾವು ಸಲ್ಲಿಸಬಹುದಾದ ಗೌರವವೆಂದರೆ ಮೈಸೂರಿನ ಅಥವಾ ಮದರಾಸಿನ ಯಾವುದಾದರೊಂದು ಪುಟ್ಟಗ್ರಾಮಕ್ಕೆ ಮಾಲ್ಗುಡಿ ಎಂದು ಹೆಸರಿಡುವುದು" ಎಂದರು. ಲೋಕದಲ್ಲಿ ಇರುವ ಊರು ಬರಹದಲ್ಲಿ ಬರುವುದು ಸಹಜ. ಆದರೆ ಬರೆಹದಲ್ಲೇ ಮೊದಲು ಸೃಷ್ಟಿಯಾದ ಊರು ಲೋಕದಲ್ಲಿ

ಅಸ್ತಿತ್ವ ಗಿಟ್ಟಿಸಿಕೊಳ್ಳುವುದು. ಎಂಥ ಅಸಾಧಾರಣ ಸಂಗತಿ! ನಾರಾಯಣರ ಬರೆಹದಲ್ಲಿ ತೆರೆದುಕೊಳ್ಳುವ ವಾಸ್ತವತೆಯ ವಾತಾವರಣಕ್ಕೆ ಇದಕ್ಕಿಂತ ದೊಡ್ಡ ಪ್ರಶಂಸೆ ಇಲ್ಲ.

ಆರ್ಕೆಯವರ ಚೊಚ್ಚಲು ಕೃತಿಯಾದ 'ಸ್ವಾಮಿ'ಯ ಹಸ್ತಪ್ರತಿ ಇಂಗ್ಲೆಂಡಿನ ಬೇರೆ ಬೇರೆ ಪ್ರಕಾಶಕರಿಗೆ ಹೋಗಿ, ಒಪ್ಪಿಗೆಯಾಗದೆ ಮತ್ತೆ ಮತ್ತೆ ವಾಪಸ್ಸು ಬಂತು. ಆಕ್ಸ್‌ಫರ್ಡಿನಲ್ಲಿದ್ದ 'ಪೂರ್ಣ' ಎಂಬ ಸ್ನೇಹಿತ ಅದನ್ನು ಪ್ರಸಿದ್ಧ ಲೇಖಕ ಗ್ರಹಾಂ ಗ್ರೀನ್‌ಗೆ ಕೊಟ್ಟರು. ಗ್ರಹಾಂ ಗ್ರೀನ್ ಬರವಣಿಗೆಯನ್ನು ಬಹು ಇಷ್ಟಪಟ್ಟ. ಇಷ್ಟು ಉತ್ತಮ ಬರೆಹ ಹತ್ತು ಸಾವಿರ ಪುಸ್ತಕಗಳಲ್ಲಿ ಒಂದು ಇರಲು ಸಾಧ್ಯ ಎಂದು ಹೊಗಳಿ ಅದನ್ನು ಹ್ಯಾಷ್ ಹ್ಯಾಮಿಲ್ಟನ್ ಎಂಬ ಪ್ರಕಾಶನಿಗೆ ಕೊಟ್ಟ. ಪ್ರಕಾಶನದ ಸಂಬಂಧದಲ್ಲಿ ಆ ಹಸ್ತಪ್ರತಿಯನ್ನು ಪರಿಶೀಲಿಸಿದವರು ಮುಂದೆ ಪ್ರಪಂಚಪ್ರಸಿದ್ಧ ಸಮಾಜ ಶಾಸ್ತ್ರಜ್ಞರೆನಿಸಿಕೊಂಡ ಎಂ. ಎನ್. ಶ್ರೀನಿವಾಸ್. ಬರವಣಿಗೆ ವಾಚನೀಯವಾಗಿದೆಯೆಂದು ಅವರು ಶಿಫಾರಸು ಮಾಡಿದ ಮೇಲೆ ಅದು ಪುಸ್ತಕವಾಗಿ ಹೊರಬಂತು.

ನನ್ನ ಪ್ರಕಾರ ಇದು ಎಲ್ಲ ಕಾಲಕ್ಕೂ ಪ್ರಿಯವಾಗಿ ಉಳಿಯುವ ಪುಸ್ತಕ ಎಂದು 'ಸ್ವಾಮಿ'ಯನ್ನು ಗ್ರಹಾಂ ಗ್ರೀನ್ ಹೊಗಳಿದ್ದ. ಆದರೆ ಅದರ ಪ್ರತಿಗಳು ಕೆಲಕಾಲ ಖರ್ಚೇ ಆಗದೆ ಹಾಗೇ ಉಳಿದುಬಿಟ್ಟವು. ನಾರಾಯಣ್ ತಮ್ಮ 'ದಿ ಬ್ಯಾಚುಲರ್ ಆಫ್ ಆರ್ಟ್ಸ್' ಎಂಬ ಎರಡನೆಯ ಪುಸ್ತಕದ ಹಸ್ತಪ್ರತಿಯನ್ನು ಹ್ಯಾಮಿಲ್ಟನ್‌ಗೆ ಕಳಿಸಿದಾಗ ಮೊದಲ ಪುಸ್ತಕದ ಕಹಿ ಅನುಭವವಿದ್ದ ಅವನು ಅದನ್ನು ಪ್ರಕಟಿಸಲು ನಿರಾಕರಿಸಿಬಿಟ್ಟ. ಮುಂದೆ ಇಪ್ಪತ್ತು ವರ್ಷಗಳ ನಂತರ ಆರ್ಕೆ ಒಬ್ಬ ಪ್ರಸಿದ್ಧ ಲೇಖಕರೆನಿಸಿಕೊಂಡಾಗ ಹ್ಯಾಮಿಲ್ಟನ್ 'ಸ್ವಾಮಿ' ಬಗ್ಗೆ ತಾನು ಆಡಿದ ಮಾತಿಗೆ ಬಹಿರಂಗವಾಗಿ ವಿಷಾದ ಸೂಚಿಸಿದ.

ಅದು ನಾರಾಯಣ್ ಒಬ್ಬರ ಸಂಗತಿಯಲ್ಲ. ಜಗತ್ತಿನ ಶ್ರೇಷ್ಠ ಕಾದಂಬರಿಕಾರರಲ್ಲಿ ಒಬ್ಬಳಾದ ಜೇನ್ ಆಸ್ಟಿನಳ 'ಪ್ರೈಡ್ ಅಂಡ್ ಪ್ರೆಜುಡಿಸ್'ನ ಹಸ್ತಪ್ರತಿಯೂ ಪ್ರಕಾಶಕರಿಂದ ಸ್ವೀಕೃತವಾಗದೆ ಕಡೆಗೆ ಅವಳ ಅಣ್ಣನ ಪರಿಶ್ರಮದಿಂದ ಹೇಗೋ ಅಚ್ಚಾಯಿತು. ಮುಂದೆ ಅದು ಎಷ್ಟು ಪ್ರಸಿದ್ಧವಾಯಿತೆಂದರೆ, ಸೋಮರ್‌ಸೆಟ್ ಮಾಮ್ ಅದನ್ನು ಜಗತ್ತಿನ ಹತ್ತು ಶ್ರೇಷ್ಠ ಕಾದಂಬರಿಗಳಲ್ಲಿ ಒಂದೆಂದು ಪರಿಗಣಿಸಿದ. ಭೈರಪ್ಪನವರ 'ವಂಶವೃಕ್ಷ' ಕಾದಂಬರಿ ಕೂಡ ಮೊದಲ ಪ್ರಕಾಶಕರೊಬ್ಬರ ಅನಾದರಕ್ಕೀಡಾಗಿ ವಾಪಸ್ಸು ಬಂದು ನಂತರ ಸಾಹಿತ್ಯ ಭಂಡಾರದಿಂದ ಪ್ರಕಟವಾಗಿ ಆ ಪ್ರಕಾಶನಕ್ಕೇ ದೊಡ್ಡ ಹೆಸರು ತಂದಿತು!

ತಮ್ಮ ಮೊದಲ ಕಥೆಯ ಮೊದಲ ಸಾಲನ್ನು ಅಜ್ಜಿ ಗೊತ್ತುಮಾಡಿದ್ದ ಮುಹೂರ್ತದಲ್ಲಿ ಬರೆದ ನಾರಾಯಣ್ ಮುಂದೆ ಮೂವತ್ತನಾಲ್ಕು ಕೃತಿಗಳನ್ನು

ರಚಿಸಿ ಜಗತ್ಪ್ರಸಿದ್ಧರಾದರು. ಅವುಗಳಲ್ಲಿ 'ಅಸ್ಟ್ರಾಲಜರ್ಸ್ ಡೇ ಅಂಡ್ ಅದರ್ ಸ್ಟೋರೀಸ್' ಮೊದಲಾದ ಐದು ಕಥಾಸಂಗ್ರಹಗಳಿವೆ. 'ಎ ರೈಟರ್ಸ್ ನೈಟ್ ಮೇರ್'ನಂಥ ನಾಲ್ಕು ಪ್ರಬಂಧ ಸಂಕಲಗಳಿವೆ. 'ಡೇಟ್‌ಲೆಸ್ ಡೈರಿ'ಯಂಥ ಎರಡು ಪ್ರವಾಸ ಕಥನಗಳಿವೆ. ನಮ್ಮ ಪ್ರಾಚೀನ ಕಾವ್ಯಗಳಾದ ರಾಮಾಯಣ – ಮಹಾಭಾರತಗಳ ಪೌರಾಣಿಕ ಕಥೆಗಳ ಆಕರ್ಷಕ ಅನುವಾದಗಳಿವೆ. ಆದರೆ ಅವರ ಬರಹದ ಪ್ರಧಾನಧಾರೆಯೆಂದರೆ ಕಾದಂಬರಿ. ಗೈಡ್, ಫೈನಾನ್ಷಿಯಲ್ ಎಕ್ಸ್‌ಪರ್ಟ್, ಮಿಸ್ಟರ್ ಸಂಪತ್, ಇಂಗ್ಲಿಷ್ ಟೀಚರ್ ಮೊದಲಾದ ಹಲವು ಕಥಾಕೃತಿಗಳಿಂದ ಅವರು ಸುಪ್ರಸಿದ್ಧ ಭಾರತೀಯ ಇಂಗ್ಲಿಷ್ ಲೇಖಕರೆನಿಸಿದರು. ಮಾತ್ರವಲ್ಲ ಭಾರತಕ್ಕಿಂತ ಹೆಚ್ಚಾಗಿ ಅಮೆರಿಕ, ಇಂಗ್ಲೆಂಡ್‌ಗಳಂಥ ಪಾಶ್ಚಾತ್ಯದೇಶಗಳಲ್ಲಿ ಲಕ್ಷಾಂತರ ಮಂದಿ ಸಹೃದಯರನ್ನು ಸಂಪಾದಿಸಿಕೊಂಡರು. ಅವರ ಕೃತಿಗಳು ಅನೇಕ ಐರೋಪ್ಯ ಭಾಷೆಗಳಿಗೂ ಅನುವಾದಗೊಂಡಿವೆ.

ನಾರಾಯಣರ ಬರೆಹಗಳಲ್ಲೆಲ್ಲ ಮೈಸೂರಿನ ಚಳಿ ಬಿಸಿಲು ಗಾಳಿ ಮಳೆ ಗಂಧಗಳಿವೆ. ಇಲ್ಲಿನ ಮಧ್ಯಮ ವರ್ಗದ ಜನಜೀವನ ಸಂಸ್ಕೃತಿಗಳ ವಿಶಿಷ್ಟ ಛಾಪು ಇದೆ. ಎಲ್ಲಕ್ಕಿಂತ ಮಿಗಿಲಾದದ್ದು ಅವರು ಕಥೆಯನ್ನು ನಿರೂಪಿಸುವ ಅತ್ಯದ್ಭುತ ಕ್ರಮ. ಅವರದು ತುಂಬ ಸರಳವಾದ, ಪರಿಣಾಮಕಾರಿಯಾದ ಕಥನರೀತಿ. ತಿಳಿಹಾಸ್ಯದ ಲೇಪವಿರುವ ಮರೆವಿಡಂಬನೆಯ ದನಿಯಿಂದ ಅವರು ನಿರೂಪಣೆಯನ್ನು ಬಹಳ ರೋಚಕವಾಗಿಸುತ್ತಾರೆ, ವಸ್ತುನಿಷ್ಠವಾಗಿಸುತ್ತಾರೆ. ದಂಡೆಯ ಮೇಲೆ ನಿಂತು, ಹರಿಯುವ ನದಿಯನ್ನು ವರ್ಣಿಸುವವನ ನಿಲುವು ಅವರದು. ಅವರ ಕೃತಿಗಳೆಲ್ಲ ಹಿಂದೂಜೀವನ, ಹಿಂದೂ ಮೌಲ್ಯಗಳನ್ನೇ ಬಣ್ಣಿಸುವಂಥವು. ಆದರೆ ಅವರ ದನಿಯಲ್ಲಿ ಆ ಧರ್ಮ ಕುರಿತ ಪಕ್ಷಪಾತವಿಲ್ಲ ಕುತೂಹಲಿಯಾದ ವೀಕ್ಷಕನೊಬ್ಬನ ನೋಟ ಅವರದ್ದು.

ಅವರ ಪ್ರಸಿದ್ಧ ಗೈಡ್ ಕಾದಂಬರಿ ಕೂಡ ಇದಕ್ಕೆ ಒಂದು ಉತ್ತಮ ನಿದರ್ಶನ. ಅಲ್ಲಿಯ ಕಥಾನಾಯಕ ರಾಜು ಒಬ್ಬ ಸಾಮಾನ್ಯ ವ್ಯಕ್ತಿ. ಬುದ್ಧಿವಂತ, ಆದರೆ ಪುಢಾರಿಯ ಧಾಟಿಯಲ್ಲಿ ಬಾಳಿ ಕೆಲಕಾಲ ಜೈಲುವಾಸಕ್ಕೂ ಒಳಗಾದವನು. ಮುಂದೆ ಅವನು ಅನಿರೀಕ್ಷಿತವಾಗಿ ಜನದೆದುರು ಒಬ್ಬ ಸಂತನ ವೇಷ ತೊಡಬೇಕಾಗಿ ಬರುತ್ತದೆ; ಊರಿಗೆ ಮಳೆ ಬರಲೆಂದು ಉಪವಾಸವ್ರತ ಹಿಡಿಯಬೇಕಾಗುತ್ತದೆ. ಒಲ್ಲದಿದ್ದರೂ ಒತ್ತಾಯಕ್ಕಾಗಿ ಉಪವಾಸ ಹಿಡಿದ ರಾಜು, ಜನ ತನ್ನಲ್ಲಿಟ್ಟ ನಂಬಿಕೆ, ಶ್ರದ್ಧೆ, ಭಕ್ತಿಗಳಿಂದ ಆಳವಾಗಿ ಪ್ರಭಾವಿತನಾಗುತ್ತಾನೆ. ಒಳಗೊಳಗೇ ಒಬ್ಬ ಸಂತನಂತಾಗುತ್ತಾನೆ. ಉಪವಾಸದಿಂದ ನಿಶ್ಶಕ್ತನಾಗಿ ಕುಸಿಯುವ ವೇಳೆಗೆ ಅವನಿಗೆ

ದೂರದಲ್ಲಿ ಭಾರೀ ಮಳೆಯ ಸೂಚನೆ ಕಾಣಿಸಿಕೊಳ್ಳುತ್ತದೆ. ರಾಜುವಿಗೆ ಮಳೆ ತನ್ನೊಳಗೇ ನುಗ್ಗಿದ ಅನುಭವವಾಗುತ್ತದೆ.

ನಾರಾಯಣನ್ ಇಲ್ಲಿ ಜನರ ನಂಬಿಕೆಯನ್ನು ಅಲ್ಲಗಳೆಯುವುದೂ ಇಲ್ಲ, ಸಮರ್ಥಿಸುವುದೂ ಇಲ್ಲ. ಮಳೆ ಬರುವಂತೆ ಕಂಡದ್ದು ಆಕಸ್ಮಿಕವೋ ಪ್ರಾರ್ಥನೆಯ ಫಲವೋ, ಓದುಗ ಹೇಗಾದರೂ ಭಾವಿಸಬಹುದಾದ ತಟಸ್ಥ ನೆಲೆಯನ್ನು ಕಥೆ ಕಾಪಾಡಿಕೊಳ್ಳುತ್ತದೆ. ಆದರೆ ರಾಜುವಿನೊಳಗೆ ಮಳೆಯಾದದ್ದು ಮಾತ್ರ ಒಂದು ರೂಪಕವಾಗಿ ನಿಜವಾಗಿಬಿಡುತ್ತದೆ.

ನಾರಾಯಣನ್ ಅವರಿಗೆ ದೇಶವಿದೇಶಗಳ ಗೌರವ ಸಾಲಾಗಿ ಬಂದುವು. ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾಲಯನದ ಡಾಕ್ಟರೇಟ್, ರಾಯರ್ ಸೊಸೈಟಿ ಆಫ್ ಲಿಟರೇಚರ್‌ನ ಬೆನ್ಸನ್ ಪ್ರಶಸ್ತಿ, ಅಮೇರಿಕನ್ ಅಕಾಡೆಮಿಯ ಗೌರವ ಸದಸ್ಯತ್ವ, ಭಾರತದ ರಾಜ್ಯಸಭೆಯ ಸದಸ್ಯತ್ವ ಇವು ಅವುಗಳಲ್ಲಿ ಕೆಲವು. ಅವರ 'ಗೈಡ್' ಚಲನಚಿತ್ರವಾಗಿ, 'ಮಾಲ್ಗುಡಿ ಡೇಸ್' ದೂರದರ್ಶನದಲ್ಲಿ ಧಾರಾವಾಹಿಯಾಗಿ ಬೆಳಕು ಕಂಡು ಇನ್ನಷ್ಟು ಜನಪ್ರಿಯವಾದುವು.

ಈ ತಿಂಗಳ ೧೩ರಂದು ಮರೆಯಾದ ಆರ್ಕೆಯವರಿಗೆ ತೊಂಬತ್ತೈದು ತುಂಬಿತ್ತು. ಅವರು ಹುಟ್ಟಿದ್ದು ಮದರಾಸಿನಲ್ಲಿ, ಬಾಳಿದ್ದು ಮೈಸೂರಿನಲ್ಲಿ. ಅವರ ತಂದೆ ರಾಸೀಪುರಂ ಕೃಷ್ಣಸ್ವಾಮಿ. ಪ್ರಸಿದ್ಧ ಚಿತ್ರಕಾರ ಆರ್. ಕೆ. ಲಕ್ಷ್ಮಣ್ ಅವರ ತಮ್ಮ.

●

ಹಳ್ಳಿಯೊಂದನ್ನು ಇತಿಹಾಸಕ್ಕೆ ಎತ್ತಿದ ಬೆಟಗೇರಿ ಕೃಷ್ಣಶರ್ಮ

ಮಾಸ್ತಿ ಎಂದರೆ ಶ್ರೀನಿವಾಸರಲ್ಲ, ಒಂದು ಹಳ್ಳಿ. ಗೋಕಾಕ್ ಎಂದರೆ ವಿನಾಯಕರಲ್ಲ, ಒಂದು ತಾಲ್ಲೂಕು. ಗೊರೂರು ಎಂದರೆ ರಾಮಸ್ವಾಮಿ ಅಯ್ಯಂಗಾರ್ಯರಲ್ಲ, ಒಂದು ಪುಟ್ಟ ಗ್ರಾಮ. ಅಂಥ ಸ್ಥಳಗಳು ಈ ನಾಡಿನಲ್ಲಿ ಎಷ್ಟೋ! ಅಲ್ಲಿ ವಾಸಮಾಡುವವರನ್ನು ಬಿಟ್ಟರೆ ಬೇರೆಯವರಿಗೆ ಅವು ತಿಳಿದಿರಬೇಕೆಂದೇನೂ ಇಲ್ಲ. ಆದರೆ ಅದೃಷ್ಟವೆನ್ನುವುದು ಮನುಷ್ಯರಿಗೆ ಮಾತ್ರವಲ್ಲ ಊರುಗಳಿಗೂ ಹೊಡೆಯುತ್ತದೆ. ತಾವು ಜನ್ಮಕೊಟ್ಟ ಸತ್ವಶಾಲಿಗಳ ಹೆಸರಿಗೆ ಅಂಟಿಕೊಂಡು ಮಣ್ಣು ಇತಿಹಾಸವಾಗುತ್ತದೆ!

ಬೆಟಗೇರಿ ಅಂಥ ಒಂದು ಹಳ್ಳಿ. ಬೆಳಗಾವಿಯ ಆ ಹಳ್ಳಿಯನ್ನು ತನ್ನ ಸತ್ವದಿಂದ ಚರಿತ್ರೆಗೆ ಮುಟ್ಟಿಸಿದ ಧೀರ ಕೃಷ್ಣಶರ್ಮ. ಕಷ್ಟಗಳ ಸಾಗರವನ್ನೇ ಈಜಿ ಬಂದರೂ ತನ್ನನ್ನು 'ಆನಂದ ಕಂದ' ಎಂದು ಕರೆದುಕೊಂಡ ಈ ಕೆಚ್ಚಿನ ವ್ಯಕ್ತಿಗೆ ಈಗ ವಯಸ್ಸು ಎಂಬತ್ತೆರಡು. ತಾನು ಕಷ್ಟಕ್ಕೆ, ಬಡತನಕ್ಕೆ ಸಿಕ್ಕರೂ ನಾಡಿನ ಸಾಹಿತ್ಯಕ್ಕೆ ಶ್ರೀಮಂತಿಕೆ ತಂದುಕೊಟ್ಟ ಈ ಚೇತನಕ್ಕೆ ನಾಡು ಸದ್ಯದಲ್ಲೇ ಅಭಿನಂದನೆ ಸಲ್ಲಿಸಿ ಕೃತಜ್ಞತೆಯನ್ನು ಕೃತಿ ಮೂಲಕ ಹೇಳಲಿದೆ.

ಬೇಸಾಯದ ಕುಟುಂಬ

ಕೃಷ್ಣಶರ್ಮರು ಈ ಶತಮಾನದ ಜೊತೆಗೆ ಹುಟ್ಟಿದವರು. ಬೇಸಾಯವೇ ವೃತ್ತಿಯಾಗಿದ್ದ ತಕ್ಕಮಟ್ಟಿನ ಸ್ಥಿತಿವಂತ ಕುಟುಂಬ ಅವರದು. ದನ ಕರುಗಳು, ಜುಳುಜುಳು ಹರಿಯುವ ತೊರೆ, ಗದ್ದೆ, ತೆಂಗಿನ ತೋಟ, ಮಾವಿನ ತೋಪುಗಳ ನೆಲದಲ್ಲಿ, ಒಕ್ಕಲಿಗ ಜನಗಳ ನಡುವೆ ಓಡಾಡುತ್ತ ಬೆಳೆದ ಕೃಷ್ಣಶರ್ಮ ಗ್ರಾಮಜೀವನದ ಲಯವನ್ನು ಆತ್ಮಸಾತ್ ಮಾಡಿಕೊಂಡವರು. ಮುಂದೆ ಅವರು ರಚಿಸಿದ ಹಲವು

ಗೀತೆಗಳನ್ನು ಜನಪದ ಗೀತೆಗಳೆಂದು ಎಷ್ಟೋ ಜನ ತಿಳಿದುಕೊಂಡದ್ದರ ಮೂಲ ಇಲ್ಲಿದೆ.

ಕಲಾಪ್ರೇಮ ಶರ್ಮರಿಗೆ ರಕ್ತದಲ್ಲೇ ಹರಿದುಬಂದದ್ದು. ಅವರ ತಂದೆ ಲಕ್ಷಣವಾಗಿ ಚಿತ್ರ ಬರೆಯುತ್ತಿದ್ದರು, ಇಂಪಾಗಿ ಹಾಡುತ್ತಿದ್ದರು, ಮಣ್ಣಿನ ವಿಗ್ರಹಗಳನ್ನು ಮಾಡುತ್ತಿದ್ದರು. ವರ್ಷ ವರ್ಷ ಹಬ್ಬಕ್ಕೆ ಕೂರಿಸುವ ಊರಿನ ಗಣಪತಿ ತಯಾರಾಗುತ್ತಿದ್ದದ್ದು ಅವರ ಕೈಯಲ್ಲೇ! ಮನೆಯಲ್ಲೇ ತಂಬೂರಿ, ತಬಲ, ಢಕ್ಕೆ ಎಲ್ಲ ಇರುತ್ತ, ಸುತ್ತಲ ಜನರಲ್ಲಿ ಸಂಗೀತದ ರುಚಿ ಹುಟ್ಟಿಸಿದ ಕುಟುಂಬ ಅದು.

ತಾಯಿ ಸಹ ಈ ಆಸಕ್ತಿಗೆ ನೀರೆರೆದವರೇ. ದಾಸರ ಪದ ಕೀರ್ತನೆಗಳನ್ನು ಅವರು ನಿತ್ಯ ಪಠಿಸಬೇಕು. ಪಾರಿಜಾತ, ಧ್ರುವಚರಿತ್ರ, ಪ್ರಹ್ಲಾದ ಚಾರಿತ್ರ್ಯ ಮೊದಲಾದ ಗೀತಕಾವ್ಯಗಳನ್ನು ಹುಡುಗರು ಅವರಿಗೆ ಪ್ರತಿನಿತ್ಯ ತಪ್ಪದೆ ಓದಬೇಕು. ಹೀಗಾಗಿ ಮನೆಯ ವಾತಾವರಣದಲ್ಲಿಯೇ ಕಾವ್ಯದ ಪ್ರಭಾವವಿತ್ತು. ಈ ವಾಚನ ಎಷ್ಟು ಕ್ರಮವಾಗಿ ನಡೆಯುತ್ತಿತ್ತೆಂದರೆ ಹುಡುಗರಿಗೆ ಆ ಕಾವ್ಯಗಳ ಹಲವು ಭಾಗಗಳು ಬಾಯಿಪಾಠವಾಗಿ ಹೋಗಿತ್ತು. ಮುಂದೆ ತಾಯಿಗಾಗಿ ತಾವು ಓದಿ ಹೇಳುತ್ತಿದ್ದ ಗಳಗನಾಥರ ಕಾದಂಬರಿಗಳು, ಜೈಮಿನಿ ಭಾರತದ ಪ್ರಸಂಗಗಳು ಕೃಷ್ಣಶರ್ಮರ ಅಂತಃಕರಣದಲ್ಲಿ ಕಾವ್ಯಾಸಕ್ತಿಯನ್ನು ಜಾಗರಿಸುವ ಸಂಸ್ಕಾರಗಳಾದವು.

ಸುತ್ತ ಮುತ್ತ ನಡೆಯುತ್ತಿದ್ದ ಎಲ್ಲ ಬಯಲಾಟಗಳಿಗೂ ಶರ್ಮ ಮತ್ತು ಅವನ ಅಣ್ಣ ತಪ್ಪದೆ ಹಾಜರಾಗುತ್ತಿದ್ದರು. ಒಮ್ಮೆ ಹನುಮಂತ ದೇವರ ಜಾತ್ರೆ. ಆಟದವರು ತಮ್ಮ ಊರಿನಿಂದ ಬೆಟಗೇರಿಗೆ ಬರುವುದು ತುಂಬ ತಡವಾಯಿತು. ಕಾದುಕುಳಿತ ಪ್ರೇಕ್ಷಕರಿಗೆ ತಾಳ್ಮೆ ತಪ್ಪುವ ಪ್ರಸಂಗ. ಆಗ ಅಣ್ಣ ತಮ್ಮ ಸೇರಿ ಒಂದು ಪುಟ್ಟ ಪದ್ಯಕಟ್ಟಿದರು. ಅದೇ ಅವರ ಮೊದಲ ರಚನೆ. ಪಕ್ಕದ ಮನೆಯ ಪೆದ್ದ ಹುಡುಗನನ್ನು ಗೇಲಿಮಾಡುವ ಪದ್ಯ ಅದು. ಜನ ಅದನ್ನು ಮತ್ತೆ ಮತ್ತೆ ಹೇಳಿಸಿ ಕೇಳಿದ್ದೇ ಕೇಳಿದ್ದು; ನಕ್ಕಿದ್ದೇ ನಕ್ಕಿದ್ದು. ಕೃಷ್ಣಶರ್ಮರಿಗೆ ಆಗ ವಯಸ್ಸು ಹತ್ತು ದಾಟಿತ್ತಷ್ಟೇ. ಮುಂದೆ ಬಯಲಾಟದವರು ಪದ ಬರೆಸಿಕೊಳ್ಳುವುದು, ಶಾಲೆಗೆ ಬರುವ ಮೇಲಧಿಕಾರಿಗಳನ್ನು ಕುರಿತು ಸ್ವಾಗತ ಪದ್ಯ ಬರೆಯುವಂತೆ ಉಪಾಧ್ಯಾಯರು ಈ ಹುಡುಗರನ್ನು ಪ್ರೋತ್ಸಾಹಿಸುವುದು ಶುರುವಾಯಿತು. ಗಳಗನಾಥರು 'ಪಿತೃಭಕ್ತಿ' ಎಂಬ ಕಥೆಯನ್ನು ನಾಟಕ ರೂಪಕ್ಕೆ ತಿರುಗಿಸಿದಾಗಲೂ ಶರ್ಮ ಇನ್ನೂ ಹದಿಹರೆಯದ ಹುಡುಗ.

ಶರ್ಮರಿಗೆ ಹನ್ನೆರಡಾಗಿದ್ದಾಗ ಅವರ ತಂದೆ ತೀರಿಕೊಂಡರು. ಅಲ್ಲಿಂದ ಕಷ್ಟಗಳ ಸಾಲೇ ಎದುರಾಯಿತು. ಅಣ್ಣನಿಗೆ ಕ್ಷಯ; ಸ್ವತಃ ಶರ್ಮರಿಗೆ ಪ್ಲೇಗು;

ತಾಯಿಯಿರುವ ತವರಿಗೆ ವಿಧವೆಯಾಗಿ ಹಿಂತಿರುಗಿದ ಅಕ್ಕ; ಕ್ಷಯಪೀಡಿತ ಅಣ್ಣ ಕಣ್ಣುಮುಚ್ಚಿದಾಗ ವಿಧವೆಯಾಗಿ ಮನೆಯಲ್ಲೇ ಉಳಿದ ಅಕ್ಕನ ಮಗಳು. ಇದೆಲ್ಲ ಇನ್ನೂ ಬೆಳೆಯುತ್ತಿದ್ದ ಹುಡುಗನ ಅಂತಃಕರಣಕ್ಕೆ ಸಾಲು ಬರೆಗಳಾದವು. ಮುಂದೆ ಆತ ಬರೆದ ಕೃತಿಗಳಲ್ಲಿ ವ್ಯಕ್ತವಾಗುವ ಹೃದಯ ಈ ಆರದ ಉರಿಯಲ್ಲಿ ಬೆಂದು ಪಕ್ವವಾದದ್ದು.

ಹುಡುಗನಿಗೆ ಬಂದ ಪ್ಲೇಗು ಬರಿದೆ ಹೋಗಲಿಲ್ಲ, ಇಂದ್ರಿಯ ಪಾಟವವನ್ನೇ ಕೊಂಡುಹೋಯಿತು. ಕಣ್ಣು ಕಾಣುತ್ತಿರಲಿಲ್ಲ. ಕಿವಿ ಕೇಳುತ್ತಿರಲಿಲ್ಲ. ಮತ್ತೆ ಕೆಲಕಾಲದ ನಂತರ ಆ ಶಕ್ತಿ ಮರಳಿದ್ದು ನಾಡಿನ ಅದೃಷ್ಟ ಎಂದೇ ಹೇಳಬೇಕು.

ತಿಳುವಳಿಕೆಯ ಬೆಳಕು

ಕಾರ್ಯಶೀಲರು ನಿರುದ್ಯೋಗಿಗಳಾದರೆ ಅವರ ಸುತ್ತಲ ಬದುಕು ಬೆಳೆಯುತ್ತದೆಯೋ ಏನೋ! ಶರ್ಮರು ಮುಲ್ಕಿ ಪರೀಕ್ಷೆ ಮುಗಿಸಿದರಾದರೂ ಒಂದು ಉದ್ಯೋಗ ದೊರೆಯಲಿಲ್ಲ. ಹಾಗೆಂದು ಬರಿದೆ ಕೂರುವ ಜೀವವಲ್ಲ ಅದು. ಹದಿನೇಳರ ಹುಡುಗ ತನ್ನ ಊರಿನಲ್ಲಿ ಒಂದು ವಾಚನಾಲಯ ಆರಂಭಿಸಿ ಹತ್ತು ಹನ್ನೆರಡು ಪತ್ರಿಕೆಗಳು ಅಲ್ಲಿ ಬರುವಂತೆ ಮಾಡಿದ; ತನ್ನ ಊರಿನಲ್ಲಿ ತಿಳುವಳಿಕೆಯ ಬೆಳಕು ಹಚ್ಚಿದ. ಆ ಹೊತ್ತಿಗೆ ಪ್ರಭಾತ ಪತ್ರಿಕೆಯಲ್ಲಿ ಹೊಸಗನ್ನಡ ಕಾವ್ಯಪ್ರಭಾತದ ಸೂಚನೆಗಳು ಕಾಣಿಸಿಕೊಂಡವು. ಬೇಂದ್ರೆ, ಮಾಸ್ತಿ, ಶಾಂತ ಕವಿಗಳ ಕವಿತೆಗಳು ಅದರಲ್ಲಿ ಪ್ರಕಟವಾಗತೊಡಗಿದ್ದವು. ಅವನ್ನು ಓದಿ ಶರ್ಮರಲ್ಲಿ ಉಂಟಾದ ಹುರುಪು ಅವರ ಮೊದಲ ಕವಿತೆಗೆ ಪ್ರೇರಣೆಯಾಯಿತು. ಅದೂ ಪ್ರಭಾತದಲ್ಲಿಯೇ ಪ್ರಕಟವಾಯಿತು.

೧೯೧೯ರಲ್ಲಿ ಧಾರವಾಡದಲ್ಲಿ ಕರ್ನಾಟಕ ಏಕೀಕರಣ ಸಮ್ಮೇಳನ. ಶರ್ಮ ಸಮ್ಮೇಳನಕ್ಕೆ ಹೋದರು; ಕಾವ್ಯಾನಂದರ ನೇತೃತ್ವದಲ್ಲಿ ಸ್ವಯಂಸೇವಕರಾಗಿ ದುಡಿದರು. ಕೀರ್ತನಕಾರ ಜಯಾಚಾರ್ಯರ ಹಿಮ್ಮೇಳದವರಾಗಿ ಕೀರ್ತನದ ಜೊತೆಗೆ ಕನ್ನಡದ ಪ್ರಚಾರ ನಡೆಸಿದರು. ಕನ್ನಡ ಕುಲಪುರೋಹಿತ ಆಲೂರರು, ಮುದವೀಡು ಕೃಷ್ಣರಾಯರು, ಶಾಂತಕವಿಗಳು ಮೊದಲಾದವರ ಪರಿಚಯ ಅವರಿಗೆ ಬೆಳೆದದ್ದು ಈ ಮೂಲಕವೆ. ಅಸಹಕಾರ ಚಳುವಳಿಯಲ್ಲೂ ಪಾಲುಗೊಂಡ ಶರ್ಮರು ರಾಷ್ಟ್ರಭಕ್ತಿಯನ್ನು ಮತ್ತು ಕನ್ನಡ ಪ್ರೇಮವನ್ನು ಜಾಗರಿಸುವ ಗೀತೆಗಳನ್ನು ಬರೆದರು. ಮಹಾರಾಷ್ಟ್ರೀಯರ ನಾಡಪ್ರೇಮ ಕಂಡಾಗ ನನ್ನ ಭಾಷೆ, ನಾಡು ಏನು ಕಡಮೆ ಎನ್ನಿಸಿ "ಎನಿತು ಇನಿದು ಈ ಕನ್ನಡ ನುಡಿಯು / ಮನವನು ತಣಿಸುವ ಮೋಹನ ಸುಧೆಯು" ಎಂಬ ಪದ್ಯ ಬರೆದ ಪ್ರಭೃತಿ ಅವರು. ಅದು ಕರ್ನಾಟಕದ ಎಲ್ಲ ಕಡೆ

ಪ್ರಸಿದ್ಧವಾಗಿ ನಾಡಪ್ರೇಮದಿಂದ ಕಾವುಗೊಂಡ ಹೃದಯಗಳಿಗೆ ಅಮೃತಸೇಚನ ಮಾಡುವ ಗೀತೆಯಾಯಿತು. ಇದರ ಜೊತೆ ಜೊತೆಗೇ ರಚನೆಯಾದ 'ನನ್ನದು ಈ ಕನ್ನಡನಾಡು', 'ಕೊಡಲಾರೆ ನನ್ನ ಕೈದುವನು', 'ಆ ಮಾಧವನೆಲ್ಲಿರುತಿಹನು' ಮೊದಲಾದವು ಆ ಕಾಲದಲ್ಲಿ ನಡೆದ ಕನ್ನಡಜಾಗೃತಿಯ ಚಳವಳಿಗೆ ಪೋಷಕ ಸಾಹಿತ್ಯವಾದುವು.

ಶರ್ಮರ ನಾಡಪ್ರೇಮ ಅದ್ವಿತೀಯವಾದದ್ದು. ಆಗಿನ ಕೇಂದ್ರ ಸರಕಾರ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಒಪ್ಪಿಸುವ ಯೋಚನೆಯಲ್ಲಿದೆಯೆಂಬ ಸುದ್ದಿ ಹರಡಿತ್ತು. ಅಂಥ ಸಂದರ್ಭ ಬಂದರೆ ತಾವು ಅದರ ವಿರುದ್ಧ ಆತ್ಮಾರ್ಪಣೆ ಮಾಡಿಕೊಳ್ಳುವುದಾಗಿ ಶರ್ಮರು ಗುಡುಗಿದರು. ಧಾರವಾಡದಲ್ಲಿ ಗೆಳೆಯರ ಗುಂಪಿನಲ್ಲಿ ನಾಡಹಬ್ಬದ ಕಲ್ಪನೆ ರೂಪಿಸಿದವರೂ ಅವರೇ; ಮೊದಲ ನಾಡಹಬ್ಬದಲ್ಲಿ ಪಾಲುಗೊಂಡವರೂ ಹೌದು. ದೇಶಾಭಿಮಾನದಂತೆಯೇ ಅವರ ಆತ್ಮಾಭಿಮಾನ ಕೂಡ ತೀವ್ರವಾದದ್ದು. ಬೆಂಗಳೂರಿನ ಆರ್ಯ ವಿದ್ಯಾಶಾಲೆಯಲ್ಲಿ ಕೆಲಕಾಲ ಅಧ್ಯಾಪಕರಾಗಿದ್ದಾಗ ತಲೆಗೆ ಮುಂಡಾಸು ಧರಿಸಿಯೇ ಬರಬೇಕೆಂಬ ಶಾಲೆಯ ಆಜ್ಞೆಗೆ ಮಣಿಯಲು ಒಪ್ಪದೆ ಕೆಲಸಕ್ಕೆ ರಾಜಿನಾಮೆಕೊಟ್ಟು ತಮ್ಮ ವೇಷದ ಸ್ವಾತಂತ್ರ್ಯ ಕಾಪಾಡಿಕೊಂಡ ಅಭಿಮಾನಿ ಅವರು. ಬೆಳಗಾವಿಯ ರಾಷ್ಟ್ರೀಯ ಶಾಲೆಯಲ್ಲಿ ಶಿಕ್ಷಕರಾಗಿದ್ದಾಗ ಹುಡುಗರಲ್ಲಿ ಕನ್ನಡದ ಅಭಿಮಾನ ತುಂಬಿ, ಕನ್ನಡ ಗೀತೆಗಳನ್ನು ಕಲಿಸಿಕೊಟ್ಟು, ಮರಾಠಿಯ ವಾತಾವರಣವನ್ನು ಪರಿಣಾಮಕಾರಿಯಾಗಿ ಎದುರಿಸಿದವರು. ಪಂಪ, ರನ್ನ, ಕುಮಾರವ್ಯಾಸ, ಲಕ್ಷ್ಮೀಶ, ಮುದ್ದಣ, ನಯಸೇನ ಮೊದಲಾದವರ ಕೃತಿಗಳನ್ನು ಅವರು ತಾವೇ ಸ್ವಂತವಾಗಿ, ವ್ಯವಸ್ಥಿತವಾಗಿ ಅಭ್ಯಾಸ ಮಾಡಿದರೆಂದರೆ ನಾಡಿನ ಪರಂಪರೆಯನ್ನು ಅರಿಯುವಲ್ಲಿ ಅವರಿಗಿದ್ದ ಆಸಕ್ತಿ ಎಷ್ಟು ತೀವ್ರತರವಾದದ್ದೆಂದು ತಿಳಿದೀತು.

ಪತ್ರಿಕಾರಂಗದಲ್ಲಿ

ಪತ್ರಿಕಾರಂಗದಲ್ಲಿ ಬೆಟಗೇರಿಯವರು ಮಾಡಿದ ಕೆಲಸ ನಾಡು ಎಂದೂ ನೆನೆಯುವಂಥದು. ಮಾತೃಭೂಮಿ, ಸ್ವಧರ್ಮ ಪತ್ರಿಕೆಗಳ ಸಂಪಾದಕತ್ವವನ್ನು ಅವರು ಕೆಲಕಾಲ ನಿರ್ವಹಿಸಿದರಲ್ಲದೆ ಜಯಕರ್ನಾಟಕ ಪತ್ರಿಕೆಗೆ ಹೆಸರೇ ಹಾಕಿಕೊಳ್ಳದೆ ಕೆಲಕಾಲ ಸಂಪಾದಕರಾಗಿ ದುಡಿದರು. ಕಡೆಗೆ ತಾವೇ 'ಜಯಂತಿ' ಎಂಬ ಮಾಸಪತ್ರಿಕೆ ಹೊರಡಿಸಿದರು. ಆ ಮೂಲಕ ಅನೇಕ ಲೇಖಕರನ್ನು ರೂಪಿಸಿದರು. ಈ ಪತ್ರಿಕೆ ಇಪ್ಪತ್ತಮೂರು ವರುಷ ಎರಡು ತಿಂಗಳು ನಡೆಯಿತು. ಆ ಅವಧಿಯಲ್ಲಿ ಅವರು ಸಂಪಾದಿಸಿದ ಒಟ್ಟು ಪುಟಗಳ ಸಂಖ್ಯೆ ಇಪ್ಪತ್ತು ಸಾವಿರಕ್ಕೂ ಹೆಚ್ಚು. ಇದನ್ನು

ಅವರು ಸತತವಾದ ಕಷ್ಟಗಳ ನಡುವೆ ನಡೆಸಿಕೊಂಡು ಬಂದರು. ಒಮ್ಮೆ ಅವರೇ ಹೇಳಿದ್ದುಂಟು – "ನನಗೆ ಇಬ್ಬರು ಟಿ.ಬಿ. ಪೇಷಂಟುಗಳು; ಒಬ್ಬರು ನನ್ನ ಹೆಂಡತಿ, ಇನ್ನೊಬ್ಬರು ಜಯಂತಿ."

ಲೇಖಕರಾಗಿ ಬೆಟಗೇರಿಯವರ ಕೊಡುಗೆ ಗಮನಾರ್ಹವಾದದ್ದು. ಅವರು ಕವಿತೆ ಕತೆ ಕಾದಂಬರಿಗಳನ್ನಲ್ಲದೆ ಜನಪದ ಜೀವನವನ್ನು ಚಿತ್ರಿಸುವ ಬರಹಗಳನ್ನೂ ಹೊರತಂದಿದ್ದಾರೆ. 'ಮಾತನಾಡುವ ಕಲ್ಲು' ಅವರ ಕಥಾ ಸಾಹಿತ್ಯದ ಒಂದು ಮೈಲಿಗಲ್ಲು. ವಿಜಯನಗರ ಕುರಿತು ಇಪ್ಪತ್ತು ಕಾದಂಬರಿ ಬರೆಯುವಷ್ಟು ಸಾಮಗ್ರಿ ಕಲೆಹಾಕಿದ ವ್ಯಕ್ತಿ ಅವರು. ರಾಜಯೋಗಿ, ಅಶಾಂತಿಪರ್ವ, ಮಲ್ಲಿಕಾರ್ಜುನ ಇವೆಲ್ಲ ಆ ಸಾಮಗ್ರಿಯಿಂದ ಮೂಡಿದ ಕೆಲವು ಫಲಗಳು ಮಾತ್ರ. ಸ್ವಾತಂತ್ರ್ಯ ಚಳವಳಿಯ ಹಿನ್ನೆಲೆಯಲ್ಲಿ ರೂಪುಗೊಂಡ ಅವರ 'ಮಗಳ ಮದುವೆ' ಕಾದಂಬರಿ ರಾಜ್ಯ ಸರ್ಕಾರದ ಪ್ರಶಸ್ತಿ ಪಡೆದ ಕೃತಿ. ಇವುಗಳ ಜೊತೆಗೆ ಕರ್ನಾಟಕದ ಇತಿಹಾಸ ಸಂಸ್ಕೃತಿಗಳ ವಿಶೇಷ ಅಭ್ಯಾಸ ನಡೆಸಿದ ಅವರು 'ಕರ್ನಾಟಕ ಜನಜೀವನ' ಎಂಬ ಕೃತಿಯನ್ನು ಹೊರತಂದಿದ್ದಾರೆ. 'ಜನಪದ ಜೀವನ'ದಲ್ಲಿ ಹಳ್ಳಿಯ ಬಾಳಿನ ಪರಿಗಳನ್ನು ಚಿತ್ರಿಸಿದ್ದಾರೆ. ಬಂಗಾಳಿ ಕಲಿತು ಮೂಲದಲ್ಲಿಯೇ ಶರಶ್ಚಂದ್ರರ ಕಾದಂಬರಿಗಳನ್ನೂ ಟಾಗೋರರ ಕವಿತೆಗಳನ್ನೂ ಓದಿದ ಸಹೃದಯತೆ ಅವರದ್ದು.

ಕವಿಭೂಷಣ ಕೃಷ್ಣಶರ್ಮರ ಅವಿಶ್ರಾಂತ ದುಡಿಮೆ ನಾಡಿಗೆ ತಿಳಿಯದಿಲ್ಲ. ಅವರನ್ನು ಜಮಖಂಡಿ ಸಾಹಿತ್ಯ ಸಮ್ಮೇಳನದ ಸಾಹಿತ್ಯಗೋಷ್ಠಿಗೆ ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು. ಬೆಂಗಳೂರಿನ ಸಣ್ಣ ಕತೆಗಾರರ ಸಮ್ಮೇಳನದಲ್ಲಿ ಪ್ರಮುಖ ಪಾತ್ರ ನೀಡಲಾಯಿತು. ಅವರು ಅರವತ್ತಕ್ಕೆ ಕಾಲಿಟ್ಟಾಗ ಅದನ್ನು ಸಂಭ್ರಮದಿಂದ ಆಚರಿಸಲಾಯಿತು. ಈಗ ಅವರಿಗೆ ನಾಡು ಆರೋಗ್ಯಭಾಗ್ಯವನ್ನು ಹಾರೈಸಿ ಅಭಿನಂದನ ಗ್ರಂಥವೊಂದನ್ನು ಸಲ್ಲಿಸುತ್ತಿದೆ.

●

ಆನಂದಕಂದ

ಅಪ್ಪಟ ಕನ್ನಡಿಗ ಕನ್ನಡಕ ಧರಿಸಿ
ಪೈಜಾಮ ತೊಟ್ಟು ಖಾದಿಯ ಶಾಲು ಹೊದ್ದು
ಕೈಚೀಲ ಹಿಡಿದು ಬೀದಿಯಲಿ ಬರುವ
ನಿಮ್ಮನ್ನು ಗುರುತಿಸಬೇಕು 'ಜಯಂತಿಯ'
ಸಂಪಾದಕರೆಂದೇ – ಹಾಗಿತ್ತು ನಿಮ್ಮ ಚರ್ಯೆ
ನೀವು ಮಾಡರಿ – ಎಂದೆಂದಿಗೂ ಅಪಚರ್ಯೆ!
ಸಂಪಾದಕರ ಕೈ ಆಡದಲೆ ಮೂಡದು–
ಕಥೆ, ಕವನ, ಹರಟೆ – ಜಯಂತಿಯಲಿ.
ಹಾಗಿತ್ತು ಆ ಕೈಯ ಬಿಗುವು – ನೂರಾರು
ಪತ್ರಗಳಿಗೂ – ಕಿವಿ ಮಾತಿನುತ್ತರವಿತ್ತು.
ಜಾನಪದದ ಗತ್ತು ಕನ್ನಡದ ಸೊತ್ತು ಎಂದಿರಲ್ತೆ?
ಕಾವ್ಯ, ಕಥೆ, ಕಾದಂಬರಿ, ಸಂಶೋಧನೆ, ಸಂಪಾದನೆ
ಇದು ತಮ್ಮ ಸಾಧನೆಯ – ಸಿರಿ ಹಿರಿಮೆ
ಕನ್ನಡದ ಕಿಂಕರರಾಗಿ ಬಾಳನೆಲ್ಲ ಸವೆಸಿದಿರಿ ಧನ್ಯರಲ್ತೆ!

–ಬಿ. ಆರ್. ವಾಡಪ್ಪಿ

ಕನ್ನಡ ವಿಮರ್ಶೆಗೆ ಸ್ವರೂಪ ನೀಡಿದ ಕೀರ್ತಿನಾಥ ಗೌಡರು

ಅದು ಸಾವಿರದ ಒಂಬೈನೂರು ಐವತ್ತೆಂಟೋ ಐವತ್ತೊಂಬತ್ತೊ ಮರೆತು ಹೋಗಿದೆ. ನಾನು ಇನ್ನೂ ವಿದ್ಯಾರ್ಥಿ. ಯು. ಆರ್. ಅನಂತಮೂರ್ತಿ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರು. ಇಬ್ಬರೂ ಮಾತಾಡುತ್ತ ಮೈಸೂರಿನ ನೂರಡಿ ರಸ್ತೆಯ ದುರ್ಗಾ ಭವನದಿಂದ ಹೊರಬಂದೆವು. 'ನಡೆದು ಬಂದ ದಾರಿ' ಸಂಪುಟಗಳಲ್ಲಿ ಕುರ್ತಕೋಟಿಯವರು ಬರೆದ ಕಾವ್ಯ ವಿಮರ್ಶೆಯ ಬಗ್ಗೆ ಮಾತು ಸಾಗಿತ್ತು. ಅನಂತಮೂರ್ತಿ ಬರವಣಿಗೆಯ ಬಗ್ಗೆ ಮೆಚ್ಚಿಕೆಯಿಂದ ತುಂಬಿಹೋಗಿದ್ದರು. ಎದುರಿಗೆ (ಆಗ ಮೈಸೂರಿಗೆ ಬಂದಿದ್ದ) ಡಾ॥ ಬಿಳಿಗಿರಿ ಬಂದರು. ಅನಂತಮೂರ್ತಿ ಉತ್ಸಾಹದಿಂದ "ಬಿಳಿಗಿರಿ, 'ನಡೆದು ಬಂದ ದಾರಿ' ಓದಿದೆಯಾ? ಕುರ್ತಕೋಟಿ ಬರವಣಿಗೆ ಏನು ಭರ್ಜರಿಯಾಗಿದೆ ಅಲ್ಲವ?" ಅಂದರು.

ಬಿಳಿಗಿರಿ ಆ ಮಾತಿಗೆ ಒಪ್ಪಿದರು. ಆದರೆ ದನಿಯಲ್ಲಿ ಕೊಂಚ ರಾಗ ಇತ್ತು. "ಚೆನ್ನಾಗಿ ಬರಿತಾರೆ ಸರಿಯಪ್ಪ. ಬೇಂದ್ರೆ ಕುವೆಂಪು ಅಡಿಗರ ಬಗ್ಗೆ ಸರಿಯಾಗೇ ಬರಿತಾರೆ. ಆದರೆ ಪುತಿನ? ಅವರ ಬಗ್ಗೆ ಬರೆದಿರೋದು ಸರಿಯಾ? ಸಾಕಾ? ಅವರಲ್ಲಿ ಎಂಥೆಂಥ ಚಿಂತನೆ ಇವೆ. ಬೇರೆ ಯಾರಲ್ಲಿ ಅಷ್ಟು ಇದೆ ಹೇಳು" ಅಂದರು. ಅನಂತಮೂರ್ತಿ "ಅದೇನು ಬಿಡೋ, ಐವತ್ತು ವರ್ಷದ ಸಾಹಿತ್ಯ ಕುರಿತು ಒಬ್ಬನೇ ವ್ಯಕ್ತಿ ಬರೆಯೋವಾಗ ಇಂಥದು ಒಂದೆರಡು ಆಗೋದು ಸಾಮಾನ್ಯ. ಇಷ್ಟಾಗಿ ಅವರಿಗೆ ಅದಕ್ಕೆ ಕಾರಣ ಇರಬೋದು. ಪುತಿನ ಕಾವ್ಯದಲ್ಲಿ ಗಟ್ಟಿ ಚಿಂತನೆ ಇದೆ ನಿಜ. ಆದರೆ ಎಷ್ಟು ಕಡೆ ಅದು ಕಾವ್ಯಾನುಭವ ಆಗಿ ಮೈ ಪಡೆಯುತ್ತೆ ಅನ್ನೋದು ಮುಖ್ಯ ಅಲ್ಲವೆ? ಅದೇನೇ ಇರಲಿ, ಕನ್ನಡದಲ್ಲಿ ಇಂಥ ವಸ್ತುನಿಷ್ಠ ವಿಮರ್ಶೆ ಎಲ್ಲಿ ಇತ್ತು? ಇದೇ ಮೊದಲು ಅಲ್ಲವಾ" ಎಂದರು.

ಮುಂದೆ ನಾವಿಬ್ಬರೇ ಮಹಾರಾಜ ಹಾಸ್ಟೆಲು ಕಡೆ ನಡೆದೆವು. ಅನಂತಮೂರ್ತಿ ಸ್ವಲ್ಪ ಹೊತ್ತು ಏನೋ ಗುಂಗಿನಲ್ಲಿದ್ದವರು, ನಡುವೆ ಥಟ್ಟನೇ ಹೇಳಿದರು. "ಭಟ್ಟ, ಕುರ್ತಕೋಟಿ ಬರವಣಿಗೆಯಲ್ಲಿ ಯಾಕೆ ಇಂಥ ತೇಜಸ್ಸಿದೆ ಅಂತ ಯೋಚಿಸುತ್ತಿದ್ದೆ. ಅದು ಬರೀ ಅಧ್ಯಯನ, ಪಾಂಡಿತ್ಯ, ಸ್ಮರಣಶಕ್ತಿ ಇಷ್ಟರಿಂದಲೇ ಬಂದದ್ದಲ್ಲ, ಸಾಹಿತ್ಯದ ಬಗ್ಗೆ ಅವರಿಗೆ ನಿರ್ಮಲವಾದ ಪ್ರೀತಿ, ಭಯದಾಕ್ಷಿಣ್ಯ ಮುಕ್ತವಾದ ನಿಲುವು ಇದೆ. ಆದ್ದರಿಂದಲೇ ಬರೆಹಕ್ಕೆ ಅಂಥ ಸತ್ಯವಂತಿಕೆ ದಕ್ಕಿದೆ. ಅದರ ತೇಜಸ್ಸಿನ ಗುಟ್ಟು ಇದೇ ಅನ್ನಿಸುತ್ತೆ" ಎಂದರು.

ಇದನ್ನು ಹೇಳಿದ್ದರ ಕಾರಣ ಇಷ್ಟೇ, ಕೀರ್ತಿನಾಥರು ಅಷ್ಟು ಹಿಂದೆಯೇ ಮೈಸೂರಿನ ಸಾಹಿತ್ಯಸಕ್ತರನ್ನೆಲ್ಲ ಬೆರಗಾಗಿಸುವಂಥ ಬರವಣಿಗೆ ತಂದು ಬಿಟ್ಟಿದ್ದರು. ಅನಂತಮೂರ್ತಿ ಅಡಿಗರನ್ನು ಒಬ್ಬ ಮೇಜರ್ ಕವಿ ಅಂತ ಮೊದಲು ಗುರುತಿಸಿದ ಗಟ್ಟಿಗರು. ಆ ಮಾತಿಗೆ ಕುರ್ತಕೋಟಿಯವರ ಬರೆಹ ಒತ್ತಾಸೆಯಂತಿತ್ತು. ತಮ್ಮ ಸುತ್ತ ಇರುವ ಜನಕ್ಕೆ ಪರಿಪರಿಯಾಗಿ ವಿವರಿಸಿದರೂ ಅವರು ಗ್ರಹಿಸಲಾಗದ್ದನ್ನು ಸಾವಿರಾರು ಮೈಲು ದೂರ ಕೂತ ಒಬ್ಬ ವ್ಯಕ್ತಿ ಹೇಗೆ ಸ್ವತಂತ್ರವಾಗಿ ಸಮರ್ಥವಾಗಿ ಗ್ರಹಿಸಿದ್ದಾರೆ ಅಂತ ಅನಂತಮೂರ್ತಿಯವರಿಗೆ ಆಶ್ಚರ್ಯವಾಗಿರಬೇಕು. ಕನ್ನಡದ ಒಬ್ಬ ಹಿರಿಯ ವಿಮರ್ಶಕ ಇನ್ನೊಬ್ಬ ಹಿರಿಯ ವಿಮರ್ಶಕನ ಬಗ್ಗೆ ಆಡಿದ ನಿರ್ಮತ್ಸರವಾದ ಈ ಮೆಚ್ಚಿಕೆಯ ಮಾತು ಕನ್ನಡ ಸಾಹಿತ್ಯದ ದೊಡ್ಡಸ್ತಿಕೆಯಾಗಿ, ಈಗಲೂ ನೆನಪಾದಾಗಲೆಲ್ಲ ನನಗೆ ಸಂತೋಷ ಕೊಡುತ್ತದೆ.

ನಾನು ಆಗ ನಲವತ್ತರ ಪ್ರಾಯದವನು. ಯಾವುದೋ ಕೆಲಸದ ಮೇಲೆ ಧಾರವಾಡಕ್ಕೆ ಹೋಗಿದ್ದೆ. ಗುಜರಾತಿನ ಪಟೇಲ್ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರೊಫೆಸರವಾಗಿ ಕೆಲಸ ಮಾಡುತ್ತಿದ್ದ ಕುರ್ತಕೋಟಿಯವರು ರಜೆಯಲ್ಲಿ ಧಾರವಾಡಕ್ಕೆ ಬಂದಿದ್ದರು. ಧಾರವಾಡದಲ್ಲಿರುವಾಗ ಮನೋಹರ ಗ್ರಂಥಮಾಲೆಯ 'ಅಟ್ಟ'ಕ್ಕೆ ಅವರು ದಿನವೂ ಸಂಜೆ ಬರುತ್ತಾರೆಂದೂ ಅಲ್ಲಿ ಸ್ನೇಹಿತರೊಡನೆ ಗಂಟೆಗಟ್ಟಲೆ ಹರಟೆ ಕೊಚ್ಚುತ್ತಾರೆಂದೂ ಸಾಹಿತ್ಯ ವಿಷಯಕವಾದ ಅನೇಕ ಸ್ವಾರಸ್ಯಕರ ಸಂಗತಿಗಳು ಅಲ್ಲಿ ಪ್ರಸ್ತಾಪಕ್ಕೆ ಬರುತ್ತವೆಂತಲೂ ಕೇಳಿದ್ದೆ. ಕೀರ್ತಿನಾಥರ ವಿಮರ್ಶಾ ಬರಹಗಳನ್ನು ಬಹಳ ಮೆಚ್ಚಿಕೊಂಡಿದ್ದ ನನಗೆ ಅವರನ್ನು ಕಣ್ಣಾರೆ ಕಂಡು ಮಾತನಾಡುವ ತವಕವೂ ಇತ್ತು. ಹಾಗಿರುತ್ತ ಒಂದು ಸಂಜೆ ಗ್ರಂಥಮಾಲೆಯ ಅಟ್ಟಕ್ಕೆ ಹೋದೆ.

ಅಲ್ಲಿ ಗ್ರಂಥಮಾಲೆಯ ಮಾಲೀಕರಾದ ಜಿ.ಬಿ. ಜೋಷಿ, ಅವರ ಮಗ ರಾಮಜೋಷಿಯವರಲ್ಲದೆ ಸಾಹಿತ್ಯಾಸಕ್ತರಾದ ಇನ್ನೂ ಐದಾರು ಜನ ಕುಳಿತಿದ್ದರು. ಅವರೆಲ್ಲ ಇನ್ನೂ ಕೆಲವರಿಗಾಗಿ ಕಾಯುತ್ತಿದ್ದಂತೆ ತೋರಿತು. ಕುರ್ತಕೋಟಿಯವರು

ಇನ್ನೂ ಬಂದಿರಲಿಲ್ಲ. ಬಹಳ ಹೊತ್ತು ಕಾದು ನಾನು ಇನ್ನೇನು ಹೊರಡುವ ಯೋಚನೆಯಲ್ಲಿದ್ದೆ. ಅಷ್ಟುಹೊತ್ತಿಗೆ ಹೊರಗಡೆ ಇದ್ದ ಇಬ್ಬರು "ಗೌಡರು ಬಂದರು" ಎಂದು ಉತ್ಸಾಹದಿಂದ ಒಳಬಂದರು.

ಯಾವ ಗೌಡರು ಇರಬಹುದು ಅಂತ ನಾನು ಯೋಚಿಸುತ್ತಿರುವಂತೆಯೇ ಇನ್ನೂ ಇಬ್ಬರು ಮೂವರ ಸಹಿತ ಕುರ್ತಕೋಟಿ ಒಳಗೆ ಬಂದರು. ಗೌಡರು ಯಾರು ಬಂದಿರುವರೋ ಅಂತ ನಾನು ಎರಡು ಕ್ಷಣ ಕುತೂಹಲದಿಂದ ನೋಡುತ್ತಿದ್ದೆ. ಅಷ್ಟರಲ್ಲಿ ಗುಂಪಿನಲ್ಲಿದ್ದ ಒಬ್ಬರು ಕುರ್ತಕೋಟಿಯವರಿಗೆ "ಏನು ಗೌಡರು ಇವತ್ತು ಇಷ್ಟು ಲೇಟು?" ಎಂದರು. ಅಲ್ಲಿಗೆ ನನ್ನ ಸಂಶಯ ಬಗೆ ಹರಿಯಿತು. ಆದರೆ ಕುರ್ತಕೋಟಿ ಹೇಗೆ ಗೌಡರಾದರು ಎಂಬ ಕುತೂಹಲ ಕಾಡತೊಡಗಿತು. ಆ ಮೇಲೆಯೇ ನನಗೆ ತಿಳಿದದ್ದು. ಅವರ ಅಜ್ಜನ ಹೆಸರು ಕೀರ್ತಿನಾಥ, ತಂದೆಯ ಹೆಸರು ದತ್ತಪ್ಪಗೌಡ. ಕುಮಾರವ್ಯಾಸ ಶಾನಭೋಗರ ಮನೆತನದವರು ತಾನೆ? ಅವರ ವಂಶಕ್ಕೆ ಹತ್ತಿಕೊಂಡೇ ಬಂದ ಕೀರ್ತಿನಾಥರ ವಂಶ. ಹಾರುವರದ್ದೇ ಆದರೂ ಗೌಡರ ಹೆಸರು ಹೊತ್ತದ್ದು!

ಆ ದಿನ ಸುಮಾರು ಎರಡು ಗಂಟೆಯಾದರೂ ಹರಟೆ ಸಾಗಿರಬೇಕು. ನಿಜವಾಗಿ ಬಹಳ ಸ್ವಾರಸ್ಯಕರವಾದ ಅಷ್ಟೇ ಉಪಯುಕ್ತವಾದ ಹರಟೆ ಅದು. ಕಾಳಿದಾಸ, ಮಲ್ಲಿನಾಥ, ಜ್ಞಾನದೇವ, ಸುಕ್ತಂಕರ್, ಬೇಂದ್ರೆ, ಕುಮಾರವ್ಯಾಸ – ಯಾರ ಯಾರ ಬರೆಹದ ವಿಷಯಗಳೆಲ್ಲ ಮಾತಿನ ನಡುವೆ ಮಿಂಚಿಹೋದವು. ಎಲೆ ಅಡಕೆ ಮೆಲ್ಲುತ್ತ, ಆಗಾಗ ರಸ ಉಗಿಯಲು ಹೊರಹೋಗಿ ಬರುತ್ತಿದ್ದ ಕುರ್ತಕೋಟಿಯವರದೇ ಹರಟೆಯಲ್ಲಿ ಪ್ರಧಾನಪಾತ್ರ. ಇಪ್ಪತ್ತು ಮೂವತ್ತು ನಿಮಿಷಗಳಿಗೊಮ್ಮೆ ಚಹಾ, ಪುರಿ, ಚೂಡಾ ಸಪ್ಲೆ ಆಗುತ್ತಲೇ ಇತ್ತು. ಎಂಥವರೂ ಕಾವುಗೊಳ್ಳುವಂಥ ರಸಾತ್ಮಕ ವಾತಾವರಣ ಅದು. ಕುರ್ತಕೋಟಿಯವರು ಮಾತನಾಡುತ್ತಿದ್ದರೆ ಸಹೃದಯ ವಿಮರ್ಶೆಯ ಜ್ಯೋತಿಯೊಂದು ಹೊತ್ತಿ ಬೆಳಗುತ್ತಿರುವಂತೆ ಭಾಸವಾಗುತ್ತಿತ್ತು. ನಾನು ಅದೇ ಮೊದಲು ಅವರನ್ನು ಕಂಡದ್ದು. ವ್ಯಾಪಕವಾದ ಓದು ಇದ್ದ ಕುರ್ತಕೋಟಿಯವರು ನನ್ನ ಹೆಸರನ್ನೂ ಕೇಳಿದ್ದರು. ನನ್ನನ್ನು ಪ್ರೀತಿಯಿಂದ ಮಾತನಾಡಿಸಿ, ಭಟ್ಟ ಅನ್ನೋ ವಂಶನಾಮ ನಿಮಗಿದೆ. ಅದರ ಅರ್ಥ ಏನು ಗೊತ್ತ ಅಂತ ಕೇಳಿದರು. ನಾನು 'ವೇದಶಾಸ್ತ್ರ ಪುರಾಣಜ್ಞಃ ಭಟ್ಟ ಇತ್ಯಭಿಧೀಯತೇ' ಎಂದೆ. ಕುರ್ತಕೋಟಿಯವರಿಗೆ ಖುಷಿಯಾಗಿ ಹೋಯಿತು. "ಚಲೋ ಹೇಳಿದಿರಿ. ನೀವು ನಿಜವಾಗಿ ಭಟ್ಟರೇ ಹೌದು" ಎಂದು ನನ್ನ ಬೆನ್ನು ಸವರಿದರು.

ಕನ್ನಡ ವಿಮರ್ಶೆಯ ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯುವ ಹೆಸರು ಕುರ್ತಕೋಟಿಯವರದು. ವಿಮರ್ಶೆ ಎನ್ನುವದು ಬೇಕಾದವರನ್ನು ಹೊಗಳುವ, ಬೇಡವಾದವರನ್ನು ತೆಗಳುವ, ಕೈ ತೂಕ ಬಾಯಿ ಬಣ್ಣದ ಮಾತಾಗಿದ್ದಾಗ ಅದನ್ನು ವಸ್ತುನಿಷ್ಠ ಚಿಂತನೆಯ ಹೊಸ್ತಿಲು ಹತ್ತಿಸಿದವರು ಅವರು. ಸಂಸ್ಕೃತ, ಇಂಗ್ಲಿಷ್ ಮತ್ತು ಕನ್ನಡ ಈ ಮೂರು ಸಾಹಿತ್ಯಗಳ ಗಟ್ಟಿ ಹಿನ್ನೆಲೆಯಿರುತ್ತ ಕನ್ನಡ ಕಾವ್ಯ ಪರಂಪರೆಯ ಬಗ್ಗೆ ಅವರಂತೆ ಅಧಿಕಾರಯುತವಾಗಿ ಮಾತಾಡಬಲ್ಲವರು ಬೇರೆ ಯಾರಿದ್ದಾರೆ? ಮೊನ್ನೆ ನಾನು ಧಾರವಾಡದಲ್ಲಿ ಅವರ ಮನೆಯಲ್ಲಿ ಕೂತು ಯೇಟ್ಸ್ ಕವಿಯ ಕವನಗಳ ನನ್ನ ಕೆಲವು ಅನುವಾದ ಓದಿದೆ. ಅವರು ಇಂಗ್ಲಿಷ್ ಮೂಲ ಕೈಯಲ್ಲಿಟ್ಟುಕೊಳ್ಳದೆಯೇ ಅನೇಕ ಕಡೆ ಮೂಲ ಕವನದ ಸಾಲುಗಳನ್ನು ಉದ್ಧರಿಸುತ್ತ ಅನುವಾದದ ಸಾಲುಗಳನ್ನು ಹೋಲಿಸುತ್ತ ಚರ್ಚಿಸಿದರು.

ಬೆಂಗಳೂರಿನ ಸೆಮಿನಾರೊಂದರಲ್ಲಿ ಕುರ್ತುಕೋಟಿಯವರು ಕಾಳಿದಾಸ ಪಂಪರನ್ನು ಹೋಲಿಸಿ ಮಾತನಾಡುತ್ತ ಬೆರಗುಗೊಳಿಸುವ ಅನೇಕ ಒಳನೋಟಗಳನ್ನು ತೆರೆದರು. ಬೇಂದ್ರೆಕಾವ್ಯದ ಬಗ್ಗೆ ನಮ್ಮ ಗ್ರಹಿಕೆಗಳನ್ನು ಸೂಕ್ಷ್ಮಗೊಳಿಸಿದವರು ಅವರೇ. ಕುಮಾರವ್ಯಾಸನ ಕಾವ್ಯ ಕುರಿತು ಅವರು (ಐ.ಬಿ.ಎಚ್. ಮಾಲೆ ಪುಸ್ತಕವೊಂದರಲ್ಲಿ) ಮಾಡಿರುವಂಥ ಸೂಕ್ಷ್ಮ ಚಿಂತನೆಗಳನ್ನು ಯಾವ ಕನ್ನಡ ಪ್ರೊಫೆಸರ್ ಈವರೆಗೆ ಮಾಡಿದ್ದಾರೆ? ನಮ್ಮ ಎಂ. ಎ. ವಿದ್ಯಾರ್ಥಿಗಳಿಗೆ ನಾನು ಮೊದಲು ಓದಿಸಹಚ್ಚುವುದು ಕುರ್ತಕೋಟಿಯವರ 'ಯುಗಧರ್ಮ ಹಾಗೂ ಸಾಹಿತ್ಯ ದರ್ಶನ' ಮತ್ತು ಅನಂತಮೂರ್ತಿಯವರ 'ಪ್ರಜ್ಞೆ ಮತ್ತು ಪರಿಸರ'ಗಳಂಥ ಕೃತಿಗಳನ್ನು. ನಮ್ಮ ಸಾಹಿತ್ಯ ವಿಮರ್ಶೆಯ ಮೈಲುಗಲ್ಲುಗಳು ಅವು. ಅವುಗಳನ್ನು ಅಧ್ಯಯನ ಮಾಡದೆ ಅವರು ಎಂ.ಎ. ವಿದ್ಯಾರ್ಥಿಗಳಾಗಲಾರರು. ಆದ ಪಕ್ಷಕ್ಕೆ ಅದು ಅವರಿಗೂ ಅವಮಾನ, ಪಾಠ ಹೇಳಿದ ನಮಗೂ ಅವಮಾನ.

ಕನ್ನಡ ಸಾಹಿತ್ಯಕ್ಕೆ ವಿಮರ್ಶೆಯ ವಿವೇಕ ತಂದು ಕೊಟ್ಟ ಕೀರ್ತಿನಾಥರನ್ನು ಕೇವಲ ಗೆಳೆಯರೆಂದರೆ ಅವಿನಯದ ಮಾತಾದೀತು. ನನ್ನಂಥ ಅನೇಕ ಜನಕ್ಕೆ ಅವರು ಪರೋಕ್ಷ ಗುರು. ಅವರಿಗೆ ನನ್ನ ಕೃತಜ್ಞತೆಯ ನಮಸ್ಕಾರ.

●

ಕುರ್ತಕೋಟಿಯ ಕೀರ್ತಿನಾಥ ಗೌಡರು

ಕೀರ್ತಿನಾಥರು ಇವರು ಕಾಣೆಯಿಲ್ಲದ ಹಾಗೆ
ತಕ್ಕಡಿಯ ತೂಗಿದವರು.
ಆಕಾಶ ಭೇದಿಸುವ ಕಣ್ಣಿನವರಾದರೂ
ತರಕಾರಿ ದರಗಳನು ಮರೆಯದವರು.
ಸೋಲಜೊತೆ ಸಾಮೀಲರಾದ ಸಿನಿಕರ ಸಿಡುಕ
ದಯಮಾಡಿ ಕ್ಷಮಿಸದವರು.
ತಾಂಬೂಲದೆಂಜಲಲಿ ಮುಖಬೆಳಗಿ ನಗುವವರು
ಹಾಗೆಯೇ ಧಾರಾಳ ಉಗಿಯುವವರು.
ಜಂಗಮರು; ಹಿಂದು ಮುಂದುಗಳಲ್ಲಿ ಸಂಚರಿಸಿ
ಸತ್ತುದರ ನೆತ್ತಿ ಗಂಗಾಲನಿಟ್ಟವರು.
ಹಾಗೆಯೇ ಚಿಗುರಿಗೂ ಹಸಿರ ದೀಕ್ಷೆಯ ಕೊಟ್ಟು
ಹಣ್ಣು ಆಗುವ ಗುಟ್ಟ ಹೇಳಿಕೊಟ್ಟವರು.
ಹುಟ್ಟಾ ಅದ್ವೈತಿಗಳು: ಸದ್ದಿಲ್ಲ ಶಬ್ದಕ್ಕೆ;
ಎರಡಲ್ಲ ಶಬ್ದಾರ್ಥ ಒಂದೆಂದಿರಿ.
ಡೀಕೋಡಿಸಿದಿರಯ್ಯ ಶಿವಪಾರ್ವತಿಯ ನಂಟು
ಭಾಗ್ಯವಂತರ ಭಾಷೆ ಕನ್ನಡದಲಿ.
ಬೇರೆ ಕಲರುಗಳನ್ನ ಬೆರಕೆ ಮಾಡದೆ ಶುದ್ಧ
ಹಸಿರಲದ್ದಿದ ಹೊಸಾ ಕನಸುಗಳನು
ಕಣ್ಣು ತುಂಬಾ ಕೊಟ್ಟು ನಮ್ಮ ಕಳಿಸಿದಿರಯ್ಯ
ತೋರಿ ದೂರದ ಹೊಳೆವ ಕ್ಷಿತಿಜವನ್ನು.
ನಿಮ್ಮ ಭಾಗದ ಗಾಳಿ ನಮ್ಮ ಕಡೆ ಬೀಸಿದರೆ

ನಿಮ್ಮದೇ ನೆನಪು ನಮಗೆ.
ಅಷ್ಟೋ ಇಷ್ಟೋ ದಾರಿ ನಡೆದೆವಯ್ಯಾ ನಿಮ್ಮ
ಕಣ್ಣುಗಳ ಬೆಳಕಿನೊಳಗೆ.
ನಮ್ಮ ಚಿತ್ತದಲೊಂದು ಬಿಳಿಯ ಕಂಬಳಿ ಹಾಸಿ
ಮ್ಯಾಲೆ ಕುಂತಿರಿ ಇಂಬು ಉಳಿಯದಂತೆ.
ಜರದಾ ಜಗಿಯೋದನ್ನ ಬಿಟ್ಟು ನೋಡಿರಿ ಸೊಲ್ಪ
ಗೌಡರೇ, ನಮ್ಮ ನಿಜ ಕಂಡುಬಂತೆ?

– ಚಂದ್ರಶೇಖರ ಕಂಬಾರ

ಗಡಿ ದಾಟಿ ಇಡೀ ಕನ್ನಡವಾದ ಎ. ಕೆ. ರಾಮಾನುಜನ್

ಸುಮಾರು ಮೂರು ವರ್ಷಗಳಷ್ಟು ಹಿಂದಿನ ಮಾತು. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಕೈಸಾಲೆ, ಅದು ಬಿರಿದು ಹೋಗುತ್ತದೆ ಎನ್ನುವಷ್ಟು ಜನ. ಬಂದವರಲ್ಲಿ ಅನೇಕರು ಕವಿಗಳು, ವಿಮರ್ಶಕರು, ಸಾಹಿತ್ಯ ಪ್ರಾಧ್ಯಾಪಕರು. ಗಾಂಧೀ ವಿಶ್ವವಿದ್ಯಾಲಯದ ಕುಲಪತಿ ಅನಂತಮೂರ್ತಿ ಜಾಗವಿಲ್ಲದೆ ಕೈಸಾಲೆಯ ಒಂದು ಮೂಲೆಯಲ್ಲಿ ನಿಂತಿದ್ದಾರೆ. ಇಷ್ಟೆಲ್ಲ ಜನ ಜಮಾಯಿಸಿರುವುದು ಒಂದು ಕವಿತಾವಾಚನ ಕೇಳುವುದಕ್ಕೆ! ಎಲ್ಲರ ಮುಖದಲ್ಲಿ ಏನೋ ನಿರೀಕ್ಷೆ, ಕುತೂಹಲ; ಗರಿಗರಿಯಾದ ಹೊಸ ಬರೆಹವೊಂದಕ್ಕೆ ಢಿಕ್ಕಿಯಾಗುವ ಸಂಭ್ರಮ.

ರಾಮಾನುಜನ್ ಎದ್ದು ನಿಂತರು. ಅವರ ಕೈಯಲ್ಲಿ ಒಂದು ಫೈಲು. ಅದರ ತುಂಬ ಹೊಸ ಹೊಸ, ಬಿಸಿಬಿಸಿ ಪದ್ಯಗಳು. ಎಷ್ಟೊಂದು ಜನ, ಏನು ನಿರೀಕ್ಷೆ, ಎಂಥ ಪ್ರೀತಿ! ಅದರೆದುರು ಸಂಕೋಚದಿಂದ ಮುದುಡಿಹೋದಂತೆ ಕಂಡರು ರಾಮಾನುಜನ್. ವಾಚನ ಆರಂಭವಾಯಿತು. ಮೊದಲಲ್ಲಿ ತೀರ ಮೆಲುದನಿ, ಎಲ್ಲರಿಗೂ ಕೇಳಲಾರದೋ ಎನ್ನುವಂತೆ. ಒಂದು ನಿಮಿಷ ಅಷ್ಟೆ. ಮುಂದೆ ಸಭೆಯ ಹೆಪ್ಪುಗಟ್ಟಿದ ಮೌನದ ಮೇಲೆ ಅದೊಂದೇ ದನಿಯ ಹರಿದಾಟ, ವಿಲಾಸ. ಸಭೆ ಸಂಪೂರ್ಣ ವಶವಾದ ಅಧಿಪತ್ಯ.

ಮೊದಲ ಪದ್ಯ ಕುಂಟೋಬಿಲ್ಲೆ, ಹೆಸರೇ ಆಕರ್ಷಕ. ಚಿಕ್ಕಂದಿನಲ್ಲಿ ನಾವೆಲ್ಲ ಆಡಿದ್ದ ಒಂದು ಸಾಮಾನ್ಯ ಆಟ, ತಾನು ಎಸೆದ ಕುಂಟೋಬಿಲ್ಲೆಯನ್ನು ತಾನೇ ಅರಸುತ್ತ, ಕುಂಟುತ್ತ, ಒದೆಯುತ್ತ ಗಡಿ ದಾಟಿಸಿದರೂ ಮತ್ತೆ ಹೊರಟಲ್ಲಿಗೇ ವಾಪಸ್ಸಾಗಿ ಅದೇ ಆಟ ಹೂಡುವುದನ್ನು ಹೇಳುವ ಕವಿತೆ. ನಮ್ಮ ಓಣಿ ಕೇರಿಗಳಲ್ಲಿ ಆಡಿ, ನಮ್ಮದು ಮಾತ್ರ ಎಂದುಕೊಂಡ ಈ ಕಂತ್ರಿ ಆಟ ಜಗತ್ತಿನ ಎಲ್ಲ ಓಣಿಕೇರಿಗಳಲ್ಲಿ

ಪ್ರತ್ಯಕ್ಷವಾಗುವ ಸೋಜಿಗ. ಕವಿತೆ ಮೇಲುನೋಟಕ್ಕೆ ಆ ಆಟದ ಒಂದು ಸಾಮಾನ್ಯ ವರ್ಣನೆ. ಆದರೆ ನಡುವೆ ನುಸುಳುವ ಮಾತುಗಳು – ತವರು, ಮೈನೆರೆಯುವುದು, ಬಿಳಿ ಹಳದಿ ಕಪ್ಪು, ಬಾಂಬು, ಪೋಲಿಯೋ ವಕ್ರಿಸಿದ ಕಾಲು, ಚಿಕ್ಕಂದು ಮುಕ್ಕಿದ ಬೀದಿಮಣ್ಣು, ಅದರಲ್ಲಿ ತೆರೆದುಕೊಳ್ಳುವ ವಿಶ್ವರೂಪ, ಇತ್ಯಾದಿ – ಕವಿತೆಯನ್ನು ಸಾಮಾನ್ಯತೆಯಿಂದ ಮೇಲೆತ್ತಿ ವಿಶಾಲ ಧ್ವನಿ ಪ್ರಪಂಚವೊಂದಕ್ಕೆ ಹಾರಿಸಿಬಿಡುವ ಕೌಶಲ. ವ್ಯಂಜನಾರ್ಥಕ್ಕೆ ಹಾಯುವ ಧ್ವನಿಪೂರ್ಣ ಕವಿತೆಯಾಗಿದ್ದರೂ ವಾಚ್ಯ ಪ್ರತೀಕವನ್ನೇ ಗಟ್ಟಿಗೊಳಿಸುತ್ತ ಅರ್ಥಾಂತರ ಸಂಕ್ರಮಿತ ವಾಚ್ಯಧ್ವನಿಗೆ ಕದ ತೆರೆಯುವ ಚತುರತೆ. ಬಾಂಬು ಪೋಲಿಯೋ ವಕ್ರಿಸಿದ ಕಾಲಿದ್ದರೆ ಜಗತ್ತಿನ ಜನವೆಲ್ಲ ಆಡುವುದು ಈ ಆಟವನ್ನೇ ! ಮಣ್ಣು ಮುಕ್ಕಿದ ಕಂದ ಕೃಷ್ಣನ ಬಾಯಲ್ಲಿ ಯಶೋದೆ ಕಂಡ ವಿಶ್ವರೂಪ ಕುಂಟೋಬಿಲ್ಲೆ ಆಡುತ್ತ ಮಣ್ಣುಮುಕ್ಕಿದ ಬಾಲ್ಯಕ್ಕೆಲ್ಲ ದಕ್ಕಬಹುದಾದ್ದೇ!

ಅರ್ಥವೇನು?

ಮುಂದಿನ ಕವಿತೆ 'ಹಳೆಯದೊಂದು ಮತ್ತೆ ಮನೆಗೆ ಬಂದಾಗ' ಇನ್ನೂ ವ್ಯಂಜಕವಾದದ್ದು. ಚಿಕ್ಕಂದಿನಲ್ಲಿ ಬಂದು, ಮನೆ ಹೊಕ್ಕು ಎಲ್ಲರ ಜೊತೆ ಆಟವಾಡಿ ಹೋದ ಆನೆಕರೋಟಿಯ ಮರಿಯಾನೆ ಈಗ ಮನೆಯೆತ್ತರವನ್ನೇ ಮೀರಿ ಬೆಳೆದಿದೆ. ಮನೆಯ ಬಳಿ ಬಂದರೂ ಅದನ್ನು ಒಳಗೆ ಕರೆಯುವಂತಿಲ್ಲ. ಕರೆಯುವುದೆಂದರೆ ಮನೆಮಾರೆಲ್ಲ ಧ್ವಂಸವಾದಂತೆಯೇ. ಒಂದು ಚಿಪ್ಪು ರಸಬಾಳೆ ತರಿಸಿಕೊಟ್ಟು ಉಪಾಯವಾಗಿ ಸಾಗಹಾಕುವುದೊಂದೇ ದಾರಿ. ಬಗೆ ಬಗೆ ಅರ್ಥಗಳಿಗೆ ದನಿಕೊಡಲು ಹವಣಿಸುವ ಈ ಧ್ವನಿದೀಪ್ತ ರೂಪಕದ ಆಶಯ ಯಾವುದೇ ಖಚಿತಾರ್ಥದ ಗಡಿಯಾಚೆಗೇ ಉಳಿಯುತ್ತದೆ. ಮನುಷ್ಯ ಕಟ್ಟಿಕೊಳ್ಳುವ ರಕ್ಷಣೆಗಳೇ ಅವನಿಗೆ ಮಿತಿಗಳೆಂದೇ? ಬಾಲ್ಯದ ಬೆರಗಿಗೆ ದಕ್ಕುವ ಅನುಭವಗಳು ಬೆಳೆದ ಸ್ವಾರ್ಥದ ಪರಿಧಿಯೊಳಗೆ ಹಾಯಲಾರವೆಂದೇ? ಆನೆ ತನ್ನ ಕರೋಟಿ ಮೀರಿ ಬೆಳೆದಿದೆ; ಹೊರಗೆ ಬಂದಿದೆ. ಆದರೆ ದೇಶ ತಿರುಗಿ, ಕೋಶ ಓದಿ ಪಂಡಿತನೆನಿಸಿದ ತಾನು ಎಲ್ಲ ಬಂಧು ಪರಿವಾರ ಸಹಿತವಾದ ಹಳೆ ಮನೆಯೊಳಗೆ ಹೋಗಲಾರೆನೆಂದೇ? ಪದ್ಯದೊಳಗೆ ಒಂದು ಆನೆಯಿದೆ. ಆದರೆ ಶೀರ್ಷಿಕೆಯಲ್ಲಿ ಅದು ಬರಿಯ ಏನೋ 'ಒಂದು' ಆಗಿ ತಾನೇನಿದ್ದರೂ ಕೇವಲ ಪ್ರತೀಕ ಎಂದು ತೋರಿಸಿಕೊಂಡಿದೆ. ಓದುವಾಗ ಪದ್ಯ ತುಂಬ ಸರಳ, ಮೋಸಗೊಳಿಸುವಷ್ಟು ಸರಳ. ಓದಿದ ಮೇಲೆ ಪದ–ಅರ್ಥಗಳು ಹೂಡುವ ಕಣ್ಣುಮುಚ್ಚಾಲೆ, ಮುಗಿಯದ ಜೂಟಾಟ. ಎಲ್ಲೋ ಬಸ್ಸಿನಲ್ಲಿ ಕೂತಾಗ, ರೆಸ್ಟೋರೆಂಟಿನಲ್ಲಿ ಕಾಫಿ ಗುಟುಕರಿಸುವಾಗ ಥಟ್ಟನೆ ಮನಸ್ಸಿಗೆ ಹಾದು ಸರಸಕ್ಕೆ ಕರೆಯುವ ರೂಪಕಕವಿತೆ.

ಹೀಗೆಯೇ ಜೆನ್ ಒಂದು, ಜೆನ್ ಎರಡು, ಬೆಸ್ತರು, ಭ್ರಾಂತಿಗೊಂದು ಶಾಂತಿ, ಒಂದು ಕ್ಷಣ, ನೆನ್ನೆ – ಮೊದಲಾದ ಚುರುಕಾದ, ಸುಟಿಯಾದ, ಸೀ ಆಳದ ವಿಲಕ್ಷಣ ಪದ್ಯಗಳು. 'ಸಂಶಯಭಕ್ತಿ'ಯಂತೂ ರಾಮಾನುಜನ್ನರ ಈವರೆಗಿನ ಶ್ರೇಷ್ಠ ಪದ್ಯಗಳಲ್ಲೊಂದು. ನಾಸ್ತಿಕನ ಮನದಾಳದಲ್ಲೂ 'ಮರೆಯದ ತಾಯ್ನುಡಿಯ ಸುಪ್ತವ್ಯಾಕರಣದ ಹಾಗೆ' ಅಡಗಿ ಆಡಿಸುವ ಆಸ್ತಿಕತೆಯ ಕಥೆ.

ರಾಮಾನುಜನ್ ವಾಚನ ಮುಗಿಸುವ ಹೊತ್ತಿಗೆ ಸಮಯ ಒಂದು ಗಂಟೆಯ ಮೇಲಾಗಿತ್ತು. ಯಾರಿಗೂ ಅದರ ಪರಿವೆ ಇಲ್ಲ. ಸಭೆ ಚೆದುರುತ್ತಿರುವಾಗ ಅನಂತಮೂರ್ತಿ ಹೇಳಿದರು. 'ಭಟ್ಟ, ಕನ್ನಡ ಭಾಷೆಯ ಸೂಕ್ಷ್ಮತೆ ಅರ್ಥಶಕ್ತಿ ರಾಮಾನುಜನ್ ಪದ್ಯಗಳಲ್ಲಿ ಹೇಗೆ ಒಡೆದು ಕಾಣುತ್ತದೆ ಅಲ್ಲವಾ?'

'ಕುಂಟೋಬಿಲ್ಲೆ' ನಲವತ್ತನಾಲ್ಕು ಪದ್ಯಗಳ ಸಂಕಲನ. ರಾಮಾನುಜನ್ನರ ಮೂರನೆಯ, ಇತ್ತೀಚಿನ ಸಂಕಲನ. ಎಲ್ಲ ಪದ್ಯಗಳಲ್ಲಿ ಮಾತಿನ ಅರ್ಥದ ನಿರೂಪಣೆಯ ಏನಾದರೊಂದು ನವೀನತೆ. ಪ್ರತಿಭೆ ನವನವೋನ್ಮೇಷಶಾಲಿನಿ ಎನ್ನುವುದು ನಿಜವಾದರೆ ರಾಮಾನುಜನ್ ಕಾವ್ಯ ಒಂದು ವಿನೂತನ ಪ್ರತಿಭಾಸೃಷ್ಟಿ.

ಕವಿತೆಯನ್ನು ಸಾಮಾನ್ಯತೆಗೆ ಜಗ್ಗಿಬಿಡುವ ಎರಡು ಅತಿಗಳಿವೆ; ಒಂದು ಖಚಿತಾರ್ಥತೆ, ಇನ್ನೊಂದು ಅತಿವ್ಯಾಪಕತೆ. ತಲೆ ಮೇಲೆ ನಿರ್ದಿಷ್ಟ ಅರ್ಥದ ಮೊಳೆ ಹೊಡೆಸಿಕೊಳ್ಳುವ ಕವಿತೆ ಅಷ್ಟಕ್ಕೇ ಮಿತವಾಗಿ ಬಿಡುತ್ತದೆ. ಹಾಗೆಯೇ ಯಾವ ಅರ್ಥದ ಜೊತೆಗೂ ಕೈಕುಲುಕದ ಪದ್ಯ ಯಾರಿಗೆ, ಯಾಕೆ ತಾನೇ ಬೇಕಾಗುತ್ತದೆ? ಅಂಥ ಪದ್ಯ ಒಣಗಿದ ಕೊರಡಿನ ಹಾಗೆ; ಚಿಗುರಲೊಲ್ಲದ್ದು, ಚಲಿಸಲೊಲ್ಲದ್ದು. ರಾಮಾನುಜನ್ನರ ಪ್ರತೀಕಾತ್ಮಕ ಕವಿತೆ ಈ ಎರಡರಿಂದಲೂ ಭಿನ್ನ. ಅದು ಹಚ್ಚಿಟ್ಟ ಧೂಪದಂತೆ ಇದ್ದಲ್ಲಿ ಇರುತ್ತಲೇ ಪರಿಮಳವಾಗಿ ಹಬ್ಬುತ್ತದೆ. ವಾಚ್ಯದಲ್ಲಿ ಸ್ಥಳಬದ್ಧವಾಗಿರುತ್ತಲೇ ಧ್ವನಿಯ ನೆಲೆಯಲ್ಲಿ ಸ್ಥಿತ್ಯಂತರ ಪಡೆಯುತ್ತಿರುತ್ತದೆ; ಬುದ್ಧಿಯನ್ನು ಕೆಣಕುತ್ತಲೇ ಅದರ ತೆಕ್ಕೆಯೊಳಗೆ ಸಿಕ್ಕಿಬೀಳದಷ್ಟು ಚಲನಶೀಲವಾಗಿರುತ್ತದೆ.

ಕನ್ನಡ ನಾಡು ಹೊರಜಗತ್ತಿಗೆ ನೀಡಿದ ಒಂದು ಹಿರಿಯ ಅಂತಾರಾಷ್ಟ್ರೀಯ ವ್ಯಕ್ತಿತ್ವ ರಾಮಾನುಜನ್. ಅವರು ನಮ್ಮ ಕಾಲದ ಪ್ರತಿಭಾವಂತ ಮೇಧಾವಿಗಳಲ್ಲಿ ಒಬ್ಬರು. ಭಾರತದಲ್ಲಿ ಕೆಲ ಕಾಲ ಅಧ್ಯಾಪಕರಾಗಿ ಕೆಲಸ ಮಾಡಿದ ರಾಮಾನುಜನ್ ಮುಂದೆ ಭಾಷಾಶಾಸ್ತ್ರದ ಅಧ್ಯಯನಮಾಡಿ ಅಮೆರಿಕಕ್ಕೆ ಹೋದರು. ಷಿಕಾಗೋ ವಿಶ್ವವಿದ್ಯಾಲಯದಲ್ಲಿ ಮಾನವಶಾಸ್ತ್ರ, ಭಾಷಾಶಾಸ್ತ್ರ, ಜಾನಪದ ಮತ್ತು ದಕ್ಷಿಣ ಏಷ್ಯಾದ ಭಾಷೆ ಸಂಸ್ಕೃತಿಗಳ ಪ್ರೊಫೆಸರ್ ಆಗಿ ಪಾಠ ಹೇಳಿದರು. ವಿಸ್‌ಕಾನ್‌ಸಿನ,

ಬರ್ಕ್ಲಿ ಮತ್ತು ಮಿಷಿಗನ್ ವಿಶ್ವವಿದ್ಯಾಲಯಗಳಿಗೆ ಆಹ್ವಾನಿತ ಪ್ರಾಧ್ಯಾಪಕರಾಗಿ ಹೋಗಿ ಪ್ರವಚನ ನೀಡಿದರು. ಇವೆಲ್ಲ ಮಾಡುತ್ತಲೇ ಕನ್ನಡ, ಇಂಗ್ಲಿಷ್ ಭಾಷೆಗಳಲ್ಲಿ ಮಹತ್ವದ ಬರಹ ಪ್ರಕಟಿಸಿದರು. ಆಧುನಿಕ ಕನ್ನಡ ಕಾವ್ಯಚರಿತ್ರೆಯಲ್ಲಿ ತಮ್ಮ ವಿಶಿಷ್ಟ ಅಭಿವ್ಯಕ್ತಿಗಾಗಿ ರಾಮಾನುಜನ್ನರಿಗೆ ಗಣ್ಯವಾದ ಸ್ಥಾನವಿದೆ. ಅವರು ಎಷ್ಟು ಸೃಜನಶೀಲರೋ ಅಷ್ಟೇ ದೊಡ್ಡ ವಿದ್ವಾಂಸರೂ ಸಹ. ತಮಿಳು ಕನ್ನಡ ಮಲಯಾಳಗಳಿಂದ ಮೌಲಿಕವಾದ ಕಾವ್ಯಭಾಗಗಳನ್ನು ಅವರು ಇಂಗ್ಲಿಷಿಗೆ ಅನುವಾದಿಸಿ ವ್ಯಾಖ್ಯಾನಿಸಿದ್ದಾರೆ. ಆ ಮೂಲಕ ದ್ರಾವಿಡ ಸಂಸ್ಕೃತಿಯನ್ನು ಮೊದಲ ಬಾರಿಗೆ ಪಾಶ್ಚಾತ್ಯ ಜಗತ್ತಿಗೆ ಅನಾವರಣ ಮಾಡಿದ ಅಪೂರ್ವ ಶ್ರೇಯಸ್ಸು ಅವರದು. ಇಂಥ ಘನವಾದ ಕೆಲಸ ಮಾಡಿದವರೆಂದೇ ಮೆಕಾರ್ಥರ್ ಫೌಂಡೇಷನ್ ಅವರಿಗೆ ೨.೬ ಲಕ್ಷ ಡಾಲರುಗಳ (ಎಂದರೆ ಸುಮಾರು ೭೫ ಲಕ್ಷ ರೂಪಾಯಿಗಳ) 'ಜೀನಿಯಸ್ ಅವಾರ್ಡ್' ಇತ್ತು ಪುರಸ್ಕರಿಸಿತು. ಅಮೆರಿಕದ 'ಆರ್ಟ್ಸ್ ಅಂಡ್ ಸೈನ್ಸ್ ಕಾಂಗ್ರೆಸ್' ತನ್ನ ಫೆಲೋಷಿಪ್ ನೀಡಿತು. ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿ ಕೊಟ್ಟು ಗೌರವಿಸಿತು. ಕನ್ನಡ ನಾಡಿಗೆ ಈ ಕನ್ನಡಿಗನ ಬಗ್ಗೆ ಹೆಚ್ಚು ಗೊತ್ತಿಲ್ಲದಿದ್ದರೂ ತಮಿಳುನಾಡು ಅವರ ಕೊರಳಿಗೆ ಚಿನ್ನದ ಪದಕ ಹಾಕಿ ಕೈಮುಗಿಯಿತು. ಕವಿಯೆಂದು, ಅನುವಾದಕನೆಂದು, ವಿದ್ವಾಂಸನೆಂದು, ಬೇರೆ ಯಾವ ಕನ್ನಡಿಗನಿಗೂ ದೊರೆಯದ ಅಂತಾರಾಷ್ಟ್ರೀಯ ಮನ್ನಣೆ ರಾಮಾನುಜನ್ನರನ್ನು ಹುಡುಕಿಕೊಂಡು ಬಂತು.

ಇಂಥ ಮೇಧಾವಿಯಾಗಿದ್ದೂ ರಾಮಾನುಜನ್ ಬಿಗಿದ ಹುಬ್ಬಿನ ಗಂಟುಮೋರೆಯ ದರ್ಪಿಷ್ಟ ವ್ಯಕ್ತಿಯಾಗಿರಲಿಲ್ಲ. ಅವರದು ಪ್ರಫುಲ್ಲವಾದ, ಪ್ರಸನ್ನವಾದ ವ್ಯಕ್ತಿತ್ವ, ಅಪರಿಚಿತರ ನಡುವೆಯೂ ಅವರು ಗಳಾಬಿಳಿಯಾಗಿ, ತಮಾಷೆಯಾಗಿ, ಚುರುಕಾಗಿ ಮಾತಾಡುತ್ತಾ ಬೆರೆಯುತ್ತಿದ್ದವರು; ಮಾತನ್ನು ಶ್ಲೇಷೆಗೆ ತಿರುಗಿಸುತ್ತ, ಧ್ವನಿಗೆ ಹೊರಳಿಸುತ್ತ, ವಿಡಂಬನೆಗೆ ಮುಟ್ಟಿಸುತ್ತ ವಾತಾವರಣಕ್ಕೆ ಕಾವು ಕೊಡುತ್ತಿದ್ದವರು. ಬೆಳಗಾವಿಯಲ್ಲಿ ಅವರು ಅಧ್ಯಾಪಕರಾಗಿದ್ದರಷ್ಟೆ. ಒಮ್ಮೆ ಅವರು ಕ್ಲಾಸಿಗೆ ಹೋದಾಗ ಅದು ಗಲಾಟೆಯಿಂದ ತುಂಬಿಹೋಗಿತ್ತು. ರಾಮಾನುಜನ್ ಹುಡುಗರನ್ನು ನೋಡಿ 'Remember that you are on benches, not on branches' ಎಂದರು. ಹುಡುಗರಲ್ಲಿ ಯಾರೋ ಒಬ್ಬ ಕಿಲಾಡಿ ಕೂಡಲೇ 'ಸಾರ್ ನೀವು ಇದನ್ನು ಹಿಂದೆ ಒಂದು ಸಲ ಹೇಳಿದ್ದಿರಿ' ಎಂದ. ಬೇರೆ ಯಾರೇ ಆದರೂ ಆ ಮಾತಿಗೆ ಪೆಚ್ಚಾಗಬೇಕು ಅಥವಾ ಸಿಟ್ಟಾಗಬೇಕು. ಆದರೆ ರಾಮಾನುಜನ್ ಥಟ್ಟನೆ 'ಓ ಹಾಗೋ,' 'I never thought that monkeys have such memory!' ಎಂದು ಮತ್ತೂ ಒಂದು ಬಾಣ ಎಸೆದರು. ಇದು ರಾಮಾನುಜನ್ನರು ಪ್ರತಿಕ್ರಿಯಿಸುತ್ತಿದ್ದ ರೀತಿ. ಮಾತೆತ್ತಿದರೆ ಸಾಕು ಅವರಿವರ ಪದ್ಯ quote ಮಾಡುತ್ತ ಎಲ್ಲರನ್ನೂ ಪೆಚ್ಚು

ಮಾಡುತ್ತಿದ್ದ ಕವಿ ನಾಡಿಗರು ಒಮ್ಮೆ ರಾಮಾನುಜನ್ನರೂ ಇದ್ದಾಗ ತಮ್ಮ ಶಕ್ತಿ ವಿಶೇಷವನ್ನು ಮೆರೆದರು. ರಾಮಾನುಜನ್ ಕೂಡಲೆ 'ಆಹಾ, ಈ ನಾಡಿಗರನ್ನು ನೋಡಿ, ಹೋದ ಜನ್ಮದಲ್ಲಿ ಟೈಲರ್ ಆಗಿದ್ದರೂಂತ ಕಾಣುತ್ತೆ. ಎಷ್ಟೊಂದು 'ಕೋಟ್' ಮಾಡ್ತಾರೆ' ಅಂತ ಹೇಳಿ ಊದಿದ ಬಲೂನಿಗೆ ಸೂಜಿ ತಾಗಿಸಿಬಿಟ್ಟರು!

ರಾಮಾನುಜನ್ ಷಿಕಾಗೋ ವಿಶ್ವವಿದ್ಯಾಲಯದಲ್ಲಿ ಭಾಷಾಶಾಸ್ತ್ರದ ಸಂಬಂಧದಲ್ಲಿ ನೇಮಕಗೊಂಡಿದ್ದರೂ ಆ ಅಧ್ಯಯನದಲ್ಲೇ ಮುಂದುವರಿಯುವುದು ಅವರಿಗೆ ಅಷ್ಟೊಂದು ಪ್ರಿಯವಾಗಿರಲಿಲ್ಲ. ಇದ್ದುದನ್ನೇ ವಿಂಗಡಿಸಿ ವಿಶ್ಲೇಷಿಸುವ ಕೆಲಸಕ್ಕಿಂತ ಹೊಸದನ್ನು ಸೃಷ್ಟಿಸುವ, ಹೊಳೆಸುವ ಕೆಲಸ ಅವರಿಗೆ ಇಷ್ಟವಾಗಿತ್ತು. ತಾವು ಮಾಡಬೇಕಾದ ಕಾರ್ಯದ ಖಚಿತ ಕಲ್ಪನೆ ಇಲ್ಲದೆ ಅವರು ಗೊಂದಲದಲ್ಲಿದ್ದ ದಿನಗಳು ಅವು. ಆಗ ಒಂದು ಅನೀರಿಕ್ಷಿತ ಘಟನೆ ಜರುಗಿ ಅವರ ದಾರಿ ತಾನಾಗಿ ತೆರೆದುಕೊಂಡಿತು.

೧೯೬೨ನೆಯ ಇಸವಿ. ರಾಮಾನುಜನ್ ಆಗ ಶಿಕಾಗೋ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರು. ಒಂದು ದಿನ ರಾಮಾನುಜನ್ ಯೂನಿವರ್ಸಿಟಿ ಲೈಬ್ರರಿಯ ಕೆಳಮನೆಗೆ ಬಂದರು. ಅಲ್ಲಿ ಇನ್ನೂ ವಿಂಗಡಣೆಯಾಗದ ಪುಸ್ತಕಗಳ ಒಂದು ದೊಡ್ಡ ರಾಶಿಯೇ ಇತ್ತು. ವಿಶ್ವವಿದ್ಯಾಲಯ ತಮಿಳುನಾಡಿನ ವಿದ್ವಾಂಸರೊಬ್ಬರಿಂದ ತರಿಸಿಕೊಂಡಿದ್ದ ಭಾರಿ ಪುಸ್ತಕಸಂಗ್ರಹ ಅದು. ರಾಮಾನುಜನ್ ತಮಿಳು ಶಾಲಾವ್ಯಾಕರಣವೊಂದರ ಹುಡುಕಾಟದಲ್ಲಿದ್ದರು. ಅದು ಆ ಸಂಗ್ರಹದಲ್ಲಿ ಸಿಕ್ಕಬಹುದೆಂಬ ಆಸೆಯಿಂದ ಅದನ್ನು ಒಂದು ಕಡೆಯಿಂದ ಕೆದಕತೊಡಗಿದರು. ಒಂದು ಪುಸ್ತಕ ಆಕಸ್ಮಾತ್ತಾಗಿ ಅವರ ಗಮನ ಸೆಳೆಯಿತು. ಅದು ಪ್ರಸಿದ್ಧ ತಮಿಳುವಿದ್ವಾಂಸ ಸ್ವಾಮಿನಾಥ ಅಯ್ಯರ್ ಸಂಪಾದಿಸಿದ್ದ ಪ್ರಾಚೀನ ತಮಿಳು ಪದ್ಯಗಳ ಸಂಗ್ರಹ. ಅದರಲ್ಲಿ ಪದ್ಯಗಳಿಗೆ ಬರೆದ ಸೊಗಸಾದ ಗದ್ಯವ್ಯಾಖ್ಯಾನವೂ ಇತ್ತು. ರಾಮಾನುಜನ್ ಅದರಿಂದ ಎಷ್ಟು ಆಕರ್ಷಿತರಾದರೆಂದರೆ ಪುಸ್ತಕರಾಶಿಯ ಬದಿಯಲ್ಲೇ ಕೂತು ಪದ್ಯಗಳನ್ನು ಓದುತ್ತ ಹೋದರು. ಪದ್ಯಗಳ ಸರಳತೆ, ಚೆಲುವು, ಧ್ವನಿಶಕ್ತಿ ಅವರ ಮನಸ್ಸನ್ನು ಕಲಕಿಬಿಟ್ಟವು . ತಮ್ಮ ಮಾತೃಭಾಷೆಯಲ್ಲೇ ಸೃಷ್ಟಿಯಾಗಿದ್ದ, ಅತ್ಯಂತ ಪ್ರಾಚೀನವಾದ ಅದ್ಭುತ ಕಾವ್ಯಪ್ರಪಂಚವೊಂದು ಅವರನ್ನು ಹಠಾತ್ತಾಗಿ ಎದುರುಗೊಂಡಿತ್ತು. ಅವರು ಬಂದದ್ದು ಒಂದು ಶಾಲಾವ್ಯಾಕರಣ ಹುಡುಕುವುದಕ್ಕೆ. ಸಿಕ್ಕಿದ್ದೋ ಇಂಥ ಅನಿರೀಕ್ಷಿತ ಕಾವ್ಯನಿಧಿ! ರಾಗಿ ಭಿಕ್ಷೆ ಎತ್ತಲು ಹೊರಟವನಿಗೆ ರಾಜ್ಯವೇ ಸಿಕ್ಕಂತಾಗಿತ್ತು. ತನ್ನನ್ನು ಹೀಗೆ ಚಕಿತಗೊಳಿಸಿದ, ತನ್ನ ಭಾಷೆಯದೇ ಆದ ಈ ಯಕ್ಷಲೋಕವನ್ನು ಪಾಶ್ಚಾತ್ಯರಿಗೆ ಪರಿಚಯ ಮಾಡಿಕೊಡಬೇಕೆಂಬ ಲವಲವಿಕೆ ಅವರ ಮನಸ್ಸನ್ನು ವ್ಯಾಪಿಸಿಕೊಂಡಿತು.

ಇದರ ಫಲವಾಗಿ ಮುಂದೆ ಹತ್ತು ವರ್ಷಗಳ ಕಾಲ ರಾಮಾನುಜನ್ ದ್ರಾವಿಡ ಭಾಷೆಗಳ ಶ್ರೇಷ್ಠಕವಿತೆಗಳ ಅನುವಾದದಲ್ಲಿ ಮುಳುಗಿ ಹೋದರು. ಅನುವಾದವೆನ್ನುವುದಕ್ಕಿಂತ ಇಂಗ್ಲಿಷಿನಲ್ಲಿ ಆ ಕೃತಿಗಳ ಪುನರ್ಭವಕ್ಕೆ ಕಾರಣರಾದರು ಎಂದರೆ ಸರಿಯಾದೀತು. ದಕ್ಷಿಣ ಭಾರತದ ವಿಶಿಷ್ಟ ಸಂಸ್ಕೃತಿಯನ್ನು ಗರ್ಭೀಕರಿಸಿಕೊಂಡ ಕೃತಿಗಳನ್ನು ಅವರು ಒಂದಾದ ಮೇಲೊಂದರಂತೆ ಅನುವಾದಿಸುತ್ತ ಹೋದರು. Interior Landscape, poems of Love and War, Speaking of Shiva, Hymns to the drowning – ಈ ಕೃತಿಗಳು ರಾಮಾನುಜನ್ನರ ಶ್ರದ್ಧೆ, ಶ್ರಮ, ಇಂಗ್ಲಿಷ್ ಪರಿಣತಿ ಮತ್ತು ಅನುವಾದ ಸಾಮರ್ಥ್ಯಗಳ ಫಲ. ಜಾನಪದಕ್ಕೆ ಸಂಬಂಧಿಸುವ Tales from Indian ಎಂಬ ಅವರ ಇನ್ನೊಂದು ಗ್ರಂಥ ಕೂಡ ಅವರ ಅನುವಾದಪ್ರತಿಭೆ ಜಗತ್ತಿಗೆ ಸಲ್ಲಿಸಿದ ಒಂದು ಮೌಲಿಕ ಭಾರತೀಯ ಕೊಡುಗೆ. ತೀರಿಕೊಳ್ಳುವ ಮುಂಚೆ ಅವರು ಈ ಸಾಲಿಗೇ ಸೇರುವ God as a customer ಎಂಬ ಇನ್ನೊಂದು ಹಿರಿಯ ಕಾವ್ಯಾನುವಾದವನ್ನು ಅರ್ಧದಷ್ಟು ಮುಗಿಸಿದ್ದರು. ಅದು ತೆಲುಗುಕವಿ ಕ್ಷೇತ್ರಯ್ಯ ರಚಿಸಿದ ಪ್ರಣಯಪದಗಳ ಅನುವಾದ.

ಕನ್ನಡದಲ್ಲಿ ಅವರು ಈವರೆಗೆ ಹೊರತಂದದ್ದು ಮೂರು ಕವನ ಸಂಕಲನಗಳು; 'ಹೊಕ್ಕುಳಲ್ಲಿ ಹೂವಿಲ್ಲ', 'ಮತ್ತು ಇತರ ಪದ್ಯಗಳು' ಹಾಗೂ 'ಕುಂಟೋಬಿಲ್ಲೆ'. 'ಹೊಕ್ಕುಳಲ್ಲಿ ಹೂವಿಲ್ಲ' ಅವರ ಮೊದಲ ಸಂಕಲನವಾದರೂ ಅವರು ಬರೆಯದೆ ಬಿಟ್ಟ ನಾಲ್ಕಾರು ಸಂಕಲನಗಳ ನಂತರದ್ದು! ಮಾತಿನ ಮಾರ್ಮಿಕ ಬಳಕೆಗೆ, ಧ್ವನಿ ಸಾಧಕವಾದ ಸೂಕ್ಷ್ಮ ಚಾತುರ್ಯಗಳಿಗೆ ರಾಮಾನುಜನ್ ಹೆಸರು ಹೊತ್ತಿದ್ದಾರೆ. ಅವರ ಕವನಗಳು ಮೇಲುನೋಟಕ್ಕೆ ಬಹಳ ಸರಳ, ಸಾದಾ. ಎಚ್ಚರ ಸಾಲದ ಓದುಗ ಅದರ ಮೇಲೆ ಸಲೀಸು ಜಾರಿಹೋಗುವ ಅಪಾಯವುಂಟು. ಹೊಕ್ಕುನೋಡುವವರಿಗೆ ಮಾತ್ರ ಅವರ ಕಾವ್ಯದಲ್ಲಿ ಬೆರಗು ಕವಿಸುವ ಪ್ರತ್ಯೇಕತೆ, ಧ್ವನಿ. ವೈವಿಧ್ಯ ಇವೆ.

ಈ ಮೂರು ಸಂಕಲನಗಳಲ್ಲಿ ಮೊದಲ ಕವನ ಸಂಗ್ರಹ ಅವರ ಒಟ್ಟು ಕಾವ್ಯದ ಸ್ವರೂಪವನ್ನೇ ಸೂಚಿಸುವಷ್ಟು ಸಮರ್ಥವಾಗಿದೆ. 'ಹೊಕ್ಕುಳಲ್ಲಿ ಹೂವಿಲ್ಲ' ಎಂಬ ಹೆಸರೇ ವಿಚಿತ್ರ ಎನಿಸುವಷ್ಟು ವಿಶಿಷ್ಟವಾದದ್ದು. ಲೋಕದ ಸಾಮಾನ್ಯ ಸ್ವರೂಪಕ್ಕೆ ಹೊರತಾದದ್ದನ್ನು, ವಿಜೃಂಭಣೆ ಅತಿಶಯತೆಗಳಿಂದ ಕೂಡಿದ್ದನ್ನು ತಮ್ಮ ಕಾವ್ಯ ಬಯಸುವುದಿಲ್ಲ ಎನ್ನುವುದು ಕವಿಯ ಆಶಯ. ಹೊಕ್ಕುಳಲ್ಲಿ ಹೂವಿಲ್ಲದೆ (ಪದ್ಮನಾಭನ ವಿಜೃಂಭಿತ ಆಕೃತಿಯನ್ನು ಕೋರದೆ) ಸಾಮಾನ್ಯ ಮಾನವನ ರೂಪದಲ್ಲೇ ಕೃಷ್ಣ ಪರಮಾತ್ಮನೆನಿಸಿಕೊಂಡಂತೆ ಉತ್ಪ್ರೇಕ್ಷೆ, ಅತಿಶಯೋಕ್ತಿ ಅಥವಾ ತಮಟೆ ಮಾತಿನ ವಿಜೃಂಭಣೆಯಿಲ್ಲದೆ ತನ್ನ ಸಹಜನೆಲೆಯಲ್ಲೇ ಮಾತು ಕವಿತೆಯಾಗಬೇಕೆಂಬ

ಉದ್ದೇಶವನ್ನು ಅದು ಸಮರ್ಥವಾಗಿ ಧ್ವನಿಸುತ್ತದೆ. ಒಮ್ಮೆ ರಾಮಾನುಜನ್ನರೇ ಹೇಳಿದಂತೆ ಅವರ ಕಾವ್ಯ blood heat ನಿಂದ ಕೂಡಿದ್ದು. ಕುದಿಭಾವದ ಆಕ್ರೋಶ, ಪರವಶತೆ, ಏರುದನಿ ಯಾವುವೂ ಅದಕ್ಕಿಲ್ಲ. ಅತಿಶಯತೆ ಎನ್ನುವುದು ಅವರ ಕಾವ್ಯ ಸಾಧಿಸುವ ಪರಿಣಾಮದಲ್ಲಿ ಇದೆಯೇ ಹೊರತು ಕಾವ್ಯದ ಅಭಿವ್ಯಕ್ತಿಯಲ್ಲಿ ಅಲ್ಲ. ತಮ್ಮ ಲೋಕಾನುಭವವನ್ನು ತಾವು ಅದರಿಂದ ಪಡೆದ ಅರ್ಥಕ್ಕೆ ಪುನರ್ನಿರ್ಮಿಸುತ್ತ ರಾಮಾನುಜನ್ ತಾವೇ ಅದರ ಪ್ರೇಕ್ಷಕರಾಗಿ ಬಿಡುತ್ತಾರೆ. ಲೋಕವನ್ನು ತತ್ವಗಳಿಗೆ, ದೃಷ್ಟಿಗಳಿಗೆ ಒಗ್ಗಿಸಬೇಕೆಂಬ ಛಲವಿಲ್ಲದೆ, ಇರುವ ರೀತಿಗಾಗಿಯೇ ಅದನ್ನು ಗೌರವಿಸುತ್ತಾರೆ. ಹಾಗಿರುವುದರಿಂದಲೇ ಅದು ನೀಡುವ ಅನುಭವದೊಡನೆ ಉದ್ವೇಗವಿಲ್ಲದೆ ವ್ಯವಹರಿಸುವುದು ಅವರಿಗೆ ಸಹಜವಾಗಿದೆ. ನವ್ಯಕಾವ್ಯದಲ್ಲಿ ಕಾಣುವ ಅನಾಥಪ್ರಜ್ಞೆ, ನೆಲೆತಪ್ಪಿದ ಭಾವ, ಲೋಕವಿರತಿ ಯಾವುವೂ ಅವರ ಕಾವ್ಯದಲ್ಲಿಲ್ಲ. ಇಲ್ಲಿದ್ದೇ ಹಲವರಿಗೆ ಪರಕೀಯಪ್ರಜ್ಞೆ ಬಂತಾದರೂ ಅಮೆರಿಕದಲ್ಲಿದ್ದೂ ರಾಮಾನುಜನ್ನರಿಗೆ ಅದು ಬರಲಿಲ್ಲ. ಇಲ್ಲಿಯದು ಅಲ್ಲಿಯದು ಎನ್ನದೆ ಒಟ್ಟು ಬದುಕಿನ ಬಗ್ಗೆ ಅವರಿಗಿರುವ ನಿರೀಕ್ಷಾ ಮುಕ್ತವಾದ ಪ್ರೀತಿ ಆಸ್ಥೆಗಳೇ ಇದಕ್ಕೆ ಕಾರಣವೆನಿಸುತ್ತದೆ. ಅವರ ಕಾವ್ಯದಲ್ಲಿ ನಿರೀಕ್ಷೆ ಇಲ್ಲ. ಅದರಿಂದಲೇ ನಿರಾಶೆಯೂ ಇಲ್ಲ.

ನಮ್ಮ ಶ್ರವಣ, ನೋಟ, ಸ್ಪರ್ಶಗಳು ಉಪೇಕ್ಷಿಸಿರುವ ತೀರ ಸಾಮಾನ್ಯ ವಸ್ತು – ಸಂಗತಿಗಳಿಂದಲೇ ರಾಮಾನುಜನ್ ತಮ್ಮ ಕಾವ್ಯದ ಮೈ ಕಟ್ಟಿಕೊಳ್ಳುತ್ತಾರೆ. ಕತ್ತೆ ತನ್ನ ಮೂಗಿನ ಹೊಳ್ಳೆಗಳಲ್ಲಿ ಡೊಂಕಾಗಿ ಮಡಿಸಿಟ್ಟುಕೊಂಡ ಅದರದೇ ಕಿವಿಯ ನೇರ ನೆರಳು, ಮಚ್ಚೆ ಮೇಲಿನ ಒಂಟಿ ಕೂದಲು, ತಲೆಯಿಂದ ಬಿದ್ದ ಕೂದಲಿನ ನೆರೆ ಇಲ್ಲದ ಮರಿನೆರಳು, ಸಿಮೆಂಟು ಬಿರುಕಿನ ಹುಲ್ಲು – ಇವನ್ನೆಲ್ಲ ಬಳಸುವ ಕವಿ ಅವರೇ. ಈ ಲಘು ಸಂಗತಿಗಳನ್ನು ಹೇಳಲು ಅಗತ್ಯವಾದ ಅವಿಶಿಷ್ಟ ದನಿಯೊಂದನ್ನು ರಾಮಾನುಜನ್ ರೂಢಿಸಿಕೊಂಡರು. ಜೊತೆಯವರೊಡನೆ ಹರಟುವಾಗ ಕಾಣುವ ಲಘು ಧಾಟಿ ಅದು. ಇದರಿಂದ ಅವರ ಕಾವ್ಯಕ್ಕೆ ಉಂಟಾದ ತೋರಿಕೆಯ ಸಾಮಾನ್ಯತೆ ಅಂತಿಂಥದ್ದಲ್ಲ. ಸಾಲದ್ದಕ್ಕೆ ಪದಗಳನ್ನು ಪ್ರಕೃತಿ – ಪ್ರತ್ಯಯಗಳಾಗಿ, ಸಮಾಸಗಳನ್ನು ಶಬ್ದಗಳಾಗಿ ಮುರಿಯುವ, ಒಮ್ಮೊಮ್ಮೆ ಒಂದೇ ಪದವನ್ನು ಒಂದು ಸಾಲು ಮಾಡಿ ಬಳಸುವ ಅವರ ಅರ್ಥಪೂರ್ಣ 'ಚಮತ್ಕಾರ'ಗಳು ಸಹ ಹುಡುಗಾಟಿಕೆಯ ಚೇಷ್ಟೆಯಾಗಿ ತೋರುವಂತಿದ್ದು ಅನೇಕ ಓದುಗರಿಗೆ ಅವರ ಕವನದ ಮೇಲ್ಮೈ ಹಗುರವಾಗಿ ತೋರಬಹುದು. ಆದ್ದರಿಂದಲೇ ರಾಮಾನುಜನ್ನರ ಕವಿತೆಯ ಓದುಗ ಅವರು ಮಾತು ಬಳಸುವ ರೀತಿಗೆ ವಿಶೇಷ ಲಕ್ಷ್ಯ ಕೊಡಬೇಕು. ವಾಸ್ತವವಾಗಿ ರಾಮಾನುಜನ್ನರ ಯಾವ ಕವನವೂ ನಮ್ಮನ್ನು ಗಂಭೀರ ಚಿಂತನೆಗೆ ತೊಡಗಿಸುವಷ್ಟು ಅರ್ಥಭರಿತವಾಗಿದೆ.

ರಾಮಾನುಜನ್ ಕಾವ್ಯದ ಹೊಸತನವೆಲ್ಲ ಅವರೊಬ್ಬರಿಗೆ ಸಾಕಾಗುವಷ್ಟು ಇರುತ್ತದೆ. ಇನ್ನೊಬ್ಬರು ಅದನ್ನು ಅನುಸರಿಸಹೋದರೆ ಪೆಚ್ಚಾಗಬೇಕಾಗುತ್ತದೆ. ಬೇಂದ್ರೆ, ಅಡಿಗರ ಕಾವ್ಯದಂತೆ ಅದು ಹತ್ತಾರು ಜನಕ್ಕೆ ಅವಕಾಶವಿರುವ ರಾಜಮಾರ್ಗವಲ್ಲ, ಅವರಿಗಷ್ಟೇ ಸಾಕಾಗುವ ಒಂದು ಕಾಲು ಹಾದಿ. ಅವರು ಉಳಿದ ಹಿರಿಯ ಕವಿಗಳಿಂದ ತಮ್ಮನ್ನು ಪ್ರತ್ಯೇಕಿಸಿಕೊಂಡಿದ್ದು ಭಾಷೆ ದೃಷ್ಟಿಗಳ ವಿಶಿಷ್ಟ ಬಳಕೆಯಿಂದ. ಅವರ ಕಾವ್ಯ ಒಂದು ದುರ್ಬೀನಿದ್ದಂತೆ. ಕೆಲವು ಹಳೆ ಮಾತುಗಳಲ್ಲಿ ಅಡಗಿದ್ದ ಹೊಸ ಅರ್ಥ ಅವರ ಕಾವ್ಯದ ಮೂಲಕ ನಮಗೆ ಕಂಡಿದೆ. ಅರ್ಥವನ್ನು ಹುಡುಕುತ್ತ ಮಾತು ಬಳಸುವ, ಮಾತನ್ನು ಬೆದಕುತ್ತ ಅರ್ಥ ಬೆಳೆಸುವ ರಾಮಾನುಜನ್ನರ ವಾಗರ್ಥ ಪ್ರತಿಪತ್ತಿ ಎರಡು ರೀತಿಯ ಪ್ರತಿಕ್ರಿಯೆಯನ್ನು ಬೆಳೆಯುವಂಥದು. ತಮಗೆ ತಿಳಿದ ಮಾತಿನಲ್ಲೇ, ಹಿಂದೆ ತೋರಿರಲಿಲ್ಲವೆಂಬಂತೆ ಮಾಡುವ ವಿಚಿತ್ರ ಹೆಣಿಗೆ ಕೆಲವರಿಗೆ ಹೊಸ ಅರ್ಥಲೋಕಕ್ಕೆ ಬಾಗಿಲು ತೆರೆದುಬಿಡಬಹುದು. ಹಾಗೆಯೇ ಸೂಕ್ಷ್ಮಗಳಿಗೆ ಎಚ್ಚರವಾಗಿಲ್ಲದ, ಗಟ್ಟಿಯಾಗಿ ಹೇಳದಿದ್ದರೆ ಕೇಳಿಸದ, ತೋರಿಸಿದರೂ ಹೊಸದನ್ನು ನೋಡಲೊಲ್ಲದ ಜನಕ್ಕೆ ಅದು ಅರ್ಥಹೀನವಾಗಿಯೂ ಕಾಣಬಹುದು. ಅಂಥವರಿಗೆ ಆ ಕಾವ್ಯ ಹೇಳುವುದಿಷ್ಟೆ

ಕಣ್ಣೆದುರಿಗೆ ಪ್ರತ್ಯಕ್ಷ
ವಾದದ್ದನ್ನ
ನೋಡು
ವುದಕ್ಕೆ ಎರಡು ಕಣ್ಣು
ಸಾಲದು ಸ್ವಾಮೀ
ಅದೃಷ್ಟ
ಬೇಕು.

ರಾಮಾನುಜನ್ ಇಂಗ್ಲಿಷಿನಲ್ಲಿಯೂ ಮೂರು ಕಾವ್ಯ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಅವು The Striders, Relations ಮತ್ತು Collected Poems ಕನ್ನಡದ ಮಹತ್ವದ ಕಾದಂಬರಿಗಳಲ್ಲಿ ಒಂದಾದ ಸಂಸ್ಕಾರವನ್ನು ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ. Tales from India ಎಂಬ ಭಾರತದ ಜಾನಪದ ಕಥೆಗಳ ಸಂಗ್ರಹವೊಂದನ್ನು ಇಂಗ್ಲಿಷಿನಲ್ಲಿ ಹೊರತಂದಿದ್ದಾರೆ. ಡೆಡಾಮೊಸ್ ಎಂಬ ಸಂಶೋಧನ ಪತ್ರಿಕೆಯ 'ಅನದರ್ ಇಂಡಿಯಾ' ಎಂಬ ವಿಶೇಷ ಸಂಚಿಕೆಗೆ ರಾಮಾನುಜನ್ ನೀಡಿರುವ ಲೇಖನ ಹೊರಜಗತ್ತಿನ ಕಣ್ಣಿನಲ್ಲಿ ಭಾರತದ ಘನತೆಯನ್ನು ಎತ್ತರಿಸುವಂಥ ಬರಹ.

ರಾಮಾನುಜನ್ ಸತತವಾದ ಅಧ್ಯಯನ ಚಿಂತನೆಗಳಲ್ಲಿ ತೊಡಗಿದ್ದವರು. ತಮ್ಮ ಚಿಂತನೆಗೆ ಪೂರಕವಾಗಿ ಏನು ದೊರೆತರೂ, ಎಷ್ಟೇ ಸಾಮಾನ್ಯರಿಂದ ದೊರೆತರೂ

ಸೌಜನ್ಯದಿಂದ ತೆಗೆದುಕೊಳ್ಳುತ್ತಿದ್ದರು. ಹಾಗೆಂದೇ ಅವರ ವಿದ್ವತ್ತು ಪ್ರಖರವಾಗಿತ್ತು. ಒಮ್ಮೆ ಅವರ ಜೊತೆ ಮಾತಾಡುತ್ತಿದ್ದಾಗ ಅವರು ಅನ್ಯಮನಸ್ಕರಾಗಿದ್ದಾರೆ, ಏನೋ ಯೋಚಿಸುತ್ತಿದ್ದಾರೆ ಅನ್ನಿಸಿತು. ಕೇಳಿದೆ. 'ಮಿಡತೆ ಎಂಬ ಪದವನ್ನು ಕಿಟೆಲ್ ಕನ್ನಡ ಪದ ಅಂತ ಹೇಳುತ್ತಾನೆ. ಅದು ಹೇಗೆ ಅಂತ ಯೋಚಿಸುತ್ತಿದ್ದೆ' ಅಂದರು. ನಾನು 'ಛಾಂದೋಗ್ಯ ಬ್ರಾಹ್ಮಣದಲ್ಲಿ ಮಟಚೀ ಹತೇಷು ಕುರುಷು ಎಂಬ ಮಾತಿದೆಯಲ್ಲ. ಮಿಡಿತೆಯ ಹಾವಳಿಯಿಂದ ಕುರುರಾಜ್ಯ ನಾಶವಾಯಿತು ಅಂತ ಅದರ ಅರ್ಥ. ಸಾಯಣಾಚಾರ್ಯರು ಆ ಸಂಸ್ಕೃತ ವಾಕ್ಯಭಾಗವನ್ನು ವ್ಯಾಖ್ಯಾನಿಸುತ್ತ ಮಟಚೀ ಎಂದರೆ ಕ್ಷುದ್ರ ಪ್ರಾಣಿವಿಶೇಷ ಅಂತ ಅರ್ಥ ಹೇಳುತ್ತಾರೆ. ಈ 'ಮಟಚೀ' ಪದ ದ್ರಾವಿಡ ಮೂಲದಿಂದ ಬಂದದ್ದು ಅಂತ ವಿದ್ವಾಂಸರ ಅಭಿಪ್ರಾಯವಿದೆ. ಹಾಗಾಗಿ ಅದು ಕನ್ನಡದ್ದೇ' ಅಂದೆ. ರಾಮಾನುಜನ್ನರಿಗೆ ತುಂಬ ಖುಷಿಯಾಗಿ ಹೋಯಿತು. ತಮ್ಮ ಕುರ್ಚಿಯನ್ನು ನನ್ನ ಹತ್ತಿರಕ್ಕೆ ಎಳೆದುಕೊಂಡು, ಬೆನ್ನ ಮೇಲೆ ತೋಳು ಹಾಕಿ, ನನ್ನನ್ನು ಮೆಚ್ಚಿಕೆಯಿಂದ ನೋಡುತ್ತ 'ನೀವು ಹೇಳಿದ್ದು ಬಹಳ ಸರಿಯಾಗಿದೆ. ನೀವು ಬರೀ ಪದ್ಯ, ವಿಮರ್ಶೆ ಬರೀತೀರಿ ಅಂತ ಅಂದುಕೊಂಡಿದ್ದೆ. ಇದನ್ನೆಲ್ಲ ಎಲ್ಲಿ ಓದಿಕೊಂಡಿರಿ ಭಟ್ಟರೇ?' ಎಂದರು. ಒಂದು ಕ್ಷಣ ನನಗೆ ಬಹಳ ಹೆಮ್ಮೆಯಾಗಿ ಹೋಯಿತು! ಆದರೆ ಥಟ್ಟನೆ ಸಾವರಿಸಿಕೊಂಡು ಸೌಜನ್ಯದ ದನಿಯಲ್ಲಿ 'ಎಲ್ಲವೂ ದೊಡ್ಡ ವಿದ್ವಾಂಸರ ಪಾಠಕೇಳಿದ್ದರ ಫಲ, ನನ್ನದೇನಿದೆ?' ಎಂದು ನನ್ನನ್ನೇ ಸರಿಪಡಿಸಿಕೊಂಡೆ.

ರಾಮಾನುಜನ್ ಅಮೆರಿಕದಲ್ಲಿ ಕೂತು ಸದ್ದಿಲ್ಲದೆ ಕನ್ನಡವನ್ನು ವಿಶ್ವ ವೇದಿಕೆಗೆ ಹತ್ತಿಸಿದವರು. ಅವರ Speaking of Siva ಎಂಬ ಗ್ರಂಥ, ಬಸವ, ಅಕ್ಕ, ಅಲ್ಲಮ ಮತ್ತು ದಾಸಿಮಯ್ಯರ ಉತ್ತಮ ವಚನಗಳ ಇಂಗ್ಲಿಷ್ ಅನುವಾದ; ಬೆರಗುಗೊಳಿಸುವ ಅಪೂರ್ವ ಅನುವಾದ. ಅದರ ಮುನ್ನುಡಿ ಓದಿದರೆ ರಾಮಾನುಜನ್ ಎಂಥ ಸೂಕ್ಷ್ಮ ವಿಮರ್ಶಕ ಎನ್ನುವುದು ತಿಳಿದೀತು. ಈ ಪುಸ್ತಕ ಪೆಂಗ್ವಿನ್ ಪುಸ್ತಕ ಮಾಲೆಯಲ್ಲಿ ಪ್ರಕಟವಾಗಿ ಕನ್ನಡ ಜಗತ್ತಿನ ಮೂಲೆಗಳಿಗೆಲ್ಲ ತಲುಪಿದೆ. Interior Landscape ಪ್ರಾಚೀನ ತಮಿಳು ಸಾಹಿತ್ಯದಲ್ಲಿ ಬರುವ ಪ್ರೇಮಗೀತೆಗಳ ಅನುವಾದ. 'ಪ್ರಾಚೀನ ಭಾರತೀಯ ಸಾಹಿತ್ಯದ ದಿಗ್ಭ್ರಮೆಗೊಳಿಸುವ ನೋಟ' ಎಂದು ವಿಮರ್ಶಕರು ಅದನ್ನು ಪ್ರಶಂಸಿಸಿದ್ದಾರೆ. Poems of Love and War ಮತ್ತು Hymns to the Drowning ತಮಿಳಿನ ಕಾವ್ಯ ಮತ್ತು ಸ್ತೋತ್ರಗಳ ಸೃಜನಾತ್ಮಕ ಅನುವಾದ; ಕನ್ನಡಿಗನೊಬ್ಬ ದಕ್ಷಿಣ ಭಾರತಕ್ಕೆ ಸಲ್ಲಿಸಿರುವ ಸದ್ದಿಲ್ಲದ ಸೇವೆ. ಅವರ ಅನುವಾದಗಳು ಎಷ್ಟು ಉತ್ತಮ ನೆಲೆಯವು ಎಂದರೆ ಅವುಗಳನ್ನು ಅನುವಾದ ಎನ್ನುವುದಕ್ಕಿಂತ ಅನುಸೃಷ್ಟಿ ಎಂದು ಹೇಳಬಹುದಾಗಿದೆ.

Interior Landscape ಮತ್ತು Poems of Love and War – ಈ ಎರಡೂ ಪ್ರಾಚೀನ ತಮಿಳು ಸಂಗಂ ಸಾಹಿತ್ಯಕ್ಕೆ ಸೇರಿದ ಪದ್ಯಗಳ ಅನುವಾದಗಳು 'ಅಗಂ' ಮತ್ತು 'ಪುರಂ' ಎಂಬ ಎರಡು ವಿಭಾಗಗಳ ಕವನಗಳು ಇಲ್ಲಿವೆ. ಅಗಂ ಎಂದರೆ ಒಳಗಿನದು ಎಂದು ಅರ್ಥ. ಈ ವಿಭಾಗದ ಪದ್ಯಗಳೆಲ್ಲ ಪ್ರೇಮಕವಿತೆಗಳು. ಪ್ರೇಮಿಗಳ ವಿರಹ, ಕಾತರ, ಭೇಟಿ ಮತ್ತು ಕಡಲ ತಡಿಯ ಗುಪ್ತಮಿಲನಗಳನ್ನು ಈ ಕವಿತೆಗಳು ಮನೋಹರವಾಗಿ ನಿರೂಪಿಸುತ್ತವೆ. 'ಪುರಂ' ಎಂದರೆ ಹೊರಗಿನದು ಎಂದು ಅರ್ಥ. ಈ ವಿಭಾಗದ ಪದ್ಯಗಳೆಲ್ಲ ಪ್ರಭು, ಪರಾಕ್ರಮ, ಯುದ್ಧ, ಸಾವು ಇತ್ಯಾದಿಗಳನ್ನು ಅವುಗಳ ಘನತೆ, ಪರಿಣಾಮ, ಹಿರಿಮೆಗಳನ್ನು ಬಣ್ಣಿಸುತ್ತವೆ. ಪ್ರಾಚೀನ ತಮಿಳಿನ ಪ್ರಣಯ ಕವಿತೆಯೊಂದನ್ನು ರಾಮಾನುಜನ್ ಅನುವಾದಿಸಿರುವ ರೀತಿ ಹೀಗಿದೆ.

My love whose bangles
glitter, jingle
as she chases crabs
suddenly stands shy,
head lowered
hair hinding her face
but only till the misery
of the evening passes
when she will give me
the full pleasure
of her breasts

ಪದ್ಯವನ್ನು ಕನ್ನಡದಲ್ಲಿ ಹೀಗೆ ಅನುವಾದಿಸಬಹುದು.

ಏಡಿಗಳನ್ನು ಅಟ್ಟಿಹೋಗುವಾಗ
ನನ್ನವಳ ಬಳೆಗಳು ಥಳ್ಳೆಂದು ಹೊಳೆಯುತ್ತವೆ
ಝಲ್ಲೆಂದು ಧ್ವನಿಸುತ್ತವೆ.
ನನ್ನನ್ನು ಕಂಡಳೋ
ಹಠಾತ್ತನೆ ನಿಂತು ಬಿಡುತ್ತಾಳೆ ನಾಚಿ
ಕೇಶರಾಶಿ ಅವಳ ಮನೋಹರ ಮುಖ
ಅರೆಮರೆಸಿ
ಈ ನೋವೆಲ್ಲ ಸಂಜೆ ಕಳೆಯುವವರೆಗೆ
ಇರುಳಲ್ಲಿ ತನ್ನ ತುಂಬುವಕ್ಷದಲ್ಲಿ
ನನ್ನ ತಲೆ ಹೂಳಿ
ಏನೆಲ್ಲ ಸುಖಕೊಡುತ್ತಾಳೆ ಮೂಳಿ !

'ಪುರಂ' ವಿಭಾಗಕ್ಕೆ ಸೇರುವ ಕವನದಲ್ಲಿ ವೃದ್ಧೆ ತಾಯಿಯೊಬ್ಬಳ ಚಿತ್ರ ಬರುತ್ತದೆ. ಯುದ್ಧಕ್ಕೆ ಹೋಗಿದ್ದ ಅವಳ ಮಗ ಶತ್ರುಗಳ ಹೊಡೆತಕ್ಕೆ ಹೆದರಿ

ಓಡಿಹೋದ ಎಂದು ಯಾರೋ ಹೇಳುತ್ತಾರೆ. ಆ ವೀರಮಾತೆ ಕನಲಿ ಹೋಗುತ್ತಾಳೆ. ಅದು ನಿಜವಾದರೆ ಅವನಿಗೆ ಹಾಲುಣಿಸಿದ ಮೊಲೆಗಳನ್ನು ಕತ್ತರಿಸಿ ಚೆಲ್ಲಿಬಿಡುತ್ತೇನೆ ಎಂದು ಆರ್ಭಟಿಸುತ್ತಾಳೆ. ಕತ್ತಿ ಹಿಡಿದು ಯುದ್ಧ ಭೂಮಿಗೆ ಹೋಗುತ್ತಾಳೆ. ಮಗನನ್ನು ಹುಡುಕುತ್ತಾಳೆ. ಅಲ್ಲಿ ಅವನು ಶವವಾಗಿ ಬಿದ್ದಿದ್ದಾನೆ. ಆ ದೃಶ್ಯ ಕಂಡು ಅವಳು ಮಗನನ್ನು ಹೆತ್ತ ದಿನ ಪಟ್ಟ ಸಂತೋಷಕ್ಕಿಂತ ಹೆಚ್ಚು ಸಂತೋಷ ಪಡುತ್ತಾಳೆ.

Speaking of Shiva ಕನ್ನಡದ ಹಲವು ಶ್ರೇಷ್ಠ ವಚನಗಳ ಒಂದು ಅಪೂರ್ವ ಅನುವಾದ. ಬಸವಣ್ಣ, ದೇವರ ದಾಸಿಮಯ್ಯ, ಅಕ್ಕಮಹಾದೇವಿ ಮತ್ತು ಅಲ್ಲಮಪ್ರಭು – ಈ ನಾಲ್ವರಿಂದ ಆಯ್ದ ನೂರಾರು ವಚನಗಳ ಭಾಷಾಂತರ ಇದು. ಮೂಲವನ್ನು ಚೆನ್ನಾಗಿ ಬಲ್ಲವರು ಸಹ ಅನುವಾದ ತೆರೆದುತೋರುವ ಹೊಸ ಅರ್ಥ ಸಂಪತ್ತಿನಿಂದ ಚಕಿತರಾಗುವ ರೀತಿಯಲ್ಲಿ ಈ ಕೃತಿಯಿದೆ. ಇದಕ್ಕೆ ಅರವತ್ತೈದು ಪುಟಗಳ ಒಂದು ವಿದ್ವತ್ಪೂರ್ಣ ಮುನ್ನುಡಿಯೂ ಇದೆ.

ಶ್ರೇಷ್ಠಕೃತಿಯೊಂದರ ಅನುವಾದ ಮೂಲದ ತದ್ವತ್ ಬಿಂಬ ಆಗಲು ಸಾಧ್ಯವೇ ಇಲ್ಲ. ಎರಡು ಹೆಬ್ಬೆರಳು ಸಹ ಒಂದೇ ಥರ ಇರುವುದಿಲ್ಲ, ಎರಡು ಭಿನ್ನಭಾಷೆಗಳ ನಾದ ನುಡಿತ ಧ್ವನಿಶಕ್ತಿ ಹೇಗೆ ಇದ್ದಾವು? Appreciating a translation is kissing one's beloved through a veil ಎಂಬ ನಾಣ್ಣುಡಿಯೇ ಇದೆ. ಅನುವಾದವೆನ್ನುವುದು ಚೆಲುವೆಯಾದ ಅಥವಾ ನಿಷ್ಠಳಾದ ಹೆಣ್ಣಿನಂತೆ. ಚೆಲುವಿದ್ದ ಕಡೆ ನಿಷ್ಠೆ ಅಪರೂಪ, ನಿಷ್ಠೆ ಇದ್ದ ಕಡೆ ಚೆಲುವಿಗೆ ಊನ ಎನ್ನುತ್ತದೆ ಇನ್ನೊಂದು ಫ್ರೆಂಚ್ ನಾಣ್ಣುಡಿ. ಇಷ್ಟಾದರೂ ಅನುವಾದದ ಕೆಲಸ ತೀರ ಅಗತ್ಯವಾದದ್ದು. ಇಲ್ಲದಿದ್ದರೆ ವಿಶ್ವಸಾಹಿತ್ಯದ ಸಾಮಾನ್ಯಪರಿಚಯ ಕೂಡ ಗಗನ ಕುಸುಮ; ಹಿತ್ತಲ ಬಾವಿಯೇ ನಮ್ಮ ಪಾಲಿಗೆ ಸಮುದ್ರವೂ ಆಗಿಬಿಡುವ ಸಂಭವ. ಅನುವಾದದ ಮೂಲಕವೇ ಜಗತ್ತಿನ ಬೇರೆ ಬೇರೆ ಸಾಹಿತ್ಯ ಸಂಸ್ಕೃತಿಗಳ ಪ್ರಸಾರ ಸಾಧ್ಯ. ಆದ್ದರಿಂದಲೇ ಒಬ್ಬ ಶ್ರೇಷ್ಠ ಅನುವಾದಕ ಒಬ್ಬ ಸಾಂಸ್ಕೃತಿಕ ರಾಯಭಾರಿಯೂ ಹೌದು. ರಾಮಾನುಜನ್ ಈ ಕೆಲಸವನ್ನು ಯಾರೂ ಸೈ ಎನ್ನುವಂತೆ ಮಾಡಿದ್ದಾರೆ. ಅವರ ಅನುವಾದ ಸೃಜನಾತ್ಮಕವಾದದ್ದು. ಅದನ್ನು ಅನುಸೃಷ್ಟಿ ಎಂದು ಕರೆಯುವುದೇ ಸೂಕ್ತ ಬಸವಣ್ಣನವರ ಪ್ರಸಿದ್ಧ ವಚನವೊಂದನ್ನು ರಾಮಾನುಜನ್ ಅನುವಾದಿಸಿದ ರೀತಿ ಇದು.

ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ, ಬಡವನಯ್ಯಾ
ಎನ್ನ ಕಾಲೇ ಕಂಬ, ದೇಹವೇ ದೇಗುಲ
ಶಿರ ಹೊನ್ನ ಕಳಸವಯ್ಯಾ
ಕೂಡಲ ಸಂಗಮದೇವ ಕೇಳಯ್ಯ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ

The rich
will make temples for Shiva
what shall I
A poor man do ?
My legs are pillars
The body the shrine
The head cupola of gold
listen O lord
Things standing shall fall
but the moving ever shall stay.

ನಾನು ಕನ್ನಡಕ್ಕೆ ಅನುವಾದಿಸಿರುವ ಯೇಟ್ಸ್ ಕವಿಯ ಕವನಗಳಲ್ಲಿ ಕೆಲವನ್ನು ಈಚೆಗೆ ಅವರಿಗೆ ಓದಿದೆ. ರಾಮಾನುಜನ್ ಲಕ್ಷ್ಯಕೊಟ್ಟು ಕೇಳಿ ಮೆಚ್ಚಿಕೆ ಸೂಚಿಸಿದರು. ಅನೇಕ ಸಲ ಓದಿ ಅನುವಾದಿಸಿದ್ದರೂ ನನಗೆ ಹೊಳೆಯದಂತೆ ಅಡಗಿ ಕೂತಿದ್ದ ಒಂದೆರಡು ಸೂಕ್ಷ್ಮಗಳನ್ನು ತೋರಿಸಿ 'ಇದೂ ಅನುವಾದದಲ್ಲಿ ಬರಬೇಕು' ಎಂದರು. "ಎಂಥ ಕಷ್ಟದ ಕೆಲಸ, ಎಷ್ಟು ಚೆನ್ನಾಗಿ ಮಾಡಿದ್ದೀರಿ. ಇದಕ್ಕೆ ಬಹಳ ಕಾಲ ಹಿಡಿದಿರಬೇಕು ಅಲ್ಲವೆ?" ಎಂದರು. "ಸುಮಾರು ಎರಡೂವರೆ ವರ್ಷಗಳೇ ಆಯಿತು ರಾಮಾನುಜನ್, ಹೇಳಲು ನಾಚಿಕೆಯಾಗುತ್ತೆ. ನನ್ನ ಕೆಲಸವೇ ಹಾಗೆ. ಬಲು ನಿಧಾನ" ಎಂದೆ.

ರಾಮಾನುಜನ್ ಜೋರಾಗಿ ನಗುತ್ತ 'ಅಯ್ಯಾ, ನೀವು ಎಂಥಾ ಮನುಷ್ಯ! ಇಷ್ಟಕ್ಕೇ ಸಂಕೋಚಪಡುತ್ತೀರಲ್ಲ. ನಾನು ಒಂದೊಂದು ಪುಸ್ತಕದ ಅನುವಾದಕ್ಕೆ ಹತ್ತು ಹನ್ನೆರಡು ವರ್ಷ ಸವೆಸಿದ್ದೇನೆ ಗೊತ್ತೆ? ಒಂದೊಂದು ಪದ್ಯವನ್ನು ಎಷ್ಟೆಷ್ಟು ಸಲ ತಿದ್ದಿದ್ದೇನೋ ಲೆಕ್ಕವಿಲ್ಲ' ಎಂದರು. ನನಗೆ ಆಶ್ಚರ್ಯವಾಯಿತು. ರಾಮಾನುಜನ್ ಎಂಥ ಪ್ರತ್ಯುತ್ಪನ್ನಮತಿ! ಇಂಗ್ಲಿಷ್ ಮೇಲಿನ ಅವರ ಪ್ರಭುತ್ವ ಯಾವ ವಿದ್ವಾಂಸನನ್ನೂ ದಂಗುಬಡಿಸುವಂಥದು. ಅಂಥವರಿಂದ ಇಂಥ ಮಾತೇ? ಸ್ವವಿಮರ್ಶೆಯಲ್ಲಿ ಈ ಮನುಷ್ಯ ಎಷ್ಟು ನೇರ, ನಿರ್ಲಜ್ಜ ಎನ್ನಿಸಿತು. ಅವರ ಇಂದಿನ ಜಗದ್ವಿಖ್ಯಾತಿಯ ಹಿಂದೆ ಎಂಥ ತಪಸ್ಸು ಇದ್ದಿರಬೇಡ!

ರಾಮಾನುಜನ್ ತಮ್ಮ ಪದ್ಯವೊಂದರಲ್ಲಿ ಹೇಳುತ್ತಾರೆ – ಕವಿ ನಿರಂತರತೆಯ ಪ್ರವಾಹದಲ್ಲಿ ಮೀನು ಹಿಡಿಯಲು ಕೂತ ಬೆಸ್ತ ಎಂದು. ಕೆಲವರಿಗೆ, ಆಯುಷ್ಯವಿಡೀ ಕೂತರೂ, ಯಾವ ಅನುಭವವನ್ನೂ ಬಲೆಯಿಂದ ಎತ್ತಲಾಗುವುದಿಲ್ಲ. ರಾಮಾನುಜನ್ ಅದೃಷ್ಟವಂತರು. ಅವರು ಗಾಳ ಎಸೆದದ್ದೇ ಕಡಿಮೆ. ಆದರೆ ಎಸೆದಾಗೆಲ್ಲ ಬಹುಮಟ್ಟಿಗೆ ಕವಿತೆ ಅವರ ಬುಟ್ಟಿ ಸೇರಿದೆ.

●

ಎ.ಕೆ.ಆರ್.

ಇಲ್ಲಾದರೆ–
ಹೆದ್ದಾರಿಯ ಮೇಲೆ ಬಟ್ಟೆ ಕಳಚಿದ ಹುಡುಗಿ
ಉಯ್ಯಾಲೆಯಲ್ಲಿ ತೂಗುವ ಮಾವನ ಮಗಳು
ಬೆಂಡೋಲೆ ತೊಟ್ಟ ಬಾತಕಾಲಿನ ಮುತ್ತೈದೆ
ಹೋಟೆಲಿನ ಬಗ್ಗಡ ನೀರು ತಿಳಿಯಾಗಲು ಕಾದ
ಮತ್ತೊಬ್ಬ
ಎಲ್ಲ ಇದ್ದಾರೆ.
ಪ್ರೀತಿಸಿದ ಹುಡುಗಿಯರೆಲ್ಲ ಸದಾ ಹದಿನೆಂಟು
ಮಗಳ ಹಿಂದೆ ಸಾಲುಗಟ್ಟುವ ಯುವಕರ ಭಯ
'ತಾಳು' ಎಂದ ಅಮ್ಮನ ಮೊಲೆ ಬಿಡಿಸಿದ ಕಹಿ ನೆನಪು
ಪಾಳು ಬದಿಯ ಬಯಲ ನೆಗ್ಗಿಲ ಮುಳ್ಳು
ಒಂಟಿಕಾಲಿನ ಬಕ ಬಿಟ್ಟರೆ ಬೇರೆ ಯಾರಿರಲಿಲ್ಲ
ತಿಳಿಗೊಳದಲ್ಲಿ ನೀರಾಟವಾಡಿ ಆನೆ ರಾಡಿ ಎಬ್ಬಿಸಿದಾಗ
ಬುಡದಿಂದ ಬುಡಕ್ಕೆ ಕುಪ್ಪಳಿಸಿ ಗಿಳಿ ಪೊಟರೆ ಸೇರಿದಾಗ
ದಭೆದಭೆಯನ್ನೇರಿ ಮೀನು ನದೀ ಮೂಲ ತಲುಪಿದಾಗ.
ಪ್ರವಾಹ ಬಂದು
ದಿಢೀರನೆ ಬದಲಾಯಿತು ಭೂಗೋಳ
ಮೈ ಉರಿಯುವ ಕೋಪದಲ್ಲಿ
ಮನೆಗೆ ಬರಲೂ
ಹೂ ಬಿಟ್ಟ ಕೆಂಡ ಸಂಪಿಗೆಯ ಗುರುತಿಲ್ಲ.
ಅದು ಪರಸ್ಥಳ
ಅಲ್ಲಿ–

– ಪ್ರತಿಭಾ ನಂದಕುಮಾರ್

ಆಚಾರ್ಯ ಪೀಠದಲ್ಲಿ ಅನಂತಮೂರ್ತಿ

ಈ ಬಾರಿಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಡಾ. ಯು. ಆರ್. ಅನಂತಮೂರ್ತಿಯವರಿಗೆ ದೊರೆತಿದೆ. ಇದು ನ್ಯಾಯವಾಗಿಯೂ ಇದೆ. ಇದು ಮಾತ್ರವಲ್ಲ, ನಾಡಿನ ಯಾವ ಹಿರಿಯ ಗೌರವಕ್ಕೂ ಬೇಕಾದ ಅರ್ಹತೆ ಅವರಿಗಿದೆ. ಅನಂತಮೂರ್ತಿ ತಮ್ಮ ವ್ಯಕ್ತಿಪ್ರತಿಭೆಯಿಂದ ಕನ್ನಡ ಪರಂಪರೆಗೆ ಹೊಸ ಕೊಡುಗೆ ನೀಡಿ ಅದರ ಸ್ವರೂಪವನ್ನು ವರ್ತಮಾನದಲ್ಲಿ ಬೆಳೆಸಿದ ಮೇಜರ್ ಲೇಖಕರಲ್ಲಿ ಒಬ್ಬರು. ಕಳೆದ ಶತಮಾನದ ಪೂರ್ವಾರ್ಧದಲ್ಲಿ ಬೇಂದ್ರೆ, ಕುವೆಂಪು, ಮಾಸ್ತಿ, ಕಾರಂತರು ನಮ್ಮ ಸಾಹಿತ್ಯ ಪರಂಪರೆಯನ್ನು ಬೆಳೆಸಿದಂತೆ ಉತ್ತರಾರ್ಧದಲ್ಲಿ ಅಡಿಗ, ಅನಂತಮೂರ್ತಿ, ಭೈರಪ್ಪ, ಲಂಕೇಶ ಮೊದಲಾದವರು ತಮ್ಮ ಸ್ವತಂತ್ರ ತೇಜಸ್ಸಿನ ಕೃತಿಗಳಿಂದ ಆ ಪರಂಪರೆಯ ವಿನ್ಯಾಸವನ್ನು ವಿಸ್ತರಿಸಿದ್ದಾರೆ. ಸದ್ಯದಲ್ಲಿ ಕನ್ನಡ ಸಾಹಿತ್ಯ ನಮ್ಮ ದೇಶದ ಇತರ ಭಾಷಾ ಸಾಹಿತ್ಯಗಳಿಗಿಂತ ಎತ್ತರಕ್ಕೆ ಬೆಳೆದಿದ್ದರೆ ಅದಕ್ಕೆ ಇಂಥ ಲೇಖಕರೇ ಮುಖ್ಯ ಕಾರಣರಾಗಿದ್ದಾರೆ.

ಅನಂತಮೂರ್ತಿಯವರ ಪ್ರತಿಭೆ ಬೇಡಿದ ವರವನ್ನು ನೀಡುವ ಕಾಮರೂಪಿ ಅಪ್ಸರೆ. ಅವಳಿಂದ ಯಾವ ವರವನ್ನು ಕೇಳಬೇಕು ಎಂಬ ವಿವೇಕ ಅನಂತಮೂರ್ತಿಗೆ ಸೇರಿದ್ದು ಎಂಬ ಮಾತನ್ನು ನಾಡಿನ ಹಿರಿಯ ವಿಮರ್ಶಕ ಕೀರ್ತಿನಾಥ ಕುರ್ತಕೋಟಿ ಒಮ್ಮೆ ಹೇಳಿದ್ದುಂಟು. ತಮ್ಮ ನಡುಯೌವನದ ಪೂರ್ತಿ ಅನಂತಮೂರ್ತಿ ಈ ಅಪ್ಸರೆಯನ್ನು ಒಲಿಸಿ ದಕ್ಕಿಸಿಕೊಂಡ ವರಗಳು ಅಪೂರ್ವವಾದವು. ಆ ದಿನಗಳಲ್ಲಿ ಅವರು ಸೃಷ್ಟಿಸಿ ಕೊಟ್ಟ ಕೃತಿರತ್ನಗಳು ಈಗ ಇಡೀ ನಾಡಿಗೇ ಆಭರಣಗಳಾಗಿ ಪರಿಣಮಿಸಿವೆ.

ಅನಂತಮೂರ್ತಿ ಹುಟ್ಟಿದ್ದು ಮಲೆನಾಡಿನ ಒಂದು ಪುಟ್ಟ ಗ್ರಾಮವಾದ ಮೇಳಿಗೆಯಲ್ಲಿ, ೧೯೩೨ರಲ್ಲಿ. ಅವರ ತಂದೆ ರಾಜಗೋಪಾಲಾಚಾರ್ಯ, ತಾಯಿ ಸತ್ಯಭಾಮಾ. ರಾಜಗೋಪಾಲಾಚಾರ್ಯರು ಲಂಡನ್ ಮೆಟ್ರಿಕ್ಯುಲೇಷನ್, ಸೀನಿಯರ್ ಕೇಂಬ್ರಿಜ್ ಪರೀಕ್ಷೆ ಕಟ್ಟಿ ಪಾಸು ಮಾಡಿದವರು; ಇಂಗ್ಲಿಷ್ ಸಾಹಿತ್ಯದ ತಕ್ಕಮಟ್ಟಿನ ಪರಿಚಯವಿದ್ದವರು. ಅವರನ್ನು ಚೆನ್ನಾಗಿ ಬಲ್ಲ ಅಡಿಗರು ಒಮ್ಮೆ ಅನಂತಮೂರ್ತಿಯ ತಿಳಿವಳಿಕೆಯನ್ನು ಮೆಚ್ಚಿ ಮಾತಾಡುತ್ತಿದ್ದಾಗ "ಅವನೇನು, ಅವನ ಅಪ್ಪ ಕೂಡ ಮೇಧಾವಿ, ಅವನಿಗಿಂತಲೂ ಒಂದು ಕೈ ಹೆಚ್ಚೇ" ಎಂದಿದ್ದರು. ಆ ಮಾತಿನಲ್ಲಿ ಕೊಂಚ ಉತ್ಪ್ರೇಕ್ಷೆ ಇದ್ದಿರಬಹುದು. ಆದರೆ ರಾಜಗೋಪಾಲಾಚಾರ್ಯ ತುಂಬ ತಿಳಿದವರಾಗಿದ್ದರೆಂದು ಅವರನ್ನು ಬಲ್ಲ ಬಹಳ ಜನ ಹೇಳಿದ್ದುಂಟು.

ಮೂರ್ತಿಯವರ ಅನೇಕ ಸಣ್ಣಕತೆಗಳಲ್ಲಿ ಮತ್ತು ದಿವ್ಯ ಕಾದಂಬರಿಯ ಪೂರ್ವಾರ್ಧದಂಥ ಭಾಗಗಳಲ್ಲಿ (ಹಾರ್ಡಿ, ಕುವೆಂಪು, ಕಾರಂತರ ಕೃತಿಗಳಲ್ಲಿಯಂತೆ) ನಿಸರ್ಗ ಒಂದು ನಿಯಂತ್ರಕ ಶ್ರುತಿಯಾಗಿ ದನಿಗೊಡುತ್ತದೆ. ನಿಸರ್ಗ ಸಂಬಂಧವಾದ ಅಂಥ ನಿಗೂಡ ಅನುಭವಗಳು ಅವರ ಪ್ರಜ್ಞೆಯಲ್ಲಿ ಕಲೆಸಿಕೊಂಡದ್ದು ಮಲೆನಾಡಿನ ಕೆರೆಕೊಪ್ಪದಂಥ ಹಳ್ಳಿಗಳಲ್ಲಿ ಕಳೆದ ಬಾಲ್ಯದಲ್ಲಿ. ಅಸಂಖ್ಯ ರಹಸ್ಯಗಳನ್ನು ಬಸಿರಲ್ಲಿ ಬಚ್ಚಿಟ್ಟುಕೊಂಡ ದಟ್ಟವಾದ ಕಾಡು. ಮುತ್ತಿದ ಕತ್ತಲ ಮಧ್ಯೆ ಅಂಗೈಯಗಲದ ಬೆಳಕಿನಂಥ ತೆರವಿನಲ್ಲಿ ಅವರ ಮನೆ. ಅಡವಿಯ ಒಡಲಿನಿಂದ ಏಳುವ ಹುಲಿಯ ಗರ್ಜನೆ, ಕೊಟ್ಟಿಗೆಯಲ್ಲಿ ನಡುಗುತ್ತ ನಿಂತ ಮನೆದನಗಳ ಕತ್ತಿನ ಗಂಟೆದನಿ, ಹಠಾತ್ತಾಗಿ ಹುಟ್ಟಿಕೊಂಡು, ಛಿಟಿಛಿಟಿ ಹಬ್ಬುವ ಕಾಡುಕಿಚ್ಚು, ಸರ್ರನೆ ನುಗ್ಗಿ ದನಕರುಗಳನ್ನು ಕಚ್ಚಿಕೊಂಡು ಓಡುವ ಹುಲಿ, ಮೈಮೇಲೆ ಗಣ ಬರುವ ಅಬ್ಬಕ್ಕ ಹೀಗೆ ಅರ್ಥಕ್ಕೆ ಪೂರ್ತಿಬಿಚ್ಚಿಕೊಳ್ಳದ ಎಷ್ಟೋ ರಹಸ್ಯಾತ್ಮಕ ಅನುಭವಗಳು ಬಾಲಕನ ಕಲ್ಪನೆ, ಭಾವಶಕ್ತಿಗಳನ್ನು ಉದ್ದೀಪಿಸುತ್ತ ಅವನ ಪ್ರಜ್ಞೆಯನ್ನು ರೂಪಿಸಿತು.

ಅನಂತಮೂರ್ತಿಯ ಸಮಾಜವಾದಿ ನಿಲುವು ಬಾಲ್ಯದಲ್ಲೇ ಅವರಲ್ಲಿ ಮೊಳಕೆಯೊಡೆದದ್ದು. ಶಿವಮೊಗ್ಗ ಜಿಲ್ಲೆಯ ಪ್ರಸಿದ್ಧ ಸಮಾಜವಾದಿಗಳೆಲ್ಲ ಅವರಿಗೆ ಬಾಲ್ಯದ ಒಡನಾಡಿಗಳು. ಗೋಪಾಲ ಗೌಡರು, ಅಣ್ಣಯ್ಯ ಅವರ ಮನೆಯಲ್ಲಿ ಉಂಡು ತಿಂದು ಓಡಾಡಿಕೊಂಡು ಬೆಳೆದವರು. ಜೆ. ಎಚ್. ಪಟೇಲ್ ಏಕವಚನದ ಸ್ನೇಹಿತ. ಕಾಗೋಡು ಸತ್ಯಾಗ್ರಹದ ಸಮಯದಲ್ಲಿ ರಾಮಮನೋಹರ ಲೋಹಿಯಾ, ಅಲ್ಲಿಗೆ ಬಂದಾಗ ಅನಂತಮೂರ್ತಿ ಆ ಕ್ರಾಂತಿಶೀಲ ವ್ಯಕ್ತಿತ್ವದ ಸಂಪರ್ಕಕ್ಕೂ ಬಂದವರು. ಆ ದಿನಗಳಲ್ಲಿ ಮುಖ್ಯ ಸತ್ಯಾಗ್ರಹಿಗಳು ತುಂಬಿಕೊಂಡದ್ದೆಲ್ಲ ಅವರ ಮನೆಯಲ್ಲಿಯೇ. ಸಂಪ್ರದಾಯಸ್ಥರಾದರೂ ಜಾತಿಮತ ಪರಿಗಣನೆಯಿಲ್ಲದೆ ಅವರಿಗೆಲ್ಲ ಅಡಿಗೆ ಮಾಡಿ ಬಡಿಸುತ್ತಿದ್ದವರು ಅನಂತಮೂರ್ತಿಯ ತಾಯಿ. ಅವರು ಆಗ

ಸತ್ಯಾಗ್ರಹಿಗಳ ಖಜಾಂಚಿ ಕೂಡ ! ಮನೆಯಲ್ಲಿ ಒಂದು ಸಣ್ಣ ಮುದ್ರಣಯಂತ್ರ ಇತ್ತು. ಸತ್ಯಾಗ್ರಹದ ಕರಪತ್ರಗಳನ್ನೆಲ್ಲ ಹುಡುಗ ಅನಂತಮೂರ್ತಿಯೇ ಅದರಲ್ಲಿ ಮುದ್ರಿಸಿ ತಮ್ಮ ಪಟಾಲಂ ಕಟ್ಟಿಕೊಂಡು ಜನಕ್ಕೆ ಹಂಚುತ್ತಿದ್ದರು. ಹೀಗೆ ಸಮಾಜವಾದದ ಗಾಳಿ ದಟ್ಟವಾಗಿ ಬೀಸುತ್ತಿದ್ದ ಪರಿಸರದಲ್ಲಿಯೇ ಅನಂತಮೂರ್ತಿ ಬೆಳೆದದ್ದು.

ಕಥಾಸಾಹಿತ್ಯ ಅನಂತಮೂರ್ತಿಯವರ ಪ್ರಮುಖ ಅಭಿವ್ಯಕ್ತಿ ಮಾಧ್ಯಮ. ಅವರ ಮೊದಲ ಕಥಾಸಂಕಲನ 'ಎಂದೆಂದೂ ಮುಗಿಯದ ಕತೆ'. ಆ ಕಾಲಕ್ಕೆ ಅದು ಹೊಸ ರೀತಿಯ ಬರೆಹ. ಅದಕ್ಕೆ ಮುನ್ನುಡಿ ಬರೆದವರು ಅವರ ಮೆಚ್ಚಿನ ಕವಿ ಅಡಿಗರೇ. ಅವರು ಅನಂತಮೂರ್ತಿ ಅಸಾಧಾರಣ ಲೇಖಕ ಎಂದು ಗುರುತಿಸಿ "ಈ ಲೇಖಕ ಸಾಹಿತ್ಯವಲ್ಲದ್ದನ್ನು ಎಂದೂ ಬರೆಯಲಾರ" ಎಂದು ಪ್ರಶಂಸಿಸಿದರು. ಏಳು ವರ್ಷಗಳ ನಂತರ ಬಂದ 'ಪ್ರಶ್ನೆ' ಸಂಕಲನದ ಮೂಲಕ ಅನಂತಮೂರ್ತಿ ದೊಡ್ಡ ನೆಲೆಯಲ್ಲಿ ಪ್ರಕಟವಾದರು. ಮುಂದೆ ಮೂವತ್ತೆರಡು ವರ್ಷಗಳ ಅವಧಿಯಲ್ಲಿ, ಮೌನಿ, ಆಕಾಶ ಮತ್ತು ಬೆಕ್ಕು, ಸೂರ್ಯನ ಕುದುರೆ ಎಂಬ ಇನ್ನೂ ಮೂರುಕಥಾಸಂಕಲನಗಳು ಹೊರಬಂದವು. ಪ್ರಕೃತಿ, ಕಾರ್ತಿಕ, ಕ್ಲಿಪ್‌ಜಾಯಿಂಟ್, ನವಿಲುಗಳು, ಘಟಶ್ರಾದ್ಧ – ಈ ಕಥೆಗಳು ಅಪೂರ್ವವಾದುವು. 'ಸೂರ್ಯನ ಕುದುರೆ'ಯಂಥ ಕಥೆ ಭಾರತೀಯ ಕಥಾಸಾಹಿತ್ಯದಲ್ಲಿಯೇ ಅಪರೂಪ.

'ಸಂಸ್ಕಾರ' ಅನಂತಮೂರ್ತಿಯನ್ನು ಜಾಗತಿಕ ಪ್ರಸಿದ್ಧಿಗೆ ಮುಟ್ಟಿಸಿದ ಕಾದಂಬರಿ. ಎ. ಕೆ. ರಾಮಾನುಜನ್ನರು ಮಾಡಿದ ಸೊಗಸಾದ ಇಂಗ್ಲಿಷ್ ಅನುವಾದ ಅದನ್ನು ಅನೇಕ ಪಾಶ್ಚಾತ್ಯ ಕೃತಿಕಾರ, ವಿಮರ್ಶಕರ ಗಮನಕ್ಕೆ ತಂದಿದೆ. ನಯ್‌ಪಾಲ್, ಶ್ರೀಮತಿ ಹೈಡ್ರುನ್ ಬ್ರುಕ್ನರ್, ಜೈಡನ್‌ಬೋಸ್, ಮೊದಲಾದವರು ಅದರ ಬಗೆಗೆ ಚರ್ಚಿಸಿದ್ದಾರೆ. ಬ್ರೂಕ್ನರ್ ಕೃತಿಯನ್ನು ಸಾಮಾಜಿಕ ಭಾವನಾತ್ಮಕ ಮತ್ತು ಪೌರಾಣಿಕ ಎಂಬ ಮೂರು ನೆಲೆಗಳಲ್ಲಿ ಸಮರ್ಥವಾಗಿ ವ್ಯಾಖ್ಯಾನಿಸಿದ್ದಾರೆ. ಸಂಸ್ಕಾರವನ್ನು ಕರ್ಮಠ ಹಿಂದೂಧರ್ಮದ ಕಟುವಿಮರ್ಶೆಗೆ ಸೀಮಿತಗೊಳಿಸುವುದು ತೀರ ಸಂಕುಚಿತ ದೃಷ್ಟಿಯಾಗುತ್ತದೆ. ಸಾಂಪ್ರದಾಯಿಕ ಸಾಮಾಜಿಕ ಬಿಕ್ಕಟ್ಟು ಕಾದಂಬರಿಯ ಕೇಂದ್ರವಸ್ತು ಎಂದು ಜೈಡನ್ ಬೋಸ್ ವಿವರಿಸುತ್ತಾರೆ. ಬ್ರೂಕ್ನರ್ 'ಸಂಸ್ಕಾರ'ವನ್ನು ಹಿಂದೂ ಸಂಸ್ಕೃತಿಗೆ ಸಂದ ಒಂದು ಕೊಡುಗೆ ಎಂಬಂತೆಯೂ ಓದಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ. ಇದಾದ ಮೇಲೆ ಅನಂತಮೂರ್ತಿ 'ಭಾರತೀಪುರ', 'ಅವಸ್ಥೆ', 'ಭವ' ಕಾದಂಬರಿಗಳನ್ನು ಬರೆದರು. 'ದಿವ್ಯ' ಅವರ ಇತ್ತೀಚಿನ ಕಾದಂಬರಿ. ಸಾಹಿತ್ಯಾಸಕ್ತರ ಗಮನವನ್ನು ಇವು ವಿಶೇಷವಾಗಿ ಸೆಳೆದಿವೆ.

ಅನಂತಮೂರ್ತಿಯವರ ಕಥೆ ಕಾದಂಬರಿಗಳಲ್ಲಿ ಭೂತವರ್ತಮಾನಗಳು, ಪರಂಪರೆ – ಆಧುನಿಕತೆಗಳು, ಮುಕ್ತ ಸಮ್ಮತಿ – ವೈಚಾರಿಕತೆಗಳು ಒಟ್ಟೊಟ್ಟಿಗೇ ಪರೀಕ್ಷೆಗೆ ಒಳಗಾಗುತ್ತವೆ. ಕಥೆಯ ಬೆಳವಣಿಗೆಗೆ ಅಗತ್ಯವಾದ ಸಂಘರ್ಷ ಕೂಡ ಇದರಿಂದಲೇ ಹುಟ್ಟಿ ಬೆಳೆಯುತ್ತದೆ. ಕಲಾತ್ಮಕವಾಗಿಯಲ್ಲದೆ, ವೈಚಾರಿಕವಾಗಿಯೂ ಬರೆಹ ಘನವಾಗಲು ಇದು ಕಾರಣ. ಈ ಅಂಶಗಳು ಅವರ ಕಾದಂಬರಿಗಳಿಗಿಂತ ಕಥೆಗಳಲ್ಲಿಯೇ ಹೆಚ್ಚು ಪ್ರಖರವಾಗಿದೆ. ಭಾರತೀಪುರದಂಥ ಕಾದಂಬರಿಗಳಲ್ಲಿ ಹಲವು ಕಡೆ ಕಾದಂಬರಿಕಾರರ ಚಿಂತನೆ ಕಥೆಯಲ್ಲಿ ಕರಗಿ ಬರದೆ ತನಿಯಾಗಿ ಹರಿದುಬಿಡುತ್ತದೆ. ಕೃತಿಕಾರನ ಸೌಂದರ್ಯಪ್ರಜ್ಞೆ ಕ್ರಿಯಾಶೀಲವಾಗಿರುವಾಗಲೇ ಚಿಂತನಶಕ್ತಿ ಅದಕ್ಕೆ ಅಡ್ಡಿಯಾಗಿ ಬಂದು ಕಿರಿ ಕಿರಿ ಮಾಡುತ್ತದೆ ಎನಿಸುತ್ತದೆ. ಅವಸ್ಥೆ ಒಂದು ರಾಜಕೀಯ ಕಾದಂಬರಿ. ರಾಜಕೀಯವನ್ನು ವಸ್ತುವಾಗಿಸಿಕೊಂಡ ಬೇರೆ ಹಲವು ಕಾದಂಬರಿಗಳು ಕನ್ನಡದಲ್ಲಿ ಹಿಂದೆ ಬಂದಿದ್ದರೂ ಅವಸ್ಥೆಯಂಥ ಶುದ್ಧಸ್ವರೂಪದ ರಾಜಕೀಯ ಕಾದಂಬರಿ ಇಲ್ಲ ಎಂದೇ ಹೇಳಬಹುದು.

ಗೋಪಾಲಕೃಷ್ಣ ಅಡಿಗರನ್ನು ಕನ್ನಡದ ಒಬ್ಬ ಪ್ರಧಾನ ಕವಿ ಎಂದು ವಿಮರ್ಶೆಯ ಮೂಲಕ ಸ್ಥಾಪಿಸಿದ್ದು ಅನಂತಮೂರ್ತಿಯವರ ಮಹತ್ವದ ಸಾಧನೆಗಳಲ್ಲಿ ಒಂದು. ಅಡಿಗರ ಭೂಮಿಗೀತಕ್ಕೆ ಅವರ ಬರೆದ ಮುನ್ನುಡಿ ಕನ್ನಡದ ಪೂರ್ಣರೂಪದ ಪ್ರಥಮ ಪ್ರಾಯೋಗಿಕ ವಿಮರ್ಶೆಯೆನ್ನಬಹುದು. 'ಭೂತ' ಶ್ರೇಷ್ಠ ಕವನವಾದರೂ ಅದರ ಬಿಕ್ಕಟ್ಟಾದ ಬಂಧದೊಳಕ್ಕೆ ಪ್ರವೇಶಿಸುವುದೇ ಎಲ್ಲರಿಗೂ ಕಷ್ಟಕರವಾಗಿತ್ತು. ಅದರ ಮುಚ್ಚಿದ್ದ ಕಿಟಕಿ ಬಾಗಿಲುಗಳನ್ನು ಹುಡುಕಿ ತೆಗೆದು ಒಳಗೆ ಪ್ರವೇಶ ದೊರಕಿಸಿದವರೇ ಅನಂತಮೂರ್ತಿ. ಈ ಕುರಿತು ಲಂಕೇಶ್ ಹೇಳಿರುವ ಮಾತು ಇದು. "ಭೂತ ಕವನವನ್ನು ಮನಸ್ಸಿನಲ್ಲಿಟ್ಟುಕೊಂಡು ಓಡಾಡುತ್ತಾ ಅನಂತಮೂರ್ತಿ ಅದರ ಅರ್ಥಗಳನ್ನು ಶೋಧಿಸಿದ್ದು ಇವತ್ತಿಗೂ ನನಗೆ ನೆನಪಿದೆ. ಕವನವನ್ನು ಅನಂತಮೂರ್ತಿ ಓದಿರುವ, ತಿಳಿದಿರುವ, ವಿವರಿಸಿರುವ ರೀತಿ ಅನನ್ಯವಾದದ್ದು. ಹಾಗೆಯೇ ವಿದ್ಯಾರ್ಥಿಗಳೆದುರು 'ಶ್ರೀರಾಮನವಮಿಯ ದಿವಸ' ಕವನವನ್ನು ವಿವರಿಸಿದ್ದು ಕೂಡ. ವಿಮರ್ಶೆ ಕೇವಲ ಭಾಷ್ಯವಾಗದೆ ಒಂದು ಸಂಸ್ಕೃತಿಗೆ, ಜೀವಂತ ಮನಸ್ಸುಗಳಿಗೆ ಚೈತನ್ಯ ಕೊಡಬಹುದು ಎಂದು ಎಲ್ಲರಿಗೆ ಗೊತ್ತಾದದ್ದು ಅನಂತಮೂರ್ತಿ ಅಡಿಗರ ಕವನಗಳ ಬಗ್ಗೆ ಬರೆದ ವಿಮರ್ಶೆಗಳನ್ನು ಓದಿದಾಗ." ಇಂತಹ ಬರೆಹಗಳ ಮೂಲಕ ವಸ್ತುನಿಷ್ಠವಾದ ಗಂಭೀರ ವಿಮರ್ಶೆಯ ಸ್ವರೂಪವನ್ನು ಕನ್ನಡದಲ್ಲಿ ತೋರಿಸಿಕೊಟ್ಟವರು ಅನಂತಮೂರ್ತಿ. ಈ ವಿಷಯದಲ್ಲಿ ಅವರ ಜೊತೆಗೆ ಹೆಸರಿಸಬಹುದಾದ ಮತ್ತೊಬ್ಬ ವಿಮರ್ಶಕ ಕೀರ್ತಿನಾಥ ಕುರ್ತಕೋಟಿ ಮಾತ್ರ.

ಅನಂತಮೂರ್ತಿಯವರ ನಾಲ್ಕು ವಿಮರ್ಶಾ ಸಂಕಲನಗಳು ಹೊರಬಂದಿದ್ದು ಆ ಬರೆಹಗಳೆಲ್ಲ ಪ್ರಥಮ ಪಂಕ್ತಿಗೆ ಸೇರಿದುವಾಗಿವೆ. ಇವಲ್ಲದೆ ಮೂರು ಕವನ ಸಂಕಲನಗಳನ್ನೂ ಅವರು ಪ್ರಕಟಿಸಿದ್ದಾರೆ. ಗದ್ಯಕಥನ ಅವರ ಸಮರ್ಥ ಮಾಧ್ಯಮ ನಿಜ. ಆದರೆ 'ಕಿಳ್ಳೆಕ್ಯಾತರ ಹುಡುಗಿ,' 'ಚರಿತ್ರೆ ಮತ್ತು ಜಿಪ್ಸಿ', 'ಮಿಲನ್ ಕುಂದೇರ ಹೇಳಿದ ಕಥೆ', 'ದಲೈಲಾಮಾ ಮತ್ತು ಚರಿತ್ರೆ' – ಇಂಥ ಸತ್ವಯುತ ಕವನಗಳು ಸಮರ್ಥಕವಿಯೊಬ್ಬ ಮಾತ್ರ ಬರೆಯಬಹುದಾದುವು.

ಒಬ್ಬ ಸಂಸ್ಕೃತಿ ಚಿಂತಕರಾಗಿ ಅನಂತಮೂರ್ತಿ ಮಾಡಿರುವ ಕೆಲಸ ತುಂಬ ಘನವಾದದ್ದು. ತಾವು ಹೋದಲ್ಲೆಲ್ಲ ಅವರು ಕನ್ನಡ ಸಂಸ್ಕೃತಿಯನ್ನು ಪ್ರತಿನಿಧಿಸಿದ್ದಾರೆ, ಅದರ ವಕ್ತಾರರಾಗಿದ್ದಾರೆ. ಅಯೋವಾ ವಿಶ್ವವಿದ್ಯಾಲಯದಲ್ಲಿ ವಚನ ಸಾಹಿತ್ಯ ಕುರಿತು ಪಾಠ ಹೇಳಿದ್ದಾರೆ, ಪ್ಯಾರಿಸ್ಸಿನಲ್ಲಿ ಪುರಂದರ ದಾಸರ 'ಉತ್ತಮ ಪ್ರಭುತ್ವ ಲೊಳಲೊಟ್ಟೆ' ಎಂಬ ಪದ ಕುರಿತು ಪ್ರಬಂಧ ಮಂಡಿಸಿದ್ದಾರೆ. ಅಮೆರಿಕದ ಹ್ಯೂಸ್ಟನ್ನಿನಲ್ಲಿ ನಡೆದ ಪ್ರಥಮ ವಿಶ್ವಕನ್ನಡ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾಡಿದ ಭಾಷಣ ಬಹಳ ಪ್ರಸ್ತುತವಾಗಿದ್ದು ಅಲ್ಲಿ ಸೇರಿದ್ದ ಸಾವಿರಾರು ಕನ್ನಡಿಗರ ಮನಸ್ಸನ್ನು ಸೂರೆಗೊಂಡಿತು. ಅವರ ಹಲವು ಕೃತಿಗಳು ಭಾರತೀಯ ಭಾಷೆಗಳಿಗೆ ಮಾತ್ರವಲ್ಲದೆ ಕೆಲವು ಯೂರೋಪಿಯನ್ ಭಾಷೆಗಳಿಗೂ ಹೋಗಿವೆ. ಫ್ರೆಂಚ್, ಜರ್ಮನ್, ಹಂಗೆರಿಯನ್, ರಷ್ಯನ್, ಸ್ವೀಡಿಷ್ ಭಾಷೆಗಳಿಗೆ ಅನುವಾದವಾಗಿರುವ 'ಸಂಸ್ಕಾರ' ಕೆಲವು ವಿಶ್ವವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿ ಅಧ್ಯಯನಗೊಂಡದ್ದೂ ಇದೆ.

ಮೈಸೂರು ವಿಶ್ವವಿದ್ಯಾಲಯದಲ್ಲಿ ಸಾಹಿತ್ಯದ ಪ್ರಾಧ್ಯಾಪಕರಾಗಿ, ಕೇರಳ ಮಹಾತ್ಮಾಗಾಂಧಿ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ, ನ್ಯಾಷನಲ್ ಬುಕ್ ಟ್ರಸ್ಟ್‌ನ ನಿರ್ದೇಶಕರಾಗಿ, ಕೇಂದ್ರಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ದುಡಿದಿರುವ ಅನಂತಮೂರ್ತಿ ಕಾಲಿಗೆ ಚಕ್ರಕಟ್ಟಿಕೊಂಡವರಂತೆ ಹಲವು ಬಾರಿ ದೇಶ ವಿದೇಶ ಸುತ್ತಿದ್ದಾರೆ. ಈ ಎಲ್ಲದರ ನಡುವೆ ಗಂಭೀರ ಸಾಹಿತ್ಯ ಚರ್ಚೆಗೆ ವೇದಿಕೆಯಾಗಿ ರುಜುವಾತು ಸಾಹಿತ್ಯ ಪತ್ರಿಕೆಯನ್ನು ಕೆಲವು ವರ್ಷ ನಡೆಸಿದ್ದಾರೆ.

ಸದಾ ವಿನಯವಂತರೂ ಮೃದು ಭಾಷಿಯೂ ಆಗಿರುತ್ತಲೇ ಅನಂತಮೂರ್ತಿ ತಾನು ಸರಿ ಎಂದು ತಿಳಿದದ್ದನ್ನು ಧೈರ್ಯವಾಗಿ ಹೇಳಿದ್ದಾರೆ, ಬರೆದಿದ್ದಾರೆ, ಪ್ರಾಮಾಣಿಕವಾಗಿ ನಡೆದುಕೊಂಡಿದ್ದಾರೆ. ಲೋಕ ಮೆಚ್ಚುವುದು ಅವರಿಗೆ ಬೇಕಿಲ್ಲ ಎಂದಲ್ಲ. ಆದರೆ ಅದೇ ಅವರ ಗುರಿಯಲ್ಲ. ಪೇಜಾವರ ಯತಿಗಳು ಹರಿಜನಕೇರಿಗೆ ಹೋದಾಗ ಅನಂತಮೂರ್ತಿ ಅವರಿಗೆ ಬರೆದ ಪತ್ರ ಇದಕ್ಕೆ ಒಂದು ನಿದರ್ಶನ.

ಅದನ್ನು ಬಹಿರಂಗ ಮಾಡದಂತೆ ಆಪ್ತಗೆಳೆಯರು ಹೇಳಿದರೂ ಅವರು ಒಪ್ಪಲಿಲ್ಲ. ಈ ಸಂಬಂಧದಲ್ಲಿ ಅವರನ್ನು ಅಪಪ್ರಚಾರದ ಸುಳಿಗೆ ಸಿಕ್ಕಿಸಲಾಯಿತು. ಸರ್ಕಾರ ಕಾನೂನು ಬದ್ಧವಾಗಿ, ಹಣ ಪಡೆದು ಅವರಿಗೆ ಕೊಟ್ಟ ಮನೆಯೊಂದರ ಬಗ್ಗೆ ಒಂದು ವಾರಪತ್ರಿಕೆ ಮತ್ತೆ ಮತ್ತೆ ಅಪಪ್ರಚಾರ ಮಾಡಿತು. ಈ ಉದ್ದೇಶಪೂರ್ವಕ ದಾಳಿಗೆ ಅವರು ನೊಂದರೂ ಮಣಿಯಲಿಲ್ಲ. ಅವರನ್ನು ಗೆಳೆಯರು ಸಾಕಷ್ಟು ಟೀಕೆ ಮಾಡಿದ್ದಾರೆ, ಮಾಡುತ್ತಾರೆ; ಯಾಕೆಂದರೆ ಅಷ್ಟರಿಂದ ಅವರ ಸ್ನೇಹ ಕಡಿದುಹೋಗುತ್ತದೆ ಎಂಬ ಭಯವೇನೂ ಇಲ್ಲ. ಅನಂತಮೂರ್ತಿ ಒಬ್ಬ ಅಜಾತಶತ್ರು; ಅವರ ಮನೆಯ ಹೆಸರೇ 'ಅಭಯ'.

●

ಅನಂತಮೂರ್ತಿಗೆ

ರೀ ಅನಂತಮೂರ್ತಿ
ನೀವು ಅದೆಷ್ಟು ಸ್ವಾರ್ಥಿ!
ಯಾರಿಗೂ ಬಿಡದೆ ಒಬ್ಬರೇ
ದೋಚಿಕೊಳ್ಳುವುದೆ ಎಲ್ಲಾ ಕೀರ್ತಿ!
ಏನೆಲ್ಲ ಕಾಡಿದುವಪ್ಪ ನಿಮ್ಮನ್ನ!
ಹೆಣ್ಣು, ಹೆಸರು, ಹಾಗೇ
ಮಣ್ಣಿನ ಮಕ್ಕಳ ಮೂಕ ನಿಟ್ಟುಸಿರು;
ಗಾಂಧೀ, ಲೋಹಿಯಾ, ಹಾಗೇ
ಧಗಧಗಿಸುವ ಸೃಷ್ಟಿಕಾರಕ ಬಸಿರು;
ನೇರ ಮಠದಿಂದಲೇ ಬಂದರೂ
ಗುಂಡು, ಚಾಕಣದ ತುಂಡು, ಜೊತೆಗೇ
ಕೇಳುಗರೆದೆ ಜುಮ್ಮೆನಿಸುವ ಮಾತಿನ ತೊಂಡು;
ಹಿಮಾಲಯದಂಥ ಅಡಿಗ, ಜೊತೆಗೇ
ಪತ್ರಿಕೆ ದೊಣ್ಣೆಯ ಬೀಸುವ
ಸ್ನೇಹಾಸೂಯೆಯ ಬಡಿಗ.
ಇಲ್ಲವೆಂದಲ್ಲ ಮನಸ್ಸಿನ ತಳಾತಳದಲ್ಲಿ
ಮಿಣ್ಣನೆ ಧೂರ್ತ,
ಆದರೆ ಅಲ್ಲೇ ಇದ್ದಾನೆ ಅವನನ್ನು
ನಿಯಂತ್ರಿಸುವ ಕುಶಲಿ ಪಾರ್ಥ.
ಜೀರ್ಣಿಸಿಕೊಂಡಿರಿ ಎಲ್ಲಾ
ಪ್ರೀತಿಯ ಬಲದಲ್ಲಿ,
ಜೀರ್ಣಿಸಿಕೊಂಡಿರಿ ಬರೆದು ಮನಸಾಕ್ಷಿಯ ಸಹಿಯಲ್ಲಿ;
ಒಳಗಿನ ಕೌಶಿಕನನ್ನೇ
ಅರಣಿ ಸಮಿತ್ತು ಮಾಡಿ
ಸತ್ಯಕ್ಕೆ ಅಹುತಿ ನೀಡಿ
ಶೂದ್ರ ಋಷಿಯಾದಿರಿ ಬರೆದು ಮನಸಾಕ್ಷಿಯ ಸಹಿಯಲ್ಲಿ;

ಸದ್ದುಗದ್ದಲವಿರದೆ ಏನೆಲ್ಲ ಗೆದ್ದಿದ್ದೀರಿ!
ಶರಣರ ವಚನ ಜ್ಯೋತಿಯ
ಆಯೋವಾದಲ್ಲಿ ಮುಡಿಸಿ,
ಪುರಂದರಕೃತಿ ಹೂರಣವ
ಪ್ಯಾರಿಸ್ಸಿನಲ್ಲಿ ಬಡಿಸಿ,
ಕನ್ನಡ ಸಂಸ್ಕೃತಿ ಕೇದಗೆ
ಕಡಲಾಚೆಗೂ ಕಳಿಸಿ,
ಅರಿಯದಂತೆ ಇದ್ದೀರಿ
ಸಾಮಾನ್ಯರ ಥರ ನಟಿಸಿ.
ಇದೆ ನಿಮ್ಮ ತೆಕ್ಕೆಯಲ್ಲಿ ಘನವಾದದ್ದೆಲ್ಲ:
ಅಡಿಗರ ಪದ್ಯ ಲಂಕೇಶರ ಗದ್ಯ
ಕುವೆಂಪು ಕಥಾಲೋಕ,
ಎಮರ್ಜನ್ಸಿಗೆ ಬಲಿಯಾದ ಸ್ನೇಹಲತಾ ಕುರಿತ ಶೋಕ,
ಬೇಂದ್ರೆಯ ಮಾಯಾಸೃಷ್ಟಿ,
ಕಾರಂತರ ಎವೆಹೊಳಚದ ನಿಷ್ಠುರ ದೃಷ್ಟಿ,
ಕ್ರಿಸ್ತನ ಮಗಳು ಎಸ್ತರಳ ಪ್ರೇಮ,
ಸಾವಿರ ಕನಸುಗಳ ಶಿಖರ ಸ್ತೋಮ.
ಇನ್ನೂ ಏನೇನೋ–
ಹೇಳಲು ಸೋತೆ, ತೋಚುತ್ತಿಲ್ಲ ಮಾತೇ
ಸಡಿಲಿಸಿ ಕೊಂಚ ತೋಳು,
ಒಳಕ್ಕೆ ನುಸುಳಲಿ ಈ ಭಟ್ಟನದೂ
ಒಂದೆರಡು ಸಾಲು!

– ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಕನ್ನಡ ಕಾವ್ಯದ ಮಧುರಕಂಠ ಕೋಗಿಲೆ ಚೆನ್ನವೀರ ಕಣವಿ

ತಮ್ಮನ್ನು ಕಾಣಲೆಂದೇ ಪ್ರೊ॥ ಮಾ[illegible]ವಾಡರ ಜೊತೆ ಬಂದಿದ್ದಾರೆ. ಆದರೆ ಭಕ್ತಿ, ಗೌರವ, ಸಂಕೋಚಗಳಿಂದಾಗಿ ದೂರವೇ ಕೂತಿದ್ದಾರೆ. ಅವರನ್ನು ಕುವೆಂಪು ಇಲ್ಲಿ ಬನ್ನಿ ಎಂದು ಹತ್ತಿರಕ್ಕೆ ಕರೆದು ಕೂರಿಸಿಕೊಂಡರು. ಪ್ರೀತಿಯಿಂದ ಮೈಸವರಿ ಹೇಳಿದರು: "ಕಣವಿ ಎಷ್ಟು ಒಳ್ಳೆಯ ಕವಿತೆ ಬರೆದಿದ್ದೀರಿ ! ಇವತ್ತು ನಿಮ್ಮ ಕವಿತೆ ಕೇಳಿ ನನಗೆ ರೋಮಾಂಚನವಾಗಿಹೋಯಿತು".

ಕುವೆಂಪು ಬಾಯಿಂದ ಇಂಥ ಮುಕ್ತ ಪ್ರಶಂಸೆ ಕೇಳಿ ಕಣವಿಯವರಿಗೂ ಕೂದಲು ಮೈಮೇಲೆ ನಿಂತಿರಬೇಕು. ಆಗ ಅವರಿಗೆ ಮೂವತ್ತೇಳು ವರ್ಷ. ಆ ವಯಸ್ಸಿಗೇ ಅವರು ಕನ್ನಡದ ಕವಿ ಮಾರ್ತಾಂಡನಿಂದ ಇಂಥ ಎಣೆಯಿಲ್ಲದ ಪ್ರಶಸ್ತಿ ಗಿಟ್ಟಿಸಿದ್ದರು.!

ಆ ಸೌಭಾಗ್ಯಕ್ಕೆ ಪಾತ್ರವಾದ ಕವಿತೆ 'ವಿಶ್ವವಿನೂತನ ವಿದ್ಯಾಚೇತನ ಸರ್ವಹೃದಯ **ಸಂಸ್ಕಾರಿ**' ಎಂದು ಆರಂಭವಾಗುವ ನಾಡಗೀತೆ. ಮೇಲಿನ ಘಟನೆ ನಡೆದ ದಿನ ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಆ ವರ್ಷದ ಘಟಿಕೋತ್ಸವ ಮುಗಿದಾಗಿತ್ತು. ಘಟಿಕೋತ್ಸವದ ಭಾಷಣ ಮಾಡಿ ಆ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನೂ ಸ್ವೀಕರಿಸಿದ್ದ ಕುವೆಂಪು ಆರಂಭದಲ್ಲಿ ಹಾಡಿದ್ದ ಕಣವಿಯವರ ಗೀತೆಯನ್ನು ಕೇಳಿದ್ದರು. ಕನ್ನಡನಾಡಿನ ಭವ್ಯಪರಂಪರೆಯ ಮೆರವಣಿಗೆಯಂತಿರುವ ಆ ಪದ್ಯವನ್ನು ಕುವೆಂಪು ಭಾವಪರವಶರಾಗಿ ಆನಂದಿಸಿದ್ದಿರಬೇಕು.

ನಾಲ್ಕಾರು ಜನಕ್ಕಷ್ಟೆ ಗೊತ್ತಿದ್ದಿರಬಹುದಾದ ಈ ಘಟನೆ ಹೊರಬಂದದ್ದು ಮೊನ್ನೆ ಬೆಂಗಳೂರಿನಲ್ಲಿ ನಡೆದ ಮನೆಯಂಗಳದ ಮಾತುಕಥೆ ಕಾರ್ಯಕ್ರಮದಲ್ಲಿ. ಚೆನ್ನವೀರ ಕಣವಿ ಮುಖ್ಯ ಅತಿಥಿಯಾಗಿ ಸಂಸ್ಕೃತಿ ಇಲಾಖೆಯ ಆ ಕಾರ್ಯಕ್ರಮಕ್ಕೆ

ಆಹ್ವಾನಿತರಾಗಿದ್ದರು. ಕಿಕ್ಕಿರಿದ ಸಭೆ ಕವಿಯ ಜೊತೆ ಹಿತವಾದ ಸಂವಾದದಲ್ಲಿ ತೊಡಗಿತ್ತು. ಶ್ರೋತೃವೊಬ್ಬರು ಕೇಳಿದ ಪ್ರಶ್ನೆಗೆ ಉತ್ತರ ಕೊಡುವಾಗ ಕವಿ ತಮ್ಮ ಮನಸ್ಸಿನಾಳದಲ್ಲಿ ಬಹಳ ಜೋಪಾನವಾಗಿ ಅಡಗಿಸಿಟ್ಟುಕೊಂಡಿದ್ದ ಈ ಪ್ರಿಯ ಸಂಗತಿ ಹಠಾತ್ತನೆ ಎಂಬಂತೆ ಹೊರಗುರುಳಿ ಬಂತು. ಅದನ್ನು ಹೇಳುತ್ತ ಕವಿ ಭಾವವಶರಾಗಿ ಒಂದು ಕ್ಷಣ ಸ್ತಬ್ಧರಾದರು. ಮೌನದಲ್ಲಿ ಆಲಿಸಿದ ಸಭೆ ಆ ಸಂಗತಿಯಿಂದ ಪುಳಕಗೊಂಡು ಚಪ್ಪಾಳೆ ಹಾಕಿ ಹರ್ಷೋದ್ಗಾರ ಮಾಡಿತು.

ಕಣವಿಯವರು ಆ ಕವಿತೆ ರಚಿಸಲು ಆಗ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಪಾವಟೆಯವರ ಅಪೇಕ್ಷೆಯೂ ಒಂದು ಕಾರಣ. ಕವಿತೆಯನ್ನು ಮೆಚ್ಚಿಕೊಂಡ ಕುಲಪತಿ ಸಂಗೀತ ವಿಭಾಗದಲ್ಲಿದ್ದ ಶಾರದಾ ಹಾನಗಲ್ (ಗಂಗೂಬಾಯಿಯವರ ಸೋದರಿ) ಅವರಿಂದ ಅದಕ್ಕೆ ರಾಗಸಂಯೋಜನೆ ಮಾಡಿಸಿದ್ದರು. ಈಗಲೂ ಕಣವಿಯವರಿಗೆ ಅದು ಬಹಳ ಪ್ರಿಯ. ಮುಂದೆ ಎಚ್.ಕೆ. ನಾರಾಯಣ ಅದಕ್ಕೆ ಮಾಡಿದ ರಾಗಸಂಯೋಜನೆಯಿಂದ ಅದು ಇನ್ನಷ್ಟು ಜನಪ್ರಿಯವಾಗಿದೆ. ಎಷ್ಟು ಎಂದರೆ, ಕನ್ನಡ ಕವಿತೆ ಹಾಡುವ ಎಲ್ಲರ ಕಂಠದಲ್ಲಿ ಮತ್ತು ಕೇಳುವ ಎಲ್ಲ ಶ್ರೋತೃಗಳ ಕಿವಿಯಲ್ಲಿ ಆ ನಾಡಗೀತೆ ಭದ್ರವಾಗಿ ಮನೆ ಮಾಡಿಕೊಂಡಿದೆ. ಕಣವಿಯವರು ಅದಕ್ಕಿಂತ ಉತ್ತಮವಾದ, ಹೆಚ್ಚು ಸತ್ವಶಾಲಿಯಾದ ನೂರಾರು ಕವಿತೆ ಬರೆದಿದ್ದಾರೆ. ಆದರೆ ಗೀತೆಯಾಗಿ ಮಾತ್ರ ಅದು ನಾಡಿನ ಬೆರಳೆಣಿಕೆಯ ಜನಪ್ರಿಯ ಪದ್ಯಗಳಲ್ಲಿ ಒಂದು.

ಇನ್ನೂ ವಿದ್ಯಾರ್ಥಿಯಾಗಿದ್ದಾಗಲೇ ಕಣವಿ ತಮ್ಮ ಪ್ರಥಮ ಕವನ ಸಂಕಲನ 'ಕಾವ್ಯಾಕ್ಷಿ'ಯನ್ನು ಗೋಕಾಕರ ಮುನ್ನುಡಿಯೊಂದಿಗೆ ಹೊರತಂದರು. ಅದರಲ್ಲಿ 'ಕೋಗಿಲೆ' ಎಂಬ ಕವಿತೆಯೊಂದಿದೆ. "ಈಗತಾನೆ ಬಂದಿತೇನೆ / ಮಧುರ ಕಂಠ ಕೋಗಿಲೆ" ಎಂದು ಆರಂಭವಾಗುವ ಕವಿತೆ ಅದು. ಪದ್ಯವೇನೋ ಕಾಡಿನಲ್ಲಿ ಹೊಸದಾಗಿ ಸುಳಿದಿರುವ ಮಧುರಕಂಠದ ಕೋಗಿಲೆಯನ್ನು ಕುರಿತದ್ದು ಎಂಬಂತಿದೆ. ಆದರೆ ಮರೆಯಲ್ಲಿ ಆ ಕೋಗಿಲೆ ಸ್ವತಃ ಕವಿಯೇ ಆಗಿದೆ. 'ಈಗ ತಾನೆ ಬಂದಿದೇನೆ' ಎಂದೂ ಓದಿಕೊಳ್ಳಲು ಸಾಧ್ಯವಿರುವ ಈ ಪದ್ಯ, ಕವಿ ತಾನು ಕನ್ನಡ ಕಾವ್ಯವನಕ್ಕೆ ಆಗಮಿಸಿರುವುದನ್ನು ವಿನಯದಿಂದ, ಆದರೆ ಅಷ್ಟೇ ಆತ್ಮವಿಶ್ವಾಸದಿಂದ ಘೋಷಿಸುತ್ತಿರುವುದನ್ನು ಧ್ವನಿಸುತ್ತದೆ. ಕಣವಿಯವರ ಒಟ್ಟು ವ್ಯಕ್ತಿತ್ವವೇ ಹಾಗೆ. ಅದು ಎಂದೂ ವಿನಯ ಸೌಜನ್ಯಗಳಿಗೆ ಹೊರತಾಗದ್ದು. ಆದರೆ ಅಷ್ಟೇ ದೃಢವಾದದ್ದು.

ಕಣವಿಯವರು ಪದ್ಯ - ಗದ್ಯ ಎರಡರಲ್ಲಿಯೂ ಕೆಲಸ ಮಾಡಿದ್ದಾರೆ. ಆದರೆ ಅವರ ಬರೆಹ ಪ್ರಧಾನವಾಗಿ ಕಾವ್ಯಕೇಂದ್ರಿತವಾದದ್ದು. ಸಾಹಿತ್ಯಲೋಕ

ಅವರನ್ನು ಸ್ವೀಕರಿಸಿರುವುದು ಕವಿಯೆಂದೇ. ಈವೆರೆಗೆ ಅವರ ಹದಿನಾರು ಕಾವ್ಯಸಂಕಲನಗಳು ಹೊರಬಂದಿವೆ. ಅವರ ಸಮಗ್ರ ಕಾವ್ಯದ ಸಂಪುಟ ಮೂರನೆಯ ಮುದ್ರಣ ಕಾಣುತ್ತಿದೆ. ಇತರ ಅನೇಕ ಪ್ರಶಸ್ತಿಗಳಲ್ಲದೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪಪ್ರಶಸ್ತಿಗಳು ಅವರನ್ನು ಅಲಂಕರಿಸಿವೆ. ಕಣವಿಯವರ ಪತ್ನಿ ಶಾಂತಾದೇವಿ ಕೂಡ ಗಮನಾರ್ಹ ಸಣ್ಣಕಥೆಗಳನ್ನು ಬರೆದು ಗಂಡನಂತೆಯೇ ಹೆಸರಾದ ಲೇಖಕಿಯಾಗಿದ್ದಾರೆ.

ಕಾವ್ಯ ಧಾರವಾಡದಲ್ಲಿ ಬೇಂದ್ರೆಯವರ ಉತ್ತರಾಧಿಕಾರಿಯೆನಿಸಿಕೊಂಡಿರುವ ಕಣವಿ ಕವಿಯಾಗಿ ಎಷ್ಟು ಹಿರಿಯರೋ ವ್ಯಕ್ತಿಯಾಗಿ ಅಷ್ಟೇ ಸಜ್ಜನರು. ಅವರ ಬರೆಹ ಯಾವುದೇ ಚಳುವಳಿ ಸಿದ್ಧಾಂತಗಳ ಕೈಹಿಡಿದು ಪರವಶವಾದದ್ದಲ್ಲ. ಎಲ್ಲ ಪ್ರವಾಹಗಳಲ್ಲೂ ಅವರು ಈಜಿ ಬಂದವರು, ಯಾವುದರಲ್ಲೂ ಮುಳುಗಿ ಹೋದವರಲ್ಲ. "ಕಣವಿಯುವರ ಕಾವ್ಯಜೀವನ ಮೂಲತಃ ಪರಿಸರ ಸಂವೇದಿಯಾದದ್ದು; ಬದುಕಿನ ಯಾವುದೇ ಒಂದು ಸಿದ್ಧಾಂತಕ್ಕೂ ಗಂಟು ಹಾಕಿಕೊಂಡು ಸ್ಥಗಿತವಾಗದ್ದು. ಅದು ತನ್ನ ಅಭಿರುಚಿಗೆ ಹಾಗೂ ಕಾವ್ಯಪ್ರಜ್ಞೆಗೆ ಒಳಗಾದುದೆಲ್ಲಕ್ಕೂ ನಂಟುಹಾಕಿಕೊಳ್ಳುತ್ತ ಚಲನಶೀಲವಾಗಿ ತನ್ನ ಜೀವಂತಗತಿಯನ್ನು ಪ್ರಕಟಿಸಿಕೊಂಡಿದೆ" ಎನ್ನುವ ಜಿ.ಎಸ್. ಶಿವರುದ್ರಪ್ಪನವರ ಮಾತು ಕಣವಿಕಾವ್ಯದ ಒಟ್ಟು ಸ್ವರೂಪವನ್ನು ಸಮರ್ಪಕವಾಗಿ ವಿವರಿಸುತ್ತದೆ.

ಪ್ರಸಿದ್ಧ ವಿಮರ್ಶಕ ಕೀರ್ತಿನಾಥ ಕುರ್ತಕೋಟಿಯವರು ಕಣವಿಯವರ ಕಾವ್ಯ ಕುರಿತು ಬರೆಯುತ್ತ "ಶಾಬ್ದಿಕ ಅನುಭವವನ್ನು ವಾಸ್ತವಿಕ ಅನುಭವದಿಂದ ಪ್ರತ್ಯೇಕಗೊಳಿಸುವ ಸಾಮರ್ಥ್ಯ ಕಣವಿಯವರ ಕಾವ್ಯಕ್ಕಿದೆಯೇ ಎಂಬ ಪ್ರಶ್ನೆಯೇಳುತ್ತದೆ" ಎಂದಿದ್ದಾರೆ. ಕವಿ ತಾನು ಪಡೆದ ವಾಸ್ತವಾನುಭವವನ್ನು ಕವಿತೆಯ ಮೂಲಕ ಕೊಡುವಾಗ ಅದನ್ನು ಲೋಕೋತ್ತರವಾಗಿಸಿಕೊಡುವ ಕಲೆಯ ಬಗ್ಗೆ ಕೀರ್ತಿನಾಥರು ಹೇಳುತ್ತಿದ್ದಾರೆ. ಕಣವಿಯವರ ಬಗ್ಗೆ ಅವರ ಮಾತನ್ನು ಒಪ್ಪುವುದು ಬಿಗಿಯಾಗುತ್ತದೆ. ಏಕೆಂದರೆ ಆ ಕಲೆ ಕಣವಿಯವರಲ್ಲಿ ಧಾರಾಳವಾಗಿದೆ. ಮೇಲಿಗೆ ತೀರ ಸರಳವಾಗಿ ಕಾಣುವ ಅವರ ಕವಿತೆಯೊಂದರ ಈ ಸಾಲುಗಳನ್ನು ನೋಡಿ.

ಹೂವು ಹೊರಳುವುವು ಸೂರ್ಯನ ಕಡೆಗೆ
ನಮ್ಮ ದಾರಿ ಬರಿ ಚಂದ್ರಸವರೆಗೆ

....

ಸಹಜ ನಡೆದರೂ ಭೂಮಿಯ ಲಯದಲಿ
ಪದಗಳನಿರಿಸಿದ ಹಾಗೆ

ವಿಶ್ವದ ರಚನೆಯ ಹೊಳಹಿನಲ್ಲಿ
ಕಂಗೊಳಿಸಿತು ಕವಿತೆಯು ಹೀಗೆ.

ಮೊದಲ ಸಾಲುಗಳಲ್ಲಿಯೇ ವಾಸ್ತವಾನುಭವವನ್ನು ಹೊಸದರ್ಶನಕ್ಕೆ ಹೊರಳಿಸುವ ಹೊಂಚು ಇದೆ. ಮನುಷ್ಯ ಎರವಲು ಬೆಳಕಿನ ಚಂದ್ರನ ಬೆನ್ನು ಹತ್ತಿದ್ದರೆ ನಿಸರ್ಗ ಸ್ವಯಂಪ್ರಭನಾದ ಸೂರ್ಯನ ಕಾಂತಿಗೆ ಮುಖ ಮಾಡಿಕೊಂಡಿದೆ. ಎರವಲು ಬೆಳಕು ಏನನ್ನೂ ಬೆಳೆಸಲೊಲ್ಲದ್ದು. ಅದು ಬೆಳಕಿನ ಒಂದು ತೋರಿಕೆ, ಕೇವಲ ಮಾಯೆ. ಸೂರ್ಯನ ತೇಜಸ್ಸು ಮಾತ್ರ ಮುಟ್ಟಿದ್ದನ್ನು ಬೆಳೆಸುವಂಥದ್ದು; ತೋರಿಕೆಯಲ್ಲ, ಸತ್ಯ. ನಾವು ಜಡವೆಂದು ಭಾವಿಸಿರುವ ನಿಸರ್ಗ ಸತ್ಯದ ಕಡೆಗೆ ಹೊರಳಿದ್ದರೆ ಬುದ್ಧಿವಂತನೆನಿಸಿಕೊಂಡ ಮನುಷ್ಯ ಮಾಯೆಯ ಬೆನ್ನು ಹತ್ತಿದ್ದಾನೆ. ಇಷ್ಟೆಲ್ಲ ಅರ್ಥವನ್ನು ಈ ಸಾಲುಗಳು ಧ್ವನಿಸಿಬಿಡುತ್ತವೆ. ಕಡೆಯ ನಾಲ್ಕು ಸಾಲೂ ಇಷ್ಟೇ ವಿಶಿಷ್ಟವಾದವು. ತಾನು ಬಯಸಿದ ದಿಕ್ಕಿನಲ್ಲೇ ಹೋಗುತ್ತಿದ್ದರೂ ಮನುಷ್ಯ, ಭೂಮಿಯ ಮೇಲೆ ಇರುವುದರಿಂದ ತನ್ನ ಅರಿವೇ ಇಲ್ಲದೆ ಭೂಮಿ ಸಾಗುವ ದಿಕ್ಕಿನಲ್ಲೇ ಇದ್ದಾನೆ. ಅವನ ಚಲನೆ ಬೇರೊಂದರಿಂದ ನಿಯಂತ್ರಿತವಾಗಿದೆ. ಕವಿತೆಯೂ ಹಾಗೇ. ವಿಶ್ವದ ರಚನೆಗೆ ಹೊಂದಿಕೊಂಡೇ ಸಾರ್ಥಕವಾಗಿದೆ. ಮನುಷ್ಯ – ನಿಸರ್ಗ ಎರಡರ ನಡೆಯನ್ನು ಹೀಗೆ ಭಿನ್ನವಾಗಿ ಅಭಿನ್ನವಾಗಿ ಆದರೆ ಅನನ್ಯವಾಗಿ ವ್ಯಾಖ್ಯಾನಿಸುವ ಸಾಲುಗಳನ್ನು ನಾನು ಹೆಚ್ಚು ನೋಡಿಲ್ಲ. ತೋರಿಕೆಗೆ ಸರಳವಾಗಿರುವ ಕವಿತೆ ಒಂದು ಆಧ್ಯಾತ್ಮಿಕ ಹೊಳಹಿನಲ್ಲಿ ಕಣ್ಣು ಬಿಚ್ಚಿದೆ. ಶಾಬ್ದಿಕ ಅನುಭವ ವಾಸ್ತವಿಕ ಅನುಭವದಿಂದ ಪ್ರತ್ಯೇಕಗೊಂಡಿದೆ. ಅಲ್ಲದೆ ಕಾವ್ಯದ ಕೆಲಸ ಏನೆನ್ನುವುದು ಕವಿಗೂ ಗೊತ್ತಿದೆ.

ನೆಲದ ಒಡಲಿನೊಳ
ಗೇನು ನಡೆಯುವುದೊ
ಎಲ್ಲಿ ಕುಳಿತಿಹನೊ ಕಲಾವಿದ

ಎನ್ನುತ್ತದೆ ಕವಿತೆ. ಬಿತ್ತವನ್ನು ಪಡೆದುಕೊಂಡ ಮಣ್ಣಿನ ಕತ್ತಲಗರ್ಭ ಸುಂದರವಾದ ಹೂವನ್ನು ಹೊರಹಾಕಿ ಬಿಡುತ್ತದೆಯಷ್ಟೆ. ಈ ಪವಾಡ ಮಾಡುವ ಕಲಾವಿದ ಅದೆಲ್ಲಿದ್ದಾನೊ ಎಂದು ಕವಿತೆ ಬೆರಗಾಗಿ ಕೇಳುತ್ತದೆ. ಕಲೆಯೆನ್ನುವುದು ಪರಿವರ್ತನ ಕಾರಕವಾದ ಪವಾಡ ಕ್ರಿಯೆ ಎನ್ನುವುದು ಕವಿಗೆ ಚೆನ್ನಾಗಿ ಗೊತ್ತಿದೆ. ಕವಿತೆ ಅದನ್ನು ಮಾಡಿ ತೋರಿಸಿಯೂ ಇದೆ. "ಕಣವಿಯವರ ಕಾವ್ಯದಲ್ಲಿ ಲೋಕೋತ್ತರ ಸ್ಫುರಿತಗಳಿವೆ" ಎಂಬ ಪುತಿನ ಅವರ ಮಾತಿಗೆ ಇದು ನಿದರ್ಶನವೆಂಬಂತಿದೆ.

ಕಣವಿಯವರ ಕಾವ್ಯ ಸಾಕಷ್ಟು ವೈವಿಧ್ಯದಿಂದ ತುಂಬಿದೆ. ಅದರಲ್ಲಿ ಬೇಂದ್ರೆ, ಪುತಿನ, ವಿನಾಯಕರಿಗೆ ವಂದನೆ – ಇಂಥ ಸುಂದರ ಸುನೀತಗಳಿವೆ. ಅವರ

'ರಂಜನಾ ಕವನ ಕೆ.ಎಸ್.ನ ಅವರ 'ತುಂಗಭದ್ರ', ಜಿ.ಎಸ್.ಎಸ್. ಅವರ 'ಕ್ರಾಂತಿಕಾರ'ದಂಥ ಮೋಹಕ ಕವನಗಳಿಗೆ ಸರಿದೊರೆಯಾದದ್ದು. ಲಾಗ, ಅಪರಾವತಾರ, ಅಲ್ಲ ಮಾತ್ಹೇಳತೀನಿ ಮೊದಲಾದ ವಿಡಂಬನೆಗಳು ಒಂದೇ ಸಲಕ್ಕೆ ಗುರಿ ಭೇದಿಸುವ ಮಾರ್ಗಣಗಳಾಗಿವೆ. ಗಿರಿಗಿರಿ – ಗಿಂಡಿಯಂಥ ಹೂಹಗುರ ಪದ್ಯಗಳು ಬೆರಗು ಕವಿಸುವಷ್ಟು ಆಕರ್ಷಕವಾಗಿವೆ. 'ಮಣ್ಣಿನ ಮೆರವಣಿಗೆ'ಯಲ್ಲಿ ಬರುವ–

ಸಂಜೆ ಮುಂಜಾವುಗಳ
ಸೂರ್ಯಬಿಂಬದ ಸುತ್ತು
ಸದ್ದು ಗದ್ದಲವಿರದೆ
ಎದ್ದು ಬಾನಂಗಳಕೆ
ಬರುವ ಚಂದ್ರನ ಹೆಗಲ ಮೇಲೆ ಹೊತ್ತು
ಬಾನ ಕಣದಲಿ ಕೋಟಿ
ಚಿಕ್ಕೆ ಹಂತಿಯ ಕಟ್ಟಿ
ದಿವದ ಬದುಕನು ಒಕ್ಕಿ ರಾಶಿಮಾಡಿ
ಬೆಳಕು ಚಕ್ರಾಕಾರ ತಿರುಗುತ್ತಿದೆ

ಎಂಬಂಥ ಭಾಗ ಸೊಗಸಾದ ಚಿತ್ರವಾಗಿದ್ದು ಬಾನಂಗಳದಲ್ಲಿ ನಡೆಯುವ ಬೆಳಕಿನ ಬೇಸಾಯವನ್ನು ಕಣ್ಣು ತುಂಬುವಂತೆ ಮಾಡುತ್ತದೆ. ಕಣವಿಯವರ ಕಾವ್ಯದಲ್ಲಿ ಎಷ್ಟೆಲ್ಲ ಬಣ್ಣಗಳಿವೆ ಎಂದು ಹೇಳಲು ಈ ಮಾತು ಬಂತು ಅಷ್ಟೆ.

'ಕಣವಿಯವರು ತರುಣರಿಗೆ ಒಂದು ಆದರ್ಶ' ಎಂದು ಹಿಂದೊಮ್ಮೆ ಕುವೆಂಪು ಹೇಳಿದ್ದುಂಟು. ಆಗ ಅವರು ತರುಣರಾಗಿದ್ದರು. ಈಗ ಹಿರಿಯರು. ಸದ್ದುಗದ್ದಲ ಮಾಡದೆ ತಮ್ಮ ಕಾವ್ಯದ ಕಣಜ ತುಂಬಿಸಿರುವ ಅವರು ನಮ್ಮ ಸಾಹಿತ್ಯಾಸಕ್ತರೆಲ್ಲರಿಗೂ ಒಂದು ಆದರ್ಶ.

●

ಹೀಗಿದ್ದಾರೆ ಕಣವಿ

ಕಣವಿಯವರು ಮೃದುವೆಂದುಕೊಂಡೀರಿ
ರೊಟ್ಟಿಯಂತೆ ಕಟಕೂ ಆಗಬಲ್ಲರು ಇವರು;
ಕಹಿಯಾದ್ದಕ್ಕೆ ಮುಖ ಕಿವಿಚಿಕೊಂಡಾರು
ಆದರೆಂದಿಗೂ ಮುಖ ಪರಚುವುದಿಲ್ಲ;
ಪ್ರಕಟಿಸುವ ವಿಧಾನ ಭಿನ್ನ, ಅದೇನ ಚೆನ್ನ!
ಛೇ ಛೇ ಎಂದುದ್ಗರಿಸಿ ಗೋಣು ತಿರುವಿಯಾರು,
ಥೂ, ಥೂ ಎಂದುಗುಳರು, ದಾಕ್ಷಿಣ್ಯಪರರು.

ಇವರ ಕಂದಿದ ಮುಖವನ್ನೆಂದೂ ನೋಡಿಲ್ಲ
ಮಳೆಗೂ ಬಿಸಿಲಿಗೂ ಕೊಡೆ ಸಾಮಾನ್ಯ
ಕೊಕ್ಕರೆಗರಿಯ ಬಿಳಿಯ ಪೈಜಾಮು,
ನೀಳ ಶರಟು ಅಹ, ಏನು ಕಣ್ಣ ಹೊಳಪು!
ಮಳೆಮಾರಿನ ದಿನದಿ ಹುಟ್ಟಿದ್ದರಿಂದೇನೋ
ಮನದ ಕಾಂಪೌಂಡಿನಲ್ಲಿ ಕಾಮನಬಿಲ್ಲು,
ಕವಿತೆಗಳೊಂದಿಗೆ, ಓದಿದವರೆದೆಯೂ ಒದ್ದೆ.

ನೆಲದಲ್ಲಿದ್ದೂ ಮುಗಿಲ ಧೇನಿಸುವ ಕವಿ,
ಕಲ್ಯಾಣ ನಗರದಲಿ ತೇಲಿದವರು;
ಸಿಕ್ಕರೆ ಶುಭ್ರನಗೆಯಲಿ ಕುಶಲವ ಕೇಳಿಯಾರು
ಸಾಹಿತ್ಯ ಬದಿಗಿಟ್ಟು ಮಾತಿಗೆ ಕಾಯುವರು
ಕಳವಳಕೆ ಕಿವಿತೆರೆದು ತಂದೆಯಂತಾಗುವರು
ಅಷ್ಟಲ್ಲದೇ ಸದಾ ವಿಪ್ರಲಂಭದಿ ತುಡಿವ ಬೆಡಗಿ
ಬೆಚ್ಚಗಿರಲೆಂದು ನೀಲುವಿಗೊಂದು ಶಾಲು ಕಳಿಸಿದವರು!

– ಕಮಲಾ ಹೆಮ್ಮಿಗೆ

ತಡವಾದರೂ ತಪ್ಪದೆ ಬಂದ ಮನ್ನಣೆ
ಎಲ್. ಎಸ್. ಶೇಷಗಿರಿರಾವ್

ಈ ಸಲದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯ ಗೌರವ ಪ್ರಖ್ಯಾತ ಲೇಖಕ ಎಲ್. ಎಸ್. ಶೇಷಗಿರಿರಾಯರಿಗೆ ದೊರೆತದ್ದು ಬಹಳ ಸಂತೋಷದ ಸಂಗತಿಯಾಗಿದೆ. ರಾಯರು ಕನ್ನಡದ ಬೇರೆ ಬೇರೆ ಕ್ಷೇತ್ರಗಳಲ್ಲಿ ಮಾಡಿರುವ ವಿಪುಲವಾದ, ವೈವಿಧ್ಯಪೂರ್ಣವಾದ ಮೌಲಿಕ ಬರೆಹ ಇಡೀ ನಾಡಿಗೇ ಗೊತ್ತಿದೆ. ಈ ಗೌರವ ಅವರಿಗೆ ಸಾಕಷ್ಟು ಹಿಂದೆಯೇ ಸಲ್ಲಬೇಕಾಗಿತ್ತು ಎನ್ನುವುದು ಬಹಳ ಜನರ ಅಭಿಪ್ರಾಯ. ಆದರೆ ತಡವಾದರೂ ಅದು ತಪ್ಪದೆ ಬಂದದ್ದು ಎಲ್ಲರಿಗೂ ನೆಮ್ಮದಿ ತಂದ ಸಂಗತಿಯಾಗಿದೆ.

ಅರವತ್ತು ವರ್ಷಗಳ ಹಿಂದಿನ ಸಂಗತಿ. ಆಗ ಮೈಸೂರು ಸಂಸ್ಥಾನಕ್ಕೆಲ್ಲ ಇದ್ದುದು ಒಂದೇ ವಿಶ್ವವಿದ್ಯಾನಿಲಯ. ಅದಕ್ಕೆ ಸೇರುವುದು, ಅದರಲ್ಲೂ ಇಂಗ್ಲಿಷ್ ಆನರ್ಸ್‌ಗೆ ಪ್ರವೇಶ ಪಡೆಯುವುದು ಸುಲಭದ ಮಾತಾಗಿರಲಿಲ್ಲ. ಇಂಟರ್‌ಮೀಡಿಯೆಟ್‌ನಲ್ಲಿ ಉತ್ತಮ ಅಂಕ ಪಡೆದಿರಬೇಕು. ಆಮೇಲೂ ಒಂದು ಇಂಟರ್‌ವ್ಯೂ ಎದುರಿಸಿ ಗೆಲ್ಲಬೇಕು; ಅದೂ ಘಟಾನುಘಟಿ ಪ್ರೊಫೆಸರುಗಳಿದ್ದ ಮಹಾರಾಜ ಕಾಲೇಜಿನಲ್ಲಿ!

ಇನ್ನೂ ಹದಿನಾರು ವರ್ಷ ವಯಸ್ಸಿನ ಹುಡುಗ. ಇಂಗ್ಲಿಷಿನಲ್ಲಿ ಇಡೀ ರಾಜ್ಯಕ್ಕೆ ಫಸ್ಟ್ ಬಂದುಬಿಟ್ಟಿದ್ದಾನೆ. ಇಂಗ್ಲಿಷ್ ಸಾಹಿತ್ಯ ಓದುವ ಆಸೆ. ಆದರೆ ಅರ್ಜಿಹಾಕುವ ಹೊತ್ತಿಗೆ ಅದಕ್ಕೆ ಕೊಟ್ಟಿದ್ದ ಕಾಲಾವಧಿಯೇ ಮುಗಿದುಹೋಗಿದೆ.

ಹುಡುಗ ಹಿಂಜರಿಯಲಿಲ್ಲ. ಅದನ್ನೂ ಅರ್ಜಿಯಲ್ಲಿ ತಿಳಿಸಿ, ಸಾಧ್ಯವಾದರೆ ಸೀಟು ಕೊಡಬೇಕೆಂದು ಪ್ರಾರ್ಥಿಸಿ ಮಹಾರಾಜ ಕಾಲೇಜಿಗೆ ಅರ್ಜಿಹಾಕಿದ.

ಪ್ರಸಿದ್ಧ ಇಂಗ್ಲಿಷ್ ಪ್ರಾಧ್ಯಾಪಕ ಜೆ. ಸಿ. ರಾಲೋ ಆಗ ಕಾಲೇಜಿನ ಪ್ರಿನ್ಸಿಪಾಲ್. ಅವರು ಹುಡುಗನಿಗೆ ಬರೆದರು. "ಇಂಥ ತಾರೀಖಿನೊಳಗೇ ಅರ್ಜಿಸಲ್ಲಿಸಬೇಕು ಎಂಬ ನಿಯಮ ಇದೆ ನಿಜ. ಆದರೆ ಅದು ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದಿರುವವರಿಗೆ ಅನ್ವಯಿಸುವುದಿಲ್ಲ".

ಬೆನ್ನು ಚಪ್ಪರಿಸಿ ಕೊಟ್ಟ ಅನಿರೀಕ್ಷಿತ ರಿಯಾಯಿತಿ! ಆದರೆ ಈ ರಿಯಾಯಿತಿ ಅರ್ಜಿ ಸ್ವೀಕರಿಸುವುದಕ್ಕೆ ಮಾತ್ರ. ಎಷ್ಟೇ ಅಂಕ ಬಂದಿರಲಿ. ಇಂಟರ್‌ವ್ಯೂ ಎದುರಿಸಲೇಬೇಕು. ಇಂಟರ್‌ವ್ಯೂ ದಿನ ಹುಡುಗ ಸನ್ನದ್ಧನಾಗಿ ಒಳಗೆ ಹೋದ.

ಎದುರಿಗೆ ಉಳಿದವರ ಜೊತೆ, ಕರ್ನಾಟಕದಲ್ಲಿ ಖ್ಯಾತನಾಮರಾಗಿ ಬಿಟ್ಟಿದ್ದ ಬಿಎಂಶ್ರೀ ಕುಳಿತಿದ್ದಾರೆ. ಜರಿಪೇಟ, ಕೋಟು, ಗಂಭೀರ ಮುಖಮುದ್ರೆ, ಹುಡುಗ ಅವರ ಬಗ್ಗೆ ಬೇಕಾದಷ್ಟು ಕೇಳಿದ್ದ. ಸಭೆಗಳಲ್ಲಿ ದೂರದಿಂದ ನೋಡಿಯೂ ಇದ್ದ. ಅವರ ಬಗ್ಗೆ ಗೌರವ, ಭಕ್ತಿ, ಕೊಂಚ ಭಯ ಕೂಡ. ಎಂಥವರೂ ಅಧೀರರಾಗುವ ಸನ್ನಿವೇಶ. ಅಳುಕುತ್ತಲೇ ಹುಡುಗ ಪ್ರಶ್ನೆಗಳಿಗೆ ಉತ್ತರಿಸಿದ.

ಹುಡುಗನ ಉತ್ತರಗಳಿಂದ ಪ್ರಸನ್ನರಾದ ಬಿಎಂಶ್ರೀ ಕಡೆಗೆ ಕೇಳಿದರು.

"ಇಂಗ್ಲಿಷಿನಲ್ಲಿ ಮೊದಲ ಸ್ಥಾನ ಪಡೆದಿದ್ದೀಯೆ. ಸೀಟಂತೂ ಸಿಗುತ್ತದೆ. ಆದರೆ ಓದಿನ ನಂತರ ಏನು ಮಾಡುತ್ತೀ?"

ಹುಡುಗನಿಗೆ ಏನು ಹೇಳಬೇಕೋ ತೋಚಲಿಲ್ಲ. ಸಾವರಿಸಿಕೊಂಡು ಹೇಳಿದ. "ಬಹುಶಃ ಒಂದು ಕೆಲಸಕ್ಕೆ ಸೇರುತ್ತೇನೆ"

ಶ್ರೀ ನಕ್ಕರು "ಅದು ಸರಿಯೇ. ನಾನು ಕೇಳಿದ್ದು ಅದಲ್ಲ, ನಿನ್ನ ಓದು ಮುಗಿದ ಮೇಲೆ ಕನ್ನಡ ಭಾಷೆ – ಸಾಹಿತ್ಯಕ್ಕೆ ನೀನು ಏನು ಮಾಡುತ್ತೀ ಅಂತ. ಕನ್ನಡಕ್ಕೆ ಹೊರಗಿನ ಸಾಹಿತ್ಯ – ಭಾಷೆಗಳಿಂದ ಏನು ತಂದರೂ ಲಾಭವಾಗುವಂತಿದೆ. ಅದು ಇನ್ನಷ್ಟು ಬೆಳೆಯಬೇಕಾಗಿದೆ. ನೀನು ಇಂಗ್ಲಿಷ್ ಸಾಹಿತ್ಯ ಕುರಿತು ಕನ್ನಡದಲ್ಲಿ ಏನು ಬರೆದರೂ ಅದು ಸಹಾಯಕ. ಅಂಥದನ್ನೇನಾದರೂ ಮಾಡುತ್ತೀಯಾ?"

ಹುಡುಗ ಈ ಮಾತಿಗೆ ಒಪ್ಪಿದ 'ಕನ್ನಡದ ಕಣ್ವರ' ಜೊತೆಗಿನ ಮೊದಲ ಭೇಟಿಯಲ್ಲೇ ಅವರಿಂದ ಕನ್ನಡ ಸೇವೆಯ ದೀಕ್ಷೆ ಪಡೆದ. ಅದನ್ನು ಬಾಳಿನುದ್ದಕ್ಕೂ ನಾಡೇ ಮೆಚ್ಚುವಂತೆ ನಡೆಸಿಕೊಂಡು ಬಂದ. ಆ ಹುಡುಗನೇ ಇವತ್ತಿನ ಸುವಿಖ್ಯಾತ ಕನ್ನಡ ಲೇಖಕ ಪ್ರೊ॥ ಎಲ್. ಎಸ್. ಶೇಷಗಿರಿರಾವ್.

ಶೇಷಗಿರಿರಾವ್ ಆನರ್ಸ್ ಪರೀಕ್ಷೆಯಲ್ಲಿ ಇಂಗ್ಲಿಷ್ ತರಗತಿಗೆ ಮಾತ್ರವಲ್ಲದೆ ಸ್ನಾತಕೋತ್ತರ ಕಲಾವಿಭಾಗಕ್ಕೇ ಪ್ರಥಮ ರ್‍ಯಾಂಕ್‌ಗಳಿಸಿ ಪಾಸಾದರು; ಜನರಲ್

ಪ್ರೊಫೆಷಿಯೆನ್ಸಿ ಚಿನ್ನದ ಪದಕ ಪಡೆದರು. ಇಂಗ್ಲಿಷ್ ಎಂ.ಎ. ಸೇರಿದರು. ಅದಾದ ನಾಲ್ಕು ತಿಂಗಳಿಗೆ ಕಾನ್ವೋಕೇಷನ್ (ಪದವೀ ಪ್ರದಾನ) ಸಮಾರಂಭ ನಡೆಯಿತು. ಸಮಾರಂಭದಲ್ಲಿ ಮಹಾರಾಜರಿಂದ ಚಿನ್ನದ ಪದಕ ತೆಗೆದುಕೊಳ್ಳುತ್ತಿದ್ದ ಹುಡುಗನನ್ನು ಉಪಕುಲಪತಿ ಸಿಂಗಾರಸ್ವಾಮಿ ಮೊದಲಿಯಾರ್ ಗಮನಿಸಿದರು. ಅವನನ್ನು ಕೂಡಲೇ ಅಧ್ಯಾಪಕನನ್ನಾಗಿ ತೆಗೆದುಕೊಳ್ಳಬೇಕೆಂದು ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಪ್ರೊ॥ ಈಗಲ್‌ಟನ್ ಅವರಿಗೆ ಸೂಚಿಸಿದರು. ಕೆಲಸಕ್ಕೆ ಅರ್ಜಿಯೇ ಹಾಕಿಲ್ಲ! ಆದರೂ ಈಗಲ್‌ಟನ್ ಆತನಿಗೆ ಕೆಲಸಕ್ಕೆ ಸೇರಿಕೊಳ್ಳುವಂತೆ ತಿಳಿಸಿದರು. ಹುಡುಗ ಒಪ್ಪಲಿಲ್ಲ. ನಮ್ಮ ತಂದೆ ಎಂ. ಎ. ಮಾಡಲು ತಿಳಿಸಿದ್ದಾರೆ. ನಾನು ಅದನ್ನು ಮುಗಿಸಬೇಕು ಎಂದ. ಈಗಲ್‌ಟನ್ 'ಇಂಥ ಕೆಲಸ ಸಿಗುವುದೇ ಕಷ್ಟ ವೈಸ್‌ಛಾನ್ಸೆಲರೇ ಹೇಳಿ ಅದು ತಾನಾಗಿ ನಿನಗೆ ಸಿಗುತ್ತಿದೆ. ಈಗ ಕೆಲಸ ಒಪ್ಪಿಕೊ. ಎಂ.ಎ. ವಿಷಯ ಮುಂದೆ ನೋಡಿಕೊಳ್ಳೋಣ" ಎಂದರು. ಆದರೆ ಹುಡುಗ ಅಪ್ಪನ ಭಕ್ತ. ಬೆಂಗಳೂರಿಗೆ ಬಂದು, ತಂದೆಗೆ ವಿಷಯ ತಿಳಿಸಿ ಅವರು ಒಪ್ಪಿದ ನಂತರವೇ ಕೆಲಸಕ್ಕೆ ಸೇರಿಕೊಂಡ! ಆಗ ನಾಗಪುರ ವಿಶ್ವವಿದ್ಯಾಲಯದಲ್ಲಿ ತರಗತಿಗೆ ಹಾಜರಾಗದೆಯೇ ಎಂ.ಎ. ಪರೀಕ್ಷೆಗೆ ಕೂರುವ ಅವಕಾಶವಿತ್ತು. ಶೇಷಗಿರಿರಾವ್ ಅಲ್ಲಿಯ ಎಂ.ಎ. ಪರೀಕ್ಷೆಗೆ ಕೂತು ಪಾಸು ಮಾಡಿದರು. ಪ್ರಥಮ ದರ್ಜೆಯಲ್ಲಿ ಎಂದು ಹೇಳುವ ಅಗತ್ಯವೇ ಇಲ್ಲ!

ಅದೇ ವರ್ಷ ಒಂದು ದಿನ ಬೆಂಗಳೂರಿನ ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಒಂದು ಘಟನೆ ನಡೆಯಿತು. ಅಲ್ಲಿ ಅಧ್ಯಾಪಕರಾಗಿದ್ದ ತೀನಂಶ್ರೀ ತಮ್ಮ ತರಗತಿ ಮುಗಿಸಿ ಬರುತ್ತಿದ್ದಾಗ ಒಂದು ದೃಶ್ಯ ನೋಡಿ ಚಕಿತರಾದರು. ಬೆಲ್ ಹೊಡೆದಿದೆ. ಉಪಾಧ್ಯಾಯರು ಹೊರಹೋಗಿರಬೇಕು.

ಒಬ್ಬ ವಿದ್ಯಾರ್ಥಿ ಉಪಾಧ್ಯಾಯರಂತೆ ಮೇಲೆ ನಿಂತು ಪಾಠ ಹೇಳುವುದನ್ನು ಅಭಿನಯಿಸುತ್ತಿದ್ದಾನೆ. ಬಹಳ ಚೆನ್ನಾಗಿಯೇ ಮಾತಾಡುತ್ತಿದ್ದಾನೆ. ಆದರೂ ಉಳಿದ ಹುಡುಗರೆದುರು ಉಪಾಧ್ಯಾಯ ವೃತ್ತಿಯನ್ನು ಅಣಕ ಮಾಡುವುದು ಸರಿಯಲ್ಲ ಅಂತ ಗಂಭೀರ ಸ್ವಭಾವದ ತೀನಂಶ್ರೀಗೆ ಅನ್ನಿಸಿತು. ಸ್ಟಾಫ್ ರೂಮಿಗೆ ಬಂದವರೇ ಅಲ್ಲಿದ್ದ ಇಂಗ್ಲಿಷ್ ಅಧ್ಯಾಪಕ ಗುರುರಾಜ ರಾವ್‌ಗೆ ಇದನ್ನು ತಿಳಿಸಿ "ನೋಡಿ ಈ ಹುಡುಗರ ತುಂಟತನವನ್ನ, ಹೀಗೆಲ್ಲಾ ಮಾಡೋದೇ" ಎಂದರು. ಗುರುರಾಜರಾವ್ ಜೋರಾಗಿ ನಕ್ಕು" ಸಾರ್. ಆತ ಹುಡುಗ ಅಲ್ಲ, ನಮ್ಮ ಹಾಗೇ ಮೇಸ್ಟ್ರು. ಈಗಷ್ಟೇ ಇಂಗ್ಲಿಷ್ ಅಧ್ಯಾಪಕನಾಗಿ ಕೆಲಸಕ್ಕೆ ಸೇರಿದ್ದಾನೆ. ಆತನ ಹೆಸರು ಶೇಷಗಿರಿರಾವ್, ಬಹಳ ಬುದ್ಧಿವಂತ" ಎಂದರು. ತೀನಂಶ್ರೀಗೆ ಆಶ್ಚರ್ಯ, ಸಂತೋಷ! 'ಹಾಗೇನು' ಎಂದು ಹೇಳಿ ಅವರು ಶೇಷಗಿರಿರಾಯರನ್ನು ಕಂಡು ಮಾತನಾಡಿಸಿ ತಾವು

ಬೇಸ್ತು ಬಿದ್ದದ್ದನ್ನು ಹೇಳಿ ನಕ್ಕರು. ಶೇಷಗಿರಿರಾಯರಿಗೆ ತೀನಂಶ್ರೀ ಪರಿಚಯವಾದದ್ದು ಹೀಗೆ!

೧೯೬೪ರಲ್ಲಿ ರಾಯರು ಮೈಸೂರು ಸಿವಿಲ್‌ಸರ್ವಿಸ್ ಪರೀಕ್ಷೆ ತೆಗೆದುಕೊಂಡು ಒಂಬತ್ತನೆಯ ರ‍್ಯಾಂಕ್ ಬಂದರು. ಇನ್ನೇನು ಗೆಜೆಟೆಡ್ ಪ್ರೊಬೇಷನರ್ ಆಗಿ ರೆವಿನ್ಯೂ ವಿಭಾಗಕ್ಕೆ ಹೋಗಿಬಿಡಬೇಕು. ಆದರೆ ಕನ್ನಡದ ಪುಣ್ಯ. ಮೆಡಿಕಲ್ ಪರೀಕ್ಷೆ ನಡೆದಾಗ ಅವರು ಅಗತ್ಯವಾದ ತೂಕಕ್ಕಿಂತ ಸ್ವಲ್ಪ ಕಡಿಮೆ ಇದ್ದು ವಿಶ್ವವಿದ್ಯಾಲಯದಲ್ಲೇ ಉಳಿದುಕೊಂಡರು!

ಅದೇ ವರ್ಷ ಮೈಸೂರು ವಿಶ್ವವಿದ್ಯಾಲಯ ಆಕ್ಸ್‌ಫರ್ಡಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಕಳಿಸಲು ರಾಯರನ್ನು ಆಯ್ಕೆ ಮಾಡಿತು. ಆ ಕಾಲಕ್ಕೆ ಇದು ಬಹಳ ದುರ್ಲಭವಾದ ಯೋಗ. ಆದರೆ ಸಂಪ್ರದಾಯಸ್ಥರಾದ ಅವರ ತಂದೆ ಸ್ವಾಮಿರಾಯರಿಗೆ ಮಗ ವಿದೇಶಕ್ಕೆ ಹೋಗುವುದು ಪ್ರಿಯವಾಗಿರಲಿಲ್ಲ. ಅವರು ಅದಕ್ಕೆ ವಿರೋಧವೇನೂ ಮಾಡಲಿಲ್ಲ. "ನೀನು ಹೋಗಿ ಬರಲು ನನ್ನ ಅಡ್ಡಿಯಿಲ್ಲ. ಆದರೆ ಬಂದಮೇಲೆ ನೀನು ನನ್ನ ಜೊತೆ ಇರುವಂತಿಲ್ಲ, ಪ್ರತ್ಯೇಕ ಮನೆ ಹೂಡಬೇಕು. ನಾನು ನಿನ್ನಲ್ಲಿಗೆ ಬಂದು ಹೋಗಿ ಮಾಡುತ್ತೇನೆ ಅಷ್ಟೇ" ಎಂದರು. ತಂದೆಯ ಮನಸ್ಸಿಗೆ ನೋವಾಗುವುದಾದರೆ ಸ್ಕಾಲರ್‌ಷಿಪ್ಪೇ ಬೇಡ ಎಂದು ರಾಯರು ಅದನ್ನು ಕೈಬಿಟ್ಟರು! ಪ್ರೊ ರಂಗಣ್ಣನವರು ಅವರನ್ನು ಮನೆಗೆ ಕರೆಸಿಕೊಂಡು "You are a fool not to accept this" ಎಂದೆಲ್ಲ ತಿಳಿಹೇಳಿದರು. ರಾಯರು ವಿನಯವಾಗಿಯೇ ಅದನ್ನು ನಿರಾಕರಿಸಿದರು. ವಿಶ್ವವಿದ್ಯಾಲಯ ಅವರ ಬದಲಾಗಿ ಬೇರೆಯವರನ್ನು ಕಳಿಸಿಕೊಡಬೇಕಾಯಿತು.

ಶೇಷಗಿರಿರಾಯರ ಬರೆಹ ವಿಪುಲ ಮತ್ತು ವೈವಿಧ್ಯಪೂರ್ಣ ಎಂದು ಹೇಳಿತಷ್ಟೆ. ಅವರು. 'ಇದು ಜೀವನ' 'ಮುಯ್ಯಿ' ಮೊದಲಾಗಿ ನಾಲ್ಕು ಕಥಾಸಂಕಲನಗಳನ್ನು, 'ಆಕಾಂಕ್ಷೆ' ಮತ್ತು 'ಆಸ್ತಿ' ಎಂಬ ಎರಡು ನಾಟಕಗಳನ್ನು ರಚಿಸಿದ್ದಾರೆ. ಎರಡು ಜೀವನಚರಿತ್ರೆ ಹೊರ ತಂದಿದ್ದಾರೆ. ಬೆಳಕಿನ ದೂತರು, ಎಂ. ಹಿರಿಯಣ್ಣ ಮೊದಲಾದ ಒಂಬತ್ತು ಮಕ್ಕಳ ಪುಸ್ತಕ ಬರೆದಿದ್ದಾರೆ. ಎಲಿಯಡ್, ಎರಡು ನಗರಗಳ ಕಥೆ–ಹೀಗೆ ಒಂಬತ್ತು ಅನುವಾದ ಕೃತಿಗಳನ್ನು ಹೊರತಂದಿದ್ದಾರೆ. ಅವರು ಸಂಪಾದಿಸಿದ ಹತ್ತು ವಿಶಿಷ್ಟ ಗ್ರಂಥಗಳಲ್ಲಿ ಭಾರತೀಯ ಸಾಹಿತ್ಯ ಸಮೀಕ್ಷೆ, ಕನ್ನಡ ಸಾಹಿತ್ಯ ಸಮೀಕ್ಷೆ, ಭಾರತ – ಭಾರತಿ ಪುಸ್ತಕ ಸಂಪದ – ಇವು ಸಂಪಾದನ ಕಾರ್ಯಕ್ಕೆ ಅವರು ವಿನಿಯೋಗಿಸಿದ ಕಾಲ, ಪಟ್ಟಶ್ರಮಗಳನ್ನು ಸೂಚಿಸುವಂಥವು. ಕನ್ನಡ – ಇಂಗ್ಲೀಷ್ ಸಂಬಂಧದ ನಾಲ್ಕು ಬಗೆಯ ನಿಘಂಟಗಳಿಗೆ ಇತರ

ವಿದ್ವಾಂಸರ ಜೊತೆ ಅವರು ಶ್ರಮಿಸಿದ್ದಾರೆ. ಇಂಗ್ಲೀಷಿನಲ್ಲಿ, ಸ್ವತಂತ್ರ ಮತ್ತು ಅನುವಾದ ಹೀಗೆ ಅವರ ಹನ್ನೊಂದು ಪುಸ್ತಕಗಳಿವೆ. ಸುಮಾರು ಹತ್ತೊಂಬತ್ತು ಇಂಗ್ಲಿಷ್ ಕೃತಿಗಳ ಸಂಪಾದನೆಯ ಕೆಲಸ ಮಾಡಿದ್ದಾರೆ. ಅನೇಕ ಕನ್ನಡ ಇಂಗ್ಲಿಷ್ ಪತ್ರಿಕೆಗಳಲ್ಲಿ ಕನ್ನಡ ಸಾಹಿತ್ಯ ಕುರಿತು ನೂರಾರು ಲೇಖನ ಬರೆದಿದ್ದಾರೆ. ಅಂಕಣಕಾರರಾಗಿ ದುಡಿದಿದ್ದಾರೆ. ಕನ್ನಡ ಚಳುವಳಿಯಲ್ಲಿ, ಘನವಾದ ನೆಲೆಯಲ್ಲಿ ಸಕ್ರಿಯವಾಗಿ ಪಾಲುಗೊಂಡಿದ್ದಾರೆ.

ಆದರೆ ಅವರ ಕೀರ್ತಿ ನಿಂತಿರುವುದು ಸಾಹಿತ್ಯ ವಿಮರ್ಶೆಗೆ ಅವರು ನೀಡಿರುವ ಮೌಲಿಕ ಕೊಡುಗೆಗಳಿಂದ. 'ಗ್ರೀಕ್ ರಂಗಭೂಮಿ ಮತ್ತು ನಾಟಕ' 'ಇಂಗ್ಲಿಷ್ ಭಾಷೆಯಲ್ಲಿ ಆಧುನಿಕ ಸಾಹಿತ್ಯ ವಿಮರ್ಶೆ', 'ಇಂಗ್ಲಿಷ್ ಸಾಹಿತ್ಯ ಚರಿತ್ರೆ'ಗಳಂಥ ಕೃತಿಗಳು ಯಾವುದೇ ಭಾಷೆಗೂ ಹೆಮ್ಮೆ ಗೌರವ ತರುವಂಥವು. 'ಇಲಿಯಡ್' ಅನುವಾದಕ್ಕೆ ಅವರು ಬರೆದಿರುವ ಮುನ್ನುಡಿ ಅವರ ವಿಮರ್ಶಾದೃಷ್ಟಿಗೆ, ಬರೆಹದ ವಾಚನೀಯತೆಗೆ ಒಂದು ನಿದರ್ಶನ. ಅಂಥದೇ ಇನ್ನೊಂದು ಆಕರ್ಷಕ ಬರೆಹ' ವಿಲಿಯಂ ಷೇಕ್ಸ್‌ಪಿಯರ್'. ಬಹಳ ಹಿಂದೆಯೇ ಅವರು ಬರೆದ 'ಕಾದಂಬರಿ – ಸಾಮಾನ್ಯ ಮನುಷ್ಯ' ಆ ಕ್ಷೇತ್ರದಲ್ಲಿ ಮೊದಮೊದಲ ವಿಮರ್ಶಾತ್ಮಕ ಬರೆಹ. ಸಾಹಿತ್ಯ ವಿಮರ್ಶೆಯ ಕ್ಷೇತ್ರಕ್ಕೆ ರಾಯರು ನೀಡಿರುವ ಹದಿನೆಂಟು ಗ್ರಂಥಗಳು ಅವರ ವ್ಯಾಸಂಗದ ವಿಸ್ತಾರ, ಶ್ರಮ, ಸಂಕಲ್ಪ ಶಕ್ತಿಗಳನ್ನು ಎತ್ತಿ ತೋರಿಸುವಂಥವು. ಒಬ್ಬ ದಕ್ಷ, ನಿಷ್ಠಾವಂತ ಅಧ್ಯಾಪಕರಾಗಿ ದುಡಿಯುತ್ತ ಅದರ ಜೊತೆ ರಾಯರು ಇಷ್ಟೆಲ್ಲ ಕೆಲಸ ಮಾಡಿದ್ದಾರೆ! ಇದಕ್ಕೆಲ್ಲ ಅವರು ಬಿಡುವು ಎಲ್ಲಿಂದ ತರುತ್ತಾರೋ! ನಾನು ಅನೇಕ ಬಾರಿ ಅವರ ಮನೆಗೆ ಹೋಗಿದ್ದೇನೆ. ಆಗೆಲ್ಲ ಅವರು ನನಗೆ ಸಿಕ್ಕಿರುವುದು ಅವರ ವ್ಯಾಸಂಗದ ಕೊಠಡಿಯಲ್ಲಿ, ಏನನ್ನೋ ಓದುತ್ತ ಇಲ್ಲವೆ ಬರೆಯುತ್ತ!

ಈ ನಿರಂತರ ಸರಸ್ವತೀ ಸೇವೆಗೆ ನಮಿಸಿ ನಾಡು ಅವರಿಗೆ ಅನೇಕ ಪ್ರಶಸ್ತಿ ಸನ್ಮಾನಗಳ ಗೌರವ ಸಲ್ಲಿಸಿದೆ. ಈಗ ಅವರ 'ಇಂಗ್ಲಿಷ್ ಸಾಹಿತ್ಯ ಚರಿತ್ರೆ'ಗೆ ಸಂದಿರುವ ಅಕಾಡೆಮಿಯ ಗೌರವ ಅಂಥ ಇನ್ನೂ ಹಲವು ವಿಶಿಷ್ಟ ಕೃತಿಗಳು ಹೊರಬರಲು ಕಾರಣವಾಗಲಿ ಎಂದು ನನ್ನಂಥವರ ಹಾರೈಕೆ.

●

ನಮ್ಮ ಜತೆಗಿದ್ದಾರೆ

ನಮ್ಮ ಜತೆಗಿದ್ದಾರೆ, ಯಾರೋ ಬಿಟ್ಟ
ಬಾಣದ ಹಾಗೆ ನೆಟ್ಟಗೇ ನಡೆಯುವವರು
ಹಿಡಿದದ್ದನ್ನು ಅಚ್ಚುಕಟ್ಟಾಗಿ ಕಡೆದು, ಗುಡಿಕಟ್ಟಿ
ದಾರಿಯುದ್ದಕು ನೆನಪ ಉಳಿಸಿದವರು.
ಸದ್ದಿರದೆ ತನ್ನ ಪಾಡಿಗೆ ಬಂದಷ್ಟು ನೆಲ–
ವನ್ನುತ್ತು ಬಿತ್ತಿ ಬೆಳೆಯೆತ್ತಿದವರು.
ಬಿಸಿಲು – ಬಿರುಗಾಳಿ – ಮಾಗಿಯ ಜತೆಗೆ ಕೆಳೆಬೆಳೆಸಿ
ಎದೆಗೆ ಸುಗ್ಗಿಯ ಹಿಗ್ಗ ತುಂಬಿಕೊಂಡವರು.
ಹೆಸರೆ? ಲಾಭವೆ? ಪದವಿಗಳೆ? ಅವ–
ನೆಲ್ಲ ನಸುನಕ್ಕು ದಾಟಿದವರು.
ಗಿರಿಯಷ್ಟು ಸಾಧಿಸಿದರೂ, ಕಡೆಗೆ ಶೇಷ–
ವೆಷ್ಟೆಂದು ಯಾವತ್ತೂ ಎಣಿಸದವರು.

– ಜಿ. ಎಸ್. ಶಿವರುದ್ರಪ್ಪ

ಅಂಕಣ ಪ್ರಕಾರಕ್ಕೆ ಮನ್ನಣೆ ಗಳಿಸಿಕೊಟ್ಟ ಹಾ. ಮಾ. ನಾ

ಪ್ರಸಿದ್ಧ ಸಾಹಿತ್ಯ ಕೃತಿಗಳನ್ನು, ಲೇಖಕರನ್ನು, ಕಲಾವಿದರನ್ನು ಒಂದೇ ಸಮನೆ ಸುದ್ದಿಯ ಬಲೆಗೆ ಕೆಡವುತ್ತಿದ್ದ ಡಾ॥ ಹಾ.ಮಾ. ನಾಯಕ. ಈಗ ತಾವೇ ಆ ಬಲೆಗೆ ಬಿದ್ದಿದ್ದಾರೆ! ಅವರ ಪ್ರಸಿದ್ಧ ಅಂಕಣಗಳಲ್ಲಿ ಒಂದೆನಿಸಿಕೊಂಡ 'ಸಂಪ್ರತಿ'ಯನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ೧೯೮೮ರ ಅತ್ಯುತ್ತಮ ಕನ್ನಡ ಪುಸ್ತಕವೆಂದು ಘೋಷಿಸಿ ಅದಕ್ಕೆ ಪ್ರಶಸ್ತಿ ನೀಡಿದೆ.

'ಸಂಪ್ರತಿ' ಹಾ.ಮಾ. ನಾಯಕರು ಹೊರತಂದ ಅಂಕಣ ಕೃತಿಗಳಲ್ಲಿ ಹನ್ನೊಂದನೆಯದು; ಅವರು ಪ್ರಜಾವಾಣಿ ಪತ್ರಿಕೆಯಲ್ಲಿ ಬರೆದ ಮೊದಲ ಎರಡು ವರ್ಷಗಳ ಅಂಕಣಲೇಖನಗಳ ಸಂಗ್ರಹ. ೧೯೬೨ರಲ್ಲಿ ಕನ್ನಡಪ್ರಭ ಪತ್ರಿಕೆಯಲ್ಲಿ ಆರಂಭಗೊಂಡ ನಾಯಕರ ಈ ಅಂಕಣಧಾರೆ ಗ್ರಂಥಲೋಕ. ಪ್ರಜಾಮತ, ಪ್ರಜಾವಾಣಿಗಳಲ್ಲಿ ಮೈದುಂಬಿಕೊಳ್ಳುತ್ತ ಒಂದು ಮಹಾನದಿಯಾಗಿ ಭೋರ್ಗರೆದಿದೆ. ಅದು ಪ್ರಕಟವಾಗುವ ಪತ್ರಿಕೆಗಳ ಓದುಗರಿಗೆ ಅವರ ಅಂಕಣ ಇಲ್ಲದೆ ಭಾನುವಾರದ ಸಂಚಿಕೆ ಅಪೂರ್ಣ ಎಂಬ ಭಾವನೆ ಬರುವ ಮಟ್ಟಿಗೆ ಅದು ಜನಪ್ರಿಯವಾಗಿದೆ.

- ಸಂಪ್ರತಿಗೆ ಐದು ವರ್ಷ ತುಂಬಿದ ಸಂದರ್ಭದಲ್ಲಿ ಹಾಮಾನಾ ಬರೆದಿರುವ ಅಂಕಣ (೭-೧-೧೯೯೦) ಗಮನಿಸಬೇಕಾದದ್ದು. ಅದರಲ್ಲಿ ತಮಗಿಂತ ಮುಂಚೆ ಬರೆದ ಅಂಕಣಕಾರರನ್ನು ಅವರು ಗೌರವದಿಂದ ಸ್ಮರಿಸಿದ್ದಾರೆ; ಅವರ ಬರೆಹದ ಗುಣಗಳನ್ನು ತಿಳಿಸಿದ್ದಾರೆ; ಪ್ರಕಾರದ ವಿಶಿಷ್ಟತೆಯನ್ನು ವಿವರಿಸಿದ್ದಾರೆ. ಜೊತೆಗೆ ಅದರ ಬಗ್ಗೆ ಕಟಕಿಯಾಡುವ ನಿಂದಕರಿಗೆ ಉತ್ತರವನ್ನು ಕೊಟ್ಟಿದ್ದಾರೆ. ನಾಯಕರ ಸ್ವಾಭಾವಿಕ ಸೌಜನ್ಯ, ದಿಟ್ಟತನ ಎರಡೂ ಅದರಲ್ಲಿ ಒಟ್ಟೊಟ್ಟಿಗೇ ಎದ್ದುಕಾಣುತ್ತವೆ.

ಹಾ.ಮಾ.ನಾಯಕರು ಈವರೆಗಿನ ಅಂಕಣಕಾರರಲ್ಲೆಲ್ಲ ಹೆಚ್ಚು ಪ್ರಸಿದ್ಧರಾದವರು. ಅವರ ಅಂಕಣ ಕನ್ನಡಭಾಷೆ, ಸಾಹಿತ್ಯ, ಕಲೆ ಸಂಗೀತಗಳ ಮುಖ್ಯ ಕೃತಿಗಳನ್ನು ಘಟನೆಗಳನ್ನು, ವ್ಯಕ್ತಿ ವಿಷಯಗಳನ್ನು ಬಳಸಿ ಬೆಳೆದದ್ದು. ಅವರ ಬರೆಹದ ಮೌಲಿಕತೆ ಆಕರ್ಷಕತೆಗಳ ಬಗ್ಗೆ ಯಾರೂ ಎರಡು ಹೇಳುವಂತಿಲ್ಲ. ನಮ್ಮ ನಾಡಿನ ಪ್ರಜ್ಞಾವಂತ ವಿಮರ್ಶಕರಲ್ಲಿ ಒಬ್ಬರೆನಿಸಿದ ಡಾ॥ ಜಿ. ಎಸ್. ಆಮೂರ 'ಸಂಪ್ರತಿ' ಯ ಬಗ್ಗೆ ಬರೆದ ಮಾತು ಇದು: "ವಿಶ್ವದ ಎಲ್ಲ ವಿಷಯಗಳ ಬಗೆಗೂ ರಾಜಕೀಯ ವ್ಯಕ್ತಿಗಳೇ ಅಧಿಕಾರವಾಣಿಯಿಂದ ಮಾತನಾಡುತ್ತಿರುವ ಇಂದಿನ ನಮ್ಮ ವಿಪರ್ಯಾಸ ಸಾಂಸ್ಕೃತಿಕ ಸಂದರ್ಭದಲ್ಲಿ ಭಾಷೆ ಸತ್ಯದ ಮುಖವನ್ನು ಮುಚ್ಚುವ ಹಿರಣ್ಮಯ ಪಾತ್ರೆಯಾಗಿಬಿಟ್ಟಿದೆ. ಇಂಥ ಅವಸ್ಥೆಯನ್ನು ಮೀರಿ ಒಬ್ಬ ವಿಚಾರವಂತ, ಪ್ರಚಲಿತ ವ್ಯಕ್ತಿ ವಿಷಯಗಳ ಬಗ್ಗೆ ಪರಿಶ್ರಮ ಮತ್ತು ಚಿಂತನೆಗಳಿಂದ ತಾನು ದೊರಕಿಸಿಕೊಂಡ ತಿಳಿವಳಿಕೆಯನ್ನು ಸಾಮಾನ್ಯ ಜನರೊಂದಿಗೆ ಹಂಚಿಕೊಂಡಾಗ ಅದಕ್ಕೆ ವಿಶೇಷ ಮಹತ್ವ ಬರುತ್ತದೆ. ಕೆಲವರಲ್ಲಿ ಈ ತಿಳಿವಳಿಕೆ ಇದ್ದರೂ ಅದನ್ನು ಇತರರಿಗೆ ಕೊಡಬೇಕೆನ್ನುವ ಲವಲವಿಕೆಯಾಗಲಿ ಮತ್ತು ಇಂಥ ಕಾರ್ಯಕ್ಕೆ ಬೇಕಾದ ಕಲೆಯಾಗಲಿ ಇರುವುದಿಲ್ಲ. ಹಾ.ಮಾ.ನಾಯಕರ ವ್ಯಕ್ತಿತ್ವದಲ್ಲಿ ಈ ಎರಡೂ ಗುಣಗಳು ಇರುವುದರಿಂದ ಅವರ ದನಿ ಆಕರ್ಷಕವಾಗಿದೆ. ವರ್ಷದುದ್ದಕ್ಕೂ ಪ್ರತಿವಾರ ತಪ್ಪದೆ ಈ ದನಿ ಕೇಳಿಬಂದರೂ ಅದು ಎಂದೂ ನೀರಸ ಅಥವಾ ನಿರರ್ಥಕ ಎನಿಸಿದ್ದಿಲ್ಲ, ಇದು ನಾಯಕರ ಶ್ರೇಷ್ಠ ಸಾಧನೆ." ಡಾ. ಶಂಕರ ಮೊಕಾಶಿ ಪುಣೇಕರರಂಥ ಬಹುಶ್ರುತ ವಿದ್ವಾಂಸರು ಸಂಪ್ರತಿಯ ಬಗ್ಗೆ ಬರೆಯುತ್ತ "ಇಂಗ್ಲಿಷೂ ಸೇರಿದಂತೆ ನನಗೆ ಗೊತ್ತಿರುವ ನಾಲ್ಕೈದು ಮುಖ್ಯ ಭಾರತೀಯ ಭಾಷೆಗಳ ಪತ್ರಿಕೋದ್ಯಮದಲ್ಲಿ ಹಾ.ಮಾ. ನಾಯಕರ ಅಂಕಣಗಳಂತೆ ಸಾಂಸ್ಕೃತಿಕ ಮಹತ್ವ ಮತ್ತು ಸಾಹಿತ್ಯಕ ಸೌಂದರ್ಯವಿರುವ ಅಂಕಣಗಳನ್ನು ನಾನು ನೋಡಿಲ್ಲ. ವಿಷಯಗಳ ಆಯ್ಕೆ, ನಿರೂಪಣೆ, ಪ್ರತಿಪಾದನೆಗಳಲ್ಲಿ ಅವರು ಅದ್ವಿತೀಯರು" ಎಂದು ಪ್ರಶಂಸಿಸಿದ್ದಾರೆ.

ಪ್ರತಿಭಾವಂತರ ನೆಲದಲ್ಲಿ.....

ಕುವೆಂಪು, ಗೋಪಾಲಗೌಡ, ಅನಂತಮೂರ್ತಿ, ಲಂಕೇಶ, ಸುಮತೀಂದ್ರ ನಾಡಿಗ, ಶಿವರುದ್ರಪ್ಪ, ಕೆ. ವಿ. ಸುಬ್ಬಣ್ಣನವರಂಥ ಪ್ರತಿಭಾವಂತರಿಗೆ, ಕ್ರಿಯಾ ಶೀಲರಿಗೆ ಜನ್ಮ ಕೊಟ್ಟ ಜಿಲ್ಲೆ ಶಿವಮೊಗ್ಗ. ನಾಯಕರು ಹುಟ್ಟಿದ್ದೂ ಅದೇ ಜಿಲ್ಲೆಯಲ್ಲಿ, ಹಾರೋಗದ್ದೆ ಎಂಬ ಹಳ್ಳಿಯಲ್ಲಿ. ತಂದೆ ಶ್ರೀನಿವಾಸ ನಾಯಕರು, ತಾಯಿ ರುಕ್ಮಿಣಿಯಮ್ಮ. ವಿದ್ಯಾರ್ಥಿ ಜೀವನದ ಉದ್ದಕ್ಕೂ ಚೂಟಿ, ಬುದ್ಧಿಶಾಲಿ ಎನಿಸಿಕೊಂಡ ಹುಡುಗ ಶಿವಮೊಗ್ಗ ದಾಟಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಆನರ್ಸ್ ಮುಗಿಸಿದ. ಹೊನ್ನಶೆಟ್ಟಿ ಬಹುಮಾನ ಗಳಿಸಿದ. ಮೈಸೂರು ವಿಶ್ವವಿದ್ಯಾಲಯದ

ವಿಶೇಷ ಸ್ಕಾಲರ್‌ಶಿಪ್ ಪಡೆದು ಕಲ್ಕತ್ತ ವಿಶ್ವವಿದ್ಯಾಲಯಕ್ಕೆ ಪ್ರಥಮಸ್ಥಾನ ಗಳಿಸಿ ಚಿನ್ನದ ಪದಕ ಗಿಟ್ಟಿಸಿದ. ಅನಂತರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕನ ಕೆಲಸ. ಐದು ವರ್ಷಗಳ ನಂತರ ಫುಲ್ ಬ್ರೈಟ್ ಪ್ರಯಾಣ ವೇತನ ಪಡೆದ ನಾಯಕರು ಅಮೆರಿಕಕ್ಕೆ ಹೋಗಿ ಎರಡೇ ವರ್ಷಗಳಲ್ಲಿ ಭಾಷಾಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿ ಪಡೆದರು. ಉದ್ದಕ್ಕೂ ಕಟ್ಟುನಿಟ್ಟಾದ ವಿದ್ಯಾರ್ಥಿ ಜೀವನ ನಡೆಸಿದ ಹಾಮಾನಾ ಅದರ ಪರಮ ಫಲಗಳನ್ನು ಬೊಗಸೆ ತುಂಬ ಪಡೆದವರು.

ಕೆಲವರಿಗೆ ಯೋಗ್ಯತೆ ಮಾತ್ರ ಇರುತ್ತದೆ, ಮತ್ತೆ ಕೆಲವರಿಗೆ ಅದೃಷ್ಟವಷ್ಟೇ ಇರುತ್ತದೆ. ನಾಯಕರು ಎರಡನ್ನೂ ಪಡೆದು ಬಂದ ಭಾಗ್ಯವಂತರು. ನಲವತ್ತನೆಯ ಪ್ರಾಯದಲ್ಲಿ ಅವರು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದಾಗ ಅನೇಕರು ಹುಬ್ಬೇರಿಸಿರಬೇಕು. ಕೆಲವರಲ್ಲಿ ಕೋಪ ಅಸೂಯೆ ಹೊಗೆಯಾಡಿದ್ದರೂ ಅಸಹಜವಲ್ಲ. ಆದರೆ ತಾವು ದಾಟಿಕೊಂಡು ನಡೆದ ಅಧ್ಯಾಪಕರನ್ನು ಹಾಮಾನಾ ಪ್ರೀತಿ ಗೌರವಗಳಿಂದ ಗೆದ್ದುಕೊಂಡಿದ್ದಾರೆ. ಯೂನಿವರ್ಸಿಟಿ ಮೆಟ್ಟಲನ್ನೇ ಹತ್ತದ ಗೊರೂರರಂಥ ಹಿರಿಯರ ಬಳಿ ಬಾಲಕರಂತೆ ತಗ್ಗಿ ನಡೆದಿದ್ದಾರೆ. ಸಾಹಿತ್ಯ ವಿಷಯದಲ್ಲಿ ತಮ್ಮ ವಿಚಾರಗಳಿಗೆ ತೀರ ವಿರುದ್ಧರಾದವರೆಂದು ತಿಳಿದೂ ಜಿ. ಎಚ್. ನಾಯಕರಂಥ ಗಟ್ಟಿ ಅಧ್ಯಾಪಕರನ್ನು ತಮ್ಮ ವಿಭಾಗಕ್ಕೆ ಕರೆತಂದಿದ್ದಾರೆ. ಅಡಿಗರು ಇಡೀ ಅಧ್ಯಯನ ಸಂಸ್ಥೆಯನ್ನು ನಿರ್ಭಿಡೆಯಿಂದ ಟೀಕಿಸುತ್ತಿದ್ದ ದಿನಗಳು ಅವು. ಒಮ್ಮೆ ಅವರು ಅಕಸ್ಮಾತ್ ಗಂಗೋತ್ರಿಗೆ ಬಂದಿದ್ದು ಅಧ್ಯಯನ ಸಂಸ್ಥೆಯ ಹೊರಾವರಣದಲ್ಲಿ ಪುಸ್ತಕಗಳನ್ನು ನೋಡುತ್ತ ನಿಂತಿದ್ದನ್ನು ತಿಳಿದ ನಾಯಕರು ಕೂಡಲೇ ಅವರಲ್ಲಿಗೆ ಧಾವಿಸಿ ಒಳಗೆ ಕರೆತಂದು ಸತ್ಕರಿಸಿದ ರೀತಿಗೆ ಅವರ ವಿದ್ಯಾರ್ಥಿಗಳೇ ಬೆರಳು ಕಚ್ಚಿದ್ದಿದೆ.

ತಮಗೆ ದೊರೆತ ಅಧಿಕಾರವನ್ನು ನಾಯಕರು ಅಚ್ಚರಿಗೊಳಿಸುವ ಕಾರ್ಯಕ್ಷಮತೆಯಿಂದ ಸಮರ್ಥಿಸಿಕೊಂಡಿದ್ದಾರೆ. ಅವರ ನಿರ್ದೇಶನದಲ್ಲಿ ಅಧ್ಯಯನ ಸಂಸ್ಥೆ ಸುಮಾರು ಐನೂರು ಗ್ರಂಥಗಳನ್ನು ಹೊರತಂದಿದೆ ಎಂದರೆ ಅದು ಕೇವಲ ಸತ್ಯಸಂಗತಿ! ಕನ್ನಡ ವಿಶ್ವಕೋಶದ ಒಂಬತ್ತು ಭಾರೀ ಸಂಪುಟಗಳು, ಎಪಿಗ್ರಾಫಿಯ ಕರ್ನಾಟಕದ ಐದು ಸಂಪುಟಗಳು, ಛಂದಶ್ಶಾಸ್ತ್ರ ಕುರಿತ ಎರಡು ಸಂಪುಟಗಳು ನಾಯಕರ ನಿರ್ದೇಶನಾವಧಿಯಲ್ಲಿ ಹೊರಬಂದ ಬೃಹತ್ ಗ್ರಂಥಗಳು. ಬಿ.ಎಂ.ಶ್ರೀ, ಶ್ರೀಕಂಠಶಾಸ್ತ್ರಿ, ಎಂ.ಆರ್. ಶ್ರೀಯವರ ಪೂರ್ಣ ಬರಹಗಳನ್ನು ಸಮಗ್ರ ಸಂಪುಟಗಳಲ್ಲಿ ಹೊರತಂದ ಶ್ರೇಯಸ್ಸೂ ಪೂರ್ತಿಯಾಗಿ ಅವರದ್ದೇ. ಇಂಥ ಯೋಜನೆಗಳನ್ನು ರೂಪಿಸಲು ವಿಶೇಷವಾದ ಕಲ್ಪನಾಶಕ್ತಿ ಬೇಕು; ಇವುಗಳ ಪ್ರಯೋಜನವನ್ನು

ವಿಶ್ವವಿದ್ಯಾಲಯಕ್ಕೆ ಮನವರಿಕೆ ಮಾಡಿಕೊಟ್ಟು ಅದರ ಅಂಗೀಕಾರ ಪಡೆಯಲು ತಕ್ಕ ಮುತ್ಸದ್ದಿತನ ಬೇಕು; ಸಹೋದ್ಯೋಗಿ ವಿದ್ವಾಂಸರ ಮನಸ್ಸನ್ನು ಗೆದ್ದು ಅವರಿಂದ ದುಡಿಸಿಕೊಳ್ಳಬಲ್ಲ ಜಾಣ್ಮೆ ಬೇಕು; ವರ್ಷಗಟ್ಟಲೆ ಸಾಗುವ ಈ ಕಾರ್ಯ ಎಲ್ಲೂ ನಿಲ್ಲದಂತೆ ಹಂತ ಹಂತವಾಗಿ ಅದನ್ನು ಪೂರೈಸುವ ಶ್ರದ್ಧೆ, ವಿಚಕ್ಷಣೆ, ತಾಳ್ಮೆ ಬೇಕು. ನಾಯಕರು ಈ ಗುಣಗಳನ್ನೆಲ್ಲ ಧಾರಾಳವಾಗಿ ಪಡೆದಿದ್ದಾರೆ.

ಸಾಮಗ್ರಿಗಳ ಗಣಿ

ಸಂಸ್ಥೆಯ ಕೆಲಸದ ಭರದಲ್ಲಿ ನಾಯಕರು ಸ್ವಂತ ಕೆಲಸವನ್ನು ಅಲಕ್ಷಿಸಿಲ್ಲ. ಕನ್ನಡ ಪ್ರಭ, ಪ್ರಜಾಮತ, ಗ್ರಂಥಲೋಕ, ಪ್ರಜಾವಾಣಿಗಳಂಥ ಪತ್ರಿಕೆಗಳಲ್ಲಿ ಅಂಕಣಕಾರರಾಗಿ ಅವರು ಮಾಡಿರುವ ಕೆಲಸ ಅಮೂಲ್ಯವಾದದ್ದು. ಆ ಮೂಲಕ ಲಕ್ಷಾಂತರ ಜನಕ್ಕೆ ಕನ್ನಡದ ಹಲವು ಶ್ರೇಷ್ಠ ಕೃತಿಗಳನ್ನು, ಲೇಖಕರನ್ನು, ಕಲಾವಿದರನ್ನು, ಸಾಂಸ್ಕೃತಿಕ ಸಂಸ್ಥೆ, ಚಟುವಟಿಕೆಗಳನ್ನು ಆಕರ್ಷಕವಾಗಿ ಪರಿಚಯಮಾಡಿಸಿಕೊಟ್ಟಿದ್ದಾರೆ. ಮುಂದೆ ನಮ್ಮ ನಾಡಿನ ಸಾಂಸ್ಕೃತಿಕ ಚರಿತ್ರೆ ಬರೆಯುವವರಿಗೆ ಅಗತ್ಯವಾದ ಸಾಮಗ್ರಿಗಳ ಗಣಿಗಳನ್ನೇ ತೆರೆದಿದ್ದಾರೆ. ಅವರು ಬರೆದ ನಮ್ಮ ಮನೆಯ ದೀಪ, ಬಾಳ್ನೋಟಗಳು, ಜಾನಪದ ಸ್ವರೂಪ, ಸಮೀಕ್ಷೆ ಮೊದಲಾದವು ಬಲ್ಲಿದವರಿಗೂ ಪ್ರಿಯವಾಗುವ ಗ್ರಂಥಗಳು. ಚಂಡಿದಾಸನ ಪ್ರಣಯ ಪದಾವಳಿಯನ್ನು ಮತ್ತು ಅಮೃತ ಪ್ರೀತಂ ಅವರ ಕವನಗಳನ್ನು ನಾಯಕರು ಸೊಗಸಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಕನ್ನಡ ಇಂಗ್ಲಿಷ್‌ಗಳಲ್ಲಿ ಅವರು ಪ್ರಕಟಿಸಿರುವ ಪರಿಚಯ – ಸಂಶೋಧನೆ ವಿಮರ್ಶಾ ಲೇಖನಗಳ ಸಂಖ್ಯೆ ಐನೂರಕ್ಕೂ ಹೆಚ್ಚಿದ್ದರೆ ಅವರು ಬರೆದ, ಸಂಪಾದಿಸಿದ ಪುಸ್ತಕಗಳ ಸಂಖ್ಯೆ ಅರವತ್ತಕ್ಕೂ ಮೀರಿದೆ. ಅವರ ಮಾರ್ಗದರ್ಶನದಲ್ಲಿ ಆಗಲೇ ಹದಿನಾರು ಜನಕ್ಕೆ ಮೀರಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಇದು ಯಾರನ್ನೂ ತಲೆದೂಗಿಸಬಲ್ಲ ಸಾಧನೆ.

ನಾಯಕರ ಪತ್ನಿ ಯಶೋಧರಾ ಅವರಂತೆಯೇ ಅಚ್ಚುಕಟ್ಟಿನ ಸ್ವಭಾವದವರು. ಅವರ ಮನೆಯ ಹೊರ ಉದ್ಯಾನ ಸದಾ ತಿದ್ದಿ ಬರೆದ ತೈಲ ಚಿತ್ರದಷ್ಟು ನೀಟಾಗಿರುತ್ತದೆ. ಒಳಭಾಗವೆಲ್ಲ ಮನೆಯೆನ್ನುವುದಕ್ಕಿಂತ ದೊಡ್ಡ ಲೈಬ್ರರಿಯೆಂದರೆ ಉಚಿತವಾದೀತು. ಮಗಳು ಕವಿತಾ ಡಾಕ್ಟರರ ಕೈಹಿಡಿದಿದ್ದಾಳೆ. ಮಗ ರವಿ ಪದವೀಧರನಾದರೂ ಹಂಗಿನ ಚಾಕರಿ ಒಲ್ಲದೆ ಶಿವಮೊಗ್ಗದಲ್ಲಿ ಒಂದು ಬಸ್‌ಲೈನ್ ನಡೆಸುತ್ತಿದ್ದಾನೆ.

ಚಿಕ್ಕ ವಯಸ್ಸಿನಲ್ಲಿಯೇ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ನಾಯಕರು ದೇಶ ವಿದೇಶ ತಿರುಗಿದ್ದಾರೆ. ಸಾಂಸ್ಕೃತಿಕ ನಿಯೋಗದ ಸದಸ್ಯರಾಗಿ ಮತ್ತು ಸಂದರ್ಶಕ ಪ್ರಾಧ್ಯಾಪಕರಾಗಿ, ರಷ್ಯಾ, ಪೆನ್ಸಿಲ್ವೇನಿಯಗಳಿಗೂ ಹೋಗಿ ಬಂದಿದ್ದಾರೆ.

ಕೇಂದ್ರ ಸಾಹಿತ್ಯ ಅಕಾಡೆಮಿ, ಜ್ಞಾನಪೀಠ, ನ್ಯಾಷನಲ್ ಬುಕ್ ಟ್ರಸ್ಟ್‌ಗಳಂಥ ರಾಷ್ಟ್ರ ಪ್ರಸಿದ್ಧ ಸಂಸ್ಥೆಗಳ ಸದಸ್ಯರಾಗಿ ದುಡಿದಿದ್ದಾರೆ.

ನಾಯಕರು ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಕಾಲದಲ್ಲಿ ಜಾರಿಗೆ ತಂದ ಹಲವು ನಿಯಮಗಳು ಅವರ ಪ್ರಜ್ಞಾಶಾಲಿತ್ವಕ್ಕೆ ಸಾಕ್ಷಿ. ಅಲ್ಲಿಯವರೆಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನಕ್ಕೆ ಸಾಹಿತಿಗಳೇ ಅರ್ಜಿ ಸಲ್ಲಿಸಿ ಪುಸ್ತಕ ಒಪ್ಪಿಸಬೇಕಾಗಿತ್ತು. ಸಾಹಿತಿಯ ಸ್ವಾಭಿಮಾನಕ್ಕೇ ಧಕ್ಕೆ ತಂದಿದ್ದ ಈ ಕೆಟ್ಟ ಪದ್ಧತಿಯನ್ನು ನಾಯಕರು ಕಿತ್ತುಹಾಕಿದರು. ಅಕಾಡೆಮಿಯೇ ವರ್ಷದ ಎಲ್ಲ ಪುಸ್ತಕಗಳನ್ನು ಕೊಂಡು ಪರಿಶೀಲಿಸುವ ಪದ್ಧತಿ ಬಳಕೆಗೆ ತಂದರು. ಅಕಾಡೆಮಿಯ ಕಣ್ಣುತಪ್ಪಿನಿಂದ ಪ್ರಮಾದವಾಗದಿರಲಿ ಅಂತ ಯಾರು ಬೇಕಾದರೂ ಒಂದು ಪತ್ರ ಬರೆದು 'ಇಂಥ ಪುಸ್ತಕ ಪ್ರಕಟವಾಗಿದೆ. ತರಿಸಿಕೊಳ್ಳಿ' ಅಂತ ಸೂಚಿಸಿದರೆ ಅದನ್ನು ತರಿಸುವಂಥ ಏರ್ಪಾಟು ಮಾಡಿದರು. ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿರುವವರ ಪುಸ್ತಕಗಳನ್ನು ಅವರ ಸದಸ್ಯಾವಧಿಯ ಕಾಲದಲ್ಲಿ ಬಹುಮಾನಕ್ಕೆ ಪರಿಗಣಿಸಬಾರದೆಂಬ ನಿಯಮ ತಂದರು. ಸದಸ್ಯರು ತಮ್ಮ ಪುಸ್ತಕಗಳಿಗೆ ತಮ್ಮ ಪುಸ್ತಕಗಳಿಗೆ ಬಹುಮಾನ ಪಡೆದುಕೊಂಡು ಅಕಾಡೆಮಿಯ ಮಾನ ಕಳೆಯಬಹುದಾದ ಘಟನೆಗಳಿಗೆ ಇದು ಮುಕ್ತಾಯ ಹಾಡಿತು. ಪ್ರತಿ ವರ್ಷ ಸಾಹಿತ್ಯ ಕಮ್ಮಟಗಳನ್ನು ನಡೆಸುವ ಏರ್ಪಾಟು ಆರಂಭವಾಯಿತು. ರಾಜ್ಯದ ಹೊರಗಿನ ನೋಂದಾಯಿತ ಕನ್ನಡ ಸಂಘಗಳು ಅಕಾಡೆಮಿಗಳಿಗೆ ಒಂದು ಅರ್ಜಿ ಹಾಕಿದಷ್ಟಕ್ಕೇ ಎರಡು ಸಹಸ್ರ ರೂಪಾಯಿಗಳ ಕನ್ನಡ ಪುಸ್ತಕಗಳನ್ನು ಪಡೆಯಬಹುದಾದ ಸೌಲಭ್ಯ ಜಾರಿಗೆ ಬಂತು. ಆವರೆಗೆ ವರ್ಷದ ಅತ್ಯುತ್ತಮ ಪುಸ್ತಕವೆಂದು ಒಂದು ಸಾಹಿತ್ಯ ಕೃತಿಗೆ ಮಾತ್ರ ಅಕಾಡೆಮಿ ಪ್ರಶಸ್ತಿ ನೀಡುತ್ತಿತ್ತು. ಇದು ಸಾಮಾನ್ಯವಾಗಿ ಸೃಜನಾತ್ಮಕ ಕೃತಿಗೇ ಸಿಗುತ್ತಿತ್ತು. ನಾಯಕರು ಎರಡು ಪ್ರಶಸ್ತಿಗಳನ್ನು ಏರ್ಪಡಿಸಿ ಒಂದು ಸೃಜನಾತ್ಮಕ ಕೃತಿಗೆ, ಮತ್ತೊಂದು ಶಾಸ್ತ್ರಗ್ರಂಥಕ್ಕೆ ಎಂದು ಗೊತ್ತು ಮಾಡಿದರು. ಎಷ್ಟೋ ಜನ ಹಿರಿಯ ವಿದ್ವಾಂಸರುಗಳಿಗೆ ಆಗುತ್ತಿದ್ದ ಅನ್ಯಾಯ ಇದರಿಂದ ತಪ್ಪಿತು. ಪ್ರಶಸ್ತಿ ಬಂದವರಿಗೆ ಪೋಸ್ಟಿನಲ್ಲಿ ಸಂಭಾವನೆಯ ಚೆಕ್ ಕಳಿಸುತ್ತಿದ್ದ ಅವಮಾನಕರ ಕ್ರಮವನ್ನು ಹಾಮಾನಾ ತಪ್ಪಿಸಿದರು. ಒಂದು ವಿಶೇಷ ಕಾರ್ಯಕ್ರಮ ಏರ್ಪಡಿಸಿ ಸಾಹಿತ್ಯಾಸಕ್ತರ ಸಮ್ಮುಖದಲ್ಲಿ ಬಹುಮಾನಿತರನ್ನು ಸನ್ಮಾನಿಸಿ, ಅವರ ಪುಸ್ತಕಗಳ ಪರಿಚಯ ಮಾಡಿಸಿ ಬಹುಮಾನ ನೀಡುವ ಸಭ್ಯ ನಡವಳಿಕೆಯನ್ನು ಅಕಾಡೆಮಿಯಲ್ಲಿ ಸ್ಥಾಪಿಸಿದ್ದು ಅವರೇ. ನಾಡಿನ ಗಡಿ ಪ್ರದೇಶಗಳಲ್ಲಿ ಹಿರಿಯ ಕವಿಗಳ ಭಾವಗೀತೆಗಳ ಗಾಯನ ಕಾರ್ಯಕ್ರಮಗಳನ್ನು ನಡೆಸಿ ಭಾಷೆ, ಸಾಹಿತ್ಯಗಳ ಬಗ್ಗೆ ಜನರ ಅಭಿಮಾನವನ್ನು ಪುಟಗೊಳಿಸುವ

ಕಾರ್ಯಕ್ರಮ ಆರಂಭಿಸಿದ್ದೂ ನಾಯಕರೇ. ಈ ಕಾರ್ಯಕ್ರಮ ತುಂಬ ಜನಪ್ರೀತಿ ಗಳಿಸಿತ್ತು. ಆದರೆ ಅವರ ನಂತರ ಅಧ್ಯಕ್ಷರಾದ ನಿಸಾರ್ ಅಹಮದ್ ಅದನ್ನು ನಿಲ್ಲಿಸಿದರು. ಹಳೆಯದನ್ನು ನಿಲ್ಲಿಸುವುದೂ ಒಂದು ಹೊಸ ಕಾರ್ಯಕ್ರಮ ತಾನೇ!

ಕನ್ನಡದ ಪ್ರೀತಿ

ಹಾಮಾ ನಾಯಕರ ಎಲ್ಲ ಸಾಹಿತ್ಯಕ ಚಟುವಟಿಕೆಗಳ ಹಿಂದೆ ಎದ್ದು ಕಾಣುವುದು ಕನ್ನಡದ ಬಗ್ಗೆ ಅವರಿಗಿರುವ ನಿರ್ಮಲವಾದ ಪ್ರೀತಿ. ಕನ್ನಡದ ವಾತಾವರಣವನ್ನು ಗಟ್ಟಿಗೊಳಿಸಲು ಅವರು ಉದ್ದಕ್ಕೂ ದುಡಿದಿದ್ದಾರೆ. ಈ ಬಗೆಯ ಆಸೆ, ಆದರ್ಶ ಅನೇಕರಿಗೆ ಇರಬಹುದು. ಆದರೆ ಅದನ್ನು ಕಾರ್ಯಗತಗೊಳಿಸಲು ಬೇಕಾದ ಶ್ರಮವರಿಯದ ದುಡಿಮೆ, ತಾಳ್ಮೆ, ಎಂಥ ಪ್ರಬಲರನ್ನೂ ಎದುರು ಹಾಕಿಕೊಳ್ಳಲು ಹಿಂಜರಿಯದ ಕೆಚ್ಚು ಮಾತ್ರ ಎಲ್ಲೋ ಒಬ್ಬಿಬ್ಬರಿಗಿರುತ್ತದೆ. ನಾಯಕರು ಇಂಥ ಗುಣಗಳನ್ನು ಅಗಣಿತವಾಗಿ ಪಡೆದಿದ್ದಾರೆ.

ಅದು ತುರ್ತುಪರಿಸ್ಥಿತಿಯ ಕಾಲ. ಆ ದಿನಗಳಲ್ಲಿ ರಾಜ್ಯಸರ್ಕಾರ ಲೇಖಕ ಡಾಮ್ ಮೊರೇಸರನ್ನು ಕರೆಸಿ ಲಕ್ಷಾಂತರ ರೂ. ಖರ್ಚು ಮಾಡಿ ಒಂದು ಪುಸ್ತಕ ಬರೆಸಿತು. ಪುಸ್ತಕದ ಹೆಸರು 'ಜರ್ನಿ ಥ್ರೂ ಕರ್ನಾಟಕ'. ಬಿಡುಗಡೆಯಾಗುವ ಮೊದಲೇ ಪುಸ್ತಕದ ಒಂದು ಪ್ರತಿ ನಾಯಕರ ಕೈಗೆ ಬಂತು. ಓದಿ ನಾಯಕರು ಕಿಡಿಕಿಡಿಯಾದರು. ಇಲ್ಲಿಯ ಜನರ, ಭಾಷೆಯ, ಸಾಹಿತ್ಯದ ಗಂಧ ಕೂಡ ತಿಳಿಯದೆ ಬರೆದ ಪುಸ್ತಕ ಅದು. ಬೆಳುಗೊಳದ ಗೊಮ್ಮಟನಂಥ ಅದ್ಭುತ ಶಿಲ್ಪವನ್ನು ನೋಡಲೂ ನಿರಾಕರಿಸಿ ಇಲ್ಲಿಯ ಕಲೆ ಶಿಲ್ಪಗಳ ಬಗ್ಗೆ ಮಾಡಿದ ವಿಮರ್ಶೆ ಅದರಲ್ಲಿತ್ತು. ಈ ರಾಜ್ಯದಲ್ಲೇ ಹುಟ್ಟಿ, ಬಾಳಿ ಅದರ ಗಾಢಪರಿಚಯವಿರುವ ಎಷ್ಟೋ ಜನ ಹಿರಿಯ ಲೇಖಕರು ಕಣ್ಣೆದುರೇ ಇರುವಾಗ ತಮಗೆ ಬೇಕಾದವರೊಬ್ಬರನ್ನು ಎಲ್ಲಿಂದಲೋ ಕರೆಸಿ ಲಕ್ಷಾಂತರ ಸುರಿದು ಬರೆಸಿದ ಈ ಗ್ರಂಥ ಕನ್ನಡ ಜನಕ್ಕೇ ಮಾಡಿದ ಅಪಮಾನ ಎನಿಸಿತು ನಾಯಕರಿಗೆ. ಅದನ್ನು ಬರೆಸಿದ ರಾಜ್ಯದ ಮುಖ್ಯಮಂತ್ರಿ ದೇವರಾಜ ಅರಸರನ್ನು ಉಗ್ರಮಾತುಗಳಲ್ಲಿ ಖಂಡಿಸಿ ಪತ್ರಿಕೆಗಳಿಗೆ ಹೇಳಿಕೆ ನೀಡಿದರು. ನಾಯಕರು ಆಗ ಅಧ್ಯಯನ ಸಂಸ್ಥೆಯ ಮುಖ್ಯಸ್ಥರು. ಉಪಕುಲಪತಿಯಾಗುವ ಸಾಧ್ಯತೆ ಇದ್ದವರು. ಸರ್ಕಾರವನ್ನು ಎದುರು ಹಾಕಿಕೊಂಡರೆ ಅದು ತಮ್ಮ ಬುಡಕ್ಕೇ ಬಿಸಿನೀರೆರೆಯಬಹುದು ಎಂದು ಗೊತ್ತಿದ್ದೂ ಅವರು ಅದಕ್ಕೆ ಹಿಂಜರಿಯಲಿಲ್ಲ. ಅವರ ಕನ್ನಡ ಪ್ರೇಮದ ಹಿಂದೆ ಇಂಥ ಕೆಚ್ಚು ಇದೆ.

ನಾಯಕರು ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದಾಗ ನಡೆದ ಒಂದು ಘಟನೆ. ಸರ್ಕಾರ ಆ ವಿಶ್ವವಿದ್ಯಾಲಯದ ಕಾಲೇಜೊಂದರಲ್ಲಿ ಆಟೋಮೊಬೈಲ್

ಇಂಜನಿಯರಿಂಗ್ ಶಿಕ್ಷಣ ಆರಂಭಿಸುವುದಾಗಿ ಪ್ರಕಟಿಸಿತು. ಇದು ವಿಶ್ವವಿದ್ಯಾಲಯದ ಅಕೆಡೆಮಿಕ್ ಕೌನ್ಸಿಲ್, ಸೆನೆಟ್ ಮತ್ತು ಸಿಂಡಿಕೇಟುಗಳು ತೆಗೆದುಕೊಳ್ಳಬೇಕಾದ ತೀರ್ಮಾನ. ಆದರೆ ಸರ್ಕಾರ ವಿಶ್ವವಿದ್ಯಾಲಯದ ಸ್ವಾಯತ್ತತೆಯನ್ನೂ ಅಲಕ್ಷಿಸಿ ತಾನೆ ಈ ತೀರ್ಮಾನ ಮಾಡಿತ್ತು. ಹಾಮಾನಾ ಕೂಡಲೇ ಇದನ್ನು ಪ್ರತಿಭಟಿಸಿ ಮುಖ್ಯಮಂತ್ರಿಗಳಿಗೆ ಮತ್ತು ವಿದ್ಯಾಮಂತ್ರಿಗಳಿಗೆ ಪತ್ರ ಬರೆದರು. ಅಕೆಡೆಮಿಕ್ ಕೌನ್ಸಿಲಿನ ಅಂಗೀಕಾರವಿಲ್ಲದೆ ಯಾವ ಹೊಸ ಶಿಕ್ಷಣ ಶಾಖೆಯೂ ತಮ್ಮ ವಿಶ್ವವಿದ್ಯಾನಿಲಯದಲ್ಲಿ ಆರಂಭವಾಗುವುದಿಲ್ಲವೆಂದು ಪತ್ರಿಕಾ ಹೇಳಿಕೆ ನೀಡಿದರು. ಮುಂದೆ ಅಲ್ಲಿ ಪ್ರಶ್ನೆ ಪತ್ರಿಕೆಯೊಂದು ಪರೀಕ್ಷೆಗೆ ಮುಂಚೆಯೇ ಬಹಿರಂಗವಾದಾಗ ತಮಗೂ ಅದಕ್ಕೂ ಯಾವ ಸಂಬಂಧವಿಲ್ಲದಿದ್ದರೂ ಅದರ ಹೊಣೆಯನ್ನು ತಾವು ಹೊತ್ತು ಕುಲಪತಿ ಸ್ಥಾನಕ್ಕೇ ಹಠಾತ್ತಾಗಿ ರಾಜೀನಾಮೆ ನೀಡಿಬಿಟ್ಟರು. ಕುರ್ಚಿಗೆ, ಅಧಿಕಾರಕ್ಕೆ ಸೊಪ್ಪುಹಾಕದ ಇಂಥ ನಿರ್ಭೀತ ಪ್ರಾಮಾಣಿಕ ನಡತೆಯಿಂದ ಮಾತ್ರವೇ ಒಂದು ವ್ಯಕ್ತಿತ್ವ ದೊಡ್ಡದಾಗಲು ಸಾಧ್ಯ.

ನಾಯಕರ ದಿಟ್ಟ ನಿಲುವು ನಿರ್ದಾಕ್ಷಿಣ್ಯ ಪ್ರವೃತ್ತಿಗಳೇ ಕಾರಣವಾಗಿ ಅವರನ್ನು ದ್ವೇಷಿಸುವವರೂ ಇಲ್ಲದಿಲ್ಲ. ತನಗೆ ಆಗದ ಪ್ರಖ್ಯಾತ ಲೇಖಕರನ್ನೆಲ್ಲ ಸುಳ್ಳೇ ವಿಕಾರವಾಗಿ ಚಿತ್ರಿಸಿ, ಮನರಂಜನೆ ನಡೆಸಿ ದುಡ್ಡೆಬ್ಬಿಸುವ ಹಗರಣಕಾರನೊಬ್ಬ ಒಮ್ಮೆ ನಾಯಕರ ಬಗ್ಗೆಯೂ ಹಸಿಸುಳ್ಳುಗಳಿಂದ ಕೂಡಿದ ಒಂದು ಲೇಖನ ಬರೆದು ತನ್ನ ಪತ್ರಿಕೆಯಲ್ಲಿ ಪ್ರಕಟಿಸಿದ. ನಾಯಕರು ಉಪಕುಲಪತಿಗಳಾಗಬಹುದಾಗಿದ್ದ ಸಂದರ್ಭದಲ್ಲಿ ಪ್ರಕಟವಾದ ಲೇಖನ ಅದು. ಉದ್ದೇಶ ಸ್ಪಷ್ಟವಾಗಿತ್ತು. ತಮ್ಮ ಬಗ್ಗೆ ಎಂಥ ವಿಮರ್ಶೆಯನ್ನೂ ನಗುತ್ತ ತಾಳಿಕೊಳ್ಳುವ ನಾಯಕರು ಈ ಸುಳ್ಳು ಬರೆಹ ನೋಡಿ ಉರಿದೆದ್ದರು. ಮೊಕದ್ದಮೆ ಹೂಡಿ ಆ ಲೇಖಕನನ್ನು ಕೋರ್ಟಿಗೆಳೆದರು. ಕೇಸು ವರ್ಷಗಟ್ಟಲೆ ನಡೆಯಿತು. ಕೊನೆಗಳಿಗೆಯಲ್ಲಿ ಲೇಖಕ ಸಂಧಾನ ಮಾಡಿಕೊಳ್ಳಲು ಬಂದ. ನಾಯಕರು ಒಪ್ಪಲಿಲ್ಲ. ಕಡೆಗೂ ಆತ ನ್ಯಾಯಾಧೀಶರ ಎದುರಿನಲ್ಲಿ ಮತ್ತು ತನ್ನ ಪತ್ರಿಕೆಯಲ್ಲಿ ತಾನು ಬರೆದದ್ದು ನಿಜವಲ್ಲವೆಂದು ಒಪ್ಪಿಕೊಂಡು ನಾಯಕರ ಕ್ಷಮಾಯಾಚನೆ ಮಾಡಬೇಕಾಯಿತು. ಹಾಮಾನಾ ಬೀದರ್ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದಾಗ ಅವರ ಸಂದರ್ಶನ ನಡೆಸಿದ ಕನ್ನಡದ ಲೇಖಕನೊಬ್ಬ ತನ್ನ ಎಂಟೊಂಬತ್ತು ಪುಟಗಳ ದೀರ್ಘಲೇಖನದಲ್ಲಿ ಅವರ ಬರವಣಿಗೆಯ ಬಗ್ಗೆ ಒಂದೇ ಒಂದು ಚಕಾರ ಬರೆದಿಲ್ಲ. ಅಸಹನೆಯೆನ್ನುವುದು ಎಷ್ಟು ದೂರ ಹೋಗಬಹುದು ಎನ್ನಲು ಇದಕ್ಕಿಂತ ಬೇರೆ ನಿದರ್ಶನ ಬೇಕೆ? ಆದರೆ ನಾಯಕರು ಅದಕ್ಕೆ ಒಮ್ಮೆಯೂ ಆಕ್ಷೇಪಿಸಿಲ್ಲ. "ಯಾರ ತೇಗಿನಲ್ಲೇ ಆಗಲಿ ಅವರು ತಿಂದದ್ದರ

ವಾಸನೆಯಲ್ಲದೆ ಬೇರೆ ಏನಿರಲು ಸಾಧ್ಯ? ಅವರವರ ಸಂಸ್ಕಾರ ಬಿಡಿ" ಎಂದು ಮಾತು ಮುಗಿಸಿಬಿಡುತ್ತಾರೆ ಅವರು.

ಅಧಿಕಾರ, ಜನಪ್ರಿಯತೆ, ಮಾನಮನ್ನಣೆಗಳು ಎಷ್ಟೇ ಬಂದರೂ ನಾಯಕರು ಎಂದೂ ಬೀಗಿ ಮಾತಾಡಿದವರಲ್ಲ. ತಮ್ಮ ಬಗ್ಗೆ ಹೇಳಿಕೊಳ್ಳಲೇಬೇಕಾಗಿ ಬಂದಾಗ ಅವರು ತೀರ ವಿನಯದಿಂದ ಮಾತಾಡುತ್ತಾರೆ. ಬೀದರ್ ಸಾಹಿತ್ಯ ಸಮ್ಮೇಳನಕ್ಕೆ ಮುಂಚೆ ರಾಮಚಂದ್ರಶರ್ಮರು ಅವರನ್ನು ಕುರಿತು 'ಸಂದರ್ಶನ' ಬರೆದರು. ಸಾಹಿತ್ಯ ಕ್ಷೇತ್ರದಲ್ಲಿ ನಿಮ್ಮ ಪಾತ್ರ ಎಂಥದು ಎಂದು ಭಾವಿಸುತ್ತೀರಿ? ಎಂಬ ಪ್ರಶ್ನೆಗೆ ಅವರು ಕೊಟ್ಟ ಉತ್ತರ ಇದು:

"ನಾನೇನು ದೊಡ್ಡ ಸೃಜನಶೀಲ ಲೇಖಕನಲ್ಲ, ದೊಡ್ಡ ವಿದ್ವಾಂಸ ಎನ್ನುವ ಭ್ರಾಂತಿಯೂ ಇಲ್ಲ. ಸಾಹಿತ್ಯಕ್ಕೆ ಸಂಬಂಧಪಟ್ಟ ಹಾಗೆ ಮೂರು ಗುಂಪಿನ ಜನರಿದ್ದಾರೆ; ಸೃಜನಶೀಲರು, ವಿದ್ವಾಂಸರು ಮತ್ತು ಕನ್ನಡದ ಕೆಲಸ ಮಾಡುವವರು. ಆ ಮೂರನೇ ಗುಂಪಿನಲ್ಲಿ ನಾನು. ನನಗೇನಾದರೂ ಸ್ಥಾನವಿದ್ದರೆ ಆ ಕ್ಷೇತ್ರದಲ್ಲಿ, ನಮ್ಮ ಜನ ತುಂಬ ಉದಾರಿಗಳು. ಸ್ವಲ್ಪ ಕೆಲಸ ಮಾಡಿದವರನ್ನೂ ಗೌರವಿಸುತ್ತಾರೆ."

ಎಂಥ ಮಾತು! ಕೇಳಿದವರನ್ನೇ ತಬ್ಬಿಬ್ಬು ಮಾಡುವ ಉತ್ತರ. ಅದಕ್ಕೇ ಅವರನ್ನು ಬಲ್ಲವರು ಹೇಳುವುದು. "ನಾಯಕರು ನಿಜವಾಗಿಯೂ ನಾಯಕರೇ. ಅದು ಅವರಿಗೆ ವಂಶದಿಂದ ಬಂದ ಹೆಸರಷ್ಟೇ ಅಲ್ಲ, ಅನ್ವರ್ಥನಾಮವೂ ಹೌದು."

●

ಹಾ. ಮಾ. ನಾಯಕ

ಹೆತ್ತವರು ಗೊತ್ತಿದ್ದೆ ಹೆಸರಿಟ್ಟರೆಂಬ ಥರ
ಅಚ್ಚರಿಗೊಳಿಸುವಂತೆ ಬೆಳೆದ ಹಿರಿವ್ಯಕ್ತಿತ್ವ
ಕನ್ನಡದ ಕೋಟೆ ಕೊತ್ತಳ ಫೌಜು ನೆಲಜಲವ
ಹೋರಾಡಿ ಕಾಯ್ದುಕೊಳ್ಳುವ ಧೀರ ದೃಢಸತ್ವ
ನಾಯಕರು ನಿಜವಾಗಿ ನಾಯಕರೆ; ಗುರಿ, ನಿಟ್ಟು,
ವ್ಯೂಹರಚನೆಯ ಗುಟ್ಟು ಪರಿಪೂರ್ಣ ಎಲ್ಲ ಸಲ.
ತೊಡೆತಟ್ಟಿ ಎದುರಾದ ಜಟ್ಟಿಯ ಕ್ಷಣಾರ್ಧದಲ್ಲಿ
ಚಿತ್ತು ಮಾಡುವ ಚತುರ; ಒಂದೆ ಗುರಿ, ಒಂದೆ ಶರ.
ಜಾತಿಕೋತಿಗಳ ಹಾವಳಿ ಎಲ್ಲ ದಿಕ್ಕಲ್ಲಿ,
ಇಲ್ಲ ನೀವಿರುವಲ್ಲಿ, ನೀವೊ ಬಲು ಗಟ್ಟಿಕುಳ
ಕನ್ನಡದ ಶಿಖರಗಳ ಮೇಲೆ ಬೆಳಕನ್ನುರಿಸಿ
ಎಲ್ಲ ಮೂಲೆಗೂ ಅದನು ಕಾಣಿಸುವ ನಿಷ್ಠೆ, ಛಲ.
ಕನ್ನಡವ ಹಳಿದರೋ, ಕಿಡಿಯಾಡುವುದು ಕಣ್ಣು, ಮಾತೆಲ್ಲ
ಸ್ಫೋಟಿಸಿದ ಗುಂಡು,
ಸಹ್ಯಾದ್ರಿ ನೆತ್ತಿಯಲಿ ಒಟ್ಟಾಗಿ ಕವಿದು ಘೀಳಿಡುವಂತೆ
ಕರಿಮುಗಿಲ ಹಿಂಡು!

– ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ರಂಗಹಿಮಾಲಯದ ಒಂದು ಉತ್ತುಂಗ ಶಿಖರ ಬಿ. ವಿ. ಕಾರಂತ

'ಚೋಮನ ದುಡಿ' ಚಿತ್ರ ರಾಷ್ಟ್ರ ಪ್ರಶಸ್ತಿ, ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಗೆಲ್ಲುತ್ತ ಕನ್ನಡ ಚಿತ್ರಲೋಕದ ಜಯ ಪತಾಕೆ ಹಾರಿಸಿದ ದಿನಗಳು. ಆಗ ಆ ಚಿತ್ರ ನೋಡಿದ, ಪರಿಣತ ಸಿನಿಮಾ ವಿಮರ್ಶಕ ಖ್ವಾಜಾ ಅಹಮದ್ ಅಬ್ಬಾಸ್ ಕಾರಂತರಿಗೆ ಬರೆದ ಪತ್ರ ಇದು.

ಪ್ರಿಯ ಕಾರಂತ್,

ನಿಮಗೆ ನಾನು ತಿಳಿದಿಲ್ಲದಿರಬಹುದು ಆದರೆ ನಾನು ನಿಮ್ಮನ್ನು 'ಚೋಮನ ದುಡಿ' ಚಿತ್ರದ ಮೂಲಕ ಬಲ್ಲೆ. ಈಗಷ್ಟೆ ನಾನು ಕಾರ್ಲೋನಿವೇರಿಯಿಂದ ವಾಪಸ್ಸಾಗಿದ್ದೇನೆ. ಅಲ್ಲಿ ನಿಮ್ಮ ಚಿತ್ರ 'ಸಿಲಾಲ್ಕ್' ಪ್ರಶಸ್ತಿ ಗಳಿಸಿತು. ತೀರ್ಪುಗಾರ ಮಂಡಲಿಯಲ್ಲಿ ನಾನೂ ಇದ್ದೆ. ಚಿತ್ರಪ್ರದರ್ಶನ ಮುಗಿದಾಗ, ಅದಕ್ಕೆ ಅತ್ಯುತ್ಸಾಹದ ಮೆಚ್ಚುಗೆ ವ್ಯಕ್ತವಾದಾಗ ನೀವು ಅಲ್ಲಿರಬೇಕಿತ್ತು. ಪ್ರತಿಯೊಬ್ಬರೂ ನಿಮ್ಮನ್ನು ನೋಡಲು ಹುಡುಕಾಡುತ್ತಿದ್ದರು. ಭಾರತದಲ್ಲಿ ಮತ್ತೊಬ್ಬ ಸತ್ಯಜಿತ್‌ರಾಯ್ ಹುಟ್ಟಿದ್ದಾನೆ ಎಂದೇ ಎಲ್ಲರ ಅಭಿಪ್ರಾಯವಾಗಿತ್ತು.

'ಚೋಮನ ದುಡಿ' ಸ್ವರ್ಣಕಮಲ ಗೆದ್ದುದು ಪತ್ರಿಕೆಯಲ್ಲಿ ದೊಡ್ಡ ಸುದ್ದಿಯಾಗಿ ಪ್ರಕಟವಾದ ದಿನವೇ ಕಾರಂತರು ನನಗೆ ನೋಡಲು ಸಿಕ್ಕರು. "ನಾಳೆ ಬೆಳಿಗ್ಗೆ ಮನೆಗೆ ಬನ್ನಿ" ಎಂದರು. ಹೋದ ಕೂಡಲೆ ಕಾಫಿ ಕೊಟ್ಟು, ಹಾರ್ಮೋನಿಯಂ ಎದುರಿಟ್ಟುಕೊಂಡು ಕೇಳಿ ಎಂದು ಹೇಳಿ ಏನೋ ನುಡಿಸತೊಡಗಿದರು. ಅವು 'ಇಸ್ಪೀಟ್ ರಾಜ್ಯ' ನಾಟಕದ ಹಾಡುಗಳಿಗಾಗಿ ರಚಿಸಿದ್ದ ಧಾಟಿಗಳು. (ಟಾಗೋರರ ತಾಸೆರ್‌ದೇಶ್ ನಾಟಕವನ್ನು ಆಧರಿಸಿದ ನನ್ನ ಕನ್ನಡ ಅವತರಣಿಕೆ 'ಇಸ್ಪೀಟ್ ರಾಜ್ಯ' ವನ್ನು ಕಾರಂತರು ನಿರ್ದೇಶಿಸುವುದು ಆ ಹೊತ್ತಿಗೆ ತೀರ್ಮಾನವಾಗಿತ್ತು.

ನಾನು ಅವುಗಳಿಗೆ ಹಾಡುಗಳನ್ನು ಬರೆಯಬೇಕಾಗಿತ್ತು.) ನಾನೆಂದೆ "ಕಾರಂತರೆ, ಈಗಷ್ಟೆ ಚೋಮನ ದುಡಿ ರಾಷ್ಟ್ರಪ್ರಶಸ್ತಿ ಗೆದ್ದಿದೆ. ಪತ್ರಿಕೆಗಳ ತುಂಬ ಪುಂಖಾನುಪುಂಖವಾಗಿ ಅದರ ಸುದ್ದಿ, ಲೇಖನ, ಫೋಟೋ ಪ್ರಕಟವಾಗುತ್ತಿವೆ. ಅದನ್ನೆಲ್ಲ ನೋಡುತ್ತ ನಾಲ್ಕು ದಿನ ಉಲ್ಲಾಸವಾಗಿ ಕಳೆಯಿರಿ. ಆ ಮೇಲೆ ಇದನ್ನು ಶುರುಮಾಡುವಿರಂತೆ" ಎಂದೆ. ಕಾರಂತರು "ನೋ, ನೋ, ಒಂದು ಕೆಲಸ ಗೆದ್ದ ತಕ್ಷಣ ಅದು ಮುಗಿಯಿತು. ಅದರ ಪ್ರಶಂಸೆಗೆ ತಲೆಗೊಡಬಾರದು. ಅದನ್ನು ಮರೆತು ಇನ್ನೊಂದರಲ್ಲಿ ಮುಳುಗಿಬಿಡಬೇಕು. 'Change of work itself is rest' ಎಂದವರೇ ಹಾರ್ಮೋನಿಯಂ ವಾದನ ಮುಂದುವರಿಸಿಯೇಬಿಟ್ಟರು!"

ಕಾರಂತರ ರುಚಿ ಸೆಳೆತಗಳೇ ಹಾಗೇ. ನಾಟಕ, ಸಂಗೀತ ಎಂದರೆ ಮುಗಿಯಿತು. ಅವರಿಗೆ ಕಾಲದ ಪರಿವೆಯೇ ಇರುತ್ತಿರಲಿಲ್ಲ. ಎದ್ದರೆ, ಕೂತರೆ, ಇಪ್ಪತ್ತನಾಲ್ಕು ಗಂಟೆಯೂ ಅದೇ. ಸೃಷ್ಟಿಶೀಲವಾದ ಕೆಲಸದಲ್ಲಿ ಸಿಗುತ್ತಿದ್ದ ಅಲೌಕಿಕವಾದ ಆನಂದವೇ ಅವರಿಗೆ ಎಲ್ಲಕ್ಕಿಂತ ಮಿಗಿಲಾಗಿತ್ತು. "ಇದರಲ್ಲಿ ಎಷ್ಟೋಸಲ ನನ್ನ ಸಹನೆಯ ಪರೀಕ್ಷೆಯೂ ಆಗಿ ಹೋಗುತ್ತಿತ್ತು" ಎಂದು ಪ್ರೇಮಾಕಾರಂತ್ ಹೇಳುತ್ತಾರೆ. "ಅದು 'ತಬ್ಬಲಿಯು ನೀನಾದೆ ಮಗನೆ' ಚಿತ್ರದ ಶೂಟಿಂಗ್ ನಡೆಯುತ್ತಿದ್ದ ದಿನಗಳು. ಬೆಳಿಗ್ಗೆ ಐದುಗಂಟೆಗೇ ಎದ್ದು ನೆಲಮಂಗಲದ ಹತ್ತಿರದ ಹಳ್ಳಿಗೆ ಶೂಟಿಂಗ್‌ಗೆ ಹೋಗಬೇಕಾಗಿತ್ತು. ಅದು ಮುಗಿಯುತ್ತಿದ್ದದ್ದು ರಾತ್ರಿ ಹನ್ನೊಂದಕ್ಕೋ ಹನ್ನೆರಡಕ್ಕೋ. ಅದೇ ದಿನಗಳಲ್ಲಿ ಕಾರಂತರು 'ಋಷ್ಯಶೃಂಗ ಚಿತ್ರದ ರೀರೆಕಾರ್ಡಿಂಗ್ ಮಾಡುತ್ತಿದ್ದರು. ಶೂಟಿಂಗ್ ಮುಗಿಸಿ, ಬೆಂಗಳೂರಿಗೆ ಬಂದು, ಅಲ್ಲಿಂದ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ರೀರೆಕಾರ್ಡಿಂಗ್ ನಡೆಯುತ್ತಿತ್ತು. ಶೂಟಿಂಗ್ ಮುಗಿಸಿ, ಕಾರಂತರು ಮನೆ, ತಲುಪುತ್ತಿದ್ದದ್ದು ಬೆಳಗಿನ ಜಾವಕ್ಕೆ. ಆಗ ನನಗೆ ಮಹಾಸಿಟ್ಟು ಬರುತ್ತಿತ್ತು. ಆದರೂ ಕಷ್ಟಕ್ಕೆ ತಕ್ಕ ಫಲವೆಂಬಂತೆ ಕಾರಂತರಿಗೆ ರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಸಂಗೀತ – ನಿರ್ದೇಶಕ ಪ್ರಶಸ್ತಿ ಬಂದದ್ದರಿಂದ ಕೊಂಚ ಸಮಾಧಾನವಾಯಿತು."

'ಹಾರ್ಮೋನಿಯಂ ಅಪ್ಪಿ' ಈಗಿಲ್ಲ. ಅವನು ಕಾರಂತರ ನಾಟಕ ಬಳಗದವರಲ್ಲಿ ಒಬ್ಬ. ಬಹಳ ಹಿಂದೆ ಇಸ್ಪೀಟ್‌ರಾಜ್ಯ ನಾಟಕದ ಹಾಡುಗಳಿಗೆ ಅವನು ಸೊಗಸಾಗಿ ಹಾರ್ಮೋನಿಯಂ ನುಡಿಸಿದವನು. ಕೆಲವು ವರ್ಷಗಳ ಕೆಳಗೆ ಅವನು ತುಂಬ ಕಷ್ಟಕ್ಕೆ ಸಿಕ್ಕಿ ಹಾಕಿಕೊಂಡ. ನಾನು ಅವನದೊಂದು ದೊಡ್ಡ ಪ್ರೋಗ್ರಾಂ ಏರ್ಪಡಿಸಿ ಆ ಹೊತ್ತಿನಲ್ಲಿ ಒಂದು ನಿಧಿಕೂಡಿಸಿ ಕೊಡುವ ಕೆಲಸಕ್ಕೆ ಹೊರಟಿದ್ದೆ. ಉತ್ತರ ಭಾರತದಿಂದ ನಡುವೆ ಯಾವಾಗಲೋ ಬೆಂಗಳೂರಿಗೆ ಬಂದ ಕಾರಂತರಿಗೆ ಈ ಸುದ್ದಿ ಕಿವಿಗೆ ಬಿತ್ತು. ಅವರು ಇದ್ದಕ್ಕಿದ್ದಂತೆ ನನ್ನಲ್ಲಿಗೆ ಬಂದರು. 'ಭಟ್ಟರೆ, ಸುದ್ದಿ

ಕೇಳಿದೆ, ಅಪ್ಪಿ ಒಬ್ಬ ವಾದ್ಯಗಾರ ನೀವು ಅಕಡೆಮಿಕ್ ವಲಯಕ್ಕೆ ಸೇರಿದ ಒಬ್ಬ ಪ್ರೊಫೆಸರ್. ನಿಮ್ಮಂಥವರು ಅಪ್ಪಿಯ ಕಷ್ಟ ಹಚ್ಚಿಕೊಂಡು ಅವನ ಸಹಾಯಕ್ಕೆ ಓಡಾಡುತ್ತಿರುವುದು ನೋಡಿ ನನಗೆ ಆಶ್ಚರ್ಯ, ಸಂತೋಷ ಎರಡೂ ಆಗಿದೆ. ಈಗಷ್ಟೆ ನನಗೆ ಯಾವುದೋ ಐದು ಸಾವಿರ ಬಂತು. ತಗೊಳ್ಳಿ, ಇದು ಅಪ್ಪಿ ಗೌರವನಿಧಿಗೆ. ಇದು ಸಾಲದು. ಸಾಧ್ಯವಾದರೆ ಮತ್ತೆ ಇನ್ನಷ್ಟು ಕೊಡುತ್ತೇನೆ' ಎಂದವರೆ ಯಾರೋ ಅವರಿಗೆ ಆಗಷ್ಟೇ ಕೊಟ್ಟಿದ್ದ ಐದು ಸಾವಿರ ಸಂಭಾವನೆಯ ಕಟ್ಟನ್ನು ಹಾಗೇ ನನ್ನ ಕೈಗಿಟ್ಟು ಹೊರಟುಹೋದರು. ವಾಸ್ತವವಾಗಿ ಆ ಹಣ ಕಾರಂತರಿಗೇ ಬೇಕಿತ್ತು. ಆಗಷ್ಟೆ ಅವರ ಮನೆಯಲ್ಲಿ ಕಳ್ಳತನ ನಡೆದು ಕಾರಂತ ಏನೇನೋ ಕಳಕೊಂಡಿದ್ದರು. ಆದರೆ ಅವರು ಆ ನಷ್ಟಕ್ಕೆ ಚಿಂತಿಸಲಿಲ್ಲ, ಅಪ್ಪಿಯ ಕಷ್ಟಕ್ಕೆ ಮರುಗಿದರು. ಅಪ್ಪಿಗೆ ನಾವು ಎಂಬತ್ತು ಸಾವಿರ ಕೂಡಿಸಿಕೊಟ್ಟೆವು ಎಂದು ಗೊತ್ತಾದಾಗ ಅವರ ಕಣ್ಣು ಸಂತೋಷದಿಂದ ಹೊಳೆದವು. ಮುಂದೆ ಸಂಗೀತ ಸಾಗರ್ ಸಂಸ್ಥೆ ಇಸ್ಪೀಟ್‌ರಾಜ್ಯ ನಾಟಕದ ಧ್ವನಿಸುರುಳಿ ಮಾಡಿದಾಗ ಕಾರಂತ ಅಪ್ಪಿಗೇ ಹಾರ್ಮೋನಿಯಂ ನುಡಿಸುವ ಕೆಲಸ ವಹಿಸಿ ಬಹಳ ಒಳ್ಳೆಯ ಸಂಭಾವನೆ ಕೊಟ್ಟರು. ಜೊತೆಯವರ ಕಷ್ಟಕ್ಕೆ ಪೂರ್ತಿ ಕರಗಿಹೋಗುತ್ತಿದ್ದ ದೊಡ್ಡ ವ್ಯಕ್ತಿ ಬಿ. ವಿ. ಕಾರಂತ.

ಬಿ. ವಿ. ಕಾರಂತರ ಪೂರ್ತಿ ಹೆಸರು ಬಾಬುಕೋಡಿ ವೆಂಕಟರಮಣ ಕಾರಂತ. ಹುಟ್ಟಿದ್ದು ೧೯೨೮ರಲ್ಲಿ. ತಂದೆ ನಾರಣಪ್ಪಯ್ಯ, ತಾಯಿ ಲಕ್ಷ್ಮಮ್ಮ. ಮನೆಯಲ್ಲಿ ನಡೆಯುತ್ತಿದ್ದ ಭಜನೆ, ತಾಯಿ ಹೇಳುತ್ತಿದ್ದ ಸಂಪ್ರದಾಯದ ಹಾಡುಗಳು, ಊರಲ್ಲಿ ಮತ್ತು ಸುತ್ತ ಮುತ್ತಲ ಸ್ಥಳಗಳಲ್ಲಿ ನಡೆಯುತ್ತಿದ್ದ ಹರಿಕಥೆ, ಜಾತ್ರೆ, ಕೋಲ, ರಥೋತ್ಸವಗಳು ವೆಂಕಟರಮಣನ ಬುದ್ಧಿ, ಭಾವನೆ, ಕಲ್ಪನೆಗಳನ್ನು ಗಾಢವಾಗಿ ಉದ್ದೀಪಿಸಿರಬೇಕು. ಐದನೆಯ ಕ್ಲಾಸಿನಲ್ಲಿದ್ದಾಗ ಅವನು 'ನನ್ನ ಗೋಪಾಲ' ನಾಟಕದಲ್ಲಿ ಪಾತ್ರವಹಿಸಿ, ಆಕರ್ಷಕವಾಗಿ ಮಾಡಿ, ಸಭೆಯಲ್ಲಿದ್ದ ಊರಿನ ಪಟೇಲರಿಂದ ಎರಡು ರೂಪಾಯಿ ಬಹುಮಾನ ಗಿಟ್ಟಿಸಿದ!

ವೆಂಕಟರಮಣನ ಓದು ಬಡತನದಿಂದಾಗಿ ಎಂಟನೆಯ ತರಗತಿಗೇ ನಿಂತು ಹೋಯಿತು. ಶ್ರೀಮಂತರೊಬ್ಬರ ಮನೆಯಲ್ಲಿ ಮಕ್ಕಳಿಗೆ ಪಾಠಹೇಳುವ ಕೆಲಸಕ್ಕೆ ನಿಂತ ಅವನು ಗುಬ್ಬಿ ಕಂಪನಿಯ 'ಕೃಷ್ಣಲೀಲಾ' ನಾಟಕ ನೋಡಲು ಮಂಗಳೂರಿಗೆ ಹೋದದ್ದು ಆಗಲೇ. ನಾಟಕ ನೋಡುವ ಹುಚ್ಚಿನ ಜೊತೆಗೆ ಪುಸ್ತಕ ಓದುವ

ಗೀಳು. ಆದರೆ ಕೈಯಲ್ಲಿ ಕಾಸಿಲ್ಲ. ಪುಸ್ತಕಕೊಳ್ಳಲು ತಾನಿದ್ದ ಮನೆಯಲ್ಲಿ ಕೊಂಚ ದುಡ್ಡು ತೆಗೆದ. ಅದು ಪತ್ತೆಯಾಯಿತು. ನಾಚಿಕೆಯಿಂದಾಗಿ ಊರು ಬಿಟ್ಟು, ಘಟ್ಟ ಹತ್ತಿ ಮೈಸೂರಿಗೆ ಬಂದು ಗುಬ್ಬಿ ಕಂಪನಿ ಸೇರಿದ. ಅವನು ಮತ್ತೆ ತನ್ನೂರಿಗೆ ಹೋಗಿ ತಂದೆತಾಯಿಗಳನ್ನು ಕಂಡದ್ದು ಇಪ್ಪತ್ತೈದು ವರ್ಷಗಳಷ್ಟು ನಂತರವೇ.

ಗುಬ್ಬಿ ಕಂಪನಿಯಲ್ಲಿ ಕಾರಂತನೇ ಹೆಚ್ಚು ವಿದ್ಯಾವಂತ. ಡಾ॥ ರಾಜ್‌ಕುಮಾರ್, ಜಿ. ವಿ. ಅಯ್ಯರ್, ಬಾಲಕೃಷ್ಣ ಇವರೆಲ್ಲ ಅಲ್ಲಿಯೇ ಇದ್ದರು. "ಹಾರ್ಮೋನಿಯಂ ಮೇಷ್ಟ್ರು ಮುನಿಕೃಷ್ಣಪ್ಪ ಹೇಳಿಕೊಡುತ್ತಿದ್ದ ಸಂಗೀತ ಪಾಠವನ್ನು ಕಾರಂತ ಒಂದೇ ಸಲಕ್ಕೆ ಕಲಿತುಬಿಡುತ್ತಿದ್ದರು. ಆದರೆ ಹಲವರಿಗೆ ಬೇಗ ಕಲಿಯಾಗುತ್ತಿರಲಿಲ್ಲ. ಪಾಠ ಮುಗಿದ ನಂತರ ಕಾರಂತರು ನಮ್ಮನ್ನೆಲ್ಲ ಕೂರಿಸಿಕೊಂಡು ಹಾರ್ಮೋನಿಯಂ ಪಾಠ ಹೇಳಿಕೊಡುತ್ತಿದ್ದರು. ಅಲ್ಲದೆ ನಮಗೆಲ್ಲ ಹಿಂದಿಭಾಷೆಯನ್ನು ಹೇಳಿಕೊಡುತ್ತಿದ್ದರು. ಹೀಗಾಗಿ ಕಾರಂತರು ನನಗೂ ಗುರುಗಳು" ಎಂದು ಡಾ॥ ರಾಜ್‌ಕುಮಾರ್ ಅವರೇ ಹೇಳಿದ್ದುಂಟು. ಕಾರಂತರು ಗುಬ್ಬಿ ಕಂಪನಿಯಲ್ಲಿ ಆರು ವರ್ಷ ಇದ್ದರು.

ಗುಬ್ಬಿಕಂಪನಿ ಮುಚ್ಚಿಹೋಯಿತು. ಕಾರಂತರು ಬೆಂಗಳೂರಿನಲ್ಲಿ ಇರುತ್ತ ಖಾಸಗಿಯಾಗಿ ಹಿಂದಿ ಬಿ.ಎ. ಮಾಡಿದರು. ಎಂ.ಎ. ಮಾಡಲು ಬನಾರಸ್ಸಿಗೆ ಹೋದರು. ಅಲ್ಲಿ ಎಂ.ಎ.ಜೊತೆಗೆ ಪ್ರಸಿದ್ಧ ಸಂಗೀತಗಾರ ಓಂಕಾರನಾಥ ಠಾಕೂರರ ಸನ್ನಿಧಿಯಲ್ಲಿ ನಾಲ್ಕು ವರ್ಷ ಸಂಗೀತಾಭ್ಯಾಸ ಮಾಡಿದರು. ಮೂವತ್ತನೆಯ ವಯಸ್ಸಿನಲ್ಲಿ ಪ್ರೇಮಾ ಅವರ ಕೈಹಿಡಿದರು. ಸ್ವಲ್ಪ ಕಾಲ ಕಲ್ಕತ್ತಕ್ಕೆ ಹೋಗಿದ್ದಾಗ ರಂಗಭೂಮಿಯ ಅನೇಕ ಪ್ರಸಿದ್ಧರ ಪರಿಚಯವಾಯಿತು.

ದೆಹಲಿಯ ಸುಪ್ರಸಿದ್ಧ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡ್ರಾಮಾದಲ್ಲಿ ಕಾರಂತ ಮೂರು ವರ್ಷ ತರಬೇತಿ ಪಡೆದರು. ಅತ್ಯುತ್ತಮ ವಿದ್ಯಾರ್ಥಿಯೆನಿಸಿ 'ಭರತಪ್ರಶಸ್ತಿ' ಗಳಿಸಿದರು. ಅಲ್ಲಿ ನಿರ್ದೇಶಕರಾಗಿದ್ದ ನೇಮಿಚಂದ್ರಜೈನ್, ಅಲ್ಕಾಜಿಯವರ ಆಪ್ತಸಂಪರ್ಕದಿಂದ ಕಾರಂತ ತುಂಬ ಲಾಭ ಪಡೆದರು.

ತರಬೇತಿ ಮುಗಿದ ಮೇಲೆ ಕಾರಂತರು ಆರುವರ್ಷಕಾಲ ದೆಹಲಿಯ ಪಟೇಲ್ ವಿದ್ಯಾಲಯದಲ್ಲಿ ನಾಟಕದ ಶಿಕ್ಷಕರಾಗಿ ಕೆಲಸ ಮಾಡಿದರು. 'ಕನ್ನಡ ಭಾರತಿ' ಸಂಸ್ಥೆಯನ್ನು ಆರಂಭಿಸಿದವರಲ್ಲಿ ಅವರು ಒಬ್ಬರು. ದೆಹಲಿಯಲ್ಲಿದ್ದಾಗ ಅವರು ತುಘಲಖ್, ಹಯವದನ, ರಂಗಭಾರತ ಮೊದಲಾದ ನಾಟಕಗಳನ್ನು

ಕನ್ನಡದಿಂದ ಹಿಂದಿಗೆ ಅನುವಾದಿಸಿದ್ದರು. 'ಪಂಜರ ಶಾಲೆ' ನಾಟಕ ನಿರ್ದೇಶಿದಾಗ ಅದೊಂದೇ ನಾಟಕದಲ್ಲಿ ಮುನ್ನೂರು ಮಕ್ಕಳನ್ನು ರಂಗಭೂಮಿಯ ಮೇಲೆ ತಂದ ಸಾಧನೆ ಮಾಡಿದರು. ಶ್ರೀರಂಗ, ಗಿರೀಶ್ ಕಾರ್ನಾಡರ ಕೃತಿಗಳು ಕನ್ನಡಿಗರಿಗಿಂತ ಮೊದಲು ದಿಲ್ಲಿಯ ನಾಗರಿಕರಿಗೆ ಪರಿಚಯವಾದುವು. ಕನ್ನಡ ರಂಗಭೂಮಿಯ ಪ್ರಬುದ್ಧ ರೂಪ ದಿಲ್ಲಿಯಲ್ಲಿ ಪ್ರಕಟವಾದದ್ದು ಒಳ್ಳೆಯದೇ ಆಯಿತು. ಕನ್ನಡೇತರರಿಗೆ ಕನ್ನಡದ ಸೃಷ್ಟಿಶಕ್ತಿಯ ಮೇಲೆ ಗೌರವ ಉತ್ಪನ್ನವಾಯಿತು ಎಂದು ಕಾರಂತರೇ ಹೇಳಿದ್ದಾರೆ.

ಕಾರಂತರು ಕರ್ನಾಟಕಕ್ಕೆ ಮರಳಿದ್ದು ವಂಶವೃಕ್ಷ ಚಿತ್ರವನ್ನು ನಿರ್ದೇಶಿಸುವ ಸಲುವಾಗಿ. ಅವರೇ ನಿರ್ದೇಶಕರಾಗಬೇಕೆಂದು ಕೃತಿಕಾರ ಭೈರಪ್ಪ ಪಟ್ಟು ಹಿಡಿದಿದ್ದರಿಂದ ಕಾರಂತರು ಬೆಂಗಳೂರಿಗೆ ಬರುವಂತಾಯಿತು. ಇಲ್ಲಿ ಅವರು 'ಏವಂ ಇಂದ್ರಜಿತ್' ನಾಟಕವನ್ನು ರಂಗಭೂಮಿಯ ಮೇಲೆ ತಂದಾಗ ಭಾರತೀಯ ನಾಟಕದ ಹೊಸರೂಪ ನೋಡಿ ನಾವೆಲ್ಲ ಚಕಿತರಾದೆವು. ಮೂರುದಿನ ಸಾಲಾಗಿ ಜೋಕುಮಾರ ಸ್ವಾಮಿ, ಸಂಕ್ರಾಂತಿ, ಈಡಿಪಸ್ ನಾಟಕವನ್ನು ಅವರು ಅದ್ಭುತವೆನಿಸುವಂತೆ ನಿರ್ದೇಶಿಸಿದ್ದು ಕನ್ನಡ ರಂಗಭೂಮಿಯ ಚರಿತ್ರೆಯಲ್ಲಿ ವಿಶೇಷವಾಗಿ ದಾಖಲಾಗುವಂಥದು. ಬೆಂಗಳೂರಿನಲ್ಲಿ ಮಾತ್ರವಲ್ಲದೆ ಉಡುಪಿ, ಹೆಗ್ಗೋಡುಗಳಲ್ಲಿಯೂ ಕಾರಂತರ ನಿರ್ದೇಶನ ಜನರನ್ನು ಬೆರಗಾಗಿಸಿದವು.

ಭೂಪಾಲಿನಲ್ಲಿ ಅಹರ್ನಿಶಿ ದುಡಿದು ಭಾರತ ಭವನವನ್ನು ರಾಷ್ಟ್ರದ ಕಲಾಕೇಂದ್ರವಾಗಿಸಿದ ಕಾರಂತರು ಅಲ್ಲಿ ತಮ್ಮ ತಪ್ಪಿಲ್ಲದೆ ಘೋರವಾದ ಕಹಿ ಅನುಭವಿಸುವಂತಾಯಿತು. ವಿಷಕಂಠನಂತೆ ಅದನ್ನೆಲ್ಲ ಜೀರ್ಣಿಸಿಕೊಂಡು ಉಳಿದ ಕಾರಂತ ಮುಂದೆ ಮೈಸೂರಿಗೆ ಮರಳಿ ರಂಗಾಯಣದಲ್ಲಿ ನಿಂತು ಅನೇಕ ಸಾರ್ಥಕ ಕೆಲಸ ಮಾಡಿದರು. ಕನ್ನಡ ನಾಟಕಗಳನ್ನು ಮಾತ್ರವಲ್ಲದೆ ಕಾರಂತರು ಹಿಂದಿ, ಬಂಗಾಳಿ, ಪಂಜಾಬಿ, ಮರಾಠಿ, ಇಂಗ್ಲಿಷ್, ಫ್ರೆಂಚ್, ಗ್ರೀಕ್, ಜಪಾನಿ, ಸಂಸ್ಕೃತ ನಾಟಕಗಳ ಅನುವಾದಗಳನ್ನೂ ಯಶಸ್ವಿಯಾಗಿ ನಿರ್ದೇಶಿಸಿದ್ದಾರೆ. ಪಂಜರಶಾಲೆ, ಹೆಡ್ಡಾಯಣ, ಇಸ್ಪೀಟ್‌ರಾಜ್ಯ ಮೊದಲಾಗಿ ಸುಮಾರು ಹದಿನಾರು ಮಕ್ಕಳ ನಾಟಕಗಳನ್ನು ರಂಗದ ಮೇಲೆ ತಂದಿದ್ದಾರೆ. ಚೋಮನದುಡಿ, ವಂಶವೃಕ್ಷ, ತಬ್ಬಲಿಯು ನೀನಾದೆ ಮಗನೆ ಮೊದಲಾದ ಚಲನಚಿತ್ರಗಳಿಗೆ ನಿರ್ದೇಶನ ನೀಡಿದ್ದಾರೆ. ಸುಮಾರು ಇಪ್ಪತ್ತೈದು ಚಿತ್ರಗಳಿಗೆ ಸಂಗೀತ ಕೊಟ್ಟಿದ್ದಾರೆ. ಹಯವದನ, ಸತ್ತವರ ನೆರಳು,

ಕಿಂಗ್‌ಲಿಯರ್, ಬರ್ನಮ್‌ವನ, ಸ್ಕಂದಗುಪ್ತ ಅವರು ನಿರ್ದೇಶಿಸಿದ ಅತ್ಯುತ್ತಮ ನಾಟಕಗಳು ಎನ್ನಬಹುದು 'ಗೋಕುಲ ನಿರ್ಗಮನ'ವಂತೂ ಒಂದು ಅದ್ಭುತ ಸೃಷ್ಟಿ.

ಬರ್ಲಿನ್, ಹಂಗೇರಿ ಯೂಗೋಸ್ಲಾವಿಯಾ ಮೊದಲಾದ ಪೂರ್ವ ಯೂರೋಪಿನ ದೇಶಗಳಲ್ಲಿ ಓಡಾಡಿ ಬಂದ ಕಾರಂತರು ನ್ಯೂಯಾರ್ಕಿನ ಅತ್ಯಂತ 'ಪ್ರತಿಷ್ಠಿತ' 'ಲಾ ಮಾಮಾ' ರಂಗಮಂದಿರದಲ್ಲಿ ನಡೆದ ಹಿಪೊಲಿಟಸ್ ಎಂಬ ಗ್ರೀಕ್‌ನಾಟಕಕ್ಕೆ ಸಂಗೀತ ನೀಡಿ, ರಂಗಾಯಣದ ನಾಟಕ ತಂಡವನ್ನು ಆ ನಾಟಕಕ್ಕೆ ಒದಗಿಸಿ ಅಲ್ಲಿ ಜನಕ್ಕೆ ಅಪೂರ್ವ ಅನುಭವ ನೀಡಿದ್ದನ್ನು 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ಪ್ರಶಂಸಿಸಿ ಬರೆಯಿತು.

ದಕ್ಷಿಣ ಭಾರತ ಉತ್ತರ ಭಾರತಗಳೆರಡರ ಸಾಹಿತ್ಯ, ನಾಟಕ, ಸಂಗೀತ ಸಂಸ್ಕಾರಗಳನ್ನೂ ಹೀರಿ ಬೆಳೆದ ಬಿ. ವಿ. ಕಾರಂತ ಭಾರತೀಯ ರಂಗಭೂಮಿಯ ಒಂದು ಉತ್ತುಂಗ ಶಿಖರವಾಗಿದ್ದಾರೆ.

ನಮ್ಮ ಕಾಲದ ಒಬ್ಬ ನಿರ್ಭೀತ ಸಂಶೋಧಕ
ಎಂ ಚಿದಾನಂದಮೂರ್ತಿ

ಹತ್ತು ದಿನಗಳ ಕೆಳಗೆ ಕನ್ನಡ ವಿದ್ವತ್‌ಕ್ಷೇತ್ರಕ್ಕೆ ಸಂಬಂಧಿಸಿದ ಮೂರು ಮಹತ್ವದ ಸಂಪುಟಗಳು ಬಿಡುಗಡೆಯಾದವು. 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' 'ಭಾಷಾವಿಜ್ಞಾನ ಮತ್ತು ಛಂದಸ್ಸು' 'ಜನ – ಜನಪದ – ಜಾನಪದ' ಇವು ಆ ಗ್ರಂಥಗಳು. ಇವು ಮೂರು ಈ ಕಾಲದ ಹೆಸರಾದ ಕನ್ನಡ ವಿದ್ವಾಂಸರೊಬ್ಬರ ಒಟ್ಟು ಬರೆಹದ ಒಂದು ಭಾಗ ಮಾತ್ರ! ಅವರ ಇಂಥ ಇನ್ನೂ ಎರಡು ಸಂಪುಟಗಳು ಬಿಡುಗಡೆಯಾಗಲಿವೆ. ಬರೆಹದ ಎತ್ತರಕ್ಕೆ ತಕ್ಕಂತೆ ಸೊಗಸಾಗಿ ಪ್ರಕಟವಾಗಿರುವ ಈ ಸಂಪುಟಗಳನ್ನು ನೋಡಿದಾಗ ಪತ್ತಲ ಉಟ್ಟ ಯುವಚೆಲುವೆಯನ್ನು ಕಂಡಂತೆ ಮನಸ್ಸು ಪ್ರಸನ್ನವಾಯಿತು. ಹತ್ತಿರ ಹತ್ತಿರ ಎರಡು ಸಾವಿರ ಪುಟಗಳಿರುವ ಈ ಸಂಪುಟಗಳ ಲೇಖಕ ಡಾ. ಎಂ. ಚಿದಾನಂದ ಮೂರ್ತಿ, ಅವುಗಳನ್ನು ಪ್ರಕಟಿಸಿರುವ ಸಂಸ್ಥೆ ಬೆಂಗಳೂರಿನ ಸಪ್ನ ಬುಕ್‌ಹೌಸ್.

ಸುಮಾರು ಮೂವತ್ತೆಂಟು ವರ್ಷಗಳಷ್ಟು ಹಿಂದಿನ ಮಾತು. ಪ್ರೊ. ತೀ. ನಂ. ಶ್ರೀಕಂಠಯ್ಯನವರು ಕನ್ನಡ ನಿಘಂಟು ಸಮಿತಿಯ ಮೀಟಿಂಗಿಗಾಗಿ ಬೆಂಗಳೂರಿಗೆ ಬಂದಿದ್ದರು. ಸಂಜೆ ಸಾಹಿತ್ಯ ಪರಿಷತ್ತಿನ ಎದುರಿನ ಕಾಂಪೌಂಡಿನಲ್ಲಿ ಹುಲ್ಲು ಹಾಸಿನ ಮೇಲೆ ಕುಳಿತು ನಾವು ಏಳೆಂಟು ಜನ ಶಿಷ್ಯರು ಗುರುಗಳ ಜೊತೆ ಹರಟೆ ಕೊಚ್ಚುತ್ತಿದ್ದೆವು. "ಕನ್ನಡದಲ್ಲಿ ಸೃಜನಾತ್ಮಕ ಬರೆಹ ಬೇಕಾದಷ್ಟು ಬರುತ್ತಿದೆ. ಆದರೆ ಶಾಸ್ತ್ರವಿಷಯ ಬಹಳ ಹಿಂದೆಬಿದ್ದಿದೆ. ಭಾಷಾಶಾಸ್ತ್ರ, ವ್ಯಾಕರಣ, ಛಂದಸ್ಸು, ಗ್ರಂಥಸಂಪಾದನೆ, ಶಾಸನಶಾಸ್ತ್ರ – ಈ ಕ್ಷೇತ್ರಗಳಲ್ಲಿ ದುಡಿಯುವವರೇ ಇಲ್ಲ" ಎಂದು ಗುರುಗಳು ಖಿನ್ನರಾಗಿ ಹೇಳುತ್ತಿದ್ದರು. ಮಾತು ಅಕಸ್ಮಾತ್ ಚಿದಾನಂದ ಮೂರ್ತಿಯವರ ಕಡೆ ತಿರುಗಿತು. ತೀನಂಶ್ರೀ ಥಟ್ಟನೆ ಪ್ರಫುಲ್ಲವದನರಾಗಿ ಹೇಳಿದರು. "ಈ ಮೂರ್ತಿ" ಮಾತ್ರ ನನಗೊಂದು ದೊಡ್ಡ ಭರವಸೆ. ಶಾಸ್ತ್ರವಿಷಯದಲ್ಲಿ

ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಕಷ್ಟಪಟ್ಟು ದುಡಿಯುವ ವ್ಯಕ್ತಿ. ಆತನದು ಸುಖೋಷ್ಣವಾದ ಮನಸ್ಸು. ಯಾವ ಪೂರ್ವಾಗ್ರಹವೂ ಇಲ್ಲದೆ ಕೆಲಸ ಮಾಡಬಲ್ಲ ಪ್ರಾಮಾಣಿಕ ಜೀವ. ಸಂಶೋಧನೆಯ ಕಾರ್ಯಕ್ಕೆ ಹೇಳಿ ಮಾಡಿಸಿದ ವ್ಯಕ್ತಿ" ಎಂದರು. ನಮಗೆಲ್ಲ ಆಶ್ಚರ್ಯ. ಚಿದಾನಂದ ಮೂರ್ತಿ ಆಗಿನ್ನೂ ಸುಮಾರು ಮೂವತ್ತು ದಾಟಿದ ಯುವಕ. ತೀನಂಶ್ರೀಯಂಥ ನಾಡಿನ ಮಹಾವಿದ್ವಾಂಸರು ಅವರನ್ನು ಹೀಗೆ ಪ್ರಶಂಸೆ ಮಾಡುವುದೆಂದರೆ! ಮೂರ್ತಿ ಆ ಗಳಿಗೆಯಲ್ಲೇ ನಮ್ಮ ಮನಸ್ಸಿನಲ್ಲಿ ಭದ್ರವಾದ ಜಾಗ ಗಿಟ್ಟಿಸಿಕೊಂಡುಬಿಟ್ಟರು.

ಮೂರ್ತಿಯವರು ಹುಟ್ಟಿದ್ದು ೧೯೩೧ರಲ್ಲಿ, ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲೂಕಿನ (ಹಿರೇ)ಕೋಗಲೂರಿನಲ್ಲಿ. ಇಂಟರ್ ಮೀಡಿಯೆಟ್ ಪರೀಕ್ಷೆಯಲ್ಲಿ ಹತ್ತನೆಯ ರ್‍ಯಾಂಕ್ ಪಡೆದ ಮೂರ್ತಿ ಇಂಜಿನಿಯರಿಂಗ್, ಮೆಡಿಕಲ್ ವಿದ್ಯೆಗಳ ಕಡೆ ತಿರುಗಿಯೂ ನೋಡದೆ ಮೈಸೂರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಆನರ್ಸ್ ಸೇರಿದರು. ಆನರ್ಸ್, ಎಂ.ಎ. ಪರೀಕ್ಷೆಗಳನ್ನೂ ಪ್ರಥಮ ರ್‍ಯಾಂಕಿನಲ್ಲಿ ಪಾಸು ಮಾಡಿ, ಅಧ್ಯಾಪಕ ವೃತ್ತಿಯಲ್ಲಿ ನಿಂತರು. ಮುಂದೆ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಬಂದು ಪ್ರಾಧ್ಯಾಪಕರಾಗಿ ದುಡಿದು ನಿವೃತ್ತರಾದರು.

ಮೂರ್ತಿಯವರ ಮೊದಲ ಸಂಶೋಧನೆ ತುಂಬ ಕುತೂಹಲ, ನಗು ಉಕ್ಕಿಸುವಂಥದು. ಅವರಿನ್ನೂ ಆಗ ಆನರ್ಸ್ ವಿದ್ಯಾರ್ಥಿ. ಕನ್ನಡದಲ್ಲಿ 'ಒಂದಕ್ಕೆ' 'ಎರಡಕ್ಕೆ' ಎಂಬ ಪದಗಳನ್ನು ಕೇಳದವರು ಯಾರು? ಆ ಪದಗಳ ಮೂಲಾರ್ಥ ಏನೆಂದು ಒಂದು ದಿನ ಅವರಿಗೆ ಹಠಾತ್ತನೆ ಹೊಳೆಯಿತು. ಒಂದಕ್ಕೆ ಹೋದವನು ಮೂತ್ರವೊಂದನ್ನೇ ಹೊರಹಾಕುತ್ತಾನೆ. ಎರಡಕ್ಕೆ ಹೋದವನು ಮೂತ್ರ, ಮಲ ಎರಡನ್ನೂ ಆಚೆ ಹಾಕುತ್ತಾನೆ. ಆದ್ದರಿಂದಲೇ ಅವು ಒಂದು, ಎರಡು! ಮೂರ್ತಿಯವರಿಗೆ ಪರಮಾನಂದವಾಗಿ ಹೋಯಿತು. ವರ್ಷಗಟ್ಟಲೆ ಅರ್ಥ ತಿಳಿಯದೆ ಕೈಬೆರಳಲ್ಲಿ ಬಳಸಿದ್ದ ಸಂಕೇತಗಳ ಧ್ವನಿ ಒಮ್ಮೆಲೆ ಹೊಳೆದಾಗ ಸಂಶೋಧನೆಯಿಂದ ದೊರೆಯುವ ಆನಂದ ಎಂಥದೆಂದು ಅವರಿಗೆ ಮೊದಲ ಬಾರಿಗೆ ಅನುಭವಕ್ಕೆ ಬಂದಿರಬೇಕು!

ಎಂ. ಎ. ತರಗತಿಯಲ್ಲಿದ್ದಾಗ ಪಂಪಕವಿಗೆ ಹಿನ್ನೆಲೆಯಾಗಿದ್ದ ಸಾಮಾಜಿಕ ಜೀವನವನ್ನು ಅರಿಯಲು ಮೂರ್ತಿ ಪಂಪನ ಕಾಲದ ಶಾಸನಗಳನ್ನು ಅಧ್ಯಯನ ಮಾಡಿದರು. ಈ ಕೆಲಸಕ್ಕೆ ಸೂಚನೆ ಬಂದದ್ದು ಗುರುಗಳಾಗಿದ್ದ ಡಿ. ಎಲ್. ನರಸಿಂಹಾಚಾರ್ಯರಿಂದ. ಈ ಅಭ್ಯಾಸದ ಫಲವಾಗಿ 'ಪಂಪಕವಿ ಮತ್ತು ಮೌಲ್ಯ ಪ್ರಸಾರ' ಎಂಬ ಲೇಖನ ಸಿದ್ಧವಾಯಿತು. ಸೆಮಿನಾರ್ ತರಗತಿಯಲ್ಲಿ ಓದಿದಾಗ

ಅದು ಗುರುಗಳು, ಸಹಪಾಠಿಗಳೆಲ್ಲರ ಮೆಚ್ಚುಗೆ ಗಳಿಸಿತು; ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವೂ ಆಯಿತು. ಇದು ಮೂರ್ತಿಯವರ ಮೊದಲ ಬರೆಹ. ಕವಿ ಅಥವಾ ವಿಮರ್ಶಕನಾಗಬೇಕು. ಎಂದುಕೊಂಡಿದ್ದ ಮೂರ್ತಿ ಸಂಶೋಧನ ಕ್ಷೇತ್ರಕ್ಕೆ ಬರಲು ಈ ಲೇಖನ ಕಾರಣವಾಯಿತು.

ಮುಂದೆ ಪಿ.ಎಚ್.ಡಿ. ಮಹಾಪ್ರಬಂಧಕ್ಕೆ ಶಾಸನಗಳ ಅಧ್ಯಯನವನ್ನೇ ವಿಷಯವಾಗಿ ಆರಿಸಿಕೊಳ್ಳುವಂತೆ ಮಾರ್ಗದರ್ಶಕರಾಗಿದ್ದ ತೀನಂಶ್ರೀ ಸೂಚಿಸಿದರು. ಈ ಸೂಚನೆ ಮೂರ್ತಿಯವರ ಭಾಗ್ಯದ ಬಾಗಿಲನ್ನೇ ತೆರೆಯಿತು. 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಮಹಾಗ್ರಂಥ ರೂಪುಗೊಂಡದ್ದು ಹೀಗೆ. ಸಂಶೋಧನೆಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅದೊಂದು ಗ್ರಂಥರತ್ನ; ನಾಡಿನ ನೂರಾರು ಚಾರಿತ್ರಿಕ, ಸಾಮಾಜಿಕ, ಸಾಂಸ್ಕೃತಿಕ ಸಂಗತಿಗಳನ್ನು ಕಣ್ಣೆದುರು ಬಿಡಿಸಿ ನಮ್ಮನ್ನು ರೋಮಾಂಚಿತರನ್ನಾಗಿ ಮಾಡುವಂಥದು. ಈ ಗ್ರಂಥ ಪ್ರಾಚೀನ ಶಾಸನಗಳಲ್ಲಿ ದೊರೆಯುವ ಮಾಹಿತಿಗಳನ್ನೆಲ್ಲ ಕೇವಲ ಗುಡ್ಡೆಹಾಕಿಕೊಟ್ಟ ನೀರಸಕೋಶವಲ್ಲ 'ಅವುಗಳ ನಿಜವಾದ ಸ್ವರೂಪ, ಅರ್ಥ, ಮಹತ್ವ ಹೊರಪಡುವಂತೆ ಅರ್ಥಶೋಧಕ ವಿನ್ಯಾಸದಲ್ಲಿ ಮಂಡಿಸಿ ವ್ಯಾಖ್ಯಾನಿಸಿದ ಅಮೂಲ್ಯ ಬರೆಹ. ಭೂಗರ್ಭದಲ್ಲಿ ಪತ್ತೆಯಾದ ಪ್ರಾಚೀನ ರಾಜಗೃಹವೊಂದರಲ್ಲಿ ಓಡಾಡಿದಾಗ ಮನಸ್ಸು ಬೆರಗು ಸಂತೋಷಗಳಲ್ಲಿ ಮುಳುಗುವಂತೆ ಈ ಗ್ರಂಥವನ್ನು ಹಾದು ಹೋದಾಗ ಕಳೆದುಕೊಂಡ ನಿಧಿಯೊಂದನ್ನು ಮರಳಿಪಡೆದ ವಿಸ್ಮಯಕರ ಅನುಭವವಾಗುತ್ತದೆ. ಇದರ ನಿರೂಪಣೆ ಕೂಡ ಶುಷ್ಕವಾಗಿರದೆ ತುಂಬ ವಾಚನೀಯವಾಗಿದೆ. ಕುವೆಂಪು 'ಇದನ್ನು ಒಂದು ಕಾದಂಬರಿಯಂತೆ ಎಡೆಬಿಡದೆ ಓದುತ್ತಿದ್ದೇನೆ' ಎಂದರೆ ಡಿ. ಎಲ್. ನರಸಿಂಹಾಚಾರ್ಯರಂಥ ಉದ್ದಾಮ ವಿದ್ವಾಂಸರು ಮೂರ್ತಿಯನ್ನು ತಬ್ಬಿಕೊಂಡು 'ನಿಜವಾದ ಡಾಕ್ಟರೇಟ್ ಥೀಸಿಸ್ ಎಂದರೆ ಇದು ಕಣಯ್ಯ!' ಎಂದು ಆನಂದ ಪಟ್ಟದ್ದುಂಟು. ಈ ಸಂಶೋಧನ ಬರೆಹಕ್ಕೆ ಮಾರ್ಗದರ್ಶನ ಮಾಡಿದ ತೀನಂಶ್ರೀಯವರಂತೂ 'ಇದಕ್ಕೆ ಡಾಕ್ಟರೇಟ್ ದೊರೆತು ನನಗೆ ಪುತ್ರೋತ್ಸವವಾದಷ್ಟು ಸಂತೋಷವಾಗಿದೆ' ಎಂದು ಅನೇಕರ ಮುಂದೆ ಹೇಳಿಕೊಂಡು ಹಿಗ್ಗಿದ್ದುಂಟು. ತೀನಂಶ್ರೀಯವರ 'ಭಾರತೀಯ ಕಾವ್ಯಮೀಮಾಂಸೆ' ಕಾವ್ಯಚರ್ಚೆಯ ಕ್ಷೇತ್ರದಲ್ಲಿ ಒಂದು 'ಆಚಾರ್ಯಕೃತಿ' ಎನಿಸಿಕೊಂಡಂತೆ ಅವರ ಶಿಷ್ಯನ ಈ ಕೃತಿ ಸಂಶೋಧನ ಕ್ಷೇತ್ರದ ಒಂದು ಆಚಾರ್ಯಕೃತಿಯಾಗಿ ಪರಿಣಮಿಸಿದೆ. ಇದನ್ನು ರಚಿಸಿ ಮೂರ್ತಿಯವರು ವಿದ್ವತ್‌ಕ್ಷೇತ್ರದಲ್ಲಿ ತೀನಂಶ್ರೀಯವರ ಉತ್ತರಾಧಿಕಾರಿ ಎನಿಸಿಕೊಂಡರು.

'ಶೂನ್ಯಸಂಪಾದನೆಯನ್ನು ಕುರಿತು' ಎಂಬ ಕೃತಿ ಮೂರ್ತಿಯವರ ಮೊದಲ ಪುಸ್ತಕ. ಅಲ್ಲಮನ ಜನನ, ಸಿದ್ಧರಾಮನ ಲಿಂಗದೀಕ್ಷೆಗಳು ಶೂನ್ಯಸಂಪಾದನೆಯ ಪರಿಷ್ಕರಣಗಳಿಗೆ ಕಾರಣವೇ ಎಂಬ ಪ್ರಶ್ನೆ, ಚರ್ಚೆ ಇದರಲ್ಲಿದೆ. ಮೂರ್ತಿ ಈ ಪುಸ್ತಕದಲ್ಲಿ ತೋರಿರುವ ಸತ್ಯನಿಷ್ಠೆ ಅಸಾಧಾರಣವಾದದ್ದು. ಅವರು ಈ ವಿಷಯಕ್ಕೆ ಸಂಬಂಧಿಸಿದಂತೆ ಆವರೆಗೆ ಬಂದಿದ್ದ ಗ್ರಂಥಗಳನ್ನೇ ಅಲ್ಲದೆ ಅನೇಕ ಕೈ ಬರೆಹದ ಪ್ರತಿಗಳನ್ನೂ ಕನ್ನಡ ಶಾಸನಗಳನ್ನೂ ಪರಿಶೀಲಿಸಿದ್ದಾರೆ. 'ಸಾಮಗ್ರಿಗಳು ಬೆರಳು ತೋರಿದ ಕಡೆ ದೃಢ ಮನಸ್ಸಿನಿಂದ ಸಾಗಿದ್ದಾರೆ;' ಆದರೂ ಅವರು ತಲುಪಿದ ನಿರ್ಣಯಗಳಿಂದಾಗಿ ಮತನಿಷ್ಠ ವೀರಶೈವರು ಕೆರಳಿದರು. ಮೂರ್ತಿಯವರನ್ನು ವಿರೋಧಿಸಿ, ನಿಂದಿಸಿ ದೊಡ್ಡ ಕೂಗೆದ್ದಿತು. ಆ ಪುಸ್ತಕವನ್ನು ಬಡಿದುಹಾಕಲೆಂದೇ 'ಶೂನ್ಯ ತತ್ವವಿಕಾಸ ಮತ್ತು ಶೂನ್ಯ ಸಂಪಾದನೆ' ಎಂಬ ಒಂದು ಪುಸ್ತಕವೂ ಅವತರಿಸಿತು. ಅದರ ಕರ್ತೃವಿಗೆ ಮಠದಲ್ಲಿ ಶಾಲು ಸನ್ಮಾನಗಳೆಲ್ಲ ನಡೆದುವು. ಆದರೆ ಸತ್ಯಶೋಧನೆಯೇ ಸಂಶೋಧನೆಯ ಗುರಿ, ಸತ್ಯವೇ ಸಂಶೋಧಕನಿಗೆ ಧರ್ಮ, ದೇವರು ಎಲ್ಲ ಎಂದು ನಂಬಿದ್ದ ಮೂರ್ತಿ ಜಗ್ಗಲೇ ಇಲ್ಲ. ಇದರಿಂದ ಅವರೊಬ್ಬ ನಿರ್ಭೀತ ಸಂಶೋಧಕ, ಸತ್ಯಪ್ರೇಮಿ ಎಂಬ ಭಾವನೆ ಎಲ್ಲ ಕಡೆ ಹರಡಿತು. ವೀರಶೈವರು ಹಿಂದುಗಳಲ್ಲ ಎಂದು ಸ್ಥಾಪಿಸಲು ಈಚೆಗೆ ನಡೆದ ಒಂದು 'ರಾಜಕೀಯ' ಚಳುವಳಿಯ ವಿರೋಧವಾಗಿ ಮೂರ್ತಿಯವರು ತೆಗೆದುಕೊಂಡ ಪ್ರಾಮಾಣಿಕ ನಿಲುವಿನ ಮೂಲ ಬಹಳ ಹಿಂದಿನ ಈ ಪುಸ್ತಕದಲ್ಲಿಯೇ ಕಾಣುತ್ತದೆ.

ಚಿದಾನಂದಮೂರ್ತಿ ಷಿಕಾಗೋ ವಿಶ್ವವಿದ್ಯಾನಿಲಯಕ್ಕೆ ಒಂದು ವರ್ಷದ ಅವಧಿಗೆ ಕನ್ನಡ ಅಧ್ಯಾಪಕರಾಗಿ ಹೋಗಿದ್ದರು. ಅಲ್ಲಿ ಭಾಷಾಶಾಸ್ತ್ರ, ಜಾನಪದಕ್ಷೇತ್ರ ಕುರಿತು ಹೆಚ್ಚಿನ ಆಸಕ್ತಿ ಅರಿವು ಬೆಳೆಸಿಕೊಂಡರು. ಬರ್ಕ್ಲಿ, ಸ್ಟ್ಯಾನ್‌ಫರ್ಡ್, ಫಿಲಡೆಲ್ಫಿಯಾಗಳಲ್ಲಿ ನಡೆದ ವಿಚಾರ ಸಂಕಿರಣಗಳಲ್ಲಿ ಮೌಲಿಕ ಪ್ರಬಂಧಗಳನ್ನು ಮಂಡಿಸಿದರು. ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಗ್ರೀಸ್, ಈಜಿಪ್ಟ್, ಜಪಾನ್, ಥಾಯ್ಲೆಂಡ್, ಸ್ವಿಟ್ಜರ್ಲೆಂಡ್ ದೇಶಗಳಿಗೂ ಹೋಗಿ ತಮ್ಮ ದೃಷ್ಟಿವಲಯವನ್ನು ವಿಸ್ತರಿಸಿಕೊಂಡರು.

ಮೂರ್ತಿಯವರ ಸಂಶೋಧನ ಬರೆಹಗಳು ಅನೇಕ ಅಧ್ಯಯನ ಕ್ಷೇತ್ರಗಳನ್ನು ಬಳಸಿಕೊಂಡಿವೆ. ಭಾಷೆ, ವ್ಯಾಕರಣ, ಛಂದಸ್ಸು, ಸ್ಥಳನಾಮ, ಗ್ರಂಥ ಸಂಪಾದನೆ, ಶಾಸನ, ಜಾನಪದ, ಸಾಹಿತ್ಯ ಚರಿತ್ರೆ, ಕರ್ನಾಟಕ ಸಂಸ್ಕೃತಿ ಹೀಗೆ ಅವರು ಹೊಕ್ಕು ದುಡಿಯದ ಜ್ಞಾನವಲಯವಿಲ್ಲ. ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಶೂನ್ಯ ಸಂಪಾದನೆ ಕುರಿತು, ಭಾಷಾವಿಜ್ಞಾನದ ಮೂಲತತ್ವಗಳು, ಸಂಶೋಧನ ತರಂಗ

೧-೨, ಗ್ರಾಮೀಣ, ವಾಗರ್ಥ, ಪಗರಣ, ಲಿಂಗಾಯತ ಅಧ್ಯಯನಗಳು, ವಚನಶೋಧ ೧-೨, ವಚನ ಸಾಹಿತ್ಯ, 'ಹೊಸತು ಹೊಸತು' ಮೊದಲಾಗಿ ಸುಮಾರು ಮೂವತ್ತು ಕೃತಿಗಳನ್ನೂ, ಕನ್ನಡ, ಇಂಗ್ಲಿಷ್‌ಗಳಲ್ಲಿ ಒಟ್ಟು ನಾನೂರಕ್ಕೂ ಹೆಚ್ಚು ಸಂಶೋಧನ ಲೇಖನಗಳನ್ನೂ ಅವರು ಪ್ರಕಟಿಸಿದ್ದಾರೆ. 'ಪೂರ್ಣಸೂರ್ಯಗ್ರಹಣ'ವೆಂಬ ಕೃತಿಯಂತೂ ಒಂದು ವಿಶಿಷ್ಟ ಸಮಾಜೋ ಸಾಂಸ್ಕೃತಿಕ ಅಧ್ಯಯನ.

ಬನಾಶಂಕರಿ ಪೆಟ್ಟಿಗೆ, ಕ್ಯಾಲೆಂಡರ್ ಪ್ರಕರಣ 'ನ್ಯೆಯೇರಿಸು' ಶಬ್ದ ಕುರಿತು ಬರೆದ ಲೇಖನ – ಇವು ಮೂರ್ತಿಯವರು ಎಷ್ಟು ರಸಾತ್ಮಕವಾಗಿ ಬರೆಯಬಲ್ಲರು ಎನ್ನುವುದಕ್ಕೆ ನಿದರ್ಶನಗಳು. ವಿದ್ವಾಂಸರು ರಸಾರ್ದ್ರ ಬರೆಹಕ್ಕೆ ದೂರ ಎಂಬ ಮಾತು ಅವರಿಗೆ ದೂರ. ಬೆಳುದಿಂಗಳಲ್ಲಿ ಅರಳಿದ ಮೊಲ್ಲೆ ಪ್ರಬಂಧ ಸಂಕಲನ ಬರೆದ ತಮಿಳುನಾಡಿನ ಪಂಡಿತಬ್ರಹ್ಮ ಸ್ವಾಮಿನಾಥ ಅಯ್ಯರರಂತೆ, ನೆಂಟರು ಪ್ರಬಂಧ ಸಂಕಲನದ ತೀನಂಶ್ರೀಯವರಂತೆ ಚಿದಾನಂದಮೂರ್ತಿಗಳೂ ಸಾಹಿತ್ಯದ ಹೃದಯಬಲ್ಲ ರಸಜ್ಞರು.

ಗೋಕಾಕ್ ಚಳುವಳಿಯ ಕಾಲದಲ್ಲಿ ಕನ್ನಡ ಭಾಷೆಯ ಪರ ಹೋರಾಟಕ್ಕೆ ತೊಡಗಿ, ಅದಕ್ಕಾಗಿ ಅಹರ್ನಿಶಿ ದುಡಿದ ಮೂರ್ತಿ ಕನ್ನಡ ಶಕ್ತಿಕೇಂದ್ರ ಸ್ಥಾಪಿಸಿ ಸಾವಿರಾರು ಯುವಕರ ಎದೆಯಲ್ಲಿ ಭಾಷಾಭಿಮಾನದ ಬೆಳಕು ಹಚ್ಚಿದ್ದಾರೆ. ಕನ್ನಡ ಚಳುವಳಿಗೆ ಹೊಸಶಕ್ತಿ, ನೈತಿಕತೆ ತಂದುಕೊಟ್ಟಿದ್ದಾರೆ. ಅವರು ಕನ್ನಡ ಚಳುವಳಿಗೆಂದು ಬೀದಿಗೆ ಬಂದಾಗ ಇದೇನು ಎಂದು ಹುಬ್ಬೇರಿಸಿದವರುಂಟು. ಆದರೆ ಮೂರ್ತಿಯವರಿಗೆ ತಮ್ಮ ನಿಲುವು ಸ್ಪಷ್ಟವಾಗಿದೆ. ಮೊದಲು ಭಾಷೆ, ನಂತರ ಸಾಹಿತ್ಯ, ಸಂಶೋಧನೆ ಎಲ್ಲ. ಭಾಷೆಗೇ ಕುತ್ತು ಬಂದಿರುವ ಹೊತ್ತಿನಲ್ಲಿ ಮೊದಲು ಅದನ್ನು ಕಾಪಾಡಿಕೊಳ್ಳಬೇಕು. ವಿಚಾರವಂತರೆಲ್ಲ ಒಪ್ಪಿಕೊಳ್ಳಲೇ ಬೇಕಾದ ನಿಲುವು ಅದು.

ಅನೇಕ ಪ್ರಶಸ್ತಿಗಳು, ಮನ್ನಣೆಗಳು ಮೂರ್ತಿಯವರಲ್ಲಿಗೆ ತಾವಾಗಿ ಬಂದಿವೆ. ಅವರಿಗೆ ಅರವತ್ತು ತುಂಬಿದಾಗ ವಿದ್ವಾಂಸರು, ಸಾಹಿತಿಗಳು ಮೆಚ್ಚಿ ನೀಡಿದ ಅಭಿನಂದನ ಗ್ರಂಥ 'ಸಂಶೋಧನ' ಅವುಗಳಲ್ಲಿ ಎಲ್ಲಕ್ಕಿಂತ ದೊಡ್ಡದು.

●

ಈ ಕಾಲದ ಶ್ರೇಷ್ಠ ಲಲಿತ ಪ್ರಬಂಧಕಾರ
ಅ.ರಾ.ಮಿತ್ರ

ಎಲ್ಲ ವ್ಯಕ್ತಿಗಳಿಗೂ ಒಂದು ಹೆಸರಿದ್ದೇ ಇರುತ್ತದೆಯಷ್ಟೆ. ಆದರೆ ಆ ಹೆಸರು ನಿಜ ಅರ್ಥದಲ್ಲಿ ಆ ವ್ಯಕ್ತಿಗೆ ಅನ್ವಯವಾಗುವುದು ಮಾತ್ರ ತೀರ ಅಪರೂಪ. ಅಂಥವರಿದ್ದರೆ ಅದು ಎಲ್ಲೋ ಲಕ್ಷಕ್ಕೆ ಒಬ್ಬರು. ಆ ಅಪರೂಪದ ವ್ಯಕ್ತಿಗಳಲ್ಲಿ. ಅ.ರಾ. ಮಿತ್ರ ಎದ್ದು ಕಾಣುವಂಥವರು. 'ಮಿತ್ರ' ಎಂದರೆ ಸೂರ್ಯ ನಿಜ. ಆದರೆ ಆ ಪದಕ್ಕೆ ತಕ್ಷಣ ಎಲ್ಲರಿಗೆ ಹೊಳೆಯುವುದು ಸ್ನೇಹಿತ ಎಂಬ ಅರ್ಥವೇ. ಮಿತ್ರ ಅಂಥವರು; ಪರಿಚಯವಾದ ಎಲ್ಲರಿಗೂ ಆ ಗಳಿಗೆಯಲ್ಲೇ ಸ್ನೇಹಿತರಾಗಿ ಹೋಗುತ್ತಾರೆ. ಯಾರೊಡನೆಯೂ ಸದಾ ನಗುನಗುತ್ತ, ಸ್ನೇಹ ವಿಶ್ವಾಸಗಳಿಂದ ಬೆರೆಯುತ್ತ ತಮ್ಮ ಆಕರ್ಷಕ ಮಾತಿನಿಂದ ಸಲಸಲಕ್ಕೂ ಆತ್ಮೀಯರಾಗುತ್ತ ಹೋಗುವ ಈ ವ್ಯಕ್ತಿ ಒಬ್ಬ ಅಜಾತಶತ್ರು ಎಂದರೂ ತಪ್ಪಿಲ್ಲ.

ತಮ್ಮ ಬರೆಹಗಳಿಂದ, ವಿಶಿಷ್ಟ ಉಪನ್ಯಾಸಗಳಿಂದ, ವಿನೋದಪೂರ್ಣ ಮಾತುಕಥೆಗಳಿಂದ ಇಂದಿನ ಕನ್ನಡ ಲೇಖಕರಲ್ಲಿ ಬಹಳ ಜನಪ್ರಿಯರಾದ ವ್ಯಕ್ತಿ ಮಿತ್ರ. ಅಪೇಕ್ಷಣೀಯವಾದ ವಾಚಾಳತ್ವ ಅವರದು. ಗೆಳೆಯರು ಗುಂಪು ಸೇರಿ ಹರಟೆ ಹೊಡೆಯುವಾಗ ಅಲ್ಲಿ ಅವರದ್ದೇ ಪ್ರಧಾನ ಪಾತ್ರ. ಅವರ ಮಾತು ರಂಜಕವಷ್ಟೇ ಅಲ್ಲ; ನಮಗೆ ತಿಳಿಯದ ಹೊಸ ಹೊಸ ವಿಷಯಗಳನ್ನು, ಸಾಹಿತ್ಯಕ ಸಂಗತಿಗಳನ್ನು, ಅವುಗಳನ್ನು ಕುರಿತ ಅವರದೇ ಆದ ವಿಶಿಷ್ಟ ವ್ಯಾಖ್ಯಾನದಿಂದ ಕೂಡಿ ರಸಭರಿತವಾದದ್ದು. ಅಂಥ ಶಕ್ತಿಯಿಲ್ಲದೆ ಅವರು ಅಷ್ಟು ಪ್ರಸಿದ್ಧರಾದ ಭಾಷಣಕಾರರಾಗುವುದು ಸಾಧ್ಯವಿರಲಿಲ್ಲ. ಕಳೆದ ವರ್ಷ ಅಮೆರಿಕದ ವಾಷಿಂಗ್‌ಟನ್ ಡಿಸಿಯಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದಲ್ಲಿ ಅವರ ಭಾಷಣ ಕೇಳಲು ಜನ ಕಿಕ್ಕಿರಿದು ಸೇರಿದ್ದರು. ನಾನೂ ಅಲ್ಲಿದ್ದೆ. ಅವರ ಇಡೀ ಉಪನ್ಯಾಸವನ್ನು ಜನ

ಮೈಯೆಲ್ಲ ಕಿವಿಯಾಗಿ ಕೇಳಿದರು. ನಡುವೆ ಬಾರಿಬಾರಿಗೂ ಪ್ರಶಂಸೆಯ ಚಪ್ಪಾಳೆ ಬೇರೆ. ಅದು ಮುಗಿದಾಗ ಎಂಥ ಸೊಗಸಾದ ಉಪನ್ಯಾಸ ಎಂದು ಎಲ್ಲರ ಮುಖದಲ್ಲಿ ಮೆಚ್ಚುಗೆ; ಹಾಗೇ ಅದು ಮುಗಿದೇ ಹೋಯಿತಲ್ಲ ಎಂದು ಒಂದು ಬಗೆಯ ಪೆಚ್ಚುಕಳೆ.

ಮಿತ್ರ ಹುಟ್ಟಿದ್ದು ಬೇಲೂರಿನಲ್ಲಿ. ಅವರ ತಂದೆ ಹೆಬ್ಬಾಳು ರಾಮಣ್ಣ, ತಾಯಿ ಜಯಲಕ್ಷ್ಮಮ್ಮ. ಅಣ್ಣ, ತಮ್ಮ, ತಂಗಿಯರು ಹೀಗೆ ಏಳೆಂಟು ಜನರಿಂದ ಕೂಡಿದ ಮಧ್ಯಮ ವರ್ಗದ ಅನ್ಯೋನ್ಯ ಕುಟುಂಬ ಅವರದು.

ಐವತ್ತರ ದಶಕದಲ್ಲಿ ಮಿತ್ರ ಮೈಸೂರು ಕನ್ನಡ ಅನರ್ಸ್ ಎಂ.ಎ. ಓದಿದರು. ನಾನು ಅವರ ಸಹಪಾಠಿ. ಈಗ ನಾಡಿಗೆಲ್ಲ ಗೊತ್ತಿರುವ ಎಂ.ಎಚ್. ಕೃಷ್ಣಯ್ಯ, ಹಂಪನಾ, ಕಮಲಾ ಹಂಪನಾ, ಸಣ್ಣಗುಡ್ಡಯ್ಯ, ಪಾಶ ಶ್ರೀನಿವಾಸ ಮೊದಲಾದ ಲೇಖಕರೂ ನಮ್ಮ ಬ್ಯಾಚಿನವರೆ. ತರಗತಿಯಲ್ಲಿ ಮಿತ್ರ ಎಲ್ಲರಿಗಿಂತ ಮುಂದು. ವಿದ್ಯಾರ್ಥಿಯಾಗಿದ್ದಾಗಲೇ ಅವರು ಪ್ರಭುಶಂಕರ, ಶಿವರುದ್ರಪ್ಪ, ಸುಜನಾ, ಚಿದಾನಂದಮೂರ್ತಿ ಮೊದಲಾದ ಸಾಹಿತಿ ವಿದ್ವಾಂಸರ ಜತೆ ವಿಶೇಷವಾಗಿ ಬೆರೆಯುತ್ತಿದ್ದರು. ವಿಪರೀತ ಓದಿನ ಹುಚ್ಚು. ಆದರೆ ಪಠ್ಯಪುಸ್ತಕಳಿಗಿಂತ ಸಾಹಿತ್ಯದ ಬೇರೆ ಬೇರೆ ಕೃತಿಗಳನ್ನು ಓದುತ್ತಿದ್ದುದೇ ಹೆಚ್ಚು. ಹೀಗಾಗಿ ಎಲ್ಲರಿಗಿಂತ ಬುದ್ಧಿವಂತರಾಗಿದ್ದೂ ಅವರು ತರಗತಿಯ ಮೊದಲ ಸ್ಥಾನವನ್ನು ಇತರರಿಗೆ ಬಿಟ್ಟು ಕೊಟ್ಟದ್ದುಂಟು.

ವಾರಾನ್ನ ಮಾಡಿಕೊಂಡು ಓದುತಿದ್ದ ನನಗೆ ವಾರದ ಒಂದು ದಿನ ಯಾರ ಮನೆಯೂ ಸಿಕ್ಕಿಲ್ಲದೆ ಅ ದಿನ ಉಪವಾಸ ಮಾಡಿಬಿಡುತಿದ್ದೆ. ಇದು ಮಿತ್ರರಿಗೆ ಹೇಗೋ ಗೊತ್ತಾಯಿತು. ಕೂಡಲೇ ಅವರು ನನ್ನಲ್ಲಿಗೆ ಬಂದರು. ಆವರೆಗೆ ಹಾಗೆ ಮಾಡಿದ್ದಕ್ಕೆ ಸ್ನೇಹದಲ್ಲೇ ಬೈದು, ವಾರದ ಆ ದಿನ ತಮ್ಮ ಮನೆಯಲ್ಲಿ ಜತೆಗೇ ಊಟಮಾಡುವಂತೆ ಏರ್ಪಾಟು ಮಾಡಿಬಿಟ್ಟರು. ಬೇರೆಯವರ ಸಹಾಯಕ್ಕೆ ಧಾವಿಸುವ ಸ್ವಭಾವ ಅವರದ್ದು. ನನ್ನ ಮೊದಲ ಕವನ ಸಂಕಲನ ಪ್ರಕಟವಾಗುವುದಕ್ಕೂ ಅವರೇ ಕಾರಣ. ಹಿಂಜರಿಕೆಯಿಂದಾಗಿ ನನ್ನಲ್ಲೇ ಉಳಿಸಿಕೊಂಡಿದ್ದ ಹಸ್ತಪ್ರತಿಯನ್ನು ಅವರು ನನ್ನಿಂದ ಕಿತ್ತುಕೊಂಡು ಹೋಗಿ ಅದು ಹೊರಬರಲು ಕಾರಣರಾದರು.

ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿದ ಮಿತ್ರ ಮುಂದೆ ಸರಕಾರಿ ಅಧ್ಯಾಪಕರಾದರು. ಜನಪ್ರಿಯ ಅಧ್ಯಾಪಕ ಎಂದು ಹೋದ ಕಡೆಯಲ್ಲೆಲ್ಲ ಮೆಚ್ಚುಗೆ ಗಳಿಸಿದರು. ಕಡೆಯಲ್ಲಿ ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರೂ ಆಗಿ ನಿವೃತ್ತರಾದರು.

ತಾರುಣ್ಯದ ದಿನಗಳಿಂದಲೇ ಸಾಹಿತ್ಯ ರಚನೆಗೆ ತೊಡಗಿದ ಮಿತ್ರ ಈವರೆಗೆ ಹಲವು ಗ್ರಂಥಗಳನ್ನು ರಚಿಸಿದ್ದಾರೆ. ವಿಪುಲ ಸಂಖ್ಯೆಯ ಲಲಿತ ಪ್ರಬಂಧಗಳು, 'ಛಂದೋಮಿತ್ರ', ವಚನಕಾರರು ಮತ್ತು ಶಬ್ದಕಲ್ಪ' 'ಒಳನೋಟಗಳು' ಎಂಬ ಸಾಹಿತ್ಯ ಪ್ರಬಂಧಗಳ ಸಂಗ್ರಹ, 'ಪ್ರೇಮ ನದಿಯ ದಡಗಳಲ್ಲಿ' ಎಂಬ ಪ್ರಣಯ ಕಥಾ ಸಂಕಲನ – ಇವು ಅವರ ಕೃತಿಗಳು. ಇವುಗಳಂತೆಯೇ ಈಚೆಗೆ ಹೊರಬಂದ 'ಮಹಾಭಾರತ ಪಾತ್ರಸಂಗತಿಗಳು' ಎಂಬ ಮೂರು ಸಂಪುಟಗಳ ಗ್ರಂಥ ಅವರ ಮೇಲುನೆಲೆಯ ವಿದ್ವತ್ತು, ವಿಮರ್ಶನ ಶಕ್ತಿಗಳಿಗೆ ಸಾಕ್ಷಿಯಾಗಿವೆ. ಇದಕ್ಕೆ ಸಮಸಮವಾಗಿ ಎಂಬಂತೆ ಕರ್ನಾಟಕದ ಎಲ್ಲೆಡೆಯಲ್ಲಿ ಅಸಂಖ್ಯ ಉಪನ್ಯಾಸಗಳನ್ನು ನೀಡಿ ಸಾಮಾನ್ಯ ಜನಕ್ಕೆ ಕನ್ನಡದ ಪ್ರಾಚೀನ ಮತ್ತು ಆಧುನಿಕ ಹಿರಿಯ ಕವಿಗಳನ್ನು ಪರಿಚಯಿಸಿದ ಹಿರಿಮೆ ಮಿತ್ರರದು.

ಕನ್ನಡದ ಪ್ರಬಂಧ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ರಾ.ಕು., ಪುತಿನ, ಎ.ಎನ್.ಮೂರ್ತಿರಾವ್, ತೀನಂಶ್ರೀ, ಗೊರೂರು, ಪ್ರಭುಶಂಕರರಂಥ ಶ್ರೇಷ್ಠ ಪ್ರಬಂಧಕಾರರ ಸಾಲಿಗೆ ಮಿತ್ರ ಸೇರುತ್ತಾರೆ. ಸುಮಾರು ನಲವತ್ತು ವರ್ಷಗಳ ಉದ್ದಕ್ಕೂ ಇತರ ಸಾಹಿತ್ಯ ಕೃತಿಗಳ ಜತೆಗೆ ಉತ್ತಮ ಪ್ರಬಂಧಗಳನ್ನು ಬರೆಯುತ್ತ ಬಂದ ಪ್ರಭೃತಿ ಅವರು. ಪ್ರಬಂಧ ಸಾಹಿತ್ಯ. ಸ್ಥಗಿತವಾದಂತೆ ಕಂಡ ನವ್ಯರ ಕಾಲದಲ್ಲೂ ಅವರು ಆ ಬರೆಹವನ್ನು ನಿಲ್ಲಿಸದಿದ್ದುದು ಅವರ ಗಟ್ಟಿತನವನ್ನೂ ಆ ಪ್ರಕಾರದ ಅಗತ್ಯದಲ್ಲಿ ಅವರಿಗಿದ್ದ ನಂಬಿಕೆಯನ್ನೂ ತೋರಿಸುತ್ತದೆ. 'ಆರತಕ್ಷತೆ' ಮತ್ತು 'ನಾನೇಕೆ ಕೊರೆಯುತ್ತೇನೆ' ಎಂಬ ಎರಡು ದೊಡ್ಡ ಪ್ರಬಂಧ ಸಂಪುಟಗಳಲ್ಲಿ ಅವರ ನೂರು ಪ್ರಬಂಧಗಳು ಸಂಗ್ರಹಗೊಂಡಿವೆ. 'ಆರತಕ್ಷತೆ'ಯಂಥ ಪ್ರಬಂಧದಲ್ಲಿ ಮಿತ್ರರ ಕಲ್ಪನಾವಿಲಾಸ ಮತ್ತು ಸಂಪದ್ಭರಿತವಾದ ಮೋಹಕ ಗದ್ಯಶೈಲಿಯನ್ನು ಕಾಣಬಹುದು. ಬಹುಮಟ್ಟಿಗೆ ಅವರ ಎಲ್ಲ ಪ್ರಬಂಧಗಳಲ್ಲಿಯೂ ಪ್ರಾಚೀನರಿಂದ ಸಮಕಾಲೀನರವರೆಗೆ ಶ್ರೇಷ್ಠ ಕವಿಗಳ ಸಾಲುಗಳು ಸಮಯೋಚಿತವಾಗಿ ಹಣಿಕಿ ಪ್ರಬಂಧಕ್ಕೆ ಹೊಸ ಆಯಾಮವನ್ನು ಕೊಡುತ್ತವೆ. ಅವರ ಎಲ್ಲ ಪ್ರಬಂಧಪತ್ತಲಗಳಿಗೂ ಶುಭ್ರ ಹಾಸ್ಯದ ಜರಿಯಂಚು ಒಡಲುಗಳು ಇದ್ದೇ ಇರುತ್ತವೆ. 'ಅಪ್ಪಿಕೋ', 'ಬೀಳ್ಕೊಡಿಗೆ', 'ಬಾಲ್ಕನಿಯ ಬಂಧುಗಳು'. 'ಕಿರುದಾರಿ' ಮೊದಲಾದ ಬರೆಹಗಳಲ್ಲಿ ಸೂಕ್ಷ್ಮ ಚಿಂತನೆಯ ಹೊಳಹುಗಳೂ ಇವೆ.

ಮಿತ್ರರ 'ವಚನಕಾರರು ಮತ್ತು ಶಬ್ದಕಲ್ಪ' ಎಂಬ ಹೊತ್ತಗೆ ಕನ್ನಡಕ್ಕೆ ಒಂದು ಹೊಸ ಬಗೆಯ ಕೊಡುಗೆ. ಮಾರ್ಗಕಾವ್ಯಕ್ಕೆ ಹೊರತಾಗಿ ವಿಭಿನ್ನ ಮಾರ್ಗವೊಂದನ್ನು ಸೃಷ್ಟಿಸಿಕೊಂಡ ವಚನ ಸಾಹಿತ್ಯದ ಬಗ್ಗೆ ಈವರೆಗೆ ವಿಪುಲವಾದ ವಿಮರ್ಶೆ ಬಂದಿದೆ. ಆದರೆ ಮಿತ್ರರ ಈ ಕೃತಿ ಮಾತ್ರ ಆ ವಿಮರ್ಶೆಯ ರಾಶಿಯಲ್ಲೇ ಅನನ್ಯವಾದದ್ದು.

ಇತರ ಬರೆಹಗಳೆಲ್ಲ ವಚನಗಳ ಸಾಮಾಜಿಕ, ರಾಜಕೀಯ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಆಶಯಗಳನ್ನು ವಿವರಿಸುವಂಥವು. ವಚನಕಾರರಿಂದಾದ ಹೊಸ ಶಬ್ದಸೃಷ್ಟಿ ಮತ್ತು ಮಾತಿನ ಬಗೆಬಗೆ ವಿನ್ಯಾಸಗಳನ್ನು ಕುರಿತು ವಿಶೇಷ ಜಿಜ್ಞಾಸೆ ಮೊದಲು ನಡೆದಿರುವುದು ಈ ಕೃತಿಯಲ್ಲಿಯೇ. ಅಲ್ಲಮರಂಥವರ ವಚನಗಳಲ್ಲಿ ಸರಳ ಶಬ್ದಗಳು ಪರಿಭಾಷೆಯ ನೆಲೆಗೇರಿ ಸಾಮಾನ್ಯರ ಅರಿವಿಗೆ ಮೀರಿ ಅರ್ಥಕಾರಕ ವಾಗುತ್ತವೆ. ಇಕ್ಕಮುಡಿಗೆ, ಏರುಮುಡಿಗೆ, ಇಟ್ಟಿಯ ಹಣ್ಣು, ಶುಕ್ಲದ ಗುಡಿ, ರಂಡೆಗೂಳು, ರುದ್ರಛತ್ರ, ವಿಕ್ರಮಪಕ್ಷಿ, ಓಜುಗಟ್ಟಿಗೆ, ಶಸ್ತ್ರಪಳ, ಹಿಂಗಿ –ಇಂಥ ಅನೇಕ ಕಗ್ಗಂಟುಗಳನ್ನು ಮಿತ್ರ ತಮ್ಮ ಅಸಾಧಾರಣ ವಿದ್ವತ್ ಕೌಶಲದಿಂದ ಸಲೀಸಾಗಿ ಬಿಚ್ಚಿಬಿಡುತ್ತಾರೆ. ಹಾಗೆ ಮಾಡುವಾಗ ಅವರು ತಮ್ಮ ಗುರುಗಳಾದ ಡಿ.ಎಲ್.ಎನ್. ಅವರನ್ನು ನೆನಪಿಸುತ್ತಾರೆಂದರೆ ತಪ್ಪಿಲ್ಲ. 'ಈಚೆಗೆ ವಿರಳವಾಗುತ್ತಿರುವ ಪಾಂಡಿತ್ಯ, ಬಹುಶ್ರುತತ್ವ ಮತ್ತು ಪ್ರತಿಭೆ ಇಲ್ಲಿ ಮೇಳೈಸಿವೆ' ಎಂದು ಡಾ. ಶ್ರೀರಾಮಭಟ್ಟರು ಈ ಪುಸ್ತಕದ ಬಗ್ಗೆ ಹೇಳಿರುವ ಮಾತು ತುಂಬ ನ್ಯಾಯವಾದದ್ದು.

ಛಂದಸ್ಸಿನಂಥ ಕ್ಲಿಷ್ಟಶಾಸ್ತ್ರದಲ್ಲಿ ಮಿತ್ರರ ಪ್ರೌಢಗ್ರಹಿಕೆಯನ್ನೂ ಮತ್ತು ಪದ್ಯ ರಚನಾ ಸಾಮರ್ಥ್ಯವನ್ನೂ ಸೂಚಿಸುವ ಗ್ರಂಥ ಅವರ ಛಂದೋಮಿತ್ರ. ಛಂದಶ್ಶಾಸ್ತ್ರ ಕುರಿತು ಒಂದು ಸಹಸ್ರವರ್ಷದಷ್ಟು ಪ್ರಾಚೀನನಾದ ನಾಗವರ್ಮನಿಂದ ಹಿಡಿದು ಈ ಕಾಲದ ಡಿ.ಎಸ್.ಕರ್ಕಿ, ತೀನಂಶ್ರೀ, ಡಿ.ಎಲ್.ಎನ್., ಸೇಡಿಯಾಪು ಕೃಷ್ಣಭಟ್ಟ, ಚಿದಾನಂದಮೂರ್ತಿ, ವೆಂಕಟಾಚಾಲಶಾಸ್ತ್ರಿಗಳಾದಿಯಾಗಿ ಅನೇಕ ವಿದ್ವಾಂಸರು ಬರೆದಿದ್ದಾರೆ. ಆದರೆ 'ಛಂದೋಮಿತ್ರ' ಅವುಗಳೆಲ್ಲಕ್ಕಿಂತ ಭಿನ್ನವಾದದ್ದು ಮತ್ತು ತನ್ನ ಸ್ವರೂಪದಿಂದಾಗಿ ವಿಶಿಷ್ಟವಾದದ್ದು. ಶಾಸ್ತ್ರ ನಿರೂಪಣೆಗೆ ಅನುಸರಿಸಿರುವ ವಿಧಾನ ಹಿಂದಿನವನಾದ ನಾಗವರ್ಮನದೇ. ಆದರೆ ನಾಗವರ್ಮನಿಗಿಂತ ಮುಂದೆ ರೂಪ ಗೊಂಡ ವಚನ, ಕೀರ್ತನೆ, ಆಧುನಿಕ ಛಂದಸ್ಸು ಇವುಗಳನ್ನೂ ಇದು ಒಳಗೊಂಡಿದೆ. ಛಂದಸ್ಸಿನ ಲಕ್ಷಣ ನಿರೂಪಣೆಯ ಪದ್ಯಗಳು ಮಾತ್ರವಲ್ಲದೆ ಹೇರಳವಾಗಿ ಕೊಡಲಾಗಿರುವ ನಿದರ್ಶನಪದ್ಯಗಳು ಕೂಡ ಸ್ವತಃ ಲೇಖಕರೇ ರಚಿಸಿದಂಥವು. ಇವು ಶಾಸ್ತ್ರನಿರೂಪಣೆಗೆ ಸ್ವಲ್ಪವೂ ಧಕ್ಕೆ ತಾರದೆ ತುಂಬ ವಿನೋದಪರ ರಚನೆಗಳಾಗಿವೆ. ಉದಾಹರಣೆಗೆ ಭಾಮಿನಿ ಷಟ್ಪದಿಗೆ ನಿದರ್ಶನವಾಗಿಕೊಡುವ ಪದ್ಯ 'ಇವಗೆ ಭಾಮಿನಿ ಹುಚ್ಚು ಒಂದೇಸಮನೆ ಮಾತ್ರೆಗಳೇಕೆ ಕೊಡುವಿರಿ' ಎಂದು ಆರಂಭವಾಗುತ್ತದೆ! ಹೆಣ್ಣಿನಹುಚ್ಚು ಹಿಡಿದು ಖಾಯಿಲೆ ಬಿದ್ದ ಹುಡುಗ ಇದು. ಇವನಿಗೆ ಸುಮ್ಮನೆ ಮಾತ್ರೆ ತಿನ್ನಿಸಿ ಏನು ಪ್ರಯೋಜನ? ಒಂದು ಹೆಣ್ಣು ಗಂಟು ಹಾಕಿ, ಹುಚ್ಚು ಬಿಡುತ್ತದೆ ಎಂಬ ಅರ್ಥವನ್ನು ಕೊಡುವ ಈ ಸಾಲುಗಳು ಭಾಮಿನಿ ಷಟ್ಪದಿಯಲ್ಲಿ ಇರಬೇಕಾದ ಛಂದಸ್ಸಿನ ಮಾತ್ರೆಗಳ ವಿಷಯವನ್ನೂ ಕರಾರುವಾಕ್ಕಾಗಿ ಹೇಳುತ್ತದೆ!

ಛಂದಶ್ಶಾಸ್ತ್ರವನ್ನು ಪಾಠ ಹೇಳುವ ಉಪಾಧ್ಯಾಯನಿಗೂ, ಕೇಳುವ ವಿದ್ಯಾರ್ಥಿಗಳಿಗೂ ವಿಷಯದ ಕ್ಲೇಶವನ್ನು ತಪ್ಪಿಸಿ ನಗು ಉಣಿಸುವ, ನಗು ಉಕ್ಕಿಸುವ ನಿರೂಪಣೆ ಈ ಪುಸ್ತಕದ್ದು.

'ಪ್ರೇಮನದಿಯ ದಡಗಳಲ್ಲಿ' ಮಿತ್ರರ ಇನ್ನೊಂದು ಜನಪ್ರಿಯ ಕೃತಿ. ಹಲವು ವರ್ಷಗಳ ಹಿಂದೆ ಸುಧಾ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಹರಿದುಬಂದು ಜನಮನವನ್ನು ಗೆದ್ದ ಇಪ್ಪತ್ತು ಪ್ರೇಮಕಥೆಗಳು ಇದರಲ್ಲಿವೆ. ಜತೆಗೆ ಹೊಸದಾಗಿ ಇನ್ನೊಂದು ಕಥೆಯೂ ಸೇರಿದೆ. ಭಾರತೀಯ ಪುರಾಣ, ಜಾನಪದ ಮತ್ತು ಪ್ರಾಚೀನ ಕಾವ್ಯಗಳಲ್ಲಿ ಬರುವ ಅನೇಕ ಕಥಾಬಿಂದುಗಳನ್ನು ಆಧರಿಸಿ ರೂಪಿಸಿದ ಕಥೆಗಳು ಇವು. ಪಾಶ್ಚಾತ್ಯ ಮೂಲಗಳಿಂದ ಆಯ್ದುಕೊಂಡ ಕಥಾವಸ್ತುಗಳೂ ಇವೆ. ಲೇಖಕರು ಮೂಲದ ಕಥಾನಕ್ಷೆಯನ್ನಷ್ಟೇ ಸ್ವೀಕರಿಸಿ ತಮ್ಮ ಕಲ್ಪನೆ ಪ್ರತಿಭೆಗಳಿಂದ ಅವಕ್ಕೆ ಉಚಿತವಾದ ಹೊಸ ವಿವರಗಳನ್ನು, ಸಂವಾದವನ್ನು, ನಾಟಕೀಯ ಅಂಶಗಳನ್ನು ಅಳವಡಿಸಿದ್ದಾರೆ.

ಇಂಥದೇ ತಂತ್ರವನ್ನು ಅನುಸರಿಸಿ ಕವಿ ಎಕ್ಕುಂಡಿಯವರು ಸೃಷ್ಟಿಸಿದ ಅನೇಕ ಕಥನ ಕವನಗಳನ್ನು ಈ ಸಂಗ್ರಹ ನೆನಪಿಸುತ್ತದೆ. ಅವರ 'ಅವಧೂತ', ಊರ್ವಶೀ', 'ಹಾವಾಡಿಗರ ಹುಡುಗ'. 'ದಾಸಿಮಯ್ಯ ಮತ್ತು ಬೆಕ್ಕು' ಕಥನ ಕವನಗಳಂತೆಯೇ ಆಕರ್ಷಕವಾದ ಕರಿಬಂಟ–ಪುಂಡರೀಕಾಕ್ಷಿ, ಯಮ–ಯಮಿ, ಮಲುಹಣ–ಮಲುಹಣಿ, ಅಮರಾವತಿ–ಅಂಬಿಕಾವತಿ ಮೊದಲಾದ ಕಥೆಗಳು ಈ ಸಂಕಲನದಲ್ಲಿವೆ. ಎಲ್ಲವೂ ಪ್ರೇಮಕಥೆಗಳಾದರೂ ಅವುಗಳಲ್ಲಿ ಬೇಕಾದಷ್ಟು ವೈವಿಧ್ಯವಿದೆ. ಗಾಢವಾಗಿ ಪ್ರೀತಿಸಿ ಮದುವೆಯಾದ ಜೋಡಿಗಳಂತೆಯೇ ಸಾಮಾಜಿಕ ನೀತಿಯ ಗಡಿಗಳನ್ನೇ ಮೀರಿ, ವಿವಾಹ ಧರ್ಮವನ್ನೇ ದಾಟಿ ಕೂಡಿದವರ ಪ್ರಣಯ ಕಥೆಗಳೂ ಇವೆ. ಮನುಷ್ಯರಂತೆ ದೇವತೆಗಳ ಕಥೆಗಳೂ ಉಂಟು. ಬೃಹಸ್ಪತಿಯ ಪತ್ನಿಯಾದ ತಾರೆ ಗಂಡನ ಶಿಷ್ಯನಾದ ಚಂದ್ರನನ್ನೇ ಒಲಿದು ಕೂಡಿ ಒಬ್ಬ ಮಗನನ್ನು ಪಡೆದು ನಂತರ ದೇವಗಣದ ಒತ್ತಾಯದಿಂದಾಗಿ ಗಂಡನ ಮನೆಗೆ ಹಿಂದಿರುಗಿದ ಚಂದ್ರಮೋಹನ ಎಂಬ ಪ್ರಣಯಕಥೆ, ಮಗಳಾದ ಸರಸ್ವತಿಯನ್ನೇ ಮದುವೆಯಾದ ಬ್ರಹ್ಮನ ವಿಚಿತ್ರ ಕಥೆ, ಅಣ್ಣನಾದ ಯಮನನ್ನೇ ಮದುವೆಯಾಗುವ ಹಟಹಿಡಿದು, ಅದು ಸಾಧ್ಯವಾಗದಿದ್ದಾಗ ಯಮುನೆಯಾಗಿ ಭೂಮಿಗೆ ಹರಿದು ಹೋದ ಯಮಿಯ ಕಥೆ–ಇಂಥ ವಿಚಿತ್ರ ಜೋಡಿಗಳ ಪ್ರಣಯ ವೃತ್ತಾಂತಗಳೆಲ್ಲ ತುಂಬ ಮಾನವೀಯವಾಗಿ ಇಲ್ಲಿ ನಿರೂಪಿತವಾಗಿವೆ. ಕುತೂಹಲ ಕೆರಳಿಸುವ ಬಹಳ ವಾಚನೀಯವಾದ ಕಥೆಗಳು ಇವು.

'ಮಹಾಭಾರತದ ಪಾತ್ರ–ಸಂಗತಿಗಳು' ಮಿತ್ರರು ಎರಡು ವರ್ಷಗಳ ಹಿಂದೆ ಹೊರತಂದ ಮೂರು ಸಂಪುಟಗಳ ಕುತೂಹಲಕರ ಗ್ರಂಥ. ಮಹಾಭಾರತ ಕಾವ್ಯವನ್ನು ಬಲ್ಲವರಿಗೆ ಪಾಂಡವರು, ಕೌರವರು, ಯಾದವರು, ವಿರಾಟರು, ಮತ್ಸ್ಯರು

ಮೊದಲಾದವರಲ್ಲಿ ಬರುವ ಮುಖ್ಯಪಾತ್ರಗಳಷ್ಟೇ ಗೊತ್ತು. ಇವಲ್ಲದೆ ನೂರಾರು ಪುಟ್ಟಪಾತ್ರಗಳೂ ಅಲ್ಲಿವೆ. ಕೃಷ್ಣನ ಸಾರಥಿಯಾದ ದಾರುಕ, ಪರಾಶರರ ತಾಯಿ ಅದೃಶ್ಯಂತಿ, ಘಟೋತ್ಕಚನ ಮಗ ಡುಂಡುಭ, ಶಿಖಂಡಿಗೆ ತನ್ನ ಪುರುಷತ್ವವನ್ನು ಎರವಲಾಗಿಕೊಟ್ಟ ಧೌಮ್ಯ, ಗಾಲವ, ಸ್ಥೂಲಕರ್ಣ ಇಂಥ ಇನ್ನೂರ ಎಂಬತ್ತು ಪಾತ್ರಗಳನ್ನು ಕಲೆಹಾಕಿ ಮಿತ್ರ ಅವರುಗಳ ಬಗ್ಗೆಯೂ ಬರೆದಿದ್ದಾರೆ. ಒಂದು ಬೆರಳು ಗಾತ್ರವಿರುವ, ಸೂರ್ಯ ಕಿರಣಗಳೇ ಆಹಾರವಾದ, ಮಹಾತಪೋಧನರಾದ ನೂರಾರು ಜನ ವಾಲಖಿಲ್ಯರ ಸಂಗತಿಗಳೆಲ್ಲ ಇಲ್ಲಿವೆ. ಹಾಗೆಯೇ ಆ ಕಾಲದ ಅನೇಕ ನದಿಗಳು, ಸಪ್ತಸಾಗರಗಳು, ಜಂಬೂದ್ವೀಪ, ಚಕ್ರವ್ಯೂಹದಂಥ ಯುದ್ಧವ್ಯೂಹಗಳ ವಿವರಗಳೂ ಇವೆ. ಕನ್ನಡ, ತೆಲುಗು, ಹಿಂದಿ, ಸಂಸ್ಕೃತಗಳಲ್ಲಿರುವ ಮಹಾಭಾರತಗಳು, ಅವುಗಳನ್ನು ಕುರಿತ ವ್ಯಾಖ್ಯಾನಗಳು, ಪುರಾಣ ಚರಿತ್ರಕೋಶಗಳು– ಇವನ್ನೆಲ್ಲ ಅಧ್ಯಯನ ಮಾಡಿ ಬರೆದ ಒಂದು ಮೌಲಿಕಗ್ರಂಥ ಇದು.

'ಒಳನೋಟಗಳು' ಎಂಬ ಇನ್ನೊಂದು ಪುಸ್ತಕ ಮಿತ್ರರ ಎಂಟು ಸಾಹಿತ್ಯಕ ಲೇಖನಗಳ ಸಂಕಲನ. ಇದರಲ್ಲಿ ಕುಮಾರವ್ಯಾಸ, ಲಕ್ಷ್ಮೀಶ, ಪುರಂದರದಾಸ, ಮೊದಲಾದ ಪ್ರಾಚೀನ ಕನ್ನಡ ಕವಿಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳಿವೆ. ಜತೆಗೆ ಕಾವ್ಯಮೀಮಾಂಸೆ ಮತ್ತು ಛಂದಸ್ಸುಗಳ ಬಗ್ಗೆಯೂ ವಿಚಾರಾತ್ಮಕ ಬರೆಹಗಳಿವೆ.

ಬಿಡಿಬಿಡಿಯಾಗಿ ಪ್ರಕಟವಾಗಿರುವ, ಪುಸ್ತಕ ರೂಪದಲ್ಲಿ ಇನ್ನೂ ಹೊರಬಂದಿಲ್ಲದ ಬೇರೆ ಎಷ್ಟೋ ಲೇಖನಗಳನ್ನೂ ಮಿತ್ರ ಬರೆದಿದ್ದಾರೆ. 'ಊರ್ವಶಿ' ಕಾವ್ಯನಾಟಕ ಕುರಿತು ಒಳನೋಟಗಳಿಂದ ಕೂಡಿರುವ ಒಂದು ದೀರ್ಘಲೇಖನ ಮತ್ತು 'ಅರ್ಥವಾಗುವ ಹಾಗೆ ಬರೆಯಬೇಕು' ಎಂಬ ಕವಿ ಅಡಿಗರ ಕವನ ಕುರಿತ ಮೌಲಿಕ ಲೇಖನ ಅಂಥವುಗಳಲ್ಲಿ ಕೆಲವು.

ಅ.ರಾ. ಮಿತ್ರರ ಸಾಹಿತ್ಯ ಸೇವೆಯನ್ನು ಗೌರವಿಸಿ ಈ ಹಿಂದೆಯೇ ಅವರಿಗೆ ಶಿವರಾಮ ಕಾರಂತ ಪ್ರಶಸ್ತಿ, ಗೊರೂರು ಪ್ರಶಸ್ತಿ ಮತ್ತು ಕಾವ್ಯಾನಂದಪುರಸ್ಕಾರ ಮೊದಲಾದ ಗೌರವಗಳು ಸಂದಿವೆ. ಈಗ ಈ ಬಾರಿಯ ವೆಂಕಟಾಚಲಶಾಸ್ತ್ರಿ ವಿದ್ವತ್ ಪ್ರಶಸ್ತಿ ಸಂದಿದೆ.

ಮನೆಗೆ ಬಂದವರನ್ನು ನಗುನಗುತ್ತ ಆದರಿಸುವ ಪತ್ನಿ ಲಲಿತಾ, ಅಧ್ಯಯನ ಕಾರ್ಯದಲ್ಲಿ ತಂದೆಗೆ ನೆರವಾಗುವ ಮಗಳು ಸೌಮ್ಯ, ಅಮೆರಿಕದಲ್ಲಿ ಎಂಜಿನಿಯರ್ ಆಗಿರುವ ಮಗ ಕೀರ್ತಿ – ಇದು ಮಿತ್ರರ ಹಿತಮಿತವಾದ ಕುಟುಂಬ.

●

ಶಿವಮೊಗ್ಗ ನಗರದ ಸಾಂಸ್ಕೃತಿಕ ಸೌಭಾಗ್ಯ – ಇಬ್ರಾಹಿಂ ಸಾಹೇಬ್

ಸುಮಾರು ಹತ್ತು ವರ್ಷಗಳಿಗೂ ಹಿಂದಿನ ಘಟನೆ. ಶಿವಮೊಗ್ಗದಲ್ಲಿ ಎರಡು ದಿನಗಳ ಒಂದು ಬೃಹತ್ ಕನ್ನಡ ವಿಚಾರ ಸಂಕಿರಣ ನಡೆದಿತ್ತು ಅದನ್ನು ಏರ್ಪಡಿಸಿದ್ದವರು ಇಬ್ರಾಹಿಂ ಸಾಹೇಬರು. ಎರಡನೆಯ ದಿನ ಡಾ.ಎಸ್.ಎಲ್. ಭೈರಪ್ಪ, ಡಾ. ಹಾಮಾನಾ. ಎಂ.ಎಚ್. ಕೃಷ್ಣಯ್ಯ ಮತ್ತು ನಾನು ಸಭೆಯ ಹೊರಗೆ ಏನೋ ಮಾತನಾಡುತ್ತ ನಿಂತಿದ್ದೆವು. ಇಬ್ರಾಹಿಂ ಸಾಹೇಬರು ಅಲ್ಲಿಗೆ ಬಂದರು. ನಮಗೆ ನಮಸ್ಕಾರ ಹೇಳಿ "ಸಾರ್ ತಾವೆಲ್ಲ ನಾಳೆ ದಯವಿಟ್ಟು ನಮ್ಮ ಮನೆಗೆ ಭೋಜನಕ್ಕೆ ದಯಮಾಡಿಸಬೇಕು. ಸಸ್ಯಾಹಾರದ ಅಡಿಗೆಯವರೇ ಊಟ ಸಿದ್ಧಮಾಡುತ್ತಾರೆ" ಎಂದರು. ಅಂದು ಹಾ.ಮಾ. ನಾಯಕರು ಬೇರೆ ಎಲ್ಲೋ ಹೋಗಬೇಕಾಗಿತ್ತು. ಉಳಿದ ನಾವು ಮೂವರೂ ಹೋಗಲೊಪ್ಪಿದೆವು.

ಮಾರನೆಯ ಮಧ್ಯಾಹ್ನ ಅವರ ಮನೆಯಲ್ಲಿ ಊಟ ಮಾಡುತ್ತಿದ್ದೇವೆ. ಇಬ್ರಾಹಿಂ ಸಾಹೇಬರೂ ಜೊತೆಯಲ್ಲಿದ್ದಾರೆ. ಬಡಿಸುತ್ತಿದ್ದವರು ನಡುವೆ ಎರಡು ದೊಡ್ಡ ದೊನ್ನೆಗಳನ್ನು ತಂದರು. ಒಂದರಲ್ಲಿ ಪುಳಿಯೋಗರೆ, ಮತ್ತೊಂದರಲ್ಲಿ ಮೊಸರನ್ನ. ಸಾಹೇಬರು ಅದನ್ನು ಎಲ್ಲರ ಎಲೆಗೂ ಒಂದೊಂದು ಚಮಚ ಬಡಿಸಿ" ಎಂದರು. ನಾನು ಕುತೂಹಲದಿಂದ "ಇದೇನು ಪದಾರ್ಥ" ಎಂದೆ. ಸಾಹೇಬರು "ಇವತ್ತು ಶ್ರಾವಣ ಶನಿವಾರ ನೋಡಿ. ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ. ನಮ್ಮ ಪೂಜೆಯೂ ಇತ್ತು. ದೇವರ ಪ್ರಸಾದ ಕಳಿಸಿದ್ದಾರೆ. ಅದನ್ನು ಎಲ್ಲರಿಗೂ ಬಡಿಸಲು ಹೇಳಿದೆ" ಎಂದರು. ನಮಗೆಲ್ಲ ಆಶ್ಚರ್ಯ. ಇವರು ಮುಸ್ಲಿಮರು, ಶ್ರೀ ವೈಷ್ಣವರ ಮೇಲ್ವಿಚಾರಣೆ ಇರುವ ಹಿಂದೂ ದೇವಾಲಯವೊಂದರಲ್ಲಿ ಇವರ ಪೂಜೆ!

ಇದು ಇಬ್ರಾಹಿಂ ಸಾಹೇಬರು ಮುಂಚಿನಿಂದ ಬೆಳೆದು ಬಂದ ರೀತಿ. ಅವರಿಗೆ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಎಂಬ ಭೇದಗಳೆಲ್ಲ ಇಲ್ಲವೇ ಇಲ್ಲ. ದೈವವೆನ್ನುವುದು ಒಂದೇ. ಅದು ಇಡೀ ಸೃಷ್ಟಿಯಲ್ಲಿ ಅಂತರ್ನಿಹಿತವಾಗಿದ್ದು ವಿಶ್ವವನ್ನೆಲ್ಲ ಕಾಪಾಡುತ್ತಿರುವ ಒಂದು ಅಗೋಚರ ಮಾತೃಶಕ್ತಿ. ಎಲ್ಲ ಜೀವರಾಶಿ ಅದರ ಸಂತಾನ. ಇದು ಅವರ ದೃಢನಂಬಿಕೆ. "ಏಕೋ ದೇವಃ ಸರ್ವ ಭೂತೇಷು ಗೂಢಃ ಸರ್ವವ್ಯಾಪೀ ಸರ್ವ ಭೂತಾಂತರಾತ್ಮಾ" ಎಂಬ ತತ್ವ ಅವರಿಗೆ ಒಪ್ಪಿಗೆಯಾದ ಮಾತು. ಅವರು ಭಕ್ತಿಗೌರವ ಸಲ್ಲಿಸಲು ಮಸೀದಿಗಳಿಗೆ ಹೋದವರು ಮಾತ್ರವಲ್ಲ, ತಿರುಪತಿ, ಧರ್ಮಸ್ಥಳ, ಮಂತ್ರಾಲಯಗಳಂಥ ಹಿಂದೂ ಪೂಜಾಸ್ಥಾನಗಳಿಗೂ ಯಾತ್ರೆ ಹೋದವರು. ಎಲ್ಲ ಕಡೆ ದೇವರಿಗೆ ಕಾಣಿಕೆ ಒಪ್ಪಿಸಿದವರು. ಇವತ್ತಿಗೂ ಶಿವಮೊಗ್ಗದ ಶ್ರೀ ಬೆಕ್ಕಿನ ಕಲ್ಮಠದಲ್ಲಿ ದಿನವಿಡೀ ಉರಿಯುವ ನಂದಾದೀಪ ಇಬ್ರಾಹಿಂ ಅವರ ಕಡೆಯಿಂದ ನಡೆಯುವ ಸೇವೆ. 'ಮನುಷ್ಯಜಾತಿ ತಾನ್ ಒಂದೆ ವಲಂ' ಎಂಬ ಹಿರಿಯ ಕವಿ ಪಂಪನ ಮಾತನ್ನು, 'ಈಶ್ವರ ಅಲ್ಲಾ ತೇರೇ ನಾಮ್' ಎಂಬ ಗಾಂಧೀ ಸೂತ್ರವನ್ನು ಗೌರವಿಸಿ ನಡೆಯುವ ದೊಡ್ಡ ಜೀವ ಅವರು.

ಕನ್ನಡದ ಎಲ್ಲ ಹಿರಿಯ ಸಾಹಿತಿಗಳ ಬಗ್ಗೆ ಅವರ ಕೃತಿಗಳ ಬಗ್ಗೆ ಇಬ್ರಾಹಿಂ ಸಾಕಷ್ಟು ತಿಳಿದುಕೊಂಡಿದ್ದಾರೆ. ಅವರೊಡನೆ ಮಾತನಾಡುವಾಗ ನನಗೆ ಇದರ ಅರಿವಾಗಿದೆ. ಹಿರಿಯ ಸಾಹಿತಿಗಳ ಬಗ್ಗೆ ನಾವು ಮಾತನಾಡುತ್ತಿದ್ದರೆ ಮಧ್ಯೆ ಅವರು ತಮ್ಮ ಮಾತನ್ನೂ ಸೇರಿಸುವುದುಂಟು. ನಾನು ಹಿಂದೆ ರಚಿಸಿದ 'ಊರ್ವಶಿ' ಎಂಬ ಕಾವ್ಯನಾಟಕದ ವಾಚನವನ್ನೊಮ್ಮೆ ಶಿವಮೊಗ್ಗದಲ್ಲಿ ಅವರು ಏರ್ಪಡಿಸಿದ್ದರು. ಆ ನಾಟಕ ಅವರಿಗೆ ಮೆಚ್ಚಿಕೆಯಾದುದಷ್ಟೇ ಅಲ್ಲ, ಅದರಲ್ಲಿ ಬರುವ ರಂಭೆ-ನಾರಾಯಣ ಋಷಿಯ ಸಂವಾದ ಬಹಳ ಇಷ್ಟವಾಯಿತು. ಆ ನಾಟಕದ ರಸಸ್ಥಾನಗಳಲ್ಲಿ ಅದು ಬಹಳ ಮುಖ್ಯವಾದದ್ದು ಎಂದು ನನ್ನ ಅಭಿಪ್ರಾಯವೂ ಆಗಿತ್ತು. ಅವರ ಮಾತಿನಿಂದ ನಾಟಕದ ಇಡೀ ವಾಚನವನ್ನು ಅವರು ಎಷ್ಟು ಲಕ್ಷ್ಯ ಕೊಟ್ಟು ಆಲಿಸಿದ್ದರು ಎನ್ನುವುದೂ ಅವರ ಸಾಹಿತ್ಯಾಭಿರುಚಿ ಎಷ್ಟು ಎತ್ತರದ ನೆಲೆಯದೆನ್ನುವುದೂ ನನಗೆ ತಿಳಿಯಿತು. ನಾನು ವಾಚನ ಕಾರ್ಯಕ್ರಮ ಮುಗಿಸಿ ಬೆಂಗಳೂರಿಗೆ ಮರಳಿದೆ. ಸ್ವಲ್ಪ ದಿನಗಳಲ್ಲೇ ನನಗೆ ಅವರಿಂದ ಒಂದು ಫೋನ್ ಕರೆ ಬಂತು. "ನಿಮ್ಮ 'ಊರ್ವಶಿ' ವಾಚನ ನಮಗೆಲ್ಲ ಬಹಳ ಇಷ್ಟವಾಯಿತು. ಆ ಕಾರ್ಯಕ್ರಮಕ್ಕೆ ನನ್ನ ಕೆಲವರು ಆಪ್ತರು ಬರಲಾಗಲಿಲ್ಲ. ಅವರೆಲ್ಲ ಅದನ್ನು ಕೇಳಬೇಕೆಂದಿದ್ದಾರೆ. ನಾನು ಇನ್ನೊಮ್ಮೆ ಆ ಕಾರ್ಯಕ್ರಮ ಇಟ್ಟುಕೊಳ್ಳುತ್ತೇನೆ. ನೀವು ತಪ್ಪದೆ ಬರಬೇಕು" ಎಂದು ಹೇಳಿದ್ದಲ್ಲದೆ ಅದಕ್ಕಾಗಿಯೇ ನನ್ನನ್ನು ಇನ್ನೊಮ್ಮೆ ಶಿವಮೊಗ್ಗಕ್ಕೆ ಕರೆಸಿಕೊಂಡರು. ಆಗ ನನಗೆ ನನ್ನೆಲ್ಲ ಖರ್ಚು ವೆಚ್ಚ ಸಹಿತ ದೊಡ್ಡ ಸಂಭಾವನೆ ಕೊಟ್ಟುದಲ್ಲದೆ ಪ್ರಿಯವಾದ ಉಡುಗೊರೆಯನ್ನೂ ನೀಡಿದರು.

ಮುಂದೆ ನನ್ನ 'ಅರುಣಗೀತೆ' ಎಂಬ ಸುದೀರ್ಘವಾದ ಕವನವೊಂದರ ವಾಚನವನ್ನೂ ಇಬ್ರಾಹಿಂ ಹಲವರು ಸಾಹಿತ್ಯಪ್ರಿಯರ ಎದುರು ಏರ್ಪಡಿಸಿದ್ದರು. ಆಗ ಅದಿನ್ನೂ ಹಸ್ತಪ್ರತಿಯ ರೂಪದಲ್ಲಿತ್ತು. ಮುಂದೆ ಅದು ಆ ಕವನದ ಹೆಸರನ್ನೇ ಹೊತ್ತು ಒಂದು ಸಂಕಲನವಾಗಿ ಹೊರಬಂತು. 'ಅರುಣಗೀತೆ' ಅವರಿಗೆ ಬಹಳ ಪ್ರಿಯವಾದ ಕವನ. ಆದ್ದರಿಂದ ಆ ಸಂಗ್ರಹವನ್ನು ನಾನು ಅವರಿಗೇ ಅರ್ಪಿಸಿದೆ.

ಸಾಹಿತ್ಯಾಭಿರುಚಿ ಇರುವ ಜನ ಸಾಕಷ್ಟಿದ್ದಾರೆ. ಆರ್ಥಿಕವಾಗಿ ಶ್ರೀಮಂತರಾಗಿರುವವರೂ ಬಹಳ ಜನ ಇದ್ದಾರೆ. ಆದರೆ ಸಾಹಿತ್ಯಕ ಶ್ರೀಮಂತಿಕೆ, ಆರ್ಥಿಕ ಶ್ರೀಮಂತಿಕೆ ಎರಡನ್ನೂ ಪಡೆದಿರುವ ಜನ ಬಹಳ ಕಡಿಮೆ. ಅಂಥವರು ಧಾರಾಳಬುದ್ಧಿಯ ಉದಾರಿಗಳೂಆಗಿದ್ದಲ್ಲಿ ಅಂಥವರಿಂದ ಸಾಹಿತ್ಯಲೋಕಕ್ಕೆ ತುಂಬ ಉಪಕಾರವಾಗುತ್ತದೆ ಎಂಬ ಅರ್ಥದ ಪದ್ಯವೊಂದು ಕವಿ ರನ್ನನಲ್ಲಿ ಬರುತ್ತದೆ. ಅದನ್ನು ಹೇಳುವಾಗ ತನಗೆ ಕೆಲಕಾಲ ಆಶ್ರಯ ಕೊಟ್ಟ ಮತ್ತು ಪೊನ್ನನ ಶಾಂತಿಪುರಾಣ ಕಾವ್ಯದ ಸಾವಿರ ಹಸ್ತಪ್ರತಿಗಳನ್ನು ಸಿದ್ಧಮಾಡಿಸಿ ಸಹೃದಯರಿಗೆ ಪುಸ್ತಕದಾನ ಮಾಡಿದ ಅತ್ತಿಮಬ್ಬೆ ಎಂಬ ಶ್ರೀಮಂತ ಜೈನಮಹಿಳೆ ರನ್ನನ ಮನಸ್ಸಿನಲ್ಲಿ ಇದ್ದಿರಬೇಕು. ಇಬ್ರಾಹಿಂ ಅವರು ಅತ್ತಿಮಬ್ಬೆಯ ಮನೋಧರ್ಮದವರೇ. ಹೀಗೆ ಶಿವಮೊಗ್ಗದ ಸಾಂಸ್ಕೃತಿಕ ವಲಯದ ಬೆಳವಣಿಗೆಗೆ ಇಬ್ರಾಹಿಂ ಸಾಹೇಬರ ಕೊಡುಗೆ ಗಣನೀಯವಾಗಿಯೇ ಇದೆ.

ತಂದೆಯ ಸಾಹಿತ್ಯಾಭಿರುಚಿಯ ಕಾರಣವಾಗಿಯೇ ಇರಬಹುದು. ಇಬ್ರಾಹಿಂರ ಮಗಳು ಶ್ರೀಮತಿ ರಜಿಯಾ ಕವಿತೆಗಳ ರಚನೆಗೆ ತೊಡಗಿದರು. ತಮ್ಮ ಕವಿತೆಗಳ ಮೊದಲ ಸಂಕಲನ 'ಛಾಯೆ'ಯನ್ನು ಪ್ರಕಟಸಲಿದ್ದಾಗ ಅದಕ್ಕೆ ನಾನು ಮುನ್ನುಡಿ ಬರೆಯಬೇಕೆಂದು ರಜಿಯಾ ಅಪೇಕ್ಷೆಪಟ್ಟರು. ಅದಕ್ಕೆ ನನ್ನನ್ನು ಒಪ್ಪಿಸುವ ಸಲುವಾಗಿಯೇ ಇಬ್ರಾಹಿಂರ ಆಪ್ತಪರಿವಾರದಲ್ಲಿ ಒಬ್ಬರಾಗಿದ್ದ ಕನ್ನಡ ಪ್ರಾಧ್ಯಾಪಕ ಶ್ರೀ ಮುನೀರ್ ಪಾಷಾ ಬೆಂಗಳೂರಿಗೆ ಬಂದಿದ್ದರು. ನಾನು ಹಸ್ತಪ್ರತಿ ನೋಡಿ ಅದರಲ್ಲಿ ಕೆಲವು ತಿದ್ದುಪಾಟುಗಳನ್ನು ಮಾಡುವುದು ಸೂಕ್ತ ಎಂದು ತಿಳಿಸಿದ್ದೆ. ರಜಿಯಾ ಅದಕ್ಕೆ ಒಪ್ಪಿದರು. ನಾನು ಮುನ್ನುಡಿ ಬರೆದು, ಕವಿ ಬಿ.ಆರ್. ಲಕ್ಷ್ಮಣರಾವ್ ಅವರ ಬೆನ್ನುಡಿ ಪಡೆದು ಪುಸ್ತಕ ಪ್ರಕಟವೂ ಆಯಿತು. ಆ ಪುಸ್ತಕದ ಬಿಡುಗಡೆ ಕಾರ್ಯಕ್ರಮ ಇಟ್ಟುಕೊಳ್ಳಬೇಕೆಂದು ಇಬ್ರಾಹಿಂ ಅವರ ಹಲವಾರು ಸ್ನೇಹಿತರು ಸೂಚಿಸಿದರು. ಸಾಹೇಬರು ಒಪ್ಪಲಿಲ್ಲ. "ಇನ್ನೂ ಇದು ನನ್ನ ಮಗಳ ಮೊದಲ ಪುಸ್ತಕ. ಅವಳೇನೂ ಹೆಸರಾದ ಲೇಖಕಿಯಲ್ಲ. ಅವಳ ಪುಸ್ತಕಕ್ಕೆಂದು ಒಂದು ಸಮಾರಂಭ ಮಾಡುವುದು ಸರಿಯಲ್ಲ. ಕೂಡಲೇ ಕೂಡದು" ಎಂದು ಬಿಟ್ಟರು.

ಆದರೆ ಸ್ನೇಹಿತರು "ರಜಿಯಾ ನಿಮ್ಮ ಮಗಳೆಂಬ ಕಾರಣಕ್ಕಾಗಿ ಸಂಕೋಚಪಡುತಿದ್ದೀರಿ. ಇದು ಆಕೆಗೆ ಅನ್ಯಾಯ ಮಾಡಿದಂತೆ" ಎಂದು ಒತ್ತಾಯ ಮಾಡಿದಾಗ "ಹಾಗಾದರೆ ಒಂದು ಕೆಲಸ ಮಾಡೋಣ. ಎರಡು ದಿನಗಳ ಒಂದು ಸಾಹಿತ್ಯೋತ್ಸವ ಮಾಡೋಣ. ಬೇರೆ ಬೇರೆ ಮುಖ್ಯ ಸಾಹಿತ್ಯಕ ವಿಷಯ ಕುರಿತು ವಿಚಾರಗೋಷ್ಠಿಗಳನ್ನು ನಡೆಸೋಣ. ಅದಕ್ಕೆ ನಾಡಿನ ಹಿರಿಯ ಸಾಹಿತಿಗಳೆಲ್ಲ ಬರಲಿ. ದೊಡ್ಡವರನ್ನೆಲ್ಲ ಕರೆಸಿ ಅವರಿಗೆ ನಮ್ಮ ಅತಿಥ್ಯ ಸಲ್ಲಿಸಿದ ಹಾಗಾಗುತ್ತೆ. ಊರಿನಲ್ಲಿನ ಚಿಕ್ಕ ವಯಸ್ಸಿನ ಸಾಹಿತ್ಯಾಸಕ್ತರು ಅವರನ್ನೆಲ್ಲ ನೋಡಿದ ಹಾಗೂ ಆಗುತ್ತೆ. ಅದೇ ಮುಖ್ಯವಾದ ಕಾರ್ಯಕ್ರಮ ಆಗಬೇಕು. ಸಮಾರಂಭದ ಕಡೆಯಲ್ಲಿ ಚಿಕ್ಕದಾಗಿ ಪುಸ್ತಕದ ಬಿಡುಗಡೆಯೂ ಆಯಿತು ಅನ್ನಿಸಿಬಿಡೋಣ. ಅದನ್ನು ಮಾತ್ರ ಉಳಿದ ಗೋಷ್ಠಿಗಳಂತೆ ದೊಡ್ಡದಾಗಿ ಮಾಡಕೂಡದು" ಎಂದು ತೀರ್ಪು ಕೊಟ್ಟುಬಿಟ್ಟರು!

ಆಗ ನಡೆದ ಸಾಹಿತ್ಯೋತ್ಸವದ ವೈಭವ ಇನ್ನೂ ನನಗೆ ನೆನಪಿದೆ. ಕರ್ನಾಟಕ ಸಂಘದ ಕಟ್ಟಡದ ಪಕ್ಕಕ್ಕೆ ದೊಡ್ಡ ಶಾಮಿಯಾನ ಮೇಲೆದ್ದಿತು. ನಾಡಿನ ಗಣ್ಯ ಸಾಹಿತಿಗಳನ್ನೆಲ್ಲ ದೂರದ ಊರುಗಳಿಂದ ಕರೆಸಿ ಎರಡೂ ದಿನ ಉಳಿಸಿಕೊಳ್ಳಲಾಯಿತು. ಅವರಿಗೆಲ್ಲ ಅದ್ದೂರಿಯಾದ ಆತಿಥ್ಯ ನಡೆಯಿತು. ಎ.ಎನ್. ಮೂರ್ತಿರಾಯರು, ಕೆ.ಎಸ್. ನರಸಿಂಹಸ್ವಾಮಿ, ರಾಮಚಂದ್ರಶರ್ಮ, ಹಾಮಾನಾ, ಭೈರಪ್ಪ, ಚನ್ನವೀರಕಣವಿ, ಲಂಕೇಶ್, ಲಕ್ಷ್ಮಣರಾವ್, ಎಂ.ಎಚ್. ಕೃಷ್ಣಯ್ಯ, ಎಚ್.ಎಸ್. ವೆಂಕಟೇಶಮೂರ್ತಿ, ಡಿ.ಆರ್. ನಾಗರಾಜ್, ನರಹಳ್ಳಿ ಬಾಲಸುಬ್ರಹ್ಮಣ್ಯ ಇನ್ನೂ ಅನೇಕರು ಬಂದಿದ್ದರು. ಇತರ ಗೋಷ್ಠಿಗಳ ಜೊತೆಗೆ ಎರಡು ದಿನವೂ ಎರಡು ಆಕರ್ಷಕ ಕವಿಗೋಷ್ಠಿಗಳೂ ನಡೆದವು. ಉತ್ಸವ ಒಂದು ಪುಟ್ಟ ಸಾಹಿತ್ಯ ಸಮ್ಮೇಳನ ಎನ್ನುವಂತಿತ್ತು. ಜನ ಉತ್ಸವಕ್ಕೆ ಕಿಕ್ಕಿರಿದು ಸೇರಿ ನಾಡಿನ ಹಿರಿಯ ಸಾಹಿತಿಗಳನ್ನು ಪ್ರತ್ಯಕ್ಷ ನೋಡಿ ಅವರ ಮಾತುಗಳನ್ನು ಕೇಳಿ ಸಂತೋಷಪಟ್ಟರು.

ಸಾಹಿತ್ಯ ಮಾತ್ರವಲ್ಲ, ಸಂಗೀತ ನಾಟಕಗಳಲ್ಲಿಯೂ ಇಬ್ರಾಹಿಂ ಅವರಿಗೆ ತುಂಬ ಒಲವು. ಶಿವಮೊಗ್ಗದಲ್ಲಿ ಅನೇಕ ಆಕರ್ಷಕ ಸಂಗೀತ ಕಾರ್ಯಕ್ರಮಗಳನ್ನು ಅವರು ನಡೆಸಿದರು. ಮತ್ತೆ ಎಷ್ಟಕ್ಕೋ ಬೆಂಬಲವಾಗಿ ನಿಂತರು. ಶಿವಮೊಗ್ಗದ ನ್ಯಾಷನಲ್ ಕಾಲೇಜ್ ಮೈದಾನದಲ್ಲಿ ನಡೆದ ಒಂದು ಭಾರೀ ಸುಗಮಸಂಗೀತಗೋಷ್ಠಿ ಅವುಗಳಲ್ಲಿ ಒಂದು. ಮುದ್ದುಕೃಷ್ಣ ಅವರ ಯಜಮಾನಿಕೆಯಲ್ಲಿ ಬೆಂಗಳೂರಿನಿಂದ ಕವಿಗಳ ಮತ್ತು ಸುಗಮ ಸಂಗೀತಗಾರರ ಒಂದು ದೊಡ್ಡ ದಂಡೇ ಆಗ ಶಿವಮೊಗ್ಗಕ್ಕೆ ಬಂತು. ಜಿ.ಎಸ್. ಶಿವರುದ್ರಪ್ಪ, ನಾನು, ಲಕ್ಷ್ಮಣರಾವ್, ಎಚ್.ಎಸ್. ವೆಂಕಟೇಶಮೂರ್ತಿ, ವ್ಯಾಸರಾವ್ ಮೊದಲಾದ ಕವಿಗಳಲ್ಲದೆ, ಅನಂತಸ್ವಾಮಿ,

ಅಶ್ವಥ್, ಸುಬ್ಬಣ್ಣ, ರತ್ನಮಾಲಾ, ಸಂಗೀತಾಕಟ್ಟಿ, ನರಸಿಂಹನಾಯಕ್, ಮಾಲತಿ ಮೊದಲಾದ ಸುಗಮ ಸಂಗೀತಗಾರರೂ ಅದರಲ್ಲಿದ್ದರು. ಆ ದಿನ ರಾತ್ರಿ ಸುಮಾರು ನಾಲ್ಕು ಗಂಟೆಗಳ ಕಾರ್ಯಕ್ರಮ ನಡೆಯಿತು. ಅದಕ್ಕಾಗಿಯೇ ನಿರ್ಮಿಸಿದ್ದ ಭಾರೀ ವೇದಿಕೆ, ದೀಪಾಲಂಕಾರಗಳು, ಅದೊಂದು ಸುಗಮಸಂಗೀತ ಸಮ್ಮೇಳನ ಎನಿಸಿಬಿಟ್ಟಿತು. ಏಳೆಂಟು ಸಾವಿರಕ್ಕೂ ಮೀರಿದ ಜನಸಮೂಹ ಸೇರಿತ್ತು. ಶಿವಮೊಗ್ಗದಲ್ಲಿ ಈವರೆಗೆ ನಡೆದ ಅತ್ಯಂತ ವೈಭವದ ಕಲಾ ಕಾರ್ಯಕ್ರಮ ಅದು ಎನಿಸಿಬಿಟ್ಟಿತು. ಈ ಉತ್ಸವಕ್ಕೆ ಬೆನ್ನೆಲುಬಾಗಿ ಹಿಂದೆ ನಿಂತಿದ್ದವರು ಇಬ್ರಾಹಿಂ ಸಾಹೇಬರು!

ಕಲಾವಿದರನ್ನು ದೊಡ್ಡ ತಂಡಗಳಲ್ಲಿ ಕರೆಸಿದ ಇಂಥ ಕಾರ್ಯಕ್ರಮಗಳಲ್ಲದೆ ಕಲಾವಿದರನ್ನು, ಸಾಹಿತಿಗಳನ್ನು ಬಿಡಿಬಿಡಿಯಾಗಿ ಕರೆಸಿ ಇಬ್ರಾಹಿಂರವರು ಉತ್ಸವಗಳನ್ನು ನಡೆಸಿದ್ದೂ ಉಂಟು. ಮೈಸೂರು ಅನಂತಸ್ವಾಮಿಯವರಿಂದ ಒಂದು ಭಾರೀ ಕವಿತಾಗಾಯನ ಕಾರ್ಯಕ್ರಮ ಶಿವಮೊಗ್ಗದಲ್ಲಿ ನಡೆಯಿತು. ಅವರಿಗೆ ನಿರೀಕ್ಷೆಗೆ ಮೀರಿದ ಕವಿತಾಗಾಯನ ಕಾರ್ಯಕ್ರಮ ಶಿವಮೊಗ್ಗದಲ್ಲಿ ನಡೆಯಿತು. ಅವರಿಗೆ ನಿರೀಕ್ಷೆಗೆ ಮೀರಿದ ದೊಡ್ಡ ಸಂಭಾವನೆಯನ್ನೇ ನೀಡಲಾಯಿತು. "ನಾನು ಆ ದಿನಗಳಲ್ಲಿ ಕೈಸೋತಿದ್ದೆ. ನನಗೆ ಸಹಾಯ ಮಾಡಲೆಂದೇ ಇಬ್ರಾಹಿಂ ಆ ಗೋಷ್ಠಿ ನಡೆಸಿದರು." ಎಂದು ಅನಂತಸ್ವಾಮಿಯವರೇ ನನ್ನೊಡನೆ ಹೇಳಿದ್ದಿದೆ. ಶಿವಮೊಗ್ಗ ಸುಬ್ಬಣ್ಣನವರಿಗೆ ಚಿತ್ರಸಂಗೀತದಲ್ಲಿ ರಾಷ್ಟ್ರಪ್ರಶಸ್ತಿ ಬಂದ ಹೊಸದರಲ್ಲಿ ಕುವೆಂಪುಗೀತೆಗಳನ್ನು ಅವರೊಬ್ಬರೇ ಹಾಡಿರುವ ಒಂದು ಕ್ಯಾಸೆಟ್ಟನ್ನು ಸಂಗೀತಾ ಸಂಸ್ಥೆ ಹೊರತಂದಿತು. ಅವು ಸುಬ್ಬಣ್ಣನವರಿಗೆ ಸಂಭ್ರಮದ ದಿನಗಳು. ಇಬ್ರಾಹಿಂ ಅವರನ್ನು ಒಮ್ಮೆ ಮನೆಗೆ ಕರೆದು ಉಪಚರಿಸಿ ಅವರಿಂದ ಒಂದು ಕ್ಯಾಸೆಟ್ ಪಡೆದು ಎರಡು ಸಾವಿರ ರೂಪಾಯಿಗಳನ್ನು ನೀಡಿದರು! ಇದು ನಡೆದದ್ದು ೧೯೮೦ ರಲ್ಲಿ. ಆಗ ಹಣದ ಬೆಲೆ ಈಗಿನ ಐದರಷ್ಟಾದರೂ ಇತ್ತು. ಇದನ್ನು ಸುಬ್ಬಣ್ಣ ನನಗೆ ತಿಳಿಸಿದಾಗ, ನನಗೆ ಕಂಠ ಬಿಗಿದು ಬಂತು. ನನ್ನ ಅನುಭವದ ಅಂಥದೇ ಇನ್ನೊಂದು ಪ್ರಸಂಗ ನೆನಪಾಯಿತು. ಷೇಕ್ಸ್‌ಪಿಯರ್‌ನ ಸಾನೆಟ್ ಗಳ ನನ್ನ ಅನುವಾದ 'ಸುನೀತ' ಪ್ರಕಟವಾದಾಗ ಅದರ ಬಿಡುಗಡೆ ಸಮಾರಂಭಕ್ಕೆ ಬಂದಿದ್ದ ಗೊರೂರು ರಾಮಸ್ವಾಮಿ ಅಯ್ಯಂಗಾರರು ಮಾರನೆಯ ದಿನ ನನಗೊಂದು ಪ್ರಶಂಸೆಯ ಪತ್ರ ಬರೆದರು. ಅದರ ಜೊತೆಗೆ ನೂರು ರೂಪಾಯಿಗಳ ಒಂದು ಚೆಕ್ ಇತ್ತು. "ನನಗೆ ನಿಮ್ಮ ಅನುವಾದದ ಕೆಲಸ ಬಹಳ ಹಿಡಿಸಿತು. ಇಂಥ ಮೇಲ್ಮಟ್ಟದ ಅನುವಾದ ಹೊರತಂದ ನಿಮ್ಮ ಭಾಷಾನೈಪುಣ್ಯ, ವಿದ್ವತ್ತು ದೊಡ್ಡದು. ನನಗೆ ಆ ಪುಸ್ತಕದ ಒಂದು ಪ್ರತಿ ಬೇಕು. ಈ ಕಡೆ ಬಂದಾಗ ದಯವಿಟ್ಟು ತಂದುಕೊಡಿ. ಆ ಪ್ರತಿಯ ಬೆಲೆ ಪುಸ್ತಕದಲ್ಲಿ ಸೂಚಿಸಿರುವ ಬೆಲೆ ಅಲ್ಲ. ಅದು

ಅಮೂಲ್ಯ. ಸಾಂಕೇತಿಕವಾಗಿ ನೂರು ರೂ. ಕಳಿಸಿದ್ದೇನೆ. ದಯವಿಟ್ಟು ತಪ್ಪುತಿಳಿಯದೆ ತೆಗೆದುಕೊಳ್ಳಬೇಕು. ಈ ವಿಷಯವನ್ನು ಯಾರಿಗೂ ಹೇಳತಕ್ಕದ್ದಲ್ಲ" ಎಂದು ಬರೆದಿದ್ದರು. ಆ ಪುಸ್ತಕ ಅವರಿಗೆ ಸಮಾರಂಭದ ದಿನ ಅಲ್ಲಿಯೇ ಕೇವಲ ಹತ್ತು ರೂ.ಗೆ ಸಿಗುತ್ತಿತ್ತು. ಆದರೆ ಅವರು ಬೇರೆ ವಿಧಾನ ಅನುಸರಿಸಿ ಅದನ್ನು ಪಡೆದುಕೊಂಡರು. ದೊಡ್ಡವರ ರೀತಿಯೇ ಹೀಗೆ. ಸತ್ವವುಳ್ಳವರನ್ನು ಬೆಂಬಲಿಸುವುದರಲ್ಲಿ, ಹುರಿದುಂಬಿಸುವದರಲ್ಲಿ ಅವರು ಸದಾ ಮುಂದಿರುತ್ತಾರೆ.

ಡಾ.ಯು.ಆರ್. ಅನಂತಮೂರ್ತಿಯವರಿಗೆ ಜ್ಞಾನಪೀಠ ಪ್ರಶಸ್ತಿ ಬಂತಷ್ಟೇ. ಅದೇ ಸಮಯದಲ್ಲಿ ಜೆ.ಎಚ್. ಪಟೇಲರು ಕರ್ನಾಟಕದ ಉಪಮುಖ್ಯಮಂತ್ರಿಗಳಾಗಿ ಆಯ್ಕೆಯಾದರು. ಇಬ್ಬರೂ ಶಿವಮೊಗ್ಗ ಜಿಲ್ಲೆಯವರು. ಇಬ್ರಾಹಿಂ ಸಾಹೇಬರಿಗೆ ಎಲ್ಲಿಲ್ಲದ ಸಂಭ್ರಮ. ಅವರನ್ನು ಅಭಿನಂದಿಸುವುದು ಶಿವಮೊಗ್ಗದ ಸಂತೋಷದ ಕರ್ತವ್ಯ ಎಂದು ಅವರು ಭಾವಿಸಿದರು. ಅದಕ್ಕಾಗಿ ಒಂದು ಅದ್ಭುತ ಸಮಾರಂಭ ಏರ್ಪಾಟಾಯಿತು. ನೆಹರೂ ಮೈದಾನದಲ್ಲಿ ಅಪೂರ್ವ ವೇದಿಕೆ ಸಿದ್ಧವಾಯಿತು. ಬಹಳ ಹಿಂದೆ, ನನ್ನ ಬಾಲ್ಯದಲ್ಲಿ ನೆಹರೂರವರು ತಮ್ಮ ಮಗಳ ಜೊತೆ ಶಿವಮೊಗ್ಗೆಗೆ ಬಂದಿದ್ದಾಗ ರಚಿಸಿದ್ದ ವೇದಿಕೆಯನ್ನು ಅದು ನೆನಪಿಗೆ ತರುವಂತಿತ್ತು. ಸಾಹಿತ್ಯ, ರಾಜಕೀಯ ಎರಡೂ ಕ್ಷೇತ್ರಗಳಿಗೆ ಸೇರಿದ ಸಹಸ್ರಾರು ಜನ ಶ್ರೋತೃಗಳಾಗಿ ಸೇರಿದ್ದರು. ಇಡೀ ಶಿವಮೊಗ್ಗದ ಜನತೆಯೇ ಹರಿದು ಬಂದಿದೆಯೋ ಎನಿಸುವಂಥ ಉತ್ಸವ. ಎಂ.ಪಿ. ಪ್ರಕಾಶ್ ಮೊದಲಾದ ಮಂತ್ರಿಗಳೂ ಬಂದಿದ್ದರು. ನಾನು ಅನಂತಮೂರ್ತಿಯವರನ್ನು ಕುರಿತು ಬರೆದಿದ್ದ ಒಂದು ಕವನವನ್ನು ನನ್ನಿಂದ ಓದಿಸಲಾಯಿತು. ಮಗ ದೇಶದ ಅತ್ಯುನ್ನತ ಸಾಹಿತ್ಯಪ್ರಶಸ್ತಿಯನ್ನು ಗಳಿಸಿದ್ದ ಆ ಸಂದರ್ಭದಲ್ಲಿ ಅವರನ್ನು ಪಡೆದ ತಾಯಿಯನ್ನೂ ವೇದಿಕೆಯ ಮೇಲೆ ಮಗನ ಪಕ್ಕದಲ್ಲಿ ಕೂರಿಸಲಾಗಿತ್ತು. ಮಗನ ಈ ವಿಜಯೋತ್ಸವದ ಹೊತ್ತಿನಲ್ಲಿ ತಮ್ಮ ಪತಿ ಬದುಕಿದ್ದಿದ್ದರೆ ಅದೆಷ್ಟು ಸಂತೋಷಪಡುತಿದ್ದರೋ ಎಂದು ಹೇಳುತ್ತ ತಾಯಿಯ ಕಣ್ಣಿನಲ್ಲಿ ನೀರು ತುಂಬಿತು. ಪಟೇಲ್, ಅನಂತಮೂರ್ತಿ ಇಬ್ಬರೂ ಸೊಗಸಾಗಿ ಮಾತನಾಡಿದರು ಅದೊಂದು ರೋಮಾಂಚಕ ಪ್ರಸಂಗ. ಶಿವಮೊಗ್ಗದ ಕರ್ತವ್ಯವಾಗಿದ್ದ ಈ ಉತ್ಸವವನ್ನು ಮುಂದೆ ನಿಂತು ನಡೆಸಿದವರು ಇಬ್ರಾಹಿಂ, ಅವರು ಶಿವಮೊಗ್ಗದ ಒಬ್ಬ ಸಾಂಸ್ಕೃತಿಕ ಪ್ರತಿನಿಧಿ. ಶಿವಮೊಗ್ಗ ಸದಾ ಹೆಮ್ಮೆಪಡುವಂಥ ಇಂಥ ಅನೇಕ ಉತ್ಸವಗಳು ಕೇವಲ ಅವರಿಂದಾಗಿಯೇ ನಡೆದಿವೆ.

೧೯೮೦ಕ್ಕೂ ಹಿಂದಿನ ಒಂದು ಘಟನೆ. ಆಧುನಿಕ ರಂಗಭೂಮಿಗೆ ಕಾಯಕಲ್ಪ ಮಾಡಿದ ಬಿ.ವಿ. ಕಾರಂತರು ಅದಕ್ಕೆ ಮುಂಚೆ ದೆಹಲಿಯಲ್ಲಿ ನಾಟಕ

ನಿರ್ದೇಶನ ಮಾಡಿ ದೊಡ್ಡ ಹೆಸರು ಗಳಿಸಿ ಕರ್ನಾಟಕಕ್ಕೆ ಮರಳಿದ್ದರು; ಜೋಕುಮಾರಸ್ವಾಮಿ, ಸಂಕ್ರಾಂತಿ, ಈಡಿಪಸ್ ನಾಟಕಗಳನ್ನು ಬೆಂಗಳೂರಿನಲ್ಲಿ ವೇದಿಕೆಗೇರಿಸಿ ಜನರನ್ನು ಸಂಭ್ರಮಚಕಿತರನ್ನಾಗಿ ಮಾಡಿದ್ದರು. ಗಿರೀಶ್ ಕಾರ್ನಾಡರ ಪ್ರಸಿದ್ಧ ಹಯವದನ ನಾಟಕ ಆಗಷ್ಟೇ ಪ್ರಕಟವಾಗಿತ್ತು. ಅದನ್ನು ರಂಗಭೂಮಿಯ ಮೇಲೆ ವಿಶಿಷ್ಟ ರೀತಿಯಲ್ಲಿ ಅನಾವರಣಗೊಳಿಸುವ ಮಹತ್ವಾಕಾಂಕ್ಷೆ ಅವರಿಗಿತ್ತು. ಆದರೆ ಆ ಕಾಲಕ್ಕೆ ಅದಕ್ಕೆ ಇಪ್ಪತ್ತು ಸಾವಿರ ರೂಪಾಯಿಗಳಷ್ಟಾದರೂ ಹಣ ಅಗತ್ಯವಾಗಿತ್ತು. ಆಗ ಅವರ ನೆರವಿಗೆ ಬಂದು, ಎಲ್ಲ ಆರ್ಥಿಕ ಅನುಕೂಲ ಒದಗಿಸಿ ಹಯವದನದ ಉಜ್ವಲ ಪ್ರಯೋಗ ನಡೆಯುವಂತೆ ಮಾಡಿದವರು ಇಬ್ರಾಹಿಂ ಸಾಹೇಬರು. ಆಗ ಅವರಿಗೆ ಕಾರಂತರ ಹೆಚ್ಚಿನ ಪರಿಚಯವೇನೂ ಇರಲಿಲ್ಲ. ಆದರೂ ನಾಟಕಗಳಲ್ಲಿ ಅವರಿಗಿದ್ದ ಆಸಕ್ತಿ, ಸಾಂಸ್ಕೃತಿಕ ಚಟುವಟಿಕೆಯೊಂದರ ನೆರವಿಗೆ ಒದಗುವ ಅವರ ಪ್ರವೃತ್ತಿಗಳಿಂದ ಆ ಕಾರ್ಯ ನಡೆಯಿತು.

ನನ್ನ ಕಾವ್ಯನಾಟಕ 'ಊರ್ವಶಿ'ಯನ್ನು ಕಾರಂತರಿಂದಲೇ ಶಿವಮೊಗ್ಗದಲ್ಲಿ ರಂಗಭೂಮಿಗೆ ತರುವ ಅಪೇಕ್ಷೆ ಇಬ್ರಾಹಿಂ ಸಾಹೇಬರಿಗಿತ್ತು. ಸಾಗರದ ಹೆಗ್ಗೋಡಿಗೆ ಸಂಸ್ಕೃತಿಶಿಬಿರಕ್ಕೆ ಬಂದಿದ್ದ ಕಾರಂತರನ್ನು ಅದಕ್ಕಾಗಿಯೇ ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಆಗ ಕಾರಂತರು ಪು.ತಿ. ನರಸಿಂಹಾಚಾರ್ಯರ ಅಹಲ್ಯೆ ನಾಟಕ ಪ್ರಯೋಗಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಅದಾದ ಮೇಲೆ ಊರ್ವಶಿಯನ್ನು ರಂಗದ ಮೇಲೆ ತರುವ ಯೋಜನೆ ಕಾರಂತರದಾಗಿತ್ತು. ಆದರೆ ಅಹಲ್ಯೆ ನಾಟಕದ ನಂತರ ಕಾಯಿಲೆ ಬಿದ್ದ ಕಾರಂತರು ಮೇಲೇಳಲೇ ಇಲ್ಲವಾಗಿ ಆ ಯೋಜನೆ ಅಲ್ಲಿಗೇ ನಿಂತುಹೋಯಿತು.

ಶಿಶುನಾಳ ಶರೀಫ ಸಾಹೇಬರ ವ್ಯಕ್ತಿತ್ವ, ಕಾವ್ಯ ಎರಡೂ ಇಬ್ರಾಹಿಂ ಅವರಿಗೆ ತುಂಬ ಪ್ರಿಯ. ಅದಕ್ಕೆ ಕಾರಣ ಅವರ ವ್ಯಕ್ತಿತ್ವದಲ್ಲಿಯೇ ಇದೆ. ಶರೀಫರಂತೆ ಇಬ್ರಾಹಿಂ ಕೂಡ ಮುಸ್ಲಿಮರಾಗಿ ಜನಿಸಿಯೂ ಎಲ್ಲ ಧರ್ಮಗಳನ್ನು ಗೌರವದಿಂದ ಕಂಡವರು. ಶರೀಫರನ್ನು ಕುರಿತ ಒಂದು ಕಾವ್ಯೋತ್ಸವ ನಡೆಸುವ ವಿಚಾರ ಅವರ ಮನಸ್ಸಿಗೆ ಬಂತು. ಶಿವಮೊಗ್ಗದ ವಿಶಾಲ ಕಲಾಭವನವಾದ ಕುವೆಂಪು ರಂಗಮಂದಿರದಲ್ಲಿ ಅದು ನಡೆಯಲು ಏರ್ಪಾಟಾಯಿತು. ಶರೀಫರನ್ನು ಕುರಿತ ಉಪನ್ಯಾಸ, ಅವರ ಕವಿತೆಗಳ ವಾಚನ, ವ್ಯಾಖ್ಯಾನ, ಗಾಯನ ಎಲ್ಲ ಇರುವ ಒಂದು ಸಮ್ಮಿಶ್ರ ಕಾರ್ಯಕ್ರಮ ಅದು. ಶರೀಫರ ಕಾವ್ಯದ ಪ್ರಸಾರಕ್ಕೆ ಕೆಲಸ ಮಾಡಿದವರೆಂಬ ಕಾರಣಕ್ಕೆ ಸಿ. ಅಶ್ವಥ್‌ರನ್ನು ಮತ್ತು ನನ್ನನ್ನು ಉತ್ಸವಕ್ಕೆ ಕರೆಸಿದ್ದರು. ಬೆಳಿಗ್ಗೆ ನನ್ನಿಂದ ಶರೀಫರ ಬಗ್ಗೆ ಉಪನ್ಯಾಸ ಇತ್ತು. ಅನಂತರ ರಾಜೇಂದ್ರ ಚೆನ್ನಿ

ಮೊದಲಾದ ಹತ್ತು ಹನ್ನೆರಡು ಜನ ಸಾಹಿತ್ಯಜ್ಞರಿಂದ ಶರೀಫರ ಒಂದೊಂದು ಕವಿತೆಯ ವಾಚನ ಮತ್ತು ಅದರ ವ್ಯಾಖ್ಯಾನ ನಡೆಯಿತು. ನಂತರ ನನಗೆ ಮತ್ತು ಅಶ್ವತ್ಥರಿಗೆ ದೊಡ್ಡ ರೀತಿಯಲ್ಲಿ ಸನ್ಮಾನ, ಉಡುಗೊರೆ. ರಾತ್ರಿ ಸುಮಾರು ಎರಡು ಗಂಟೆಗಳಿಗೂ ಮೀರಿ ವಾದ್ಯವೃಂದದೊಂದಿಗೆ ಆಶ್ವತ್ಥರ ಗಾಯನ. ಅಶ್ವತ್ಥ ಆ ದಿನ ಕಿಕ್ಕಿರಿದು ತುಂಬಿದ್ದ ಸಭೆಯೆದುರು ಆವೇಶ ಬಂದವರಂತೆ ಅಮೋಘವಾಗಿ ಹಾಡಿದರು. ಶರೀಫರ ಕೆಲವು ಕವಿತೆಗಳನ್ನು ಬಹಳ ಆಕರ್ಷಕವಾಗಿ ಹಾಡಿರುವ ಶಿವಮೊಗ್ಗ ಸುಬ್ಬಣ್ಣ ಆ ದಿನ ಇಲ್ಲದಿದ್ದುದು ಒಂದು ಕೊರತೆ. ಅಷ್ಟುಬಿಟ್ಟರೆ ಇಡೀ ಕಾರ್ಯಕ್ರಮ ಬಂದವರೆಲ್ಲರ ಪಾಲಿಗೆ ಅತ್ಯಂತ ಸ್ಮರಣೀಯ ಎನಿಸಿಬಿಟ್ಟಿತು.

ಇಬ್ರಾಹಿಂ ಸಾಹೇಬರು ನಡೆಸಿದ ಇಂಥ ಇನ್ನೂ ಕೆಲವು ಕಾರ್ಯಕ್ರಮಗಳನ್ನು ಇಲ್ಲಿ ಸ್ಮರಿಸಲಾಗಿಲ್ಲ. ದೂರದಲ್ಲಿರುವ ನನಗೆ ಗೊತ್ತಿರದ ಎಷ್ಟೋ ಉತ್ಸವಗಳು ಅವರಿಂದಾಗಿ ಶಿವಮೊಗ್ಗದಲ್ಲಿ ನಡೆದಿವೆ. ಇದಲ್ಲದೆ ಅವರು ಅನೇಕ ಜನ ಲೇಖಕರಿಗೆ, ಕಲಾವಿದರಿಗೆ ವೈಯಕ್ತಿಕವಾಗಿ ತುಂಬ ಸಹಾಯ ಮಾಡಿರುವುದುಂಟು. ನನ್ನ ಕೆಲವು ಪುಸ್ತಕಗಳು ಪ್ರಕಟವಾದಾಗ ಅವರು ಅವುಗಳ ಐವತ್ತು ಪ್ರತಿಗಳನ್ನು ಕೊಂಡು ಸಾಹಿತ್ಯಾಭಿಮಾನಿಗಳಿಗೆ ಹಂಚಿದ್ದುಂಟು. ಎಷ್ಟೋ ಜನಕ್ಕೆ ಅವರು ಕಷ್ಟದ ಸಮಯದಲ್ಲಿ ಧನಸಹಾಯ ಮಾಡಿದ್ದುಂಟು. ಇದೆಲ್ಲವನ್ನೂ ಅವರು, ಸಂಬಂಧಿಸಿದ ಜನ ತಮಗೇ ಮಾಡಿದ ಒಂದು ಉಪಕಾರವೆಂಬಂತೆ ಮಾಡಿದ್ದಾರೆ. ಒಬ್ಬ ಮನುಷ್ಯ ಲೋಕೋಪಕಾರಿಯಾಗಿ, ಅಜಾತಶತ್ರುವಾಗಿ, ಸಜ್ಜನನಾಗಿ ಹೇಗೆ ಬಾಳಬಹುದೆಂಬು ದನ್ನು ಅವರು ತೋರಿಸಿಕೊಟ್ಟಿದ್ದಾರೆ. ಇಂಥ ಸಂಸ್ಕೃತಿ ಪೋಷಕರನ್ನು ಪಡೆದುದು ಶಿವಮೊಗ್ಗದ ಒಂದು ಸೌಭಾಗ್ಯ..

●

ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರ ಕೃತಿಗಳು

ಕಾವ್ಯ

ವೃತ್ತ
ಸುಳಿ
ನಿನ್ನೆಗೆ ನನ್ನ ಮಾತು
ಚಿತ್ರಕೂಟ
ಹೊಳೆಸಾಲಿನ ಮರ
ಪಾಂಚಾಲಿ (ಆಯ್ದ ಕವನಗಳು)
ಅರುಣಗೀತ
ದೆವ್ವದ ಜೊತೆ ಮಾತುಕಥೆ
ಜ್ಞಾನಪೀಠ ಮತ್ತು ಇತರ ಕವನಗಳು
ಷೇಕ್ಸ್‌ಪಿಯರ್ ಸಾನೆಟ್ ಚಕ್ರ
ಚಿನ್ನದ ಹಕ್ಕಿ (ಯೇಟ್ಸ್ ಕವಿಯ ಐವತ್ತು ಕವನಗಳು)
ಎಲಿಯಟ್ ಕಾವ್ಯಸಂಪುಟ
ಊರ್ವಶಿ (ಗೀತರೂಪಕ)

ಭಾವಗೀತೆ

ದೀಪಿಕಾ
ಭಾವಸಂಗಮ
ನೀಲಾಂಜನ
ಬಂದೇ ಬರತಾವ ಕಾಲ
ನಡೆದಿದೆ ಪೂಜಾರತಿ (ಆಯ್ದ ಭಾವಗೀತೆಗಳು)
ಗೀತಭಾರತಿ (ಈವರೆಗಿನ ಎಲ್ಲ ಭಾವಗೀತೆಗಳು)
ಜನಪ್ರಿಯ ಭಾವಗೀತೆಗಳು
ಸಂವೇದನೆ

ವಿಮರ್ಶೆ

ಹೊರಳು ದಾರಿಯಲ್ಲಿ ಕಾವ್ಯ
ವಿವೇಚನ
ಸಾಹಿತ್ಯ ಸನ್ನಿಧಿ
ಪ್ರಾಯೋಗಿಕ ವಿಮರ್ಶೆ (ಸಂ)
ಕಾವ್ಯಶೋಧನ (ಸಂ)
ಅನನ್ಯ (ಸಂ)

ನಾಟಕ (ಅನುವಾದ)

ಇಸ್ಪೀಟ್ ರಾಜ್ಯ
ಮೃಚ್ಛಕಟಿಕ
ಟ್ವೆಲ್ಫ್ತ್ ನೈಟ್

ಶಾಸ್ತ್ರ ಗ್ರಂಥಗಳು

ಭಾರತೀಯ ಗ್ರಂಥಸಂಪಾದನ ಪರಿಚಯ (ಅನು)
ಕನ್ನಡ ಮಾತು
Readings in Kannada
ಶಾಸ್ತ್ರಭಾರತಿ
ಕಾವ್ಯ ಪ್ರತಿಮೆ

ಸಂಪಾದನೆ

ಶಿಶುನಾಳ ಶರೀಫ್ ಸಾಹೇಬರ ಗೀತೆಗಳು
ಧ್ರುವಚರಿತ್ರೆ
ಕಲ್ಲು ಸಕ್ಕರೆ ಕೊಳ್ಳಿರೋ
ಕವಿತೆಗಳು ೧೯೭೯
ಗೋವಿಂದ ಪೈ

ಜೀವನ ಚರಿತ್ರೆ

ಮಾಣಿಕ್ಯ ವಂದ್ಯೋಪಾಧ್ಯಾಯ

ವ್ಯಕ್ತಿ ಚಿತ್ರ

ಸಾಹಿತ್ಯ ರತ್ನ ಸಂಪುಟ

ಮಕ್ಕಳ ಸಾಹಿತ್ಯ

ನಂದನ (ಕಾವ್ಯ)
ಕೀಶೋರಿ (ಕಾವ್ಯ)
ಸತ್ಯವೇ ನಮ್ಮ ತಾಯಿ ತಂದೆ (ಕಥನ ಕವನಗಳು)
ಕಿನ್ನರ ಲೋಕ (ಈವರೆಗಿನ ಮಕ್ಕಳ ಎಲ್ಲ ಕವಿತೆಗಳು)
ಮುದ್ರಾಮಂಜೂಷ
ಜಗನ್ನಾಥ ವಿಜಯ
ಡಿವಿಜಿ
ಕುಂತಿ
ಕರ್ಣ

ಸಮಗ್ರ ಗ್ರಂಥಗಳು

ಸಮಗ್ರಕಾವ್ಯ: ಸಂಪುಟ–೧
ಸಮಗ್ರಕಾವ್ಯ: ಸಂಪುಟ–೨
ಸಮಗ್ರಗದ್ಯ: ಭಾಗ ೧. ಪರಸ್ಪರ
ಸಮಗ್ರಗದ್ಯ: ಭಾಗ ೨. ರತ್ನಸಂಚಯ

ಡಾ. ಎನ್.ಎಸ್. ಲಕ್ಷ್ಮೀನಾರಯಣ ಭಟ್ಟರು ಕನ್ನಡದ ಹಿರಿಯ ವಿದ್ವಾಂಸರು, ಕವಿಗಳು, ಅನುವಾದಕರೂ ಆಗಿದ್ದಾರೆ. ಅವರ 'ಸಾಹಿತ್ಯರತ್ನ ಸಂಪುಟ' ೨೦೦೪ರಲ್ಲಿ ಮೊದಲು ಮುದ್ರಣಗೊಂಡ ಪ್ರತಿಗಳು ಈಗ ಲಭ್ಯವಿಲ್ಲದಂತಾಗಿದೆ. ಈ ಕೃತಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ಅಮೋಘವಾಗಿ ಕೆಲಸ ಮಾಡಿದ ಮೂವತ್ತೆಂಟು ಜನ ಹಿರಿಯ ಸಾಹಿತಿಗಳ ವ್ಯಕ್ತಿಚಿತ್ರಗಳು ಇವೆ. ಈ ಸಾಹಿತಿಗಳು ಕನ್ನಡ ಸಾಹಿತ್ಯದ ಸೌಭಾಗ್ಯವನ್ನು ಬೆಳೆಸಿ ಪ್ರಸಿದ್ಧರಾದ ಹಿರಿಯರು, ಡಿ.ವಿ.ಜಿ, ಬಿ.ಎಂ.ಶ್ರೀ, ಕುವೆಂಪು, ಬೇಂದ್ರೆ, ಮಾಸ್ತಿ, ಶಿವರಾಮಕಾರಂತ, ಗೋಕಾಕ್, ಅಡಿಗ, ಶಿವರುದ್ರಪ್ಪ, ಅನಂತಮೂರ್ತಿ, ಭೈರಪ್ಪ ಹೀಗೆ ವೈವಿಧ್ಯಪೂರ್ಣ ವ್ಯಕ್ತಿತ್ವಗಳ ಚಿತ್ರಣ ಇಲ್ಲಿದೆ. ಆ ಲೇಖಕರ ಮೌಲಿಕ ಸಾಹಿತ್ಯಸಾಧನೆಯ ಜೊತೆಗೆ ಅವರ ಜೀವನದ ಹಲವು ಸ್ವಾರಸ್ಯಕರ ಪ್ರಸಂಗಗಳೂ ಸೇರಿರುವುದರಿಂದ ಬರಹ ಬಹಳ ಆಕರ್ಷಕವೂ ಕುತೂಹಲಕರವೂ ಆಗಿದೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

★ ★ ★ ★

ಬೆಲೆ: ₹ 150/-